ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ನಂ. ೩೦

ಶ್ರೀ ವ್ಯಾಸಮಹರ್ಷಿಪ್ರಣೀತಂ

ಬ್ರಹ್ಮಮಹಾಪುರಾಣಂ

(ಸಂಸ್ಕೃತ ಮೂಲ, ಕನ್ನಡ ಅರ್ಥಾನುವಾದ ವಿವರಣೆಗಳೊಡನೆ)

ಭಾಗ—೪

(೧೨೪—೧೭೫ ಅಧ್ಯಾಯಗಳು)



ಅನುವಾದಕ.

ಹಾಸನದ ಪಂಡಿತ ವೆಂಕಟರಾವ್

ಆಸ್ಥಾನವಿದ್ವಾನ್

ಮೈಸೂರು

ಶ್ರೀ ಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್

೧೯೪೭

ಮುನ್ನುಡಿ

ಬ್ರಹ್ಮಪುರಾಣದ ಈ ನಾಲ್ಕನೆಯ ಭಾಗದಲ್ಲಿ ಗೌತಮೀಮಾಹಾತ್ಮ್ಯೆಯೆಂಬ ಗಂಗಾನದಿಯ ತೀರ್ಥಗಳ ವರ್ಣನೆಯು ಮುಗಿದಿರುವುದು. ಈ ತೀರ್ಥಗಳ ಮಹಿಮೆಯನ್ನು ಹೇಳುವಾಗ ಇವುಗಳಿಗೆ ಈ ಹೆಸರುಗಳು ಹೇಗೆ ಬಂದುವು ಎಂಬ ವಿಚಾರದಲ್ಲಿ ಪೂರ್ವೇತಿಹಾಸಗಳು ಬಹಳ ಸ್ವಾರಸ್ಯವಾಗಿಯೂ ಯುಕ್ತಿ ಯುಕ್ತವಾಗಿಯೂ ಹೇಳಲ್ಪಟ್ಟಿವೆ. ಇವುಗಳನ್ನೋದುವುದರಿಂದ ನೀತಿ, ಧರ್ಮ ಮುಂತಾದ ಅನೇಕ ವಿಷಯಗಳನ್ನು ತಿಳಿಯಲು ಸಹಾಯವಾಗುವುದಲ್ಲದೆ ಮಹಾಮಹಿಮನೂ, ದಯಾಮಯನೂ, ಭಕ್ತಪರಿಪಾಲಕನೂ ಆದ ಪರಮೇಶ್ವರನಲ್ಲಿ ಭಕ್ತಿಭಾವವು ಉದಯಿಸಿ ತನ್ಮೂಲಕ ಮುಕ್ತಿಯುಂಟಾಗುವುದು.

ಇಂತಹ ಉತ್ತಮವಾದ ನಾನಾ ವಿಷಯಗಳಿಂದ ಕೂಡಿ ಸಜ್ಜನರಿಗೆ ಶ್ರೇಯಸ್ಸಾಧನವಾದ ಈ ದಿವ್ಯಪುರಾಣವನ್ನು ಸಕಲರೂ ಓದಿ ಭಗವತ್ಕೃಪೆಗೆ ಪಾತ್ರರಾಗಲೆಂದು ನಮ್ಮನ್ನಾಳುವ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುಗಳವರು ಈ ಗ್ರಂಥ ವನ್ನು ಲಲಿತವಾದ ಕನ್ನಡಭಾಷೆಯಲ್ಲಿ ಪ್ರಕಾಶಪಡಿಸುವಂತೆ ಅಪ್ಪಣೆಮಾಡಿ ಸಮಸ್ತ ಸಜ್ಜನರ ಕೃತಜ್ಞತೆಗೆ ಪಾತ್ರರಾಗಿರುವರು. ಸಚ್ಚಿದಾನಂದಸ್ವರೂಪನಾದ ಪರ ಮೇಶ್ವರನು ಈ ನಮ್ಮ ಪ್ರಭುವರ್ಯರಿಗೂ ಅವರ ಕುಟುಂಬಕ್ಕೂ ರಾಷ್ಟ್ರದ ಸಮಸ್ತ ಪ್ರಜೆಗಳಿಗೂ ಆಯುರಾರೋಗ್ಯೈಶ್ವರ್ಯಾದಿಗಳನ್ನು ಅನುಗ್ರಹಿಸಲೆಂದು ಆ ದಯಾಮಯನಾದ ದೇವದೇವನನ್ನು ಭಕ್ತಿಭಾವದಿಂದ ಪ್ರಾರ್ಥಿಸುತ್ತೇನೆ.

ವ್ಯಯ ಸಂ॥ ಮಾಘ ಬ॥ ಪಂಚಮೀ
ಸೋಮವಾರ
ಮೈಸೂರು, 10-2-47.

ಅನುವಾದಕ.

ವಿಷಯಾನುಕ್ರಮಣಿಕೆ

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ನಾಲ್ಕನೆಯ ಭಾಗವು.

ಅಥ ಬ್ರಾಹ್ಮೇ ಮಹಾಪುರಾಣೇ

ಚತುರ್ವಿಂಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಪುತ್ರತೀರ್ಥಮಿತಿ ಖ್ಯಾತಂ ಪುಣ್ಯತೀರ್ಥಂ ತದುಚ್ಯತೇ ।
ಸರ್ವಾನ್ಕಾಮಾನವಾಪ್ನೋತಿ ಯನ್ಮಹಿಮ್ನಃ ಶ್ರುತೇರಪಿ ॥ ೧ ॥
ತಸ್ಯ ಸ್ವರೂಪಂ ವಕ್ಷ್ಯಾಮಿ ಶೃಣು ಯತ್ನೇನ ನಾರದ ।
ದಿತೇಃ ಪುತ್ರಾಶ್ಚ ದನುಜಾಃ ಪರಿಕ್ಷೀಣಾ ಯದಾಭವನ್ ।
ಅದಿತೇಸ್ತು ಸುತಾ ಜ್ಯೇಷ್ಠಾಃ ಸರ್ವಭಾವೇನ ನಾರದ ॥ ೨ ॥
ತದಾ ದಿತಿಃ ಪುತ್ರವಿಯೋಗದುಃಖಾ-
ತ್ಸಂಸ್ಪರ್ಧಮಾನಾ ದನುಮಾಜಗಾಮ ॥ ೩ ॥

ನೂರಿಪ್ಪತ್ತನಾಲ್ಕನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಪುತ್ರತೀರ್ಥವೆಂದು ಪ್ರಸಿದ್ಧವಾದ ಒಂದು ಪುಣ್ಯತೀರ್ಥವು ಇರುವುದು. ಆ ತೀರ್ಥದಲ್ಲಿ ಸ್ನಾನಮಾಡಿದರೆ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು ಎಂದು ವೇದಗಳಲ್ಲಿಯೂ ಪುತ್ರತೀರ್ಥದ ಮಹಿಮೆಯು ಹೊಗಳಲ್ಪಟ್ಟಿದೆ.

೨-೩. ಆ ತೀರ್ಥದ ಮಹಾತ್ಮ್ಯವನ್ನು ಹೇಳುವೆನು, ಶ್ರದ್ಧೆಯಿಂದ ಕೇಳು. ದೇವಾಸುರ ಯುದ್ಧದಲ್ಲಿ ದೈತ್ಯರೂ ದಾನವರೂ ಸೋತು ಮರಣ ಹೊಂದಿದರು. ದೇವತೆಗಳು ಜಯಶಾಲಿಗಳಾದರು. ಆಗ ದಿತಿದೇವಿಯು ಪುತ್ರಶೋಕದಿಂದ ದೇವತೆಗಳಲ್ಲಿ ದ್ವೇಷವುಳ್ಳವಳಾಗಿ ದನುದೇವಿಯ ಬಳಿಗೆ ಬಂದು,

॥ ದಿತಿರುವಾಚ ॥

ಕ್ಷೀಣಾಃ ಸುತಾ ಆವಯೋರೇವ ಭದ್ರೇ
ಕಿಂ ಕುರ್ವಹೇ ಕರ್ಮ ಲೋಕೇ ಗರೀಯಃ ।
ಪಶ್ಯಾದಿತೇರ್ವಂಶಮಭಿನ್ನಮುತ್ತಮಂ
ಸೌರಾಜ್ಯಯುಕ್ತಂ ಯಶಸಾ ಜಯಶ್ರಿಯಾ ॥ ೪ ॥

ಜಿತಾರಿಮಭ್ಯುನ್ನತಕೀರ್ತಿಧರ್ಮಂ
ಮಚ್ಛಿತ್ತಸಂಹರ್ಷವಿನಾಶದಕ್ಷಂ ।
ಸಮಾನಭರ್ತೃತ್ವಸಮಾನಧರ್ಮೇ
ಸಮಾನಗೋತ್ರೇಽಪಿ ಸಮಾನರೂಪೇ ॥ ೫ ॥

ನ ಜೀವಯೇಯಂ ಶ್ರಿಯಮುನ್ನತಿಂ ಚ
ಜೀರ್ಣಾಸ್ಮಿ ದೃಷ್ಟ್ವಾ ತ್ವದಿತಿಪ್ರಸೂತಾನ್ ।
ಕಾಮುಪ್ಯವಸ್ಥಾಮನುಯಾಮಿ ದುಃಸ್ಥಾ-
ದಿತೇರ್ವಿಲೋಕ್ಯಾಥ ಪರಾಂ ಸಮೃದ್ಧಿಂ ।
ದಾವಪ್ರವೇಶೋಽಪಿ ಸುಖಾಯ ನೂನಂ
ಸ್ವಪ್ನೇಽಪ್ಯವೇಕ್ಷ್ಯಾ ನ ಸಪತ್ನಲಕ್ಷ್ಮೀಃ ॥ ೬ ॥

---

೪. ಎಲೌ ದನುದೇವಿ, ಯುದ್ಧದಲ್ಲಿ ನನ್ನ ಮತ್ತು ನಿನ್ನ ಮಕ್ಕಳೇ ನಾಶವಾದರು, ಏನುಮಾಡೋಣ? ಅದೃಷ್ಟವೇ ಬಲವತ್ತರವಾದುದು, ನೋಡು. ಅದಿತಿಯ ಮಕ್ಕಳೆಲ್ಲರೂ ಜಯಶಾಲಿಗಳಾಗಿರುವರು, ಯಶಸ್ವಿಗಳಾಗಿರುವರು, ಐಶ್ವರ್ಯವುಳ್ಳವರಾಗಿರುವರು, ಅವರಿಗೇ ಸ್ವರ್ಗರಾಜ್ಯವು ಲಭಿಸಿದೆ.

೫. ನನಗೂ ನಿನಗೂ ದಿತಿಗೂ ಓರ್ವನೇ ಪತಿಯು, ಒಂದೇ ವಂಶವು, ಒಂದೇತರಹೆಯ ರೂಪವು. ಹೀಗಿದ್ದರೂ ದಿತಿಯ ಮಕ್ಕಳು ಜಯಶಾಲಿಗಳಾಗಿಯೂ, ಕೀರ್ತಿವಂತರಾಗಿಯೂ, ಐಶ್ವರ್ಯವಂತಾಗಿಯೂ ಮೆರೆಯುತ್ತಿರುವರು. ಇದು ನನಗೆ ದುಃಖವನ್ನುಂಟುಮಾಡಿದೆ.

೬. ಅದಿತಿಯ ಮಕ್ಕಳು ಈ ಐಶ್ವರ್ಯವನ್ನೂ ಅಭಿವೃದ್ಧಿಯನ್ನೂ ನೋಡಿ ದುಃಖದಿಂದ ನಾನು ಜೀವಿಸಲಾರೆನು. ಅದಿತಿಯ ಈ ಏಳಿಗೆಯನ್ನು ನೋಡಿದರೆ ನನಗೆ ಹೇಗೆಹೇಗೋ ಆಗುವುದು. ಇದರ ಬದಲು ಬೆಂಕಿಯನ್ನಾದರೂ ಪ್ರವೇಶಿಸಬಹುದು, ಆದರೆ ಸವತಿಯ ಈ ಏಳಿಗೆಯನ್ನು ಸ್ವಪ್ನದಲ್ಲಿಯೂ ಸಹಿಸಲಾರೆನು ಎಂದು ತನ್ನ ದುಃಖವನ್ನು ಹೇಳಿಕೊಂಡಳು.

॥ ಬ್ರಹ್ಮೋವಾಚ ॥

ಏವಂ ಬ್ರುವಾಣಾವತಿದೀನವಕ್ತ್ರಾಂ
ವಿನಿಶ್ವಸಂತೀಂ ಪರಮೇಷ್ಠಿಪುತ್ರಃ ।
ಕೃತಾಭಿಪೂಜೋ ವಿಗತಶ್ರಮಸ್ತಾಂ
ಸ ಸಾಂತ್ವಯನ್ನಾಹ ಮನೋಭಿರಾಮಾಂ ॥ ೭ ॥

॥ ಪರಮೇಷ್ಠಿಪುತ್ರ ಉವಾಚ ॥

ಖೇದೋ ನ ಕಾರ್ಯಃ ಸಮಭೀಪ್ಸಿತಂ ಯ-
ತ್ತತ್ಪ್ರಾಪ್ಯತೇ ಪುಣ್ಯತ ಏವ ಭದ್ರೇ ।
ತತ್ಸಾಧನಂ ವೇತ್ತಿ ಮಹಾನುಭಾವಃ
ಪ್ರಜಾಪತಿಸ್ತೇ ಸ ತು ವಕ್ಷ್ಯತೀತಿ ॥ ೮ ॥

ಸಾಧ್ವ್ಯೇತತ್ಸರ್ವಭಾವೇನ ಪ್ರಶ್ರಯಾವನತಾ ಸತೀ ॥ ೯ ॥

॥ ಬ್ರಹ್ಮೋವಾಚ ॥

ಏವಂ ಬ್ರುವಾಣಾಂ ಚ ದಿತಿಂ ದನುಃ ಪ್ರೋವಾಚ ನಾರದ ॥ ೧೦ ॥

॥ ದನುರುವಾಚ ॥

ಭರ್ತಾರಂ ಕಶ್ಯಪಂ ಭದ್ರೇ ತೋಷಯಸ್ವ ನಿಜೈರ್ಗುಣೈಃ ।
ತುಷ್ಟೋ ಯದಿ ಭವೇದ್ಭರ್ತಾ ತತಃ ಕಾಮಾನವಾಪ್ಸ್ಯಸಿ ॥ ೧೧ ॥

---

೭. ಹೀಗೆ ದಿತಿಯು ದೈನ್ಯದಿಂದ ನಿಟ್ಟುಸಿರುಬಿಡುತ್ತಾ ದನುದೇವಿಗೆ ಹೇಳುತ್ತಿರಲು ಆಗ ಅಲ್ಲಿಗೆ ನಾರದಮುನಿಯು ಬಂದನು. ಆ ದಿತಿದನುದೇವಿಯರು ಅವನನ್ನು ಸತ್ಕರಿಸಿದರು. ನಾರದನು ದಿತಿಯನ್ನು ಕುರಿತು,

೮-೯. ಓ ದೇವಿ, ದುಃಖಿಸಬೇಡ. ಇಷ್ಟಾರ್ಥವೆಲ್ಲವೂ ಪುಣ್ಯದಿಂದಲೇ ಲಭಿಸುವುದು. ನಿನ್ನಿಷ್ಟಸಿದ್ಧಿಗೆ ಸಾಧನವನ್ನು ಮಹಾನುಭಾವನಾದ ನಿನ್ನ ಪತಿಯೇ ತಿಳಿದಿರುವನು, ಅವನನ್ನು ವಿನಯದಿಂದ ಆಶ್ರಯಿಸು ಎಂದನು.

೧೦-೧೧. ಆಗ ದನುದೇವಿಯು ದಿತಿಯನ್ನುದ್ದೇಶಿಸಿ ಎಲೌ ದೇವಿ, ಪತಿಯಾದ ಕಶ್ಯಪನನ್ನು ಅನುನಯದಿಂದ ಸಂತೋಷಗೊಳಿಸು. ಅವನು ಸಂತುಷ್ಟನಾದರೆ ನಿನ್ನಿಷ್ಟಸಿದ್ಧಿಯಾಗುವುದು ಎಂದಳು.

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಸರ್ವಭಾವೈಸ್ತೋಷಯಾಮಾಸ ಕಶ್ಯಪಂ ।
ದಿತಿಂ ಪ್ರೋವಾಚ ಭಗವಾನ್ಕಶ್ಯಪೋಽಥ ಪ್ರಜಾಪತಿಃ ॥ ೧೨ ॥

॥ ಕಶ್ಯಪ ಉವಾಚ ॥

ಕಿಂ ದದಾಮಿ ವದಾಭೀಷ್ಟಂ ದಿತೇ ವರಯ ಸುವ್ರತೇ ॥ ೧೩ ॥

॥ ಬ್ರಹ್ಮೋವಾಚ ॥

ದಿತಿರಪ್ಯಾಹ ಭರ್ತಾರಂ ಪುತ್ರಂ ಬಹುಗುಣಾನ್ವಿತಂ ।
ಜೇತಾರಂ ಸರ್ವಲೋಕಾನಾಂ ಸರ್ವಲೋಕನಮಸ್ಕೃತಂ ॥ ೧೪ ॥

ಯೇನ ಜಾತೇನ ಲೋಕೇಽಸ್ಮಿನ್ಭವೇಯಂ ವೀರಪುತ್ರಿಣೀ ।
ತಂ ವರೇಯಂ ಸುರಪಿತರಿತ್ಯಾಹ ವಿನಯಾನ್ವಿತಾ ॥ ೧೫ ॥

॥ ಕಶ್ಯಪ ಉವಾಚ ॥

ಉಪದೇಕ್ಷ್ಯೇ ವ್ರತಂ ಶ್ರೇಷ್ಠಂ ದ್ವಾದಶಾಬ್ದಫಲಪ್ರದಂ ।
ತತ ಆಗತ್ಯ ತೇ ಗರ್ಭಮಾಧಾಸ್ಯೇ ಯನ್ಮನೋಗತಂ ।
ನಿಷ್ಪಾಪತಾಯಾಂ ಜಾತಾಯಾಂ ಸಿಧ್ಯಂತಿ ಹಿ ಮನೋರಥಾಃ ॥ ೧೬ ॥

೧೨-೧೪. ಹಾಗೆಯೇ ಆಗಲೆಂದು ದಿತಿದೇವಿಯು ಕಶ್ಯಪನನ್ನು ಅನುನಯಗಳಿಂದ ಸಂತೋಷಗೊಳಿಸಿದಳು. ಆಗ ಭಗವಾನ್ ಕಶ್ಯಪನು—ಎಲೌ ಸಾಧ್ವಿ, ನಿನಗೆ ಏನು ಕೊಡಲಿ, ಹೇಳು, ಬೇಕಾದ ವರವನ್ನು ಕೇಳು, ಕೊಡುವೆನು ಎನ್ನಲು, ಆಗ ದಿತಿಯು ಓ ಸ್ವಾಮಿ, ಜಗದ್ವಂದ್ಯನೂ ಜಯಶಾಲಿಯೂ ಗುಣವಂತನೂ ಆದ ಪುತ್ರನನ್ನು ನನಗೆ ಅನುಗ್ರಹಿಸು.

೧೫. ನಾನು ವೀರಮಾತೆಯಾಗುವಂತಹ ಪುತ್ರನನ್ನು ಕರುಣಿಸು. ಓ ದೇವಪಿತನೇ, ಈ ವರವನ್ನು ಕೇಳುವೆನು ಎಂದು ವಿನಯದಿಂದ ತನ್ನ ಪತಿಯನ್ನು ಬೇಡಿಕೊಂಡಳು.

೧೬. ಕಶ್ಯಪನು ಹೇಳಿದನು—ಎಲೌ ದೇವಿ, ಹನ್ನೆರಡು ವರ್ಷಗಳಲ್ಲಿ ಫಲಕೊಡುವಂತಹ ಶ್ರೇಷ್ಠವ್ರತವೊಂದನ್ನು ನಿನಗೆ ಉಪದೇಶಿಸುವೆನು. ಆಮೇಲೆ ಬಂದು ನಿನಗೆ ಗರ್ಭವನ್ನನುಗ್ರಹಿಸುವೆನು. ವ್ರತದಿಂದ ಪರಿಶುದ್ಧರಾದ ಮೇಲೆಯೇ ಮನೋರಥಗಳು ಸಿದ್ಧಿಸುವುವೆಂದು ಅವಳನ್ನು ಸಂತೈಸಿದನು.

॥ ಬ್ರಹ್ಮೋವಾಚ ॥

ಭರ್ತೃರ್ವಾಕ್ಯಾದ್ದಿತಿಃ ಪ್ರೀತಾ ತಂ ನಮಸ್ಯಾಯತೇಕ್ಷಣಾ ।
ಉಪದಿಷ್ಟಂ ವ್ರತಂ ಚಕ್ರೇ ಭರ್ತ್ರಾದಿಷ್ಟಂ ಯಥಾವಿಧಿ ॥ ೧೭ ॥

ತೀರ್ಥಸೇವಾಪಾತ್ರದಾನವ್ರತಚರ್ಯಾದಿವರ್ಜಿತಾಃ ।
ಕಥಮಾಸಾದಯಿಷ್ಯಂತಿ ಪ್ರಾಣಿನೋಽತ್ರ ಮನೋರಥಾನ್ ॥ ೧೮ ॥

ತತಶ್ಚೀರ್ಣೇ ವ್ರತೇ ತಸ್ಯಾಂ ದಿತ್ಯಾಂ ಗರ್ಭಮಧಾರಯತ್ ।
ಪುನಃ ಕಾಂತಾಮುಖೋವಾಚ ಕಶ್ಯಪಸ್ತಾಂ ದಿತಿಂ ರಹಃ ॥ ೧೯ ॥

ನ ಪ್ರಾಪ್ನುವಂತಿ ಯತ್ಕಾಮಾನ್ಮುನಯೋಽಪಿ ತಪಃಸ್ಥಿತಾಃ ।
ಯಥಾವಿಹಿತಕರ್ಮಾಂಗಾವಜ್ಞಯಾ ತುಚ್ಛಚಿಸ್ಮಿತೇ ॥ ೨೦ ॥

ನಿಂದಿತಂ ಚ ನ ಕರ್ತವ್ಯಂ ಸಂಧ್ಯಯೋರುಭಯೋರಪಿ ।
ನ ಸ್ವಪ್ತವ್ಯಂ ನ ಗಂತವ್ಯಂ ಮುಕ್ತಕೇಶೀ ಚ ನೋ ಭವ ॥ ೨೧ ॥

ಭೋಕ್ತವ್ಯಂ ಸುಭಗೇ ನೈವ ಕ್ಷುತಂ ವಾ ಜೃಂಭಣಂ ತಥಾ ।
ಸಂಧ್ಯಾಕಾಲೇ ನ ಕರ್ತವ್ಯಂ ಭೂತಸಂಘಸಮಾಕುಲೇ ॥ ೨೨ ॥

---

೧೭. ಪತಿಯ ಮಾತಿನಿಂದ ದಿತೀದೇವಿಯು ಸಂತಸಗೊಂಡು ಅವನುಪದೇಶಿಸಿದ ವ್ರತವನ್ನು ವಿಧಿವತ್ತಾಗಿ ಆಚರಿಸಿದಳು.

೧೮. ತೀರ್ಥಯಾತ್ರೆ, ಯೋಗ್ಯರಿಗೆ ದಾನಮಾಡುವುದು, ವ್ರತಾಚರಣೆ ಇವು ಮೊದಲಾದುವುಗಳನ್ನು ಮಾಡದಿದ್ದರೆ ಮಾನವರು ಇಷ್ಟಸಿದ್ಧಿಯನ್ನು ಹೇಗೆ ಪಡೆಯುವರು ?

೧೯. ನಂತರ ದಿತಿಯು ಆ ವ್ರತವನ್ನು ಸಾಂಗವಾಗಿ ನೆರವೇರಿಸಲು, ಕಶ್ಯಪನು ಬಂದು ಅವಳಿಗೆ ಗರ್ಭವನ್ನುಂಟುಮಾಡಿದನು. ಪುನಃ ಕಶ್ಯಪನು ದಿತಿಯನ್ನು ಕುರಿತು,

೨೦. ಮಹಾಮುನಿಗಳಾದರೂ ಸಹ ತಪಸ್ಸನ್ನಾಚರಿಸುತ್ತಾ ಅದರ ಅಂಗಗಳೆಲ್ಲವನ್ನೂ ವಿಧಿವತ್ತಾಗಿ ಆಚರಿಸದಿದ್ದರೆ ಫಲವು ಲಭಿಸುವುದಿಲ್ಲ.

೨೧-೨೨. ಎಲೌ ದಿತಿ, ಸಂಧ್ಯಾಕಾಲಗಳಲ್ಲಿ ಭೂತಸಂಘಗಳೇ ಸಂಚರಿಸುವುವು. ಆಗ ನಿಂದಿತಕರ್ಮವನ್ನು ಮಾಡಬಾರದು, ನಿದ್ರಿಸಬಾರದು, ಗಮನ ಮಾಡಬಾರದು, ತಲೆಕೂದಲನ್ನು ಬಿಚ್ಚಿಕೊಂಡಿರಬಾರದು, ಊಟಮಾಡಬಾರದು ಸೀನಬಾರದು, ಆಕಳಿಸಬಾರದು.

ಸಾಂತರ್ಧಾನಂ ಸದಾ ಕಾರ್ಯಂ ಪಸಿತಂ ತು ವಿಶೇಷತಃ ।
ಗೃಹಾಂತದೇಶೇ ಸಂಧ್ಯಾಸು ನ ಸ್ಥಾತವ್ಯಂ ಕದಾಚನ ॥ ೨೩ ॥

ಮುಶಲೋಲೂಖಲಾದೀನಿ ಶೂರ್ಪಪೀಠಪಿಧಾನಕಂ ।
ನೈವಾತಿಕ್ರಮಣೀಯಾನಿ ದಿವಾ ರಾತ್ರೌ ಸದಾ ಪ್ರಿಯೇ ॥ ೨೪ ॥

ಉದಕ್ಶೀರ್ಷಂ ತು ಶಯನಂ ನ ಸಂಧ್ಯಾಸು ವಿಶೇಷತಃ ।
ವಕ್ತವ್ಯಂ ನಾನೃತಂ ಕಿಂಚಿನ್ನಾನ್ಯಗೇಹಾಟನಂ ತಥಾ ॥ ೨೫ ॥

ಕಾಂತಾದನ್ಯೋ ನ ವೀಕ್ಷ್ಯಸ್ತು ಪ್ರಯತ್ನೇನ ನರಃ ಕ್ವಚಿತ್ ।
ಇತ್ಯಾದಿನಿಯಮೈರ್ಯುಕ್ತಾ ಯದಿ ತ್ವಮನುವರ್ತಸೇ ।
ತತಸ್ತೇ ಭವಿತಾ ಪುತ್ರಸ್ತ್ರೈಲೋಕ್ಯೈಶ್ವರ್ಯಭಾಜನಂ ॥ ೨೬ ॥

॥ ಬ್ರಹ್ಮೋವಾಚ ॥

ತಥೇತಿ ಪ್ರತಿಜಜ್ಞೇ ಸಾ ಭರ್ತಾರಂ ಲೋಕಪೂಜಿತಂ ।
ಗತಶ್ಚ ಕಶ್ಯಪೋ ಬ್ರಹ್ಮನ್ನಿತಶ್ಚೇತಃ ಸುರಾನ್ಪ್ರತಿ ॥ ೨೭ ॥

---

೨೩. ಕೆಲಸವೆಲ್ಲವನ್ನೂ ಮನೆಯೊಳಗೇ ಮಾಡಬೇಕು, ಸಂಧ್ಯಾಕಾಲದಲ್ಲಿ ನಗಬಾರದು. ಮನೆಯಹೊರಗಡೆ ಇರಬಾರದು.

೨೪. ಒನಕೆ, ಒರಳು, ಮರ, ಪೀಠ, ಮುಚ್ಚಳ ಮುಂತಾದುದನ್ನು ರಾತ್ರಿಯಲ್ಲೂ ಹಗಲಲ್ಲೂ ಸಹ ದಾಟಿ ನಡೆಯಬಾರದು.

೨೫. ಸಂಧ್ಯಾಕಾಲದಲ್ಲಿ ಉತ್ತರದಿಕ್ಕಿಗೆ ತಲೆಹಾಕಿ ಮಲಗಬಾರದು, ಸುಳ್ಳುಹೇಳಬಾರದು, ಪರರ ಮನೆಗೆ ಹೋಗಬಾರದು.

೨೬. ಪತಿಯನ್ನು ಹೊರತು ಮಿಕ್ಕ ಪರಪುರುಷರನ್ನು ನೋಡಬಾರದು. ಇವೇ ಮೊದಲಾದ ನಿಯಮಗಳನ್ನು ನೀನು ಪಾಲಿಸಿದರೆ ಮೂರು ಲೋಕಗಳ ಒಡೆತನವನ್ನು ಮಾಡಬಲ್ಲ ಮಹಾಪರಾಕ್ರಮಶಾಲಿಯಾದ ಪುತ್ರನು ನಿನಗೆ ಜನಿಸುವನೆಂದನು.

೨೭. ಹಾಗೆಯೇ ಆಗಲೆಂದು ದಿತಿಯು ಲೋಕವಂದ್ಯನಾದ ಪತಿಯ ಮಾತನ್ನು ಅಂಗೀಕರಿಸಿದಳು. ಆಮೇಲೆ ಕಶ್ಯಪನು ದೇವತೆಗಳ ಯೋಗಕ್ಷೇಮವನ್ನು ವಿಚಾರಿಸಲು ಹೊರಟನು.

ದಿತೇರ್ಗರ್ಭೋಽಪಿ ವವೃಧೇ ಬಲವಾನ್ಪುಣ್ಯಸಂಭವಃ ।
ಏತತ್ಸರ್ವಂ ಮಯೋ ದೈತ್ಯೋ ಮಾಯಯಾ ವೇತ್ತಿ ತತ್ತ್ವತಃ ॥ ೨೮ ॥

ಇಂದ್ರಸ್ಯ ಸಖ್ಯಮಭವನ್ಮಯೇನ ಪ್ರೀತಿಪೂರ್ವಕಂ ।
ಮಯೋ ಗತ್ವಾ ರಹಃ ಪ್ರಾಹ ಇಂದ್ರಂ ಸ ವಿನಯಾನ್ವಿತಃ ॥ ೨೯ ॥

ದಿತೇರ್ದನೋರಭಿಪ್ರಾಯಂ ವ್ರತಂ ಗರ್ಭಸ್ಯ ವರ್ಧನಂ ।
ತಸ್ಯ ವೀರ್ಯಂ ಚ ವಿವಿಧಂ ಪ್ರೀತ್ಯೈನ್ದ್ರಾಯ ನ್ಯವೇದಯತ್ ॥ ೩೦ ॥

ವಿಶ್ವಾಸ್ಯೈಕಗೃಹಂ ಮಿತ್ರಮುಪಾಯತ್ರಾಸವರ್ಜಿತಂ ।
ಅರ್ಜಿತಂ ಸುಕೃತಂ ನಾನಾವಿಧಂ ಚೇತ್ತದವಾಪ್ಯತೇ ॥ ೩೧ ॥

॥ ನಾರದ ಉವಾಚ ॥

ನಮುಚೇಶ್ಚ ಪ್ರಿಯೋ ಭ್ರಾತಾ ಮಯೋ ದೈತ್ಯೋ ಮಹಾಬಲಃ ।
ಭ್ರಾತೃಹಂತ್ರಾ ಕಥಂ ಮೈತ್ರ್ಯಂ ಮಯಸ್ಯಾಸೀತ್ಸುರೇಶ್ವರ ॥ ೩೨ ॥

---

೨೮. ಪುಣ್ಯಕರ್ಮದ ಬಲದಿಂದ ದಿತಿಯ ಗರ್ಭವು ದಿನದಿನಕ್ಕೂ ಬೆಳೆಯ ತೊಡಗಿತು. ಈ ಸಮಾಚಾರವೆಲ್ಲವನ್ನೂ ಮಯನೆಂಬ ದೈತ್ಯನು ಮಾಯೆಯಿಂದ ತಿಳಿದನು.

೨೯–೩೦. ಇಂದ್ರನಿಗೂ ಮಯನಿಗೂ ತುಂಬಾ ಸ್ನೇಹವಿದ್ದಿತು. ಮಯನು ಇಂದ್ರನ ಬಳಿಗೆ ಹೋಗಿ ದಿತಿದನುದೇವಿಯರ ಅಭಿಪ್ರಾಯವನ್ನೂ ದಿತಿಯ ವ್ರತಾಚರಣವನ್ನೂ, ಗರ್ಭವೃದ್ಧಿಯನ್ನೂ, ಆ ಗರ್ಭದ ಮಹಿಮೆಯನ್ನೂ ಇಂದ್ರನಿಗೆ ವಿನಯದಿಂದ ಅರಿಕೆಮಾಡಿದನು.

೩೧. ಸ್ನೇಹಪಾತ್ರನೂ, ಕಷ್ಟದಲ್ಲಿ ಸಹಾಯಮಾಡುವಂಥವನೂ ಆದ ಮಿತ್ರನು ಲಭಿಸಬೇಕಾದರೆ ತುಂಬಾ ಪುಣ್ಯಮಾಡಿರಬೇಕು.

೩೨. ನಾರದನು ಬ್ರಹ್ಮನನ್ನು ಪ್ರಶ್ನೆ ಮಾಡುವನು—ಮಯನು ನಮುಚಿಯೆಂಬ ದೈತ್ಯನ ಪ್ರಿಯಸಹೋದರನು. ನಮುಚಿಯನ್ನು ಇಂದ್ರನು ಸಂಹರಿಸಿದ್ದನು. ಇಂತಹ ಸಹೋದರನಾಶಕನಾದ ಇಂದ್ರನೊಡನೆ ಮಯನಿಗೆ ಸ್ನೇಹವು ಹೇಗೆ ಉಂಟಾಯಿತು? ಈ ಸಂಶಯವನ್ನು ಪರಿಹರಿಸಬೇಕು ಎನ್ನಲು,

॥ ಬ್ರಹ್ಮೋವಾಚ ॥

ದೈತ್ಯಾನಾಮಧಿಪಶ್ಚಾಸೀದ್ಬಲವಾನ್ನಮುಚಿಃ ಪುರಾ ।
ಇಂದ್ರೇಣ ವೈರಮಭವದ್ಭೀಷಣಂ ಲೋಮಹರ್ಷಣಂ ॥ ೩೩ ॥

ಯುದ್ಧಂ ಹಿತ್ವಾ ಕದಾಚಿದ್ಭೋ ಗಚ್ಛಂತಂ ತು ಶತಕ್ರತುಂ ।
ದೃಷ್ಟ್ವಾ ದೈತ್ಯಪತಿಃ ಶೂರೋ ನಮುಚಿಃ ಪೃಷ್ಠತೋಽನ್ವಗಾತ್ ॥ ೩೪ ॥

ತಮಾಯಾಂತಮಭಿಪ್ರೇಕ್ಷ್ಯ ಶಚೀಭರ್ತಾ ಭಯಾತುರಃ ।
ಐರಾವತಂ ಗಜಂ ತ್ಯಕ್ತ್ವಾ ಇಂದ್ರಃ ಫೇನಮಥಾವಿಶತ್ ॥ ೩೫ ॥

ಸ ವಜ್ರಪಾಣಿಸ್ತರಸಾ ಫೇನೇನೈವಾಹನದ್ರಿಪುಂ ।
ನಮುಚಿರ್ನಾಶಮಗಮತ್ತಸ್ಯ ಭ್ರಾತಾ ಮಯೋಽನುಜಃ ॥ ೩೬ ॥

ಭ್ರಾತೃಹಂತೃವಿನಾಶಾಯ ತಪಸ್ತೇಪೇ ಮಯೋ ಮಹತ್ ।
ಮಾಯಾಂ ಚ ವಿವಿಧಾಮಾಪ ದೇವಾನಾಮತಿಭೀಷಣಾಂ ॥ ೩೭ ॥

---

೩೩. ಬ್ರಹ್ಮನಿಂತೆಂದನು—ನಮುಚಿಯೆಂಬ ಅಸುರನು ಹಿಂದೆ ದೈತ್ಯರಾಜನಾಗಿದ್ದನು. ಬಲಿಷ್ಠನಾದ ಆ ದೈತ್ಯನಿಗೂ ಇಂದ್ರನಿಗೂ ವೈರವುಂಟಾಗಿದ್ದಿತು.

೩೪. ಒಂದುಸಾರಿ ಯುದ್ಧವನ್ನು ತ್ಯಜಿಸಿ ಇಂದ್ರನು ಓಡಿಹೋಗುತ್ತಿದ್ದನು. ಅದನ್ನು ನೋಡಿ ಶೂರನಾದಾ ನಮುಚಿಯು ಇಂದ್ರನನ್ನಟ್ಟಿಸಿಕೊಂಡು ಹೋದನು.

೩೫. ಹಿಂಬಾಲಿಸಿಬಂದ ನಮುಚಿಯನ್ನು ನೋಡಿ ಇಂದ್ರನು ಹೆದರಿ ಐರಾವತವನ್ನು ಬಿಟ್ಟು ಗಂಗಾನದಿಯ ನೊರೆಯೊಂದರಲ್ಲಿ ಸೇರಿಕೊಂಡನು.

೩೬. ಅಲ್ಲಿ ಆ ನೊರೆಯಿಂದಲೇ ಇಂದ್ರನು ನಮುಚಿಯನ್ನು ಸಂಹರಿಸಿದನು. ನಮುಚಿಯು ಮೃತನಾದನು. ಆ ನಮುಚಿಯ ತಮ್ಮನೇ ಈ ಮಯನು.

೩೭. ಅಣ್ಣನನ್ನು ವಧಿಸಿದ ಇಂದ್ರನನ್ನು ಸಂಹರಿಸಲು ಮಯನು ಘೋರತಪವನ್ನಾಚರಿಸಿ ದೇವಭಯಂಕರವಾದ ನಾನಾಬಗೆಯ ಮಾಯೆಯನ್ನು ರವವಾಗಿ ಪಡೆದನು.

ವರಾಂಶ್ಚಾವಾಪ್ಯ ತಪಸಾ ವಿಷ್ಣೋರ್ಲೋಕಪರಾಯಣಾತ್ ।
ದಾನಶೌಂಡಃ ಪ್ರಿಯಾಲಾಪೀ ತದಾಭವದಸೌ ಮಯಃ ॥ ೩೮ ॥

ಅಗ್ನೀಂಶ್ಚ ಬ್ರಾಹ್ಮಣಾನ್ಪೂಜ್ಯ ಜೇತುಮಿಂದ್ರಂ ಕೃತಕ್ಷಣಃ ।
ದಾತಾರಂ ಚ ತದಾರ್ಥಿಭ್ಯಃ ಸ್ತೂಯಮಾನಂ ಚ ಬಂದಿಭಿಃ ॥ ೩೯ ॥

ವಿದಿತ್ವಾ ಮಘವಾ ವಾಯೋರ್ಮಯಂ ಮಾಯಾವಿನಂ ರಿಪುಂ ।
ಉಪಕ್ರಾಂತಂ ಸುಯುದ್ಧಾಯ ವಿಪ್ರೋ ಭೂತ್ವಾ ತಮಭ್ಯಗಾತ್ ।
ಶಚೀಭರ್ತಾ ಮಯಂ ದೈತ್ಯಂ ಪ್ರೋವಾಚೇದಂ ಪುನಃ ಪುನಃ ॥ ೪೦ ॥

॥ ಇಂದ್ರ ಉವಾಚ ॥

ದೇಹಿ ದೈತ್ಯಪತೇ ಮಹ್ಯಮರ್ಥಿನೇಽಪೇಕ್ಷಿತಂ ವರಂ ।
ತ್ವಾಂ ಶ್ರುತ್ವಾ ದಾತೃತಿಕಲಮಾಗತೋಽಹಂ ದ್ವಿಜೋತ್ತಮಃ ॥ ೪೧ ॥

॥ ಬ್ರಹ್ಮೋವಾಚ ॥

ಮಯೋಽಪಿ ಬ್ರಾಹ್ಮಣಂ ಮತ್ವಾವದದ್ದತ್ತಂ ಮಯಾ ತವ ।
ವಿಚಾರಯಂತಿ ಕೃತಿನೋ ಬಹ್ವಲ್ಪಂ ವಾ ಪುರೋಽರ್ಥಿನಿ ॥ ೪೨ ॥

---

೩೮. ತಪಸ್ಸನ್ನು ಮಾಡಿ ಮಯನು ಜಗನ್ಮಯನಾದ ಹರಿಯಿಂದ ಬೇಕಾದ ವರವನ್ನು ಪಡೆದನು. ಅಂದಿನಿಂದ ಆ ಮಯನು ದಾನಶೀಲನೂ ಮಧುರಲಾಪಿಯೂ ಆದನು.

೩೯-೪೧. ಆಮೇಲಾ ಮಯನು ಇಂದ್ರನಮೇಲೆ ದಂಡೆತ್ತಿ ಯುದ್ಧಕ್ಕೆ ಹೊರಡಲು ಸಮಯವೊಂದನ್ನು ನಿಶ್ಚಯಿಸಿ ಜಯಲಾಭಕ್ಕಾಗಿ ಅಗ್ನಿಸೇವೆಯನ್ನೂ ಬ್ರಾಹ್ಮಣಪೂಜೆಯನ್ನೂ ಮಾಡುತ್ತಾ ಹೇರಳವಾಗಿ ದಾನಮಾಡತೊಡಗಿದನು. ಈ ವಿಷಯವು ವಾಯುವಿನ ಮೂಲಕ ಇಂದ್ರನಿಗೆ ತಿಳಿಯಿತು, ಆಗ ಇಂದ್ರನು ಬ್ರಾಹ್ಮಣರೂಪವನ್ನು ಧರಿಸಿ ಮಯನ ಬಳಿಗೆ ಬಂದು ಓ ದೈತ್ಯರಾಜ, ಅರ್ಥಿಯಾದ ನನಗೆ ಬೇಕಾದ ವಸ್ತುವನ್ನು ಕೊಡು. ನೀನು ಮಹಾದಾನಿಯೆಂದು ಕೇಳಿ ನಾನು ಬಹುದೂರದಿಂದ ಬಂದಿರುವೆನೆಂದನು.

೪೨. ಆಗ ಮಯನು—ಅವನು ನಿಜವಾದ ಬ್ರಾಹ್ಮಣನೆಂದೇ ತಿಳಿದು ಓ ವಿಪ್ರೋತ್ತಮ, ಬೇಕಾದ ವರವನ್ನು ಕೊಟ್ಟಿರುವೆನು. ಏನು ನಿನಗೆ ಬೇಕಾದ ವಸ್ತುವು ಚಿಕ್ಕದೋ ? ಅಥವಾ ಸಾಮಾನ್ಯವಾದುದೋ ? ಎಂದು ಕೇಳಿದನು.

ಇತ್ಯುಕ್ತೇ ತು ಹರಿಃ ಪ್ರಾಹ ಸಖ್ಯುಮಿಚ್ಛೇ ಹ್ಯಹಂ ತ್ವಯಾ ।
ಇಂದ್ರಂ ಮಯಃ ಪುನಃ ಪ್ರಾಹ ಕಿಮನೇನ ದ್ವಿಜೋತ್ತಮ ॥ ೪೩ ॥

ನ ತ್ವಯಾ ಮಮ ವೈರಂ ಭೋಃ ಸ್ವಸ್ತೀತ್ಯಾಹ ಹರಿರ್ಮಯಂ ।
ತತ್ತ್ವಂ ವದೇತಿ ಸ ಹರಿರ್ದೈತ್ಯೇನೋಕ್ತಃ ಸ್ವಕಂ ವಪುಃ ॥ ೪೪ ॥

ದರ್ಶಯಾಮಾಸ ದೈತ್ಯಾಯ ಸಹಸ್ರಾಕ್ಷಂ ಯದುಚ್ಯತೇ ।
ತತಃ ಸವಿಸ್ಮಯೋ ದೈತ್ಯೋ ಮಯೋ ಹರಿಮುವಾಚ ಹ ॥ ೪೫ ॥

॥ ಮಯ ಉವಾಚ ॥

ಕಿಮಿದಂ ವಜ್ರಪಾಣಿಸ್ತ್ವಂ ತವಾಯೋಗ್ಯಾ ಕೃತಿಃ ಸಖೇ ॥ ೪೬ ॥

॥ ಬ್ರಹ್ಮೋವಾಚ ॥

ಪರಿಷ್ವಜ್ಯ ವಿಹಸ್ಯಾಥ ವೃತ್ತಮಿತ್ಯಬ್ರವೀದ್ಧರಿಃ ।
ಕೇನಾಪಿ ಸಾಧಯಂತ್ಯತ್ರ ಪಂಡಿತಾಶ್ಚ ಸಮೀಹಿತಂ ॥ ೪೭ ॥

---

೪೩. ಮಯನು ಹಾಗೆ ಹೇಳಲು ಇಂದ್ರನು, ಎಲೈ ದೈತ್ಯರಾಜ, ನಿನ್ನೊಡನೆ ಸ್ನೇಹವನ್ನು ಅಪೇಕ್ಷಿಸುವೆನು. ಅದೇ ನನಗೆ ಬೇಕಾದ ವರವು ಎಂದು ಹೇಳಿದನು. ಆದಕ್ಕೆ ಮಯನು ಓ ವಿಪ್ರೋತ್ತಮ, ಬರಿಯ ನನ್ನ ಸ್ನೇಹದಿಂದ ನಿನಗೇನುಪ್ರಯೋಜನವೆಂದು ಕೇಳಿದನು.

೪೪. ನನಗೆ ನಿನ್ನಲ್ಲಿ ವೈರವಿಲ್ಲ, ಸ್ನೇಹವನ್ನು ಅಪೇಕ್ಷಿಸಲು ಕಾರಣವೇನು? ನಿಜವನ್ನು ಹೇಳೆಂದು ಮಯನು ಕೇಳಲು, ಇಂದ್ರನು ಆಗ ತನ್ನ ನಿಜ ರೂಪವನ್ನು ತೋರಿಸಿದನು.

೪೫-೪೬. ಆಗ ಮಯನು ಅಶ್ಚರ್ಯಗೊಂಡು ಎಲೈ ಮಿತ್ರನೆ, ಶೂರನೂ ವಜ್ರಧರನೂ ಆದ ನೀನು ಇಂತಹ ಅಯೋಗ್ಯ ಕೆಲಸವನ್ನು ಮಾಡಬಹುದೇ ಎನ್ನಲು.

೪೭. ಆಗ ಇಂದ್ರನು ನಕ್ಕು ಮಯನನ್ನಾಲಂಗಿಸಿ—ನನಗೂ ನಿನಗೂ ಸ್ನೇಹವಾಯಿತೆಂದು ಹೇಳಿದನು. ಹೀಗೆ ಬುದ್ಧಿವಂತರು ಉಪಾಯಗಳಿಂದ ತಮ್ಮ ಕಾರ್ಯಗಳನ್ನು ಸಾಧಿಸುವರು.

ತತಃ ಪ್ರಭೃತಿ ಶಕ್ರಸ್ಯ ಮಯೇನ ಮಹತೀ ಹ್ಯಭೂತ್ ।
ಸುಪ್ರೀತಿರ್ಮುನಿಶಾರ್ದೂಲ ಮಯೋ ಹರಿಹಿತಃ ಸದಾ ॥ ೪೮ ॥

ಇಂದ್ರಸ್ಯ ಭವನಂ ಗತ್ವಾ ತಸ್ಮೈ ಸರ್ವಂ ನ್ಯವೇದಯತ್ ।
ಕಿಂ ಮೇ ಕೃತ್ಯಮಿತಿ ಪ್ರಾಹ ಮಯಂ ಮಾಯಾವಿನಂ ಹರಿಃ ॥ ೪೯ ॥

ಹರಯೇ ಚ ಮಯೋ ಮಾಯಾಂ ಪ್ರಾದಾತ್ಪ್ರೀತ್ಯಾ ತಥಾ ಹರಿಃ ।
ಪ್ರಾಪ್ತಃ ಸಂಪ್ರೀತಿಮಾನಾಹ ಕಿಂ ಕೃತ್ಯಂ ಮಯ ತದ್ವದ ॥ ೫೦ ॥

॥ ಮಯ ಉವಾಚ ॥

ಅಗಸ್ತ್ಯಸ್ಯಾಶ್ರಮಂ ಗಚ್ಛ ತತ್ರಾಸ್ತೇ ಗರ್ಭಿಣೀ ದಿತಿಃ ।
ತಸ್ಯಾಃ ಶುಶ್ರೂಷಣಂ ಕುರ್ವನ್ನಾಸ್ಸ್ವ ತತ್ರ ಕಿಯಂತಿ ಚ ॥ ೫೧ ॥

ಅಹಾನಿ ಮಘವಂಸ್ತಸ್ಯಾ ಗರ್ಭಮಾವಿಶ್ಯ ವಜ್ರಧೃಕ್ ।
ವರ್ಧಮಾನಂ ಚ ತಂ ಛಿಂಧಿ ಯಾವದ್ವಶ್ಯೋಽಥವಾ ಮೃತಿಂ ।
ಪ್ರಾಪ್ನೋತಿ ತಾವದ್ವಜ್ರೇಣ ತತೋ ನ ಭವಿತಾ ರಿಪುಃ ॥ ೫೨ ॥

---

೪೮. ಅದುಮೊದಲುಗೊಂಡು ಮಯನಿಗೂ ಇಂದ್ರನಿಗೂ ತುಂಬಾ ಸ್ನೇಹವು ಬೆಳೆಯಿತು. ಅಂದಿನಿಂದ ಮಯನು ಇಂದ್ರನ ಹಿತಚಿಂತಕನಾದನು.

೪೯. ಹಿಂದೆ ಹೇಳಿದಂತೆ ಇಂದ್ರನ ಅರಮನೆಗೆ ಹೋಗಿ ದಿತಿಯ ಸಮಾಚಾರವೆಲ್ಲವನ್ನೂ ಹೇಳಿದನು. ಅದಕ್ಕೆ ಇಂದ್ರನು—ಈಗ ನಾನು ಮಾಡಬೇಕಾದುದೇನೆಂದು ಕೇಳಿದನು.

೫೦. ಆಗ ಮಯನು ಇಂದ್ರನಿಗೆ ಮಾಯಾವಿದ್ಯೆಯನ್ನುಪದೇಶಿಸಿದನು. ಅದರಿಂದ ಇಂದ್ರನು ಸಂತಸಗೊಂಡು ಎಲೈ ಮಿತ್ರ, ನಾನು ಈಗ ಮಾಡಬೇಕಾದುದನ್ನು ಹೇಳೆಂದನು.

೫೧–೫೨. ಮಯನಿಂತೆಂದನು—ಓ ಇಂದ್ರ, ಅಗಸ್ತ್ಯಾಶ್ರಮಕ್ಕೆ ಹೋಗು, ಅಲ್ಲಿ ದಿತಿಯು ಇರುವಳು. ಅಲ್ಲಿ ಅವಳ ಸೇವೆಯನ್ನು ಮಾಡುತ್ತಾ ಕೆಲವುದಿನವಿರು. ಸಮಯವನ್ನು ಸಾಧಿಸಿ ದಿತಿಯ ಗರ್ಭವನ್ನು ಪ್ರವೇಶಿಸಿ ಬೆಳೆಯುತ್ತಿರುವ ಗರ್ಭವನ್ನು ಛೇದಿಸು. ಗರ್ಭವು ನಿನಗೆ ಅಧೀನವಾಗಬೇಕು ಇಲ್ಲವೇ ಸಾಯಬೇಕು, ಅಲ್ಲಿಯವರೆಗೂ ಕತ್ತರಿಸು ಹಾಗೆ ಮಾಡಿದರೆ ನಿನಗೆ ಶತ್ರುಪಿನ ಭಯವಿಲ್ಲವೆಂದನು.

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಮಯಂ ಪೂಜ್ಯ ಮಘವಾನೇಕ ಏವ ಹಿ ।
ವಿನೀತವತ್ತದಾ ಪ್ರಾಯಾದ್ದಿತಿಂ ಮಾತರಮಂಜಸಾ ॥ ೫೩ ॥

ಶುಶ್ರೂಷಮಾಣಸ್ತಾಂ ದೇವೀಂ ಶಕ್ರೋ ದೈತೇಯಮಾತರಂ ।
ಸಾ ನ ಜಾನಾತಿ ತಚ್ಚಿತ್ತಂ ಶಕ್ರಸ್ಯ ದ್ವಿಷತೋ ದಿತಿಃ ॥ ೫೪ ॥

ಗರ್ಭೇ ಸ್ಥಿತಂ ತು ಯದ್ಭೂತಂ ದೇವೇಂದ್ರಸ್ಯ ವಿಚೇಷ್ಟಿತಂ ।
ಅಮೋಘಂ ತನ್ಮನೇಸ್ತೇಜಃ ಕಶ್ಯಪಸ್ಯ ದುರಾಸದಂ ॥ ೫೫ ॥

ತತಃ ಪ್ರಗೃಹ್ಯ ಕುಲಿಶಂ ಸಹಸ್ರಾಕ್ಷಃ ಪುರಂದರಃ ।
ಅಂತಃಪ್ರವೇಶಕಾಮೋಽಸೌ ಬಹುಕಾಲಂ ಸಮಾನಸನ್ ॥ ೫೬ ॥

ಸಂಧ್ಯೋದಕ್ಶೀರ್ಷನಿದ್ರಾಂ ತಾಮವೇಕ್ಷ್ಯ ಕುಲಿಶಾಯುಧಃ ।
ಇದಮಂತರಮಿತ್ಯುಕ್ತ್ವಾ ದಿತ್ಯಾಃ ಕುಕ್ಷಿಂ ಸಮಾವಿಶತ್ ॥ ೫೭ ॥

೫೩-೫೪. ಇಂದ್ರನು ಹಾಗೆಯೇ ಆಗಲೆಂದು ಮಯನ ಮಾತನ್ನಂಗೀಕರಿಸಿ ಅವನನ್ನು ಗೌರವಿಸಿ, ತಾನೊರ್ವನೇ ತನ್ನ ಬಲತಾಯಿಯಾದ ದಿತಿಯ ಬಳಿಗೆ ಹೋಗಿ ದೈತ್ಯಮಾತೆಯಾದಾ ದಿತಿಯನ್ನು ಇಂದ್ರನು ಕೆಲವು ದಿನಗಳವರೆಗೆ ವಿನಯದಿಂದ ಶುಶ್ರೂಷೆಮಾಡುತ್ತಿದ್ದನು. ವೈರಿಯಾದಾ ಇಂದ್ರನ ದುರಭಿಪ್ರಾಯವು ದಿತಿದೇವಿಗೆ ತಿಳಿಯಲಿಲ್ಲ.

೫೫. ಆದರೆ ದಿತಿಯ ಗರ್ಭದಲ್ಲಿದ್ದ ಕಶ್ಯಪನ ಅಮೋಘವಾದ ತೇಜವು ದೇವೇಂದ್ರನ ದುರಭಿಪ್ರಾಯವನ್ನು ತಿಳಿದಿದ್ದಿತು.

೫೬. ಹೀಗೆ ಕೆಲವುಕಾಲ ದಿತಿಯ ಶುಶ್ರೂಷೆಮಾಡುತ್ತಾ ಇಂದ್ರನು ವಜ್ರವನ್ನು ಹಿಡಿದು ಗರ್ಭವನ್ನು ಪ್ರವೇಶಿಸಿ ಅಲ್ಲಿ ಬಹುಕಾಲವನ್ನು ನಿರೀಕ್ಷಿಸುತ್ತಾ ಕಳೆದನು.

೫೭. ಒಂದುದಿನ ದಿತಿಯು ಸಂಧ್ಯಾಕಾಲದಲ್ಲಿ ಉತ್ತರದಿಕ್ಕಿಗೆ ತಲೆಇಟ್ಟು ನಿದ್ರಿಸುತ್ತಿದ್ದಳು. ಅದನ್ನು ನೋಡಿ ಇಂದ್ರನು ಇದೇ ಸಮಯವೆಂದು ತಿಳಿದು ದಿತಿಯ ಗರ್ಭವನ್ನು ವಜ್ರಾಯುಧದೊಡನೆ ಪ್ರವೇಶಿಸಿದನು.

ಅಂತರ್ವರ್ತಿ ಚ ಯದ್ಗೋತಮಿಂದ್ರಂ ದೃಷ್ಟ್ವಾ ಧೃತಾಯುಧಂ ।
ಹಂತುಕಾಮಂ ತದೋವಾಚ ಪುನಃ ಪುನರಭೀತವತ್ ॥ ೫೮ ॥

॥ ಗರ್ಭಸ್ಥ ಉವಾಚ ॥

ಕಿಂ ಮಾಂ ನ ರಕ್ಷಸೇ ವಜ್ರಿನ್ಭ್ರಾತರಂ ತ್ವಂ ಜಿಘಾಂಸಸಿ ।
ನಾರಣೇ ಮಾರಣಾದನ್ಯತ್ಪಾತಕಂ ವಿದ್ಯತೇ ಮಹತ್ ॥ ೫೯ ॥

ಋತೇ ಯುದ್ಧಾನ್ಮಹಾಬಾಹೋ ಶಕ್ರ ಯುಧ್ಯಸ್ವ ನಿರ್ಗತೇ ।
ಮಯಿ ತಸ್ಮಾನ್ನೈತದೇವಂ ತವ ಯುಕ್ತಂ ಭವಿಷ್ಯತಿ ॥ ೬೦ ॥

ಶತಕ್ರತುಃ ಸಹಸ್ರಾಕ್ಷಃ ಶಚೀಭರ್ತಾ ಪುರಂದರಃ ।
ವಜ್ರಪಾಣಿಃ ಸುರೇಂದ್ರಸ್ತ್ವಂ ತೇ ನ ಯುಕ್ತಂ ಭವೇತ್ಪ್ರಭೋ ॥ ೬೧ ॥

ಅಥವಾ ಯುದ್ಧಕಾಮಸ್ತ್ವಂ ಮಮ ನಿಷ್ಕ್ರಮಣಂ ಯಥಾ ।
ತಥಾ ಕುರು ಮಹಾಬಾಹೋ ಮಾರ್ಗಾದಸ್ಮಾದಪಾಸರ ॥ ೬೨ ॥

---

೫೮. ಒಳಗಿದ್ದ ಗರ್ಭವು, ಆಯುಧವನ್ನು ಹಿಡಿದು ಕೊಲ್ಲಲು ಬರುತ್ತಿರುವ ಇಂದ್ರನನ್ನು ನೋಡಿ ಧೈರ್ಯದಿಂದ ಪುನಃಪುನಃ ಇಂತೆಂದಿತು.

೫೯. ಓ ಇಂದ್ರ, ನಾನು ನಿನ್ನ ಸಹೋದರನಲ್ಲವೆ? ನನ್ನನ್ನು ನೀನು ರಕ್ಷಿಸಬೇಡವೆ? ಅದನ್ನು ಬಿಟ್ಟು, ನನ್ನನ್ನು ಏಕೆ ಕೊಲ್ಲುವೆ? ಯುದ್ಧರಂಗದಲ್ಲಿ ಹೊರತು ಮಿಕ್ಕೆಡೆಗಳಲ್ಲಿ ಕೊಲ್ಲುವುದು ಮಹಾಪಾಪವು.

೬೦. ನಾನು ಹೊರಗೆ ಬಂದಮೇಲೆ ಯುದ್ಧಮಾಡಿ ನನ್ನನ್ನು ಸಂಹರಿಸು. ನಾನಿನ್ನೂ ಗರ್ಭದಲ್ಲಿರುವಾಗ ಕೊಲ್ಲುವುದು ನ್ಯಾಯವಲ್ಲ.

೬೧. ಓ ಇಂದ್ರ, ನೀನು ನೂರು ಯಾಗಗಳನ್ನು ಮಾಡಿದವನು, ಸಹಸ್ರಾಕ್ಷನೆನಿಸಿದವನು, ಪತಿವ್ರತೆಯಾದ ಶಚೀದೇವಿಯ ಪತಿಯು, ಶತ್ರುಪುರವನ್ನು ನಾಶಮಾಡಬಲ್ಲ ವೀರನು ನೀನು. ವಜ್ರಧರನಾದ ಮಹಾವೀರನು. ಇಂತಹ ನಿನಗೆ ಈ ಕಾರ್ಯವು ಯೋಗ್ಯವಲ್ಲ.

೬೨. ಅಥವಾ ನೀನು ಯುದ್ಧವನ್ನು ಬಯಸುವೆಯಾದರೆ ನಾನು ಗರ್ಭದಿಂದ ಹೊರಗೆ ಬರುವಂತೆ ಮಾಡು, ಈ ಕೆಟ್ಟ ಮಾರ್ಗವನ್ನು ಬಿಡು.

ಕುಮಾರ್ಗೇ ನ ಪ್ರವರ್ತಂತೇ ಮಹಾಂತೋಽಪಿ ವಿಪದ್ಗತಾಃ ।
ಅನಿದ್ಯಶ್ಚಾಪ್ಯಶಸ್ತ್ರಶ್ಚ ನೈವ ಚಾಯುಧಸಂಗ್ರಹಃ ॥ ೬೩ ॥

ತ್ವಂ ವಿದ್ಯಾವಾನ್ವಜ್ರಪಾಣೇ ಮಾಂ ನಿಘ್ನನ್ಕಿಂ ನ ಲಜ್ಜಸೇ ।
ಕುರ್ವಂತಿ ಗರ್ಹಿತಂ ಕರ್ಮ ನ ಕುಲೀನಾಃ ಕದಾಚನ ॥ ೬೪ ॥

ಹತ್ವಾ ವಾ ಕಿಂ ತು ಜಾಯೇತ ಯಶೋ ವಾ ಪುಣ್ಯಮೇವ ವಾ ।
ವಧ್ಯಂತೇ ಭ್ರಾತರಃ ಕಾಮಾದ್ಗರ್ಭಸ್ಥಾಃ ಕಿಂ ನು ಪೌರುಷಂ ॥ ೬೫ ॥

ಯದಿ ವಾ ಯುದ್ಧಭಕ್ತಿಸ್ತೇ ಮಯಿ ಭ್ರಾತರಸಂಶಯಂ ।
ತತೋ ಮುಷ್ಟಿಂ ಪುರಸ್ಕೃತ್ಯ ವಜ್ರಿಣೋಽಸೌ ವ್ಯವಸ್ಥಿತಃ ॥ ೬೬ ॥

ಬಾಲಘಾತೀ ಬ್ರಹ್ಮಘಾತೀ ತಥಾ ವಿಶ್ವಾಸಘಾತಕಃ ।
ಏವಂಭೂತಂ ಫಲಂ ಶಕ್ರ ಕಸ್ಮಾನ್ಮಾಂ ಹಂತುಮುದ್ಯತಃ ॥ ೬೭ ॥

---

೬೩. ಮಹಾತ್ಮರು ಎಂತಹ ವಿಪತ್ತಿನಲ್ಲಿಯೂ ಕೆಟ್ಟದಾರಿಯನ್ನು ಅನುಸರಿಸುವುದಿಲ್ಲ. ನಾನಿನ್ನೂ ಯುದ್ಧವಿದ್ಯೆಯನ್ನು ತಿಳಿದಿಲ್ಲ, ಆಯುಧ ಮತ್ತು ಅಸ್ತ್ರಗಳು ನನ್ನಲ್ಲಿಲ್ಲ.

೬೪. ಎಲೈ ಇಂದ್ರ, ನೀನು ವಿದ್ಯಾವಂತನು. ಅಸಹಾಯನಾದ ನನ್ನನ್ನು ಕೊಲ್ಲಲು ನಿನಗೆ ಲಜ್ಜೆಯಾಗುವುದಿಲ್ಲವೆ ? ಒಳ್ಳೆಯ ಕುಲದಲ್ಲಿ ಜನಿಸಿದವರು ಎಂದೂ ಕೆಟ್ಟಕೆಲಸವನ್ನು ಮಾಡುವುದಿಲ್ಲ.

೬೫. ನನ್ನನ್ನು ಕೊಂದರೆ ನಿನಗೆ ಬರುವುದೇನು ? ಯಶಸ್ಸೇ ? ಪುಣ್ಯವೇ ? ಒಂದೂ ಅಲ್ಲ. ಗರ್ಭದಲ್ಲಿದ್ದ ಸಹೋದರರನ್ನು ಕೊಲ್ಲುವುದು ಅದೆಂತಹ ಪೌರುಷ ?

೬೬. ನಿನಗೆ ಯುದ್ಧದಲ್ಲಿ ಧೈರ್ಯವಿದ್ದರೆ ಬಾಯೆಂದು ಹೇಳಿ ಆ ಶಿಶುವು ಮುಷ್ಟಿಯನ್ನು ಕಟ್ಟಿ ಹಿಡಿದು ಇಂದ್ರನಿಗೆದುರಾಯಿತು, ಮತ್ತು

೬೭. ಎಲೈ ಇಂದ್ರ, ನೀನು ಶಿಶುಹತ್ಯೆಗೆ ಹೇಸದವನು. ಇದರಿಂದ ನಿನಗೆ ಬ್ರಹ್ಮಹತ್ಯೆಯು ಬರುವುದು ಮತ್ತು ನೀನು ವಿಶ್ವಾಸಘಾತುಕನು. ಇಂತಹ ದುಷ್ಫಲಬರುವುದನ್ನೂ ಲೆಕ್ಕಿಸದೇ ನನ್ನನ್ನು ಸಂಹರಿಸ ಬಯಸುವೆಯಾ ?

ಯಸ್ಯಾಜ್ಞಯಾ ಸರ್ವಮಿದಂ ವರ್ತತೇ ಸಚರಾಚರಂ ।
ಸ ಹಂತಾ ಬಾಲಕಂ ಮಾಂ ವೈ ಕಿಂ ಯಶಃ ಕಿಂತು ಪೌರುಷಂ　　॥ ೬೮ ॥

॥ ಬ್ರಹ್ಮೋವಾಚ ॥

ಏವಂ ಬ್ರುವಂತಂ ತಂ ಗರ್ಭಂ ಚಿಚ್ಛೇದ ಕುಲಿಶೇನ ಸಃ ।
ಕ್ರೋಧಾಂಧಾನಾಂ ಲೋಭಿನಾಂ ಚ ನ ಘೃಣಾ ಕ್ವಾಪಿ ವಿದ್ಯತೇ　　॥ ೬೯ ॥

ಸ ಮಮಾರ ತತೋ ದುಃಖಾದಾಹುಸ್ತೇ ಭ್ರಾತರೋ ವಯಂ ।
ಪುನಶ್ಚಿಚ್ಛೇದ ತಾನ್ಖಂಡಾನ್ಮಾವಧೀರಿತಿ ಚಾಬ್ರುವನ್　　॥ ೭೦ ॥

ವಿಶ್ವಸ್ತಾನ್ಮಾತೃಗರ್ಭಸ್ಥಾನ್ನಿಜಭ್ರಾತೄನ್ ಶತಕ್ರತೋ ।
ದ್ವೇಷವಿಧ್ವಸ್ತಬುದ್ಧೀನಾಂ ನ ಚಿತ್ತೇ ಕರುಣಾಕಣಃ　　॥ ೭೧ ॥

ಏವಂ ತು ಖಂಡಿತಂ ಖಂಡಂ ಹಸ್ತಪಾದಾದಿಜೀವವತ್ ।
ನಿರ್ವಿಕಾರಂ ತತೋ ದೃಷ್ಟ್ವಾ ಸಪ್ತಸಪ್ತ ಸುವಿಸ್ಮಿತಃ　　॥ ೭೨ ॥

---

೬೮. ಯಾವನ ಅಪ್ಪಣೆಯಂತೆ ಮೂರು ಲೋಕಗಳೂ ನಡೆಯುವುವೋ ಅಂತಹ ಇಂದ್ರನು ಬಾಲಕನಾದ ನನ್ನನ್ನು ಸಂಹರಿಸುತ್ತಿರುವನು. ಇನ್ನೆಲ್ಲಿಯ ಯಶಸ್ಸು? ಪೌರುಷವೆಲ್ಲಿಯದೆಂದಿತು.

೬೯. ಹೀಗೆ ಹೇಳುತ್ತಿದ್ದರೂ ಇಂದ್ರನು ಆ ಗರ್ಭವನ್ನು ವಜ್ರದಿಂದ ಕತ್ತರಿಸಿದನು. ಕೋಪಿಷ್ಠರೂ ಲೋಭಿಗಳೂ ಆದವರಿಗೆ ದಯಾದಾಕ್ಷಿಣ್ಯಗಳೂ ಲಜ್ಜೆಯೂ ಇಲ್ಲವಷ್ಟೆ.

೭೦. ಆದರೂ ಆ ಗರ್ಭವು ಸಾಯಲಿಲ್ಲ. ತುಂಡುತುಂಡಾದವರೂ ಅವು ನಾವು ನಿನ್ನ ಸಹೋದರರು, ಕೊಲ್ಲಬೇಡವೆಂದು ಪ್ರಾರ್ಥಿಸಿದುವು. ಆದರೂ ಇಂದ್ರನು ಬಿಡದೆ ಪುನಃ ಆ ಖಂಡಗಳನ್ನು ಕತ್ತರಿಸಿದನು.

೭೧. ನಂಬಿಕೆದ್ರೋಹದಿಂದ ತಾಯಿಯ ಗರ್ಭದಲ್ಲಿದ್ದ ತನ್ನ ಸಹೋದರರನ್ನು ಇಂದ್ರನು ದಯೆಯಿಲ್ಲದೇ ಕತ್ತರಿಸಿದನು. ದ್ವೇಷಾಂಧರಾದವರ ಹೃದಯದಲ್ಲಿ ಕರುಣೆಯು ಲೇಶವೂ ಇರುವುದಿಲ್ಲ. ಆ ಗರ್ಭವನ್ನು ಮೊದಲು ಏಳು ತುಂಡುಗಳನ್ನಾಗಿಯೂ, ಬಳಿಕ ಆ ಏಳು ತುಂಡುಗಳಲ್ಲಿ ಪ್ರತಿಯೊಂದನ್ನು ಪುನಃ ಏಳು ತುಂಡುಗಳನ್ನಾಗಿಯೂ ಕತ್ತರಿಸಿದನು. ಇದರಿಂದ

೭೨. ಆ ಗರ್ಭವು ನಲವತ್ತೊಂಭತ್ತು ಚೂರಾದವು. ಕತ್ತರಿಸಿದ ಕೈಕಾಲು ಮೊದಲಾದುದೆಲ್ಲವೂ ಜೀವವುಳ್ಳದ್ದಾಗಿ ವಿಕಾರವಿಲ್ಲದೆಯೇ ಇದ್ದವು. ಅದನ್ನು ನೋಡಿ ಇಂದ್ರನಿಗೆ ಆಶ್ಚರ್ಯವಾಯಿತು.

ಏಕವದ್ಬಹುರೂಪಾಣಿ ಗರ್ಭಸ್ಥಾನಿ ಶುಭಾನಿ ಚ ।
ರುದಂತಿ ಬಹುರೂಪಾಣಿ ಮಾ ರುತೇತ್ಯಬ್ರವೀದ್ಧರಿಃ ॥ ೭೩ ॥

ತತಸ್ತೇ ಮರುತೋ ಜಾತಾ ಬಲವಂತೋ ಮಹೌಜಸಃ ।
ಗರ್ಭಸ್ಥಾ ಏವ ತೇಽನ್ಯೋನ್ಯಮೂಚುಃ ಶಕ್ರಂ ಗತಭ್ರಮಾಃ ॥ ೭೪ ॥

ಅಗಸ್ತ್ಯಂ ಮುನಿಶಾರ್ದೂಲಂ ಮಾತಾ ಯಸ್ಯಾಶ್ರಮೇ ಸ್ಥಿತಾ ।
ಅಸ್ಮತ್ಪಿತಾ ತವ ಭ್ರಾತಾ ಸಖ್ಯಂ ತೇ ಬಹು ಮನ್ಯತೇ ॥ ೭೫ ॥

ಅಸ್ಮಾನುಪರಿ ಸಸ್ನೇಹಂ ಮನಸ್ತೇ ವಿದ್ಮಹೇ ಮುನೇ ।
ನ ಯತ್ಕರೋತಿ ಶ್ವಪಚಃ ಪ್ರವೃತ್ತಸ್ತತ್ರ ವಜ್ರಧೃಕ್ ॥ ೭೬ ॥

ಇತ್ಯೇತದ್ವಚನಂ ಶ್ರುತ್ವಾ ಅಗಸ್ತ್ಯೋಽಗಾತ್ಸಸಂಭ್ರಮಃ ।
ದಿತಿಂ ಸಂಬೋಧಯಾಮಾಸ ವ್ಯಥಿತಾಂ ಗರ್ಭವೇದನಾತ್ ॥ ೭೭ ॥

---

೭೩. ಗರ್ಭದ ಆ ಖಂಡಗಳೆಲ್ಲವೂ ಒಂದೇ ತೆರನಾಗಿ ತೇಜಸ್ವಿಯಾಗಿದ್ದುವು. ಇಂದ್ರನು ಕತ್ತರಿಸಿದ ವ್ಯಥೆಯಿಂದ ಅವೆಲ್ಲವೂ ಅಳುತ್ತಿದ್ದುವು. ಇಂದ್ರನು 'ಮಾರುತ' ಅಳಬೇಡಿರಿ ಎಂದು ಸಮಾಧಾನಮಾಡುತ್ತಿದ್ದನು.

೭೪. ಇಂದ್ರನು ಮಾರುತ (ಅಳಬೇಡಿರಿ) ಎಂದು ಹೇಳಿದುದರಿಂದ ಅವುಗಳಿಗೆ ಮಾರುತಗಳೆಂದು ಹೆಸರಾಯಿತು ದಿತಿಯು ಅಗಸ್ತ್ಯಾಶ್ರಮದಲ್ಲಿಯೇ ಇದ್ದುದರಿಂದ ಗರ್ಭಖಂಡಗಳು ಆ ಅಗಸ್ತ್ಯಮುನಿಯನ್ನು ಕುರಿತು,

೭೫–೭೬. ಓ ಅಗಸ್ತ್ಯಮುನಿ, ನಮ್ಮ ತಂದೆಯು ನಿನ್ನ ಸಹೋದರನು, ಮೇಲಾಗಿ ಸ್ನೇಹಿತನು. ಅಂತಹವನ ಮಕ್ಕಳಾದ ನಮ್ಮಲ್ಲಿಯೂ ನಿನಗೆ ಪ್ರೀತಿಯಿರಬಹುದು. ಈ ಇಂದ್ರನು ಪರಮ ಚಂಡಾಲನು. ಮಾಡದಂತಹ ಕಾರ್ಯವನ್ನು ಮಾಡುತ್ತಿರುವನು ಎಂದವು.

೭೭. ಗರ್ಭಖಂಡದ ಆ ಮಾತುಗಳನ್ನು ಕೇಳಿ ಅಗಸ್ತ್ಯಮುನಿಯು ತ್ವರೆಯಿಂದ ಬಂದು ಗರ್ಭವೇದನೆಯಿಂದ ನರಳುತ್ತಿರುವ ದಿತಿಯನ್ನು ಸಮಾಧಾನಮಾಡಿದನು ಮತ್ತು ಕೋಪದಿಂದ ಆ ಅಗಸ್ತ್ಯನು ಇಂದ್ರನನ್ನು ಶಪಿಸಿದನು.

ತತ್ರಾಗಸ್ತ್ಯಃ ಶಚೀಕಾಂತಮುಶಪತ್ಕುಪಿತೋ ಭೃಶಂ ॥ ೭೮ ॥

॥ ಅಗಸ್ತ್ಯ ಉವಾಚ ॥

ಸಂಗ್ರಾಮೇ ರಿಪವಃ ಪೃಷ್ಠಂ ಪಶ್ಯೇಯುಸ್ತೇ ಸದಾ ಹರೇ ।
ಜೀವತಾಮೇವ ಮರಣಮೇತದೇವ ಹಿ ಮಾನಿನಾಂ ।
ಪೃಷ್ಠಂ ಪಲಾಯಮಾನಾನಾಂ ಯತ್ಪಶ್ಯಂತ್ಯಹಿತಾ ರಣೇ ॥ ೭೯ ॥

॥ ಬ್ರಹ್ಮೋವಾಚ ॥

ಸಾಪಿ ತಂ ಗರ್ಭಸಂಸ್ಥಂ ಚ ಶಶಾಪೇಂದ್ರಂ ರುಷಾ ದಿತಿಃ ।

॥ ದಿತಿರುವಾಚ ॥

ನ ಪೌರುಷಂ ಕೃತಂ ತಸ್ಮಾಚ್ಛ್ರೋಽಯಂ ಭವಿತಾ ತವ ।
ಸ್ತ್ರೀಭಿಃ ಪರಿಭವಂ ಪ್ರಾಪ್ಯ ರಾಜ್ಯಾತ್ಪ್ರಭ್ರಶ್ಯಸೇ ಹರೇ ॥ ೮೦ ॥

॥ ಬ್ರಹ್ಮೋವಾಚ ॥

ಏತಸ್ಮಿನ್ನಂತರೇ ತತ್ರ ಕಶ್ಯಪೋ ವೈ ಪ್ರಜಾಪತಿಃ ।
ಪ್ರಾಯಾಚ್ಚ ವ್ಯಥಿತೋಽಗಸ್ತ್ಯಾಚ್ಛ್ರುತ್ವಾ ಶಕ್ರವಿಚೇಷ್ಟಿತಂ ।
ಗರ್ಭಾಂತರಗತಃ ಶಕ್ರಃ ಪಿತರಂ ಪ್ರಾಹ ಭೀತವತ್ ॥ ೮೧ ॥

॥ ಶಕ್ರ ಉವಾಚ ॥

ಅಗಸ್ತ್ಯಾಚ್ಚ ದಿತೇಶ್ಚೈವ ಬಿಭೇಮಿ ಕ್ರಮಿತುಂ ಬಹಿಃ ॥ ೮೨ ॥

೭೮-೭೯. ಎಲೈ ಇಂದ್ರ, ಯುದ್ಧದಲ್ಲಿ ಶತ್ರುಗಳಿಗೆ ನೀನು ಸದಾ ಬೆನ್ನು ತೋರಿಸುವೆ. ಶತ್ರುಗಳೆದುರಿಗೆ ಬೆನ್ನು ತೋರಿಸಿ ಓಡಿಹೋಗುವುದು ಅಭಿಮಾನಿಗಳಿಗೆ ಮರಣಸಮವು.

೮೦. ದಿತಿಯೂ ಸಹ ಗರ್ಭವನ್ನು ಪ್ರವೇಶಿಸಿದ್ದ ಇಂದ್ರನನ್ನು ಕೋಪದಿಂದ ಎಲೈ ಇಂದ್ರ, ನೀನು ಪೌರುಷವನ್ನು ಪ್ರದರ್ಶಿಸಿ ಶತ್ರುಹಿಂಸೆಯನ್ನು ಮಾಡಿಲ್ಲ. ಹೇಡಿತನವನ್ನಾಶ್ರಯಿಸಿರುವೆ. ಆದುದರಿಂದ ಸ್ತ್ರೀಯರಿಂದ ಅವಮಾನವನ್ನು ಹೊಂದಿ ರಾಜ್ಯವನ್ನು ಕಳೆದುಕೊಳ್ಳುವೆ ಎಂದು ಶಪಿಸಿದಳು.

೮೧-೮೨. ಈ ಸಮಯದಲ್ಲಿ ಕಶ್ಯಪಬ್ರಹ್ಮನು ಅಗಸ್ತ್ಯನಿಂದ ನಡೆದ ಸಮಾಚಾರವನ್ನು ಕೇಳಿ ವ್ಯಥೆಗೊಂಡು ಅಲ್ಲಿಗೆ ಬಂದನು. ಆಗ ಗರ್ಭದೊಳಗಿದ್ದ ಇಂದ್ರನು ತಂದೆಯಾದ ಕಶ್ಯಪನನ್ನು ಕುರಿತು ಭಯದಿಂದ ಓ ತಂದೆಯೇ, ಅಗಸ್ತ್ಯ ಮತ್ತು ದಿತಿದೇವಿಯರ ಭಯದಿಂದ ಹೊರಗೆ ಬರಲು ಹೆದರುತ್ತಿದ್ದೇನೆ ಎಂದನು.

॥ ಬ್ರಹ್ಮೋವಾಚ ॥

ಏತಸ್ಮಿನ್ನಂತರೇ ಪ್ರಾಪ್ಯ ಕಶ್ಯಪೋಽಪಿ ಪ್ರಜಾಪತಿಃ ।
ಪುತ್ರಕರ್ಮ ಚ ತದ್ದೃಷ್ಟ್ವಾ ಗರ್ಭಾಂತಃಸ್ಥಿತಿಮೇವ ಚ ।
ದಿತಿಶಾಪಮಗಸ್ತ್ಯಸ್ಯ ಶ್ರುತ್ವಾಸೌ ದುಃಖಿತೋಽಭವತ್ ॥ ೮೩ ॥

॥ ಕಶ್ಯಪ ಉವಾಚ ॥

ನಿರ್ಗಚ್ಛ ಶಕ್ರ ಪುತ್ರೈತತ್ಪಾಪಂ ಕಿಂ ಕೃತವಾನಸಿ ।
ನ ನಿರ್ಮಲಕುಲೋತ್ಪನ್ನಾ ಮನಃ ಕುರ್ವಂತಿ ಪಾತಕೇ ॥ ೮೪ ॥

॥ ಬ್ರಹ್ಮೋವಾಚ ॥

ಸ ನಿರ್ಗತೋ ವಜ್ರಪಾಣಿಃ ಸವ್ರೀಡೋಽಧೋಮುಖೋಽಬ್ರವೀತ್ ।
ತನ್ಮೂರ್ತಿರೇವ ವದತಿ ಸದಸಚ್ಚೇಷ್ಟಿತಂ ನೃಣಾಂ ॥ ೮೫ ॥

॥ ಶಕ್ರ ಉವಾಚ ॥

ಯದುಕ್ತಮತ್ರ ಶ್ರೇಯಃ ಸ್ಯಾತ್ತತ್ಕರ್ತಾಹಮಸಂಶಯಂ ॥ ೮೬ ॥

---

೮೩. ಇಂದ್ರನ ಆ ದುಷ್ಕರ್ಮವನ್ನೂ ಗರ್ಭದೊಳಗೆ ಅವನಿರುವುದನ್ನೂ ದಿತಿ ಆಗಸ್ತ್ಯರು ಅವನಿಗೆ ಶಾಪ ಕೊಟ್ಟದುದನ್ನೂ, ತಿಳಿದು ಆ ಕಶ್ಯಪನು ತುಂಬಾ ದುಃಖಗೊಂಡನು.

೮೪ ಕಶ್ಯಪನು ಹೇಳಿದನು—ಎಲೈ ಇದ್ರನೆ, ಗರ್ಭದಿಂದ ಹೊರಗೆ ಬಾ. ಇದೆಂತಹ ಪಾಪವನ್ನಾಚರಿಸಿರುವೆ? ಸತ್ಕುಲಪ್ರಸೂತರು ಇಂತಹ ಹೀನ ಕರ್ಮಗಳಲ್ಲಿ ಪ್ರವೃತ್ತರಾಗುವುದಿಲ್ಲ, ಮನಸ್ಸುಮಾಡುವುದೂ ಇಲ್ಲವೆಂದನು.

೮೫. ಮಾನವರ ಒಳ್ಳೆಯ ಮತ್ತು ಕೆಟ್ಟ ಆಚರಣೆಗಳನ್ನು ಅವರವರ ಆಗಿನ ಆಕಾರವೇ ಹೇಳುವುದು. ಆಗ ಇಂದ್ರನು ಗರ್ಭದಿಂದ ಹೊರಗೆ ಬಂದು ನಾಚಿಕೆಯಿಂದ ತಲೆತಗ್ಗಿಸಿ—

೮೬. ಓ ತಂದೆಯೇ, ಈಗ ನಾನು ಶ್ರೇಯಸ್ಸಿಗಾಗಿ ಏನನ್ನು ಮಾಡಬೇಕಾದರೂ ಮಾಡುವೆನು, ಹೇಳಿದಂತೆ ನಡೆದುಕೊಳ್ಳುವೆನು ಎಂದನು.

॥ ಬ್ರಹ್ಮೋವಾಚ ॥

ತತೋ ಮಮಾಂತಿಕಂ ಪ್ರಾಯಾಲ್ಲೋಕಪಾಲೈಃ ಸ ಕಶ್ಯಪಃ ।
ಸರ್ವಂ ವೃತ್ತಮಥೋವಾಚ ಪುನಃ ಪಪ್ರಚ್ಛ ಮಾಂ ಸುರೈಃ ॥ ೮೭ ॥

ದಿತಿಗರ್ಭಸ್ಯ ವೈ ಶಾಂತಿಂ ಸಹಸ್ರಾಕ್ಷನಿಶಾಪತಾಂ ।
ಗರ್ಭಸ್ಥಾನಾಂ ಚ ಸರ್ವೇಷಾಮಿಂದ್ರೇಣ ಸಹ ಮಿತ್ರತಾಂ ॥ ೮೮ ॥

ತೇಷಾಮಾರೋಗ್ಯತಾಂ ಚಾಪಿ ಶಚೀಭರ್ತುರದೋಷತಾಂ ।
ಅಗಸ್ತ್ಯದತ್ತಶಾಪಸ್ಯ ವಿಶಾಪತ್ವಮಪಿ ಕ್ರಮಾತ್ ॥ ೮೯ ॥

ತತೋಽಹಮಬ್ರವಂ ವಾಕ್ಯಂ ಕಶ್ಯಪಂ ವಿನಯಾನ್ವಿತಂ ।
ಪ್ರಜಾಪತೇ ಕಶ್ಯಪ ತ್ವಂ ವಸುಭಿರ್ಲೋಕಪಾಲಕೈಃ ॥ ೯೦ ॥

ಇಂದ್ರೇಣ ಸಹಿತಃ ಶೀಘ್ರಂ ಗೌತಮೀಂ ಯಾಹಿ ಮಾನದ ।
ತತ್ರ ಸ್ನಾತ್ವಾ ಮಹೇಶಾನಂ ಸ್ತುಹಿ ಸರ್ವೈಃ ಸಮನ್ವಿತಃ ॥ ೯೧ ॥

---

೮೭. ಆಮೇಲೆ ಕಶ್ಯಪನು ಲೋಕಪಾಲಕರೊಡನೆ ನನ್ನ (ಬ್ರಹ್ಮನ) ಬಳಿಗೆ ಬಂದು ನಡೆದ ಸಮಾಚಾರವೆಲ್ಲವನ್ನೂ ಹೇಳಿದನು ಮತ್ತು ದೇವತೆಗಳೊಡನೆ ಈ ವಿಷಯವೆಲ್ಲವನ್ನೂ ಕೇಳಿಕೊಂಡನು.

೮೮–೮೯. ದಿತಿಯ ಗರ್ಭಕ್ಕೆ ಶಾಂತಿಯನ್ನೂ, ಆರೋಗ್ಯವಿರುವಿಕೆಯನ್ನೂ, ಮುಂದೆ ಆ ಶಿಶುಗಳು ಪ್ರವರ್ಧಮಾನರಾಗಿ ಇಂದ್ರನೊಡನೆ ಸ್ನೇಹಭಾವದಿಂದಿರುವಂತೆಯೂ ಇಂದ್ರನು ಶಿಶುಹತ್ಯೆಯ ದೋಷದಿಂದ ಮುಕ್ತನಾಗುವಂತೆಯೂ, ನನ್ನಲ್ಲಿ ಕೇಳಿಕೊಂಡನು.

೯೦. ಆಗ ನಾನು ವಿನೀತನಾದ ಕಶ್ಯಪನಿಗೆ—ಎಲೈ ಕಶ್ಯಪ, ನೀನು ಲೋಕಪಾಲಕರೊಡನೆಯೂ ಇಂದ್ರನೊಡನೆಯೂ ಈ ಕೂಡಲೇ ಗೌತಮೀ ನದಿಗೆ ಹೋಗಿ,

೯೧. ಆ ನದಿಯಲ್ಲಿ ಸ್ನಾನಮಾಡಿ ಎಲ್ಲರೊಡನೆ ಮಹಾದೇವನನ್ನು ಸ್ತುತಿಸು. ಆ ಶಿವನ ಅನುಗ್ರಹದಿಂದ ನಿನಗೆ ಶ್ರೇಯಸ್ಸು ಲಭಿಸುವುದು ಎಂದು ಹೇಳಿದೆನು.

ತತಃ ಶಿವಪ್ರಸಾದೇನ ಸರ್ವಂ ಶ್ರೇಯೋ ಭವೇದಿತಿ ।
ತಥೇತ್ಯುಕ್ತ್ವಾ ಜಗಾಮಾಸೌ ಕಶ್ಯಪೋ ಗೌತಮೀಂ ತದಾ ॥ ೯೨ ॥

ಸ್ನಾತ್ವಾ ತುಷ್ಟಾವ ದೇವೇಶಮೇಭಿರೇವ ಪದಕ್ರಮೈಃ ।
ಸರ್ವದುಃಖಾಪನೋದಾಯ ದ್ವಯಮೇವ ಪ್ರಕೀರ್ತಿತಂ ।
ಗೌತಮೀ ವಾ ಪುಣ್ಯನದೀ ಶಿವೋ ವಾ ಕರುಣಾಕರಃ ॥ ೯೩ ॥

॥ ಕಶ್ಯಪ ಉವಾಚ ॥

ಪಾಹಿ ಶಂಕರ ದೇವೇಶ ಪಾಹಿ ಲೋಕನಮಸ್ಕೃತ ।
ಪಾಹಿ ಪಾವನ ವಾಗೀಶ ಪಾಹಿ ಪನ್ನಗಭೂಷಣ ॥ ೯೪ ॥

ಪಾಹಿ ಧರ್ಮ ವೃಷಾರೂಢ ಪಾಹಿ ವೇದತ್ರಯೇಕ್ಷಣ ।
ಪಾಹಿ ಗೋಧರಲಕ್ಷ್ಮೀಶ ಪಾಹಿ ಶರ್ವ ಗಜಾಂಬರ ॥ ೯೫ ॥

---

೯೨. ಅದರಂತೆ ಕಶ್ಯಪನು ಗೌತಮೀನದಿಗೆ ಹೋಗಿ ಸ್ನಾನಮಾಡಿ ಮುಂದೆ (೯೪-೯೯) ಹೇಳುವ ಪದ್ಯಗಳಿಂದ ಮಹಾದೇವನನ್ನು ಸ್ತುತಿಸಿದನು.

೯೩. ದುಃಖವೆಲ್ಲವೂ ಹೋಗಲಾಡಿಸುವುದಕ್ಕೆ ಈರ್ವರೇ ಸಮರ್ಥರು. ಒಂದು ಪುಣ್ಯನದಿಯಾದ ಗೌತಮಿಯು. ಮತ್ತೊಬ್ಬನು ಕರುಣಾಮಯನಾದ ಮಹಾದೇವನು. ಇವರೀರ್ವರೇ ಸಮರ್ಥರು.

೯೪. ಕಶ್ಯಪನು ಹೇಳಿದನು—ಜಗದ್ವಂದ್ಯನೂ ಸುಖಕರನೂ ಆದ ಓ ಮಹಾದೇವನೆ, ರಕ್ಷಿಸು. ಪುಣ್ಯತಮನೂ ವಿದ್ಯಾಪತಿಯೂ ನಾಗಭೂಷಣನೂ ಆದ ಓ ಶಂಕರ, ಸಲಹು.

೯೫. ಓ ಶಂಕರ, ಧರ್ಮರೂಪವಾದ ವೃಷಭವೇ ನಿನ್ನ ವಾಹನ. ವೇದಗಳು ನಿನ್ನ ದೃಷ್ಟಿ. ಜಗತ್ತನ್ನು ನೀನು, ಧರಿಸಿರುವವನು ಐಶ್ವರ್ಯವುಳ್ಳವನು ಗಜಾಸುರನನ್ನು ಸಂಹರಿಸಿ ಲೋಕಕ್ಷೇಮವನ್ನು ಮಾಡಿದ ಗುರುತಿಗಾಗಿ ಗಜಚರ್ಮವನ್ನು ಧರಿಸಿರುವೆ, ಇಂತಹ ನೀನು ನಮ್ಮನ್ನು ಸಲಹು.

ಪಾಹಿ ತ್ರಿಪುರಹನ್ನಾಥ ಪಾಹಿ ಸೋಮಾರ್ಧಭೂಷಣ ।
ಪಾಹಿ ಯಜ್ಞೇಶ ಸೋಮೇಶ ಪಾಹ್ಯಭೀಷ್ಟಪ್ರದಾಯಕ ॥ ೯೬ ॥

ಪಾಹಿ ಕಾರುಣ್ಯನಿಲಯ ಪಾಹಿ ಮಂಗಲದಾಯಕ ।
ಪಾಹಿ ಪ್ರಭವ ಸರ್ವಸ್ಯ ಪಾಹಿ ಪಾಲಕ ವಾಸವ ॥ ೯೭ ॥

ಪಾಹಿ ಭಾಸ್ಕರ ವಿತ್ತೇಶ ಪಾಹಿ ಬ್ರಹ್ಮನಮಸ್ಕೃತ ।
ಪಾಹಿ ವಿಶ್ವೇಶ ಸಿದ್ಧೇಶ ಪಾಹಿ ಪೂರ್ಣ ನಮೋಽಸ್ತು ತೇ ॥ ೯೮ ॥

ಘೋರಸಂಸಾರಕಾಂತಾರಸಂಚಾರೋದ್ವಿಗ್ನಚೇತಸಾಂ ।
ಶರೀರಿಣಾಂ ಕೃಪಾಸಿಂಧೋ ತ್ವಮೇವ ಶರಣಂ ಶಿವ ॥ ೯೯ ॥

॥ ಬ್ರಹ್ಮೋವಾಚ ॥

ಏವಂ ಸಂಸ್ತುವತಸ್ತಸ್ಯ ಪುರತೋಽಭೂದ್ವೃಷಧ್ವಜಃ ।
ವರೇಣ ಛಂದಯಾಮಾಸ ಕಶ್ಯಪಂ ತಂ ಪ್ರಜಾಪತಿಂ ॥ ೧೦೦ ॥

---

೯೬. ತ್ರಿಪುರಸಂಹಾರಕನೂ ಚಂದ್ರಶೇಖರನೂ ಯಜ್ಞಪತಿಯೂ ಉಮಾಪತಿಯೂ ಭಕ್ತರ ಇಷ್ಟಾರ್ಥವನ್ನು ಕರುಣಿಸುವವನೂ ಆದ ಶಿವನು ನಮ್ಮನ್ನು ಸಲಹಲಿ.

೯೭. ಓ ಕರುಣಾನಿಧಿ ಸಲಹು, ಓ ಮಂಗಳಕರನೇ ಸಲಹು, ಓ ಜಗತ್ಕರ್ತನೇ ರಕ್ಷಿಸು, ಓ ಜಗದ್ರಕ್ಷಕನೇ ರಕ್ಷಿಸು, ಓ ಅಂತರಾತ್ಮನೇ ಸಲಹು.

೯೮. ಜ್ಞಾನದ ಬೆಳಕನ್ನು ಬೀರುವವನೂ ಧನಪತಿಯೂ ಬ್ರಹ್ಮನಿಂದ ವಂದಿಸಲ್ಪಡುವವನೂ ಆದ ಓ ವಿಶ್ವನಾಥ, ರಕ್ಷಿಸು. ಜಗನ್ಮಯನೂ ಜಗದ್ವ್ಯಾಪಕನೂ ಸಿದ್ಧೋತ್ತಮನೂ ಆದ ಶಿವನಿಗೆ ನಮಸ್ಕಾರವು.

೯೯. ಓ ಶಂಕರ, ಸಂಸಾರವೆಂಬ ಘೋರಾರಣ್ಯದಲ್ಲಿ ಸಂಚರಿಸಿ ಅಲೆದಲೆದು ಆಯಾಸಪಟ್ಟಿರುವ ದಿಙ್ಮೂಢರಾದ ಮಾನವರಿಗೆ ನೀನೇ ಶರಣು ಎಂದು ಪರಿಪರಿಯಾಗಿ ಸ್ತೋತ್ರಮಾಡಿದನು.

೧೦೦. ಹೀಗೆ ಸ್ತುತಿಸುತ್ತಿರುವ ಕಶ್ಯಪನೆದುರಿಗೆ ಶಿವನು ಪ್ರತ್ಯಕ್ಷನಾಗಿ ನಿನಗೆ ಬೇಕಾದ ವರವನ್ನು ಕೇಳು ಎಂದು ಹೇಳಿದನು.

ಕಶ್ಯಪೋಽಪಿ ಶಿವಂ ಪ್ರಾಹ ವಿನೀತವದಿದಂ ವಚಃ ।
ಸ ಪ್ರಾಹ ವಿಸ್ತರೇಣಾಥ ಇಂದ್ರಸ್ಯ ತು ವಿಚೇಷ್ಟಿತಂ ॥ ೧೦೧ ॥

ಶಾಪಂ ನಾಶಂ ಚ ಪುತ್ರಾಣಾಂ ಪರಸ್ಪರಮಮಿತ್ರತಾಂ ।
ಪಾಪಪ್ರಾಪ್ತಿಂ ತು ಶಕ್ರಸ್ಯ ಶಾಪಪ್ರಾಪ್ತಿಂ ತಥೈವ ಚ ।
ತತೋ ವೃಷಾಕಪಿಃ ಪ್ರಾಹ ದಿತಿಂ ಚಾಗಸ್ತ್ಯಮೇವ ಚ ॥ ೧೦೨ ॥

॥ ಶಿವ ಉವಾಚ ॥

ಮರುತೋ ಯೇ ಭವತ್ಪುತ್ರಾಃ ಪಂಚಾಶಚ್ಚೈಕವರ್ಜಿತಾಃ ।
ಸರ್ವೇ ಭವೇಯುಃ ಸುಭಗಾ ಭವೇಯುರ್ಯಜ್ಞಭಾಗಿನಃ ॥ ೧೦೩ ॥

ಇಂದ್ರೇಣ ಸಹಿತಾ ನಿತ್ಯಂ ವರ್ತಯೇಯುರ್ಮುದಾನ್ವಿತಾಃ ॥ ೧೦೪ ॥

ಇಂದ್ರಸ್ಯ ತು ಹವಿರ್ಭಾಗೋ ಯತ್ರ ಯತ್ರ ಮಖೇ ಭವೇತ್ ।
ಆದೌ ತು ಮರುತಸ್ತತ್ರ ಭವೇಯುರ್ನಾತ್ರ ಸಂಶಯಃ ॥ ೧೦೫ ॥

ಮರುದ್ಭಿಃ ಸಹಿತಂ ಶಕ್ರಂ ನ ಜಯೇಯುಃ ಕದಾಚನ ।
ಜೇತಾ ಭವೇತ್ಸರ್ವದೈವ ಸುಖಂ ತಿಷ್ಠ ಪ್ರಜಾಪತೇ ॥ ೧೦೬ ॥

೧೦೧-೧೦೨. ಆಗ ಕಶ್ಯಪನು ವಿನಯದಿಂದ ಯುದ್ಧದಲ್ಲಿ ದಾನವರು ಮಡಿದುದನ್ನೂ, ದೇವದಾನವರ ವೈರವನ್ನೂ, ಇಂದ್ರನು ಗರ್ಭಹತ್ಯೆಯಂತಹ ಮಹಾಪಾಪವನ್ನಾಚರಿಸಿದುದನ್ನೂ ಅದಿತಿ ಅಗಸ್ತ್ಯರ ಶಾಪವನ್ನೂ ವಿಸ್ತಾರವಾಗಿ ಹೇಳಿದನು.

೧೦೩-೧೦೪. ಆಗ ಶಿವನು ದಿತಿಗೂ ಅಗಸ್ತ್ಯನಿಗೂ ಇಂತೆಂದನು— ಎಲೌ ದಿತಿ, ನಿನ್ನ ಹೊಟ್ಟೆಯಲ್ಲಿ ಹುಟ್ಟುವ ನಲವತ್ತೊಂಭತ್ತು ಮಂದಿ ಮಾರುತರೂ ಸಹ ಅದೃಷ್ಟಶಾಲಿಗಳಾಗಿ ಯಜ್ಞದಲ್ಲಿ ಹವಿರ್ಭಾಗವನ್ನು ಪಡೆಯುವರು ಇಂದ್ರನೊಡನೆ ಸದಾ ಸ್ನೇಹದಿಂದ ಇರುವರು.

೧೦೫. ಯಜ್ಞದಲ್ಲಿ ಇಂದ್ರನಿಗೆ ಹವಿರ್ಭಾಗವನ್ನು ಕೊಡುವ ಮೊದಲು ಈ ಮಾರುತರಿಗೆ ಹವಿರ್ಭಾಗವು ಸಲ್ಲುವುದು ಇದರಲ್ಲಿ ಸಂಶಯವಿಲ್ಲ.

೧೦೬. ಈ ಮರುತುಗಳೊಡನಿರುವ ಇಂದ್ರನನ್ನು ಯಾರೂ ಜಯಿಸಲಾರರು. ಆಗಲೆಲ್ಲಾ ಇಂದ್ರನೇ ಜಯಶಾಲಿಯಾಗುವನು. ಓ ಕಶ್ಯಪನೇ, ಸಂತಸದಿಂದಿರು.

ಅದ್ಯಪ್ರಭೃತಿ ಯೇ ಕುರ್ಯುರನಯೋರ್ಭ್ರಾತೃಘಾತನಂ ।
ವಂಶಚ್ಛೇದೋ ವಿಪತ್ತಿಶ್ಚ ನಿತ್ಯಂ ತೇಷಾಂ ಭವಿಷ್ಯತಿ ॥ ೧೦೭ ॥

॥ ಬ್ರಹ್ಮೋವಾಚ ॥

ಅಗಸ್ತ್ಯಮೃಷಿಶಾರ್ದೂಲಂ ಶಂಭುರಪ್ಯಾಹ ಯತ್ನತಃ ॥ ೧೦೮ ॥

॥ ಶಂಭುರುವಾಚ ॥

ನ ಕುರ್ಯಾಸ್ತ್ವಂ ಚ ಕೋಪಂ ಚ ಶಚೀಭರ್ತರಿ ವೈ ಮುನೇ ।
ಶಮಂ ವ್ರಜ ಮಹಾಪ್ರಾಜ್ಞ ಮರುತಸ್ತ್ವಮರಾ ಭವನ್ ॥ ೧೦೯ ॥

॥ ಬ್ರಹ್ಮೋವಾಚ ॥

ದಿತಿಂ ಚಾಪಿ ಶಿವಃ ಪ್ರಾಹ ಪ್ರಸನ್ನೋ ವೃಷಭಧ್ವಜಃ ॥ ೧೧೦ ॥

॥ ಶಿವ ಉವಾಚ ॥

ಏಕೋ ಭೂಯಾನ್ಮಮ ಸುತಸ್ತ್ರೈಲೋಕ್ಯೈಶ್ವರ್ಯಮಂಡಿತಃ ।
ಇತ್ಯೇವಂ ಚಿಂತಯಂತೀ ತ್ವಂ ತಪಸೇ ನಿಯತಾಭವಃ ॥ ೧೧೧ ॥
ತದೇತತ್ಸಫಲಂ ತೇಽದ್ಯ ಪುತ್ರಾ ಬಹುಗುಣಾಃ ಶುಭಾಃ ।
ಅಭವನ್ಬಲಿನಃ ಶೂರಾಸ್ತಸ್ಮಾಜ್ಜಹಿ ಮನೋರುಜಂ ।
ಅನ್ಯಾನಪಿ ವರಾನ್ಸುಭ್ರೂರ್ಯಾಚಸ್ವ ಗತಸಂಭ್ರಮಾ ॥ ೧೧೨ ॥

---

೧೦೭. ಈ ಮೊದಲುಗೊಂಡು ನಿಷ್ಕರುಣತೆಯಿಂದ ಸಹೋದರಹತ್ಯೆಯನ್ನು ಮಾಡಿದವರ ವಂಶವು ನಾಶವಾಗುವುದು. ಅಂಥವರಿಗೆ ಸದಾ ವಿಪತ್ತುಗಳು ಬರುವುವು ಎಂದು ಹೇಳಿ,

೧೦೮-೧೦೯. ಅಗಸ್ತ್ಯಮುನಿಯನ್ನು ಕುರಿತು ಎಲೈ ಮುನಿ, ಮಹಾಜ್ಞಾನಿಯಾದ ನೀನು ಇಂದ್ರನಲ್ಲಿ ಕೋಪಮಾಡಬೇಡ. ಸಮಾಧಾನ ಹೊಂದು. ಮಾರುತರು ಅಮರರಾಗುವರು ಎಂದನುಗ್ರಹಿಸಿದನು.

೧೧೦ ದಿತಿಯನ್ನು ಕುರಿತು ಶಿವನು ಮತ್ತಿಂತೆಂದನು—ಎಲೌ ದಿತಿ, ನೀನು ತ್ರೈಲೋಕ್ಯದ ಐಶ್ವರ್ಯವುಳ್ಳ ಓರ್ವ ಪುತ್ರನು ಜನಿಸಲಿ ಎಂದು ತಪಸ್ಸನ್ನು ಮಾಡಿರುವೆಯಲ್ಲವೆ?

೧೧೧–೧೧೨. ನಿನ್ನ ತಪಸ್ಸಿಗೆ ಹೆಚ್ಚಾದ ಫಲವು ಲಭಿಸುವುದು. ನೀನಪೇಕ್ಷಿಸಿದಂತಹ ಪುತ್ರರು ಬಹುಮಂದಿ ಜನಿಸಿರುವರು. ಅವರೆಲ್ಲರೂ ಬಲಿಷ್ಠರು, ಶೂರರು. ಆದುದರಿಂದ ವ್ಯಥೆಯನ್ನು ಬಿಡು. ಇನ್ನೂ ಬೇಕಾದ ಬೇರೆ ವರಗಳನ್ನು ಕೇಳು, ಕೊಡುವೆನು ಎಂದನು.

॥ ಬ್ರಹ್ಮೋವಾಚ ॥

ತದೇತದ್ವಚನಂ ಶ್ರುತ್ವಾ ದೇವದೇವಸ್ಯ ಸಾ ದಿತಿಃ ।
ಕೃತಾಂಜಲಿಪುಟಾ ನತ್ವಾ ಶಂಭುಂ ವಾಕ್ಯಮಥಾಬ್ರವೀತ್ ॥ ೧೧೩ ॥

॥ ದಿತಿರುವಾಚ ॥

ಲೋಕೇ ಯದೇತತ್ಪರಮಂ ಯತ್ಪಿತ್ರೋಃ ಪುತ್ರದರ್ಶನಂ ।
ವಿಶೇಷೇಣ ತು ತನ್ಮಾತುಃ ಪ್ರಿಯಂ ಸ್ಯಾತ್ಸುರಪೂಜಿತ ॥ ೧೧೪ ॥

ತತ್ರಾಪಿ ರೂಪಸಂಪತ್ತಿಶೌರ್ಯವಿಕ್ರಮವಾನ್ಭವೇತ್ ।
ಏಕೋಽಪಿ ತನಯಃ ಕಿಂತು ಬಹವಶ್ಚೇತ್ಕಿಮುಚ್ಯತೇ ॥ ೧೧೫ ॥

ಮತ್ಪುತ್ರಾಸ್ತೇ ಪ್ರಭಾವಾಚ್ಚ ಜೇತಾರೋ ಬಲಿನೋ ಧ್ರುವಂ ।
ಇಂದ್ರಸ್ಯ ಭ್ರಾತರಃ ಸತ್ಯಂ ಪುತ್ರಾಶ್ಚೈವ ಪ್ರಜಾಪತೇಃ ॥ ೧೧೬ ॥

ಅಗಸ್ತ್ಯಸ್ಯ ಪ್ರಸಾದಾಚ್ಚ ಗಂಗಾಯಾಶ್ಚ ಪ್ರಸಾದತಃ ।
ಯತ್ರ ದೇವ ಪ್ರಸಾದಸ್ತೇ ತಚ್ಛುಭಂ ಕೋಽತ್ರ ಸಂಶಯಃ ॥ ೧೧೭ ॥

ಕೃತಾರ್ಥಾಹಂ ತಥಾಪಿ ತ್ವಾಂ ಭಕ್ತ್ಯಾ ವಿಜ್ಞಾಪಯಾಮ್ಯಹಂ ।
ಶೃಣುಷ್ವ ದೇವ ವಚನಂ ಕುರುಷ್ವ ಚ ಜಗದ್ಧಿತಂ ॥ ೧೧೮ ॥

೧೧೩-೧೧೪. ದೇವದೇವನಾದ ಮಹಾದೇವನ ಆ ಮಾತನ್ನು ಕೇಳಿ ದಿತಿದೇವಿಯು ಅಂಜಲಿಯನ್ನು ಧರಿಸಿ ನಮಸ್ಕರಿಸಿ, ಓ ಮಹಾದೇವ, ತಂದೆ ತಾಯಿಗಳಿಗೆ ಪುತ್ರರನ್ನು ಪಡೆಯುವುದು ತುಂಬಾ ಪ್ರಿಯವಾದುದು. ಅದರಲ್ಲಿಯೂ ತಾಯಿಗೆ ಪುತ್ರಪ್ರಾಪ್ತಿಯು ಮತ್ತೂ ಪ್ರಿಯವಾದುದು.

೧೧೫. ಅದರಲ್ಲಿಯೂ ರೂಪವಂತನೂ ಶೂರನೂ ಶ್ರೀಮಂತನೂ ಆದ ಓರ್ವಪುತ್ರನು ಜನಿಸಿದರೆ ತುಂಬಾ ವಿಶೇಷವು. ಇನ್ನು ಅಂತಹ ಅನೇಕಮಂದಿ ಪುತ್ರರು ಜನಿಸಿದರೆ ಹೇಳುವುದೇನು ?

೧೧೬. ಈ ನನ್ನ ಮಕ್ಕಳು ನಿನ್ನ ಅನುಗ್ರಹದಿಂದಲೂ ಅಗಸ್ತ್ಯ ಮತ್ತು ಗೌತಮಿಯರ ಪ್ರಸಾದದಿಂದಲೂ ಶತ್ರುಗಳೆಲ್ಲರನ್ನೂ ಜಯಿಸುವರು. ಇಂದ್ರನ ಪ್ರಿಯ ಸಹೋದರರಾಗಿರುವರು. ಕಶ್ಯಪನಿಗೆ ಪ್ರಿಯಪುತ್ರರಾಗಿರುವರು. ಇದರಲ್ಲಿ ಸಂಶಯವಿಲ್ಲ.

೧೧೭-೧೧೮. ಓ ದೇವ, ನಿನ್ನ ಅನುಗ್ರಹವಿದ್ದರೆ ಎಲ್ಲವೂ ಒಳ್ಳೆಯದಾಗುವುದು. ನಾನು ಕೃತಾರ್ಥಳಾದೆನು. ನಾನೊಂದನ್ನು ಭಕ್ತಿಯಿಂದ ವಿಜ್ಞಾಪಿಸಿಕೊಳ್ಳುವೆನು. ದಯೆಯಿಟ್ಟು ಲಾಲಿಸು ಎನ್ನಲು,

॥ ಬ್ರಹ್ಮೋವಾಚ ॥

ವದೇತ್ಯುಕ್ತಾ ಜಗದ್ಧಾತ್ರಾ ದಿತಿರ್ನಮ್ರಾಬ್ರವೀದಿದಂ ॥ ೧೧೯ ॥

॥ ದಿತಿರುವಾಚ ॥

ಸಂತತಿಪ್ರಾಪಣಂ ಲೋಕೇ ದುರ್ಲಭಂ ಸುರವಂದಿತ ।
ವಿಶೇಷೇಣ ಪ್ರಿಯಂ ಮಾತುಃ ಪುತ್ರಶ್ಚೇತ್ಕಿಂ ನು ವರ್ಣ್ಯತೇ ॥ ೧೨೦ ॥

ಸ ಚಾಪಿ ಗುಣವಾನ್ ಶ್ರೀಮಾನಾಯುಷ್ಮಾನ್ಯದಿ ಜಾಯತೇ ।
ಕಿಂತು ಸ್ವರ್ಗೇಣ ದೇವೇಶ ಪಾರಮೇಷ್ಠ್ಯಪದೇನ ವಾ ॥ ೧೨೧ ॥

ಸರ್ವೇಷಾಮಪಿ ಭೂತಾನಾಮಿಹಾಮುತ್ರ ಫಲೈಷಿಣಾಂ ।
ಗುಣವತ್ಪುತ್ರಸಂಪ್ರಾಪ್ತಿರಭೀಷ್ಟಾ ಸರ್ವದೈವ ಹಿ ।
ತಸ್ಮಾದಾಪ್ಲವನಾದತ್ರ ಕ್ರಿಯತಾಂ ಸಮನುಗ್ರಹಃ ॥ ೧೨೨ ॥

॥ ಶಂಕರ ಉವಾಚ ॥

ಮಹಾಪಾಪಫಲಂ ಚೇದಂ ಯದೇತದನಪತ್ಯತಾ ।
ಸ್ತ್ರಿಯಾ ವಾ ಪುರುಷಸ್ಯಾಪಿ ವಂಧ್ಯತ್ವಂ ಯದಿ ಜಾಯತೇ ॥ ೧೨೩ ॥

೧೧೯–೧೨೦. ಅದೇನು ಹೇಳು ಎಂದು ಶಿವನು ಅನುಮತಿಯಿಾಯಲು, ದಿತಿಯು ವಿನಯದಿಂದ ಓ ಮಹಾದೇವ, ಲೋಕದಲ್ಲಿ ಮಕ್ಕಳನ್ನು ಪಡೆಯಲು ತುಂಬಾ ಪುಣ್ಯ ಬೇಕು. ಹೀಗಿರುವಲ್ಲಿ ಗಂಡುಮಕ್ಕಳನ್ನು ಹಡೆದವರ ಪುಣ್ಯವನ್ನು ಏನು ಹೇಳುವುದು.

೧೨೧. ಅಂತಹ ಪುತ್ರನು ಗುಣವಂತನೂ ಶ್ರೀಮಂತನೂ ಆಯುಷ್ಮಂತನೂ ಆದರೆ ಹೇಳುವುದೇನು? ಅದರ ಮುಂದೆ ಸ್ವರ್ಗವೂ ಬೇಡ, ಬ್ರಹ್ಮಪದವಿಯೂ ಬೇಡ.

೧೨೨. ಜೀವಿಗಳೆಲ್ಲರಿಗೂ ಗುಣವಂತನಾದ ಪುತ್ರನನ್ನು ಪಡೆಯುವುದು ಪ್ರಿಯವಾದುದು. ಗುಣವಂತನಾದ ಪುತ್ರನಿಂದ ಇಹಪರಗಳಲ್ಲಿಯೂ ಸುಖವು ಲಭಿಸುವುದು. ಆದುದರಿಂದ ಈ ತೀರ್ಥದಲ್ಲಿ ಸ್ನಾನಮಾಡಿದವರಿಗೆಲ್ಲರಿಗೂ ಸತ್ಪುತ್ರರು ಜನಿಸುವಂತೆ ಅನುಗ್ರಹಿಸು ಎಂದು ಕೇಳಿಕೊಂಡಳು.

೧೨೩. ಶಂಕರನು ಹೇಳಿದನು—ಸ್ತ್ರೀಯರಿಗಾಗಲೀ ಪುರುಷನಿಗಾಗಲೀ ಬಂಜೆತನವೆಂಬು ಮಹಾಪಾಪದ ಫಲವು.

ತದತ್ರ ಸ್ನಾನಮಾತ್ರೇಣ ತದ್ದೋಷೋ ನಾಶಮಾಪ್ನುಯಾತ್ ।
ಸ್ನಾತ್ವಾ ತತ್ರ ಫಲಂ ದದ್ಯಾತ್ಸ್ತೋತ್ರಮೇತಚ್ಚ ಯಃ ಪಠೇತ್ ॥ ೧೨೪ ॥

ಸ ತು ಪುತ್ರಮವಾಪ್ನೋತಿ ತ್ರಿಮಾಸಸ್ನಾನದಾನತಃ ।
ಅಪುತ್ರಿಣೀ ತ್ವತ್ರ ಸ್ನಾನಂ ಕೃತ್ವಾ ಪುತ್ರಮವಾಪ್ನುಯಾತ್ ॥ ೧೨೫ ॥

ಋತುಸ್ನಾತಾ ತು ಯಾ ಕಾಚಿತ್ತತ್ರ ಸ್ನಾತಾ ಸುತಾಂಲ್ಲಭೇತ್ ।
ತ್ರಿಮಾಸಾಭ್ಯಂತರಂ ಯಾ ತು ಗುರ್ವಿಣೀ ಭಕ್ತಿತಸ್ತ್ವಿಹ ॥ ೧೨೬ ॥

ಫಲೈಃ ಸ್ನಾತ್ವಾ ತು ಮಾಂ ಪಶ್ಯೇತ್ಸ್ತೋತ್ರೇಣ ಸ್ತೌತಿ ಮಾಂ ತಥಾ ।
ತಸ್ಯಾಃ ಶಕ್ರಸಮಃ ಪುತ್ರೋ ಜಾಯತೇ ನಾತ್ರ ಸಂಶಯಃ ॥ ೧೨೭ ॥

ಪಿತೃದೋಷೈಶ್ಚ ಯೇ ಪುತ್ರಂ ನ ಲಭಂತೇ ದಿತೇ ಶೃಣು ।
ಧನಾಪಹಾರದೋಷೈಶ್ಚ ತತ್ರೈಷಾ ನಿಷ್ಕೃತಿಃ ಪರಾ ॥ ೧೨೮ ॥

ತತ್ರೈಷಾಂ ಪಿಂಡದಾನೇನ ಪಿತೃಣಾಂ ಪ್ರೀಣನೇನ ಚ ।
ಕಿಂಚಿತ್ಸುವರ್ಣದಾನೇನ ತತಃ ಪುತ್ರೋ ಭವೇದ್ಧ್ರುವಂ ॥ ೧೨೯ ॥

೧೨೪-೧೨೫. ಅಂತಹ ಮಹಾಪಾಪವು ಇಲ್ಲಿ ಸ್ನಾನಮಾಡಿದ ಮಾತ್ರದಿಂದ ನಾಶವಾಗುವುದು. ಈ ತೀರ್ಥದಲ್ಲಿ ಸ್ನಾನಮಾಡಿ ಈ ಶಿವಸ್ತೋತ್ರವನ್ನು ಪಠಿಸಿದವನಿಗೆ ಸತ್ಪುತ್ರನು ಜನಿಸುವನು. ಪುತ್ರವತಿಯಲ್ಲದ ಸ್ತ್ರೀಯು ಇಲ್ಲಿ ಸ್ನಾನಮಾಡಿದರೆ ಮಕ್ಕಳನ್ನು ಪಡೆಯುವಳು.

೧೨೬-೧೨೭. ರಜಸ್ವಲೆಯಾಗಿ ಶುದ್ಧಳಾದ ನಾರಿಯು ಈ ತೀರ್ಥದಲ್ಲಿ ಸ್ನಾನಮಾಡಿದರೆ ಮಕ್ಕಳನ್ನು ಪಡೆಯುವಳು. ಗರ್ಭಿಣಿಸ್ತ್ರೀಯು ಈ ತೀರ್ಥದಲ್ಲಿ ಎಳ್ಳಿನೊಡನೆ ಸ್ನಾನಮಾಡಿ ಭಕ್ತಿಯಿಂದ ನನ್ನನ್ನು ಸ್ತುತಿಸಿದರೆ ಇಂದ್ರನಂತಹ ಪುತ್ರನು ಜನಿಸುವನು. ಇದರಲ್ಲಿ ಸಂಶಯವಿಲ್ಲ.

೧೨೮. ಎಲೌ ದಿತಿ, ಪಿತೃದೋಷಗಳಿಂದಲೂ ಧನಾಪಹಾರದೋಷದಿಂದಲೂ ಮಕ್ಕಳನ್ನು ಪಡೆಯದಿರುವವರಿಗೆ ಪ್ರಾಯಶ್ಚಿತ್ತವನ್ನು ಹೇಳುವೆನು, ಕೇಳು.

೧೨೯. ಅಂತಹ ದೋಷವುಳ್ಳವರು ಈ ತೀರ್ಥದಲ್ಲಿ ಸ್ನಾನಮಾಡಿ ಪಿತೃಗಳಿಗೆ ಪಿಂಡವನ್ನು ದಾನಮಾಡುವುದರಿಂದಲೂ ಯಥಾಶಕ್ತಿ ಚಿನ್ನವನ್ನು ದಾನಮಾಡುವುದರಿಂದಲೂ ಮಕ್ಕಳು ಜನಿಸುವರು. ಇದು ನಿಶ್ಚಯವು.

ಯೇ ನ್ಯಾಸಾದ್ಯಪಹರ್ತಾರೋ ರತ್ನಾಪಹ್ನವಕಾರಕಾಃ ।
ಶ್ರಾದ್ಧಕರ್ಮವಿಹೀನಾಶ್ಚ ತೇಷಾಂ ವಂಶೋ ನ ವರ್ಧತೇ ॥ ೧೩೦ ॥

ದೋಷಿಣಾಂ ತು ಪರೇತಾನಾಂ ಗತಿರೇಷಾ ಭವೇದಿತಿ ।
ಸಂತತಿರ್ಜಾಯತಾಂ ಶ್ಲಾಘ್ಯಾ ಜೀವತಾಂ ತೀರ್ಥಸೇವನಾತ್ ॥ ೧೩೧ ॥

ಸಂಗಮೇ ದಿತಿಗಂಗಾಯೋಃ ಸ್ನಾತ್ವಾ ಸಿದ್ಧೇಶ್ವರಂ ಪ್ರಭುಂ ।
ಅನಾದ್ಯಪಾರಮಜರಂ ಚಿತ್ಸದಾನಂದವಿಗ್ರಹಂ ॥ ೧೩೨ ॥

ದೇವರ್ಷಿಸಿದ್ಧಗಂಧರ್ವಯೋಗೀಶ್ವರನಿಷೇವಿತಂ ।
ಲಿಂಗಾತ್ಮಕಂ ಮಹಾದೇವಂ ಜ್ಯೋತಿರ್ಮಯಮನಾಮಯಂ ॥ ೧೩೩ ॥

ಪೂಜಯಿತ್ವೋಪಚಾರೈಶ್ಚ ನಿತ್ಯಂ ಭಕ್ತ್ಯಾ ಯತವ್ರತಃ ।
ಸ್ತೋತ್ರೇಣಾನೇನ ಯಃ ಸ್ತೌತಿ ಚತುರ್ದಶ್ಯಷ್ಟಮೀಷು ಚ ॥ ೧೩೪ ॥

---

೧೩೦. ಅಡವಿಟ್ಟ ವಸ್ತುವನ್ನಪಹರಿಸಿದವರ, ರತ್ನವನ್ನಪಹರಿಸಿದವರ ಶ್ರಾದ್ಧವನ್ನು ಮಾಡದಿದ್ದವರ ವಂಶವು ಬೆಳೆಯುವುದಿಲ್ಲ, ಹಾಳಾಗುವುದು.

೧೩೧. ಇಂತಹ ದೋಷವುಳ್ಳವರು ಈ ತೀರ್ಥದಲ್ಲಿ ಸ್ನಾನಮಾಡಿದರೆ ಉತ್ತಮಗತಿಯು ಲಭಿಸುವುದು, ವಂಶವು ಬೆಳೆಯುವುದು, ವಂಶದಲ್ಲಿ ಮಕ್ಕಳು ಜನಿಸುವರು.

೧೩೨-೧೩೫. ದಿತೀದೇವಿಯು ಸ್ನಾನಮಾಡಿದ ಜಲವು ನದಿಯಾಗಿ ಗೌತಮೀನದಿಯಲ್ಲಿ ಸೇರಿರುವುದು. ಆ ಸಂಗಮಸ್ಥಳದಲ್ಲಿ ಮಹಾದೇವನು ಸಿದ್ಧೇಶ್ವರನೆಂಬ ಹೆಸರಿನಿಂದ ಲಿಂಗರೂಪದಿಂದ ನೆಲಸಿರುವನು. ಆ ಶಿವನು ಆದಿಯಿಲ್ಲದವನು ಅಂತ್ಯವಿಲ್ಲದವನು ಜ್ಞಾನಸ್ವರೂಪನು ಆನಂದಸ್ವರೂಪನು ಪ್ರಕಾಶಸ್ವರೂಪನು. ಅವನಿಗೆ ಜನನಮರಣಗಳಿಲ್ಲ. ದೇವತೆಗಳೂ ಋಷಿಗಳೂ ಗಂಧರ್ವರೂ ಯೋಗಿಗಳೂ ಆ ದೇವನನ್ನು ಸೇವಿಸುವರು. ಇಂತಹ ಸಿದ್ಧೇಶ್ವರನನ್ನು ಚತುರ್ದಶ್ಯಷ್ಟಮೀ ತಿಥಿಗಳಲ್ಲಿ ಉಪಚಾರಗಳಿಂದ ಪೂಜಿಸಿ ಭಕ್ತಿಯಿಂದ ಸ್ತುತಿಸಬೇಕು. ಯಥಾಶಕ್ತಿ ಸ್ವರ್ಣದಾನಮಾಡಬೇಕು. ಬ್ರಾಹ್ಮಣ

ಯಥಾಶಕ್ತ್ಯಾ ಸ್ವರ್ಣದಾನಂ ಬ್ರಾಹ್ಮಣಾನಾಂ ಚ ಭೋಜನಂ ।
ಯಃ ಕರೋತ್ಯತ್ರ ಗಂಗಾಯಾಂ ಸ ಪುತ್ರಶತಮಾಪ್ನುಯಾತ್ ॥ ೧೩೫ ॥

ಸಂಪ್ರಾಪ್ಯ ಸಕಲಾನ್ಕಾಮಾನಂತೇ ಶಿವಪುರಂ ವ್ರಜೇತ್ ।
ಸ್ತೋತ್ರೇಣಾನೇನ ಯಃ ಕಶ್ಚಿದ್ಯತ್ರ ಕ್ವಾಪಿ ಸ್ತವೀತಿ ಮಾಂ ।
ಷಣ್ಮಾಸಾತ್ಪುತ್ರಮಾಪ್ನೋತಿ ಅಪಿ ವಂಧ್ಯಾಪ್ಯಶಂಕಿತಂ ॥ ೧೩೬ ॥

॥ ಬ್ರಹ್ಮೋವಾಚ ॥

ತತಃ ಪ್ರಭೃತಿ ತತ್ತೀರ್ಥಂ-ಪುತ್ರತೀರ್ಥಮುದಾಹೃತಂ ।
ತತ್ರ ತು ಸ್ನಾನದಾನಾದ್ಯೈಃ ಸರ್ವಕಾಮಾನವಾಪ್ನುಯಾತ್ ॥ ೧೩೭ ॥

ಮರುದ್ಭಿಃ ಸಹ ಮೈತ್ರ್ಯೇಣ ಮಿತ್ರತೀರ್ಥಂ ತದುಚ್ಯತೇ ।
ನಿಷ್ಪಾಪತ್ವೇನ ಚೇಂದ್ರಸ್ಯ ಶಕ್ರತೀರ್ಥಂ ತದುಚ್ಯತೇ ॥ ೧೩೮ ॥

ಭೋಜನಮಾಡಿಸಬೇಕು. ಹೀಗೆ ಮಾಡಿದವನು ಗುಣವಂತರಾದ ನೂರು ಮಕ್ಕಳನ್ನು ಪಡೆಯುವನು. ಇಹದಲ್ಲಿ ಇಷ್ಟಾರ್ಥಗಳೆಲ್ಲವನ್ನೂ ಪಡೆದು ಸುಖಿಯಾಗಿದ್ದು ಕೊನೆಯಲ್ಲಿ ಶಿವಲೋಕಕ್ಕೆ ತೆರಳುವನು.

೧೩೬. ಕಶ್ಯಪನು ಮಾಡಿದ ಈ ಶಿವಸ್ತುತಿಯಿಂದ ಯಾವನಾದರೂ ಎಲ್ಲಿಯಾದರೂ ಸ್ತುತಿಸಿದರೂ ಸಹ ಹುಟ್ಟುಬಂಜೆಯಾಗಿದ್ದರೂ ಅವಳು ಆರು ತಿಂಗಳೊಳಗೆ ಮಕ್ಕಳನ್ನು ಪಡೆಯುವಳು ಎಂದು ವರವನ್ನಿತ್ತನು.

೧೩೭. ಬ್ರಹ್ಮನಿಂತೆಂದನು—ಆ ಮೊದಲುಗೊಂಡು ಆ ತೀರ್ಥಕ್ಕೆ ಪುತ್ರತೀರ್ಥವೆಂದು ಹೆಸರಾಯಿತು. ಈ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಇಷ್ಟಾರ್ಥಗಳೆಲ್ಲವೂ ಲಭಿಸುವುವು.

೧೩೮. ಇಂದ್ರನಿಗೂ ಮರುತ್‌ಗಳಿಗೂ ಮೈತ್ರಿಯುಂಟಾದ ತೀರ್ಥವು ಮಿತ್ರತೀರ್ಥವೆಂದು ಪ್ರಸಿದ್ಧವಾಯಿತು. ಇಂದ್ರನ ಶಾಪವಿಮೋಚನೆಯಾದ ಸ್ಥಳವು ಶಕ್ರತೀರ್ಥವೆಂದು ಪ್ರಸಿದ್ಧವಾಯಿತು.

ಐಂದ್ರೀಂ ಶ್ರಿಯಂ ಯತ್ರ ಲೇಭೇ ತತ್ತೀರ್ಥಂ ಕಮಲಾಭಿಧಂ ।
ಏತಾನಿ ಸರ್ವತೀರ್ಥಾನಿ ಸರ್ವಾಭೀಷ್ಟಪ್ರದಾನಿ ಹಿ ॥ ೧೩೯ ॥

ಸರ್ವಂ ಭವಿಷ್ಯತೀತ್ಯುಕ್ತ್ವಾ ಶಿವಶ್ಚಾಂತರಧೀಯತ ।
ಕೃತಕೃತ್ಯಾಶ್ಚ ತೇ ಜಗ್ಮುಃ ಸರ್ವ ಏವ ಯಥಾಗತಂ ।
ತೀರ್ಥಾನಾಂ ಪುಣ್ಯದಂ ತತ್ರ ಲಕ್ಷಮೇಕಂ ಪ್ರಕೀರ್ತಿತಂ ॥ ೧೪೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ಸ್ವಯಂಭ್ವೃಷಿಸಂವಾದೇ ತೀರ್ಥಮಾಹಾತ್ಮ್ಯೇ ಪುತ್ರತೀರ್ಥಾದಿಲಕ್ಷತೀರ್ಥವರ್ಣನಂ ನಾಮ ಚತುರ್ವಿಂಶಾಧಿಕಶತತಮೋಽಧ್ಯಾಯಃ

---

೧೩೯. ಇಂದ್ರನು ತನ್ನ ಐಶ್ವರ್ಯವನ್ನು ಪುನಃ ಪಡೆದ ಸ್ಥಳವು ಕಮಲಾ ತೀರ್ಥವೆಂದು ಪ್ರಸಿದ್ಧವಾಯಿತು. ಈ ತೀರ್ಥಗಳೆಲ್ಲವೂ ಇಷ್ಟಾರ್ಥಗಳೆಲ್ಲವನ್ನೂ ಉಂಟುಮಾಡುವುವು.

೧೪೦. ಹೀಗೆ ಹೇಳಿ ಶಿವನು ಅಲ್ಲಿಯೇ ಅಂತರ್ಧಾನನಾದನು. ಕಶ್ಯಪ ದಿತಿ ಇಂದ್ರ ಮೊದಲಾದವರೆಲ್ಲರೂ ಕೃತಕೃತ್ಯರಾಗಿ ತಮ್ಮ ಸ್ಥಳಗಳಿಗೆ ತೆರಳಿದರು. ಆ ಸ್ಥಳದಲ್ಲಿ ಒಂದು ಲಕ್ಷಪುಣ್ಯತೀರ್ಥಗಳಿರುವುವು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಪುತ್ರತೀರ್ಥಲಕ್ಷತೀರ್ಥಾದಿವರ್ಣನವೆಂಬ ನೂರಿಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಐವತ್ತೈದನೆಯ ಅಧ್ಯಾಯವು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಪಂಚವಿಂಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಯಮತೀರ್ಥಮಿತಿ ಖ್ಯಾತಂ ಪಿತೄಣಾಂ ಪ್ರೀತಿವರ್ಧನಂ ।
ದೃಷ್ಟಾದೃಷ್ಟೇಷ್ಟದಂ ಸರ್ವದೇವರ್ಷಿಗಣಸೇವಿತಂ ॥ ೧ ॥

ತಸ್ಯ ಪ್ರಭಾವಂ ವಕ್ಷ್ಯಾಮಿ ಸರ್ವಪಾಪಪ್ರಣಾಶನಂ ।
ಅನುಹ್ರಾದ ಇತಿ ಖ್ಯಾತಃ ಕಪೋತೋ ಬಲವಾನಭೂತ್ ॥ ೨ ॥

ತಸ್ಯ ಭಾರ್ಯಾ ಹೇತಿನಾಮ್ನೀ ಪಕ್ಷಿಣೀ ಕಾಮರೂಪಿಣೀ ।
ಮೃತ್ಯೋಃ ಪೌತ್ರೋ ಹ್ಯನುಹ್ರಾದೋ ದೌಹಿತ್ರೀ ಹೇತಿರೇವ ಚ ॥ ೩ ॥

ನೂರಿಪ್ಪತ್ತೈದನೆಯ ಅಧ್ಯಾಯವು

೧. ಬ್ರಹ್ಮನಿಂತೆಂದನು—ಯಮತೀರ್ಥವೆಂದು ಪ್ರಸಿದ್ಧವಾದ ತೀರ್ಥವಿರುವುದು. ಅದು ಪಿತೃಗಳಿಗೆ ತುಂಬಾ ಪ್ರಿಯವಾದುದು. ದೃಷ್ಟಫಲ ಮತ್ತೂ ಅದೃಷ್ಟಫಲಗಳೆರಡನ್ನೂ ಆ ತೀರ್ಥವು ಉಂಟುಮಾಡುವುದು. ದೇವರ್ಷಿಗಳೆಲ್ಲರೂ ಆ ತೀರ್ಥವನ್ನು ಸೇವಿಸುವರು. ಆ ಯಮತೀರ್ಥದ ಪಾಪನಾಶಕವಾದ ಮಾಹಾತ್ಮ್ಯವನ್ನು ಹೇಳುವೆನು.

೨-೩. ಅನುಹ್ರಾದವೆಂಬ ಬಲಿಷ್ಠವಾದೊಂದು ಕಪೋತವಿದ್ದಿತು. ಹೇತಿಯೆಂಬ ಕಪೋತಿಯು ಅದರ ಹೆಂಡತಿಯು, ಅನುಹ್ರಾದವು ಮೃತ್ಯುವಿನ ಮೊಮ್ಮಗ. ಹೇತಿಯು ಮೃತ್ಯುವಿನ ಮಗಳ ಮಗಳು (ಮೊಮ್ಮಗಳು).

ಕಾಲೇನಾಥ ತಯೋಃ ಪುತ್ರಾಃ ಪೌತ್ರಾಶ್ಚೈವ ಬಭೂವಿರೇ ।
ತಸ್ಯ ಶತ್ರುಶ್ಚ ಬಲವಾನುಲೂಕೋ ನಾಮ ಪಕ್ಷಿರಾಟ್ ॥ ೪ ॥

ತಸ್ಯ ಪುತ್ರಾಶ್ಚ ಪೌತ್ರಾಶ್ಚ ಆಗ್ನೇಯಾಸ್ತೇ ಬಲೋತ್ಕಟಾಃ ।
ತಯೋಶ್ಚ ವೈರಮಭವದ್ಬಹುಕಾಲಂ ದ್ವಿಜನ್ಮನೋಃ ॥ ೫ ॥

ಗಂಗಾಯಾ ಉತ್ತರೇ ತೀರೇ ಕಪೋತಸ್ಯಾಶ್ರಮೋಽಭವತ್ ।
ತಸ್ಯಾಶ್ಚ ದಕ್ಷಿಣೇ ಕೂಲ ಉಲೂಕೋ ನಾಮ ಪಕ್ಷಿರಾಟ್ ॥ ೬ ॥

ವಾಸಂ ಚಕ್ರೇ ತತ್ರ ಪುತ್ರೈಃ ಪೌತ್ರೈಶ್ಚ ದ್ವಿಜಸತ್ತಮ ।
ತಯೋಶ್ಚ ಯುದ್ಧಮಭವದ್ಬಹುಕಾಲಂ ವಿರುದ್ಧಯೋಃ ॥ ೭ ॥

ಪುತ್ರೈಃ ಪೌತ್ರೈಶ್ಚ ವೃತಯೋರ್ಬಲಿನೋರ್ಬಲಿಭಿಃ ಸಹ ।
ಉಲೂಕೋ ವಾ ಕಪೋತೋ ವಾ ನೈವಾಪ್ನೋತಿ ಜಯಾಜಯೌ ॥ ೮ ॥

ಕಪೋತೋ ಯಮಮಾರಾಧ್ಯ ಮೃತ್ಯುಂ ಪ್ರೇತಾಮಹಂ ತಥಾ ।
ಯಾಮ್ಯಮಸ್ತ್ರಮವಾಪ್ಯಾಥ ಸರ್ವೇಭ್ಯೋಽಪ್ಯಧಿಕೋಽಭವತ್ ॥ ೯ ॥

೪-೫. ಹೀಗಿರಲು ಆ ಅನುಹ್ರಾದಹೇತಿಯರಿಗೆ ಮಕ್ಕಳೂ ಮೊಮ್ಮಕ್ಕಳೂ ಜನಿಸಿದರು. ಆ ಅನುಹ್ರಾದನಿಗೆ ಉಲೂಕ (ಗೂಬೆ) ವೆಂಬ ಬಲಿಷ್ಠವಾದ ಪಕ್ಷಿಯು ಶತ್ರುವಾಗಿದ್ದಿತು. ಅದು ಅಗ್ನಿಯ ಪುತ್ರ. ಆ ಉಲೂಕ ಅನುಹ್ರಾದರಿಗೆ ಬಹುಕಾಲದವರೆಗೆ ವೈರವು ಬೆಳೆಯಿತು.

೬. ಗಂಗಾನದಿಯ ತೀರದಲ್ಲಿ ಕಪೋತವು ವಾಸವಾಗಿದ್ದಿತು. ದಕ್ಷಿಣ ತೀರದಲ್ಲಿ ಉಲೂಕವು ತನ್ನ ಮಕ್ಕಳುಮರಿಗಳೊಡನೆ ವಾಸವಾಗಿದ್ದಿತು

೭-೮. ಆ ಕಪೋತಉಲೂಕಗಳಿಗೂ ಅವುಗಳ ಮಕ್ಕಳುಮರಿಗಳಿಗೂ ಬಹುಕಾಲದವರೆಗೆ ಯುದ್ಧವಾಯಿತು. ಆದರೆ ಯುದ್ಧದಲ್ಲಿ ಯಾವುದೂ ಸೋಲಲಿಲ್ಲ, ಜಯಿಸಲೂ ಇಲ್ಲ.

೯. ಕಪೋತವು ತನ್ನ ಅಜ್ಜನಾದ ಯಮದೇವನನ್ನು ಆರಾಧಿಸಿ ಯಾಮ್ಯಾಸ್ತ್ರವನ್ನು ಪಡೆದು ಯಾರೂ ಜಯಿಸದಂತಹ ಪರಾಕ್ರಮಿಯೂ ಬಲಿಷ್ಠವೂ ಆಯಿತು.

ತಥೋಲೂಕೋಽಗ್ನಿಮಾರಾಧ್ಯ ಬಲವಾನಭವದ್ಭೃಶಂ ।
ವರೈರುನ್ಮತ್ತಯೋರ್ಯುದ್ಧಮಭವಚ್ಚಾತಿಭೀಷಣಂ ॥ ೧೦ ॥

ತತ್ರಾಗ್ನೇಯಮುಲೂಕೋಽಪಿ ಕಪೋತಾಯಾಸ್ತ್ರಮಾಕ್ಷಿಪತ್ ।
ಕಪೋತೋಽಪ್ಯಥ ಪಾಶಾನ್ವೈ ಯಾಮ್ಯಾನಾಕ್ಷಿಪ್ಯ ಶತ್ರವೇ ॥ ೧೧ ॥

ಉಲೂಕಾಯಾಥ ದಂಡಂ ಚ ಮೃತ್ಯುಪಾಶಾನವಾಸೃಜತ್ ।
ಪುನಸ್ತದಭವದ್ಯುದ್ಧಂ ಪುರಾಡೀಬಕಯೋರ್ಯಥಾ ॥ ೧೨ ॥

ಹೇತಿಃ ಕಪೋತಕೀ ದೃಷ್ಟ್ವಾ ಜ್ವಲನಂ ಪ್ರಾಪ್ತಮಂತಿಕೇ ।
ಪತಿವ್ರತಾ ಮಹಾಯುದ್ಧೇ ಭರ್ತುಃ ಸಾ ದುಃಖವಿಹ್ವಲಾ ॥ ೧೩ ॥

ಅಗ್ನಿನಾ ವೇಷ್ಟ್ಯಮಾನಾಂಶ್ಚ ಪುತ್ರಾನ್ದೃಷ್ಟ್ವಾ ವಿಶೇಷತಃ ।
ಸಾ ಗತ್ವಾ ಜ್ವಲನಂ ಹೇತಿಸ್ತುಷ್ಟಾವ ವಿವಿಧೋಕ್ತಿಭಿಃ ॥ ೧೪ ॥

---

೧೦. ಆದರಂತೆ ಉಲೂಕವೂ ಸಹ ಅಗ್ನಿದೇವನನ್ನಾರಾಧಿಸಿ ತುಂಬಾ ಬಲಿಷ್ಠವಾಯಿತು, ಯಮಅಗ್ನಿಗಳ ವರದಿಂದ ಉನ್ಮತ್ತವಾದ ಆ ಕಪೋತಉಲೂಕಗಳಿಗೆ ಪುನಃ ಘೋರಯುದ್ಧವಾಯಿತು.

೧೧-೧೨. ಆ ಯುದ್ಧದಲ್ಲಿ ಉಲೂಕವು ಕಪೋತದ ಮೇಲೆ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿತು. ಕಪೋತವೂ ಸಹ ಯಮಪಾಶಗಳನ್ನು ಶತ್ರುವಿನ ಮೇಲೆ ಪ್ರಯೋಗಿಸಿ ಯಮದಂಡವನ್ನೂ ಮೃತ್ಯುಪಾಶಗಳನ್ನೂ ಪ್ರಯೋಗಿಸಿತು. ಹಿಂದೆ ಆ ಡಿಬಕಗಳಿಗೆ ನಡೆದ ಯುದ್ಧದಂತೆ ಈ ಯುದ್ಧವು ಅತಿಭಯಂಕರವಾಯಿತು.

೧೩-೧೪. ಆಗ್ನೇಯಾಸ್ತ್ರದ ಪ್ರಭಾವದಿಂದ ಅಗ್ನಿಯು ಕಪೋತವನ್ನೂ ಕಪೋತಪುತ್ರರನ್ನೂ ಸುತ್ತುವರೆಯತೊಡಗಿತು. ಇದನ್ನು ನೋಡಿ ಪತಿವ್ರತೆಯೂ ಪುತ್ರವತ್ಸಲೆಯೂ ಆದ ಹೇತಿಯೆಂಬ ಕಪೋತಪತ್ನಿಯು ವ್ಯಥೆಗೊಂಡು ಅಗ್ನಿಯ ಬಳಿಗೆ ಹೋಗಿ ನಾನಾ ವಾಕ್ಯಗಳಿಂದ ಆ ಅಗ್ನಿಯನ್ನು ಇಂತು ಸ್ತುತಿಸಿದಳು.

॥ ಹೇತಿರುವಾಚ ॥

ರೂಪಂ ನ ದಾನಂ ನ ಪರೋಕ್ಷಮಸ್ತಿ
ಯಸ್ಯಾತ್ಮಭೂತಂ ಚ ಪದಾರ್ಥಜಾತಂ ।
ಅಶ್ನಂತಿ ಹವ್ಯಾನಿ ಚ ಯೇನ ದೇವಾಃ
ಸ್ವಾಹಾಪತಿಂ ಯಜ್ಞಭುಜಂ ನಮಸ್ಯೇ ॥ ೧೫ ॥

ಮುಖಭೂತಂ ಚ ದೇವಾನಾಂ ದೇವಾನಾಂ ಹವ್ಯವಾಹನಂ ।
ಹೋತಾರಂ ಚಾಪಿ ದೇವಾನಾಂ ದೇವಾನಾಂ ದೂತಮೇವ ಚ ॥ ೧೬ ॥

ತಂ ದೇವಂ ಶರಣಂ ಯಾಮಿ ಆದಿದೇವಂ ವಿಭಾವಸುಂ ।
ಅಂತಃಸ್ಥಿತಃ ಪ್ರಾಣರೂಪೋ ಬಹಿಶ್ಚಾನ್ನಪ್ರದೋ ಹಿ ಯಃ ।
ಯೋ ಯಜ್ಞಸಾಧನಂ ಯಾಮಿ ಶರಣಂ ತಂ ಧನಂಜಯಂ ॥ ೧೭ ॥

---

೧೫. ಯಾವನ ರೂಪವೂ ಅನುಗ್ರಹವೂ ಪ್ರತ್ಯಕ್ಷವಾಗಿರುವವೋ, ವಸ್ತುಗಳೆಲ್ಲವೂ ಯಾವನ ಸ್ವರೂಪವೋ, ಯಾವನ ಮುಖದಿಂದಲೇ ದೇವತೆಗಳು ಹವಿಸ್ಸನ್ನು ಭುಜಿಸುವರೋ ಅಂತಹ ಯಜ್ಞಸ್ವಾಮಿಯೂ ಸ್ವಾಹಾದೇವಿಯ ಪತಿಯೂ ಆದ ಅಗ್ನಿದೇವನನ್ನು ನಮಸ್ಕರಿಸುವೆನು.

೧೬. ಅಗ್ನಿದೇವನು ದೇವತೆಗಳಿಗೆ ಮುಖವಾಗಿರುವನು. ದೇವತೆಗಳಿಗೆ ಹವಿಸ್ಸನ್ನೊದಗಿಸುವನು, ದೇವತೆಗಳ ಯಾಗವನ್ನು ಮಾಡಿಸುವವನು ಅಗ್ನಿಯು. ದೇವದೂತನೂ ಅಗ್ನಿಯಾಗಿರುವನು. ಇಂತಹ ಆದಿದೇವನಾದ ಅಗ್ನಿದೇವನನ್ನು ಶರಣುಹೊಂದಿಸುವೆನು.

೧೭. ಶರೀರದೊಳಗೆ ಪ್ರಾಣರೂಪದಿಂದ ಕಾಪಾಡುವವನೂ, ಹೊರಗೆ ಅನ್ನವನ್ನು (ಶುಚಿಯಾಗಿ ಬೇಯಿಸಿ) ಕೊಟ್ಟು ರಕ್ಷಿಸುವವನೂ, ಯಜ್ಞಸಾಧನನೂ ಆದ ಅಗ್ನಿದೇವನನ್ನು ಮರೆಹೊಕ್ಕಿರುವೆನು ಎಂದು ಸ್ತುತಿಸುತ್ತಿರಲು ಅದನ್ನು ಕೇಳಿ,

॥ ಅಗ್ನಿರುವಾಚ ॥

ಅಮೋಘಮೇತದಸ್ತ್ರಂ ಮೇ ನ್ಯಸ್ತಂ ಯುದ್ಧೇ ಕಪೋತಕಿ ।
ಯತ್ರ ವಿಶ್ರಮಯೇದಸ್ತ್ರಂ ತನ್ಮೇ ಬ್ರೂಹಿ ಪತಿವ್ರತೇ ॥ ೧೮ ॥

॥ ಕಪೋತ್ಯುವಾಚ ॥

ಮಯಿ ವಿಶ್ರಮ್ಯತಾಮಸ್ತ್ರಂ ನ ಪುತ್ರೇ ನ ಚ ಭರ್ತರಿ ।
ಸತ್ಯವಾಗ್ಭವ ಹವ್ಯೇಶ ಜಾತವೇದೋ ನಮೋಽಸ್ತು ತೇ ॥ ೧೯ ॥

॥ ಜಾತವೇದಾ ಉವಾಚ ॥

ತುಷ್ಟೋಽಸ್ಮಿ ತವ ವಾಕ್ಯೇನ ಭರ್ತೃಭಕ್ತ್ಯಾ ಪತಿವ್ರತೇ ।
ತವಾಪಿ ಭರ್ತೃಪುತ್ರಾಣಾಂ ಹೇತಿ ಕ್ಷೇಮಂ ದದಾಮ್ಯಹಂ ॥ ೨೦ ॥

ಆಗ್ನೇಯಮೇತದಸ್ತ್ರಂ ಮೇ ನ ಭರ್ತಾರಂ ಸುತಾನಪಿ ।
ನ ತ್ವಾಂ ದಹೇತ್ತತೋ ಯಾಹಿ ಸುಖೇನ ತ್ವಂ ಕಪೋತಕಿ ॥ ೨೧ ॥

---

೧೮. ಅಗ್ನಿಯು, ಎಲೌ ಸಾಧ್ವಿಯಾದ ಕಪೋತಕಿ, ಯುದ್ಧದಲ್ಲಿ ಪ್ರಯೋಗಿಸಿದ ಈ ನನ್ನ ಆಗ್ನೇಯಾಸ್ತ್ರವು ಅಮೋಘವಾದುದು. ಇದನ್ನ ಎಲ್ಲಿ ಪ್ರಯೋಗಿಸಲಿ ಹೇಳು ಎಂದು ಕೇಳಲು

೧೯. ಕಪೋತಕಿಯು ಓ ಅಗ್ನಿದೇವ, ಈ ಆಗ್ನೇಯಾಸ್ತ್ರವು ನನ್ನಲ್ಲಿ ವಿಶ್ರಾಂತಿಹೊಂದಲಿ. ನನ್ನ ಪುತ್ರರೂ ಪತಿಯೂ ಸುಖವಾಗಿರಲಿ. ಓ ದೇವ, ಇಗೋ ನಿನಗೆ ನಮಸ್ಕಾರವು ಎಂದಿತು

೨೦. ಅಗ್ನಿಯು ಅದನ್ನು ಕೇಳಿ, ಎಲೌ ಪತಿವ್ರತೆಯಾದ ಕಪೋತಕಿ, ನಿನ್ನ ಪತಿಭಕ್ತಿಗೆ ಮೆಚ್ಚಿದೆನು. ನಿನ್ನನ್ನೂ ಮತ್ತು ನಿನ್ನ ಪತಿಪುತ್ರರನ್ನೂ ರಕ್ಷಿಸುವೆನು. ದುಃಖಿಸಬೇಡ.

೨೧. ಈ ನನ್ನ ಆಗ್ನೇಯಾಸ್ತ್ರವು ನಿನ್ನ ಪತಿಪುತ್ರರನ್ನೂ ನಿನ್ನನ್ನೂ ದಹಿಸಲಾರದು. ಸುಖವಾಗಿ ನೀನು ಹೊರಟುಹೋಗು ಎಂದು ಹೇಳಿ ಅಲ್ಲಿಯೇ ಅಂತರ್ಧಾನನಾದನು.

॥ ಬ್ರಹ್ಮೋವಾಚ ॥

ಏತಸ್ಮಿನ್ನಂತರೇ ತತ್ರ ಉಲೂಕೀ ದದೃಶೇ ಪತಿಂ ।
ವೇಷ್ಟ್ಯಮಾನಂ ಯಾಮ್ಯಪಾಶೈರ್ಯಮದಂಡೇನ ತಾಡಿತಂ ।
ಉಲೂಕೀ ದುಃಖಿತಾ ಭೂತ್ವಾ ಯಮಂ ಪ್ರಾಯಾದ್ಭಯಾತುರಾ ॥ ೨೨ ॥

॥ ಉಲೂಕ್ಯುವಾಚ ॥

ತ್ವದ್ಭೀತಾ ಅನುದ್ರವಂತೇ ಜನಾ-
ಸ್ತ್ವದ್ಭೀತಾ ಬ್ರಹ್ಮಚರ್ಯಂ ಚರಂತಿ ।
ತ್ವದ್ಭೀತಾಃ ಸಾಧು ಚರಂತಿ ಧೀರಾ-
ಸ್ತ್ವದ್ಭೀತಾಃ ಕರ್ಮನಿಷ್ಠಾ ಭವಂತಿ ॥ ೨೩ ॥

ತ್ವದ್ಭೀತಾ ಅನಾಶಕಮಾಚರಂತಿ
ಗ್ರಾಮಾದರಣ್ಯಮಭಿ ಯಚ್ಚರಂತಿ ।
ತ್ವದ್ಭೀತಾಃ ಸೌಮ್ಯತಾಮಾಶ್ರಯಂತೇ
ತ್ವದ್ಭೀತಾಃ ಸೋಮಪಾನಂ ಭಜಂತೇ ।
ತ್ವದ್ಭೀತಾಶ್ಚಾನ್ನಗೋದಾನನಿಷ್ಠಾ-
ಸ್ತ್ವದ್ಭೀತಾ ಬ್ರಹ್ಮವಾದಂ ವದಂತಿ ॥ ೨೪ ॥

---

೨೨. ಈ ಸಮಯದಲ್ಲಿ ಅತ್ತ ಉಲೂಕಪತ್ನಿಯು ತನ್ನ ಗಂಡನನ್ನು ಯಮಪಾಶವು ಸುತ್ತುವರೆಯುವುದನ್ನೂ ಯಮದಂಡದಿಂದ ಏಟುತಿಂದು ವಿಹ್ವಲನಾಗುತ್ತಿರುವುದನ್ನೂ ನೋಡಿ ದುಃಖಗೊಂಡು ಯಮನನ್ನು ಮರೆಹೊಕ್ಕು ಹೀಗೆ ಸ್ತುತಿಸಿದಳು.

೨೩. ಓ ಯಮದೇವ, ನಿನ್ನನ್ನು ನೋಡಿ ಜನರು ಭಯದಿಂದ ಓಡುವರು. ನಿನ್ನ ಭಯದಿಂದ ಬ್ರಹ್ಮಚರ್ಯವನ್ನು ಆಚರಿಸುವರು, ಒಳ್ಳೆಯ ಕರ್ಮಗಳನ್ನು ಮಾಡುವರು ನಿನ್ನ ಭಯದಿಂದ ಕರ್ಮನಿಷ್ಠರಾಗುವರು.

೨೪. ಓ ದೇವ, ನಿನ್ನ ಭಯದಿಂದಲೇ ಪಾಪಗಳನ್ನು ಜನಗಳು ಆಚರಿಸಲು ಹಿಂಜರಿಯುತ್ತಾರೆ. ಕೆಲವರು ಮನೆಯನ್ನು ಬಿಟ್ಟು ಅರಣ್ಯಸೇರಿ ತಪವನ್ನಾಚರಿಸುವರು. ನಿನ್ನ ಭಯದಿಂದಲೇ ಎಂತಹ ಕ್ರೂರಿಗಳೂ ಶಾಂತರಾಗುವರು. ನಿನ್ನ ಭಯದಿಂದಲೇ ಸೋಮಪಾನವನ್ನು ಮಾಡುವರು, ಅನ್ನದಾನಗೋದಾನಗಳನ್ನು ಮಾಡುವರು. ನಿನ್ನ ಭಯದಿಂದಲೇ ವೇದಾಧ್ಯಯನವನ್ನು ಮಾಡುವರು.

|| ಬ್ರಹ್ಮೋವಾಚ ||

ಏವಂ ಬ್ರುವತ್ಯಾಂ ತಸ್ಯಾಂ ತಾಮಾಹ ದಕ್ಷಿಣದಿಕ್ಪತಿಃ || ೨೫ ||

|| ಯಮ ಉವಾಚ ||

ವರಂ ವರಯ ಭದ್ರಂ ತೇ ದಾಸ್ಯೇಽಹಂ ಮನಸಃ ಪ್ರಿಯಂ || ೨೬ ||

|| ಬ್ರಹ್ಮೋವಾಚ ||

ಯಮಸ್ಯೇತಿ ವಚಃ ಶ್ರುತ್ವಾ ಸಾ ತಮಾಹ ಪತಿವ್ರತಾ || ೨೭ ||

|| ಉಲೂಕ್ಯುವಾಚ ||

ಭರ್ತಾ ಮೇ ವೇಷ್ಟಿತಃ ಪಾಶೈರ್ದಂಡೇನಾಭಿಹತಸ್ತವ ।
ತಸ್ಮಾದ್ರಕ್ಷ ಸುರಶ್ರೇಷ್ಠ ಪುತ್ರಾನ್ಭರ್ತಾರಮೇವ ಚ || ೨೮ ||

|| ಬ್ರಹ್ಮೋವಾಚ ||

ತದ್ವಾಕ್ಯಾತ್ಕೃಪಯಾ ಯುಕ್ತೋ ಯಮಃ ಪ್ರಾಹ ಪುನಃ ಪುನಃ || ೨೯ ||

|| ಯಮ ಉವಾಚ ||

ಪಾಶಾನಾಂ ಚಾಪಿ ದಂಡಸ್ಯ ಸ್ಥಾನಂ ವದ ಶುಭಾನನೇ || ೩೦ ||

೨೫-೨೬. ಎಂದು ಉಲೂಕಿಯು ಸ್ತುತಿಸುತ್ತಿರಲು ಯಮನು ಪ್ರತ್ಯಕ್ಷನಾಗಿ ಅವಳನ್ನು ಕುರಿತು ಎಲೌ ಉಲೂಕಿ, ನಿನಗೆ ಮಂಗಳವಾಗಲಿ ಬೇಕಾದ ವರವನ್ನು ಕೇಳು, ಕೊಡುವೆನು ಎಂದನು.

೨೭-೨೮. ಯಮನ ಆಮಾತನ್ನು ಕೇಳಿ ಆ ಸಾಧ್ವಿಯು ಓ ಯಮದೇವ; ನನ್ನ ಪತಿಯು ನಿನ್ನ ಪಾಶಗಳಿಂದ ಬಂಧಿಸಲ್ಪಟ್ಟಿರುವನು, ಯಮದಂಡದಿಂದ ಪ್ರಹರಿಸಲ್ಪಡುತ್ತಿರುವನು. ಆದುದುರಿಂದ ನನ್ನ ಪತಿಯನ್ನೂ ಪುತ್ರರನ್ನೂ ರಕ್ಷಿಸು ಎಂದು ಬೇಡಿಕೊಳ್ಳಲು,

೨೯-೩೦. ಯಮನು ಉಲೂಕಿಯ ಮಾತನ್ನು ಕೇಳಿ ದಯೆಯುಳ್ಳವನಾಗಿ ಎಲೌ ಸಾಧ್ವಿ, ಯಮಪಾಶಗಳಿಗೂ ಯಮದಂಡಕ್ಕೂ ವಿಶ್ರಾಂತಿಪೊಂದಲು ಸ್ಥಾನವನ್ನು ತೋರಿಸು ಎಂದನು.

|| ಬ್ರಹ್ಮೋವಾಚ ||

ಸಾ ಪ್ರೋವಾಚ ಯಮಂ ದೇವಂ ಮಯಿ ಪಾಶಾಸ್ತ್ವಯೇರಿತಾಃ ।
ಆವಿಶಂತು ಜಗನ್ನಾಥ ದಂಡೋ ಮಯ್ಯೇವ ಸಂವಿಶೇತ್ ।
ತತಃ ಪ್ರೋವಾಚ ಭಗವಾನ್ಯಮಸ್ತಾಂ ಕೃಪಯಾ ಪುನಃ || ೩೧ ||

|| ಯಮ ಉವಾಚ ||

ತವ ಭರ್ತಾ ಚ ಪುತ್ರಾಶ್ಚ ಸರ್ವೇ ಜೀವಂತು ವಿಜ್ವರಾಃ || ೩೨ ||

|| ಬ್ರಹ್ಮೋವಾಚ ||

ನ್ಯವಾರಯದ್ಯಮಃ ಪಾಶಾನಾಗ್ನೇಯಾಸ್ತ್ರಂ ತು ಹವ್ಯವಾಟ್ ।
ಕಪೋತೋಲೂಕಯೋಶ್ಚಾಪಿ ಪ್ರೀತಿಂ ವೈ ಚಕ್ರತುಃ ಸುರೌ ।
ಆಹತುಶ್ಚ ದ್ವಿಜನ್ಮಾನೌ ವ್ರಿಯತಾಂ ವರ ಈಪ್ಸಿತಃ || ೩೩ ||

|| ಪಕ್ಷಿಣಾವೂಚತುಃ ||

ಭವತೋರ್ದರ್ಶನಂ ಲಬ್ಧಂ ವೈರವ್ಯಾಜೇನ ದುಷ್ಕರಂ ।
ವಯಂ ಚ ಪಕ್ಷಿಣಃ ಪಾಪಾಃ ಕಿಂ ವರೇಣ ಸುರೋತ್ತಮೌ || ೩೪ ||

---

೩೧. ಆಗ ಉಲೂಕಿಯು ಯಮನಿಗೆ—ಓ ದೇವ ನಿನ್ನ ಪಾಶಗಳೂ ಯಮದಂಡವೂ ನನ್ನಲ್ಲಿಯೇ ವಿಶ್ರಾಂತಿಹೊಂದಲಿ ಎಂದಿತು. ಯಮನು ಆ ಮಾತಿನಿಂದ ಮನಕರಗಿ,

೩೨. ಎಲೌ ಸಾಧ್ವಿ, ನಿನ್ನ ಪತಿಯೂ ನೀನೂ ಪುತ್ರರೂ ಸಹ ಯಾವ ತೊಂದರೆಯೂ ಇಲ್ಲದೆ ಸುಖವಾಗಿ ಬಾಳಿ ಎಂದು ಹೇಳಿ,

೩೩. ಯಮನು ತನ್ನ ಪಾಶಗಳನ್ನೂ ಯಮದಂಡವನ್ನೂ ಉಪಸಂಹರಿಸಿದನು. ಅಗ್ನಿಯು ಆಗ್ನೇಯಾಸ್ತ್ರವನ್ನು ಪಸಂಹರಿಸಿದನು. ಆ ಅಗ್ನಿಯಮರೀರ್ವರೂ ಕಪೋತ ಉಲೂಕಗಳಿಗೆ ಪರಸ್ಪರ ಮೈತ್ರಿಯುಂಟಾಗುವಂತೆ ಮಾಡಿದರು.

೩೪. ಬಳಿಕ ಆ ಪಕ್ಷಿಗಳನ್ನು ಕುರಿತು ಬೇಕಾದ ವರವನ್ನು ಕೇಳಿರಿ ಎಂದು ಅಗ್ನಿಯಮರು ಹೇಳಿದರು. ಅದಕ್ಕೆ ಪಕ್ಷಿಗಳು ಓ ದೇವೋತ್ತಮರೇ, ವೈರದ ಕಾರಣದಿಂದ ನಮಗೆ ನಿಮ್ಮ ದರ್ಶನವು ಲಭಿಸಿತು. ಪಾಪದಿಂದ ಪಕ್ಷಿಗಳಾಗಿ ಜನಿಸಿದ ನಮಗೆ ವರಗಳೇತಕ್ಕೆ ?

ಅಥ ದೇಯೋ ವರೋऽಸ್ಮಾಕಂ ಭವದ್ಭ್ಯಾಂ ಪ್ರೀತಿಪೂರ್ವಕಂ ।
ನಾತ್ಮಾರ್ಥಮನುಯಾಚಾವೋ ದೀಯಮಾನಂ ವರಂ ಶುಭಂ ॥ ೩೫ ॥

ಆತ್ಮಾರ್ಥಂ ಯಸ್ತು ಯಾಚೇತ ಸ ಶೋಚ್ಯೋ ಹಿ ಸುರೇಶ್ವರೌ ।
ಜೀವಿತಂ ಸಫಲಂ ತಸ್ಯ ಯಃ ಪರಾರ್ಥೋದ್ಯತಃ ಸದಾ ॥ ೩೬ ॥

ಅಗ್ನಿರಾಪೋ ರವಿಃ ಪೃಥ್ವೀ ಧಾನ್ಯಾನಿ ವಿವಿಧಾನಿ ಚ ।
ಪರಾರ್ಥಂ ವರ್ತನಂ ತೇಷಾಂ ಸತಾಂ ಚಾಪಿ ವಿಶೇಷತಃ ॥ ೩೭ ॥

ಬ್ರಹ್ಮಾದಯೋऽಪಿ ಹಿ ಯತೋ ಯುಜ್ಯಂತೇ ಮೃತ್ಯುನಾ ಸಹ ।
ಏವಂ ಜ್ಞಾತ್ವಾ ತು ದೇವೇಶೌ ವೃಥಾ ಸ್ವಾರ್ಥಪರಿಶ್ರಮಃ ॥ ೩೮ ॥

ಜನ್ಮನಾ ಸಹ ಯತ್ಪುಂಸಾಂ ವಿಹಿತಂ ಪರಮೇಷ್ಠಿನಾ ।
ಕದಾಚಿನ್ನಾನ್ಯಥಾ ತದ್ವೈ ವೃಥಾ ಕ್ಲಿಶ್ಯಂತಿ ಜಂತವಃ ॥ ೩೯ ॥

---

೩೫. ಹಾಗಿದ್ದರೂ ನೀವು ಪ್ರೀತಿಯಿಂದ ವರವನ್ನು ಕರುಣಿಸುವಿರಾದರೆ ಕೇವಲ ಸ್ವಾರ್ಥಕ್ಕಾಗಿ ನಾವು ನಿಮ್ಮಿಂದ ವರವನ್ನು ಬೇಡಲಾರೆವು.

೩೬. ಸ್ವಾರ್ಥಕ್ಕಾಗಿ ಮಾತ್ರವೇ ಯಾಚಿಸುವವನು ನಿಂದ್ಯನು. ಪರಾರ್ಥಕ್ಕಾಗಿ ಕೆಲಸಮಾಡುವವನ ಜೀವನವು ಸಫಲವು. ಅಂತಹವನು ಪುರುಷ ಶ್ರೇಷ್ಠನು.

೩೭. ಅಗ್ನಿ, ಜಲ, ಸೂರ್ಯ, ಭೂಮಿ, ಧಾನ್ಯ ಇವುಗಳೆಲ್ಲವೂ ಪರಾರ್ಥಕ್ಕಾಗಿಯೇ ಇರುವುವು. ಸತ್ಪುರುಷರೂ ಸಹ ಪರಾರ್ಥಕ್ಕಾಗಿಯೇ ಜೀವಿಸುವರು.

೩೮. ಬ್ರಹ್ಮನೇ ಮೊದಲಾದವರೂ ಸಹ ಮೃತ್ಯುವಿಗೀಡಾಗುವರು. ಇವನ್ನು ಯೋಚಿಸಿದರೆ ಕೇವಲ ಸ್ವಾರ್ಥಕ್ಕಾಗಿ ಶ್ರಮವಹಿಸುವುದು ವ್ಯರ್ಥವು.

೩೯. ಹುಟ್ಟಿನ ಜೊತೆಗೇ ಪ್ರಾಣಿಗೆ ವಿಧಿಯು ಅವನವನ ಕರ್ಮಾನುಸಾರವಾಗಿ ಸುಖದುಃಖಗಳನ್ನು ಕಲ್ಪಿಸಿರುವನು. ವಿಧಿಯ ನಿಯಮವು ತಪ್ಪುವುದಿಲ್ಲ. ಇದನ್ನು ತಿಳಿಯದೇ ಪ್ರಾಣಿಗಳು ವೃಥಾ ಸ್ವಾರ್ಥಕ್ಕಾಗಿ ಕಷ್ಟಪಡುವರು.

ತಸ್ಮಾದ್ಯಾಚಾವಹೇ ಕಿಂಚಿದ್ಧಿತಾಯ ಜಗತಾಂ ಶುಭಂ ।
ಗುಣದಾಯಿ ತು ಸರ್ವೇಷಾಂ ತದ್ಭವಾನನುಮನ್ಯತಾಂ ॥ ೪೦ ॥

॥ ಬ್ರಹ್ಮೋವಾಚ ॥

ತಾವಾಹತುರುಭೌ ದೇವೌ ಪಕ್ಷಿಣೌ ಲೋಕವಿಶ್ರುತೌ ।
ಧರ್ಮಸ್ಯ ಯಶಸೋಽವಾಪ್ತ್ಯೈ ಲೋಕಾನಾಂ ಹಿತಕಾಮ್ಯಯಾ ॥ ೪೧ ॥

॥ ಪಕ್ಷಿಣಾವೂಚತುಃ ॥

ಆವಾಭ್ಯಾಮಾಶ್ರಮೌ ತೀರ್ಥೇ ಗಂಗಾಯಾ ಉಭಯೋ ತಟೇ ।
ಭವೇತಾಂ ಜಗತಾಂ ನಾಥಾವೇಷ ಏವ ಪರೋ ವರಃ ॥ ೪೨ ॥

ಸ್ನಾನಂ ದಾನಂ ಜಪೋ ಹೋಮಃ ಪಿತೄಣಾಂ ಚಾಪಿ ಪೂಜನಂ ।
ಸುಕೃತೀ ದುಷ್ಕೃತೀ ವಾಪಿ ಯಃ ಕರೋತಿ ಯಥಾ ತಥಾ ।
ಸರ್ವಂ ತದಕ್ಷಯಂ ಪುಣ್ಯಂ ಸ್ಯಾದಿತ್ಯೇಷ ಪರೋ ವರಃ ॥ ೪೩ ॥

---

೪೦. ಆದುದರಿಂದ ನಾವು ಜಗತ್ತಿಗೆ ಕ್ಷೇಮವಾಗುವಂತಹ ಒಂದು ವರವನ್ನು ಕೇಳುವೆವು. ಅದನ್ನು ನೀವು ಅನುಗ್ರಹಿಸಿ ಎಂದವು.

೪೧. ಆ ಪಕ್ಷಿಗಳು ಆಮೇಲೆ ಲೋಕಪ್ರಸಿದ್ಧರಾಗಿ ಅಗ್ನಿಯಮರನ್ನು ಕುರಿತು ಧರ್ಮಯಶಸ್ಸುಗಳನ್ನುಂಟುಮಾಡುವಂತಹ ಲೋಕಕ್ಷೇಮವನ್ನು ಮಾಡುವಂತಹ ಈ ಮಾತನ್ನು ಹೇಳಿದವು.

೪೨. ಓ ದೇವಶ್ರೇಷ್ಠರೇ, ನಮ್ಮಿಬ್ಬರ ವಾಸಸ್ಥಾನವೂ ಸಹ ಗಂಗೆಯ ಈ ದಕ್ಷಿಣ ದಡದಲ್ಲಿ ಇರುವಂತಾಗಲಿ.

೪೩. ಈ ದಕ್ಷಿಣತೀರ್ಥದಲ್ಲಿ ಪುಣ್ಯವಂತನಾಗಲೀ ಪಾಪಿಯಾಗಲೀ ಯಾವನಾದರೂ ಸಹ ಸ್ನಾನದಾನಗಳು ಜಪಹೋಮಗಳು ಪಿತೃಶ್ರಾದ್ಧಾದಿಗಳು ಇವುಗಳನ್ನು ಯಾವ ಬಗೆಯಿಂದ ಮಾಡಿದರೂ ಅಕ್ಷಯಪುಣ್ಯವು ಲಭಿಸಲಿ. ಇದೇ ನಾವು ಕೇಳುವ ವರವು ಎಂದವು.

॥ ದೇವಾವೂಚತುಃ ॥

ಏವಮಸ್ತು ತಥಾಚಾನ್ಯತ್ಸುಪ್ರೀತೌ ತು ಬ್ರವಾವಹೈ ॥ ೪೪ ॥

॥ ಯಮ ಉವಾಚ ॥

ಉತ್ತರೇ ಗೌತಮೀತೀರೇ ಯಮಸ್ತೋತ್ರಂ ಪಠಂತಿ ಯೇ ।
ತೇಷಾಂ ಸಪ್ತಸು ವಂಶೇಷು ನಾಕಾಲೇ ಮೃತ್ಯುಮಾಪ್ನುಯಾತ್ ॥ ೪೫ ॥

ಪುರುಷೋ ಭಾಜನಂ ಚ ಸ್ಯಾತ್ಸರ್ವದಾ ಸರ್ವಸಂಪದಾಂ ।
ಯಸ್ತ್ವಿದಂ ಪಠತೇ ನಿತ್ಯಂ ಮೃತ್ಯುಸ್ತೋತ್ರಂ ಜಿತಾತ್ಮವಾನ್ ॥ ೪೬ ॥

ಅಷ್ಟಾಶೀತಿಸಹಸ್ರೈಶ್ಚ ವ್ಯಾಧಿಭಿರ್ನ ಸ ಬಾಧ್ಯತೇ ।
ಅಸ್ಮಿಂಸ್ತೀರ್ಥೇ ದ್ವಿಜಶ್ರೇಷ್ಠೌ ತ್ರಿಮಾಸಾದ್ಗುರ್ವಿಣೀ ಸತೀ ॥ ೪೭ ॥

ಅರ್ವಾಗ್ವಂಧ್ಯಾ ಚ ಷಣ್ಮಾಸಾತ್ಸಪ್ತಾಹಂ ಸ್ನಾನಮಾಚರೇತ್ ।
ವೀರಸೂಃ ಸಾ ಭವೇನ್ನಾರೀ ಶತಾಯುಃ ಸ ಸುತೋ ಭವೇತ್ ॥ ೪೮ ॥

---

೪೪. ಅವನ್ನು ಕೇಳಿ ಅಗ್ನಿ ಯಮರು ಹಾಗೆಯೇ ಆಗಲಿ. ಅಲ್ಲದೆ ನಾವು ನಿಮ್ಮ ಮೇಲಿನ ಪ್ರೀತಿಯಿಂದ ಮತ್ತೊಂದು ವರವನ್ನು ಕರುಣಿಸುವೆವು ಎಂದರು.

೪೫. ಬಳಿಕ ಯಮನಿಂತೆಂದನು—ಗೌತಮೀನದಿಯ ಉತ್ತರತೀರದಲ್ಲಿ ಉಲೂಕಿಯು ಹೇಳಿದ ಯಮಸ್ತೋತ್ರವನ್ನು ಯಾರು ಪಠಿಸುವರೋ ಅವರ ಏಳುವಂಶಗಳಲ್ಲಿ ಯಾವನೂ ಅಕಾಲಮೃತ್ಯುವನ್ನು ಪಡೆಯಲಾರನು ಮತ್ತು ಅಂತಹ ಮಾನವನು ಸಕಲೈಶ್ವರ್ಯಗಳನ್ನೂ ಪಡೆಯುವನು.

೪೬. ಈ ಮೃತ್ಯುಸ್ತೋತ್ರವನ್ನು ಶ್ರದ್ಧೆಯಿಂದ ನಿತ್ಯವೂ ಹೇಳುವವನಿಗೆ ಎಂಭತ್ತೆಂಟುಸಾವಿರ (88000) ರೋಗಗಳಲ್ಲಿ ಯಾವುದೂ ಬರುವುದಿಲ್ಲ.

೪೭–೪೮. ಈ ತೀರ್ಥದಲ್ಲಿ ಮೂರು ತಿಂಗಳ ಗರ್ಭಿಣಿಯೂ ಬಾಲ ವಂಧ್ಯೆಯೂ ಸಹ ಏಳುದಿನಗಳವರೆಗೆ ಸ್ನಾನಮಾಡಿದರೆ ಕೆಲವು ದಿನಗಳಲ್ಲಿಯೇ ವೀರಪುತ್ರನನ್ನು ಪಡೆಯುವಳು. ಆ ಪುತ್ರನು ನೂರು ವರ್ಷಗಳವರೆಗೆ ಬದು

ಲಕ್ಷ್ಮೀವಾನ್ಮತಿಮಾನ್ ಶೂರಃ ಪುತ್ರಪೌತ್ರವಿವರ್ಧನಃ ।
ತತ್ರ ಪಿಂಡಾದಿದಾನೇನ ಪಿತರೋ ಮುಕ್ತಿಮಾಪ್ನುಯುಃ ।
ಮನೋವಾಕ್ಕಾಯಜಾತ್ಪಾಪಾತ್ಸ್ನಾನಾನ್ಮುಕ್ತೋ ಭವೇನ್ನರಃ ॥ ೪೯ ॥

॥ ಬ್ರಹ್ಮೋವಾಚ ॥

ಯಮವಾಕ್ಯಾದನು ತಥಾ ಹವ್ಯವಾಡಾಹ ಪಕ್ಷಿಣೌ ॥ ೫೦ ॥

॥ ಅಗ್ನಿರುವಾಚ ॥

ಮತ್ಸ್ತೋತ್ರಂ ದಕ್ಷಿಣೇ ತೀರೇ ಯೇ ಪಠಂತಿ ಯತವ್ರತಾಃ ।
ತೇಷಾಮಾರೋಗ್ಯಮೈಶ್ವರ್ಯಂ ಲಕ್ಷ್ಮೀಂ ರೂಪಂ ದದಾಮ್ಯಹಂ ॥ ೫೧ ॥

ಇದಂ ಸ್ತೋತ್ರಂ ತು ಯಃ ಕಶ್ಚಿದ್ಯತ್ರ ಕ್ವಾಪಿ ಪಠೇನ್ನರಃ ।
ನೈವಾಗ್ನಿತೋ ಭಯಂ ತಸ್ಯ ಲಿಖಿತೇಽಪಿ ಗೃಹೇ ಸ್ಥಿತೇ ॥ ೫೨ ॥

ಕುವ ದೀರ್ಘಾಯುವಾಗುವನು. ಶ್ರೀಮಂತನೂ ಬುದ್ಧಿವಂತನೂ ಶೂರನೂ ಮಕ್ಕಳುಮೊಮ್ಮಕ್ಕಳುಗಳುಳ್ಳವನೂ ಆಗುವನು.

೪೯. ಆ ಉತ್ತರತೀರದಲ್ಲಿ ಪಿತೃಗಳಿಗೆ ಪಿಂಡದಾನವನ್ನು ಮಾಡಿದರೆ ಅವರಿಗೆ ಮುಕ್ತಿಯು ಲಭಿಸುವುದು. ಕೇವಲಸ್ನಾನಮಾಡಿದರೆ ಮಾನಸಿಕ ವಾಚಿಕ ಕಾಯಿಕ ಪಾಪಗಳೆಲ್ಲವೂ ನಾಶವಾಗುವುವು ಎಂದನು.

೫೦-೫೧. ಯಮನು ಹೇಳಿದಮೇಲೆ ಅಗ್ನಿಯು ಆ ಪಕ್ಷಿಗಳನ್ನು ಕುರಿತು ಕಪೋತಿಯು ಹೇಳಿದ ನನ್ನ ಸ್ತುತಿಯನ್ನು ಗೌತಮೀನದಿಯ ದಕ್ಷಿಣತೀರದಲ್ಲಿ ಶ್ರದ್ಧೆಯಿಂದ ಪಠಿಸುವವರಿಗೆ ಆರೋಗ್ಯವನ್ನೂ ಐಶ್ವರ್ಯವನ್ನೂ ಧನವನ್ನೂ ರೂಪವನ್ನೂ ಕೊಡುವೆನು.

೫೨. ಈ ಸ್ತೋತ್ರವನ್ನು ಯಾವನು ಎಲ್ಲಿ ಪಠಿಸಿದರೂ ಸಹ ಅಗ್ನಿಭಯವು ನಾಶವಾಗುವುದು. ಮನೆಯಲ್ಲಿ ಈ ಸ್ತೋತ್ರವನ್ನು ಬರೆದಿದ್ದರೂ ಸಹ ಆ ಮನೆಗೆ ಅಗ್ನಿಭಯವಿಲ್ಲವು.

ಸ್ನಾನಂ ದಾನಂ ಚ ಯಃ ಕುರ್ಯಾದಗ್ನಿತೀರ್ಥೇ ಶುಚಿರ್ನರಃ ।
ಅಗ್ನಿಷ್ಟೋಮಫಲಂ ತಸ್ಯ ಭವೇದೇವ ನ ಸಂಶಯಃ ॥ ೫೩ ॥

॥ ಬ್ರಹ್ಮೋವಾಚ ॥

ತತಃ ಪ್ರಭೃತಿ ತತ್ತೀರ್ಥಂ ಯಾಮ್ಯಮಾಗ್ನೇಯಮೇವ ಚ ।
ಕಪೋತಂ ಚ ತಥೋಲೂಕಂ ಹೇತ್ಯುಲೂಕಂ ವಿದುರ್ಬುಧಾಃ ॥ ೫೪ ॥

ತತ್ರ ತ್ರೀಣಿ ಸಹಸ್ರಾಣಿ ತಾವಂತ್ಯೇವ ಶತಾನಿ ಚ ।
ಪುನರ್ನವತಿತೀರ್ಥಾನಿ ಪ್ರತ್ಯೇಕಂ ಮುಕ್ತಿಭಾಜನಂ ॥ ೫೫ ॥

ತೇಷು ಸ್ನಾನೇನ ದಾನೇನ ಪ್ರೇತೀಭೂತಾಶ್ಚ ಯೇ ನರಾಃ ।
ಪೂತಾಸ್ತೇ ಪುತ್ರವಿತ್ತಾಢ್ಯಾ ಆಕ್ರಮೇಯುರ್ದಿವಂ ಶುಭಾಃ ॥ ೫೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಯಮಾಗ್ನ್ಯಾದಿನವತ್ಯುತ್ತರತ್ರಿಶತಾಧಿಕತ್ರಿಸಹಸ್ರತೀರ್ಥ
ವರ್ಣನಂ ನಾಮ ಪಂಚವಿಂಶಾಧಿಕಶತತಮೋಽಧ್ಯಾಯಃ

---

೫೩. ಅಗ್ನಿತೀರ್ಥದಲ್ಲಿ ಶುಚಿಯಾಗಿ ಸ್ನಾನದಾನಗಳನ್ನು ಮಾಡಿದರೆ ಅಗ್ನಿಷ್ಟೋಮಯಾಗದ ಫಲವು ಲಭಿಸುವುದರಲ್ಲಿ ಸಂಶಯವಿಲ್ಲ ಎಂದು ವರವನ್ನಿತ್ತನು.

೫೪. ಅದು ಮೊದಲುಗೊಂಡು ಆ ತೀರ್ಥವು ಯಮತೀರ್ಥ, ಅಗ್ನಿತೀರ್ಥ, ಕಪೋತತೀರ್ಥ, ಉಲೂಕತೀರ್ಥ ಹೇತಿತೀರ್ಥ, ಉಲೂಕಿತೀರ್ಥಗಳೆಂಬ ಹೆಸರುಗಳಿಂದ ಪ್ರಸಿದ್ಧವಾಯಿತು.

೫೫. ಅಲ್ಲಿ ಮೂರುಸಾವಿರದ ಮುನ್ನೂರು ತೊಂಭತ್ತು (3390) ಪುಣ್ಯತೀರ್ಥಗಳಾದುವು.

೫೬. ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದವರ ಪಿತೃಗಳು ಪಿಶಾಚಗಳಾಗಿದ್ದರೂ ಸಹ ದೇವತ್ವವನ್ನು ಪಡೆದು ಸ್ವರ್ಗಕ್ಕೆ ತೆರಳವರು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಯಮತೀರ್ಥ ಮತ್ತು ಅಗ್ನಿತೀರ್ಥಗಳವರ್ಣನವೆಂಬ ನೂರಿಪ್ಪತ್ತೈದನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಐವತ್ತಾರನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಷಡ್ವಿಂಶಾಧಿಕಶತತಮೋऽಧ್ಯಾಯಃ

॥ ಬ್ರಹ್ಮೋವಾಚ ॥

ತಪಸ್ತೀರ್ಥಮಿತಿ ಖ್ಯಾತಂ ತಪೋವೃದ್ಧಿಕರಂ ಮಹತ್ ।
ಸರ್ವಕಾಮಪ್ರದಂ ಪುಣ್ಯಂ ಪಿತೄಣಾಂ ಪ್ರೀತಿವರ್ಧನಂ ॥ ೧ ॥

ತಸ್ಮಿಂಸ್ತೀರ್ಥಂ ತು ಯದ್ವೃತ್ತಂ ಶೃಣು ಪಾಪಪ್ರಣಾಶನಂ ।
ಅಪಾಮಗ್ನೇಶ್ಚ ಸಂವಾದಮೃಷೀಣಾಂ ಚ ಪರಸ್ಪರಂ ॥ ೨ ॥

ನೂರಿಪ್ಪತ್ತಾರನೆಯ ಅಧ್ಯಾಯವು

೧. ಬ್ರಹ್ಮನಿಂತೆಂದನು—ತಪಸ್ತೀರ್ಥವೆಂಬ ತಪಸ್ಸನ್ನು ವೃದ್ಧಿ ಮಾಡುವ ಪುಣ್ಯತೀರ್ಥವಿರುವುದು. ಸಕಲೇಷ್ಟಾರ್ಥಗಳನ್ನೂ ಉಂಟುಮಾಡುವ ಈ ತೀರ್ಥವು ಪಿತೃದೇವತೆಗಳಿಗೆ ತುಂಬಾ ಪ್ರಿಯವಾದುದು.

೨. ಆ ತೀರ್ಥದಲ್ಲಿ ಪುಣ್ಯಪ್ರದವಾದ ಸಮಾಚಾರವೊಂದು ಹಿಂದೆ ನಡೆಯಿತು. ಜಲ ಅಗ್ನಿಗಳ ವಿಷಯದಲ್ಲಿ ಋಷಿಗಳಿಗೆ ಪರಸ್ಪರ ಚರ್ಚೆಯುಂಟಾಯಿತು. ಅದನ್ನು ಹೇಳುವೆನು.

ಅಪ್ಪೋ ಜ್ಯೇಷ್ಠತಮಾಃ ಕೇಚಿನ್ಮೇನಿರೇಽಗ್ನಿಂ ತಥಾಪರೇ ।
ಏವಂ ಬ್ರುವಂತೋ ಮುನಯಃ ಸಂವಾದಂ ಚಾಗ್ನಿವಾರಿಣೋಃ ॥ ೩ ॥

ವಿನಾಗ್ನಿಂ ಜೀವನಂ ಕ್ವ ಸ್ಯಾಜ್ಜೀವಭೂತೋ ಯತೋಽನಲಃ ।
ಆತ್ಮಭೂತೋ ಹವ್ಯಭೂತಶ್ಚಾಗ್ನಿನಾ ಜಾಯತೇಽಖಿಲಂ ॥ ೪ ॥

ಅಗ್ನಿನಾ ಧ್ರಿಯತೇ ಲೋಕೋ ಹ್ಯಗ್ನಿಜ್ಯೋತಿರ್ಮಯಂ ಜಗತ್ ।
ತಸ್ಮಾದಗ್ನೇಃ ಪರಂ ನಾಸ್ತಿ ಪಾವನಂ ದೈವತಂ ಮಹತ್ ॥ ೫ ॥

ಅಂತರ್ಜ್ಯೋತಿಃ ಸ ಏವೋಕ್ತಃ ಪರಂ ಜ್ಯೋತಿಃ ಸ ಏವ ಹಿ ।
ವಿನಾಗ್ನಿನಾ ಕಿಂಚಿದಸ್ತಿ ಯಸ್ಯ ಧಾಮ ಜಗತ್ತ್ರಯಂ ॥ ೬ ॥

ತಸ್ಮಾದಗ್ನೇಃ ಪರಂ ನಾಸ್ತಿ ಭೂತಾನಾಂ ಜ್ಯೈಷ್ಠ್ಯಭಾಜನಂ ।
ಯೋಷಿತ್ಕ್ಷೇತ್ರೇಽರ್ಪಿತಂ ಬೀಜಂ ಪುರುಷೇಣ ಯಥಾ ತಥಾ ॥ ೭ ॥

---

೩. ಕೆಲವರು ಮುನಿಗಳು ಜಲವೇ ಶ್ರೇಷ್ಠವೆಂದು ವಾದಿಸಿದರು. ಅಗ್ನಿಯೇ ಶ್ರೇಷ್ಠವೆಂದು ಕೆಲವರು ವಾದಿಸಿದರು. ಹೀಗೆ ಚರ್ಚೆಯು ನಡೆಯಿತು.

೪. ಅಗ್ನಿಯಿಲ್ಲದೆ ಜೀವಿಸುವುದಕ್ಕೇ ಸಾಧ್ಯವಿಲ್ಲ; ಅಗ್ನಿಯು ಆತ್ಮಜ್ಯೋತಿರೂಪವಾದುದು ಅಗ್ನಿಯಿಂದಲೇ ಜಗತ್ತು ಜನಿಸುವುದು.

೫. ಅಗ್ನಿಯಿಂದಲೇ ಜಗತ್ತು ನಿಂತಿರುವುದು. ಅಗ್ನಿಜ್ಯೋತಿಯಿಂದ ಜಗತ್ತು ತುಂಬಿದೆ. ಆದುದರಿಂದ ಅಗ್ನಿಯೇ ಶ್ರೇಷ್ಠವೂ ಪವಿತ್ರವೂ ಆದ ದೇವಸ್ವರೂಪವು.

೬. ಶರೀರದೊಳಗಿರುವ ಅಂತರ್ಜ್ಯೋತಿಯೂ ಅಗ್ನಿಯು. ಪರಂಜ್ಯೋತಿಯೂ (ಪರಮಾತ್ಮನೂ) ಅಗ್ನಿಯೇ. ಮೂರು ಲೋಕಗಳಲ್ಲಿ ಅಗ್ನಿಯಿಲ್ಲದ ಸ್ಥಳವೇ ಇಲ್ಲವು. ಆದುದರಿಂದ ಪಂಚಭೂತಗಳಲ್ಲಿ ಅಗ್ನಿಗಿಂತ ಉತ್ತಮವಾದ ಭೂತವು ಮತ್ತೊಂದಿಲ್ಲ.

೭–೮. ಸ್ತ್ರೀಯೋನಿಯಲ್ಲಿ ಪುರುಷನಿಂದ ಯಾವುದೋ ಒಂದು ಬಗೆಯಿಂದ ವಿಸರ್ಜಿಸಲ್ಪಟ್ಟ ಬೀಜವು ದೇಹದ ರೂಪವನ್ನು ಹೊಂದಬೇಕಾದರೆ ಅಗ್ನಿಯ ಶಕ್ತಿಯೇ ಕಾರಣವು. ದೇವತೆಗಳ ಮುಖವು ಅಗ್ನಿಯು. ಆದುದರಿಂದ ಅಗ್ನಿಯೇ ಶ್ರೇಷ್ಠವು.

ತಸ್ಯ ದೇಹಾದಿಕಾ ಶಕ್ತಿಃ ಕೃಶಾನೋರೇವ ನಾನ್ಯಥಾ ।
ದೇವಾನಾಂ ಹಿ ಮುಖಂ ವಹ್ನಿಸ್ತಸ್ಮಾನ್ನಾತಃ ಪರಂ ವಿದುಃ ॥ ೮ ॥

ಅಪರೇ ತು ಹ್ಯಪಾಂ ಜ್ಯೈಷ್ಠ್ಯಂ ಮೇನಿರೇ ವೇದವಾದಿನಃ ।
ಅದ್ಭಿಃ ಸಂಪತ್ಸ್ಯತೇ ಹ್ಯನ್ನಂ ಶುಚಿರದ್ಭಿಃ ಪ್ರಜಾಯತೇ ॥ ೯ ॥

ಅದ್ಭಿರೇವ ಧೃತಂ ಸರ್ವಮಾಪೋ ವೈ ಮಾತರಃ ಸ್ಮೃತಾಃ ।
ತ್ರೈಲೋಕ್ಯಜೀವನಂ ವಾರಿ ವದಂತೀತಿ ಪುರಾವಿದಃ ॥ ೧೦ ॥

ಉತ್ಪನ್ನಮಮೃತಂ ಹ್ಯದ್ಭ್ಯಸ್ತಾಭ್ಯಶ್ಚೌಷಧಿಸಂಭವಃ ।
ಅಗ್ನಿರ್ಜ್ಯೇಷ್ಠ ಇತಿ ಪ್ರಾಹುರಾಪೋ ಜ್ಯೇಷ್ಠತಮಾಃ ಪರೇ ॥ ೧೧ ॥

ಏವಂ ಮೀಮಾಂಸಮಾನಾಸ್ತೇ ಋಷಯೋ ವೇದವಾದಿನಃ ।
ವಿರುದ್ಧವಾದಿನೋ ಮಾಂ ಚ ಸಮುಭ್ಯೇತ್ಯೇದಮಬ್ರುವನ್ ॥ ೧೨ ॥

॥ ಋಷಯ ಊಚುಃ ॥

ಅಗ್ನೇರಪಾಂ ವದ ಜ್ಯೈಷ್ಠ್ಯಂ ತ್ರೈಲೋಕ್ಯಸ್ಯ ಭವಾನ್ಪ್ರಭುಃ ॥ ೧೩ ॥

---

೯. ಇನ್ನು ಕೆಲವರು ವೇದವಾದಿಗಳು ಜಲವೇ ಶ್ರೇಷ್ಠವೆಂದು ವಾದಿಸಿದರು. ಅನ್ನಮಾಪಃ ಎಂದು ಶ್ರುತಿಯು ಸಾರುತ್ತಿರುವುದು. ಅವರ ವಾದ ರೀತಿಯು ಇದು—ನೀರಿನಿಂದಲೇ ಅನ್ನವು ಆಗುವುದು. ನೀರಿನಿಂದಲೇ ವಸ್ತುವೆಲ್ಲವೂ ಶುದ್ಧವಾಗುವುದು.

೧೦. ಜಲವೇ ಜಗತ್ತಿಗೆ ಆಧಾರವು. ಜಗತ್ತಿಗೆ ತಾಯಿಯಂತಿರುವುದು. ಜಗತ್ತಿಗೆ ಜಲವೇ ಜೀವನಾಧಾರವಾದುದರಿಂದ ತಿಳಿದವರು ಜೀವನವೆಂದು ಜಲಕ್ಕೆ ಹೆಸರಿಟ್ಟಿರುವರು.

೧೧-೧೨. ಜಲದಿಂದಲೇ ಅಮೃತವು ಜನಿಸುವುದು. ನೀರಿನಿಂದಲೇ ಆಹಾರವಸ್ತುವು ಆಗುವುದು. ಹೀಗೆ ಜಲವೇ ಶ್ರೇಷ್ಠವೆಂದು ಕೆಲವರು ವಾದಿಸಿದರು. ಕೆಲವರು ಅಗ್ನಿಯೇ ಶ್ರೇಷ್ಠವೆಂದು ವಾದಿಸಿದರು. ಹೀಗೆ ಚರ್ಚೆಮಾಡುತ್ತಾ ಆ ಋಷಿಗಳೆಲ್ಲರೂ ನನ್ನ (ಬ್ರಹ್ಮನ) ಬಳಿಗೆ ಬಂದು,

೧೩. ಓ ಬ್ರಹ್ಮದೇವ, ಅಗ್ನಿಯು ಶ್ರೇಷ್ಠವೇ? ಜಲವು ಶ್ರೇಷ್ಠವೇ? ಇದನ್ನು ನೀನು ತಿಳಿದು ಹೇಳು. ನೀನು ಜಗತ್ತಿಗೆ ಪ್ರಭುವು ಎಂದರು.

॥ ಬ್ರಹ್ಮೋವಾಚ ॥

ಅಹಮುಕ್ತ್ವಬ್ರವಂ ಪ್ರಾಪ್ತಾನೃಷೀನ್ಸರ್ವಾನ್ಸ್ಮತವ್ರತಾನ್ ।
ಉಭೌ ಪೂಜ್ಯತಮೌ ಲೋಕ ಉಭಾಭ್ಯಾಂ ಜಾಯತೇ ಜಗತ್ ॥ ೧೪ ॥

ಉಭಾಭ್ಯಾಂ ಜಾಯತೇ ಹವ್ಯಂ ಕವ್ಯಂ ಚಾಮೃತಮೇವ ಚ ।
ಉಭಾಭ್ಯಾಂ ಜೀವನಂ ಲೋಕೇ ಶರೀರಸ್ಯ ಚ ಧಾರಣಂ ॥ ೧೫ ॥

ನಾನಯೋಶ್ಚ ವಿಶೇಷೋಽಸ್ತಿ ತತೋ ಜ್ಯೈಷ್ಠ್ಯಂ ಸಮಂ ಮತಂ ।
ತತೋ ಮದ್ವಚನಾಜ್ಜ್ಯೈಷ್ಠ್ಯಮುಭಯೋರ್ನೈವ ಕಸ್ಯಚಿತ್ ॥ ೧೬ ॥

ಜ್ಯೈಷ್ಠ್ಯಮನ್ಯತರಸ್ಯೇತಿ ಮೇನಿರೇ ಋಷಿಸತ್ತಮಾಃ ।
ನ ತೃಪ್ತಾ ಮಮ ವಾಕ್ಯೇನ ಜಗ್ಮುರ್ವಾಯುಂ ತಪಸ್ವಿನಃ ॥ ೧೭ ॥

॥ ಮುನಯ ಊಚುಃ ॥

ಕಸ್ಯ ಜ್ಯೈಷ್ಠ್ಯಂ ಭವಾನ್ಪ್ರಾಣೋ ವಾಯೋ ಸತ್ಯಂ ತ್ವಯಿ ಸ್ಥಿತಂ ॥ ೧೮ ॥

---

೧೪. ಆಗ ನಾನು ಋಷಿಗಳನ್ನು ಕುರಿತು ಎಲೈ ಋಷಿಗಳಿರಾ, ಅಗ್ನಿ ಜಲಗಳೆರಡೂ ಶ್ರೇಷ್ಠವಾದುವು. ಇವೆರಡರಿಂದಲೂ ಜಗತ್ತು ಜನಿಸುವುದು.

೧೫. ಅಗ್ನಿ ಜಲಗಳೆರಡರಿಂದಲೂ ಹವ್ಯಕವ್ಯ ಮತ್ತು ಅಮೃತಗಳು ಜನಿಸುವುವು. ಇವೆರೆಡರಿಂದಲೂ ಶರೀರಧಾರಣೆ ಮತ್ತು ಜೀವನಗಳು ನಡೆಯುವುವು. ಆದುದರಿಂದ ಈ ಅಗ್ನಿ ಜಲಗಳೆರಡೂ ಶ್ರೇಷ್ಠವಾದುವು. ಒಂದು ಹೆಚ್ಚು ಒಂದು ಕಮ್ಮಿ ಎಂಬ ಭೇದವಿಲ್ಲ ಎಂದು ಹೇಳಿದೆನು-

೧೬-೧೭. ಆದರೂ ಆ ಮುನಿಗಳಿಗೆ ನನ್ನ ಮಾತಿನಿಂದ ನಿಶ್ಚಯಜ್ಞಾನ ಉಂಟಾಗಲಿಲ್ಲ. ಅಗ್ನಿ ಜಲಗಳೆರಡೂ ಸಮವಾದುವು ಎಂದು ಅವರು ನಂಬಲಿಲ್ಲ. ಆಮೇಲೆ ಅವರು ವಾಯುದೇವನ ಬಳಿಗೆ ಹೋಗಿ,

೧೮. ಓ ವಾಯು, ನೀನು ಜಗತ್ತಿನ ಪ್ರಾಣಸ್ವರೂಪನು. ಸತ್ಯವು ನಿನ್ನಲ್ಲಿಯೇ ನೆಲಸಿರುವುದು. ಅಗ್ನಿ ಜಲಗಳಲ್ಲಿ ಯಾವುದು ಶ್ರೇಷ್ಠವಾದುದು ? ಹೇಳು ಎಂದು ಪ್ರಶ್ನಿಸಲು,

॥ ಬ್ರಹ್ಮೋವಾಚ ॥

ವಾಯುರಾಹಾನಲೋ ಜ್ಯೇಷ್ಠಃ ಸರ್ವಮಗ್ನೌ ಪ್ರತಿಷ್ಠಿತಂ ।
ನೇತ್ಯುಕ್ತ್ವಾನ್ಯೋನ್ಯಮೃಷಯೋ ಜಗ್ಮುಸ್ತೇಽಪಿ ವಸುಂಧರಾಂ ॥ ೧೯ ॥

॥ ಮುನಯ ಊಚುಃ ॥

ಸತ್ಯಂ ಭೂಮೇ ವದ ಜ್ಯೈಷ್ಠ್ಯಮಾಧಾರಾಸಿ ಚರಾಚರೇ ॥ ೨೦ ॥

॥ ಬ್ರಹ್ಮೋವಾಚ ॥

ಭೂಮಿರಪ್ಯಾಹ ವಿನಯಾದಾಗತಾಂಸ್ತಾನೃಷೀನಿದಂ ॥ ೨೧ ॥

॥ ಭೂಮಿರುವಾಚ ॥

ಮಮಾಪ್ಯಾಧಾರಭೂತಾಃ ಸ್ಯುರಾಪೋ ದೇವ್ಯಃ ಸನಾತನಾಃ ।
ಅದ್ಭ್ಯಸ್ತು ಜಾಯತೇ ಸರ್ವಂ ಜ್ಯೈಷ್ಠ್ಯಮಪ್ಸು ಪ್ರತಿಷ್ಠಿತಂ ॥ ೨೨ ॥

॥ ಬ್ರಹ್ಮೋವಾಚ ॥

ನೇತ್ಯುಕ್ತ್ವಾನ್ಯೋನ್ಯಮೃಷಯೋ ಜಗ್ಮುಃ ಕ್ಷೀರೋದಶಾಯಿನಂ ।
ತುಷ್ಟುವುರ್ವಿವಿಧೈಃ ಸ್ತೋತ್ರೈಃ ಶಂಖಚಕ್ರಗದಾಧರಂ ॥ ೨೩ ॥

---

೧೯. ಅದಕ್ಕೆ ವಾಯುವು—ಅಗ್ನಿಯೇ ಶ್ರೇಷ್ಠನಾದುದು. ಅಗ್ನಿಯಲ್ಲಿಯೇ ಎಲ್ಲವೂ ನೆಲಸಿರುವುದು ಎಂದನು. ಇದು ನಿಜವಲ್ಲವೆಂದು ಹೇಳಿ ಮುನಿಗಳು ಭೂಮಿಯಬಳಿಗೆ ಹೋದರು.

೨೦. ಓ ಭೂಮಿದೇವಿ, ನೀನು ಜಗತ್ತಿಗೆ ಆಧಾರವಾಗಿರುವೆ. ನಿಜವನ್ನು ಹೇಳು. ಅಗ್ನಿಜಲಗಳಲ್ಲಿ ಯಾರು ಶ್ರೇಷ್ಠರು? ಎಂದು ಕೇಳಲು,

೨೧-೨೨. ಆಗ ಭೂಮಿಯು ವಿನಯದಿಂದ ಋಷಿಗಳನ್ನು ಕುರಿತು ನನಗೂ ಸಹ ಜಲವು ಆಧಾರವು. ಜಲವು ಅನಾದಿಯಾದುದು. ನೀರಿನಿಂದಲೇ ಎಲ್ಲವೂ ಜನಿಸುವುದು. ಆದುದರಿಂದ ಜಲವೇ ಅಗ್ನಿಗಿಂತ ಶ್ರೇಷ್ಠವಾದುದು ಎಂದಳು.

೨೩. ಭೂಮಿಯ ಈ ಮಾತನ್ನಂಗೀಕರಿಸದೆ ಋಷಿಗಳು ಕ್ಷೀರಸಮುದ್ರದಲ್ಲಿರುವ ಹರಿಯಬಳಿಗೆ ತೆರಳಿದರು. ಶಂಖಚಕ್ರಗದಾಧಾರಿಯಾದ ಆತನನ್ನು ನಾನಾವಾಕ್ಯಗಳಿಂದ ಹೀಗೆ ಸ್ತುತಿಸಿದರು.

॥ ಋಷಯ ಊಚುಃ ॥

ಯೋ ವೇದ ಸರ್ವಂ ಭುವನಂ ಭವಿಷ್ಯ-
ದ್ಯಜ್ಞಾಯಮಾನಂ ಚ ಗುಹಾನಿವಿಷ್ಟಂ ।
ಲೋಕತ್ರಯಂ ಚಿತ್ರವಿಚಿತ್ರರೂಪ-
ಮಂತೇ ಸಮಸ್ತಂ ಚ ಯಮಾವಿವೇಶ ॥ ೨೪ ॥

ಯದಕ್ಷರಂ ಶಾಶ್ವತಮಪ್ರಮೇಯಂ
ಯಂ ವೇದವೇದ್ಯಮೃಷಯೋ ವದಂತಿ ।
ಯಮಾಶ್ರಿತಾಃ ಸ್ವೇಪ್ಸಿತಮಾಪ್ನುವಂತಿ
ತದ್ವಸ್ತು ಸತ್ಯಂ ಶರಣಂ ವ್ರಜಾಮಃ ॥ ೨೫ ॥

ಭೂತಂ ಮಹಾಭೂತಜಗತ್ಪ್ರಧಾನಂ
ನ ವಿಂದತೇ ಯೋಗಿನೋ ವಿಷ್ಣುರೂಪಂ ।
ತದ್ವಕ್ತುಮೇತೇ ಋಷಯೋಽತ್ರ ಯಾತಾಃ
ಸತ್ಯಂ ವದಸ್ವೇಹ ಜಗನ್ನಿವಾಸ ॥ ೨೬ ॥

---

೨೪. ಭೂತಭವಿಷ್ಯದ್ವರ್ತಮಾನಕಾಲಗಳ ಸಮಸ್ತ ವಿಚಾರವನ್ನೂ ಚಿತ್ರವಿಚಿತ್ರವಾದ ಪ್ರಪಂಚವನ್ನೂ ಶ್ರೀಹರಿಯು ತಿಳಿದಿರುವನು. ಈ ಜಗತ್ತೆಲ್ಲವೂ ಕೊನೆಯಲ್ಲಿ ಹರಿಯಲ್ಲಿಯೇ ಲಯವಾಗುವುದು. ಇಂತಹ ದೇವನನ್ನು ಮರೆ ಹೊಕ್ಕಿರುವೆವು.

೨೫. ಶ್ರೀಹರಿಯ ದಿವ್ಯಸ್ವರೂಪವು ನಿತ್ಯವಾದುದು. ಜನನ ಮೊದಲಾದ ಭಾವವಿಕಾರಗಳು ಅದಕ್ಕಿಲ್ಲ. ವೇದಗಳಿಂದ ಮಾತ್ರ ಆ ಸ್ವರೂಪವನ್ನು ತಿಳಿಯಬಹುದು ಎಂದು ಋಷಿಗಳು ಹೇಳುವರು. ಹರಿಯನ್ನಾಶ್ರಯಿಸಿದವರ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು. ಇಂತಹ ಹರಿಯನ್ನು ನಾವು ಶರಣು ಹೊಂದಿರುವೆವು.

೨೬. ಮಹಾಭೂತಗಳಲ್ಲಿ ಶ್ರೇಷ್ಠವಾದುದಾವುದು? ಎಂದು ಚರ್ಚಿಸಿ ನಿರ್ಣಯಿಸಲಾರದೆ ಈ ಋಷಿಗಳೆಲ್ಲರೂ ನಿನ್ನ ಬಳಿಗೆ ಬಂದಿರುವರು. ಓ ನಾರಾಯಣ, ಈ ವಿಷಯದಲ್ಲಿ ನಿಜವಾದ ನಿರ್ಣಯವನ್ನು ಹೇಳು.

ತ್ವಮಂತರಾತ್ಮಾಖಿಲದೇಹಭಾಜಾಂ
ತ್ವಮೇವ ಸರ್ವಂ ತ್ವಯಿ ಸರ್ವಮೀಶ ।
ತಥಾಪಿ ಜಾನಂತಿ ನ ಕೇಽಪಿ ಕುತ್ರಾ-
ಪ್ಯಹೋ ಭವಂತಂ ಪ್ರಕೃತಿಪ್ರಭಾವಾತ್ ।
ಅಂತರ್ಬಹಿಃ ಸರ್ವತ ಏವ ಸಂತಂ
ವಿಶ್ವಾತ್ಮನಾ ಸಂಪರಿವರ್ತಮಾನಂ ॥ ೨೭ ॥

॥ ಬ್ರಹ್ಮೋವಾಚ ॥

ತತಃ ಪ್ರಾಹ ಜಗದ್ಧಾತ್ರೀ ದೈವೀ ವಾಗಶರೀರಿಣೀ ॥ ೨೮ ॥

॥ ದೈವೀ ವಾಗುವಾಚ ॥

ಉಭಾವಾರಾಧ್ಯ ತಪಸಾ ಭಕ್ತ್ಯಾ ಚ ನಿಯಮೇನ ಚ ।
ಯಸ್ಯ ಸ್ಯಾತ್ಪ್ರಥಮಂ ಸಿದ್ಧಿಸ್ತದ್ಭೂತಂ ಜ್ಯೇಷ್ಠಮುಚ್ಯತೇ ॥ ೨೯ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಯಯುಃ ಸರ್ವೇ ಋಷಯೋ ಲೋಕಪೂಜಿತಾಃ ।
ಶ್ರಾಂತಾಃ ಖಿನ್ನಾಂತರಾತ್ಮಾನಃ ಪರಂ ವೈರಾಗ್ಯಮಾಶ್ರಿತಾಃ ॥ ೩೦ ॥

---

೨೭. ಓ ದೇವದೇವ, ಪ್ರಾಣಿಗಳೆಲ್ಲರ ಅಂತರಾತ್ಮನು ನೀನು. ಎಲ್ಲವೂ ನೀನೆ, ನಿನ್ನಲ್ಲಿ ಎಲ್ಲವೂ ಇದೆ. ಜಗತ್ತಿನಲ್ಲಿ ಒಳಗೆ ಹೊರಗೆ ಎಲ್ಲೆಡೆಯಲ್ಲಿಯೂ ವ್ಯಾಪಿಸಿರುವವನು ನೀನು. ಹೀಗಿದ್ದೂ ನಿನ್ನ ನಿಜರೂಪವನ್ನು ಯಾರೂ ತಿಳಿಯಲಾರದವರಾಗಿರುವರು, ಇದಕ್ಕೆ ಅಜ್ಞಾನವೇ ಕಾರಣವು ಎಂದು ಸ್ತುತಿಸುತ್ತಿರಲು,

೨೮. ಆಗ ಜಗನ್ಮಾತೆಯಾದ ವಾಗ್ದೇವತೆಯು ಅಶರೀರವಾಣಿಯಿಂದ ಹೀಗೆ ಹೇಳಿದಳು. (ಭಗವಂತನ ಮಾತು ಕೇಳಿಸಿತು).

೨೯. ಎಲೈ ಋಷಿಗಳೇ, ಅಗ್ನಿಜಲಗಳೆರಡನ್ನೂ ನೀವು ಭಕ್ತಿಶ್ರದ್ಧೆಗಳಿಂದ ಆರಾಧಿಸಿ. ಆಗ ಯಾವ ಭೂತವು ಮೊದಲು ಸಿದ್ಧಿಸುವುದೋ ಅದೇ ಶ್ರೇಷ್ಠವು ಎಂದಳು.

೩೦. ಹಾಗೆಯೇ ಆಗಲೆಂದು ಲೋಕವಂದ್ಯರಾದ ಆ ಋಷಿಗಳೆಲ್ಲರೂ ಬಳಲಿ ಆಯಾಸಗೊಂಡಿದ್ದು ವಿರಕ್ತರಾಗಿ ಅಲ್ಲಿಂದ ಹೊರಟು,

ಸರ್ವಲೋಕೈಕಜನನೀಂ ಭುವನತ್ರಯಪಾವನೀಂ ।
ಗೌತಮೀಮಾಗಮನ್ಸರ್ವೇ ತಪಸ್ತಪ್ತುಂ ಯತವ್ರತಾಃ

ಅಬ್ದೈವತಂ ತಥಾಗ್ನಿಂ ಚ ಪೂಜನಾಯೋದ್ಯತಾಸ್ತದಾ ।
ಅಗ್ನೇಶ್ಚ ಪೂಜಕಾ ಯೇ ಚ ಅಪಾಂ ವೈ ಪೂಜನೇ ಸ್ಥಿತಾಃ ।
ತತ್ರ ವಾಗಬ್ರವೀದ್ದೈವೀ ವೇದಮಾತಾ ಸರಸ್ವತೀ ॥ ೩೨ ॥

॥ ದೈವೀ ವಾಗುವಾಚ ॥

ಅಗ್ನೇರಾಪಸ್ತಥಾ ಯೋನಿರದ್ಭಿಃ ಶೌಚಮವಾಪ್ಯತೇ ।
ಅಗ್ನೇಶ್ಚ ಪೂಜಕಾ ಯೇ ಚ ವಿನಾದ್ಭಿಃ ಪೂಜನಂ ಕಥಂ ॥ ೩೩ ॥

ಅಪ್ಸು ಜಾತಾಸು ಸರ್ವತ್ರ ಕರ್ಮಣ್ಯಧಿಕೃತೋ ಭವೇತ್ ।
ತಾವತ್ಕರ್ಮಣ್ಯನರ್ಹೋ(s)ಯಮಶುಚಿರ್ಮಲಿನೋ ನರಃ ॥ ೩೪ ॥

---

೩೧. ಜಗನ್ಮಾತೆಯೂ ಲೋಕಪಾವನಳೂ ಆದ ಗೌತಮೀನದಿಯ ಬಳಿಗೆ ತಪಸ್ಸು ಮಾಡಲೋಸುಗ ಬಂದರು.

೩೨. ಆ ಗೌತಮೀ ತೀರದಲ್ಲಿ ಋಷಿಗಳಲ್ಲಿ ಕೆಲವರು ಅಗ್ನಿಯನ್ನೂ ಮತ್ತೆ ಕೆಲವರು ಜಲದೇವತೆಯನ್ನೂ ಪೂಜಿಸಿದರು. ಮೊದಲು ಪೂಜಾಂಗವಾಗಿ ಜಲಪೂಜೆಯನ್ನು ಮಾಡತೊಡಗಿದರು. ಆಗ ವೇದಮಾತೆಯಾದ ವಾಗ್ದೇವತೆಯು ಇಂತೆಂದಳು.

೩೩. ಅಗ್ನಿಗೆ ಜಲವು ಕಾರಣವು. ಜಲದಿಂದಲೇ ಶರೀರಶುದ್ಧಿಯಾಗುವುದು. ಅಗ್ನಿಯನ್ನು ಪೂಜಿಸುವವರೂ ಸಹ ಜಲವಿಲ್ಲದೇ ಪೂಜಿಸಲು ಸಾಧ್ಯವಿಲ್ಲ.

೩೪. ನೀರು ಜನಿಸಿದ (ಲಭಿಸಿ) ಮೇಲೆಯೇ ಕರ್ಮದಲ್ಲಿ ಅಧಿಕಾರವು ಲಭಿಸುವುದು. ಜಲಶುದ್ಧಿಯಾಗದಿದ್ದರೆ ಮಾನವನು ಅಶುಚಿಯು. ಅವನಿಗೆ ಕರ್ಮಾಧಿಕಾರವಿಲ್ಲ.

ನ ಮಗ್ನಃ ಶ್ರದ್ಧಯಾ ಯಾವದಪ್ಸು ಶೀತಾಸು ವೇದವಿತ್ ।
ತಸ್ಮಾದಾಪೋ ವರಿಷ್ಠಾಃ ಸ್ಯುರ್ಮಾತೃಭೂತಾ ಯತಃ ಸ್ಮೃತಾಃ ।
ತಸ್ಮಾಜ್ಜ್ಯೈಷ್ಠ್ಯಮಪಾಮೇವ ಜಸನ್ಯೋಽಗ್ನೇರ್ವಿಶೇಷತಃ ॥ ೩೫ ॥

॥ ಬ್ರಹ್ಮೋವಾಚ ॥

ಏತದ್ವಚಃ ಶುಶ್ರುವುಸ್ತೇ ಋಷಯೋ ವೇದವಾದಿನಃ ।
ನಿಶ್ಚಯಂ ಚ ತತಶ್ಚಕ್ರುರ್ಭವೇಜ್ಜ್ಯೈಷ್ಠ್ಯಮಪಾಮಿತಿ ॥ ೩೬ ॥

ಯತ್ರ ತೀರ್ಥೇ ವೃತ್ತಮಿದಮೃಷಿಸತ್ರೇ ಚ ನಾರದ ।
ತಪಸ್ತೀರ್ಥಂ ತು ತತ್ಪ್ರೋಕ್ತಂ ಸತ್ರತೀರ್ಥಂ ತದುಚ್ಯತೇ ॥ ೩೭ ॥

ಅಗ್ನಿತೀರ್ಥಂ ಚ ತತ್ಪ್ರೋಕ್ತಂ ತಥಾ ಸಾರಸ್ವತಂ ವಿದುಃ ।
ತೇಷು ಸ್ನಾನಂ ಚ ದಾನಂ ಚ ಸರ್ವಕಾಮಪ್ರದಂ ಶುಭಂ ॥ ೩೮ ॥

---

೩೫. ನೀರಿನಲ್ಲಿ ಶ್ರದ್ಧೆಯಿಂದ ಸ್ನಾನಮಾಡಿದರೆ ಶರೀರ ಶುದ್ಧಿಯಾಗುವುದು. ಆಗ ಕರ್ಮದಲ್ಲಿ ಅಧಿಕಾರಬರುವುದು. ಜಲದಿಂದಲೇ ಅಗ್ನಿಯುಂಟಾಗುವುದು. ಆದುದರಿಂದ ಜಲವೇ ಶ್ರೇಷ್ಠವು.

೩೬. ಈ ಅಶರೀರವಾಣಿಯನ್ನು ವೇದವಾದಿಗಳಾದ ಋಷಿಗಳು ಕೇಳಿ ಜಲವೇ ಶ್ರೇಷ್ಠವೆಂದು ನಿರ್ಣಯಿಸಿಕೊಂಡರು.

೩೭. ಯಾವ ತೀರ್ಥದಲ್ಲಿ ಈ ವಾದವು ನಡೆಯಿತೋ ಅದು ಸತ್ರತೀರ್ಥವೆಂದು ಪ್ರಸಿದ್ಧವಾಯಿತು. ಅಲ್ಲಿ ಋಷಿಗಳು ಸತ್ರ (ಯಾಗ) ಗಳನ್ನು ನಡೆಸುತ್ತಿದ್ದುದರಿಂದ ಸತ್ರತೀರ್ಥವೆಂದೂ ತೀರ್ಥಕ್ಕೆ ಹೆಸರಾಯಿತು.

೩೮-೩೯. ಮತ್ತು ಅಗ್ನಿತೀರ್ಥವೆಂದೂ ಸಾರಸ್ವತತೀರ್ಥವೆಂದೂ ಬೇರೆ ಬೇರೆ ತೀರ್ಥಗಳು ಅಲ್ಲಿರುವುವು. ಈ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಇಷ್ಟಾರ್ಥಗಳೆಲ್ಲವೂ ಲಭಿಸುವುವು. ಆ ಸ್ಥಳದಲ್ಲಿ ಒಟ್ಟು ಸಾವಿರದನಾನೂರು

ಚತುರ್ದಶ ಶತಾನ್ಯತ್ರ ತೀರ್ಥಾನಾಂ ಪುಣ್ಯದಾಯಿನಾಂ ।
ತೇಷು ಸ್ನಾನಂ ಚ ದಾನಂ ಚ ಸ್ವರ್ಗಮೋಕ್ಷಪ್ರದಾಯಕಂ ॥ ೩೯ ॥

ಕೃತಂ ಸಂದೇಹಹರಣಮೃಷೀಣಾಂ ಯತ್ರ ಭಾಷಯಾ ।
ಸರಸ್ವತ್ಯಭವತ್ತತ್ರ ಗಂಗಯಾ ಸಂಗತಾ ನದೀ ।
ಮಾಹಾತ್ಮ್ಯಂ ತಸ್ಯ ಕೋ ವಕ್ತುಂ ಸಂಗಮಸ್ಯ ಕ್ಷಮೋ ನರಃ ॥ ೪೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ತಪಸ್ತೀರ್ಥಾದಿಚತುರ್ದಶಶತತೀರ್ಥವರ್ಣನಂ ನಾಮ
ಷಡ್ವಿಂಶಾಧಿಕಶತತಮೋಽಧ್ಯಾಯಃ

(1400) ಪುಣ್ಯತೀರ್ಥಗಳಿರುವುವು. ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಆಚರಿಸಿದರೆ ಸ್ವರ್ಗಮೋಕ್ಷಗಳೆರಡೂ ಲಭಿಸುವುವು.

೪೦. ಸಾಕ್ಷಾತ್ ಸರಸ್ವತಿಯೇ ಆಕಾಶವಾಣಿಯಿಂದ ಆ ತೀರ್ಥದಲ್ಲಿ ಋಷಿಗಳ ಸಂಶಯುವನ್ನು ಹೋಗಲಾಡಿಸಿದಳು. ಆಮೇಲಾ ದೇವಿಯು ನದಿಯಾಗಿ ಸರಸ್ವತೀನದಿಯ ರೂಪದಿಂದ ಹರಿದು ಗೌತಮೀನದಿಯಲ್ಲಿ ಸೇರಿದಳು. ಈ ಸರಸ್ವತೀಗೌತಮಿಗಳ ಸಂಗಮಸ್ಥಳದ ಮಾಹಾತ್ಮ್ಯವನ್ನು ಯಾವನೂ ಸಂಪೂರ್ಣವಾಗಿ ವರ್ಣಿಸಲಾರನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ತಪ್ತತೀರ್ಥವೇ ಮೊದಲಾದ ಸಾವಿರದ ನಾನೂರು
ತೀರ್ಥಗಳ ವರ್ಣನವೆಂಬ ನೂರಿಪ್ಪತಾರನೆಯ
ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಐವತ್ತೇಳನೆಯ ಅಧ್ಯಾಯವು

श्रीः

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಸಪ್ತವಿಂಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ದೇವತೀರ್ಥಮಿತಿ ಖ್ಯಾತಂ ಗಂಗಾಯಾ ಉತ್ತರೇ ತಟೇ ।
ತಸ್ಯ ಪ್ರಭಾವಂ ವಕ್ಷ್ಯಾಮಿ ಸರ್ವಪಾಪಪ್ರಣಾಶನಂ ॥ ೧ ॥

ಆರ್ಷ್ಟಿಷೇಣ ಇತಿ ಖ್ಯಾತೋ ರಾಜಾ ಸರ್ವಗುಣಾನ್ವಿತಃ ।
ತಸ್ಯ ಭಾರ್ಯಾ ಜಯಾ ನಾಮ ಸಾಕ್ಷಾಲ್ಲಕ್ಷ್ಮೀರಿವಾಪರಾ ॥ ೨ ॥

ತಸ್ಯ ಪುತ್ರೋ ಭರೋ ನಾಮ ಮತಿಮಾನ್ಪಿತೃವತ್ಸಲಃ ।
ಧನುರ್ವೇದೇ ಚ ವೇದೇ ಚ ನಿಷ್ಣಾತೋ ದಕ್ಷ ಏವ ಚ ॥ ೩ ॥

ನೂರಿಪ್ಪತ್ತೇಳನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಗಂಗಾನದಿಯ ಉತ್ತರತೀರದಲ್ಲಿ ದೇವತೀರ್ಥವಿರುವುದು. ಆ ತೀರ್ಥದ ಪಾಪಹರವಾದಂತಹ ಮಾಹಾತ್ಮ್ಯವನ್ನು ಹೇಳುವೆನು.

೨. ಹಿಂದೆ ಆರ್ಷ್ಟಿಷೇಣನೆಂಬ ಸುಗುಣಿಯಾದ ರಾಜನಿದ್ದನು. ಜಯೆಯೆಂಬುವಳು ಅವನ ರಾಣಿಯು. ಅವಳು ಸಾಕ್ಷಾತ್ ಲಕ್ಷ್ಮಿಯಂತಿದ್ದಳು.

೩. ಆ ರಾಜನಿಗೆ ಭರನೆಂಬ ಮಗನಿದ್ದನು. ಅವನು ಬುದ್ಧಿವಂತನೂ ಪಿತೃಭಕ್ತನೂ ಆಗಿದ್ದನು. ಧನುರ್ವೇದ ಮತ್ತು ವೇದಗಳಲ್ಲಿ ಪಾರಂಗತನಾಗಿದ್ದು ಶೂರನಾಗಿದ್ದನು. ಆ ಭರನಿಗೆ ಸುಪ್ರಭೆಯೆಂಬ ರೂಪವತಿಯಾದ ಹೆಂಡತಿಯಿದ್ದಳು.

ತಸ್ಯ ಭಾರ್ಯಾ ರೂಪವತೀ ಸುಪ್ರಭೇತ್ಯಭಿವಿಶ್ರುತಾ ।
ಆರ್ಷ್ಟಿಷೇಣಸ್ತತೋ ರಾಜಾ ಪುತ್ರೇ ರಾಜ್ಯಂ ನಿವೇಶ್ಯ ಸಃ

ಪುರೋಧಸಾ ಚ ಮುಖ್ಯೇನ ದೀಕ್ಷಾಂ ಚಕ್ರೇ ನರೇಶ್ವರಃ ।
ಸರಸ್ವತ್ಯಾಸ್ತತಸ್ತೀರೇ ಹಯಮೇಧಾಯ ಯತ್ನವಾನ್ ॥ ೫ ॥

ಋತ್ವಿಗ್ಭಿರ್ಋಷಿಮುಖ್ಯೈಶ್ಚ ವೇದಶಾಸ್ತ್ರಪರಾಯಣೈಃ ।
ದೀಕ್ಷಿತಂ ತಂ ನೃಪಶ್ರೇಷ್ಠಂ ಬ್ರಾಹ್ಮಣಾಗ್ನಿಸಮಿಾಪತಃ ॥ ೬ ॥

ಮಿಥುರ್ದಾನವರಾಟ್ಕ್ರೂರಃ ಪಾಪಬುದ್ಧಿಃ ಪ್ರತಾಪವಾನ್ ।
ಮಖಂ ವಿಧ್ವಸ್ಯ ನೃಪತಿಂ ಸಭಾರ್ಯಂ ಸಪುರೋಹಿತಂ ॥ ೭ ॥

ಆದಾಯ ವೇಗಾತ್ಸ ಪ್ರಾಗಾದ್ರಸಾತಲತಲಂ ಮುನೇ ।
ನೀತೇ ತಸ್ಮಿನ್ನೃಪವರೇ ಯಜ್ಞೇ ನಷ್ಟೇ ತತೋಽಮರಾಃ ॥ ೮ ॥

---

೪. ಒಂದುಸಾರಿ ಆರ್ಷ್ಟಿಷೇಣರಾಜನು ರಾಜ್ಯಭಾರವನ್ನು ಪುತ್ರನಿಗೊಪ್ಪಿಸಿ ಪುರೋಹಿತನೊಡನೆ ಯಜ್ಞದೀಕ್ಷೆಯನ್ನು ಕೈಗೊಂಡನು.

೫. ಆಮೇಲಾ ರಾಜನು ಸರಸ್ವತೀನದಿಯ ತೀರದಲ್ಲಿ ಋತ್ವಿಜರಾದ ವೇದಶಾಸ್ತ್ರಪಂಡಿತರಾದ ಋಷಿಗಳೊಡನೆ ಅಶ್ವಮೇಧಯಾಗವನ್ನು ಪ್ರಾರಂಭಿಸಿದನು.

೬-೭. ಬ್ರಾಹ್ಮಣ ಮತ್ತು ಅಗ್ನಿಗಳ ಸಮ್ಮುಖದಲ್ಲಿ ದೀಕ್ಷಿತನಾದ ಆ ರಾಜನ ಯಾಗವನ್ನು ಕ್ರೂರನೂ ಪಾಪಿಯೂ ಆದ ಮಿಥುವೆಂಬ ದಾನವ ರಾಕ್ಷಸನು ಧ್ವಂಸಮಾಡಿ ಆ ರಾಜನನ್ನೂ ಅವನ ಪತ್ನಿಪುರೋಹಿತರೊಡನೆ ಅಪಹರಿಸಿಕೊಂಡು ಪಾತಾಳಕ್ಕೆ ತೆರಳಿದನು.

೮. ರಾಜನು ಹೀಗೆ ಅಪಹರಿಸಲ್ಪಟ್ಟು ಯಜ್ಞವು ಹಾಳಾಗಲು ದೇವತೆಗಳೂ ಋತ್ವಿಜರೂ ತಮ್ಮತಮ್ಮ ಸ್ಥಾನಗಳಿಗೆ ತೆರಳಿದರು.

ಋತ್ವಿಜಶ್ಚ ಯಯುಃ ಸರ್ವೇ ಸ್ವಂ ಸ್ವಂ ಸ್ಥಾನಂ ಮಖಾತ್ತತಃ ।
ಪುರೋಹಿತಸುತೋ ರಾಜ್ಞೋ ದೇವಾಪಿರಿತಿ ವಿಶ್ರುತಃ ॥ ೯ ॥

ಬಾಲಸ್ತಾಂ ಮಾತರಂ ದೃಷ್ಟ್ವಾ ಆತ್ಮನಃ ಪಿತರಂ ನ ಚ ।
ದೃಷ್ಟ್ವಾ ಸವಿಸ್ಮಯೋ ಭೂತ್ವಾ ದುಃಖಿತೋಽತೀವ ಚಾಭವತ್ ॥ ೧೦ ॥

ಸ ಮಾತರಂ ತು ಪಪ್ರಚ್ಛ ಪಿತಾ ಮೇ ಕ್ವ ಗತೋಽಂಬಿಕೇ ।
ಪಿತೃಹೀನೋ ನ ಜೀವೇಯಂ ಮಾತಃ ಸತ್ಯಂ ವದಸ್ವ ಮೇ ॥ ೧೧ ॥

ಧಿಗ್ಧಿಕ್ಪಿತೃವಿಹೀನಾನಾಂ ಜೀವಿತಂ ಪಾಪಕರ್ಮಣಾಂ ।
ನ ವಕ್ಷಿ ಯದಿ ಮೇ ಮಾತರ್ಜಲಮಗ್ನಿಮಥಾವಿಶೇ ॥ ೧೨ ॥

ಪುತ್ರಂ ಪ್ರೋವಾಚ ಸಾ ಮಾತಾ ರಾಜ್ಞೋ ಭಾರ್ಯಾ ಪುರೋಧಸಃ ।
ದಾನವೇನ ತಲಂ ನೀತೋ ರಾಜ್ಞಾ ಸಹ ಪಿತಾ ತವ ॥ ೧೩ ॥

॥ ದೇವಾಪಿರುವಾಚ ॥

ಕ್ವ ನೀತಃ ಕೇನ ವಾ ನೀತಃ ಕಥಂ ನೀತಃ ಕ್ವ ಕರ್ಮಣಿ ।
ಕೇಷು ಪಶ್ಯತ್ಸು ಕಿಂ ಸ್ಥಾನಂ ದಾನವಸ್ಯ ವದಸ್ವ ಮೇ ॥ ೧೪ ॥

೯-೧೦. ಆ ರಾಜನ ಪುರೋಹಿತನಿಗೆ ದೇವಾಪಿಯೆಂಬ ಮಗನಿದ್ದನು. ಅವನಿನ್ನೂ ಬಾಲಕನಾಗಿದ್ದನು. ಆ ಕುಮಾರನು ತಾಯಿಯನ್ನು ಮಾತ್ರ ನೋಡಿ ತಂದೆಯು ಇಲ್ಲದುದನ್ನು ತಿಳಿದು ಆಶ್ಚರ್ಯಗೊಂಡು ವ್ಯಥೆಪಟ್ಟನು.

೧೧-೧೨. ಆ ದೇವಾಪಿಯು ತಾಯಿಯನ್ನು ಕುರಿತು ಓ ಮಾತೆ, ನನ್ನ ತಂದೆಯು ಎಲ್ಲಿಗೆ ಹೋಗಿರುವನು? ಹೇಳು. ತಂದೆಯಿಲ್ಲದ ಪಾಪಿಗಳ ಬಾಳು ಒಂದು ಬಾಳೇ? ತಂದೆಯಿಲ್ಲದೆ ನಾನು ಜೀವಿಸಿರಲಾರೆನು. ನಿಜವನ್ನು ನೀನು ಹೇಳದಿದ್ದರೆ ಜಲವನ್ನಾಗಲೀ ಅಗ್ನಿಯನ್ನಾಗಲೀ ಪ್ರವೇಶಿಸುವೆನು ಎನ್ನಲು,

೧೩. ಆಗ ಅವನ ತಾಯಿಯು—ಎಲೈ ಕುಮಾರ, ನಿನ್ನ ತಂದೆಯನ್ನೂ ರಾಜದಂಪತಿಗಳನ್ನೂ ಓರ್ವ ದಾನವನು ಪಾತಾಳಕ್ಕೆ ಒಯ್ದಿರುವನು ಎನ್ನಲು,

೧೪. ಅದನ್ನು ಕೇಳಿ-ದಾನವನು ನಮ್ಮ ತಂದೆಯನ್ನು ಎಲ್ಲಿಗೆ ಹೇಗೆ ಒಯ್ದನು? ಯಾವ ಸ್ಥಳದಲ್ಲಿ? ನೋಡಿದವರು ಯಾರು? ದಾನವನು ಇರುವ ಸ್ಥಳವು ಯಾವುದು? ಹೇಳು ಎಂದನು.

॥ ಮಾತೋವಾಚ ॥

ದೀಕ್ಷಿತಂ ಯಜ್ಞಸದಸಿ ಸಭಾರ್ಯಂ ಸಪುರೋಧಸಂ ।
ರಾಜಾನಂ ತಂ ಮಿಥುರ್ದೈತ್ಯೋ ನೀತವಾನ್ಸ ರಸಾತಲಂ ।
ಪಶ್ಯತ್ಸು ದೇವಸಂಘೇಷು ವಹ್ನಿಬ್ರಾಹ್ಮಣಸಂನಿಧೌ ॥ ೧೫ ॥

॥ ಬ್ರಹ್ಮೋವಾಚ ॥

ತನ್ಮಾತೃವಚನಂ ಶ್ರುತ್ವಾ ದೇವಾಪಿಃ ಕೃತ್ಯಮುಸ್ಮರತ್ ।
ದೇವಾನ್ಪಶ್ಯೇಽಥವಾಗ್ನಿಂ ವಾ ಋತ್ವಿಜೋ ವಾಸುರಾಂಸ್ತಥಾ ॥ ೧೬ ॥

ಏತೇಷ್ವೇವ ಪಿತಾನ್ವೇಷ್ಯೋ ನಾನ್ಯತ್ರೇತಿ ಮತಿರ್ಮಮ ।
ಇತಿ ನಿಶ್ಚಿತ್ಯ ದೇವಾಪಿರ್ಭರಂ ಪ್ರಾಹ ನೃಪಾತ್ಮಜಂ ॥ ೧೭ ॥

॥ ದೇವಾಪಿರುವಾಚ ॥

ತಪಸಾ ಬ್ರಹ್ಮಚರ್ಯೇಣ ವ್ರತೇನ ನಿಯಮೇನ ಚ ।
ಆನೇತವ್ಯಾ ಮಯಾ ಸರ್ವೇ ನೀತಾ ಯೇ ಚ ರಸಾತಲಂ ॥ ೧೮ ॥

---

೧೫. ತಾಯಿಯು ಎಲೈ ಕುಮಾರ, ಯಜ್ಞದಲ್ಲಿ ದೀಕ್ಷಿತನಾದ ರಾಜನನ್ನೂ ಪುರೋಹಿತನನ್ನೂ ರಾಣಿಯನ್ನೂ ಮಿಥುದೈತ್ಯನು ಪಾತಾಳಕ್ಕೆ ಅಪಹರಿಸಿಕೊಂಡು ಹೋದನು. ದೇವತೆಗಳೂ ಬ್ರಾಹ್ಮಣರೂ ನೋಡುತ್ತಿದ್ದರು ಎಂದಳು.

೧೬. ತಾಯಿಯ ಆ ಮಾತನ್ನು ಕೇಳಿ, ದೇವಾಪಿಯು ಹೀಗೆ ನಿಶ್ಚಯಿಸಿದನು. ದೇವತೆಗಳು, ಅಗ್ನಿ, ಋತ್ವಿಜರು, ದೈತ್ಯರು ಇವರನ್ನಾದರೂ ನೋಡುವೆನು.

೧೭. ಈ ಜನಗಳಲ್ಲಿಯೇ ನನ್ನ ತಂದೆಯನ್ನು ಅರಸಬೇಕು ಎಂದ ನಿಶ್ಚಯಿಸಿ ದೇವಾಪಿಯು ರಾಜಕುಮಾರನಾದ ಭರನನ್ನು ಕುರಿತು,

೧೮. ಎಲೈ ರಾಜಕುಮಾರ, ದೈತ್ಯನು ರಸಾತಲಕ್ಕೊಯ್ದವರನ್ನು ನಾನು ತಪಸ್ಸು ಬ್ರಹ್ಮಚರ್ಯವ್ರತನಿಯಮಗಳಿಂದ ಕರೆತರಬೇಕು.

ಜಾತೇ ಪರಾಭವೇ ಘೋರೇ ಯೋ ನ ಕುರ್ಯಾತ್ಪ್ರತಿಕ್ರಿಯಾಂ ।
ನರಾಧಮೋನ ಕಿಂ ತೇನ ಜೀವತಾ ವಾ ಮೃತೇನ ವಾ ॥ ೧೯ ॥

ತ್ವಂ ಪ್ರಶಾಧಿ ಮಹೀಂ ಕೃತ್ಸ್ನಾಮಾರ್ಷ್ಟಿಷೇಣಃ ಪಿತಾ ಯಥಾ ।
ಮಾತಾ ಮಮ ತ್ವಯಾ ಪಾಲ್ಯಾ ರಾಜನ್ಯಾವನ್ಮಮಾಗತಿಃ ।
ಭವೇಚ್ಚ ಕೃತಕಾರ್ಯಸ್ಯ ಅನುಜಾನೀಹಿ ಮಾಂ ಭರ ॥ ೨೦ ॥

॥ ಬ್ರಹ್ಮೋವಾಚ ॥
ಭರೇಣೋಕ್ತಃ ಸ ದೇವಾಪಿಃ ಸರ್ವಂ ನಿಶ್ಚಿತ್ಯ ಯತ್ನತಃ ॥ ೨೧ ॥

॥ ಭರ ಉವಾಚ ॥
ಸಿದ್ಧಿಂ ಕುರು ಸುಖಂ ಯಾಹಿ ಮಾ ಚಿಂತಾಮಲ್ಪಿಕಾಂ ಭಜ ॥ ೨೨ ॥

॥ ಬ್ರಹ್ಮೋವಾಚ ॥
ತತೋ ದೇವಾಪಿರಮರರಾಜಾಂಘ್ರಿಧ್ಯಾನತತ್ಪರಃ ।
ಋತ್ವಿಜೋऽನ್ವೇಷ್ಯ ಯತ್ನೇನ ನತ್ವಾ ತಾನೃತ್ವಿಜಃ ಪೃಥಕ್ ।
ಕೃತಾಂಜಲಿಪುಟೋ ಬಾಲೋ ದೇವಾಪಿರ್ವಾಕ್ಯಮಬ್ರವೀತ್ ॥ ೨೩ ॥

---

೧೯. ಪರಾಭವವನ್ನು ಹೊಂದಿ ಅದಕ್ಕೆ ತಕ್ಕ ಪ್ರತೀಕಾರವನ್ನು ಮಾಡದ ನರಾಧಮನು ಬದುಕಿದ್ದರೂ ಸತ್ತರೂ ಒಂದೇ.

೨೦. ಎಲೈ ಭರಕುಮಾರ, ನಿನ್ನ ತಂದೆಯಾದ ಆರ್ಷ್ಟಿಷೇಣನಂತೆ ನ್ಯಾಯದಿಂದ ನೀನು ರಾಜ್ಯವನ್ನು ಪಾಲಿಸು. ಆದರೆ ನಾನು ತಿರುಗಿ ಬರುವವರೆಗೆ ನನ್ನ ತಾಯಿಯನ್ನು ನೀನು ರಕ್ಷಿಸುತ್ತಿರಬೇಕು. ಮುಂದಿನ ಕಾರ್ಯಕ್ಕೆ ನನಗನುಮತಿಯನ್ನು ಕೊಡು ಎಂದನು.

೨೧. ಆಗ ಭರಕುಮಾರನು ಆಲೋಚಿಸಿ ದೇವಾಪಿಯನ್ನು ಕುರಿತು,

೨೨. ಎಲೈ ದೇವಾಪಿ, ಕಾರ್ಯಸಿದ್ಧಿಯನ್ನು ಪಡೆದು ಬಾ, ಹೋಗು. ತಾಯಿಯ ವಿಷಯದಲ್ಲಿ ಏನೂ ಚಿಂತಿಸಬೇಡ ಎಂದನು.

೨೩. ಆಮೇಲೆ ದೇವಾಪಿಯು ದೇವದೇವನನ್ನು ಧ್ಯಾನಿಸುವವನಾಗಿ ಋತ್ವಿಜರನ್ನು ಹುಡುಕಿ ಅವರ ಬಳಿಗೆ ಬೇರೆಬೇರೆಯಾಗಿ ಹೋಗಿ ಅಂಜಲಿಯನ್ನು ಧರಿಸಿ ವಿನಯದಿಂದ,

॥ ದೇವಾಪಿರುವಾಚ ॥

ಭವದ್ಭಿಶ್ಚ ಮುಖೋ ರಕ್ಷ್ಯೋ ಯಜಮಾನಶ್ಚ ದೀಕ್ಷಿತಃ ।
ಪುರೋಧಾಶ್ಚ ತಥಾ ರಕ್ಷ್ಯಃ ಪತ್ನೀ ಯಾ ದೀಕ್ಷಿತಸ್ಯ ತು ॥ ೨೪ ॥

ಭವತ್ಸು ತತ್ರ-ಪಶ್ಯತ್ಸು ಯಜ್ಞಂ ವಿಧ್ವಸ್ಯ ದೈತ್ಯರಾಟ್ ।
ರಾಜಾದಯಸ್ತೇನ ನೀತಾಸ್ತನ್ನ ಯುಕ್ತತಮಂ ಭವೇತ್ ॥ ೨೫ ॥

ಅಥಾಪ್ಯೇತದಹಂ ಮನ್ಯೇ ಭವಂತಸ್ತಾನರೋಗಿಣಃ ।
ದಾತುಮರ್ಹಂತಿ ತಾನ್ಸರ್ವಾನನ್ಯಥಾ ಶಾಪಮರ್ಹಥ ॥ ೨೬ ॥

॥ ಋತ್ವಿಜ ಊಚುಃ ॥

ಮುಖೇऽಗ್ನಿಃ ಪ್ರಥಮಂ ಪೂಜ್ಯೋ ಹ್ಯಗ್ನಿರೇವಾತ್ರ ದೈವತಂ ।
ತಸ್ಮಾದ್ವಯಂ ನ ಜಾನೀಮೋ ಹ್ಯಗ್ನೀನಾಂ ಪರಿಚಾರಕಾಃ ॥ ೨೭ ॥

ಸ ಏವ ದಾತಾ ಭೋಕ್ತಾ ಚ ಹರ್ತಾ ಕರ್ತಾ ಚ ಹವ್ಯವಾಟ್ ॥ ೨೮ ॥

---

೨೪. ಓ ಋತ್ವಿಜರೇ, ಯಜ್ಞಶಾಲೆಯಲ್ಲಿ ನೀವು ಯಜ್ಞವನ್ನೂ ದೀಕ್ಷಿತನಾದ ಯಜಮಾನನನ್ನೂ ಯಜಮಾನಪತ್ನಿಯನ್ನೂ ಪುರೋಹಿತನನ್ನೂ ಪ್ರಯತ್ನದಿಂದ ರಕ್ಷಿಸಬೇಕು.

೨೫. ನೀವೆಲ್ಲರೂ ನೋಡುತ್ತಿದ್ದಂತೆಯೇ ದೈತ್ಯನೋರ್ವನು ಯಜ್ಞವನ್ನು ಹಾಳುಮಾಡಿ ದೀಕ್ಷಿತ ಮೊದಲಾದವರನ್ನು ಅಪಹರಿಸಿರುವನು. ಇದು ಯುಕ್ತವಲ್ಲ.

೨೬. ಆದರೂ ನಾನು ಈಗ ಹೇಳುವುದನ್ನು ಕೇಳಿ. ನೀವು ದೀಕ್ಷಿತ ಮೊದಲಾದವರನ್ನು ಸುರಕ್ಷಿತವಾಗಿ ಲಭಿಸುವಂತೆ ಮಾಡಿರಿ. ಇಲ್ಲದಿದ್ದರೆ ನಿಮ್ಮನ್ನು ಶಪಿಸುವೆನು ಎನ್ನಲು,

೨೭-೨೮. ಅದಕ್ಕೆ ಋತ್ವಿಜರು ಎಲೈ ಕುಮಾರ, ಯಾಗದಲ್ಲಿ ಅಗ್ನಿಯೇ ಶ್ರೇಷ್ಠನು, ಅಗ್ನಿಯೇ ದೇವನು. ಆದುದರಿಂದ ನಮಗೆ ತಿಳಿಯದು. ನಾವು ಅಗ್ನಿಯ ಪರಿಚಾರಕರು. ಅಗ್ನಿಯೇ ದಾತೃವು ಭೋಕ್ತೃವು ಅಪಹರಿಸುವವನೂ ಕರ್ತೃವೂ ಅವನೇ ಎಂದರು.

॥ ಬ್ರಹ್ಮೋವಾಚ ॥

ಋತ್ವಿಜಃ ಪೃಷ್ಠತಃ ಕೃತ್ವಾ ದೇವಾಪಿರ್ಜಾತವೇದಸಂ ।
ಪೂಜಯಿತ್ವಾ ಯಥಾನ್ಯಾಯಮಗ್ನಯೇ ತನ್ನ್ಯವೇದಯತ್ ॥ ೨೯ ॥

॥ ಅಗ್ನಿರುವಾಚ ॥

ಯಥರ್ತ್ವಿಜಸ್ತಥಾ ಚಾಹಂ ದೇವಾನಾಂ ಪರಿಚಾರಕಃ ।
ಹವ್ಯಂ ವಹಾಮಿ ದೇವಾನಾಂ ಭೋಕ್ತಾರೋ ರಕ್ಷಕಾಶ್ಚ ತೇ ॥ ೩೦ ॥

॥ ದೇವಾಪಿರುವಾಚ ॥

ದೇವಾನಾಹೂಯ ಯತ್ನೇನ ಹವಿರ್ಭಾಗಾನ್ಪೃಥಕ್ಪೃಥಕ್ ।
ದಾಸ್ಯೇಽಹಮೇಷ ದೋಷೋ ಮೇ ತಸ್ಮಾದ್ಯಾಹಿ ಸುರಾನ್ಪ್ರತಿ ॥ ೩೧ ॥

॥ ಬ್ರಹ್ಮೋವಾಚ ॥

ದೇವಾಪಿಃ ಸ ಸುರಾನ್ಪ್ರಾಪ್ಯ ನತ್ವಾ ತೇಭ್ಯಃ ಪೃಥಕ್ಪೃಥಕ್ ।
ಋತ್ವಿಗ್ವಾಕ್ಯಂ ಚಾಗ್ನಿವಾಕ್ಯಂ ಶಾಪಂ ಚಾಪಿ ನ್ಯವೇದಯತ್ ॥ ೩೨ ॥

---

೨೯. ಋತ್ವಿಜರನ್ನು ಬಿಟ್ಟು ದೇವಾಪಿಯು ಅಗ್ನಿಯ ಬಳಿಗೆ ಬಂದು ಅವನನ್ನು ವಿಧಿವತ್ತಾಗಿ ಪೂಜಿಸಿ ಋತ್ವಿಜರಿಗೆ ಹೇಳಿದಂತೆಯೇ ಅಗ್ನಿಗೆ ಹೇಳಿದನು.

೩೦. ಅದಕ್ಕೆ ಅಗ್ನಿಯು—ಋತ್ವಿಜರಂತೆ ನಾನೂ ದೇವತೆಗಳ ಪರಿಚಾರಕನು. ದೇವತೆಗಳಿಗೆ ಹವಿಸ್ಸನ್ನು ಹೊರುವೆನು. ಭೋಕ್ತೃಗಳೂ ರಕ್ಷಕರೂ ದೇವತೆಗಳು ಎಂದನು.

೩೧. ಪುನಃ ದೇವಾಪಿಯು ಅಗ್ನಿಯನ್ನು ಕುರಿತು, ಈಗ ನಾನು ದೇವತೆಗಳನ್ನು ಕರೆದು ಬೇರೆಬೇರೆಯಾಗಿ ಹವಿರ್ಭಾಗಗಳನ್ನು ಕೊಟ್ಟು ಈ ವಿಷಯದಲ್ಲಿ ಪ್ರಶ್ನಿಸುವೆನು. ಆದುದರಿಂದ ಎಲೈ ಅಗ್ನಿ, ಈಗ ನೀನು ಹೊರಟುಹೋಗು ಎಂದನು.

೩೨. ಆಮೇಲೆ ದೇವಾಪಿಯು ದೇವತೆಗಳ ಬಳಿಗೆ ಬಂದು ಬೇರೆಬೇರೆಯಾಗಿ ನಮಸ್ಕರಿಸಿ, ಋತ್ವಿಜರು ಮತ್ತು ಅಗ್ನಿ ಇವರ ಮಾತನ್ನೂ, ದೀಕ್ಷಿತನಾದ ರಾಜ ಮೊದಲಾದವರನ್ನು ರಕ್ಷಿಸದಿದ್ದರೆ ಶಾಪಕೊಡುವೆನೆಂದೂ ಹೇಳಿದನು.

॥ ದೇವಾ ಊಚುಃ ॥

ಆಹೂತಾ ವೈದಿಕೈರ್ಮಂತ್ರೈರೃತ್ವಿಗ್ಭಿಶ್ಚ ಯಥಾಕ್ರಮಮ್ ।
ಭೋಕ್ಷ್ಯಾಮಹೇ ಹವಿರ್ಭಾಗಾನ್ನ ಸ್ವತಂತ್ರಾ ದ್ವಿಜೋತ್ತಮ ॥ ೩೩ ॥

ತಸ್ಮಾದ್ವೇದಾನುಗಾ ನಿತ್ಯಂ ವಯಂ ವೇದೇನ ಚೋದಿತಾಃ ।
ಪರತಂತ್ರಾಸ್ತತೋ ವಿಪ್ರ ವೇದೇಭ್ಯಸ್ತನ್ನಿವೇದಯ ॥ ೩೪ ॥

॥ ಬ್ರಹ್ಮೋವಾಚ ॥

ಸ ದೇವಾಪಿಃ ಶುಚಿರ್ಭೂತ್ವಾ ವೇದಾನಾಹೂಯ ಯತ್ನತಃ ।
ಧ್ಯಾನೇನ ತಪಸಾ ಯುಕ್ತೋ ವೇದಾಶ್ಚಾಪಿ ಪುರೋಽಭವನ್ ॥ ೩೫ ॥

ವೇದಾನುವಾಚ ದೇವಾಪಿರ್ನಮಸ್ಯ ತು ಪುನಃ ಪುನಃ ।
ಋತ್ವಿಗ್ವಾಕ್ಯಂ ಚಾಗ್ನಿವಾಕ್ಯಂ ದೇವವಾಕ್ಯಂ ನ್ಯವೇದಯತ್ ॥ ೩೬ ॥

॥ ವೇದಾ ಊಚುಃ ॥

ಪರತಂತ್ರಾ ವಯಂ ತಾತ ಈಶ್ವರಸ್ಯ ವಶಾನುಗಾಃ ।
ಅಶೇಷಜಗದಾಧಾರೋ ನಿರಾಧಾರೋ ನಿರಂಜನಃ ॥ ೩೭ ॥

---

೩೩. ದೇವತೆಗಳಿಂತೆಂದರು—ಎಲೈ ಬ್ರಾಹ್ಮಣಕುಮಾರ, ಋತ್ವಿಜರು ವೇದಮಂತ್ರಗಳಿಂದ ಕ್ರಮವಾಗಿ ಕರೆದಂತೆ ನಾವು ಯಾಗಗಳಿಗೆ ಬಂದು ಹವಿರ್ಭಾಗಗಳನ್ನು ತೆಗೆದುಕೊಳ್ಳುವೆವು. ಯಾಗದ ವಿಷಯದಲ್ಲಿ ನಾವು ಸ್ವಂತಂತ್ರರಲ್ಲ.

೩೪. ನಾವು ವೇದಗಳನ್ನು ಅನುಸರಿಸಿ ನಡೆಯುವವರು. ವೇದಕ್ಕಧೀನರು. ಆದುದರಿಂದ ವೇದಗಳಿಗೇ ಈ ವಿಷಯವನ್ನು ತಿಳಿಸು ಎಂದರು.

೩೫. ಅಮೇಲೆ ದೇವಾಪಿಯು ಶುಚಿಯಾಗಿ ಧ್ಯಾನತಪಸ್ಸುಗಳನ್ನು ಮಾಡುತ್ತಾ ವೇದಗಳನ್ನುಪಾಸನೆಮಾಡಿ ಕರೆದನು. ವೇದಗಳು ದೇವಾಪಿಯ ಎದುರಿನಲ್ಲಿ ಆವಿರ್ಭವಿಸಿದುವು.

೩೬. ವೇದಗಳನ್ನು ಪುನಃಪುನಃ ನಮಸ್ಕರಿಸಿ ದೇವಾಪಿಯು, ಋತ್ವಿಜರು, ಅಗ್ನಿ, ದೇವತೆಗಳು ಇವರ ಮಾತುಗಳನ್ನು ಕ್ರಮವಾಗಿ ಹೇಳಿದನು.

೩೭–೩೮. ವೇದಗಳು ಹೇಳಿದುವು—ಎಲೈ ಕುಮಾರ, ನಾವು ಪರತಂತ್ರರು, ಈಶ್ವರನ ಅಧೀನರು ನಾವು. ಆ ಮಹೇಶ್ವರನು ಜಗತ್ತಿಗೆಲ್ಲಕ್ಕೂ

ಸರ್ವಶಕ್ತ್ಯೈಕಸದನಂ ನಿಧಾನಂ ಸರ್ವಸಂಪದಾಂ ।
ಸ ತು ಕರ್ತಾ ಮಹಾದೇವಃ ಸಂಹರ್ತಾ ಸ ಮಹೇಶ್ವರಃ ॥ ೩೮ ॥

ವಯಂ ಶಬ್ದಮಯಾ ಬ್ರಹ್ಮನ್ವದಾಮೋ ವಿದ್ಮ ನಿವ ಚ ।
ಅಸ್ಮಾಕಮೇತತ್ಕೃತ್ಯಂ ಸ್ಯಾದ್ವದಾಮೋ ಯತ್ತ್ವಂ ಪೃಚ್ಛಸಿ ॥ ೩೯ ॥

ಕೇನ ನೀತಾಸ್ತಸ್ಯ ನಾಮ ತತ್ಪುರಂ ತದ್ಬಲಂ ತಥಾ ।
ಭಕ್ಷಿತಾಃ ಕಿಂತು ನೋ ನಷ್ಟಾ ಏತಜ್ಜಾನೀಮಹೇ ವಯಂ ॥ ೪೦ ॥

ಯಥಾ ಚ ತವ ಸಾಮರ್ಥ್ಯಂ ಯಮಾರಾಧ್ಯ ಚ ಯತ್ರ ಚ ।
ಸ್ಯಾದಿತ್ಯೇತಚ್ಚ ಜಾನೀಮೋ ಯಥಾ ಪ್ರಾಪ್ಸ್ಯಸಿ ತಾನ್ಪುರಃ ॥ ೪೧ ॥

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾವದದ್ದೇವಾಪಿಶ್ಚಾರ್ಯ ಸುಚಿರಂ ಹೃದಿ ॥ ೪೨ ॥

ಆಧಾರನು. ಅವನಿಗಾಧಾರವಿಲ್ಲವು. ಜನ್ಮ ಮೊದಲಾದ ಭಾವವಿಕಾರವಿಲ್ಲದ ಶುದ್ಧವಸ್ತುವು ಅವನು. ನಿರ್ಗುಣನು. ಅವನಲ್ಲಿ ಶಕ್ತಿಗಳೆಲ್ಲವೂ ಇರುವುವು. ಐಶ್ವರ್ಯಗಳೆಲ್ಲವೂ ಇರುವುವು. ಅವನೇ ಜಗತ್ಕರ್ತನು. ಜಗತ್ಪಾಲಕನು, ಜಗತ್ತನ್ನು ಸಂಹರಿಸುವವನೂ ಅವನೇ.

೩೯. ಎಲೈ ಬ್ರಾಹ್ಮಣಕುಮಾರ, ನಾವು ಶಬ್ದರೂಪರು, ವಿಷಯವೆಲ್ಲವನ್ನೂ ಬಲ್ಲೆವು, ನೀನು ಕೇಳಿದುದನ್ನು ಹೇಳುವುದು ನಮ್ಮ ಕರ್ತವ್ಯವು.

೪೦. ನಿನ್ನ ರಾಜ ಮೊದಲಾದವರನ್ನು ಅಪಹರಿಸಿದವನಾವನು? ಅವನ ಪಟ್ಟಣವಾವುದು? ಬಲವೆಂತಹುದು? ನಿಮ್ಮವರು ಬದುಕಿರುವರೇ? ಇಲ್ಲವೇ? ಇದನ್ನು ನಾವು ಬಲ್ಲೆವು.

೪೧. ನಿನಗೆ ಸಾಮರ್ಥ್ಯವು ಹೇಗೆ ಬರುವುದು? ಯಾರನ್ನು ಆರಾಧಿಸಬೇಕು? ನಿಮ್ಮವರನ್ನು ಪಡೆಯುವುದು ಹೇಗೆ? ಇದೆಲ್ಲವನ್ನೂ ಬಲ್ಲೆವು ಬೇಕಾದರೆ ಹೇಳುವೆವು ಎಂದವು.

೪೨. ಈ ಮಾತನ್ನು ಕೇಳಿ ದೇವಾಪಿಯು ಮನಸ್ಸಿನಲ್ಲಿ ಆಲೋಚಿಸಿ—

॥ ದೇವಾಪಿರುವಾಚ ॥

ವೇದಾ ವದಂತ್ವೇತದೇವ ಸರ್ವಮೇವ ಯಥಾರ್ಥತಃ ।
ಸರ್ವಾನ್ಪ್ರಾಪ್ಸ್ಯೇ ತಲಂ ನೀತಾನಲಂ ತೇಭ್ಯೋ ನಮೋಽಸ್ತು ವಃ ॥ ೪೩ ॥

॥ ವೇದಾ ಊಚುಃ ॥

ಗೌತಮೀಂ ಗಚ್ಛ ದೇವಾಪೇ ತತ್ರ ಸ್ತುಹಿ ಮಹೇಶ್ವರಂ ।
ಸುಪ್ರಸನ್ನಸ್ತವಾಭೀಷ್ಟಂ ದಾಸ್ಯತ್ಯೇವ ಕೃಪಾಕರಃ ॥ ೪೪ ॥
ಭವೇದ್ದೇವಃ ಶಿವಃ ಪ್ರೀತಃ ಸ್ತುತಃ ಸತ್ಯಂ ಮಹಾಮತೇ ।
ಆರ್ಷ್ಟಿಷೇಣಶ್ಚ ನೃಪತಿಸ್ತಸ್ಯ ಜಾಯಾ ಜಯಾ ಸತೀ ॥ ೪೫ ॥
ಪಿತಾ ತವಾಪ್ಯುಪಮನ್ಯುಸ್ತಲೇ ತಿಷ್ಠಂತ್ಯರೋಗಿಣಃ ।
ವರದಾನಾನ್ಮಹೇಶಸ್ಯ ಮಧುಂ ಹತ್ವಾ ಚ ರಾಕ್ಷಸಂ ।
ಯಶಃ ಪ್ರಾಪ್ಸ್ಯಸಿ ಧರ್ಮಂ ಚ ಏತಚ್ಛಕ್ಯಂ ನ ಚೇತರತ್ ॥ ೪೬ ॥

॥ ಬ್ರಹ್ಮೋವಾಚ ॥

ತದ್ವೇದವಚನಾದ್ಬಾಲೋ ದೇವಾಪಿರ್ಗೌತಮೀಂ ಗತಃ ।
ಸ್ನಾತ್ವಾ ಕೃತಕ್ಷಣೋ ವಿಪ್ರಸ್ತುಷ್ಟಾವ ಚ ಮಹೇಶ್ವರಂ ॥ ೪೭ ॥

---

೪೩. ಓ ವೇದಗಳೇ, ನಿಜವಾದ ಸಮಾಚಾರವೆಲ್ಲವನ್ನೂ ಹೇಳಿರಿ. ನಿಮ್ಮ ಮಾತಿನಂತೆ ಆಚರಿಸಿ ಪಾತಾಳದಲ್ಲಿರುವ ನಮ್ಮವರನ್ನು ಪುನಃ ಪಡೆಯುವೆನು. ನಿಮಗೆ ನಮಸ್ಕಾರಗಳು ಎನ್ನಲು,

೪೪. ವೇದಗಳು ಮತ್ತೆ ಹೇಳಿದುವು—ಎಲೈ ದೇವಾಪಿ, ಗೌತಮೀ ನದಿಗೆ ಹೋಗಿ ಅಲ್ಲಿ ಮಹೇಶ್ವರನನ್ನು ಸ್ತುತಿಸು. ದಯಾಳುವಾದ ಆ ಶಿವನು ಸ್ತೋತ್ರದಿಂದ ಪ್ರಸನ್ನನಾಗಿ ನಿನ್ನ ಇಷ್ಟಾರ್ಥವನ್ನು ಕಲ್ಪಿಸಿಕೊಡುವನು.

೪೫. ಆರ್ಷ್ಟಿಷೇಣರಾಜನೂ ಅವನ ರಾಣಿಯಾದ ಜಯಾದೇವಿಯೂ ನಿನ್ನ ತಂದೆಯಾದ ಉಪಮನ್ಯುವೂ ಸಹ ಪಾತಾಳದಲ್ಲಿ ಕ್ಷೇಮದಿಂದಿರುವರು.

೪೬. ಮಹೇಶ್ವರನ ಅನುಗ್ರಹದಿಂದ ಮಧುರಾಕ್ಷಸನನ್ನು ಸಂಹರಿಸಲ್ಪಟ್ಟು ನಿನ್ನ ಇಷ್ಟಪ್ರಾಪ್ತಿಯಾಗುವುದು, ಯಶಸ್ಸೂ ಲಭಿಸುವುದು. ಇದು ಹೊರತು ಬೇರೆ ಉಪಾಯವೇ ಇಲ್ಲ ಎಂದವು.

೪೭. ವೇದಗಳ ಮಾತಿನಂತೆ ದೇವಾಪಿಯು ಗೌತಮೀನದಿಗೆ ಹೋಗಿ ಆ ನದಿಯಲ್ಲಿ ಸ್ನಾನಮಾಡಿ ಉಕ್ತಕಾಲದಲ್ಲಿ ಮಹೇಶ್ವರನನ್ನು ಹೀಗೆ ಸ್ತುತಿಸಿದನು.

॥ ದೇವಾಪಿರುವಾಚ ॥

ಬಾಲೋಽಹಂ ದೇವದೇವೇಶ ಗುರೂಣಾಂ ತ್ವಂ ಗುರುರ್ಮಮ ।
ನ ಮೇ ಶಕ್ತಿಸ್ತ್ವತ್ಸ್ತವನೇ ತುಭ್ಯಂ ಶಂಭೋ ನಮೋಽಸ್ತು ತೇ ॥ ೪೮ ॥

ನ ತ್ವಾಂ ಜಾನಂತಿ ನಿಗಮಾ ನ ದೇವಾ ಮುನಯೋ ನ ಚ ।
ನ ಬ್ರಹ್ಮಾ ನಾಪಿ ವೈಕುಂಠೋ ಯೋಽಸಿ ಸೋಽಸಿ ನಮೋಽಸ್ತು ತೇ ॥೪೯॥

ಯೇಽನಾಥಾ ಯೇ ಚ ಕೃಪಣಾ ಯೇ ದರಿದ್ರಾಶ್ಚ ರೋಗಿಣಃ ।
ಪಾಪಾತ್ಮಾನೋ ಯೇ ಚ ಲೋಕೇ ತಾಂಸ್ತ್ವಂ ಪಾಸಿ ಮಹೇಶ್ವರ ॥ ೫೦ ॥

ತಪಸಾ ನಿಯಮೈರ್ಮಂತ್ರೈಃ ಪೂಜಿತಾಸ್ತ್ರಿದಿವೌಕಸಃ ।
ತ್ವಯಾ ದತ್ತಂ ಫಲಂ ತೇಭ್ಯೋ ದಾಸ್ಯಂತಿ ಜಗತಾಂ ಪತೇ ॥ ೫೧ ॥

ಯಾಚಿತಾರಶ್ಚ ದಾತಾರಸ್ತೇಭ್ಯೋ ಯದ್ಯನ್ಮನೀಷಿತಂ ।
ಭವತೀತಿ ನ ಚಿತ್ರಂ ಸ್ಯಾತ್ತ್ವಂ ವಿಪರ್ಯಯಕಾರಕಃ ॥ ೫೨ ॥

---

೪೮. ದೇವನಾದ ಓ ಮಹಾದೇವ, ನಾನು ಬಾಲನು, ನೀನು ಗುರುಗಳಿಗೂ ಗುರುವಾದ ಜಗದ್ಗುರುವು. ಇಂತಹ ನಿನ್ನನ್ನು ಸ್ತುತಿಸಲು ಬಾಲನಾದ ನಾನು ಸಮರ್ಥನಲ್ಲ. ಓ ಶಂಕರ, ನಿನಗೆ ನಮಸ್ಕಾರವು.

೪೯. ನಿನ್ನ ಸ್ವರೂಪವನ್ನು ವೇದಗಳೂ, ಮುನಿಗಳೂ, ಹರಿಬ್ರಹ್ಮರೂ ಸಹ ತಿಳಿದಿಲ್ಲವು. ಇಂತಹ ಸ್ವರೂಪವುಳ್ಳ ನಿನಗೆ ನಮಸ್ಕಾರವು.

೫೦. ಅನಾಥರು, ದೀನರು, ದರಿದ್ರರು, ರೋಗಿಗಳು, ಪಾಪಿಗಳು ಇವರೆಲ್ಲರನ್ನೂ ನೀನು ಭೇದವಿಲ್ಲದೆ ರಕ್ಷಿಸುವೆ.

೫೧, ತಪಸ್ಸು, ನಿಯಮ, ಮತ್ತು ಮಂತ್ರಗಳಿಂದ ದೇವತೆಗಳನ್ನು ಆರಾಧಿಸಿದರೆ ಆ ದೇವತೆಗಳು ಜಗತ್ಪತಿಯಾದ ನೀನು ಅನುಗ್ರಹಿಸಿದ ಫಲವನ್ನೇ ಕೊಡುವರು.

೫೨. ಯಾಚಕರು ದಾನಿಗಳಿಂದ ಬೇಕಾದ ವಸ್ತುಗಳನ್ನು ಪಡೆಯುವರು. ದಾನಿಗಳೂ ತಮ್ಮ ದಾನದ ಮಹಿಮೆಯಿಂದ ಮತ್ತೂ ಏಳಿಗೆಯನ್ನೈದುವರು. ಇದರಲ್ಲಿ ಆಶ್ಚರ್ಯವಿಲ್ಲ. ಈರೀತಿಯಾಗಿ ಅವರವರ ಕರ್ಮಕ್ಕನುಸಾರವಾಗಿ ಫಲವನ್ನು ನೀನು ಕೊಡುವೆ.

ಯೋಽಜ್ಞಾನಿನೋ ಯೇ ಚ ಪಾಪಾ ಯೇ ಮಗ್ನಾ ನರಕಾರ್ಣವೇ ।
ಶಿವೇತಿ ವಚನಾನ್ನಾಥ ತಾನ್ಪಾಸಿ ತ್ವಂ ಜಗದ್ಗುರೋ ॥ ೫೩ ॥

॥ ಬ್ರಹ್ಮೋವಾಚ ॥

ಏವಂ ತು ಸ್ತುವತಸ್ತಸ್ಯ ಪುರಃ ಪ್ರಾಹ ತ್ರಿಲೋಚನಃ ॥ ೫೪ ॥

॥ ಶಿವ ಉವಾಚ ॥

ವರಂ ಬ್ರೂಹ್ಯಥ ದೇವಾಪೇ ಅಲಂ ದೈನ್ಯೇನ ಬಾಲಕ ॥ ೫೫ ॥

॥ ದೇವಾಪಿರುವಾಚ ॥

ರಾಜಾನಂ ರಾಜಪತ್ನೀಂ ಚ ಪಿತರಂ ಚ ಗುರುಂ ಮಮ ।
ಪ್ರಾಪ್ತುಮಿಚ್ಛೇ ಜಗನ್ನಾಥ ನಿಧನಂ ಚ ರಿಪೋರ್ಮಮ ॥ ೫೬ ॥

॥ ಬ್ರಹ್ಮೋವಾಚ ॥

ದೇವಾಪಿವಚನಂ ಶ್ರುತ್ವಾ ತಥೇತ್ಯಾಹಾಖಿಲೇಶ್ವರಃ ।
ದೇವಾಪೇಃ ಸರ್ವಮಭವದಾಜ್ಞಯಾ ಶಂಕರಸ್ಯ ತತ್ ॥ ೫೭ ॥

ಪುನರಪ್ಯಾಹ ತಂ ಶಂಭುರ್ದೇವಾಪಿಕರುಣಾಕರಃ ।
ನಂದಿನಂ ಪ್ರೇಷಯಾಮಾಸ ಶಂಭುಃ ಶೂಲೇನ ನಾರದ ॥ ೫೮ ॥

---

೫೩. ಅಜ್ಞಾನಿಗಳು, ಪಾಪಿಗಳು, ನರಕದಲ್ಲಿ ನರಳುವವರು ಇವರೂ ಸಹ ಶಿವನಾಮಸ್ಮರಣೆಯನ್ನು ಮಾಡಿದರೆ ಅವರನ್ನು ನೀನು ಉದ್ಧರಿಸುವೆ ಎಂದು ಸ್ತುತಿಸಿದನು

೫೪–೫೫. ಹೀಗೆ ದೇವಾಪಿಯು ಸ್ತುತಿಸುತ್ತಿರಲು ಶಿವನು ಪ್ರತ್ಯಕ್ಷನಾಗಿ ಎಲೈ ದೇವಾಪಿ, ಈ ದೈನ್ಯವು (ತಪಸ್ಸು) ಸಾಕು. ನೀನಿನ್ನೂ ಬಾಲಕನು. ಬೇಕಾದ ವರವನ್ನು ಕೇಳು, ಕೊಡುವೆನು ಎನ್ನಲು,

೫೬. ದೇವಾಪಿಯು ಓ ಜಗನ್ನಾಥ, ರಾಜರಾಣಿಯರನ್ನೂ ನನ್ನ ತಂದೆಯನ್ನೂ ಪುನಃ ನನಗೆ ಲಭಿಸುವಂತೆ ಅನುಗ್ರಹಿಸು. ಅವರನ್ನೊಯ್ದ ವೈರಿಯು ನಾಶವನ್ನು ಹೊಂದಬೇಕು ಎಂದು ಬೇಡಿಕೊಂಡನು.

೫೭. ದೇವಾಪಿಯ ಮಾತನ್ನು ಕೇಳಿ ಶಂಕರನು ಹಾಗೆಯೇ ಆಗಲೆಂದು ಅನುಗ್ರಹಿಸಿದನು. ಪರಮೇಶ್ವರನ ಆಜ್ಞೆಯಂತೆ ದೇವಾಪಿಯ ಇಷ್ಟಾರ್ಥವೆಲ್ಲವೂ ಕೈಗೂಡುವಂತಾಯಿತು.

೫೮. ಆಮೇಲೆ ಶಿವನು ತನ್ನ ಗಣವಾದ ನಂದಿಯನ್ನು ಕರೆಸಿ ಶೂಲವನ್ನು ಕೊಟ್ಟು ಪಾತಾಳಕ್ಕೆ ಅವನನ್ನು ಕಳುಹಿಸಿದನು.

ರಸಾತಲಂ ಮಿಥುಂ ನಂದೀ ಹತ್ವಾ ಚಾಸುರಪುಂಗವಾನ್ ।
ತತ್ಪಿತ್ರಾದೀನ್ಸಮಾನೀಯ ತಸ್ಮೈ ತಾನ್ಸ ನ್ಯವೇದಯತ್ ॥ ೫೯ ॥

ಹಯಮೇಧಶ್ಚ ತತ್ರಾಸೀದಾರ್ಷ್ಟಿಷೇಣಸ್ಯ ಧೀಮತಃ ।
ಅಗ್ನಿಶ್ಚ ಋತ್ವಿಜೋ ದೇವಾ ವೇದಾಶ್ಚ ಋಷಯೋಽಬ್ರುವನ್ ॥ ೬೦ ॥

॥ ಅಗ್ನ್ಯಾದಯ ಊಚುಃ ॥

ಯತ್ರ ಸಾಕ್ಷಾದಭೂಚ್ಛಂಭುರ್ದೇವಾಪೇ ಭಕ್ತವತ್ಸಲಃ ।
ದೇವದೇವೋ ಜಗನ್ನಾಥೋ ದೇವತೀರ್ಥಮಭೂಚ್ಚ ತತ್ ॥ ೬೧ ॥

ಸರ್ವಪಾಪಕ್ಷಯಕರಂ ಸರ್ವಸಿದ್ಧಿಪ್ರದಂ ನೃಣಾಂ ।
ಪುಣ್ಯದಂ ತೀರ್ಥಮೇತತ್ಸ್ಯಾತ್ತವ ಕೀರ್ತಿಶ್ಚ ಶಾಶ್ವತೀ ॥ ೬೨ ॥

ಅಶ್ವಮೇಧೇ ನಿವೃತ್ತೇ ತು ಸುರಾಸ್ತೇಭ್ಯೋ ವರಾನ್ದದುಃ ।
ಸ್ನಾತ್ವಾ ಕೃತಾರ್ಥಾ ಗಂಗಾಯಾಂ ತತಸ್ತೇ ದಿವಮಾಕ್ರಮನ್ ॥ ೬೩ ॥

---

೫೯. ಪಾತಾಳಕ್ಕೆ ಹೋಗಿ ನಂದಿಕೇಶ್ವರನು ಮಿಥುರಾಕ್ಷಸನನ್ನೂ ಮಿಕ್ಕ ದೈತ್ಯರನ್ನೂ ಸಂಹರಿಸಿ ದೇವಾಪಿಯ ತಂದೆ ಮತ್ತು ರಾಜರಾಣಿಯರನ್ನು ಕರೆತಂದು ದೇವಾಪಿಗೆ ಒಪ್ಪಿಸಿದನು.

೬೦. ಆ ಗೌತಮೀತೀರದಲ್ಲಿಯೇ ಆರ್ಷ್ಟಿಷೇಣನ ಅಶ್ವಮೇಧಯಾಗವು ನಡೆಯಿತು. ಆ ಯಾಗಕ್ಕೆ ಬಂದ ಅಗ್ನಿ, ಋತ್ವಿಜರು, ದೇವತೆಗಳು, ವೇದಗಳು, ಋಷಿಗಳು ಇವರೆಲ್ಲರೂ ದೇವಾಪಿಯನ್ನು ಕುರಿತು,

೬೧. ಎಲೈ ದೇವಾಪಿ, ಜಗನ್ನಾಥನೂ, ಭಕ್ತವತ್ಸಲನೂ ಆದ ಮಹಾದೇವನು ನಿನಗೆ ಪ್ರತ್ಯಕ್ಷವಾದ ಸ್ಥಳವು ಮುಂದೆ ದೇವತೀರ್ಥವೆಂದು ಪ್ರಸಿದ್ಧವಾಗುವುದು.

೬೨. ಈ ತೀರ್ಥವು ಪಾಪವೆಲ್ಲವನ್ನೂ ಹೋಗಲಾಡಿಸಿ ಇಷ್ಟಾರ್ಥಗಳೆಲ್ಲವನ್ನೂ ಉಂಟುಮಾಡುವುದು, ನಿನ್ನ ಕೀರ್ತಿಯೂ ಸ್ಥಿರವಾಗಿರುವುದು ಎಂದು ಅನುಗ್ರಹಿಸಿದರು.

೬೩. ಅಶ್ವಮೇಧಯಾಗವು ಮುಗಿಯಲು ದೇವತೆಗಳೂ ಆ ತೀರ್ಥಕ್ಕೆ ವರಗಳನ್ನು ಕೊಟ್ಟರು. ಆಮೇಲವರು ಗೌತಮೀನದಿಯಲ್ಲಿ ಸ್ನಾನಮಾಡಿ ಕೃತಾರ್ಥರಾಗಿ ಸ್ವರ್ಗಕ್ಕೆ ತೆರಳಿದರು.

ತತಃ ಪ್ರಭೃತಿ ತತ್ರಾಸಂಸ್ತೀರ್ಥಾನಿ ದಶ ಪಂಚ ಚ ।
ಸಹಸ್ರಾಣಿ ಶತಾನ್ಯಷ್ಟಾವುಭಯೋರಪಿ ತೀರಯೋಃ ।
ತೇಷು ಸ್ನಾನಂ ಚ ದಾನಂ ಚ ಹ್ಯತೀವ ಫಲದಂ ವಿದುಃ ॥ ೬೪ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಆರ್ಷ್ಟಿಷೇಣಾದ್ಯಷ್ಟೋತ್ತರಶತಾಧಿಕಪಂಚದಶಸಹಸ್ರತೀರ್ಥ ವರ್ಣನಂ ನಾಮ ಸಪ್ತವಿಂಶಾಧಿಕಶತತಮೋಽಧ್ಯಾಯಃ

---

೬೪. ಅದುಮೊದಲುಗೊಂಡು ಗೌತಮೀನದಿಯ ಆ ಎರಡುತೀರಗಳಲ್ಲಿ ಹದಿನೈದುಸಾವಿರದ ಎಂಟನೂರು (15800) ತೀರ್ಥಗಳು ಆದುವು, ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಅತಿಶಯವಾದ ಫಲವು ಲಭಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಆರ್ಷ್ಟಿಷೇಣವೇ ಮೊದಲಾದ ಹದಿನೈದುಸಾವಿರದ ಎಂಟನೂರ ತೀರ್ಥಗಳ ವರ್ಣನವೆಂಬ ನೂರಿಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಐವತ್ತೆಂಟನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಾವಿಂಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ತಪೋವನಮಿತಿ ಖ್ಯಾತಂ ನಂದಿನೀಸಂಗಮಂ ತಥಾ ।
ಸಿದ್ಧೇಶ್ವರಂ ತತ್ರ ತೀರ್ಥಂ ಗೌತಮ್ಯಾ ದಕ್ಷಿಣೇ ತಟೇ ॥ ೧ ॥

ಶಾರ್ದೂಲಂ ಚೇತಿ ವಿಖ್ಯಾತಂ ತೇಷಾಂ ವೃತ್ತಮಿದಂ ಶೃಣು ।
ಯಸ್ಯಾಕರ್ಣನಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ॥ ೨ ॥

ಅಗ್ನಿರ್ಹೋತಾ ಪುರಾ ತ್ವಾಸಿದ್ದೇವಾನಾಂ ಹವ್ಯವಾಹನಃ ।
ಭಾರ್ಯಾಂ ಪ್ರಾಪ್ತೋ ದಕ್ಷಸುತಾಂ ಸ್ವಾಹಾನಾಮ್ನೀಂ ಸುರೂಪಿಣೀಂ ॥೩॥

ನೂರಿಪ್ಪತ್ತೆಂಟನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಗೌತಮೀನದಿಯ ದಕ್ಷಿಣತೀರದಲ್ಲಿ ತಪೋವನವೊಂದಿರುವುದು. ಅಲ್ಲಿ ನಂದಿನೀಸಂಗಮ ಮತ್ತು ಸಿದ್ಧೇಶ್ವರಗಳೆಂಬ ತೀರ್ಥಗಳಿರುವುವು.

೨. ಮತ್ತು ಶಾರ್ದೂಲವೆಂಬ ತೀರ್ಥವೂ ಇರುವುದು. ಈ ತೀರ್ಥಗಳನ್ನು ಸ್ಮರಿಸಿದ ಮಾತ್ರದಿಂದ ಪಾಪಗಳೆಲ್ಲವೂ ನಾಶವಾಗುವುವು. ಇಂತಹ ತೀರ್ಥಗಳ ಮಾಹಾತ್ಮ್ಯವನ್ನು ಹೇಳುವೆನು. ಎಲೈ ನಾರದ ಕೇಳು.

೩. ದೇವತೆಗಳಿಗೆ ಹವಿಸ್ಸನ್ನು ಒದಗಿಸುವವನೂ ಹೋಮಕ್ಕೆ ಆಧಾರನೂ ಆದ ಅಗ್ನಿಯು ಹಿಂದೆ ದಕ್ಷಬ್ರಹ್ಮನ ಮಗಳಾದ ರೂಪವತಿಯಾದ ಸ್ವಾಹಾದೇವಿಯನ್ನು ಪ್ರೀತಿಯಿಂದ ಮದುವೆಯಾದನು.

ಸಾನಪತ್ಯಾ ಪುರಾ ಚಾಸೀತ್ಪುತ್ರಾರ್ಥಂ ತಪ ಆವಿಶತ್ ।
ತಪಶ್ಚರಂತೀಂ ವಿಪುಲಂ ತೋಷಯಂತೀಂ ಹುತಾಶನಂ ।
ಸ ಭರ್ತಾ ಹುತಭುಕ್ಪ್ರಾಹ ಭಾರ್ಯಾಂ ಸ್ವಾಹಾಮನಿಂದಿತಾಂ ॥ ೪ ॥

॥ ಅಗ್ನಿರುವಾಚ ॥
ಅಪತ್ಯಾನಿ ಭವಿಷ್ಯಂತಿ ಮಾ ತಪಃ ಕುರು ಶೋಭನೇ ॥ ೫ ॥

॥ ಬ್ರಹ್ಮೋವಾಚ
ಏತಚ್ಛ್ರುತ್ವಾ ಭರ್ತೃವಾಕ್ಯಂ ನಿವೃತ್ತಾ ತಪಸೋಽಭವತ್ ।
ಸ್ತ್ರೀಣಾಮಭೀಷ್ಟದಂ ನಾನ್ಯದ್ಭರ್ತೃವಾಕ್ಯಂ ವಿನಾ ಕ್ವಚಿತ್ ॥ ೬ ॥

ತತಃ ಕತಿಪಯೇ ಕಾಲೇ ತಾರಕಾದ್ಭಯ ಆಗತೇ ।
ಅನುತ್ಪನ್ನೇ ಕಾರ್ತಿಕೇಯೇ ಚಿರಕಾಲರಹೋಗತೇ ॥ ೭ ॥

ಮಹೇಶ್ವರೇ ಭವಾನ್ಯಾ ಚ ತ್ರಸ್ತಾ ದೇವಾಃ ಸಮಾಗತಾಃ ।
ದೇವಾನಾಂ ಕಾರ್ಯಸಿದ್ಧ್ಯರ್ಥಮಗ್ನಿಂ ಪ್ರೋಚುರ್ದಿವೌಕಸಃ ॥ ೮ ॥

---

೪. ಸ್ವಾಹಾದೇವಿಗೆ ಬಹಳ ಕಾಲದ ವರೆಗೆ ಮಕ್ಕಳಾಗಲಿಲ್ಲ. ಮಕ್ಕಳನ್ನು ಪಡೆಯಲು ಅವಳು ತಪಸ್ಸನ್ನಾಚರಿಸಿದಳು. ಅಗ್ನಿಯನ್ನಾರಾಧಿಸಿದಳು. ಆಗ ಅವಳನ್ನು ಕುರಿತು ಪತಿಯಾದ ಅಗ್ನಿಯು

೫. ಎಲೌ ಪ್ರಿಯೆ, ನಿನಗೆ ಮಕ್ಕಳು ಜನಿಸುವರು. ಈ ತಪಸ್ಸನ್ನು ಸಾಕುಮಾಡು ಎಂದನು.

೬. ಪತಿಯ ಮಾತನ್ನು ಕೇಳಿ ಸ್ವಾಹಾದೇವಿಯು ತಪಸ್ಸನ್ನು ಮುಗಿಸಿದಳು. ಸ್ತ್ರೀಯರಿಗೆ ಪತಿಯ ಮಾತಿಗಿಂತಲೂ ಇಷ್ಟವಾದುದು ಬೇರೆ ಇಲ್ಲವು.

೭–೮. ಹೀಗೆ ಕೆಲವು ಕಾಲವು ಕಳೆಯಲು ದೇವತೆಗಳಿಗೆ ತಾರಕಾಸುರನ ಭಯವು ಉಂಟಾಯಿತು. ಷಣ್ಮುಖನು ಇನ್ನೂ ಜನಿಸಿರಲಿಲ್ಲ. ಮಹೇಶ್ವರ ಪಾರ್ವತಿಯರು ಏಕಾಂತಕ್ರೀಡೆಯಲ್ಲಿರುತ್ತಿದ್ದರು. ಆಗ ದೇವತೆಗಳು ತಮ್ಮ ಕಾರ್ಯಸಿದ್ಧಿಗಾಗಿ ಅಗ್ನಿಯಬಳಿಗೆ ಬಂದು,

॥ ದೇವಾ ಊಚುಃ ॥

ದೇವ ಗಚ್ಛ ಮಹಾಭಾಗ ಶಂಭುಂ ತ್ರೈಲೋಕ್ಯಪೂಜಿತಂ ।
ತಾರಕಾದ್ಭಯಮುತ್ಪನ್ನಂ ಶಂಭವೇ ತ್ವಂ ನಿವೇದಯ ॥ ೯ ॥

॥ ಅಗ್ನಿರುವಾಚ ॥

ನ ಗಂತವ್ಯಂ ತತ್ರ ದೇಶೇ ದಂಪತ್ಯೋಃ ಸ್ಥಿತಯೋ ರಹಃ ।
ಸಾಮಾನ್ಯಮಾತ್ರತೋ ನ್ಯಾಯಃ ಕಿಂ ಪುನಃ ಶೂಲಪಾಣಿನಿ ॥ ೧೦ ॥

ಏಕಾಂತಸ್ಥಿತಯೋಃ ಸ್ವೈರಂ ಜಲ್ಪತೋರ್ಯಃ ಸರಾಗಯೋಃ ।
ದಂಪತ್ಯೋಃ ಶೃಣುಯಾದ್ವಾಕ್ಯಂ ನಿರಯಾತ್ತಸ್ಯ ನೋದ್ಧೃತಿಃ ॥ ೧೧ ॥

ಸ ಸ್ವಾಮ್ಯಖಿಲಲೋಕಾನಾಂ ಮಹಾಕಾಲಸ್ತ್ರಿಶೂಲವಾನ್ ।
ನಿರೀಕ್ಷಣೀಯಃ ಕೇನ ಸ್ಯಾದ್ಭವಾನ್ಯಾ ರಹಸಿ ಸ್ಥಿತಃ ॥ ೧೨ ॥

---

೯. ಎಲೈ ಮಹಾಮಹಿಮನಾದ ಅಗ್ನಿಯೇ, ಜಗದ್ವಂದ್ಯನಾದ ಶಂಕರನ ಬಳಿಗೆ ಹೋಗಿ ನಮಗೆ ತಾರಕಾಸುರನಿಂದ ಭಯವೊದಗಿರುವುದನ್ನು ಆ ಪರಮೇಶ್ವರನಿಗೆ ನಿವೇದಿಸು ಎಂದರು.

೧೦. ಅದನ್ನು ಕೇಳಿ, ಎಲೈ ದೇವತೆಗಳೇ, ಏಕಾಂತದಲ್ಲಿರುವ ದಂಪತಿಗಳ ಬಳಿಗೆ ಹೋಗಕೂಡದು, ಇದು ಸಾಮಾನ್ಯ ನ್ಯಾಯವು. ಹೀಗಿರಲು ಶೂಲಪಾಣಿಯಾದ ಶಿವನು ಪತ್ನಿಯೊಡನೆ ಏಕಾಂತದಲ್ಲಿರುವಾಗ ಅವರ ಬಳಿಗೆ ಹೋಗುವುದು ಉಚಿತವೇ ? ಒಳ್ಳೆಯದೇ ?

೧೧. ಏಕಾಂತದಲ್ಲಿ ವಿಹರಿಸುತ್ತಿದ್ದು ಪ್ರೇಮದಿಂದ ಯಥೇಚ್ಛೆಯಾಗಿ ಮಾತನಾಡುವ ದಂಪತಿಗಳ ಪ್ರೇಮವಾಕ್ಯವನ್ನು ಕೇಳಬಾರದು. ಹಾಗೆ ಕೇಳಿದವನು ನರಕದಲ್ಲಿ ನರಳುವನು, ಅವನಿಗೆಂದೆಂದಿಗೂ ಉದ್ಧಾರವಿಲ್ಲ.

೧೨. ಆ ಶಿವನು ಜಗತ್ತಿಗೆಲ್ಲಾ ಪ್ರಭುವು. ಉಮಾದೇವಿಯೊಡನೆ ಏಕಾಂತದಲ್ಲಿರುವ ತ್ರಿಶೂಲಧಾರಿಯಾದಾ ಮಹಾಕಾಲನನ್ನು ನೋಡಲೂ ಸಹ ಯಾವನು ಸಮರ್ಥನು ? ಎಂದನು.

॥ ದೇವಾ ಊಚುಃ ॥

ಮಹಾಭಯೇ ಚಾನುಗತೇ ನ್ಯಾಯಃ ಕೋಽನ್ಯತ್ರ ವರ್ಣ್ಯತೇ ।
ತಾರಕಾದ್ಭಯ ಆಪನ್ನೇ ಗಚ್ಛ ತ್ವಂ ತಾರಕೋ ಭವಾನ್ ॥ ೧೩ ॥

ಮಹಾಭಯಾಬ್ಧೌ ಸಾಧೂನಾಂ ಯತ್ಪರಾರ್ಥಾಯ ಜೀವಿತಂ ।
ರೂಪೇಣಾನ್ಯೇನ ವಾ ಗಚ್ಛ ವಾಚಂ ವದ ಯಥಾ ತಥಾ ॥ ೧೪ ॥

ವಿಶ್ರಾವ್ಯ ದೇವವಚನಂ ಶಂಭುಮಾಗಚ್ಛ ಸತ್ವರಃ ।
ತತೋ ದಾಸ್ಯಾಮಹೇ ಪೂಜಾಮುಭಯೋರ್ಲೋಕಯೋಃ ಕವೇ ॥ ೧೫ ॥

॥ ಬ್ರಹ್ಮೋವಾಚ ॥

ಶುಕೋ ಭೂತ್ವಾ ಜಗಾಮಾಶು ದೇವವಾಕ್ಯಾದ್ಧುತಾಶನಃ ।
ಯತ್ರಾಸೀಜ್ಜಗತಾಂ ನಾಥೋ ರಮಮಾಣಸ್ತದೋಮಯಾ ॥ ೧೬ ॥

---

೧೩. ದೇವತೆಗಳು ಮತ್ತೆ ಹೇಳಿದರು—ಮಹಾಭಯವು ಒದಗಿರಲು ನ್ಯಾಯಗೀಯಗಳ ವರ್ಣನೆ ಬೇಡ. ಎಲೈ ಅಗ್ನಿ ಹೋಗು, ತಾರಕಾಸುರನ ಭಯದಿಂದ ನಮ್ಮನ್ನು ಉದ್ಧರಿಸು.

೧೪. ಮಹಾಭಯದಲ್ಲಿ ಮುಳುಗಿರುವವರನ್ನು ಉದ್ಧರಿಸುವ ಸಲುವಾಗಿಯೇ ಸಂತರು ತಮ್ಮ ಜೀವನವನ್ನು ಉಪಯೋಗಿಸುವರು. ಆದುದರಿಂದ ಎಲೈ ಅಗ್ನಿ, ಬೇರೆ ಯಾವ ರೂಪದಿಂದಲಾದರೂ ಶಿವನ ಬಳಿಗೆ ಹೋಗು. ಹೇಗಾದರೂ ನಮ್ಮ ಕಷ್ಟವನ್ನು ಆ ದೇವನಿಗೆ ತಿಳಿಸು.

೧೫. ಎಲೈ ಹವ್ಯವಾಹನ, ನಮ್ಮ ಮಾತನ್ನು ಅಂಗೀಕರಿಸಿ ಶಂಕರನ ಬಳಿಗೆ ಹೋಗು. ನಮ್ಮ ಕಾರ್ಯವನ್ನು ಮಾಡಿದರೆ ನಿನಗೆ ಎರಡು ಲೋಕಗಳಲ್ಲಿಯೂ ಪೂಜೆಯು ಲಭಿಸುವಂತೆ ವರವನ್ನು ಕೊಡುವೆವೆಂದರು.

೧೬. ದೇವತೆಗಳ ಮಾತಿನಂತೆ ಅಗ್ನಿಯು ಗಿಳಿಯಾಗಿ ಪಾರ್ವತೀಪರಮೇಶ್ವರರು ವಿಹರಿಸುತ್ತಿದ್ದಲ್ಲಿಗೆ ತೆರಳಿದನು.

ಸ ಭೀತವದಥ ಪ್ರಾಯಾಚ್ಛುಕೋ ಭೂತ್ವಾ ತದಾನಲಃ ।
ನಾಶಕದ್ದ್ವಾರದೇಶೇ ತು ಪ್ರವೇಷ್ಟುಂ ಹವ್ಯವಾಹನಃ ॥ ೧೭ ॥

ತತೋ ಗವಾಕ್ಷದೇಶೇ ತು ತಸ್ಥೌ ಧುನ್ವನ್ನಧೋಮುಖಃ ।
ತಂ ದೃಷ್ಟ್ವಾ ಪ್ರಹಸನ್ ಶಂಭುರುಮಾಂ ಪ್ರಾಹ ರಹೋಗತಃ ॥ ೧೮ ॥

॥ ಶಂಭುರುವಾಚ ॥

ಪಶ್ಯ ದೇವಿ ಶುಕಂ ಪ್ರಾಪ್ತಂ ದೇವವಾಕ್ಯಾದ್ಧುತಾಶನಂ ॥ ೧೯ ॥

॥ ಬ್ರಹ್ಮೋವಾಚ ॥

ಲಜ್ಜಿತಾ ಚಾವದದ್ದೇವಮಲಂ ದೇವೇತಿ ಪಾರ್ವತೀ ।
ಪುರಶ್ಚರಂತಂ ದೇವೇಶೋ ಹ್ಯಗ್ನಿಂ ತಂ ದ್ವಿಜರೂಪಿಣಂ ॥ ೨೦ ॥

ಆಹೂಯ ಬಹುಶಶ್ಚಾಪಿ ಜ್ಞಾತೋಽಸ್ಯಗ್ನೇಽತ್ರ ಮಾ ವದ ।
ವಿದಾರಯಸ್ವ ಸ್ವಮುಖಂ ಗೃಹಾಣೇದಂ ನಯಸ್ವ ತತ್ ॥ ೨೧ ॥

---

೧೭. ಹೆದರುತ್ತಾ ಶಿವನ ವಾಸಸ್ಥಾನಕ್ಕೆ ಅಗ್ನಿಯು ಗಿಣಿಯರೂಪದಿಂದ ಹೋದನು. ಆದರೆ ಶಿವನ ಅಂತರ್ಗೃಹದ ಬಾಗಿಲನ್ನು ಪ್ರವೇಶಿಸಲು ಅವನಿಗೆ ಶಕ್ತಿಯಿಲ್ಲವಾಯಿತು.

೧೮. ಆಗ ಅವನು ಕಿಟಕಿಯ ಬಾಗಿಲಲ್ಲಿ ರೆಕ್ಕೆಯನ್ನು ಕೊಡವುತ್ತಾ ಕೆಳಮುಖವಾಗಿ ಕುಳಿತಿದ್ದನು. ಅವನನ್ನು ನೋಡಿ ಶಿವನು ನಗುತ್ತಾ ಉಮಾ ದೇವಿಯನ್ನು ಕುರಿತು,

೧೯. ಎಲೌ ದೇವಿ, ನೋಡು. ದೇವತೆಗಳ ಮಾತಿನಂತೆ ಅಗ್ನಿಯು ಗಿಳಿಯ ರೂಪದಿಂದ ಬಂದಿರುವನು. ಇತ್ತನೋಡು ಎನ್ನಲು,

೨೦–೨೧. ಆಗ ಪಾರ್ವತಿಯು ಲಜ್ಜೆಗೊಂಡು ಓ ದೇವ, ಕ್ರೀಡೆಯು ಈಗ ಸಾಕು ಎಂದು ಹೇಳಿದಳು. ಆಮೇಲೆ ಶಿವನು ಎದುರಿಗಿದ್ದ ಅಗ್ನಿಯನ್ನು ಕರೆದು ಎಲೈ ಅಗ್ನಿ, ನಿನ್ನ ನಿಜರೂಪವು ತಿಳಿಯಿತು, ಹೆಚ್ಚೇನೂ ಹೇಳಬೇಕಾಗಿಲ್ಲ, ಬಾಯಿಯನ್ನು ಬಿಡು. ಈ ರೇತಸ್ಸನ್ನು ಸ್ವೀಕರಿಸು. ಇದನ್ನು ನಿನ್ನ ಉದರದಲ್ಲಿ ಧರಿಸು.

ಇತ್ಯುಕ್ತ್ವಾ ತಸ್ಯ ಚಾಸ್ಯೇಽಗ್ನೇಃ ರೇತಃ ಸ ಪ್ರಾಕ್ಷಿಪದ್ವೃಷಃ ।
ರೇತೋಗರ್ಭಸ್ತದಾ ಚಾಗ್ನಿರ್ಗಂತುಂ ನೈವ ಚ ಶಕ್ತವಾನ್ ॥ ೨೨ ॥

ಸುರನದ್ಯಾಸ್ತತಸ್ತೀರಂ ಶಾಂತೋಽಗ್ನಿರುಪತಸ್ಥಿವಾನ್ ।
ಕೃತ್ತಿಕಾಸು ಚ ತದ್ರೇತಃಪ್ರಕ್ಷೇಪಾತ್ಕಾರ್ತಿಕೋಽಭವತ್ ॥ ೨೩ ॥

ಅವಶಿಷ್ಟಂ ಚ ಯತ್ಕಿಂಚಿದಗ್ನೇರ್ದೇಹೇ ಚ ಶಾಂಭವಂ ।
ತದೇವ ರೇತೋ ವಹ್ನಿಸ್ತು ಸ್ವಭಾರ್ಯಾಯಾಂ ದ್ವಿಧಾಕ್ಷಿಪತ್ ॥ ೨೪ ॥

ಸ್ವಾಹಾಯಾಂ ಪ್ರಿಯಭೂತಾಯಾಂ ಪುತ್ರಾರ್ಥಿನ್ಯಾಂ ವಿಶೇಷತಃ ।
ಪುರಾ ಸಾಶ್ವಾಸಿತಾ ತೇನ ಸಂತತಿಸ್ತೇ ಭವಿಷ್ಯತಿ ॥ ೨೫ ॥

ತದ್ವಹ್ನಿನಾಥ ಸಂಸ್ಮೃತ್ಯ ತತ್ಕ್ಷಿಪ್ತಂ ಶಾಂಭವಂ ಮಹಃ ।
ತದಗ್ನೇ ರೇತಸಸ್ತಸ್ಯಾಂ ಜಜ್ಞೇ ಮಿಥುನಮುತ್ತಮಂ ॥ ೨೬ ॥

---

೨೨. ಎಂದು ಹೇಳಿ ಶಿವನು ಅಗ್ನಿಯ ಬಾಯಲ್ಲಿ ತನ್ನ ಮಹಾರೇತಸ್ಸನ್ನು ವಿಸರ್ಜಿಸಿದನು. ರೇತಸ್ಸನ್ನು ಧರಿಸಿದ ಆ ಅಗ್ನಿಯು ನಡೆಯಲೂ ಅಸಮರ್ಥನಾದನು.

೨೩. ಬಹಳ ಆಯಾಸಗೊಂಡು ಅಗ್ನಿಯು ದೇವನದಿ (ಗಂಗೆ) ಯ ತೀರಕ್ಕೆ ಬಂದು ವಿಶ್ರಮಿಸಿಕೊಂಡನು. ಕೃತ್ತಿಕೆಯಲ್ಲಿ ಆ ಶಿವರೇತಸ್ಸನ್ನುಸಮರ್ಪಿಸಲು ಅವರ ಪೋಷಣೆಯಿಂದ ಕಾರ್ತಿಕೇಯನು (ಷಣ್ಮುಖನು) ಜನಿಸಿದನು.

೨೪. ಆದರೂ ಅಗ್ನಿಯ ದೇಹದಲ್ಲಿ ಶಿವರೇತಸ್ಸು ಸ್ವಲ್ಪ ಉಳಿಯಿತು. ಆ ರೇತಸ್ಸನ್ನು ಎರಡುಭಾಗಮಾಡಿ ಅಗ್ನಿಯು ತನ್ನ ಪ್ರಿಯ ಪತ್ನಿಯಾದ ಸ್ವಾಹಾದೇವಿಯಲ್ಲಿ ವಿಸರ್ಜಿಸಿದನು.

೨೫. ಹಿಂದೆ ಸ್ವಾಹಾದೇವಿಗೆ ಮಕ್ಕಳನ್ನನುಗ್ರಹಿಸುವೆನು ಎಂದು ಅಗ್ನಿಯು ವಚನಕೊಟ್ಟಿದ್ದನು. ಅದನ್ನು ಸ್ಮರಿಸಿ ಈಗ ಅಗ್ನಿಯು ಉಳಿದ ಶಂಕರರೇತಸ್ಸನ್ನು ಸ್ವಾಹಾದೇವಿಯಲ್ಲಿ ವಿಸರ್ಜಿಸಿದನು.

೨೬-೨೭. ಅಗ್ನಿಯು ವಿಸರ್ಜಿಸಿದ ಆ ಶಿವರೇತಸ್ಸಿನಿಂದ ಸ್ವಾಹಾದೇವಿಯಲ್ಲಿ ಸುವರ್ಣನೆಂಬ ಕುಮಾರನೂ, ಸುವರ್ಣಾ ಎಂಬ ಕನ್ಯೆಯೂ ಜನಿಸಿದರು.

ಸುವರ್ಣಶ್ಚ ಸುವರ್ಣಾ ಚ ರೂಪೇಣಾಪ್ರತಿಮಂ ಭುವಿ ।
ಅಗ್ನೇಃ ಪ್ರೀತಿಕರಂ ನಿತ್ಯಂ ಲೋಕಾನಾಂ ಪ್ರೀತಿವರ್ಧನಂ ॥ ೨೭ ॥

ಅಗ್ನಿಃ ಪ್ರೀತ್ಯಾ ಸುವರ್ಣಾಂ ತಾಂ ಪ್ರಾದಾದ್ಧರ್ಮಾಯ ಧೀಮತೇ ।
ಸುವರ್ಣಸ್ಯಾಥ ಪುತ್ರಸ್ಯ ಸಂಕಲ್ಪಾಮಕರೋತ್ಪ್ರಿಯಾಂ ।
ಏವಂ ಪುತ್ರಸ್ಯ ಪುತ್ರ್ಯಾಶ್ಚ ವಿವಾಹಮಕರೋತ್ಕವಿಃ ॥ ೨೮ ॥

ಅನ್ಯೋನ್ಯರೇತೋವ್ಯತಿಷಂಗದೋಷಾ-
ದಗ್ನೇರಪತ್ಯಮುಭಯಂ ತಥೈವ ।
ಪುತ್ರಃ ಸುವರ್ಣೋ ಬಹುರೂಪರೂಪೀ
ರೂಪಾಣಿ ಕೃತ್ವಾ ಸುರಸತ್ತಮಾನಾಂ ॥ ೨೯ ॥

ಇಂದ್ರಸ್ಯ ವಾಯೋರ್ಧನದಸ್ಯ ಭಾರ್ಯಾಂ
ಜಲೇಶ್ವರಸ್ಯಾಪಿ ಮುನೀಶ್ವರಾಣಾಂ ।
ಭಾರ್ಯಾಸ್ತು ಗಚ್ಛತ್ಯನಿಶಂ ಸುವರ್ಣೋ
ಯಸ್ಯಾಃ ಪ್ರಿಯಂ ಯಚ್ಚ ವಪುಃ ಸ ಕೃತ್ವಾ ॥ ೩೦ ॥

ಆ ಮಕ್ಕಳೀರ್ವರೂ ಮುದ್ದಾಗಿದ್ದರು, ಅಗ್ನಿಗೂ ಮಿಕ್ಕವರಿಗೂ ಅಚ್ಚುಮೆಚ್ಚಾಗಿದ್ದರು.

೨೮. ಸುವರ್ಣಾದೇವಿಯನ್ನು ಯಮಧರ್ಮರಾಜನಿಗೆ ಅಗ್ನಿಯು ಮದುವೆಮಾಡಿಕೊಟ್ಟನು. ಪುತ್ರನಾದ ಸುವರ್ಣನಿಗೆ ಸಂಕಲ್ಪಾದೇವಿಯೊಡನೆ ಮದುದೆಮಾಡಿದನು. ಹೀಗೆ ಮಕ್ಕಳೀರ್ವರಿಗೂ ಆ ಅಗ್ನಿಯು ಮದುವೆ ಮಾಡಿದನು.

೨೯-೩೦. ಅಗ್ನಿಯ ಆ ಮಕ್ಕಳೀರ್ವರೂ ಬೇರೆ ರೇತಸ್ಸಿನ ಸಂಗದಿಂದ ಜನಿಸಿದರು. ಅದರಿಂದ ಅವರಲ್ಲಿ ವ್ಯಭಿಚಾರದೋಷವುಂಟಾಯಿತು. ಸುವರ್ಣನು ಆಯಾಯದೇವತೆಗಳ ಮತ್ತು ಮುನಿಗಳ ರೂಪವನ್ನು ಧರಿಸಿ ಇಂದ್ರ, ವಾಯು ಕುಬೇರ, ವರುಣ, ಮುನಿಗಳು ಇವರ ಸುಂದರಿಯರಾದ ಪತ್ನಿಯರೊಡನೆ ವಿಹರಿಸುತ್ತಿದ್ದನು.

ಯಾತಿ ಕ್ವಚಿಚ್ಚಾಪಿ ಕವೇಸ್ತನೂಜ-
ಸ್ತದ್ಭರ್ತೃರೂಪಂ ಚ ಪತಿವ್ರತಾಸು ।
ಕೃತ್ವಾನಿಶಂ ತಾಭಿರುದಾರಭಾವಃ
ಕುರ್ವನ್ಕೃತಾರ್ಥಂ ಮದನಂ ಸ ರೇಮೇ ॥ ೩೧ ॥

ಕೃತ್ವಾ ಗತಾ ಕ್ವಾಪಿ ಚೈವಂ ಸುವರ್ಣಾ
ಧರ್ಮಸ್ಯ ಭಾರ್ಯಾಪಿ ಸುವರ್ಣನಾಮ್ನೀ ।
ಸ್ವಾಹಾಸುತಾ ಸ್ವೈರಿಣೀ ಸಾ ಬಭೂವ
ಯಸ್ಯಾಪಿ ಯಸ್ಯಾಪಿ ಮನೋಗತಾ ಯಾ ॥ ೩೨ ॥

ಭಾರ್ಯಾಸ್ವರೂಪಾ ಸೈವ ಭೂತ್ವಾ ಸುವರ್ಣಾ
ರೇಮೇ ಪತೀನ್ಮಾನುಷಾನಾಸುರಾಂಶ್ಚ ।
ದೇವಾನ್ಯಷೀನ್ಪಿತೃರೂಪಾಂಸ್ತಥಾನ್ಯಾ-
ನ್ರೂಪೌದಾರ್ಯಸ್ಥೈರ್ಯಗಾಂಭೀರ್ಯಯುಕ್ತಾನ್ ॥ ೩೩ ॥

ಯಾಭಿಪ್ರೇತಾ ಯಸ್ಯ ದೇವಸ್ಯ ಭಾರ್ಯಾ-
ತದ್ರೂಪಾ ಸಾ ರಮತೇ ತೇನ ಸಾರ್ಧಂ ।

---

೩೧. ಪತಿವ್ರತೆಯರೊಡನೆಯೂ ಸಹ ಅವರ ಪತಿಗಳ ರೂಪವನ್ನು ಧರಿಸಿ ಆನಂದದಿಂದ ವಿಹರಿಸುವನು. ಹೀಗೆ ಅವನು ಮನ್ಮಥನನ್ನು ಕೃತಾರ್ಥನನ್ನಾಗಿ ಮಾಡಿದನು.

೩೨. ಸ್ವಾಹಾದೇವಿಯಂತಹ ಪತಿವ್ರತೆಯ ಮಗಳೂ ಯಮಧರ್ಮನ ಪತ್ನಿಯೂ ಆದ ಸುವರ್ಣಾದೇವಿಯೂ ಸಹ ರೇತೋದೋಷದಿಂದ ವ್ಯಭಿಚಾರಿಣಿಯಾದಳು.

೩೩. ಆ ಸುವರ್ಣಾದೇವಿಯು ಮನುಷ್ಯರು, ಅಸುರರು, ದೇವತೆಗಳು ಋಷಿಗಳು, ಪಿತೃದೇವತೆಗಳು ಇವರಲ್ಲಿ ತನ್ನ ಮನವೊಪ್ಪಿದ ರೂಪಔದಾರ್ಯ ಮೊದಲಾದ ಗುಣಗಳುಳ್ಳವರನ್ನು ಅವರವರ ಹೆಂಡತಿಯರ ರೂಪದಿಂದ ಸೇರಿ ವಿಹರಿಸುವಳು.

೩೪. ತಾನು ಮೆಚ್ಚಿದ ದೇವನೊಡನೆ ಆ ಸುವರ್ಣಾದೇವಿಯು ಆ

ನಾನಾಭೇದೈಃ ಕರಣೈಶ್ಚಾಪ್ಯನೇಕೈ-
ರಾಕರ್ಷಂತೀ ತನ್ಮನಃಕಾಮಸಿದ್ಧಿಂ ॥ ೩೪ ॥

ಏವಂ ಸುವರ್ಣಸ್ಯ ನಿರೀಕ್ಷ್ಯ ಚೇಷ್ಟಾ-
ಮಗ್ನೇಃ ಸೂನೋಃ ಪುತ್ರಿಕಾಯಾಸ್ತಥಾಗ್ನೇಃ ।
ಸರ್ವೇ ಚ ಶೇಪುಃ ಕುಪಿತಾಸ್ತದಾಗ್ನೇಃ
ಪುತ್ರಂ ಚ ಪುತ್ರೀಂ ಚ ಸುರಾಸುರಾಸ್ತೇ ॥ ೩೫ ॥

॥ ಸುರಾಸುರಾ ಊಚುಃ ॥

ಕೃತಂ ಯದೇತದ್ವ್ಯಭಿಚಾರರೂಪಂ
ಯಚ್ಛದ್ಮನಾ ವರ್ತನಂ ಪಾಪರೂಪಂ ।
ತಸ್ಮಾತ್ಸುತಸ್ತೇ ವ್ಯಭಿಚಾರವಾಂಶ್ಚ
ಸರ್ವತ್ರ ಗಾಮೀ ಜಾಯತಾಂ ಹವ್ಯವಾಹ ॥ ೩೬ ॥

ತಥಾ ಸುವರ್ಣಾಪಿ ನ ಚೈಕನಿಷ್ಠಾ
ಭೂಯಾದಗ್ನೇ ನೈಕತೃಪ್ತಾ ಬಹೂಂಶ್ಚ ।
ನಾನಾಜಾತೀನ್ನಿಂದಿತಾನ್ದೇಹಭಾಜೋ
ಭಜಿತ್ರೀ ಸ್ಯಾದೇಷ ದೋಷಶ್ಚ ಪುತ್ರ್ಯಾಃ ॥ ೩೭ ॥

ದೇವನ ಪತ್ನಿಯ ರೂಪವನ್ನೇ ಧರಿಸಿ ನಾನಾಬಗೆಯ ಹಾವಭಾವಗಳಿಂದ ಅವನನ್ನು ಸಂತೋಷಗೊಳಿಸುತ್ತಾ ಕಾಮಾತಿರೇಕದಿಂದ ವಿಹರಿಸುತ್ತಿದ್ದಳು.

೩೫. ಅಗ್ನಿಯ ಮಕ್ಕಳಾದ ಸುವರ್ಣಸುವರ್ಣೆಯರ ಇಂತಹ ಚೇಷ್ಟೆಯನ್ನು ನೋಡಿ ಕೋಪಗೊಂಡ ದೇವಾಸುರರು,

೩೬. ಎಲೈ ಅಗ್ನಿ, ನಿನ್ನ ಪುತ್ರನು ಮೋಸದಿಂದ ಪಾಪಕರವಾದ ವ್ಯಭಿಚಾರವನ್ನು ಮಾಡುತ್ತಿರುವನು. ಆದುದರಿಂದ ಅವನು ಸದಾ ವ್ಯಭಿಚಾರಿಯೂ ನಿಂದಿತಸಂಗವನ್ನು ಮಾಡುವವನೂ ಆಗಲಿ.

೩೭. ಅದರಂತೆಯೇ ನಿನ್ನ ಪುತ್ರಿಯಾದ ಸುವರ್ಣೆಯೂ ವ್ಯಭಿಚಾರಿಣಿಯಾಗಿರುವಳು. ಓರ್ವ ಪತಿಯಿಂದ ಅವಳಿಗೆ ತೃಪ್ತಿಯಿಲ್ಲವಾಗಿದೆ, ಈ ಕಾರಣ ಅವಳು ನಾನಾಜಾತಿಯ ಹೀನಕುಲದ ಮನುಷ್ಯರನ್ನು ಸೇರುವಳು. ಇದು ಅವಳ ಪಾಪಕ್ಕೆ ತಕ್ಕದು ಎಂದು ಶಪಿಸಿದರು.

॥ ಬ್ರಹ್ಮೋವಾಚ ॥

ಇತ್ಯೇತಚ್ಛಾಪವಚನಂ ಶ್ರುತ್ವಾಗ್ನಿ ರತಿಭೀತವತ್ ।
ಮಾಮಭ್ಯೇತ್ಯ ತದೋವಾಚ ನಿಷ್ಕೃತಿಂ ವದ ಪುತ್ರಯೋಃ ॥ ೩೮ ॥

ತದಾಹಮಬ್ರುವಂ ವಹ್ನೇ ಗೌತಮೀಂ ಗಚ್ಛ ಶಂಕರಂ ।
ಸ್ತುತ್ವಾ ತತ್ರ ಮಹಾಬಾಹೋ ನಿವೇದಯ ಜಗತ್ಪತೇಃ ॥ ೩೯ ॥

ಮಾಹೇಶ್ವರೇಣ ವೀರ್ಯೇಣ ತವ ದೇಹಸ್ಥಿತೇನ ಚ ।
ಏವಂವಿಧಂ ತ್ವಪತ್ಯಂ ತೇ ಜಾತಂ ವಹ್ನೇ ತತೋ ಭವಾನ್ ॥ ೪೦ ॥

ನಿವೇದಯಸ್ವ ದೇವಾಯ ದೇವಾನಾಂ ಶಾಪಮೀದೃಶಂ ।
ಸ್ವಾಪತ್ಯರಕ್ಷಣಾಯಾಸೌ ಶಂಭುಃ ಶ್ರೇಯಃ ಕರಿಷ್ಯತಿ ॥ ೪೧ ॥

ಸ್ತುಹಿ ದೇವಂ ಚ ದೇವೀಂ ಚ ಭಕ್ತ್ಯಾ ಪ್ರೀತೋ ಭವೇಚ್ಛಿವಃ ।
ತತಸ್ತ್ವಪತ್ಯವಿಷಯೇ ಪ್ರಿಯಾನ್ಕಾಮಾನವಾಪ್ಸ್ಯಸಿ ॥ ೪೨ ॥

---

೩೮. ಈ ಶಾಪವನ್ನು ಕೇಳಿ ಅಗ್ನಿಯು ಭಯಗೊಂಡು ನನ್ನ(ಬ್ರಹ್ಮನ) ಬಳಿಗೆ ಬಂದು ಓ ದೇವ, ಈ ಶಾಪಕ್ಕೆ ನಿವೃತ್ತಿಯನ್ನು ಹೇಳು ಎಂದು ವಿನಯ ದಿಂದ ಬೇಡಿಕೊಳ್ಳಲು,

೩೯. ಆಗ ನಾನು (ಬ್ರಹ್ಮನು) ಅಗ್ನಿಗೆ ಎಲೈ ಅಗ್ನಿ, ಗೌತಮೀನದಿಗೆ ಹೋಗಿ ಅಲ್ಲಿ ಶಿವನನ್ನು ಸ್ತುತಿಸು. ಆ ದೇವನಿಗೆ ಈ ವಿಷಯವನ್ನು ಹೇಳು.

೪೦. ನಿನ್ನ ಶರೀರದಲ್ಲಿದ್ದ ರೇತಸ್ಸಿನಿಂದ ಇಂತಹ ವ್ಯಭಿಚಾರಿಗಳಾದ ಮಕ್ಕಳು ನಿನಗೆ ಜನಿಸಿರುವರು. ನ್ಯಾಯತಃ ಇವರು ಶಿವನ ಮಕ್ಕಳು.

೪೧. ಆದುದರಿಂದ ನೀನು ಶಿವನಿಗೆ ಈ ಶಾಪವನ್ನು ನಿವೇದಿಸು. ಅವನು ತನ್ನ ಈ ಮಕ್ಕಳಿಗೆ ಶ್ರೇಯಸ್ಸನ್ನು ಉಂಟುಮಾಡುವನು.

೪೨. ಗೌತಮೀತೀರದಲ್ಲಿ ಭವಾನೀಪರಮೇಶ್ವರರನ್ನು ಭಕ್ತಿಯಿಂದ ಸ್ತುತಿಸು. ಅದರಿಂದ ಶಿವನು ಪ್ರಸನ್ನನಾಗುವನು, ನಿನ್ನ ಮಕ್ಕಳಿಗೆ ಶ್ರೇಯ ಸ್ಸಾಗುವುದು ಎಂದೆನು.

ತತೋ ಮದ್ವಚನಾದಗ್ನಿರ್ಗಂಗಾಂ ಗತ್ವಾ ಮಹೇಶ್ವರಂ ।
ತುಷ್ಟಾವ ನಿಯತೋ ವಾಕ್ಯೈಃ ಸ್ತುತಿಭಿರ್ವೇದಸಂಮಿತೈಃ　　॥ ೪೩ ॥

॥ ಅಗ್ನಿರುವಾಚ ॥

ವಿಶ್ವಸ್ಯ ಜಗತೋ ಧಾತಾ ವಿಶ್ವಮೂರ್ತಿರ್ನಿರಂಜನಃ ।
ಆದಿಕರ್ತಾ ಸ್ವಯಂಭೂಶ್ಚ ತಂ ನಮಾಮಿ ಜಗತ್ಪತಿಂ　　॥ ೪೪ ॥

ಯೋಽಗ್ನಿರ್ಭೂತ್ವಾ ಸಂಹರತಿ ಸೃಷ್ಟ್ವಾ ವೈ ಜಲರೂಪತಃ ।
ಸೂರ್ಯರೂಪೇಣ ಯಃ ಪಾತಿ ತಂ ನಮಾಮಿ ಚ ತ್ರ್ಯಂಬಕಂ　　॥ ೪೫ ॥

॥ ಬ್ರಹ್ಮೋವಾಚ ॥

ತತಃ ಪ್ರಸನ್ನೋ ಭಗವಾನನಂತಃ ಶಂಭುರವ್ಯಯಃ ।
ವರೇಣ ಚ್ಛಂದಯಾಮಾಸ ಪಾವಕಂ ಸುರಪೂಜಿತಂ　　॥ ೪೬ ॥

ಸ ವಿನೀತಃ ಶಿವಂ ಪ್ರಾಹ ತವ ವೀರ್ಯಂ ಮಯಿ ಸ್ಥಿತಂ ।
ತೇನ ಜಾತಃ ಸುತೋ ರಮ್ಯಃ ಸುವರ್ಣೋ ಲೋಕವಿಶ್ರುತಃ　　॥ ೪೭ ॥

---

೪೩. ಆಮೇಲೆ ನನ್ನ ಮಾತಿನಂತೆ ಅಗ್ನಿಯು ಗೌತಮೀನದಿಗೆ ತೆರಳಿ ಅಲ್ಲಿ ಮಹೇಶ್ವರನನ್ನು ವೇದಾರ್ಥಪ್ರತಿಪಾದಕವಾದ ಸ್ತುತಿಗಳಿಂದ ಭಕ್ತಿಪೂರ್ವಕವಾಗಿ ಹೀಗೆ ಸ್ತುತಿಸಿದನು.

೪೪. ಮಹೇಶ್ವರನು ಜಗತ್ತಿಗೆಲ್ಲಕ್ಕೂ ಆಧಾರನು, ಜಗನ್ಮಯನು, ನಿರ್ಗುಣನು, ಜಗತ್ತಿನ ಆದಿಕರ್ತನವನು, ತಾನಾಗಿಯೇ ಜೀವರೂಪದಿಂದ ಜನಿಸುವ ಮಹಾಮಹಿಮನವನು, ಇಂತಹ ಜಗದೀಶ್ವರನಾದ ಶಿವನನ್ನು ನಮಸ್ಕರಿಸುವೆನು.

೪೫. ಪ್ರಳಯಕಾಲದಲ್ಲಿ ಪ್ರಳಯಾಗ್ನಿರೂಪದಿಂದ ಜಗತ್ತನ್ನು ಸಂಹರಿಸುವನು. ಸೃಷ್ಟಿಕಾಲದಲ್ಲಿ ಜಲರೂಪದಿಂದ ಜಗತ್ತನ್ನು ಸೃಷ್ಟಿಸುವನು. ಮಧ್ಯದಲ್ಲಿ ಸೂರ್ಯರೂಪದಿಂದ ಜಗತನ್ನು ಪಾಲಿಸುವನು. ಇಂತಹ ದೇವದೇವನಾದ ತ್ರ್ಯಂಬಕನನ್ನು ನಮಸ್ಕರಿಸುವೆನು ಎಂದು ಸ್ತುತಿಸಿದನು.

೪೬. ಆಗ ಭಗವಾನ್ ಶಂಕರನು ಪ್ರಸನ್ನನಾಗಿ ಅಗ್ನಿಗೆ ವರವನ್ನು ಕೇಳು ಎಂದು ಹೇಳಿದನು.

೪೭. ಆಗ ವಿನಯದಿಂದ ಅಗ್ನಿಯು ಓ ದೇವ, ನನ್ನಲ್ಲಿದ್ದ ನಿನ್ನ

ತಥಾ ಸುವರ್ಣಾ ಪುತ್ರೀ ಚ ತಸ್ಮಾದೇವ ಜಗತ್ಪ್ರಭೋ ।
ಅನ್ಯೋನ್ಯವೀರ್ಯಸಂಗಾಚ್ಚ ತದ್ದೋಷಾದುಭಯಂ ತ್ವಿದಂ ॥ ೪೮ ॥

ವ್ಯಭಿಚಾರಾತ್ಸದೋಷಂ ಚ ಅಪತ್ಯಮುಭವಚ್ಚಿವ ।
ಶಾಪಂ ದದುಃ ಸುರಾಃ ಸರ್ವೇ ತಯೋಃ ಶಾಂತಿಂ ಕುರು ಪ್ರಭೋ ॥ ೪೯ ॥

ತದಗ್ನಿವಚನಾಚ್ಛಂಭುಃ ಪ್ರೋವಾಚೇದಂ ಶುಭೋದಯಂ । ೫೦ ॥

॥ ಶಂಭುರುವಾಚ ॥

ಮದ್ವೀರ್ಯಾದಭವತ್ತ್ವತ್ತಃ ಸುವರ್ಣೋ ಭೂರಿವಿಕ್ರಮಃ ।
ಸಮಗ್ರಾ ಋದ್ಧಯಃ ಸರ್ವಾಃ ಸುವರ್ಣೇಽಸ್ಮಿನ್ಸಮಾಹಿತಾಃ ॥ ೫೧ ॥

ಭವಿಷ್ಯಂತಿ ನ ಸಂದೇಹೋ ವಹ್ನೇ ಶೃಣು ವಚೋ ಮಮ ।
ತ್ರಯಾಣಾಮಪಿ ಲೋಕಾನಾಂ ಪಾವನಃ ಸ ಭವಿಷ್ಯತಿ ॥ ೫೨ ॥

ವೀರ್ಯದಿಂದ ಸುವರ್ಣನೆಂಬ ಸುಂದರನಾದ ಕುಮಾರನೂ ಸುವರ್ಣೆಯೆಂಬ ಕುಮರಿಯೂ ಜನಿಸಿದರು.

೪೮. ನಮ್ಮಿಬ್ಬರ ವೀರ್ಯದ ಸಂಬಂಧದಿಂದಲೂ ವ್ಯಭಿಚಾರದಿಂದಲೂ ಆ ಮಕ್ಕಳಿಬ್ಬರೂ ವ್ಯಭಿಚಾರಿಗಳಾಗಿರುವರು.

೪೯. ದೇವತೆಗಳು ನಿನ್ನ ಮಕ್ಕಳಿಗೆ ಶಾಪವನ್ನು ಕೊಟ್ಟಿರುವರು ಓ ದೇವ, ಅವರ ಶಾಪವನ್ನು ನಿವೃತ್ತಿಮಾಡು (ಹೋಗಲಾಡಿಸು) ಎಂದು ಹೇಳಿದನು.

೫೦-೫೨. ಅಗ್ನಿಯ ಆ ಮಾತನ್ನು ಕೇಳಿ ಶಿವನು ಇಂತೆಂದನು— ಎಲೈ ಅಗ್ನಿ, ನನ್ನ ವೀರ್ಯದಿಂದ ನಿನ್ನಲ್ಲಿ ಸುವರ್ಣನು ಜನಿಸಿದನು. ಆ ಸುವರ್ಣನಿಗೆ ಎಲ್ಲ ಬಗೆಯ ಐಶ್ವರ್ಯಗಳೂ ಕೂಡಿಬರುವುವು. ನನ್ನ ಮಾತನ್ನು ಕೇಳು. ಅದರಂತೆ ನಡೆದರೆ ಸುವರ್ಣಕುಮಾರನು ಮೂರು ಲೋಕಗಳಲ್ಲಿಯೂ ಪಾವನನಾಗುವನು.

ಸ ಏವ ಚಾಮೃತಂ ಲೋಕೇ ಸ ಏವ ಸುರವಲ್ಲಭಃ ।
ಸ ಏವ ಭುಕ್ತಿಮುಕ್ತೀ ಚ ಸ ಏವ ಮುಖದಕ್ಷಿಣಾ ॥ ೫೩ ॥

ಸ ಏವ ರೂಪಂ ಸರ್ವಸ್ಯ ಗುರೂಣಾಮಪ್ಯಸೌ ಗುರುಃ ।
ವೀರ್ಯಂ ಶ್ರೇಷ್ಠತಮಂ ವಿದ್ಯಾದ್ವೀರ್ಯಂ ಮತ್ತೋ ಯದುತ್ತಮಂ ॥೫೪॥

ವಿಶೇಷತಸ್ತ್ವಯಿ ಕ್ಷಿಪ್ತಂ ತಸ್ಯ ಕಾ ಸ್ಯಾದ್ವಿಚಾರಣಾ ।
ಹೀನಂ ತೇನ ವಿನಾ ಸರ್ವಂ ಸಂಪೂರ್ಣಾಸ್ತೇನ ಸಂಪದಃ ॥ ೫೫ ॥

ಜೀವಂತೋಽಪಿ ಮೃತಾಃ ಸರ್ವೇ ಸುವರ್ಣೇನ ವಿನಾ ನರಾಃ ।
ನಿರ್ಗುಣೋಽಪಿ ಧನೀ ಮಾನ್ಯಃ ಸಗುಣೋಽಪ್ಯಧನೋ ನ ಹಿ ॥ ೫೬ ॥

ತಸ್ಮಾನ್ನಾತಃ ಪರಂ ಕಿಂಚಿತ್ಸುವರ್ಣಾದ್ಧಿ ಭವಿಷ್ಯತಿ ।
ತಥಾ ಚೈಷಾ ಸುವರ್ಣಾಪಿ ಸ್ಯಾದುತ್ಕೃಷ್ಟಾಪಿ ಚಂಚಲಾ ॥ ೫೭ ॥

---

೫೩. ಈ ಸುವರ್ಣನೇ ಅಮೃತತತ್ವಸಾಧಕನು, ದೇವಪ್ರಿಯನಿವನು, ಭೋಗಮೋಕ್ಷಗಳಿಗಿವನು ಸಾಧಕನಾಗುವನು, ಯಾಗದಕ್ಷಿಣೆಯಾಗುವನು, ಎಲ್ಲ ದಾನವಸ್ತುಗಳ ಪ್ರತಿನಿಧಿಯು ಸುವರ್ಣನು, ತುಂಬಾ ಬೆಲೆಯುಳ್ಳವನು.

೫೪-೫೫. ಪ್ರಾಣಿದೇಹದಲ್ಲಿ ವೀರ್ಯವು ಅತಿಶ್ರೇಷ್ಠವಾದುದು. ಅದರಲ್ಲಿಯೂ ನನ್ನ ವೀರ್ಯವನ್ನು ಕೇಳಬೇಕೆ ? ಮೇಲಾಗಿ ಆ ವೀರ್ಯವು ನಿನ್ನಲ್ಲಿ ರೂಪಗೊಂಡಿರುವುದು. ಇಂತಹ ಸುವರ್ಣನ ಶ್ರೇಷ್ಠ್ಯವನ್ನು ವರ್ಣಿಸುವುದೇನು ? ಇವನಿಂದ ಸಕಲೈಶ್ವರ್ಯವೂ ಉಂಟಾಗುವುದು.

೫೬. ಸುವರ್ಣವಿಲ್ಲದವನು ಬದುಕಿದ್ದರೂ ಸತ್ತಂತೆಯೇ. ಸುವರ್ಣವುಳ್ಳ ಧನಿಕನು ಗುಣಹೀನನಾಗಿದ್ದರೂ ಗೌರವಾರ್ಹನಾಗುವನು. ಧನವಿಲ್ಲದವನು ಎಂತಹ ಸುಗುಣಿಯಾದರೂ ಮಾನ್ಯನಾಗುವುದಿಲ್ಲ. ಗೌರವಸ್ಥನಾಗವುದಿಲ್ಲ.

೫೭. ಆದುದರಿಂದ| ಈ ಸುವರ್ಣನಿಗಿಂತಲೂ ಶ್ರೇಷ್ಠವಸ್ತುವು ಯಾವುದೂ ಇಲ್ಲ. ಅದರಂತೆ ಈ ಸುವರ್ಣಾದೇವಿಯೂ ಶ್ರೇಷ್ಠಳು. ಆದರೂ ಇವಳು ಚಂಚಲೆಯಾಗುವಳು.

ಅನಯಾ ವೀಕ್ಷಿತಂ ಸರ್ವಂ ನ್ಯೂನಂ ಪೂರ್ಣಂ ಭವಿಷ್ಯತಿ ।
ತಪಸಾ ಜಪಹೋಮೈಶ್ಚ ಯೇಯಂ ಪ್ರಾಪ್ಯಾ ಜಗತ್ತ್ರಯೇ ॥ ೫೮ ॥

ತಸ್ಯಾಃ ಪ್ರಭಾವಂ ಪ್ರಾಶಸ್ತ್ಯಮಗ್ನೇ ಕಿಂಚಿಚ್ಚ ಕೀರ್ತ್ಯತೇ ।
ಸರ್ವತ್ರ ಯಾ ತು ಸಂತಿಷ್ಠೇದಾಯಾತು ವಿಚರಿಷ್ಯತಿ ॥ ೫೯ ॥

ಸುವರ್ಣಾ ಕಮಲಾ ಸಾಕ್ಷಾತ್ಪವಿತ್ರಾ ಚ ಭವಿಷ್ಯತಿ ।
ಅದ್ಯ ಪ್ರಭೃತ್ಯಾತ್ಮಜಯೋಸ್ತಥಾ ಸ್ವೈರಂ ವಿಚೇಷ್ಟತೋಃ ॥ ೬೦ ॥

ತಥಾಪಿ ಚೈತಯೋಃ ಪುಣ್ಯಂ ನ ಭೂತಂ ನ ಭವಿಷ್ಯತಿ ॥ ೬೧ ॥

॥ ಬ್ರಹ್ಮೋವಾಚ ॥

ಏವಮುಕ್ತ್ವಾ ತತಃ ಶಂಭುಃ ಸಾಕ್ಷಾತ್ತತ್ರಾಭವಚ್ಛಿವಃ ।
ಲಿಂಗರೂಪೇಣ ಸರ್ವೇಷಾಂ ಲೋಕಾನಾಂ ಹಿತಕಾಮ್ಯಯಾ ॥ ೬೨ ॥

ವರಾನ್ಪ್ರಾಪ್ಯ ಸುತಾಭ್ಯಾಂ ಸ ಅಗ್ನಿಸ್ತುಷ್ಟೋಽಭವತ್ತತಃ ।
ಸ್ವಭರ್ತ್ರಾ ಚ ಸುವರ್ಣಾ ಸಾ ಧರ್ಮೇಣಾಗ್ನಿಸುತಾ ಮುದಾ ॥ ೬೩ ॥

---

೫೮. ಇವಳು ನೋಡಿದರೆ ಎಂತಹ ಶೂನ್ಯವಸ್ತುವೂ ಪರಿಪೂರ್ಣವಾಗುವುದು. ತಪಸ್ಸು ಜಪಹೋಮಗಳಿಂದ ಇವಳನ್ನು ಪಡೆಯಲು ಸಾಧ್ಯವಿಲ್ಲ.

೫೯. ಎಲೈ ಅಗ್ನಿ, ಸುವರ್ಣೆಯ ಪ್ರಾಶಸ್ತ್ಯವನ್ನು ಸ್ವಲ್ಪಹೇಳುವೆನು. ಎಲ್ಲೆಡೆಯಲ್ಲಿಯೂ ಸಂಚರಿಸುವ ನಲಿದಾಡುವ ಸಾಕ್ಷಾತ್ ಲಕ್ಷ್ಮಿಯೇ ಈ ಸುವರ್ಣೆಯು. ಇವಳು ಶಾಪನಿವೃತ್ತಿಯಾಗಿ ಪವಿತ್ರಳಾಗುವಳು.

೬೦-೬೧. ಇದು ಮೊದಲುಗೊಂಡು ಈ ನಿನ್ನ ಮಕ್ಕಳು ಯಥೇಚ್ಛೆಯಿಂದ ವಿಹರಿಸಿದರೂ ಸಹ ದೋಷವುಳ್ಳವರಾಗುವುದಿಲ್ಲ. ಇವರಂತಹ ಪುಣ್ಯವಂತರು ಇನ್ನು ಹುಟ್ಟುವುದಿಲ್ಲ, ಹಿಂದೆಯೂ ಜನಿಸಿಲ್ಲ ಎಂದನು.

೬೨. ಹೀಗೆ ಹೇಳಿ ಶಂಕರನು ಆ ಸ್ಥಳದಲ್ಲಿ ಲೋಕಕ್ಷೇಮಕ್ಕಾಗಿ ಲಿಂಗರೂಪದಿಂದ ನೆಲಸಿದನು.

೬೩. ವರಗಳನ್ನು ಪಡೆದು ಅಗ್ನಿಯು ಮಕ್ಕಳೊಂದಿಗೆ ಸಂತಸದಿಂದಿದ್ದನು. ಸುವರ್ಣಾದೇವಿಯು ಪತಿಯಾದ ಯಮಧರ್ಮನೊಡನೆ ಸುಖವಾಗಿದ್ದಳು. ಸುವರ್ಣನೂ ಅಗ್ನಿಯ ಅಪ್ಪಣೆಯಂತೆ ನಡೆಯುತ್ತಿದ್ದನು.

ವರ್ತಯಾಮಾಸ ಪುತ್ರ್ಯೋSಪಿ ವಹ್ನೇಃ ಸಂಕಲ್ಪಯಾ ಮುದಾ ।
ಏತಸ್ಮಿನ್ನಂತರೇ ಸ್ವರ್ಣಾಮಗ್ನೇರ್ದುಹಿತರಂ ಮುನೇ ॥ ೬೪ ॥

ಪರಿಭೂಯ ಚ ಧರ್ಮಂ ತಂ ಶಾರ್ದೂಲೋ ದಾನವೇಶ್ವರಃ ।
ಅಹರದ್ಭಾಗ್ಯಸೌಭಾಗ್ಯವಿಲಾಸವಸತಿಂ ಬಲಾತ್ ॥ ೬೫ ॥

ನೀತಾ ರಸಾತಲಂ ತೇನ ಸುವರ್ಣಾ ಲೋಕವಿಶ್ರುತಾ ।
ಜಾಮಾತಾಗ್ನೇಃ ಸ ಧರ್ಮಶ್ಚ ಅಗ್ನಿಶ್ಚೈವ ಸ ಹವ್ಯವಾಟ್ ॥ ೬೬ ॥

ವಿಷ್ಣವೇ ಲೋಕನಾಥಾಯ ಸ್ತುತ್ವಾ ಚೈವ ಪುನಃ ಪುನಃ ।
ಕಾರ್ಯವಿಜ್ಞಾಪನಂ ಚೋಭೌ ಚಕ್ರತುಃ ಪ್ರಭವಿಷ್ಣವೇ ॥ ೬೭ ॥

ತತಶ್ಚಕ್ರೇಣ ಚಿಚ್ಛೇದ ಶಾರ್ದೂಲಸ್ಯ ಶಿರೋ ಹರಿಃ ।
ಸಾನೀತಾ ವಿಷ್ಣುನಾ ದೇವೀ ಸುವರ್ಣಾ ಲೋಕಸುಂದರೀ ॥ ೬೮ ॥

ಮಹೇಶ್ವರಸುತಾ ಚೈವ ಅಗ್ನೇಶ್ಚೈವ ತಥಾ ಪ್ರಿಯಾ ।
ಮಹೇಶ್ವರಾಯ ತಾಂ ವಿಷ್ಣುರ್ದರ್ಶಯಾಮಾಸ ನಾರದ ॥ ೬೯ ॥

೬೪-೬೫. ಈ ಮಧ್ಯದಲ್ಲಿ ಶಾರ್ದೂಲನೆಂಬ ದಾನವೋತ್ತಮನು ಯಮನನ್ನು ಮೋಸಗೊಳಿಸಿ ಅವನ ಪತ್ನಿಯಾದ ಸುವರ್ಣಾದೇವಿಯನ್ನು ಐಶ್ವರ್ಯದಿಂದ ತುಂಬಿದ ತನ್ನ ಅರಮನೆಗೆ ಕೊಂಡೊಯ್ದನು.

೬೬-೬೭. ಸುವರ್ಣಾದೇವಿಯನ್ನು ದೈತ್ಯನು ಪಾತಾಳಕ್ಕೆ ಒಯ್ಯಲು ಅಗ್ನಿಯೂ ಅಳಿಯನಾದ ಯಮಧರ್ಮನೂ ಸಹ ಜಗತ್ಪತಿಯಾದ ಹರಿಯ ಬಳಿಗೆ ಬಂದು ಭಕ್ತಿಯಿಂದ ಅವನನ್ನು ಸ್ತುತಿಸಿ ನಡೆದ ಸಮಾಚಾರವನ್ನು ವಿಜ್ಞಾಪಿಸಿದರು.

೬೮. ಆಗ ಹರಿಯು ಪಾತಾಳಕ್ಕೆಹೋಗಿ ಶಾರ್ದೂಲಾಸುರನ ತಲೆಯನ್ನು ಚಕ್ರದಿಂದ ಕತ್ತರಿಸಿ ಅಗ್ನಿಶಿವರ ಪುತ್ರಿಯೂ ಲೋಕಸುಂದರಿಯೂ ಆದ ಸುವರ್ಣಾದೇವಿಯನ್ನು ಹಿಂದಕ್ಕೆ ಕರೆತಂದನು.

೬೯. ತಾನು ಕರೆತಂದ ಆ ಸುವರ್ಣಾದೇವಿಯನ್ನು ಹರಿಯು ಮಹೇಶ್ವರನಿಗೆ ಒಪ್ಪಿಸಿದನು. ಶಿವನು ಅವಳನ್ನು ವಾತ್ಸಲ್ಯದಿಂದ ಆಲಂಗಿಸಿ ಸಂತಸಗೊಂಡನು.

ಪ್ರೀತೋऽಭವನ್ಮಹೇಶೋऽಪಿ ಸಸ್ವಜೇ ತಾಂ ಪುನಃ ಪುನಃ ।
ಚಕ್ರಂ ಪ್ರಕ್ಷಾಲಿತಂ ಯತ್ರ ಶಾರ್ದೂಲಚ್ಛೇದಿ ದೀಪ್ತಿಮತ್ ॥ ೭೦ ॥

ಚಕ್ರತೀರ್ಥಂ ತು ವಿಖ್ಯಾತಂ ಶಾರ್ದೂಲಂ ಚೇತಿ ತದ್ವಿದುಃ ।
ಯತ್ರ ನೀತಾ ಸುವರ್ಣಾ ಸಾ ವಿಷ್ಣುನಾ ಶಂಕರಾಂತಿಕಂ ॥ ೭೧ ॥

ತತ್ತೀರ್ಥಂ ಶಾಂಕರಂ ಜ್ಞೇಯಂ ವೈಷ್ಣವಂ ಸಿದ್ಧಮೇವ ತು ।
ಯತ್ರಾನಂದಮನುಪ್ರಾಪ್ತೋ ಹ್ಯಗ್ನಿರ್ಧರ್ಮಶ್ಚ ಶಾಶ್ವತಃ ॥ ೭೨ ॥

ಆನಂದಾಶ್ರೂಣಿ ನ್ಯಪತನ್ಯತ್ರಾಗ್ನೇರ್ಮುನಿಸತ್ತಮ ।
ಆನಂದೇತಿ ನದೀ ಜಾತಾ ತಥಾ ವೈ ನಂದಿನೀತಿ ಚ ॥ ೭೩ ॥

ತಸ್ಯಾಶ್ಚ ಸಂಗಮಃ ಪುಣ್ಯೋ ಗಂಗಾಯಾಂ ತತ್ರ ವೈ ಶಿವಃ ।
ತತ್ರೈವ ಸಂಗಮೇ ಸಾಕ್ಷಾತ್ಸುವರ್ಣಾಖ್ಯಾಪಿ ಸಂಸ್ಥಿತಾ ॥ ೭೪ ॥

---

೭೦. ಶಾರ್ದೂಲನನ್ನು ಕತ್ತರಿಸಿದ ಚಕ್ರವನ್ನು ಹರಿಯು ಗೌತಮಿಯಲ್ಲಿ ತೊಳೆದನು. ಆ ಸ್ಥಳವು ಚಕ್ರತೀರ್ಥವೆಂದೂ ಶಾರ್ದೂಲತೀರ್ಥವೆಂದೂ ಪ್ರಸಿದ್ಧವಾಯಿತು-

೭೧. ಸುವರ್ಣಾದೇವಿಯನ್ನು ಹರಿಯು ಶಂಕರನ ಬಳಿಗೆ ಕರೆತಂದ ಸ್ಥಳವು ಶಂಕರತೀರ್ಥವೆಂದೂ, ವಿಷ್ಣುತೀರ್ಥವೆಂದೂ, ಸಿದ್ಧತೀರ್ಥವೆಂದೂ ಪ್ರಸಿದ್ಧವಾಯಿತು.

೭೨-೭೩. ಅಗ್ನಿಯೂ ಯಮಧರ್ಮನೂ ಸಹ ಸುವರ್ಣಾದೇವಿಯನ್ನು ಪುನಃ ಪಡೆದು ಆನಂದಬಾಷ್ಪಗಳನ್ನು ಸುರಿಸಿದರು, ಆ ಆನಂದಜಲದಿಂದ ಆನಂದಾ ನಂದಿನೀ ಎಂಬ ಹೆಸರುಳ್ಳ ಎರಡು ನದಿಗಳಾದವು

೭೪. ಆ ನಂದಿನಿಯು ಗೌತಮೀನದಿಯಲ್ಲಿ ಸೇರಿತು. ಆ ಗೌತಮೀ ನಂದಿನಿಯರ ಸಂಗಮಸ್ಥಳದಲ್ಲಿ ಶಿವನೂ ಸುವರ್ಣಾದೇವಿಯೂ ಸಾಕ್ಷಾತ್ತಾಗಿ ನೆಲಸಿರುವರು.

ದಾಕ್ಷಾಯಣೀ ಸೈವ ಶಿವಾ ಆಗ್ನೇಯೀ ಚೇತಿ ವಿಶ್ರುತಾ ।
ಅಂಬಿಕಾ ಜಗದಾಧಾರಾ ಶಿವಾ ಕಾತ್ಯಾಯನೀಶ್ವರೀ ॥ ೭೫ ॥

ಭಕ್ತಾಭೀಷ್ಟಪ್ರದಾ ನಿತ್ಯಮಲಂಕೃತ್ಯೋಭಯಂ ತಟಂ ।
ತಪಸ್ತೇಪೇ ಯತ್ರ ಚಾಗ್ನಿಸ್ತತ್ತೀರ್ಥಂ ತು ತಪೋವನಂ ॥ ೭೬ ॥

ಏವಮಾದೀನಿ ತೀರ್ಥಾನಿ ತೀರಯೋರುಭಯೋರ್ಮುನೇ ।
ತೇಷು ಸ್ನಾನಂ ಚ ದಾನಂ ಚ ಸರ್ವಕಾಮಪ್ರದಂ ಶುಭಂ ॥ ೭೭ ॥

ಉತ್ತರೇ ಚೈವ ಪಾರೇ ಚ ಸಹಸ್ರಾಣಿ ಚತುರ್ದಶ ।
ದಕ್ಷಿಣೇ ಚ ತಥಾ ಪಾರೇ ಸಹಸ್ರಾಣ್ಯಥ ಷೋಡಶ ॥ ೭೮ ॥

ತತ್ರ ತತ್ರ ಚ ತೀರ್ಥಾನಿ ಸಾಭಿಜ್ಞಾನಾನಿ ಸಂತಿ ವೈ ।
ನಾಮಾನಿ ಚ ಪೃಥಕ್ ಸಂತಿ ಸಂಕ್ಷೇಪಾತ್ತನ್ಮಯೋಚ್ಯತೇ ॥ ೭೯ ॥

---

೭೫. ಆ ಸುವರ್ಣಾದೇವಿಯೇ ದಾಕ್ಷಾಯಣಿ, ಶಿವಾ, ಆಗ್ನೇಯೀ ಅಂಬಿಕಾ, ಕಾತ್ಯಾಯನೀ ಈಶ್ವರೀ ಎಂಬ ಹೆಸರುಗಳಿಂದ ಪ್ರಸಿದ್ಧಳಾಗಿರುವಳು. ಜಗತ್ತಿಗಾಧಾರಳಾದ ಜಗನ್ಮಾತೆಯುವಳು. ಭಕ್ತರಿಗೆ ಇಷ್ಟಾರ್ಥಗಳನ್ನು ಸಲ್ಲಿಸುವಳು. ಇಂತಹ ಸುವರ್ಣಾದೇವಿಯು ಆ ಗೌತಮಿಯ ತೀರಗಳೆರಡರಲ್ಲೂ ನೆಲಸಿರುವಳು.

೭೬-೭೭. ಅಗ್ನಿಯು ತಪಸ್ಸುಮಾಡಿದ ಸ್ಥಳವು ತಪೋವನವೆಂದು ಹೆಸರುಗೊಂಡಿತು. ಇವೇ ಮೊದಲಾದ ತೀರ್ಥಗಳು ಅಲ್ಲಿ ಗೌತಮಿಯ ಎರಡು ತೀರಗಳಲ್ಲೂ ಇರುವುವು. ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಇಷ್ಟಾರ್ಥಗಳೆಲ್ಲವೂ ಲಭಿಸುವುವು.

೭೮. ಉತ್ತರತೀರದಲ್ಲಿ ಹದಿನಾಲ್ಕುಸಾವಿರ (14000) ತೀರ್ಥಗಳಿರುವುವು. ದಕ್ಷಿಣ ತೀರದಲ್ಲಿ ಹದಿನಾರುಸಾವಿರ (16000) ತೀರ್ಥಗಳಿರುವುವು.

೭೯. ಆ ತೀರ್ಥಗಳೆಲ್ಲಕ್ಕೂ ಬೇರೆಬೇರೆ ಹೆಸರುಗಳಿರುವುವು. ಮುಂದೆ ಅವೆಲ್ಲವನ್ನೂ ಸಂಕ್ಷೇಪವಾಗಿ ಹೇಳುವೆನು.

ಏತಾನಿ ಯಶ್ಚ ಶೃಣುಯಾದ್ಯಶ್ಚ ವಾ ಪಠತಿ ಸ್ಮರೇತ್ ।
ಸರ್ವೇಷು ತತ್ರ ಕಾಮ್ಯೇಷು ಪರಿಪೂರ್ಣೋ ಭವೇನ್ನರಃ ॥ ೮೦ ॥

ಏತದ್ವೃತ್ತಂ ತು ಯೋ ಜ್ಞಾತ್ವಾ ತತ್ರ ಸ್ನಾನಾದಿಕಂ ಚರೇತ್ ।
ಲಕ್ಷ್ಮೀವಾನ್ ಜಾಯತೇ ನಿತ್ಯಂ ಧರ್ಮವಾಂಶ್ಚ ವಿಶೇಷತಃ ॥ ೮೧ ॥

ಅಬ್ಜಕಾತ್ಪಶ್ಚಿಮೇ ತೀರ್ಥಂ ತಚ್ಛಾರ್ದೂಲಮುದಾಹೃತಂ ।
ವಾರಾಣಸ್ಯಾದಿತೀರ್ಥೇಭ್ಯಃ ಸರ್ವೇಭ್ಯೋ ಹ್ಯಧಿಕಂ ಭವೇತ್ ॥ ೮೨ ॥

ತತ್ರ ಸ್ನಾತ್ವಾ ಪಿತ್ರೂನ್ದೇವಾನ್ನಂದತೇ ತರ್ಪಯತ್ಯಪಿ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ ॥ ೮೩ ॥

ತಪೋವನಾಚ್ಚ ಶಾರ್ದೂಲಾನ್ಮಧ್ಯೇ ತೀರ್ಥಾನ್ಯಶೇಷತಃ ।
ತಸ್ಯೈಕೈಕಸ್ಯ ಮಾಹಾತ್ಮ್ಯಂ ನ ಕೇನಾಪ್ಯತ್ರ ವರ್ಣ್ಯತೇ ॥ ೮೪ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ತಪೋವನನಂದಿನೀಸಂಗಮೇಶ್ವರದೇವೀದಾಕ್ಷಾಯಣೀಸಿದ್ಧೇಶ್ವರವೈಷ್ಣವಶಾರ್ದೂಲಾಗ್ನಿಚಕ್ರತೀರ್ಥಾದಿತ್ರಿಂಶತ್ಸಹಸ್ರತೀರ್ಥವರ್ಣನಂ ನಾಮಾಷ್ಟಾವಿಂಶತ್ಯಧಿಕಶತತಮೋಽಧ್ಯಾಯಃ

---

೮೦. ಈ ತೀರ್ಥಗಳ ಮಾಹಾತ್ಮ್ಯವನ್ನು ಪಠಿಸಿದರೂ, ಸ್ಮರಿಸಿದರೂ, ಕೇಳಿದರೂ ಸಹ ಇಷ್ಟಾರ್ಥಗಳೆಲ್ಲವೂ ತಪ್ಪದೆ ಲಭಿಸುವುವು.

೮೧. ಈ ತೀರ್ಥಮಾಹಾತ್ಮ್ಯವನ್ನು ತಿಳಿದು ಆ ತೀರ್ಥದಲ್ಲಿ ಸ್ನಾನಾದಿಗಳನ್ನು ಮಾಡುವವನು ಐಶ್ವರ್ಯವಂತನೂ ಧರ್ಮನಿಷ್ಠನೂ ಆಗುವನು.

೮೨. ಚಕ್ರತೀರ್ಥಕ್ಕೆ ಪಶ್ಚಿಮದಲ್ಲಿ ಶಾರ್ದೂಲತೀರ್ಥವಿರುವುದು. ಆ ತೀರ್ಥವು ವಾರಾಣಸೀ ಮೊದಲಾದ ತೀರ್ಥಗಳಿಗಿಂತಲೂ ಶ್ರೇಷ್ಠವಾದುದು.

೮೩. ಇಂತಹ ಶಾರ್ದೂಲತೀರ್ಥದಲ್ಲಿ ಸ್ನಾನಮಾಡಿ ದೇವತೆಗಳ ಆರಾಧನೆಯನ್ನೂ ಪಿತೃತರ್ಪಣವನ್ನೂ ಮಾಡಿದರೆ ಪಾಪಗಳೆಲ್ಲವೂ ನಾಶವಾಗುವುವು. ಮುಂದಿನ ಜನ್ಮದಲ್ಲಿ ವಿಷ್ಣುಲೋಕದಲ್ಲಿ ವಿಹರಿಸುವನು.

೮೪. ತಪೋವನ ಮತ್ತು ಶಾರ್ದೂಲತೀರ್ಥಗಳ ಮಧ್ಯದೇಶದಲ್ಲಿ ಮೇಲೆಹೇಳಿದ ತೀರ್ಥಗಳೆಲ್ಲವೂ ಇರುವುವು. ಅವುಗಳ ಮಾಹಾತ್ಮ್ಯವನ್ನು ಬೇರೆಬೇರೆಯಾಗಿ ಯಾವನೂ ವರ್ಣಿಸಲಾರನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿತಪೋವನಾದಿತೀರ್ಥವರ್ಣನವೆಂಬ ನೂರಿಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಐವತ್ತೊಂಭತ್ತನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಏಕೋನತ್ರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಇಂದ್ರತೀರ್ಥಮಿತಿ ಖ್ಯಾತಂ ತತ್ರೈವ ಚ ವೃಷಾಕಪಂ ।
ಫೇನಾಯಾಃ ಸಂಗಮೋ ಯತ್ರ ಹನೂಮಂತಂ ತಥೈವ ಚ ॥ ೧ ॥

ಅಬ್ಜಕಂ ಚಾಪಿ ಯತ್ಪ್ರೋಕ್ತಂ ಯತ್ರ ದೇವಸ್ತ್ರಿವಿಕ್ರಮಃ ।
ತತ್ರ ಸ್ನಾನಂ ಚ ದಾನಂ ಚ ಪುನರಾವೃತ್ತಿದುರ್ಲಭಂ ॥ ೨ ॥

ತತ್ರ ವೃತ್ತಾನ್ಯಥಾಖ್ಯಾಸ್ಯೇ ಗಂಗಾಯಾ ದಕ್ಷಿಣೇ ತಟೇ ।
ಇಂದ್ರೇಶ್ವರಂ ಚೋತ್ತರೇ ಚ ಶೃಣು ಭಕ್ತ್ಯಾ ಯತವ್ರತಃ ॥ ೩ ॥

ನೂರಿಪ್ಪತ್ತೊಂಭತ್ತನೆಯ ಅಧ್ಯಾಯವು

೧. ಬ್ರಹ್ಮನಿಂತೆಂದನು—ಇಂದ್ರತೀರ್ಥ, ವೃಷಾಕಪಿತೀರ್ಥ, ಫೇನಾಸಂಗಮತೀರ್ಥ, ಹನೂಮತತೀರ್ಥಗಳೆಂಬ ಪುಣ್ಯತೀರ್ಥಗಳು ಅಲ್ಲಿಯೇ ಇರುವುವು.

೨. ಅಬ್ಜಕತೀರ್ಥದಲ್ಲಿ ತ್ರಿವಿಕ್ರಮದೇವನು ನೆಲಸಿರುವನು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಮುಕ್ತಿಯು ಲಭಿಸುವುದು.

೩. ಈ ಅಬ್ಜಕತೀರ್ಥವು ಗಂಗೆಯ ದಕ್ಷಿಣತೀರದಲ್ಲಿರುವುದು, ಉತ್ತರತೀರದಲ್ಲಿ ಇಂದ್ರೇಶ್ವರತೀರ್ಥವಿರುವುದು. ಆ ತೀರ್ಥದ ಮಾಹಾತ್ಮ್ಯವನ್ನು ಹೇಳುವೆನು, ಎಲೈ ನಾರದ, ಶ್ರದ್ಧೆಯಿಂದ ಕೇಳು

ನಮುಚಿರ್ಬಲವಾನಾಸೀದಿಂದ್ರಶತ್ರುರ್ಮದೋತ್ಕಟಃ ।
ತಸ್ಯೇಂದ್ರೇಣಾಭವದ್ಯುದ್ಧಂ ಫೇನೇನೇಂದ್ರೋऽಹರಚ್ಛಿರಃ ॥ ೪ ॥

ಅಪಾಂ ಚ ನಮುಚೇಃ ಶತ್ರೋಸ್ತತ್ಫೇನವಜ್ರರೂಪಧೃಕ್ ।
ಶಿರಶ್ಛಿತ್ವಾ ತಚ್ಚ ಫೇನಂ ಗಂಗಾಯಾ ದಕ್ಷಿಣೇ ತಟೇ ॥ ೫ ॥

ನ್ಯಪತದ್ಭೂಮಿಂ ಭಿತ್ತ್ವಾ ತು ರಸಾತಲಮಥಾವಿಶತ್ ।
ರಸಾತಲಭವಂ ಗಾಂಗಂ ವಾರಿ ಯದ್ವಿಶ್ವಪಾವನಂ ॥ ೬ ॥

ವಜ್ರಾದಿಷ್ಟೇನ ಮಾರ್ಗೇಣ ವ್ಯಗಮದ್ಭೂಮಿಮಂಡಲಂ ।
ತಜ್ಜಲಂ ಫೇನನಾಮ್ನಾ ತು ನದೀ ಫೇನೇತಿ ಗದ್ಯತೇ ॥ ೭ ॥

ತಸ್ಯಾಸ್ತು ಸಂಗಮಃ ಪುಣ್ಯೋ ಗಂಗಾಯಾ ಲೋಕವಿಶ್ರುತಃ ।
ಸರ್ವಪಾಪಕ್ಷಯಕರೋ ಗಂಗಾಯಮುನಯೋರಿವ ॥ ೮ ॥

---

೪. ನಮುಚಿಯೆಂಬ ಬಲಿಷ್ಠನಾದ ಪರಾಕ್ರಮಿಯಾದ ದೈತ್ಯನಿದ್ದನು. ಅವನಿಗೂ ಇಂದ್ರನಿಗೂ ಘೋರ ಯುದ್ಧವಾಯಿತು. ಫೇನ (ನೊರೆ) ದಿಂದ ಇಂದ್ರನು ನಮುಚಿಯ ತಲೆಯನ್ನು ಕತ್ತರಿಸಿದನು.

೫. ಜಲಕ್ಕೂ ನಮುಚಿಗೂ ವೈರವಿತ್ತು. ಜಲವು ಫೇನರೂಪದಿಂದ ಇಂದ್ರನಮೂಲಕ ನಮುಚಿಯ ತಲೆಯನ್ನು ಕತ್ತರಿಸಿ ಗಂಗಾನದಿಯ ದಕ್ಷಿಣ ತೀರದಲ್ಲಿ ಬಿದ್ದು ಅಲ್ಲಿನ ಭೂಮಿಯನ್ನು ಭೇದಿಸಿ ಪಾತಾಳಕ್ಕೆ ಪ್ರವೇಶಿಸಿತು.

೬. ಹೀಗೆ ಭಿನ್ನವಾದ ಮಾರ್ಗದಿಂದ ಪವಿತ್ರವಾದ ಪಾತಾಳಗಂಗೆಯ ನೀರು ಮೇಲಕ್ಕೆ ಭೂಮಿಗೆ ಬಂದಿತು.

೭. ಹಾಗೆ ಭೂಮಿಗೆ ಬಂದ ಪಾತಾಳಗಂಗಾಜಲವು ಫೇನಾನದಿಯೆಂಬ ಹೆಸರಿನಿಂದ ಹರಿದು ಗೌತಮೀನದಿಯನ್ನು ಸೇರಿತು. ಈ ಫೇನಾಗೌತಮೀ ಸಂಗಮವು ಪುಣ್ಯತಮವಾದುದು. ಗಂಗಾಯಮುನಾ ಸಂಗಮದಂತೆ ಸಕಲ ಪಾಪಗಳನ್ನೂ ಹೋಗಲಾಡಿಸುವುದು.

೮–೧೦. ಹನುಮಂತನ ಮಲತಾಯಿಯು ಸ್ನಾನಮಾಡಿ ವಿಷ್ಣು

ಹನೂಮದುಪಮಾತಾ ವೈ ಯತ್ರಾಗ್ಲವನಮಾತ್ರತಃ ।
ಮಾರ್ಜಾರತ್ವಾದಭೂನ್ಮುಕ್ತಾ ವಿಷ್ಣುಗಂಗಾಪ್ರಸಾದತಃ ॥ ೯ ॥

ಮಾರ್ಜಾರಂ ಚೇತಿ ತತ್ತೀರ್ಥಂ ಪುರಾ ಪ್ರೋಕ್ತಂ ಮಯಾ ತವ ।
ಹನೂಮತಂ ಚ ತತ್ಪ್ರೋಕ್ತಂ ತತ್ರಾಖ್ಯಾತಂ ಪುರೋದಿತಂ ॥ ೧೦ ॥

ವೃಷಾಕಪಂ ಚಾಬ್ಜಕಂ ಚ ತತ್ರೇದಂ ಪ್ರಯತಃ ಶೃಣು ।
ಹಿರಣ್ಯ ಇತಿ ವಿಖ್ಯಾತೋ ದೈತ್ಯಾನಾಂ ಪೂರ್ವಜೋ ಬಲೀ ॥ ೧೧ ॥

ತಪಸ್ತಪ್ತ್ವಾ ಸುರೈಃ ಸರ್ವೈರಜೇಯೋಽಭೂತ್ಸುದಾರುಣಃ ।
ತಸ್ಯಾಪಿ ಬಲವಾನ್ಪುತ್ರೋ ದೇವಾನಾಂ ದುರ್ಜಯಃ ಸದಾ ॥ ೧೨ ॥

ಮಹಾಶನಿರಿತಿ ಖ್ಯಾತಸ್ತಸ್ಯ ಭಾರ್ಯಾ ಪರಾಜಿತಾ ।
ತೇನೇಂದ್ರಸ್ಯಾಭವದ್ಯುದ್ಧಂ ಬಹುಕಾಲಂ ನಿರಂತರಂ ॥ ೧೩ ॥

ಮತ್ತು ಗಂಗೆಯರ ಅನುಗ್ರಹದಿಂದ ಮಾರ್ಜಾರಸ್ವರೂಪ (ಬೆಕ್ಕಿನಜನ್ಮ) ವನ್ನು ಕಳೆದುಕೊಂಡ ತೀರ್ಥವು ಮಾರ್ಜಾರತೀರ್ಥವೆಂಬುದು. ಆ ತೀರ್ಥದ ಮಾಹಾತ್ಮ್ಯವನ್ನು ನಿನಗೆ ಮೊದಲೇ ವಿಸ್ತರಿಸುವೆನು. ಆ ತೀರ್ಥಕ್ಕೆ ಹನೂಮತ ತೀರ್ಥವೆಂದು ಮತ್ತೊಂದು ಹೆಸರೂ ಇರುವುದು. ಇದಕ್ಕೆ ಸಂಬಂಧಿಸಿದ ಚರಿತ್ರೆಯನ್ನೂ ನಿನಗೆ ಹಿಂದೆ ಹೇಳಿರುವೆನು.

೧೧. ವೃಷಾಕಪ ಮತ್ತು ಅಬ್ಜಕತೀರ್ಥಗಳ ಮಾಹಾತ್ಮ್ಯವನ್ನು ಹೇಳುವೆನು ಶ್ರದ್ಧೆಯಿಂದ ಕೇಳು. ಹಿಂದೆ ಹಿರಣ್ಯನೆಂಬ ದೈತ್ಯನಿದ್ದನು, ಅವನು ದೈತ್ಯರಿಗೆಲ್ಲಾ ಹಿರಿಯನು ಮತ್ತು ಬಲಿಷ್ಠನು. ತಪಸ್ಸುಮಾಡಿ ಆ ದೈತ್ಯನು ದೇವತೆಗಳಿಗೂ ಅಜೇಯನಾಗಿದ್ದನು.

೧೨–೧೩. ಆ ಹಿರಣ್ಯದೈತ್ಯನಿಗೆ ಮಹಾಶನಿಯೆಂಬ ಮಗನಿದ್ದನು. ಅವನೂ ದೇವತೆಗಳಿಗೆ ಅಜೇಯನಾದಂತಹ ಪರಾಕ್ರಮಿಯಾಗಿದ್ದನು. ಪರಾಜಿತೆಯೆಂಬುವಳು ಅವನ ಹೆಂಡತಿ. ಆ ದೈತ್ಯನು ಇಂದ್ರನೊಡನೆ ಬಹುಕಾಲ ಯುದ್ಧಮಾಡಿದನು.

ಮಹಾಶನಿರ್ಮಹಾವೀರ್ಯಃ ಸತತಂ ರಣಮೂರ್ಧನಿ ।
ಜಿತ್ವಾ ನಾಗೇನ ಸಹಿತಂ ಶಕ್ರಂ ಪಿತ್ರೇ ನ್ಯವೇದಯತ್ ॥ ೧೪ ॥

ಬದ್ಧ್ವಾ ಹಸ್ತಿಸಮಾಯುಕ್ತಂ ಸ್ವಸಾರಂ ವೀಕ್ಷ್ಯ ತಾಂ ತದಾ ।
ವಿಹಾಯ ಕ್ರೂರತಾಂ ದೈತ್ಯೋ ಹಿರಣ್ಯಾಯ ನ್ಯವೇದಯತ್ ॥ ೧೫ ॥

ಮಹಾಶನಿಪಿತಾ ದೈತ್ಯಃ ಪೂರ್ವೇಷಾಂ ಪೂರ್ವವತ್ತರಃ ।
ಶಚೀಕಾಂತಂ ತಲೇ ಸ್ಥಾಪ್ಯ ತಸ್ಯ ರಕ್ಷಾಮಥಾಕರೋತ್ ॥ ೧೬ ॥

ಮಹಾಶನಿರ್ಹರಿಂ ಜಿತ್ವಾ ಜೇತುಂ ವರುಣಮಭ್ಯಗಾತ್ ।
ವರುಣೋಽಪಿ ಮಹಾಬುದ್ಧಿಃ ಪ್ರಾದಾತ್ಕನ್ಯಾಂ ಮಹಾಶನೇಃ ॥ ೧೭ ॥

ಉದಧಿಂ ಸ್ವಾಲಯಂ ಪ್ರಾದಾದ್ವರುಣಸ್ತು ಮಹಾಶನೇಃ ।
ತಯೋಶ್ಚ ಸಖ್ಯಮಭವದ್ವರುಣಸ್ಯ ಮಹಾಶನೇಃ ॥ ೧೮ ॥

---

೧೪. ಆ ಯುದ್ಧದಲ್ಲಿ ಮಹಾವೀರನಾದ ಮಹಾಶನಿಯು ಇಂದ್ರನನ್ನು ಜಯಿಸಿ, ಐರಾವತದೊಡನೆ ಅವನನ್ನು ತನ್ನ ತಂದೆಯವಶಕ್ಕೆ ಕಳುಹಿಸಿದನು.

೧೫. ಐರಾವತದೊಡನೆ ಇಂದ್ರನನ್ನು ಬಂಧಿಸಿ ಆ ಮಹಾಶನಿಯು ತನ್ನ ತಂಗಿಯಾದ ಇಂದ್ರನ ಹೆಂಡತಿ ಶಚೀದೇವಿಯನ್ನು ನೋಡಿ ದಯೆಯಿಂದ ಇಂದ್ರನನ್ನು ತಂದೆಯಾದ ಹಿರಣ್ಯದೈತ್ಯನಿಗೆ ಒಪ್ಪಿಸಿದನು.

೧೬. ಆ ಹಿರಣ್ಯದೈತ್ಯನು ದೈತ್ಯರಿಗೆಲ್ಲಾ ಹಿರಿಯವನು. ಅವನು ಶಚೀ ಪತಿಯನ್ನು ಪಾತಾಳದಲ್ಲಿ ತನ್ನರಮನೆಯಲ್ಲಿ ರಕ್ಷಿಸುತ್ತಿದ್ದನು.

೧೭. ಹೀಗೆ ಇಂದ್ರನನ್ನು ಜಯಿಸಿ ಮಹಾಶನಿಯು ವರುಣನನ್ನು ಜಯಿಸಲು ಹೊರಟನು. ಬುದ್ಧಿವಂತನಾದ ವರುಣನು ಮಹಾಶನಿಗೆ ತನ್ನ ಮಗಳನ್ನು ಮದುವೆಮಾಡಿ ಕೊಟ್ಟನು.

೧೮. ಮತ್ತು ತನ್ನ ವಾಸಸ್ಥಾನವಾದ ಸಮುದ್ರವನ್ನು ಮಹಾಶನಿಗೆ ಕೊಟ್ಟನು. ಹೀಗೆ ವರುಣ ಮಹಾಶನಿಗಳಿಗೆ ಪರಸ್ಪರ ಸ್ನೇಹವಾಯಿತು.

ವಾರುಣೀ ಚಾಪಿ ಯಾ ಕನ್ಯಾ ಸಾ ಪ್ರಿಯಾಭೂನ್ಮಹಾಶನೇಃ ।
ವೀರ್ಯೇಣ ಯಶಸಾ ಚಾಪಿ ಶೌರ್ಯೇಣ ಚ ಬಲೇನ ಚ ॥ ೧೯ ॥

ಮಹಾಶನಿರ್ಮಹಾದೈತ್ಯಸ್ತ್ರೈಲೋಕ್ಯೇ ನೋಪಮೀಯತೇ ।
ನಿರಿಂದ್ರತ್ವಂ ಗತೇ ಲೋಕೇ ದೇವಾಃ ಸರ್ವೇ ನ್ಯಮಂತ್ರಯನ್ ॥ ೨೦ ॥

॥ ದೇವಾ ಊಚುಃ ॥

ವಿಷ್ಣುರೇವೇಂದ್ರದಾತಾ ಸ್ಯಾದ್ದೈತ್ಯಹಂತಾ ಸ ಏವ ಚ ।
ಮಂತ್ರದೃಗ್ವಾ ಸ ಏವ ಸ್ಯಾದಿಂದ್ರಂ ಚಾನ್ಯಂ ಕರಿಷ್ಯತಿ ॥ ೨೧ ॥

॥ ಬ್ರಹ್ಮೋವಾಚ ॥

ಏವಂ ಸಂಮಂತ್ರ್ಯ ತೇ ದೇವಾ ವಿಷ್ಣೋರ್ಮಂತ್ರಂ ನ್ಯವೇದಯನ್ ।
ಮಮಾವಧ್ಯೋ ಮಹಾದೈತ್ಯೋ ಮಹಾಶನಿರಿತಿ ಬ್ರುವನ್ ॥ ೨೨ ॥

---

೧೯. ವರುಣನ ಮಗಳಾದ ವಾರುಣೀದೇವಿಯು ಮಹಾಶನಿಯ ಪ್ರಿಯ ಪತ್ನಿಯಾದಳು. ವೀರ್ಯ ಯಶಸ್ಸು ಶೌರ್ಯ ಬಲಗಳಲ್ಲಿ ಆಗ ಮಹಾಶನಿಗೆ ಸಮನಾದವರು ಯಾರೂ ಇರಲಿಲ್ಲ.

೨೦. ಇಂದ್ರನು ಸ್ವರ್ಗದಲ್ಲಿಲ್ಲದಂತಾಗಲು ದೇವತೆಗಳೆಲ್ಲರೂ ಸೇರಿ ಹೀಗೆ ಯೋಚಿಸಿದರು.

೨೧. ನಮಗೆ ಇಂದ್ರನನ್ನು ದೊರಕಿಸುವವನು ಹರಿಯು. ದೈತ್ಯರನ್ನು ಸಂಹರಿಸಬಲ್ಲವನೂ ಅವನೇ, ಇದಕ್ಕೆ ತಕ್ಕ ಉಪಾಯವನ್ನೂ ಅವನು ಬಲ್ಲನು. ಅಥವಾ ಬೇರೆ ಇಂದ್ರನನ್ನಾದರೂ ಅವನು ನಮಗೆ ನಿಯಮಿಸಬಹುದು.

೨೨. ಹೀಗೆ ಆಲೋಚಿಸಿ ಆ ದೇವತೆಗಳು ಹರಿಯಬಳಿಗೆ ಹೋಗಿ ಅವನಿಗೆ ಸಮಾಚಾರವನ್ನು ವಿಜ್ಞಾಪಿಸಿಕೊಂಡರು. ಮಹಾದೈತ್ಯನಾದ ಆ ಮಹಾಶನಿಯನ್ನು ನಾವಾರೂ ಜಯಿಸಲಾರೆವು ಎಂದೂ ಹೇಳಿದರು.

ಪ್ರಾಯಾದ್ದ್ವಾರೀಶ್ವರಂ ವಿಷ್ಣುಃ ಶ್ವಶುರಂ ವರುಣಂ ತದಾ ।
ಕೇಶವೋ ವರುಣಂ ಗತ್ವಾ ಪ್ರಾಹೇಂದ್ರಸ್ಯ ಪರಾಭವಮ್ ॥ ೨೩ ॥

ತಥಾ ತ್ವಯ್ಯೈತತ್ಕರ್ತವ್ಯಂ ಯಥಾಯಾತಿ ಪುರಂದರಃ ।
ತದ್ವಿಷ್ಣುವಚನಾಚ್ಛೀಘ್ರಂ ಯಯೌ ಜಲಪತಿರ್ಮುನೇ ॥ ೨೪ ॥

ಸುತಾಪತಿಂ ಹಿರಣ್ಯಸುತಂ ವಿಕ್ರಾಂತಂ ತಂ ಮಹಾಶನಿಂ ।
ಅತಿಸಂಮಾನಿತಸ್ತೇನ ಜಾಮಾತ್ರಾ ವರುಣಃ ಪ್ರಭುಃ ॥ ೨೫ ॥

ಪಪ್ರಚ್ಛಾಗಮನಂ ದೈತ್ಯೋ ವಿನಯಾಚ್ಛ್ವಶುರಂ ತದಾ ।
ವರುಣಃ ಪ್ರಾಹ ತಂ ದೈತ್ಯಂ ಯದಾಗಮನಕಾರಣಂ ॥ ೨೬ ॥

॥ ವರುಣ ಉವಾಚ ॥

ಇಂದ್ರಂ ದೇಹಿ ಮಹಾಬಾಹೋ ಯಸ್ತ್ವಯಾ ನಿರ್ಜಿತಃ ಪುರಾ ।
ಬದ್ಧಂ ರಸಾತಲಸ್ಥಂ ತಂ ದೇವಾನಾಮಧಿಪಂ ಸಖೇ ॥ ೨೭ ॥

---

೨೩. ಆಗ ವಿಷ್ಣುವು ಮಹಾಶನಿಯ ಮಾವನಾದ ವರುಣನ ಬಳಿಗೆ ಹೋಗಿ ಇಂದ್ರನ ಅಪಜಯವನ್ನು ತಿಳಿಸಿದನು. ಮತ್ತು ಇಂದ್ರನು ಮರಳಿ ಸ್ವರ್ಗಕ್ಕೆ ಬರುವಂತೆ ನೀನು ಮಾಡಬೇಕು ಎಂದು ಹೇಳಿದನು.

೨೪. ಹರಿಯ ಮಾತಿನಂತೆ ವರುಣನು ಆ ಕೂಡಲೇ ತನ್ನ ಅಳಿಯನೂ ಹಿರಣ್ಯದೈತ್ಯನ ಮಗನೂ ಶೂರನೂ ಆದ ಮಹಾಶನಿಯ ಬಳಿಗೆ ಹೋಗಲು.

೨೫. ಮಹಾಶನಿಯು ಮಾವನಾದ ವರುಣನನ್ನು ತುಂಬಾ ಗೌರವಿಸಿ ಬಂದಕಾರ್ಯವೇನು ಎಂದು ವಿನಯದಿಂದ ಕೇಳಿದನು.

೨೬. ಆಗ ವರುಣನು ಆ ದೈತ್ಯನಿಗೆ ತಾನು ಬಂದ ಕಾರಣವನ್ನು ಹೀಗೆ ಹೇಳಿದನು.

೨೭. ಎಲೈ ವೀರ, ನಮ್ಮ ಇಂದ್ರನನ್ನು ನಮಗೆ ಕೊಡು. ದೇವೇಂದ್ರನಾದ ಅವನನ್ನು ಜಯಿಸಿ ನೀನು ಪಾತಾಳದಲ್ಲಿ ಬಂಧಿಸಿಟ್ಟಿರುವೆ.

ಅಸ್ಮಾಕಂ ಸರ್ವದಾ ಮಾನ್ಯಂ ದೇಹಿ ತ್ವಂ ಮಮ ಶತ್ರುಹನ್ ।
ಬದ್ಧ್ವಾ ವಿಮೋಕ್ಷಣಂ ಶತ್ರೋರ್ಮಹತೇ ಯಶಸೇ ಸತಾಂ ॥ ೨೮ ॥

॥ ಬ್ರಹ್ಮೋವಾಚ ॥
ತಥೇತ್ಯುಕ್ತ್ವಾ ಕಥಂಚಿತ್ಸ ದೈತ್ಯೇಶೋ ವರುಣಾಯ ತಂ ।
ಪ್ರಾದಾದಿಂದ್ರಂ ಶಚೀಕಾಂತಂ ವಾರಣೇನ ಸಮನ್ವಿತಂ ॥ ೨೯ ॥

ಸ ದೈತ್ಯಮಧ್ಯೇಽತಿವಿರಾಜಮಾನೋ
ಹರಿಂ ತದೋವಾಚ ಜಲೇಶಸಂನಿಧೌ ।
ಸಂಪೂಜ್ಯ ಚೈವಾಥ ಮಹೋಪಚಾರೈ-
ರ್ಮಹಾಶನಿರ್ಮೇಘವಂತಂ ಬಭಾಷೇ ॥ ೩೦ ॥

॥ ಮಹಾಶನಿರುವಾಚ ॥
ಕೇನ ತ್ವಮಿಂದ್ರೋಽದ್ಯ ಕೃತೋಽಸಿ ಕೇನ
ವೀರ್ಯಂ ತವೇದೃಗ್ಬಹು ಭಾಷಸೇ ಚ ।
ತ್ವಂ ಸಂಗರೇ ಶತ್ರುಭಿರ್ಬಾಧ್ಯಸೇ ಚ
ತಥಾಪಿ ಚೇಂದ್ರೋ ಭವಸೀತಿ ಚಿತ್ರಂ ॥ ೩೧ ॥

---

೨೮. ಇಂದ್ರನು ನಮಗೆ ಯಾವಾಗಲೂ ಮಾನ್ಯನು. ಅಂಥವನನ್ನು ನಮಗೆ ಕೊಡು. ಶತ್ರುವನ್ನು ಬಂಧಿಸಿ ಪುನಃ ಉದಾರತೆಯಿಂದ ಬಿಟ್ಟರೆ ತುಂಬಾ ಯಶಸ್ಸು ಬರುವುದು ಎಂದನು.

೨೯. ಮಹಾಶನಿಯು ವರುಣನ ಮಾತನ್ನಂಗೀಕರಿಸಿ ಶಚೀಪತಿಯಾದ ಇಂದ್ರನನ್ನು ಐರಾವತದೊಡನೆ ಮನಸ್ಸಿಲ್ಲದಿದ್ದರೂ ಬಿಟ್ಟುಕೊಟ್ಟನು.

೩೦. ಆಮೇಲಾ ಮಹಾಶನಿದೈತ್ಯನು ದೈತ್ಯರ ಸಭೆಯಲ್ಲಿ ವರುಣನೆದುರಿಗೆ ಇಂದ್ರನನ್ನು ಉಪಚಾರಗಳಿಂದ ಸತ್ಕರಿಸಿ,

೩೧. ಎಲೈ ಇಂದ್ರ, ನಿನ್ನನ್ನು ಇಂದ್ರನನ್ನಾಗಿ ಮಾಡಿದವರಾರು? ನಿನ್ನ ಪರಾಕ್ರಮವು ಹೀಗಿದೆ, ಆದರೂ ತುಂಬಾ ಕೊಚ್ಚಿಕೊಳ್ಳುವೆ. ಯುದ್ಧದಲ್ಲಿ ಶತ್ರುಗಳಿಗೆ ಸೋಲುವವನು ನೀನು. ಆದರೂ ನೀನು ಇಂದ್ರನೆಂದರೆ ತುಂಬಾ ಆಶ್ಚರ್ಯವು.

ಅಥಾಪಿ ಬದ್ಧಾ ಪುರುಷೇಣ ಕಾಚಿ-
ತ್ತಸ್ಯಾಃ ಪತಿಸ್ತಾಂ ಮೋಚಯತೀತಿ ಯುಕ್ತಂ ।
ಸ್ತ್ರಿಯೋಽಸ್ವತಂತ್ರಾಃ ಪುರುಷಪ್ರಧಾನಾ-
ಸ್ತ್ವಂ ವೈ ಪುಮಾನ್ಭವಿತಾ ಶಕ್ರ ಸಾಧೋ ॥ ೩೨ ॥

ಬದ್ಧೋ ಮಯಾ ಸಂಗರೇ ವಾಹನೇನ
ಕ್ವಾಸ್ಯಸ್ತ್ರಂ ತೇ ವಜ್ರಮುದ್ದಾಮಶಕ್ತಿ ।
ಚಿಂತಾರತ್ನಂ ನಂದನಂ ಯೋಷಿತಸ್ತಾ
ಯಶೋ ಬಲಂ ದೇವರಾಜೋಪಭೋಗ್ಯಂ ।
ಸರ್ವಂ ಹಿ ತ್ವಾ ಕಿಂತು ಮುಕ್ತೋ ಜಲೇಶಾ-
ದಾಕಾಂಕ್ಷಸೇ ಜೀವಿತಂ ಧಿಕ್ತವೇದಂ ॥ ೩೩ ॥

ತಜ್ಜೀವನಂ ಯತ್ತು ಯಶೋನಿಧಾನಂ
ಸ ಏವ ಮೃತ್ಯುರ್ಯಶಸೋ ಯದ್ವಿರೋಧಿ ।
ಏವಂ ಜಾನನ್ ಶಕ್ರ ಕಥಂ ಜಲೇಶಾ-
ನ್ಮುಕ್ತಿಂ ಪ್ರಾಪ್ತೋ ನೈವ ಲಜ್ಜಾಂ ಭಜೇಥಾಃ ॥ ೩೪ ॥

---

೩೨. ಬಂಧನಕ್ಕೆ ಸಿಕ್ಕಿದ ಸ್ತ್ರೀಯರನ್ನು ಪುರುಷನು ಬಿಡಿಸುವುದು ನ್ಯಾಯ. ಸ್ತ್ರೀಯರು ಅಸ್ವತಂತ್ರರು, ಅಬಲೆಯರು, ಪುರುಷರೇ ಅವರನ್ನು ರಕ್ಷಿಸಬೇಕು, ಆದರೆ ನೀನು ಪುರುಷನಲ್ಲವೇ ? ನಿನ್ನನ್ನು ಇನ್ನೊಬ್ಬರು ಬಿಡಿಸುವುದೆಂತು ?

೩೩. ಪುರುಷನಾದ ನಿನ್ನನ್ನು ನಾನು ಯುದ್ಧದಲ್ಲಿ ಐರಾವತದೊಡನೆ ಬಂಧಿಸಿರುವೆನು. ಮಹಾಶಕ್ತಿಯುಳ್ಳ ಆ ವಜ್ರಾಯುಧವು ಆಗೆಲ್ಲಿದ್ದಿತು ? ಚಿಂತಾರತ್ನ, ನಂದನವನ, ಅಪ್ಸರೆಯರು ಇವೆಲ್ಲ ಎಲ್ಲಿ ? ನಿನ್ನ ಯಶಸ್ಸು ಬಲಗಳು ಎಲ್ಲಿ ಹೋದುವು ? ನಿನ್ನ ಆಗಿನ ದೇವೇಂದ್ರವೈಭವವು ಎಲ್ಲಿ ಹೋಯಿತು ?

೩೪. ಈಗ ವರುಣನು ನಿನ್ನನ್ನು ಬಿಡಿಸಬೇಕಾಯಿತು. ನಿನ್ನ ಹಿಂದಿನ ಯಶಸ್ಸೆಲ್ಲವೂ ಹೋಯಿತು. ಇಂತಹ ನಿನ್ನ ಭಂಡಬಾಳಿಗೆ ಧಿಕ್ಕಾರವಿರಲಿ. ಯಶಸ್ಸು ಸಂಪಾದಿಸುವಂತಹ ಜೀವನವೇ ಜೀವನವು. ಅಪಯಶಸ್ಸನ್ನು ಪಡೆದು

ತ್ರಿವಿಷ್ಟಪಸ್ಥಃ ಪರಿವೇಷ್ಟಿತಃ ಸ-
ನ್ಸರ್ವೈಃ ಸುರೈಃ ಕಾಂತಯಾ ವೀಜ್ಯಮಾನಃ ।
ಸಂಸ್ತೂಯಮಾನಶ್ಚ ತಥಾಪ್ಸರೋಭಿ-
ರ್ನೂನಂ ಲಜ್ಜಾ ತೇ ಬಿಭೇತೀತಿ ಮನ್ಯೇ ॥ ೩೫ ॥

ತ್ವಂ ವೃತ್ರಹಾ ನಮುಚೇಶ್ಚಾಪಿ ಹಂತಾ
ಪುರಾಂ ಭೇತ್ತಾ ಗೋತ್ರಭಿದ್ವಜ್ರಬಾಹುಃ ।
ಏವಂ ಸುರಸ್ತ್ವಾಂ ಪರಿಪೂಜಯಂತೀ-
ತ್ಯತೋ ಜಿಷ್ಣೋ ಸರ್ವಮೇತತ್ತ್ಯಜಸ್ವ ॥ ೩೬ ॥

ವಿಕಾರಮಾಪ್ಯಾಪ್ಯಹಿತೋದ್ಭವಂ ಯೇ
ಜೀವಂತಿ ಲೋಕಾನನುಸಂವಿಶಂತಿ ।
ಭವಾದೃಶಾಂ ದುಶ್ಚ್ಯವನಾಬ್ಜಜನ್ಮಾ
ಕಥಂ ನ ಹೃದ್ಭೇದಮುಪಾಪ ಕರ್ತಾ ॥ ೩೭ ॥

ಜೀವಿಸುವದಕ್ಕಿಂತಲೂ ಸಾಯುವುದು ಮೇಲು. ಹೀಗೆ ತಿಳಿದೂ ನೀನು ಈಗ ವರುಣನಿಂದ ಬಿಡುಗಡೆಹೊಂದಿದುದಕ್ಕೆ ಲಜ್ಜೆಪಡುವುದಿಲ್ಲವೇ?

೩೫. ಇಂತಹ ಅಪಯಶಸ್ಸನ್ನು ಪಡೆದೂ ಸ್ವರ್ಗವನ್ನು ಸೇರಿ ದೇವತೆಗಳಿಂದ ಓಲೈಸಿಕೊಂಡು, ಪತ್ನಿಯಿಂದ ಗಾಳಿಹಾಕಿಸಿಕೊಳ್ಳುತ್ತಾ ಅಪ್ಸರೆಯರಿಂದ ಹೊಗಳಿಸಿಕೊಳ್ಳುತ್ತಾ ಸಂತಸದಿಂದಿರುವ ನಿನ್ನನ್ನು ನೋಡಿ ಲಜ್ಜೆಯೂ ಹೆದರಿ ನಿನ್ನ ಬಳಿ ಸುಳಿಯಲಾರದೇನೋ ?

೩೬. ಎಲೈ ಇಂದ್ರ, ನೀನು ವೃತ್ರನಮುಚಿಗಳನ್ನು ಸಂಹರಿಸಿದ ಮಹಾಶೂರನು. ಶತ್ರುಪುತ್ರರುಗಳನ್ನು ಭೇದಿಸುವ ಪುರಂದರನು ನೀನು. ಪರ್ವತಗಳ ರೆಕ್ಕೆಗಳನ್ನು ಕತ್ತರಿಸಿದ ವಜ್ರಧರನು ನೀನು. ಹೀಗೆಂದು ದೇವತೆಗಳು ನಿನ್ನನ್ನು ಪೂಜಿಸುವರು. ಈಗ ಆ ನಿನ್ನ ಪ್ರತಿಷ್ಠೆಯೆಲ್ಲವನ್ನೂ ಬಿಡು.

೩೭. ಎಲೈ ದೇವೇಂದ್ರ, ಶತ್ರುವಿನಿಂದ ಅಪಜಯವನ್ನು ಪಡೆದೂ ಸಂತೋಷದಿಂದ ಜೀವಿಸುವ ನಿನ್ನಂತಹವರನ್ನು ನೋಡಿ ನಿಮ್ಮನ್ನು ಸೃಷ್ಟಿಸಿದ ಆ ಬ್ರಹ್ಮದೇವನಿಗಾದರೂ ವ್ಯಥೆಯಾಗಲಾರದೆ? ಅವನೂ ಲಜ್ಜೆಗೊಳ್ಳಬಹುದು ಎಂದನು.

॥ ಬ್ರಹ್ಮೋವಾಚ ॥

ಏವಮುಕ್ತ್ವಾ ತು ದೈತ್ಯೇಶೋ ವರುಣಾಯ ಮಹಾತ್ಮನೇ ।
ಪ್ರಾದಾದಿಂದ್ರಂ ಪುನಶ್ಚೇದಂ ವಚನಂ ತದಭಾಷತ ॥ ೩೮ ॥

॥ ಮಹಾಶನಿರುವಾಚ ॥

ಅದ್ಯ ಪ್ರಭೃತ್ಯಸೌ ಶಿಷ್ಯ ಇಂದ್ರಃ ಸ್ಯಾದ್ವರುಣೋ ಗುರುಃ ।
ಶ್ವಶುರೋ ಮಮ ಯೇನ ತ್ವಂ ಮುಕ್ತಿಮಾಪ್ತೋಽಸಿ ವಾಸವ ॥ ೩೯ ॥

ತಥಾ ತ್ವಂ ಭೃತ್ಯಭಾವೇನ ವರ್ತೇಥಾ ವರುಣಂ ಪ್ರತಿ ।
ನೋ ಚೇದ್ಬದ್ಧ್ವಾ ಪುನಸ್ತ್ವಾಂ ವೈ ಕ್ಷೇಪ್ಸ್ಯೇ ಚೈವ ರಸಾತಲಂ ॥ ೪೦ ॥

॥ ಬ್ರಹ್ಮೋವಾಚ ॥

ಏವಂ ನಿರ್ಭರ್ತ್ಸ್ಯ ತಂ ಶಕ್ರಂ ಹಸಂಶ್ಚಾಪಿ ಪುನಃ ಪುನಃ ।
ಅಬ್ರವೀದ್ಗಚ್ಛ ಗಚ್ಛೇತಿ ವರುಣಂ ಚಾನುಮನ್ಯತು ॥ ೪೧ ॥

ಸ ತು ಪ್ರಾಪ್ತಃ ಸ್ವನಿಲಯಂ ಲಜ್ಜಯಾ ಕಲುಷೀಕೃತಃ ।
ಪೌಲೋಮ್ಯಾಂ ಪ್ರಾಹ ತತ್ಸರ್ವಂ ಯತ್ರಚ್ಛತ್ರುಪರಾಭವಂ ॥ ೪೨ ॥

---

೩೮. ಹೀಗೆ ಹೇಳಿ, ಮಹಾಶನಿದೈತ್ಯನು ಮಹಾತ್ಮನಾದ ವರುಣನಿಗೆ ಇಂದ್ರನನ್ನೊಪ್ಪಿಸಿ ಮತ್ತಿಂತೆಂದನು.

೩೯. ಎಲೈ ಇಂದ್ರ, ನಿನ್ನನ್ನು ಬಿಡಿಸಿದುದರಿಂದ ನನ್ನ ಮಾವನಾದ ಈ ವರುಣನು ಇನ್ನು ಮುಂದೆ ನಿನ್ನ ಗುರುವು, ನೀನು ಅವನ ಶಿಷ್ಯನು.

೪೦. ಅದರಂತೆ ನೀನು ವರುಣನಲ್ಲಿ ಶಿಷ್ಯಭಾವದಿಂದ ನಡೆಯಬೇಕು. ಇಲ್ಲದಿದ್ದರೆ ಪುನಃ ನಿನ್ನನ್ನು ಬಂಧಿಸಿ ರಸಾತಲದಲ್ಲಿ ಕೂಡಿಹಾಕುವೆನು ಎಂದನು.

೪೧. ಹೀಗೆ ಇಂದ್ರನನ್ನು ಹೆದರಿಸಿ ಮಹಾಶನಿಯು ಪುನಃಪುನಃ ಅವನನ್ನು ಹಾಸ್ಯಮಾಡಿ ಹೋಗು, ಹೊರಟುಹೋಗು ಎಂದು ಗದರಿಸಿದನು, ವರುಣನನ್ನು ಮರ್ಯಾದೆಯಿಂದ ಬೀಳ್ಕೊಟ್ಟನು.

೪೨. ತನ್ನರಮನೆಗೆ ಹೋಗಿ ಆ ಇಂದ್ರನು ಅವಮಾನದಿಂದ ವ್ಯಥೆಗೊಂಡು ಶತ್ರುವು ತನಗೆ ಮಾಡಿದ ಅವಮಾನವೆಲ್ಲವನ್ನೂ ಶಚೀದೇವಿಗೆ ಹೇಳಿದನು

॥ ಇಂದ್ರ ಉವಾಚ ॥

ಏವಮುಕ್ತಃ ಕೃತಶ್ಚೈವ ಶತ್ರುಣಾಽಹಂ ವರಾನನೇ ।
ನಿರ್ವಾಪಯಾಮಿ ಯೇನ ಸ್ವಮಾತ್ಮಾನಂ ಸುಭಗೇ ವದ ॥ ೪೩ ॥

॥ ಇಂದ್ರಾಣ್ಯುವಾಚ ॥

ದಾನವಾನಾಮುಥೋದ್ಭೂತಿಂ ಶಕ್ರ ಮಾಯಾಂ ಪರಾಭವಂ ।
ವರದಾನಂ ತಥಾ ಮೃತ್ಯುಂ ಜಾನೇಽಹಂ ಬಲಸೂದನ ॥ ೪೪ ॥

ತಸ್ಮಾದ್ಯಸ್ಮಾತ್ತ್ರಸ್ಯ ಮೃತ್ಯುರಥವಾಪಿ ಪರಾಭವಃ ।
ಜಾಯೇತ ಶೃಣು ತತ್ಸರ್ವಂ ವಕ್ಷ್ಯೇಽಹಂ ಪ್ರೀತಯೇ ತವ ॥ ೪೫ ॥

ಹಿರಣ್ಯಸ್ಯ ಸುತೋ ವೀರಃ ಪಿತೃವ್ಯಸ್ಯ ಸುತೋ ಬಲೀ ।
ತಸ್ಮಾನ್ಮಮ ಸ್ಯಾತ್ಸ ಭ್ರಾತಾ ವರದಾನಾಚ್ಚ ದರ್ಪಿತಃ ॥ ೪೬ ॥

ಬ್ರಹ್ಮಾಣಂ ತೋಷಯಾಮಾಸ ತಪಸಾ ನಿಯಮೇನ ಚ ।
ಈದೃಶಂ ಬಲಮಾಪನ್ನಂ ತಪಸಾ ಕಿಂ ನ ಸಿಧ್ಯತಿ ॥ ೪೭ ॥

---

೪೩. ಎಲೌ ಅದೃಷ್ಟವತಿಯಾದ ಕಾಂತೆ, ಶತ್ರುವುನನಗೆ ಹೀಗೆ ಅವಮಾನಮಾಡಿದನು, ಈ ಅವಮಾನಕ್ಕೆ ಹೇಗೆ ಪ್ರತೀಕಾರಮಾಡಲಿ ಎಂದು ಕೇಳಲು,

೪೪. ಶಚೀದೇವಿಯು ಓ ಇಂದ್ರ, ದಾನವರ ಉತ್ಪತ್ತಿಯನ್ನೂ ಅವರ ಮಾಯೆಯನ್ನೂ ಅಪಜಯವನ್ನೂ ಅವರಿಗೆ ವರವು ಲಭಿಸಿರುವುದನ್ನೂ ಮರಣವನ್ನೂ ನಾನು ಬಲ್ಲೆನು.

೪೫. ಆದುದರಿಂದ ಆ ಮಹಾಶನಿಗೆ ಮರಣವಾಗಲೀ ಅಪಜಯವಾಗಲೀ ಯಾವಾಗ ಹೇಗೆ ಆಗುವುದೆಂದು ನಿನ್ನ ಸಂತೋಷಕ್ಕಾಗಿ ಹೇಳುವೆನು.

೪೬. ಆ ಮಹಾಶನಿಯು ಹಿರಣ್ಯದೈತ್ಯನ ಮಗನು. ಹಿರಣ್ಯದೈತ್ಯನು ನನಗೆ ಚಿಕ್ಕಪ್ಪನಾಗಬೇಕು. ಹೀಗಾಗಿ ಮಹಾಶನಿಯು ನನ್ನ ಸಹೋದರನು. ವರದಾನದಿಂದ ಅವನು ತುಂಬಾ ಕೊಬ್ಬಿರುವನು.

೪೭. ತಪಸ್ಸಿನಿಂದಲೂ ನಿಯಮದಿಂದಲೂ ಬ್ರಹ್ಮನನ್ನು ಸಂತಸಗೊಳಿಸಿ ಆ ದೈತ್ಯನು ಇಂತಹ ಬಲಿಷ್ಠನಾಗಿರುವನು, ತಪಸ್ಸಿಗೆ ಅಸಾಧ್ಯವಾದುದಾವುದೂ ಇಲ್ಲ.

ತಸ್ಮಾತ್ತ್ವಯಾ ಚಿತ್ತರಾಗೋ ವಿಸ್ಮಯೋ ವಾ ಕಥಂಚನ ।
ನ ಕಾರ್ಯಃ ಶೃಣು ತತ್ರೇದಂ ಕಾರ್ಯಂ ಯತ್ತು ಕ್ರಮಾಗತಂ ॥ ೪೮ ॥

॥ ಬ್ರಹ್ಮೋವಾಚ ॥

ಏವಮುಕ್ತ್ವಾ ತು ಪೌಲೋಮೀ ಪ್ರಾಹೇಂದ್ರಂ ವಿನಯಾನ್ವಿತಾ ॥ ೪೯ ॥

॥ ಇಂದ್ರಾಣ್ಯುವಾಚ ॥

ನಾಸಾಧ್ಯಮಸ್ತಿ ತಪಸೋ ನಾಸಾಧ್ಯಂ ಯಜ್ಞಕರ್ಮಣಃ ।
ನಾಸಾಧ್ಯಂ ಲೋಕನಾಥಸ್ಯ ವಿಷ್ಣೋರ್ಭಕ್ತ್ಯಾ ಹರಸ್ಯ ಚ ॥ ೫೦ ॥

ಪುನಶ್ಚೇದಂ ಮಯಾ ಕಾಂತ ಶ್ರುತಮಸ್ತ್ಯತಿಶೋಭನಂ ।
ಸ್ತ್ರೀಣಾಂ ಸ್ವಭಾವಂ ಜಾನಂತಿ ಸ್ತ್ರಿಯ ಏವ ಸುರಾಧಿಪ ॥ ೫೧ ॥

ತಸ್ಮಾದ್ಭೂಮೇಸ್ತಥಾ ಚಾಪಾಂ ನಾಸಾಧ್ಯಂ ವಿದ್ಯತೇ ಪ್ರಭೋ ।
ತಪೋ ವಾ ಯಜ್ಞಕರ್ಮಾದಿ ತಾಭ್ಯಾಮೇವ ಯತೋ ಭವೇತ್ ॥ ೫೨ ॥

---

೪೮. ಆದುದರಿಂದ ನೀನು ಆಶ್ಚರ್ಯವನ್ನಾಗಲೀ ವ್ಯಥೆಯನ್ನಾಗಲೀ ಪಡಬಾರದು. ಈಗ ನಾವು ಮಾಡತಕ್ಕ ಕಾರ್ಯವನ್ನು ಕ್ರಮವಾಗಿ ಹೇಳುವೆನು ಕೇಳು.

೪೯-೫೦. ಎಂದು ಹೇಳಿ ಶಚೀದೇವಿಯು ವಿನಯದಿಂದ ತಪಸ್ಸಿಗೂ ಯಜ್ಞಕರ್ಮಕ್ಕೂ ಅಸಾಧ್ಯವಾದುದಾವುದೂ ಇಲ್ಲ. ಜಗದೀಶ್ವರರಾದ ಹರಿಹರರ ಭಕ್ತಿಗೆ ಅಸಾಧ್ಯವಾದುದು ಯಾವುದೂ ಇಲ್ಲ.

೫೧. ಅಲ್ಲದೇ ನಾನು ಇನ್ನೊಂದು ವಿಷಯವನ್ನೂ ಕೇಳಿರುವೆನು. ಸ್ತ್ರೀಯರ ಸ್ವಭಾವವನ್ನು ಸ್ತ್ರೀಯರೇ ಬಲ್ಲರು.

೫೨. ಭೂಮಿ ಮತ್ತು ಅಪ್ (ನೀರನ್ನು ಸಂಸ್ಕೃತಸಾಹಿತ್ಯದಲ್ಲಿ ಅಪ್ ದೇವತೆಯೆಂದು ಸ್ತ್ರೀಯಾಗಿ ಪರಿಗಣಿಸಿರುವರು) ಇವುಗಳಿಗೆ ಅಸಾಧ್ಯವಾದುದು ಯಾವುದೂ ಇಲ್ಲ. ತಪಸ್ಸು, ಯಜ್ಞ ಮುಂತಾದುವುಗಳು ಅವುಗಳಿಂದಲೇ ನಡೆಯುವುವು.

ತತ್ರಾಪಿ ತೀರ್ಥಭೂತಾ ತು ಯಾ ಭೂಮಿಸ್ತಾಂ ವ್ರಜೇದ್ಭವಾನ್ ।
ತತ್ರ ವಿಷ್ಣುಂ ಶಿವಂ ಪೂಜ್ಯ ಸರ್ವಾನ್ಕಾಮಾನವಾಪ್ಸ್ಯಸಿ ॥ ೫೩ ॥

ಶ್ರುತಮುಸ್ತಿ ಪುನಶ್ಚೇದಂ ಸ್ತ್ರಿಯೋ ಯಾಶ್ಚ ಪತಿವ್ರತಾಃ ।
ತಾ ಏವ ಸರ್ವಂ ಜಾನಂತಿ ಧೃತಂ ತಾಭಿಶ್ಚರಾಚರಂ ॥ ೫೪ ॥

ಪೃಥಿವ್ಯಾಂ ಸಾರಭೂತಂ ಸ್ಯಾತ್ತನ್ಮಧ್ಯೇ ದಂಡಕಂ ವನಂ ।
ತತ್ರ ಗಂಗಾ ಜಗದ್ಧಾತ್ರೀ ತತ್ರೇಶಂ ಪೂಜಯ ಪ್ರಭೋ ॥ ೫೫ ॥

ವಿಷ್ಣುಂ ವಾ ಜಗತಾಮೀಶಂ ದೀನಾರ್ತಾರ್ತಿಹರಂ ವಿಭುಂ ।
ಅನಾಥಾನಾಮಿಹ ನೃಣಾಂ ಮಜ್ಜತಾಂ ದುಃಖಸಾಗರೇ ॥ ೫೬ ॥

ಹರೋ ಹರಿರ್ವಾ ಗಂಗಾ ವಾ ಕ್ವಾಪ್ಯನ್ಯಚ್ಛರಣಂ ನ ಹಿ ।
ತಸ್ಮಾತ್ಸರ್ವಪ್ರಯತ್ನೇನ ತೋಷಯೈತಾನ್ಸಮಾಹಿತಃ ॥ ೫೭ ॥

---

೫೩. ಅದರಲ್ಲಿಯೂ ತೀರ್ಥಕ್ಷೇತ್ರವು ಅತ್ಯುತ್ತಮವಾದುದು. ಅಂತಹ ಸ್ಥಳಕ್ಕೆ ನೀನು ಹೋಗಿ ಅಲ್ಲಿ ಹರಿಹರರನ್ನು ಪೂಜಿಸಿದರೆ ಇಷ್ಟಾರ್ಥಗಳೆಲ್ಲವೂ ಲಭಿಸುವುವು.

೫೪. ಅಲ್ಲದೆ ಇನ್ನೊಂದು ವಿಷಯವನ್ನೂ ಕೇಳಿರುವೆನು. ಪತಿವ್ರತೆಯರಾದ ಸ್ತ್ರೀಯರು ಎಲ್ಲವನ್ನೂ ತಿಳಿದಿರುವರು, ಅವರಿಂದಲೇ ಜಗತ್ತು ಸ್ಥಿರವಾಗಿ ನಿಂತಿದೆ.

೫೫. ಜಗತ್ತಿನಲ್ಲಿ ಭೂಲೋಕವು ಶ್ರೇಷ್ಠವಾದುದು, ಅದರಲ್ಲಿಯೂ ದಂಡಕವನವು ಅತಿಶ್ರೇಷ್ಠವಾದುದು. ಆ ವನದಲ್ಲಿ ಜಗನ್ಮಾತೆಯಾದ ಗಂಗಾನದಿಯಿರುವುದು. ಆ ಗಂಗಾತೀರದಲ್ಲಿ ಶಿವನನ್ನು ಪೂಜಿಸು.

೫೬. ಅಥವಾ ಜಗದೀಶ್ವರನೂ ದೀನದುಃಖಿತರ ದುಃಖವನ್ನು ಹೋಗಲಾಡಿಸುವವನೂ, ಆದ ಹರಿಯನ್ನಾಗಲೀ ಆರಾಧಿಸು. ದುಃಖಸಾಗರದಲ್ಲಿ ಮುಳುಗಿರುವ ಅನಾಥರಿಗೆ ಹರಿ, ಹರ, ಗಂಗೆ ಈ ಮೂವರನ್ನು ಬಿಟ್ಟು ಬೇರೆ ಗತಿಯಿಲ್ಲವು.

೫೭–೫೮. ಆದುದುರಿಂದ ಹರಿಹರಗಂಗೆಯರನ್ನು ಭಕ್ತಿಪೂರ್ವಕವಾದ

ಭಕ್ತ್ಯಾ ಸ್ತೋತ್ರೈಶ್ಚ ತಪಸಾ ಕುರು ಚೈವ ಮಯಾ ಸಹ ।
ತತಃ ಪ್ರಾಪ್ಸ್ಯಸಿ ಕಲ್ಯಾಣಮೀಶವಿಷ್ಣುಪ್ರಸಾದಜಂ ॥ ೫೮ ॥

ಅಜ್ಞಾತ್ವೈಕಗುಣಂ ಕರ್ಮ ಫಲಂ ದಾಸ್ಯತಿ ಕರ್ಮಿಣಃ ।
ಜ್ಞಾತ್ವಾ ಶತಗುಣಂ ತತ್ಸ್ಯಾದ್ಭಾರ್ಯಯಾ ಚ ತದಕ್ಷಯಂ ॥ ೫೯ ॥

ಪುಂಸಃ ಸರ್ವೇಷು ಕಾರ್ಯೇಷು ಭಾರ್ಯೈವೇಹ ಸಹಾಯಿನೀ ।
ಸ್ವಲ್ಪಾನಾಮಪಿ ಕಾರ್ಯಾಣಾಂ ನಹಿ ಸಿದ್ಧಿಸ್ತಯಾ ವಿನಾ ॥ ೬೦ ॥

ಏಕೇನ ಯತ್ಕೃತಂ ಕರ್ಮ ತಸ್ಮಾದರ್ಧಫಲಂ ಭವೇತ್ ।
ಜಾಯಯಾ ತು ಕೃತಂ ನಾಥ ಪುಷ್ಕಲಂ ಪುರುಷೋ ಲಭೇತ್ ॥ ೬೧ ॥

ತಸ್ಮಾದೇತತ್ಸುವಿದಿತಮರ್ಧೋ ಜಾಯಾ ಇತಿ ಶ್ರುತೇಃ ।
ಶ್ರೂಯತೇ ದಂಡಕಾರಣ್ಯೇ ಸರಿಚ್ಛ್ರೇಷ್ಠಾಸ್ತಿ ಗೌತಮೀ ॥ ೬೨ ॥

ಸ್ತೋತ್ರ, ತಪಸ್ಸುಗಳಿಂದ ನನ್ನೊಡನೆ ಆರಾಧಿಸು. ಹರಿಹರರ ಅನುಗ್ರಹದಿಂದ ನಿನಗೆ ಮಂಗಳವಾಗುವುದು.

೫೯. ತಿಳಿಯದೆ ಮಾಡಿದಂತಹ ಕರ್ಮವೂ ತಕ್ಕಷ್ಟು ಫಲವನ್ನು ಕೊಡುವುದು. ತಿಳಿದು ವಿಧಿವತ್ತಾಗಿ ಮಾಡಿದ ಕರ್ಮವು ನೂರ್ಮಡಿಯಾಗಿ ಫಲವನ್ನು ಕೊಡುವುದು. ಪತ್ನಿಯೊಡನೆ ಮಾಡಿದ ಕರ್ಮದಿಂದ ಅಕ್ಷಯವಾದ ಫಲವು ಲಭಿಸುವುದು.

೬೦. ಗೃಹಸ್ಥನಿಗೆ ಎಲ್ಲ ಕಾರ್ಯಗಳಲ್ಲೂ ಪತ್ನಿಯು ಸಹಾಯಕಳು. ಎಂತಹ ಅಲ್ಪಕಾರ್ಯವೂ ಸಹ ಪತ್ನಿಯ ಸಹಾಯವಿಲ್ಲದೇ ಆಗಲಾರದು.

೬೧. ಓರ್ವನೇ ಮಾಡಿದ ಕರ್ಮದಿಂದ ಅರ್ಧಫಲವು ಲಭಿಸುವುದು. ವೇದವೂ ಸಹ ಪತ್ನಿಯು ಪುರುಷನ ಅರ್ಧಭಾಗವು ಎಂದು ಹೇಳುವುದು.

೬೨. ದಂಡಕಾರಣ್ಯದಲ್ಲಿ ಗೌತಮೀಯೆಂಬ ಶ್ರೇಷ್ಠ ನದಿಯಿರುವುದು. ಆ ನದಿಯು ಪಾಪಗಳೆಲ್ಲವನ್ನೂ ಹೋಗಲಾಡಿಸುವುದಲ್ಲದೆ ಇಷ್ಟಾರ್ಥವೆಲ್ಲವನ್ನೂ ಉಂಟುಮಾಡುವುದು.

ಅಶೇಷಾಘಪ್ರಶಮನೀ ಸರ್ವಾಭೀಷ್ಟಪ್ರದಾಯಿನೀ ।
ತಸ್ಮಾದ್ಗಚ್ಛ ಮಯಾ ತತ್ರ ಕುರು ಪುಣ್ಯಂ ಮಹಾಫಲಂ || ೬೩ ||

ತತಃ ಶತ್ರೂನ್ನಿಹತ್ಯಾಜೌ ಮಹತ್ಸುಖಮವಾಪ್ಸ್ಯಸಿ || ೬೪ ||

|| ಬ್ರಹ್ಮೋವಾಚ ||

ತಥೇತ್ಯುಕ್ತ್ವಾ ಸ ಗುರುಣಾ ಭಾರ್ಯಯಾ ಚ ಶತಕ್ರತುಃ ।
ಯಯೌ ಗಂಗಾಂ ಜಗದ್ಧಾತ್ರೀಂ ಗೌತಮೀಂ ಚೇತಿ ವಿಶ್ರುತಾಂ || ೬೫ ||

ದಂಡಕಾರಣ್ಯಮಧ್ಯಸ್ಥಾಂ ಯಯೌ ಸ ಪ್ರೀತಿಮಾನ್ಹರಿಃ ।
ತಪಃ ಕರ್ತುಂ ಮನಶ್ಚಕ್ರೇ ದೇವದೇವಾಯ ಶಂಭವೇ || ೬೬ ||

ಗಂಗಾ ನತ್ವಾ ತು ಪ್ರಥಮಂ ಸ್ನಾತ್ವಾ ಚ ಸ ಕೃತಾಂಜಲಿಃ ।
ಶಿವೈಕಶರಣೋ ಭೂತ್ವಾ ಸ್ತೋತ್ರಂ ಚೇದಂ ತತೋಽಬ್ರವೀತ್ || ೬೭ ||

೬೩–೬೪. ಆದುದರಿಂದ ಆ ಗೌತಮೀನದಿಗೆ ನನ್ನನ್ನು ಕರೆದುಕೊಂಡು ಹೋಗು. ಅಲ್ಲಿ ಮಹಾಫಲವನ್ನುಂಟುಮಾಡುವ ಕರ್ಮವನ್ನು ಮಾಡು. ಅದರಿಂದ ನೀನು ಶತ್ರುಗಳನ್ನು ಜಯಿಸಿ ಸುಖವನ್ನು ಹೊಂದುವೆ ಎಂದಳು.

೬೫-೬೬. ಹಾಗೆಯೇ ಆಗಲೆಂದೊಪ್ಪಿ ಇಂದ್ರನು ಬೃಹಸ್ಪತಿಯೊಡನೆಯೂ ಪತ್ನಿಯೊಡನೆಯೂ ಸಹ ಜಗನ್ಮಾತೆಯಾದ ದಂಡಕಾರಣ್ಯದಲ್ಲಿರುವ ಗೌತಮೀ ನದಿಗೆ ಹೋಗಿ ಅಲ್ಲಿ ದೇವದೇವನಾದ ಶಂಭುವನ್ನು ಕುರಿತು ತಪಸ್ಸು ಮಾಡಲು ಸಿದ್ಧನಾದನು.

೬೭. ಗಂಗೆಯನ್ನು ನಮಸ್ಕರಿಸಿ ಗಂಗೆಯಲ್ಲಿ ಸ್ನಾನಮಾಡಿ ಶಿವನಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ ಅಂಜಲಿಯನ್ನುಧರಿಸಿ ಇಂತು ಸ್ತುತಿಸಿದನು.

॥ ಇಂದ್ರ ಉವಾಚ ॥

ಸ್ವಮಾಯಯಾ ಯೋ ಹ್ಯಖಿಲಂ ಚರಾಚರಂ
ಸೃಜತ್ಯವತ್ಯತ್ತಿ ನ ಸಜ್ಜತೇಽಸ್ಮಿನ್ ।
ಏಕಃ ಸ್ವತಂತ್ರೋಽದ್ವಯಚಿತ್ಸುಖಾತ್ಮಕಃ
ಸ ನಃ ಪ್ರಸನ್ನೋಽಸ್ತು ಪಿನಾಕಪಾಣಿಃ ॥ ೬೮ ॥

ನ ಯಸ್ಯ ತತ್ತ್ವಂ ಸನಕಾದಯೋಽಪಿ
ಜಾನಂತಿ ವೇದಾಂತರಹಸ್ಯವಿಜ್ಞಾಃ ।
ಸ ಪಾರ್ವತೀಶಃ ಸಕಲಾಭಿಲಾಷ-
ದಾತಾ ಪ್ರಸನ್ನೋಽಸ್ತು ಮಮಾಂಧಕಾರಿಃ ॥ ೬೯ ॥

ಸೃಷ್ಟ್ವಾ ಸ್ವಯಂಭೂರ್ಭಗವಾನ್ವಿರಿಂಚಿಂ
ಭಯಂಕರಂ ಚಾಸ್ಯ ಶಿರೋಽನ್ವಪಶ್ಯತ್ ।
ಛಿತ್ವಾ ನಖಾಗ್ರೈರ್ನಖಸಕ್ತಮೇತ-
ಚ್ಚಿಕ್ಷೇಪ ತಸ್ಮಾದಭವತ್ತ್ರಿವರ್ಗಃ ॥ ೭೦ ॥

---

೬೮. ಪರಮೇಶ್ವರನು ತನ್ನ ಮಾಯೆಯಿಂದ ಜಗತ್ತೆಲ್ಲವನ್ನೂ ಸೃಷ್ಟಿಸುವನು, ಪಾಲಿಸುವನು, ಸಂಹರಿಸುವನು ಆದರೂ ಅವನು ಪ್ರಪಂಚಸಂಬಂಧವಿಲ್ಲದವನು. ಅವನಂತಹ ಪರವಸ್ತುವು ಬೇರೊಂದಿಲ್ಲ, ಅವನಿಗಿಂತ ಶ್ರೇಷ್ಠವಾದ ವಸ್ತುವೂ ಇಲ್ಲ, ಕೀಳಾದ ವಸ್ತುವೂ ಇಲ್ಲ. ಸ್ವತಂತ್ರನವನು, ಅದ್ವಿತೀಯ ಸ್ವರೂಪನವನು, ಜ್ಞಾನಾನಂದಸ್ವರೂಪನು. ಇಂತಹ ಪಿನಾಕಪಾಣಿಯು ನಮಗೆ ಪ್ರಸನ್ನನಾಗಲಿ.

೬೯. ಯಾವನ ನಿಜಸ್ವರೂಪವನ್ನು ಮಹಾ ವೇದಾಂತಿಗಳಾದ ಸನಕಾದಿಗಳೂ ತಿಳಿಯಲಾರರೋ ಅಂತಹ ಅಂಧಕಾಸುರನ ವೈರಿಯಾದ ಪಾರ್ವತೀಪತಿಯು ನಮಗೆ ಪ್ರಸನ್ನವಾಗಲಿ. ಇಷ್ಟಾರ್ಥಗಳೆಲ್ಲವನ್ನೂ ಕರುಣಿಸಲಿ.

೭೦. ಭಗವಾನ್ ಪರಮೇಶ್ವರನು ಮೊದಲು ಬ್ರಹ್ಮನನ್ನು ಸೃಷ್ಟಿಸಿದನು. ಬ್ರಹ್ಮನ ಐದನೆಯ ಶಿರವು ಪ್ರಪಂಚವನ್ನು ಭಕ್ಷಿಸುವಂತೆ ಭಯಂಕರವಾಗಿದ್ದಿತು. ಆ ಶಿರವನ್ನು ಉಗುರಿನ ತುದಿಯಿಂದ ಕತ್ತರಿಸಿ ಉಗುರಿಗೆ ಹತ್ತಿಕೊಂಡ ಆ ಶಿರವನ್ನು ಭೂಮಿಗೆ ಬಿಸುಡಿದನು.

ಪಾಪಂ ದರಿದ್ರಂ ತ್ವಥ ಲೋಭಯಾಚ್ಞೇ
ಮೋಹೋ ವಿಪಚ್ಚೇತಿ ತತೋಽಪ್ಯನಂತಂ ।
ಜಾತಪ್ರಭಾವಂ ಭವದುಃಖರೂಪಂ
ಬಭೂವ ತೈರ್ವ್ಯಾಪ್ತಮಿದಂ ಸಮಸ್ತಂ ॥ ೭೧ ॥

ಅವೇಕ್ಷ್ಯ ಸರ್ವಂ ಚಕಿತಃ ಸುರೇಶೋ
ದೇವೀಮುವಾಚಜ್ಜಗದಸ್ತಮೇತಿ ।
ತ್ವಂ ಪಾಹಿ ಲೋಕೇಶ್ವರಿ ಲೋಕಮಾತ-
ರುಮೇ ಶರಣ್ಯೇ ಸುಭಗೇ ಸುಭದ್ರೇ ॥ ೭೨ ॥

ಜಗತ್ಪ್ರತಿಷ್ಠೇ ವರದೇ ಜಯ ತ್ವಂ
ಭುಕ್ತಿಃ ಸಮಾಧಿಃ ಪರಮಾ ಚ ಮುಕ್ತಿಃ ।
ಸ್ವಾಹಾ ಸ್ವಧಾ ಸ್ವಸ್ತಿರನಾದಿಸಿದ್ಧಿ-
ರ್ಗೀರ್ಬುದ್ಧಿರಾಸೀರಜರಾಮರೇ ತ್ವಂ ॥ ೭೩ ॥

---

೭೧. ಭೂಮಿಗೆಸೆದ ಆ ಬ್ರಹ್ಮಶಿರಸ್ಸಿನಿಂದ ಪಾಪದಾರಿದ್ರ್ಯಗಳೂ ಲೋಭ, ಆಸೆ, ಮೋಹ, ವಿಪತ್ತು, ಅಜ್ಞಾನಗಳೂ, ಸಂಸಾರದುಃಖವೂ ಜನಿಸಿದುವು. ಇವೆಲ್ಲ ಜಗತ್ತೆಲ್ಲವನ್ನೂ ವ್ಯಾಪಿಸಿದುವು.

೭೨. ಈ ಪಾಪ ಮೊದಲಾದುವುಗಳನ್ನು ನೋಡಿ ಶಿವನು ಭಯಗೊಂಡು ಪಾರ್ವತೀದೇವಿಯನ್ನು ಕುರಿತು ಲೋಕಮಾತೆಯೂ ಲೋಕೇಶ್ವರಿಯೂ ಆದ ಎಲೌ ಉಮಾದೇವಿ, ನೀನು ಜಗದ್ರಕ್ಷಕಳು ಮಹಾಮಹಿಮಳು, ಮಂಗಳರೂಪಳು. ಈ ಪಾಪಾದಿಗಳಿಂದ ಜಗತ್ತು ನಶಿಸಿಹೋಗುವುದು, ರಕ್ಷಿಸು.

೭೩. ಭಕ್ತರಿಗೆ ವರವನ್ನು ಕರುಣಿಸುವ ನೀನು ಜಗತ್ತಿಗೆ ಆಧಾರಳು. ಭೋಗಮೋಕ್ಷಸ್ವರೂಪಳೂ ನೀನಾಗಿರುವೆ, ಸ್ವಾಹಾಸ್ವಧಾಕ್ಷೇಮಸಿದ್ಧಿಗಳೂ ನೀನಾಗಿರುವೆ. ವಾಕ್ಕು, ಬುದ್ಧಿಗಳು ನೀನಾಗಿರುವೆ. ಜನನಮರಣಗಳು ನಿನಗಿಲ್ಲ. ಇಂತಹ ನಿನಗೆ ಜಯಜಯಕಾರವು.

ವಿದ್ಯಾದಿರೂಪೇಣ ಜಗತ್ತ್ರಯೇ ತ್ವಂ
ರಕ್ಷಾಂ ಕರೋಷ್ಯೇವ ಮದಾಜ್ಞಯಾ ಚ ।
ತ್ವಯೈವ ಸೃಷ್ಟಂ ಭುವನತ್ರಯಂ ಸ್ಯಾ-
ದ್ಯತಃ ಪ್ರಕೃತ್ಯೈವ ತಥೈವ ಚಿತ್ರಂ ॥ ೭೪ ॥

ಇತ್ಯೇವಮುಕ್ತಾ ದಯಿತಾ ಹರೇಣ
ಸಂಶ್ಲೇಷಸಂಲಾಪಪರಾ ಬಭೂವ ।
ಶ್ರಾಂತಾ ಭವಸ್ಯಾರ್ಧತನೌ ಸುಲಗ್ನಾ
ಚಿಕ್ಷೇಪ ಚ ಸ್ವೇದಜಲಂ ಕರಾಗ್ರೈಃ ॥ ೭೫ ॥

ತಸ್ಮಾದ್ಬಭೂವ ಪ್ರಥಮಂ ಸ ಧರ್ಮೋ
ಲಕ್ಷ್ಮೀರಥೋ ದಾನಮಥೋ ಸುವೃಷ್ಟಿಃ ।
ಸತ್ತ್ವಂ ಸುಸಂಪನ್ನಧರಂ ಸರಾಂಸಿ
ಧಾನ್ಯಾನಿ ಪುಷ್ಪಾಣಿ ಫಲಾನಿ ಚೈವ ॥ ೭೬ ॥

ಸೌಭಾಗ್ಯವಸ್ತೂನಿ ವಪುಃ ಸುವೇಷಃ
ಶೃಂಗಾರಭಾಜೀನಿ ಮಹೌಷಧಾನಿ ।

---

೭೪. ನನ್ನ ಅಪ್ಪಣೆಯಿಂದ ನೀನೇ ವಿದ್ಯೆ ಮೊದಲಾದ ರೂಪಗಳಿಂದ ಜಗತ್ತನ್ನು ರಕ್ಷಿಸುವೆ, ಜಗತ್ತೆಲ್ಲವನ್ನೂ ಪ್ರಕೃತಿಸ್ವರೂಪಳಾದ ನೀನೇ ಸೃಷ್ಟಿಸಿರುವೆ ಎಂದು ಹೇಳಿದನು.

೭೫. ಹೀಗೆ ಹರನು ಹೇಳಲು ಪಾರ್ವತಿಯು ಪ್ರೀತಿಯಿಂದ ಅವನನ್ನು ಬಿಗಿದಪ್ಪಿ ವಿಲಾಸವಚನಗಳನ್ನಾಡುತ್ತಾ ವಿಹರಿಸಿದಳು. ಹಾಗೆ ಶಿವನ ಅರ್ಧ ಶರೀರದಲ್ಲಿ ವಿಹರಿಸುತ್ತಾ ಆ ದೇವಿಯು ಆಯಾಸಗೊಂಡಳು. ಬೆವರುಹನಿ ಯೊಸರಿತು, ಅದನ್ನು ಕೈಯಿಂದ ಒರಸಿ ಹೊರಚೆಲ್ಲಿದಳು.

೭೬. ಆ ಬೆವರುಹನಿಯಿಂದ ಧರ್ಮವು ಮೊದಲು ಜನಿಸಿತು, ಆಮೇಲೆ ಐಶ್ವರ್ಯವು ಜನಿಸಿತು. ಆಮೇಲೆ ದಾನ ಸುಭಿಕ್ಷ ಸಾತ್ವಿಕತೆಗಳೂ ಸರೋವರ ಧ್ಯಾನಪುಷ್ಪಫಲಗಳೂ ಜನಿಸಿದುವು.

೭೭. ಸುಖವಸ್ತುಗಳು, ಸುಂದರಶರೀರ, ಶೃಂಗಾರವಸ್ತುಗಳು, ಔಷಧ

ನೃತ್ಯಾನಿ ಗೀತಾನ್ಯಮೃತಂ ಪುರಾಣಂ
ಶ್ರುತಿಸ್ಮೃತೀ ನೀತಿರಥಾನ್ನಪಾನೇ ॥ ೭೭ ॥

ಶಸ್ತ್ರಾಣಿ ಶಾಸ್ತ್ರಾಣಿ ಗೃಹೋಪಯೋಗ್ಯಾ-
ನ್ಯಸ್ತ್ರಾಣಿ ತೀರ್ಥಾನಿ ಚ ಕಾನನಾನಿ ।
ಇಷ್ಟಾನಿ ಪೂರ್ತಾನಿ ಚ ಮಂಗಲಾನಿ
ಯಾನಾನಿ ಶುಭ್ರಾಭರಣಾಸನಾನಿ ॥ ೭೮ ॥

ಭವಾಂಗಸಂಸರ್ಗಸುಸಂಪ್ರಹಾಸ-
ಸುಸ್ವೇದಸಂಲಾಪರಹಃಪ್ರಕಾರೈಃ ।
ತಥೈವ ಜಾತಂ ಸಚರಾಚರಂ ಚ
ಅಪಾಪಕಂ ದೇವಿ ತತಶ್ಚ ಜಾತಂ ॥ ೭೯ ॥

ಸುಖಂ ಪ್ರಭೂತಂ ಚ ಶುಭಂ ಚ ನಿತ್ಯಂ
ವಿರಾಜಿ ಚೈತತ್ತವ ದೇವಿ ಭಾವಾತ್ ।
ತಸ್ಮಾತ್ತು ಮಾಂ ರಕ್ಷ ಜಗಜ್ಜನಿತ್ರಿ
ಭೀತಂ ಭಯೇಭ್ಯೋ ಜಗತಾಂ ಪ್ರಧಾನೇ ॥ ೮೦ ॥

ಗಳು, ನೃತ್ಯಗೀತಗಳು, ಅಮೃತ, ಪುರಾಣಗಳು, ಶ್ರುತಿಸ್ಮೃತಿಗಳು, ನ್ಯಾಯ, ಅನ್ನಪಾನಗಳು ಇವೆಲ್ಲವೂ ಆ ಬೆವರುಹನಿಯಿಂದ ಜನಿಸಿದುವು.

೭೮. ಆಯುಧಗಳು, ಶಾಸ್ತ್ರಗಳು, ಮನೆಗೆ ಉಪಯೋಗವಾಗುವ ವಸ್ತುಗಳು, ಮಂತ್ರಾಸ್ತ್ರಗಳು, ತೀರ್ಥಗಳು, ಅರಣ್ಯಗಳು, ಕೆರೆಕೊಳಗಳು, ಉಪವನಾದಿಗಳು, ಮಂಗಳಗಳು, ವಾಹನಗಳು, ಆಭರಣಗಳು, ಆಸನಗಳು ಇವೆಲ್ಲವೂ ಜನಿಸಿದುವು.

೭೯. ಇಂದ್ರನಿಂತೆಂದನು—ನೀನು ಏಕಾಂತದಲ್ಲಿ ಶಿವನ ಆಲಿಂಗನ, ಹಾಸ್ಯ, ಆಲಾಪಗಳನ್ನು ಮಾಡಿ ಉಂಟಾದ ಬೆವರು ಹನಿಯಿಂದ ಈ ಮೇಲಿನ ಜಗತ್ತೆಲ್ಲವೂ ಜನಿಸಿದುದಲ್ಲದೇ ಪವಿತ್ರವೂ ಆಯಿತು.

೮೦. ಓ ದೇವಿ, ಪರಮಸುಖ ಮತ್ತು ನಿತ್ಯಕ್ಷೇಮಗಳು ನಿನ್ನಿಂದಲೇ ಲಭಿಸುವುವು, ಜಗನ್ಮಾತೆಯೂ ಅನಾದಿಪ್ರಕೃತಿಯೂ ಆದ ಓ ದೇವಿ, ಶತ್ರುಭಯದಿಂದ ನನ್ನನ್ನು ರಕ್ಷಿಸು.

ಏಕೇ ತರ್ಕೈರ್ವಿಮುಹ್ಯಂತಿ ಲೀಯಂತೇ ತತ್ರ ಚಾಪರೇ ।
ಶಿವಶಕ್ತ್ಯೋಸ್ತದಾದ್ವೈತಂ ಸುಂದರಂ ನೌಮಿ ವಿಗ್ರಹಂ ॥ ೮೧ ॥

॥ ಬ್ರಹ್ಮೋವಾಚ ॥

ಏವಂ ತು ಸ್ತುವತಸ್ತಸ್ಯ ಪುರಸ್ತಾದಭವಚ್ಛಿವಃ ॥ ೮೨ ॥

॥ ಶಿವ ಉವಾಚ ॥

ಕಿಮಭೀಷ್ಟಂ ವರಯಸೇ ಹರೇ ವದ ಪರಾಯಣಂ ॥ ೮೩ ॥

॥ ಇಂದ್ರ ಉವಾಚ ॥

ಬಲವಾನ್ಮೇ ರಿಪುಶ್ಚಾಸೀದ್ದರ್ಶನೈಶ್ಚ ಶನಿರ್ಯಥಾ ।
ತೇನ ಬದ್ಧಸ್ತಲಂ ನೀತಃ ಪರಿಭೂತಸ್ತ್ವನೇಕಧಾ ॥ ೮೪ ॥

ವಾಕ್ಸಾಯಕೈಸ್ತಥಾ ವಿದ್ಧಸ್ತದ್ವಧಾಯ ತ್ವಿಯಂ ಕೃತಿಃ ।
ತದರ್ಥಂ ಜಗತಾಮೀಶ ಯೇನ ಜೇಷ್ಯೇ ರಿಪುಂ ಪ್ರಭೋ ॥ ೮೫ ॥

---

೮೧. ಶಿವ ಮತ್ತು ಶಕ್ತಿ (ದೇವಿ) ಇವರು ಭಿನ್ನರೇ? ಅಲ್ಲವೇ? ಎಂದು ಕೆಲವರು ತುದಿಮೊದಲಿಲ್ಲದ ತರ್ಕವನ್ನು ಮಾಡುವರು. ಕೆಲವರು ತಿಳಿಯದೇ ಭೇದವನ್ನೆಣಿಸುವರು. ಶಿವಶಕ್ತಿಗಳಿಗೆ ಸದಾ ಐಕ್ಯವು, ಭೇದವಿಲ್ಲ. ಇಂತಹ ಅರ್ಧನಾರೀಶ್ವರನಾದ ಸುಂದರೇಶ್ವರನನ್ನು ನಮಸ್ಕರಿಸುವೆನು.

೮೨–೮೩. ಹೀಗೆ ಇಂದ್ರನು ಸ್ತುತಿಸುತ್ತಿರಲು ಶಿವನು ಪ್ರತ್ಯಕ್ಷನಾಗಿ ಎಲೈ ಇಂದ್ರ, ನಿನಗೆ ಬೇಕಾದ ವರವೇನು? ಕೇಳು ಎಂದನು.

೮೪. ಇಂದ್ರನು ಹೇಳಿದನು—ಓ ದೇವ, ನನಗೆ ಸಿಡಿಲಿನಂತೆ ಭಯಂಕರವಾದ ಅಶನಿಯೆಂಬ ಶತ್ರುವಿರುವನು. ಅವನು ನನ್ನನ್ನು ಬಂಧಿಸಿ ಪಾತಾಳಕ್ಕೊಯ್ದು ನಾನಾ ಬಗೆಯಿಂದ ಅವಮಾನಮಾಡಿದನು.

೮೫. ವಾಗ್ಬಾಣಗಳಿಂದ ನನ್ನನ್ನು ಪ್ರಹರಿಸಿದನು: ಆ ಶತ್ರುವಿನ ವಧಕ್ಕಾಗಿ ಇಂತಹ ತಪಸ್ಸನ್ನಾಚರಿಸಿ ನಿನ್ನನ್ನೊಲಿಸಿರುವೆನು. ಆದುದರಿಂದ ಓ ದೇವ, ಆ ಶತ್ರುವನ್ನು ಜಯಿಸುವಂತಹ ತೇಜಸ್ಸನ್ನು ನನಗೆ ಅನುಗ್ರಹಿಸು. ಆ ಶಕ್ತಿಯಿಂದ ಮಿಕ್ಕ ಶತ್ರುಗಳೂ ನಾಶವಾಗಬೇಕು.

ತದೇವ ದೇಹಿ ವೀರ್ಯಂ ಮೇ ಯಚ್ಚಾನ್ಯದ್ರಿಪುನಾಶನಂ ।
ಜಾತಃ ಪರಾಭವೋ ಯಸ್ಮಾತ್ತದ್ವಿನಾಶೇ ಕೃತೇ ಸತಿ ।
ಪುನರ್ಜಾತಮಹಂ ಮನ್ಯೇ ವರಂ ಕೀರ್ತಿರ್ಜಯಶ್ರಿಯೋಃ ॥ ೮೬ ॥

॥ ಬ್ರಹ್ಮೋವಾಚ ॥

ಸ ಶಿವಃ ಶಕ್ರಮಾಹೇದಂ ನ ಮಯೈಕೇನ ತೇ ರಿಪುಃ ।
ವಧಮಾಪ್ನೋತಿ ತಸ್ಮಾತ್ತ್ವಂ ವಿಷ್ಣುಮಪ್ಯವ್ಯಯಂ ಹರಿಂ ॥ ೮೭ ॥

ಆರಾಧಯಸ್ವ ಪೌಲೋಮ್ಯಾ ಸಹ ದೇವಂ ಜನಾರ್ದನಂ ।
ಲೋಕತ್ರಯೈಕಶರಣಂ ನಾರಾಯಣಮನನ್ಯಧೀಃ ॥ ೮೮ ॥

ತತಃ ಪ್ರಾಪ್ಸ್ಯಸಿ ತಸ್ಮಾಚ್ಚ ಮತ್ತಶ್ಚಾಪಿ ಪ್ರಿಯಂ ಹರೇ ।
ಪುನಶ್ಚೋವಾಚ ಭಗವಾನಾದಿಕರ್ತಾ ಮಹೇಶ್ವರಃ ॥ ೮೯ ॥

ಮಂತ್ರಾಭ್ಯಾಸಸ್ತಪೋ ವಾಪಿ ಯೋಗಾಭ್ಯಸನಮೇವ ಚ ।
ಸಂಗಮೇ ಯತ್ರ ಕುತ್ರಾಪಿ ಸಿದ್ಧಿದಂ ಮುನಯೋ ವಿದುಃ ॥ ೯೦ ॥

---

೮೬. ನನಗೆ ಅವಮಾನಮಾಡಿದ ಶತ್ರುವನ್ನು ಸಂಹರಿಸಿದರೆ ನನಗೆ ಹೊಸಜನ್ಮವಾದಂತೆ. ಅವಮಾನಕ್ಕೆ ಪ್ರತೀಕಾರವನ್ನು ಮಾಡಲಾರದ ಎಂತಹ ಕೀರ್ತಿಯೂ ಜಯಲಕ್ಷ್ಮಿಯೂ ನನಗೆ ಬೇಡ ಎಂದನು.

೮೭-೮೮. ಆಗ ಶಿವನು ಇಂದ್ರನಿಗೆ—ಎಲೈ ಇಂದ್ರ, ನಿನ್ನ ಶತ್ರುವು ನನ್ನೊರ್ವನ ವರದಿಂದಲೇ ನಾಶವಾಗಲಾರನು. ಆದುದರಿಂದ ಲೋಕರಕ್ಷಕನೂ ಭಕ್ತವತ್ಸಲನೂ ಆದ ಹರಿಯನ್ನೂ ಸಹ ಶಚೀದೇವಿಯೊಡನೆ ಭಕ್ತಿಯಿಂದ ಆರಾಧಿಸು. ಆ ಹರಿಯಿಂದಲೂ ನನ್ನಿಂದಲೂ ನಿನ್ನಿಷ್ಟಾರ್ಥವು ಸಿದ್ಧಿಸುವುದು ಎಂದು ಹೇಳಿದನು.

೮೯-೯೦. ಪುನಃ ಈಶ್ವರನು ಇಂದ್ರನನ್ನು ಕುರಿತು—ಎಲೈ ಇಂದ್ರ, ಮಂತ್ರಾಭ್ಯಾಸ, ಯೋಗಾಭ್ಯಾಸ, ತಪಸ್ಸು ಇವುಗಳನ್ನು ಯಾವುದಾದರೂ ಸಂಗಮಸ್ಥಳದಲ್ಲಿ ಮಾಡಿದರೆ ಸಂಪೂರ್ಣಸಿದ್ಧಿಯಾಗುವುದು ಎಂದು ತಿಳಿದವರು ಹೇಳುವರು.

ಕಿಂ ಪುನಃ ಸಂಗಮೇ ವಿಪ್ರ ಗೌತಮೀಫೇನಯೋಃ ।
ಗಿರೀಣಾಂ ಗಹ್ವರೇ ಯದ್ವಾ ಸರಿತಾಮಥ ಸಂಗಮೇ ॥ ೯೧ ॥

ವಿಪ್ರೇ ಧಿಯೈವ ಭವತಿ ಮುಕುಂದಾಂಘ್ರಿನಿವಿಷ್ಟಯಾ ।
ಗಂಗಾಯಾ ದಕ್ಷಿಣೇ ತೀರ ಆಪಸ್ತಂಬೋ ಮುನೀಶ್ವರಃ ॥ ೯೨ ॥

ಆಸ್ತೇ ತಸ್ಯಾಪ್ಯಹಂ ತೋಷಮಗಮಂ ಬಲಸೂದನ ।
ತೇನ ತ್ವಂ ಭಾರ್ಯಯಾ ಚೈವ ತೋಷಯಸ್ವ ಗದಾಧರಂ ॥ ೯೩ ॥

॥ ಬ್ರಹ್ಮೋವಾಚ ॥

ಆಪಸ್ತಂಬೇನ ಸಹಿತೋ ಗಂಗಾಯಾ ದಕ್ಷಿಣೇ ತಟೇ ।
ತುಷ್ಟಾವ ದೇವಂ ಪ್ರಯತಃ ಸ್ನಾತ್ವಾ ಪುಣ್ಯೇಽಥ ಸಂಗಮೇ ॥ ೯೪ ॥

ಫೇನಾಯಾಶ್ಚೈವ ಗಂಗಾಯಾಸ್ತತ್ರ ದೇವಂ ಜನಾರ್ದನಂ ।
ವೈದಿಕೈರ್ವಿವಿಧೈರ್ಮಂತ್ರೈಸ್ತಪಸ್ಯಾಽತೋಷಯತ್ತದಾ ॥ ೯೫ ॥

---

೯೧. ಹೀಗಿರಲು ಗೌತಮೀಫೇನಾನದಿಗಳ ಸಂಗಮದಲ್ಲಿ ತಪಸ್ಸು ಮಾಡಿದರೆ ಸಿದ್ಧಿಯಾಗುವುದರಲ್ಲಿ ಸಂದೇಹವೇನು? ಗಿರಿಗುಹೆ, ನದೀಸಂಗಮ ಇವುಗಳಲ್ಲಿ ಹರಿಯನ್ನು ಭಕ್ತಿಯಿಂದ ಭಜಿಸಿದರೆ ಸಂಪೂರ್ಣಸಿದ್ಧಿಯಾಗುವುದು.

೯೨-೯೩. ಗಂಗಾನದಿಯ ದಕ್ಷಿಣತೀರದಲ್ಲಿ ಆಪಸ್ತಂಬಮುನಿಯಿರುವನು. ಅವನಿಗೆ ನಾನು ಪ್ರಸನ್ನನಾಗಿರುವೆನು. ಆ ಮುನಿಯೊಡನೆಯೂ ಶಚೀದೇವಿಯೊಡನೆಯೂ ಆ ಗಂಗಾತೀರದಲ್ಲಿ ನಾರಾಯಣನನ್ನು ಆರಾಧಿಸು ಎಂದನು.

೯೪-೯೫. ಆಪಸ್ತಂಬನೊಡನೆ ಇಂದ್ರನು ಗಂಗಾನದಿಯ ದಕ್ಷಿಣತೀರಕ್ಕೆ ತೆರಳಿ ಫೇನಾಗಂಗೆಗಳ ಸಂಗಮಸ್ಥಳದಲ್ಲಿ ಸ್ನಾನಮಾಡಿ ಅಲ್ಲಿ ಭಕ್ತಿಪೂರ್ವಕವಾಗಿ ವೈದಿಕಮಂತ್ರಗಳಿಂದ ನಾರಾಯಣನನ್ನು ಸ್ತುತಿಸಿದನು.

ತತಸ್ತುಷ್ಟೋಽಭವದ್ವಿಷ್ಣುಃ ಕಿಂ ದೇಯಂ ಚೇತ್ಯಭಾಷತ ।
ದೇಹಿ ಮೇ ಶತ್ರುಹಂತಾರಮಿತ್ಯಾಹ ಭಗವಾನ್ಹರಿಃ ॥ ೯೬ ॥

ದತ್ತಮಿತ್ಯೇವ ಜಾನೀಹಿ ತಮುವಾಚ ಜನಾರ್ದನಃ ।
ತತ್ರಾಭವಚ್ಛಿವಸ್ಯೈವ ಗಂಗಾವಿಷ್ಣ್ವೋಃ ಪ್ರಸಾದತಃ ॥ ೯೭ ॥

ಅಂಭಸಾ ಪುರುಷೋ ಜಾತಃ ಶಿವವಿಷ್ಣುಸ್ವರೂಪಧೃಕ್ ।
ಚಕ್ರಪಾಣಿಃ ಶೂಲಧರಃ ಸ ಗತ್ವಾ ತು ರಸಾತಲಂ ॥ ೯೮ ॥

ನಿಜಘಾನ ತದಾ ದೈತ್ಯಮಿಂದ್ರಶತ್ರುಂ ಮಹಾಶನಿಂ ।
ಸಖಾಭವತ್ಸ ಚೇಂದ್ರಸ್ಯ ಅಬ್ಜಕಃ ಸ ವೃಷಾಕಪಿಃ ॥ ೯೯ ॥

ದಿವಿಸ್ಥೋಽಪಿ ಸದಾ ಚೇಂದ್ರಸ್ತಮನ್ವೇತಿ ವೃಷಾಕಪಿಂ ।
ಕುಪಿತಾ ಪ್ರಣಯೇನಾಭೂದನ್ಯಾಸಕ್ತಂ ವಿಲೋಕ್ಯ ತಂ ।
ಶಚೀಂ ತಾಂ ಸಾಂತ್ವಯನ್ನಾಹ ಶತಮನ್ಯುರ್ಹಸನ್ನಿದಂ ॥ ೧೦೦ ॥

---

೯೬. ಆಗ ಹರಿಯು ಪ್ರಸನ್ನನಾಗಿ ವರವನ್ನು ಕೇಳು ಎಂದು ಹೇಳಿದನು. ಇಂದ್ರನು ನನ್ನ ಶತ್ರುವನ್ನು ಸಂಹರಿಸುವಂತಹ ವೀರನನ್ನನುಗ್ರಹಿಸು ಎಂದು ಕೇಳಿದನು. ಆಗಲಿ ಎಂದು ನಾರಾಯಣನು ವರವನ್ನನುಗ್ರಹಿಸಿದನು.

೯೭-೯೮. ಆ ವರದ ಮಹಿಮೆಯಿಂದ ಮತ್ತು ಹರಿಹರ ಮತ್ತು ಗಂಗೆಯರ ಅನುಗ್ರಹದಿಂದ ಅಲ್ಲಿ ನೀರಿನಿಂದ ಶಿವವಿಷ್ಣುಸ್ವರೂಪನಾದ ಪುರುಷನೋರ್ವನು ಜನಿಸಿದನು. ಅಬ್ಜಕ ಮತ್ತು ವೃಷಾಕಪಿಯೆಂದು ಅವನಿಗೆ ಎರಡು ಹೆಸರುಗಳು. ಚಕ್ರ ಮತ್ತು ತ್ರಿಶೂಲಗಳೆರಡನ್ನೂ ಅವನು ಧರಿಸಿದ್ದನು. ಆ ವೃಷಾಕಪಿಯು ಪಾತಾಳಕ್ಕೆ ಹೋಗಿ ಇಂದ್ರನ ವೈರಿಯಾದಾ ಮಹಾಶನಿಯನ್ನು ಸಂಹರಿಸಿದನು.

೯೯. ಆ ಅಬ್ಜಕನು ಇಂದ್ರನಿಗೆ ಮಿತ್ರನಾದನು. ಸ್ವರ್ಗದಲ್ಲಿಯೂ ಇಂದ್ರನು ಸದಾ ವೃಷಾಕಪಿಯೊಡನೆಯೇ ಸ್ನೇಹದಿಂದ ಕಾಲ ಕಳೆಯುತ್ತಿದ್ದನು.

೧೦೦. ಹೀಗೆ ತನ್ನಲ್ಲಿಗೆ ಬರದೆ ಮಿತ್ರನೊಡನೆ ಇಂದ್ರನು ಕಾಲಕಳೆಯುತ್ತಿರುವುದನ್ನು ನೋಡಿ ಶಚೀದೇವಿಯು ಕೋಪಗೊಂಡಳು. ಅವಳನ್ನು ಸಮಾಧಾನಮಾಡುತ್ತಾ ಇಂದ್ರನು ಪ್ರೀತಿಯಿಂದ ಇಂತೆಂದನು,

॥ ಇಂದ್ರ ಉವಾಚ ॥

ನಾಹಮಿಂದ್ರಾಣಿ ಶರಣಮೃತೇ ಸಖ್ಯುರ್ವೃಷಾಕಪೇಃ ।
ವಾರಿ ವಾಪಿ ಹವಿರ್ಯಸ್ಯ ಅಗ್ನೇಃ ಪ್ರಿಯಕರಂ ಸದಾ ॥ ೧೦೧ ॥

ನಾಹಮನ್ಯತ್ರ ಗಂತಾಸ್ಮಿ ಪ್ರಿಯೇ ಚಾಂಗೇನ ತೇ ಶಪೇ ।
ತಸ್ಮಾನ್ನಾರ್ಹಸಿ ಮಾಂ ವಕ್ತುಂ ಶಂಕಯಾನ್ಯತ್ರ ಭಾಮಿನಿ ॥ ೧೦೨ ॥

ಪತಿವ್ರತಾ ಪ್ರಿಯಾ ಮೇ ತ್ವಂ ಧರ್ಮೇ ಮಂತ್ರೇ ಸಹಾಯಿನೀ ।
ಸಾಪತ್ಯಾ ಚ ಕುಲೀನಾ ಚ ತ್ವತ್ತೋಽನ್ಯಾ ಕಾ ಪ್ರಿಯಾ ಮಮ ॥ ೧೦೩ ॥

ತಸ್ಮಾತ್ತ್ವದುಪದೇಶೇನ ಗಂಗಾಂ ಪ್ರಾಪ್ಯ ಮಹಾನದೀಂ ।
ಪ್ರಸಾದಾದ್ದೇವದೇವಸ್ಯ ವಿಷ್ಣೋರ್ವೈ ಚಕ್ರಪಾಣಿನಃ ॥ ೧೦೪ ॥

ತಥಾ ಶಿವಸ್ಯ ದೇವಸ್ಯ ಪ್ರಸಾದಾಚ್ಚ ವೃಷಾಕಪೇಃ ।
ಜಲೋದ್ಭವಾಚ್ಚ ಮೇ ಮಿತ್ರಾದಬ್ಧಕಾಲ್ಲೋಕವಿಶ್ರುತಾತ್ ॥ ೧೦೫ ॥

---

೧೦೧. ಎಲೌ ಇಂದ್ರಾಣಿ, ವೃಷಾಕಪಿಯನ್ನು ಹೊರತು ಇನ್ನಾರಲ್ಲಿಯೂ ನಾನು ಆಸಕ್ತನಾಗಿಲ್ಲ ಅವನು ನನ್ನ ಸ್ನೇಹಿತ. ಅಗ್ನಿಗೆ ಇಷ್ಟವಾದ ಜಲವೇ ಅವನ ಆಹಾರವು.

೧೦೨. ಎಲೌ ಪ್ರಿಯೇ, ನಿನ್ನಾಣೆಗೂ ಹೇಳುವೆನು, ನಾನು ಬೇರೆ ಸ್ತ್ರೀಯಲ್ಲಿ ಆಸಕ್ತನಾಗಿಲ್ಲ. ಆದುದರಿಂದ ನನ್ನಲ್ಲಿ ನಿನಗೆ ಸಂಶಯವು ಬೇಡ.

೧೦೩. ಪತಿವ್ರತೆಯಾದ ನೀನು ನನಗೆ ಧರ್ಮ ಮತ್ತು ಕಾರ್ಯಗಳಲ್ಲಿ ಸಹಾಯಕಳಾಗಿರುವೆ. ಕುಲೀನೆಯಾದ ನೀನು ಸತ್ಪುತ್ರರನ್ನು ಹಡೆದಿರುವೆ. ನಿನ್ನ ಹೊರತು ಬೇರೆ ಯಾವಳು ನಿನ್ನ ಹಾಗೆ ನನಗೆ ಪ್ರಿಯಳಾದಾಳು ?

೧೦೪–೧೦೫. ನಿನ್ನ ಉಪದೇಶದಿಂದಲೇ ನಾನು ಗಂಗಾನದಿಗೆ ಹೋಗಿ ತಪಸ್ಸುಮಾಡಿ ದೇವದೇವರಾದ ಹರಿಹರರ ಮತ್ತು ಜಲೋತ್ಪನ್ನನಾದ ವೃಷಾಕಪಿಯ ಅನುಗ್ರಹದಿಂದ ಶತ್ರುದುಃಖವನ್ನು ಕಳೆದುಕೊಂಡೆನು. ನನ್ನ ಇಂದ್ರತ್ವವು ಸ್ಥಿರವಾಯಿತು.

ಉತ್ತೀರ್ಣದುಃಖಃ ಸುಭಗೇ ಇತ ಇಂದ್ರೋಽಹಮುಚ್ಯುತಃ ।
ಕಿಂ ನ ಸಾಧ್ಯಂ ಯತ್ರ ಭಾರ್ಯಾ ಭರ್ತೃಚಿತ್ತಾನುಗಾಮಿನೀ ॥ ೧೦೬ ॥

ದುಷ್ಕರಾ ತತ್ರ ನೋ ಮುಕ್ತಿಃ ಕಿಂತ್ವರ್ಥಾದಿತ್ರಯಂ ಶುಭೇ ।
ಜಾಯೈವ ಪರಮಂ ಮಿತ್ರಂ ಲೋಕದ್ವಯಹಿತೈಷಿಣೀ ॥ ೧೦೭ ॥

ಸಾ ಚೇತ್ಕುಲೀನಾ ಪ್ರಿಯಭಾಷಿಣೀ ಚ
ಪತಿವ್ರತಾ ರೂಪವತೀ ಗುಣಾಢ್ಯಾ ।
ಸಂಪತ್ಸು ಚಾಪತ್ಸು ಸಮಾನರೂಪಾ
ತಯಾ ಹ್ಯಸಾಧ್ಯಂ ಕಿಮಿಹ ತ್ರಿಲೋಕ್ಯಾಂ ॥ ೧೦೮ ॥

ತಸ್ಮಾತ್ತ್ವ ಧಿಯಾ ಕಾಂತೇ ಮಮೇದಂ ಶುಭಮಾಗತಂ ।
ಇತಸ್ತ್ವದೋದಿತಂ ಚೈವ ಕರ್ತವ್ಯಂ ನಾನ್ಯದಸ್ತಿ ಮೇ ॥ ೧೦೯ ॥

೧೦೬-೧೦೭. ಪತಿಯ ಮನಸ್ಸಿನಂತೆ ನಡೆಯುವ ಪತ್ನಿಯಿದ್ದರೆ ಎಂತಹುದನ್ನೂ ಸಾಧಿಸಬಹುದು. ಅಂತಹ ಪತ್ನಿಯ ಸಹಾಯದಿಂದ ಮುಕ್ತಿಯೊಂದನ್ನು ಬಿಟ್ಟು ಮಿಕ್ಕ ಅರ್ಥ ಮೊದಲಾದ ಮೂರು ಪುರುಷಾರ್ಥಗಳನ್ನೂ ಸಂಪಾದಿಸಬಹುದು. ಪತ್ನಿಯು ಇಹಪರಲೋಕಗಳಲ್ಲಿ ಹಿತವನ್ನು ಸಾಧಿಸಲು ಸಹಾಯಕಳಾದಂತಹ ಮಿತ್ರಳು.

೧೦೮. ಪತ್ನಿಯು ಕುಲೀನಳೂ ಪ್ರಿಯವಾದ ಮಾತನ್ನಾಡುವವಳೂ ಪತಿವ್ರತೆಯೂ ರೂಪವತಿಯೂ ಗುಣವತಿಯೂ ಆಗಿದ್ದು ಸುಖದುಃಖಗಳಲ್ಲಿ ಸಮಭಾಗಿನಿಯಾಗಿದ್ದರೆ ಎಂತಹ ಕಾರ್ಯವನ್ನಾದರೂ ಸಾಧಿಸಬಹುದು, ಯಾವುದೂ ಅಸಾಧ್ಯವಾಗಲಾರದು.

೧೦೯. ಆದುದರಿಂದ ಎಲೌ ಪ್ರಿಯೆ, ನಿನ್ನ ಬುದ್ಧಿಬಲದಿಂದಲೇ ನಾನೀ ಅಭಿವೃದ್ಧಿಯನ್ನು ಹೊಂದಿರುವೆನು. ಇನ್ನು ಮುಂದೆಯೂ ನಿನ್ನ ಆಲೋಚನೆಯಂತೆಯೇ ನಾನು ಕರ್ತವ್ಯವನ್ನೆಸಗುವೆನು.

ಪರಲೋಕೇ ಚ ಧರ್ಮೋ ಚ ಸತ್ಪುತ್ರಸದೃಶಂ ನ ಚ
ಆರ್ತಸ್ಯ ಪುರುಷಸ್ಯೇಹ ಭಾರ್ಯಾವದ್ಭೇಷಜಂ ನ ಹಿ ॥ ೧೧೦ ॥

ನಿಃಶ್ರೇಯಸಪದಪ್ರಾಪ್ತ್ಯೈ ತಥಾ ಪಾಪಸ್ಯ ಮುಕ್ತಯೇ ।
ಗಂಗಾಯಾ ಸದೃಶಂ ನಾಸ್ತಿ ಶೃಣು ಚಾನ್ಯದ್ವರಾನನೇ ॥ ೧೧೧ ॥

ಧರ್ಮಾರ್ಥಕಾಮಮೋಕ್ಷಾಣಾಂ ಪ್ರಾಪ್ತಯೇ ಪಾಪಮುಕ್ತಯೇ ।
ಶಿವವಿಷ್ಣ್ವೋರನನ್ಯತ್ವಜ್ಞಾನಾನ್ನಾನ್ಯತ್ರ ಮುಕ್ತಯೇ ॥ ೧೧೨ ॥

ತಸ್ಮಾತ್ತ್ವ ಧಿಯಾ ಸಾಧ್ವಿ ಸರ್ವಮೇತನ್ಮನೋಗತಂ ।
ಅವಾಪ್ತಂ ಚ ಶಿವಾದ್ವಿಷ್ಣೋರ್ಗಂಗಾಯಾಶ್ಚ ಪ್ರಸಾದತಃ ॥ ೧೧೩ ॥

ಇಂದ್ರತ್ವಂ ಮೇ ಸ್ಥಿರಂ ಚೇತೋ ಮನ್ಯೇ ಮಿತ್ರಬಲಾತ್ಪುನಃ ।
ವೃಷಾಕಪಿರ್ಮಮ ಸಖಾ ಯೋ ಜಾತಸ್ತ್ವಪ್ಸು ಭಾಮಿನಿ ॥ ೧೧೪ ॥

---

೧೧೦. ಇಹಪರಗಳಲ್ಲಿ ಸುಖವನ್ನು ಪಡೆಯಲು ಪುತ್ರನಂತಹ ಸಾಧನವು ಬೇರೊಂದಿಲ್ಲ. ದುಃಖಿತನಾದ ಪುರುಷನಿಗೆ ಪತ್ನಿಯಂತಹ ದುಃಖ ನಾಶಕವಾದ ಔಷಧಿಯು ಮತ್ತೊಂದಿಲ್ಲ.

೧೧೧. ಪಾಪವನ್ನು ಹೋಗಲಾಡಿಸಿಕೊಳ್ಳಲು ಮತ್ತು ಮುಕ್ತಿಯನ್ನು ಪಡೆಯಲು ಗಂಗೆಯಂತಹ ಸಾಧನವು ಬೇರೊಂದಿಲ್ಲ. ಎಲೌ ದೇವಿ, ಅಲ್ಲದೆ ಇನ್ನೊಂದು ವಿಷಯವನ್ನು ಹೇಳುವೆನು.

೧೧೨- ಶಿವವಿಷ್ಣುಗಳಿಗೆ ಭೇದವಿಲ್ಲ. ಇಂತಹ ಅಭೇಧಜ್ಞಾನದಿಂದ ಪಾಪವು ನಾಶವಾಗುವುದು. ಧರ್ಮಅರ್ಥಕಾಮಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ಪಡೆಯಬಹುದು.

೧೧೩. ಇಂತಹ ಅಭೇದಜ್ಞಾನವನ್ನೂ ತನ್ಮೂಲಕ ಸಕಲಸಂಪತ್ತನ್ನೂ ನಾನು ನಿನ್ನ ಬುದ್ಧಿಬಲದಿಂದ ಪಡೆದೆನು. ಶಿವವಿಷ್ಣು ಮತ್ತು ಗಂಗೆಯರ ಪ್ರಸನ್ನತೆಯು ನನಗೆ ಲಭಿಸಿತು.

೧೧೪. ಮಿತ್ರನ ಸಹಾಯದಿಂದ ನನ್ನ ಇಂದ್ರಪದವಿಯೂ ಸ್ಥಿರವಾಯಿತು. ಜಲದಲ್ಲಿ ಜನಿಸಿದ ವೃಷಾಕಪಿಯು ನನಗೆ ಪರಮಮಿತ್ರನಾಗಿರುವನು.

ತ್ವಂ ಚ ಪ್ರಿಯಸಖೀ ನಿತ್ಯಂ ನಾನ್ಯತ್ಪ್ರಿಯತರಂ ಮಮ ।
ತೀರ್ಥಾನಾಂ ಗೌತಮೀ ಗಂಗಾ ದೇವಾನಾಂ ಹರಿಶಂಕರೌ ॥ ೧೧೫ ॥

ತಸ್ಮಾದೇಭ್ಯಃ ಪ್ರಸಾದೇನ ಸರ್ವಂ ಚೇಪ್ಸಿತಮಾಪ್ತವಾನ್ ।
ಮಮ ಪ್ರೀತಿಕರಂ ಚೇದಂ ತೀರ್ಥಂ ತ್ರೈಲೋಕ್ಯವಿಶ್ರುತಂ ॥ ೧೧೬ ॥

ತಸ್ಮಾದೇತದ್ಧಿ ಯಾಚಿಷ್ಯೇ ದೇವಾನ್ಸರ್ವಾನನುಕ್ರಮಾತ್ ।
ಅನುಮನ್ಯಂತು ಋಷಯೋ ಗಂಗಾ ಚ ಹರಿಶಂಕರೌ ॥ ೧೧೭ ॥

ಇಂದ್ರೇಶ್ವರೇ ಚಾಬ್ಜಕೇ ಚ ಉಭಯೋಸ್ತೀರಯೋಃ ಸುರಾಃ ।
ಏಕತ್ರ ಶಂಕರೋ ದೇವೋ ಹ್ಯಪರತ್ರ ಜನಾರ್ದನಃ ॥ ೧೧೮ ॥

ಪಾವಯನ್ದಂಡಕಾರಣ್ಯಂ ಸಾಕ್ಷಾದ್ವಿಷ್ಣುಸ್ತ್ರಿವಿಕ್ರಮಃ ।
ಅಂತರೇ ಯಾನಿ ತೀರ್ಥಾನಿ ಸರ್ವಪುಣ್ಯಪ್ರದಾನಿ ಚ ॥ ೧೧೯ ॥

ನೀನೂ ಸಹ ಸದಾ ನನಗೆ ಹಿತವನ್ನು ಕೋರುವ ಪ್ರಿಯಸಖಿಯಾಗಿರುವೆ. ಇದಕ್ಕಿಂತಲೂ ಪ್ರಿಯವಾದುದು ನನಗೆ ಇನ್ನಾವುದೂ ಇಲ್ಲ.

೧೧೫-೧೧೬. ತೀರ್ಥಗಳಲ್ಲಿ ಗಂಗೆಯು ಶ್ರೇಷ್ಠಳು, ದೇವತೆಗಳಲ್ಲಿ ಹರಿಹರರು ಶ್ರೇಷ್ಠರು. ಆದುದರಿಂದ ಇವರ ಪ್ರಸಾದದಿಂದ ನಾನು ಇಷ್ಟಾರ್ಥಗಳೆಲ್ಲವನ್ನೂ ಪಡೆದೆನು. ನನ್ನಿಷ್ಟಸಿದ್ಧಿಯಾದ ಈ ಜಗತ್ಪ್ರಖ್ಯಾತವಾದ ತೀರ್ಥವು ನನಗೆ ತುಂಬಾ ಪ್ರಿಯವಾದುದು.

೧೧೭. ಆದುದರಿಂದ ನಾನು ದೇವತೆಗಳೆಲ್ಲರನ್ನೂ ಕುರಿತು ಹೀಗೆ ಕೇಳಿಕೊಳ್ಳುವೆನು. ಋಷಿಗಳೂ ಗೌತಮಿಯೂ ಹರಿಶಂಕರರೂ ಈ ನನ್ನ ಪ್ರಾರ್ಥನೆಯನ್ನಂಗೀಕರಿಸಲಿ.

೧೧೮-೧೧೯. ಇಂದ್ರೇಶ್ವರ ಮತ್ತು ಅಬ್ಜಕ ಎಂಬ ಎರಡು ತೀರ್ಥಗಳ ಎರಡು ದಡಗಳಲ್ಲಿ ಒಂದೆಡೆ ಶಿವನೂ ಮತ್ತೊಂದೆಡೆಯಲ್ಲಿ ವಿಷ್ಣುವೂ ನೆಲಸಿರಬೇಕು. ಮಧ್ಯದಲ್ಲಿರುವ ಮಿಕ್ಕ ಪುಣ್ಯತೀರ್ಥಗಳಲ್ಲಿ ತ್ರಿವಿಕ್ರಮಮೂರ್ತಿಯು ದಂಡಕಾರಣ್ಯವನ್ನು ಪಾವನಮಾಡುತ್ತಾ ನೆಲಸಿರಬೇಕು.

ಅತ್ರ ತು ಸ್ನಾನಮಾತ್ರೇಣ ಸರ್ವೇ ತೇ ಮುಕ್ತಿಮಾಪ್ನುಯುಃ ।
ಪಾಪಿಷ್ಠಾಃ ಪಾಪತೋ ಮುಕ್ತಿಮಾಪ್ನುಯುರ್ಯೇ ಚ ಧರ್ಮಿಣಃ ॥ ೧೨೦ ॥

ತೇಷಾಂ ತು ಪರಮಾ ಮುಕ್ತಿಃ ಪಿತೃಭಿಃ ಪಂಚಪಂಚಭಿಃ ।
ಅತ್ರ ಕಿಂಚಿಚ್ಚ ಯೋ ದದ್ಯುರರ್ಥಿಭ್ಯಸ್ತಿಲಮಾತ್ರಕಂ ॥ ೧೨೧ ॥

ದಾತೃಭ್ಯೋ ಹ್ಯಕ್ಷಯಂ ತತ್ಸ್ಯಾತ್ಕಾಮದಂ ಮೋಕ್ಷದಂ ತಥಾ ।
ಧನ್ಯಂ ಯಶಸ್ಯಮಾಯುಷ್ಯಮಾರೋಗ್ಯಂ ಪುಣ್ಯವರ್ಧನಂ ॥ ೧೨೨ ॥

ಆಖ್ಯಾನಂ ವಿಷ್ಣುಶಂಭೋಶ್ಚ ಜ್ಞಾತ್ವಾ ಸ್ನಾನಾಚ್ಚ ಮುಕ್ತಿದಂ ।
ಅಸ್ಯ ತೀರ್ಥಸ್ಯ ಮಾಹಾತ್ಮ್ಯಂ ಯೇ ಶೃಣ್ವಂತಿ ಪಠಂತಿ ಚ ॥ ೧೨೩ ॥

ಪುಣ್ಯಭಾಜೋ ಭವೇಯುಸ್ತೇ ತೇಭ್ಯೋಽತ್ರೈವ ಸ್ಮೃತಿರ್ಭವೇತ್ ।
ಶಿವವಿಷ್ಣ್ವೋರಶೇಷಾಘಸಂಘವಿಚ್ಛೇದಕಾರಿಣೀ ।
ಯಾಂ ಪ್ರಾರ್ಥಯಂತಿ ಮುನಯೋ ವಿಜಿತೇಂದ್ರಿಯಮಾನಸಾಃ ॥ ೧೨೪ ॥

---

೧೨೦. ಈ ಅಬ್ಜಕತೀರ್ಥದಲ್ಲಿ ಸ್ನಾನಮಾಡಿದ ಮಾತ್ರದಿಂದ ಎಲ್ಲರೂ ಮುಕ್ತಿಯನ್ನೈದುವರು. ಪಾಪಿಷ್ಠರು ಪಾಪದಿಂದ ಮುಕ್ತಿಯನ್ನೈದುವರು. ಪುಣ್ಯವಂತರು ಪರಮಮುಕ್ತಿಯನ್ನು ಹೊಂದುವರಲ್ಲದೆ, ತಮ್ಮ ಕುಲದ ಐದು ಮಂದಿ ಪಿತೃಗಳನ್ನೂ ಉದ್ಧರಿಸುವರು.

೧೨೧. ಈ ತೀರ್ಥದಲ್ಲಿ ಎಳ್ಳಷ್ಟು ದಾನಮಾಡಿದರೂ ಸಹ ಅಕ್ಷಯ ಫಲವು ಲಭಿಸುವುದು, ಭೋಗಮೋಕ್ಷಗಳೆರಡೂ ಲಭಿಸುವುವು.

೧೨೨. ಶಿವವಿಷ್ಣುಗಳ ಮಹಿಮೆಯುಳ್ಳ ಈ ಮಾಹಾತ್ಮ್ಯವನ್ನು ತಿಳಿದು ಸ್ನಾಮಾಡಿದರೆ ಐಶ್ವರ್ಯವೂ ಯಶಸ್ಸೂ ಆಯುಸ್ಸೂ ಆರೋಗ್ಯವೂ ಪುಣ್ಯವೂ ಮುಕ್ತಿಯೂ ಲಭಿಸುವುವು.

೧೨೩. ಈ ಅಬ್ಜಕತೀರ್ಥದ ಮಾಹಾತ್ಮ್ಯವನ್ನು ಕೇಳುವವರಿಗೂ ಹೇಳುವವರಿಗೂ ಪುಣ್ಯವು ಉಂಟಾಗುವುದು.

೧೨೪. ಮತ್ತು ಜಿತೇಂದ್ರಿಯರಾದ ಮುನಿಗಳು ಸದಾ ಅಪೇಕ್ಷಿಸುವಂತಹ ಪಾಪಗಳೆಲ್ಲವನ್ನೂ ಹೋಗಲಾಡಿಸುವಂತಹ ಶಿವವಿಷ್ಣುಸ್ಮರಣವು (ಭಕ್ತಿಯು) ಉಂಟಾಗುವುದು ಎಂದನು. ಇಂದ್ರನ ಈ ಪ್ರಾರ್ಥನೆಯನ್ನು ದೇವತೆಗಳೂ ಋಷಿಗಳೂ ಆಗಿಯೇ ಆಗುವುದೆಂದು ಅನುಮೋದಿಸಿದರು.

॥ ಬ್ರಹ್ಮೋವಾಚ ॥

ಭವಿಷ್ಯತ್ಯೇವಮೇವೇತಿ ತಂ ದೇವಾ ಋಷಯೋಽಬ್ರುವನ್ ।
ಗೌತಮ್ಯಾ ಉತ್ತರೇ ಪಾರೇ ತೀರ್ಥಾನಾಂ ಮೋಕ್ಷದಾಯಿನಾಂ ॥ ೧೨೫ ॥

ದೇವರ್ಷಿಸಿದ್ಧಸೇವ್ಯಾನಾಂ ಸಹಸ್ರಾಣ್ಯಥ ಸಪ್ತ ವೈ ।
ತಥೈವ ದಕ್ಷಿಣೇ ತೀರೇ ತೀರ್ಥಾನ್ಯೇಕಾದಶೈವ ತು ॥ ೧೨೬ ॥

ಅಬ್ಜಕಂ ಹೃದಯಂ ಪ್ರೋಕ್ತಂ ಗೋದಾವರ್ಯಾ ಮುನೀಶ್ವರೈಃ ।
ವಿಶ್ರಾಮಸ್ಥಾನಮೀಶಸ್ಯ ವಿಷ್ಣೋರ್ಬ್ರಹ್ಮಣ ಏವ ಚ ॥ ೧೨೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಗೌತಮ್ಯು-
ತ್ತರಕೂಲಸ್ಥೇಂದ್ರೇಶ್ವರಾದಿಸಪ್ತಸಹಸ್ರತೀರ್ಥದಕ್ಷಿಣಕೂಲಸ್ಥಾಪ-
ಸ್ತಂಬಸೋಮೇಶ್ವರಫೇನಾಸಂಗಮವೃಷಾಕಪಾಬ್ಜಕವೈಷ್ಣವ-
ಹನೂಮತ್ತೀರ್ಥಮಾರ್ಕಾರೇತ್ಯಾದ್ಯೇಕಾದಶತೀರ್ಥವರ್ಣನಂ
ನಾಮೈಕೋನತ್ರಿಂಶಧಿಕಶತತಮೋಽಧ್ಯಾಯಃ

೧೨೫-೧೨೬. ಗೌತಮೀನದಿಯ ಉತ್ತರತೀರದಲ್ಲಿ ಏಳುಸಾವಿರ (7000) ಪುಣ್ಯತೀರ್ಥಗಳಿರುವುವು, ದಕ್ಷಿಣತೀರದಲ್ಲಿ ಹನ್ನೊಂದು ಸಾವಿರ (11000) ತೀರ್ಥಗಳಿರುವುವು. ಮುಕ್ತಿಪ್ರದವಾದ ಆ ತೀರ್ಥಗಳನ್ನೂ ದೇವತೆಗಳೂ ಸಿದ್ಧರೂ ಸೇವಿಸುವರು.

೧೨೭. ಅಬ್ಜಕತೀರ್ಥವು ಗೌತಮೀನದಿಯ ಹೃದಯವೆಂದು ಮುನಿಗಳು ಗೌರವಿಸುವರು, ಆ ತೀರ್ಥದಲ್ಲಿ ಶಿವಹರಿಬ್ರಹ್ಮರು ಸದಾ ನೆಲಸಿರುವರು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಇಂದ್ರೇಶ್ವರವೇ ಮೊದಲಾದ ಸಾವಿರಾರು
ತೀರ್ಥಗಳ ವರ್ಣನವೆಂಬ ನೂರಿಪ್ಪತ್ತೊಂಭತ್ತನೆಯ
ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಅರವತ್ತನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಿಂಶಾಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಆಪಸ್ತಂಬಮಿತಿ ಖ್ಯಾತಂ ತೀರ್ಥಂ ತ್ರೈಲೋಕ್ಯವಿಶ್ರುತಂ ।
ಸ್ಮರಣಾದಪ್ಯಶೇಷಾಘಸಂಘವಿಧ್ವಂಸನಕ್ಷಮಂ ॥ ೧ ॥

ಆಪಸ್ತಂಬೋ ಮಹಾಪ್ರಾಜ್ಞೋ ಮುನಿರಾಸೀನ್ಮಹಾಯಶಃ ।
ತಸ್ಯ ಭಾರ್ಯಾಕ್ಷಸೂತ್ರೇತಿ ಪತಿಧರ್ಮಪರಾಯಣಾ ॥ ೨ ॥

ನೂರಮೂವತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಆಪಸ್ತಂಬವೆಂಬ ತೀರ್ಥವು ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಗಿರುವುದು. ಆ ತೀರ್ಥವನ್ನು ಸ್ಮರಣಮಾಡಿದರೆ ಪಾಪಗಳೆಲ್ಲವೂ ನಾಶವಾಗುವುವು.

೨. ಮಹಾಪ್ರಾಜ್ಞನೂ ಮಹಾಮಹಿಮನೂ ಆದ ಆಪಸ್ತಂಬನೆಂಬ ಋಷಿಯು ಹಿಂದೆ ಇದ್ದನು, ಅವನ ಹೆಂಡತಿಯು ಅಕ್ಷಸೂತ್ರೆಯೆಂಬುವಳು, ಅವಳು ಮಹಾಪತಿವ್ರತೆಯಾಗಿದ್ದಳು.

ತಸ್ಯ ಪುತ್ರೋ ಮಹಾಪ್ರಾಜ್ಞಃ ಕರ್ಕಿನಾಮಾಥ ತತ್ತ್ವವಿತ್ ।
ತಸ್ಯಾಶ್ರಮಮನುಪ್ರಾಪ್ತೋ ಹ್ಯಗಸ್ತ್ಯೋ ಮುನಿಸತ್ತಮಃ ॥ ೩ ॥

ತಮಗಸ್ತ್ಯಂ ಪೂಜಯಿತ್ವಾ ಆಪಸ್ತಂಬೋ ಮುನೀಶ್ವರಃ ।
ಶಿಷ್ಯೈರನುಗತೋ ಧೀಮಾಂಸ್ತಂ ಪ್ರಷ್ಟುಮುಪಚಕ್ರಮೇ ॥ ೪ ॥

॥ ಆಪಸ್ತಂಬ ಉವಾಚ ॥

ತ್ರಯಾಣಾಂ ಕೋ ನು ಪೂಜ್ಯಃ ಸ್ಯಾದ್ದೇವಾನಾಂ ಮುನಿಸತ್ತಮ ।
ಭುಕ್ತಿರ್ಮುಕ್ತಿಶ್ಚ ಕಸ್ಮಾದ್ವಾ ಸ್ಯಾದನಾದಿಶ್ಚ ಕೋ ಭವೇತ್ ॥ ೫ ॥

ಅನಂತಶ್ಚಾಪಿ ಕೋ ವಿಪ್ರ ದೇವಾನಾಮಪಿ ದೈವತಂ ।
ಯಜ್ಞೈಃ ಕ ಇಜ್ಯತೇ ದೇವಃ ಕೋ ವೇದೇಷ್ವನುಗೀಯತೇ ।
ಏತಂ ಮೇ ಸಂಶಯಂ ಛೇತ್ತುಂ ವದಾಗಸ್ತ್ಯ ಮಹಾಮುನೇ ॥ ೬ ॥

---

೩. ಆ ಆಪಸ್ತಂಬಮುನಿಗೆ ಕರ್ಕಿಯೆಂಬ ಮಹಾಜ್ಞಾನಿಯಾದ ಪುತ್ರನಿದ್ದನು. ಒಂದುದಿನ ಆಪಸ್ತಂಬನ ಆಶ್ರಮಕ್ಕೆ ಅಗಸ್ತ್ಯಮಹಾಮುನಿಯು ಬಂದನು.

೪. ಆ ಅಗಸ್ತ್ಯಮುನಿಯನ್ನು ಸತ್ಕರಿಸಿ ಆಪಸ್ತಂಬಮುನಿಯು ಶಿಷ್ಯರೊಡನೆ ಕೂಡಿ ಹೀಗೆ ಪ್ರಶ್ನಿಸಿದನು.

೫. ಓ ಮುನೀಶ್ವರ, ಬ್ರಹ್ಮವಿಷ್ಣುಮಹೇಶ್ವರರಲ್ಲಿ ಪೂಜ್ಯನಾದ ಶ್ರೇಷ್ಠದೇವನಾರು? ಯಾವನಿಂದ ಭೋಗಮೋಕ್ಷಗಳೆರಡೂ ಲಭಿಸುವುವು? ಆದಿಯಿಲ್ಲದ ಪುರಾಣಪುರುಷನಾವನು?

೬. ಕೊನೆ (ಮರಣ) ಯಿಲ್ಲದ ದೇವದೇವನಾದ ಪರಮಾತ್ಮನಾರು? ಯಜ್ಞಗಳಲ್ಲಿ ಆರಾಧಿಸಲ್ಪಡುವವನೂ ವೇದಗಳಲ್ಲಿ ಸ್ತುತಿಸಲ್ಪಡುವವನೂ ಆದ ದೇವನಾರು? ಓ ಅಗಸ್ತ್ಯಮುನಿ, ನನ್ನ ಈ ಸಂಶಯವನ್ನು ಹೋಗಲಾಡಿಸು ಎಂದು ಪ್ರಾರ್ಥಿಸಲು,

॥ ಅಗಸ್ತ್ಯ ಉವಾಚ ॥

ಧರ್ಮಾರ್ಥಕಾಮಮೋಕ್ಷಾಣಾಂ ಪ್ರಮಾಣಂ ಶಬ್ದ ಉಚ್ಯತೇ ।
ತತ್ರಾಪಿ ವೈದಿಕಃ ಶಬ್ದಃ ಪ್ರಮಾಣಂ ಪರಮಂ ಮತಃ ॥ ೭ ॥

ವೇದೇನ ಗೀಯತೇ ಯಸ್ತು ಪುರುಷಃ ಸ ಪರಾತ್ಪರಃ ।
ಮೃತೋಽಪರಃ ಸ ವಿಜ್ಞೇಯೋ ಹ್ಯಮೃತಃ ಪರ ಉಚ್ಯತೇ ॥ ೮ ॥

ಯೋಽಮೂರ್ತಃ ಸ ಪರೋ ಜ್ಞೇಯೋ ಹ್ಯಪರೋ ಮೂರ್ತ ಉಚ್ಯತೇ ।
ಗುಣಾಭಿವ್ಯಾಪ್ತಿಭೇದೇನ ಮೂರ್ತೋಽಸೌ ತ್ರಿವಿಧೋ ಭವೇತ್ ॥ ೯ ॥

ಬ್ರಹ್ಮಾ ವಿಷ್ಣುಃ ಶಿವಶ್ಚೇತಿ ಏಕ ಏವ ತ್ರಿಧೋಚ್ಯತೇ ।
ತ್ರಯಾಣಾಮಪಿ ದೇವಾನಾಂ ವೇದ್ಯಮೇಕಂ ಪರಂ ಹಿ ತತ್ ॥ ೧೦ ॥

ಏಕಸ್ಯ ಬಹುಧಾ ವ್ಯಾಪ್ತಿರ್ಗುಣಕರ್ಮವಿಭೇದತಃ ।
ಲೋಕಾನಾಮುಪಕಾರಾರ್ಥಮಾಕೃತಿತ್ರಿತಯಂ ಭವೇತ್ ॥ ೧೧ ॥

---

೭. ಅಗಸ್ತ್ಯನು ಹೇಳಿದನು—ಎಲೈ ಆಪಸ್ತಂಬಮುನಿ, ಧರ್ಮಅರ್ಥ ಕಾಮಮೋಕ್ಷಗಳಿಗೆ ಶಬ್ದವೇ ಪ್ರಮಾಣವು. ಅದರಲ್ಲಿಯೂ ವೇದವು ಈ ಪುರುಷಾರ್ಥಗಳ ವಿಷಯದಲ್ಲಿ ಮಹಾಪ್ರಮಾಣವು.

೮. ವೇದಗಳಲ್ಲಿ ಸ್ತುತಿಸಲ್ಪಡುವ ಪುರುಷನೇ ಪರಮಾತ್ಮನು. ಮಿಕ್ಕವರೆಲ್ಲರೂ ಮರ್ತ್ಯರು, ಜನನಮರಣಗಳುಳ್ಳವರು. ಪರಮಾತ್ಮನು ಜನನಮರಣಗಳಿಲ್ಲದವನು.

೯. ಮೂರ್ತಿತ್ರಯಗಳಿಲ್ಲದವನು ಪರಮಾತ್ಮನು. ಅವನು ಮಾಯಿಕವಾದ ಸತ್ತ್ವರಜಸ್ತಮೋಗುಣಗಳ ಭೇದದಿಂದ ಬ್ರಹ್ಮವಿಷ್ಣುಮಹೇಶ್ವರರೆಂಬ ಮೂರುರೂಪಗಳನ್ನು ಧರಿಸುವನು.

೧೦. ಆದುದರಿಂದ ಬ್ರಹ್ಮವಿಷ್ಣುಮಹೇಶ್ವರರು ನಿಜವಾಗಿ ಪರಮಾತ್ಮನ ಮೂರುರೂಪಗಳು. ಈ ಮೂವರು ದೇವತೆಗಳಿಗೂ ವೇದ್ಯನಾದವನು ಪರಮಾತ್ಮನು.

೧೧. ಓರ್ವ ಪರಮೇಶ್ವರನೇ ಗುಣಕರ್ಮಗಳ ಭೇದದಿಂದ ನಾನಾ

ಯಸ್ತತ್ತ್ವಂ ವೇತ್ತಿ ಪರಮಂ ಸ ಚ ವಿದ್ವಾನ್ನ ಚೇತರಃ ।
ತತ್ರ ಯೋ ಭೇದಮಾಚಷ್ಟೇ ಲಿಂಗಭೇದೀ ಸ ಉಚ್ಯತೇ ॥ ೧೨ ॥

ಪ್ರಾಯಶ್ಚಿತ್ತಂ ನ ತಸ್ಯಾಸ್ತಿ ಯಶ್ಚೈಷಾಂ ವ್ಯಾಹರೇದ್ಭಿದಂ ।
ತ್ರಯಾಣಾಮಪಿ ದೇವಾನಾಂ ಮೂರ್ತಿಭೇದಃ ಪೃಥಕ್ಪೃಥಕ್ ॥ ೧೩ ॥

ವೇದಾಃ ಪ್ರಮಾಣಂ ಸರ್ವತ್ರ ಸಾಕಾರೇಷು ಪೃಥಕ್ಪೃಥಕ್ ।
ನಿರಾಕಾರಂ ಚ ಯತ್ತ್ವೇಕಂ ತತ್ತೇಭ್ಯಃ ಪರಮಂ ಮತಂ ॥ ೧೪ ॥

॥ ಆಪಸ್ತಂಬ ಉವಾಚ ॥

ನಾನೇನ ನಿರ್ಣಯಃ ಕಶ್ಚಿನ್ಮಯಾತ್ರ ವಿದಿತೋ ಭವೇತ್ ।
ತತ್ರಾಪ್ಯತ್ರ ರಹಸ್ಯಂ ಯತ್ತದ್ವಿಮೃಶ್ಯಾಶು ಕೀರ್ತ್ಯತಾಂ ।
ನಿಃಸಂಶಯಂ ನಿರ್ವಿಕಲ್ಪಂ ಭಾಜನಂ ಸರ್ವಸಂಪದಾಂ ॥ ೧೫ ॥

ಭೇದಗಳನ್ನು ಧರಿಸುವನು. ಲೋಕಗಳ ಉಪಕಾರಕ್ಕಾಗಿ ಬ್ರಹ್ಮವಿಷ್ಣುಮಹೇಶ್ವರರೆಂಬ ರೂಪಗಳನ್ನು ಧರಿಸುವನು.

೧೨. ಪರಮಾತ್ಮನ ಈ ತತ್ವವನ್ನು ತಿಳಿದವನೇ ವಿದ್ವಾಂಸನು. ತ್ರಿಮೂರ್ತಿಗಳಿಗೆ ತತ್ವಭೇದವನ್ನೆಣಿಸುವವನು ಲಿಂಗಭೇದಿ (ಶಿವಲಿಂಗವನ್ನು ಒಡೆದವನಂತೆ ಪಾಪಿ) ಯಾಗುವನು.

೧೩. ತ್ರಿಮೂರ್ತಿಗಳಲ್ಲಿ ಭೇದವನ್ನೆಣಿಸುವ ಪಾಪಿಗೆ ಪ್ರಾಯಶ್ಚಿತ್ತವೇ ಇಲ್ಲ. ತ್ರಿಮೂರ್ತಿಗಳಿಗೆ ಪರಸ್ಪರ ರೂಪಭೇದವೇ ವಿನಾ ತತ್ವಭೇದಗಳಿಲ್ಲ.

೧೪. ಬೇರೆಬೇರೆ ರೂಪಗಳುಳ್ಳ ದೇವತೆಗಳ ವಿಷಯದಲ್ಲಿ ವೇದಗಳೇ ಪ್ರಮಾಣವು. ಈ ದೇವತೆಗಳಲ್ಲಿ ಆಕಾರವಿಲ್ಲದ ಒಂದು ಪರತತ್ವವು ಅಡಗಿರುವುದು ಎಂದನು.

೧೫. ಆಪಸ್ತಂಬನು ಕೇಳಿದನು—ಓ ಮುನಿ, ನಿನ್ನ ಮಾತಿನಿಂದ ನಿರ್ಣಯವೇ ಆಗಲಿಲ್ಲವಲ್ಲಾ. ಆ ತ್ರಿಮೂರ್ತಿಗಳಲ್ಲಿಯೂ ರಹಸ್ಯವೂ ಲೋಕಕ್ಷೇಮಕರವೂ ಸಂಪತ್ಕರವೂ ಆದ ತತ್ವವು ಯಾರಲ್ಲಿದೆ? ವಿಮರ್ಶಿಸಿ ಹೇಳು ಎನ್ನಲು,

॥ ಬ್ರಹ್ಮೋವಾಚ ॥

ಏತದಾಕರ್ಣ್ಯ ಭಗವಾನಗಸ್ತ್ಯೋ ವಾಕ್ಯಮಬ್ರವೀತ್ ॥ ೧೬ ॥

॥ ಅಗಸ್ತ್ಯ ಉವಾಚ ॥

ಯದ್ಯಪ್ಯೇಷಾಂ ನ ಭೇದೋಽಸ್ತಿ ದೇವಾನಾಂ ತು ಪರಸ್ಪರಂ ।
ತಥಾಪಿ ಸರ್ವಸಿದ್ಧಿಃ ಸ್ಯಾಚ್ಛಿವಾದೇವ ಸುಖಾತ್ಮನಃ ॥ ೧೭ ॥

ಪ್ರಪಂಚಸ್ಯ ನಿಮಿತ್ತಂ ಯತ್ತಜ್ಜ್ಯೋತಿಶ್ಚ ಪರಂ ಶಿವಃ ।
ತಮೇವ ಸಾಧಯ ಹರಂ ಭಕ್ತ್ಯಾ ಪರಮಯಾ ಮುನೇ ।
ಗೌತಮ್ಯಾಂ ಸಕಲಾಘೌಘಸಂಹರ್ತಾ ದಂಡಕೇ ವನೇ ॥ ೧೮ ॥

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ಮುನೇರ್ವಾಕ್ಯಂ ಪರಾಂ ಪ್ರೀತಿಮುಪಾಗತಃ ।
ಭುಕ್ತಿದೋ ಮುಕ್ತಿದಃ ಪುಂಸಾಂ ಸಾಕಾರೋಽಥ ನಿರಾಕೃತಿಃ ॥ ೧೯ ॥

೧೬–೧೭. ಆಪಸ್ತಂಬನ ಈ ಮಾತನ್ನು ಕೇಳಿ ಭಗವಾನ್ ಅಗಸ್ತ್ಯನು ಇಂತೆಂದನು—ಯದ್ಯಪಿ ಈ ತ್ರಿಮೂರ್ತಿಗಳಿಗೆ ತತ್ತ್ವಭೇದವಿಲ್ಲ. ಆದರೂ ಸುಖಸ್ವರೂಪನಾದ ಶಿವನಿಂದಲೇ ಸಕಲೈಶ್ವರ್ಯಗಳೂ ಲಭಿಸುವುವು. ಶಿವನು ಜಗತ್ತಿಗೆ ಕಾರಣವಾದ ಪರಮಾತ್ಮಸ್ವರೂಪನು.

೧೮. ಆ ಹರನನ್ನೇ ನೀನು ಭಕ್ತಿಯಿಂದ ಆರಾಧಿಸು. ದಂಡಕಾರಣ್ಯದಲ್ಲಿ ಗೌತಮೀತೀರದಲ್ಲಿ ಪಾಪಹರನಾದಾ ಹರನು ನೆಲಸಿರುವನು ಎಂದನು.

೧೯. ಅಗಸ್ತ್ಯಮುನಿಯ ಆ ಮಾತನ್ನು ಕೇಳಿ ಆಪಸ್ತಂಬನು ತುಂಬಾ ಸಂತಸಗೊಂಡನು. ಮತ್ತು ಹೀಗೆ ತಿಳಿದನು—ಶಿವನು ಭೋಗಮೋಕ್ಷಗಳನ್ನುಂಟುಮಾಡುವನು, ವಸ್ತುತಃ ಆಕಾರವಿಲ್ಲದವನಾದರೂ ಮಾಯೆಯಿಂದ ನಾನಾರೂಪಗಳನ್ನು ಧರಿಸುವನು.

ಸೃಷ್ಟ್ಯಾಕಾರಸ್ತತಃ ಶಕ್ತಿಃ ಪಾಲನಾಕಾರ ಏವ ಚ ।
ದಾತಾ ಚ ಹಂತಿ ಸರ್ವಂ ಯೋ ಯಸ್ಮಾದೇತತ್ಸಮಾಪ್ಯತೇ ॥ ೨೦ ॥

॥ ಅಗಸ್ತ್ಯ ಉವಾಚ ॥

ಬ್ರಹ್ಮಾಕೃತಿಃ ಕರ್ತೃರೂಪಾ ವೈಷ್ಣವೀ ಪಾಲನೀ ತಥಾ ।
ರುದ್ರಾಕೃತಿರ್ನಿಹಂತ್ರೀ ಸಾ ಸರ್ವವೇದೇಷು ಪಠ್ಯತೇ ॥ ೨೧ ॥

॥ ಬ್ರಹ್ಮೋವಾಚ ॥

ಆಪಸ್ತಂಬಸ್ತದಾ ಗಂಗಾಂ ಗತ್ವಾ ಸ್ನಾತ್ವಾ ಯತವ್ರತಃ ।
ತುಷ್ಟಾವ ಶಂಕರಂ ದೇವಂ ಸ್ತೋತ್ರೇಣಾನೇನ ನಾರದ ॥ ೨೨ ॥

॥ ಆಪಸ್ತಂಬ ಉವಾಚ ॥

ಕಾಷ್ಠೇಷು ವಹ್ನಿಃ ಕುಸುಮೇಷು ಗಂಧೋ
ಬೀಜೇಷು ವೃಕ್ಷಾದಿ ದೃಷತ್ಸು ಹೇಮ ।
ಭೂತೇಷು ಸರ್ವೇಷು ತಥಾಸ್ತಿ ಯೋ ವೈ
ತಂ ಸೋಮನಾಥಂ ಶರಣಂ ವ್ರಜಾಮಿ ॥ ೨೩ ॥

---

೨೦. ಆ ಪರಮಾತ್ಮನೇ ಸೃಷ್ಟಿಸುವನು, ಪಾಲಿಸುವನು, ಕರ್ಮಫಲಗಳನ್ನು ಕೊಡುವನು, ಜಗತ್ತೆಲ್ಲವನ್ನೂ ಕೊನೆಯಲ್ಲಿ ಸಂಹರಿಸುವನು ಎಂದು ತಿಳಿದನು.

೨೧. ಅಗಸ್ತ್ಯನು ಮತ್ತೆ ಹೇಳಿದನು—ಆ ಪರಶಿವನೇ ಬ್ರಹ್ಮನಾಗಿ ಸೃಷ್ಟಿಸುವನು, ವಿಷ್ಣುವಾಗಿ ಪಾಲಿಸುವನು, ರುದ್ರನಾಗಿ ಸಂಹರಿಸುವನು. ಇಂತಹ ಪರವಸ್ತುವನ್ನೇ ವೇದಗಳು ಸ್ತುತಿಸುವುವು.

೨೨. ಆಮೇಲೆ ಆಪಸ್ತಂಬನು ಗಂಗಾನದಿಗೆ ಹೋಗಿ ಶ್ರದ್ಧೆಯಿಂದ ಸ್ನಾನಮಾಡಿ ಈ ಸ್ತೋತ್ರದಿಂದ ಶಿವನನ್ನು ಸ್ತುತಿಸಿದನು.

೨೩. ಸೌದೆಯಲ್ಲಿ ಬೆಂಕಿಯಿರುವಂತೆಯೂ, ಹೂವುಗಳಲ್ಲಿ ಪರಿಮಳವಿರುವಂತೆಯೂ, ಬೀಜಗಳಲ್ಲಿ ಮರಮಟ್ಟು ಮೊದಲಾದುವುಗಳಿರುವಂತೆಯೂ, ಅದುರಿನಲ್ಲಿ ಚಿನ್ನವಿರುವಂತೆಯೂ ಸಕಲಪ್ರಾಣಿಗಳಲ್ಲಿಯೂ ಅಂತರಾತ್ಮನಾಗಿ ನೆಲಸಿರುವ ಪರಮಾತ್ಮನಾದ ಚಂದ್ರಶೇಖರನನ್ನು ಶರಣುಹೊಂದಿರುವೆನು.

ಯೋ ಲೀಲಯಾ ವಿಶ್ವಮಿದಂ ಚಕಾರ
ಧಾತಾ ವಿಧಾತಾ ಭುವನತ್ರಯಸ್ಯ ।
ಯೋ ವಿಶ್ವರೂಪಃ ಸದಸತ್ಪರೋ ಯಃ
ಸೋಮೇಶ್ವರಂ ತಂ ಶರಣಂ ವ್ರಜಾಮಿ ॥ ೨೪ ॥

ಯಂ ಸ್ಮೃತ್ಯ ದಾರಿದ್ರ್ಯಮಹಾಭಿಶಾಪ-
ರೋಗಾದಿಭಿರ್ನ ಸ್ಪೃಶ್ಯತೇ ಶರೀರೀ ।
ಯಸ್ಮಾಶ್ರಿತಾಶ್ಚೇಪ್ಸಿತಮಾಪ್ನುವಂತಿ
ಸೋಮೇಶ್ವರಂ ತಂ ಶರಣಂ ವ್ರಜಾಮಿ ॥ ೨೫ ॥

ಯೇನ ತ್ರಯೀಧರ್ಮಮವೇಕ್ಷ್ಯ ಪೂರ್ವಂ
ಬ್ರಹ್ಮಾದಯಸ್ತತ್ರ ಸಮಾಹಿತಾಶ್ಚ ।
ಏವಂ ದ್ವಿಧಾ ಯೇನ ಕೃತಂ ಶರೀರಂ
ಸೋಮೇಶ್ವರಂ ತಂ ಶರಣಂ ವ್ರಜಾಮಿ ॥ ೨೬ ॥

ಯಸ್ಮೈ ನಮೋ ಗಚ್ಛತಿ ಮಂತ್ರಪೂತಂ
ಹುತಂ ಹವಿರ್ಯಾ ಚ ಕೃತಾ ಚ ಪೂಜಾ ।

---

೨೪. ಮಾಯಾಲೀಲೆಯಿಂದ ಜಗತ್ತನ್ನು ಸೃಷ್ಟಿಸುವ ಮತ್ತು ಧರಿಸುವ ಜಗನ್ಮಯನಾದ, ಆದರೆ ಜಡಜಗತ್ತಿಗಿಂತಲೂ ಭಿನ್ನನಾದ ಸೋಮೇಶ್ವರನನ್ನು ಶರಣುಹೊಂದಿರುವೆನು.

೨೫. ಸೋಮೇಶ್ವರನನ್ನು ಭಕ್ತಿಯಿಂದ ಸ್ಮರಿಸಿದರೆ ಬಡತನ, ತಾಪತ್ರಯಗಳು, ರೋಗ ಮೊದಲಾದುವುಗಳು ಹತ್ತಿರದಲ್ಲಿಯೂ ಸುಳಿಯಲಾರವು. ಆ ದೇವನನ್ನಾಶ್ರಯಿಸಿದವರ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು. ಇಂತಹ ಸೋಮೇಶ್ವರನನ್ನು ಶರಣುಹೊಂದಿರುವೆನು.

೨೬. ವೈದಿಕಧರ್ಮವನ್ನು ಕಾಪಾಡಲು ಪರಶಿವನು ಬ್ರಹ್ಮ ಮೊದಲಾದ ಸಾಕಾರರೂಪಗಳನ್ನು ಧರಿಸುವನು. ಹೀಗೆ ಸಾಕಾರನಿರಾಕಾರಗಳೆಂಬ ಎರಡು ಸ್ವರೂಪಗಳುಳ್ಳ ಸೋಮೇಶ್ವರನನ್ನು ಶರಣುಹೊಂದಿರುವೆನು.

೨೭. ಜನಗಳ ನಮಸ್ಕಾರವೆಲ್ಲವೂ ಆ ಪರಶಿವನಿಗೇ ಸೇರುವುದು,

ದತ್ತಂ ಹವಿರ್ಯೇನ ಸುರಾ ಭಜಂತೇ
ಸೋಮೇಶ್ವರಂ ತಂ ಶರಣಂ ಪ್ರಜಾಮಿ ॥ ೨೭ ॥

ಯಸ್ಮಾತ್ಪರಂ ನಾನ್ಯದಸ್ತಿ ಪ್ರಶಸ್ತಂ
ಯಸ್ಮಾತ್ಪರಂ ನೈವ ಸುಸೂಕ್ಷ್ಮಮನ್ಯತ್ ।
ಯಸ್ಮಾತ್ಪರಂ ನೋ ಮಹತಾಂ ಮಹಚ್ಚ
ಸೋಮೇಶ್ವರಂ ತಂ ಶರಣಂ ವ್ರಜಾಮಿ ॥ ೨೮ ॥

ಯಸ್ಯಾಜ್ಞಯಾ ವಿಶ್ವಮಿದಂ ವಿಚಿತ್ರ-
ಮಚಿಂತ್ಯರೂಪಂ ವಿವಿಧಂ ಮಹಚ್ಚ ।
ಏಕಕ್ರಿಯಂ ಯದ್ವದನುಪ್ರಯಾತಿ
ಸೋಮೇಶ್ವರಂ ತಂ ಶರಣಂ ವ್ರಜಾಮಿ ॥ ೨೯ ॥

ಯಸ್ಮಿನ್ವಿಭೂತಿಃ ಸಕಲಾಧಿಪತ್ಯಂ
ಕರ್ತೃತ್ವದಾತೃತ್ವಮಹತ್ತ್ವಮೇವ ।

ಮಂತ್ರಪೂತವಾದ ಹವಿಸ್ಸು ಅವನಿಗೇ ಸೇರುವುದು, ಆ ದೇವನಿಂದ ಅನುಗ್ರಹಿಸಲ್ಪಟ್ಟ ಹವಿಸ್ಸನ್ನು ದೇವತೆಗಳು ಭುಜಿಸುವರು. ಇಂತಹ ಸೋಮನಾಥನನ್ನು ಶರಣುಹೊಂದಿರುವೆನು.

೨೮. ಆ ಶಿವನಿಗಿಂತಲೂ ಶ್ರೇಷ್ಠವಾದ ವಸ್ತುವಿಲ್ಲ, ಅವನಿಗಿಂತಲೂ ದೊಡ್ಡದಾದ ವಸ್ತುವೂ ಇಲ್ಲ, ಚಿಕ್ಕದಾದ ವಸ್ತುವೂ ಇಲ್ಲ. ಇಂತಹ ಸ್ವರೂಪವುಳ್ಳ ಸೋಮೇಶ್ವರನನ್ನು ಶರಣುಹೊಂದಿರುವೆನು.

೨೯. ಈ ಜಗತ್ತು ವಿಚಿತ್ರವಾಗಿದೆ, ಊಹೆಗೂ ನಿಲುಕದಂತಹುದಾಗಿದೆ ನಾನಾರೂಪನಾಗಿದೆ, ತುಂಬಾ ವಿಶಾಲವಾಗಿದೆ. ಇಂತಹ ವಿಶಾಲಪ್ರಪಂಚವೂ ಯಾವನ ಆಜ್ಞೆಯಿಂದ ಒಂದೇರೀತಿಯಾಗಿ ನಡೆಯುವುದೋ ಅಂತಹ ಸೋಮನಾಥನನ್ನು ಶರಣುಹೊಂದಿರುವೆನು.

೩೦. ಆ ಶಿವನಲ್ಲಿ ಸಕಲೈಶ್ವರ್ಯಗಳೂ ನೆಲಸಿರುವುವು. ಒಡೆತನ

ಪ್ರೀತಿರ್ಯಶಃ ಸೌಖ್ಯಮನಾದಿಧರ್ಮಃ
ಸೋಮೇಶ್ವರಂ ತಂ ಶರಣಂ ವ್ರಜಾಮಿ ॥ ೩೦ ॥

ನಿತ್ಯಂ ಶರಣ್ಯಃ ಸಕಲಸ್ಯ ಪೂಜ್ಯೋ
ನಿತ್ಯಂ ಪ್ರಿಯೋ ಯಃ ಶರಣಾಗತಸ್ಯ ।
ನಿತ್ಯಂ ಶಿವೋ ಯಃ ಸಕಲಸ್ಯ ರೂಪಂ
ಸೋಮೇಶ್ವರಂ ತಂ ಶರಣಂ ವ್ರಜಾಮಿ ॥ ೩೧ ॥

॥ ಬ್ರಹ್ಮೋವಾಚ

ತತಃ ಪ್ರಸನ್ನೋ ಭಗವಾನಾಹ ನಾರದ ತಂ ಮುನಿಂ ।
ಆತ್ಮಾರ್ಥಂ ಚ ಪರಾರ್ಥಂ ಚ ಆಪಸ್ತಂಬೋಽಬ್ರವೀಚ್ಛಿವಂ ॥ ೩೨ ॥

ಸರ್ವಾನ್ಕಾಮಾನಾಪ್ನುಯುಸ್ತೇ ಯೇ ಸ್ನಾತ್ವಾ ದೇವಮೀಶ್ವರಂ ।
ಪಶ್ಯೇಯುರ್ಜಗತಾಮೀಶಮಸ್ತ್ವಿತ್ಯಾಹ ಶಿವೋ ಮುನಿಂ ॥ ೩೩ ॥

ವೆಲ್ಲವೂ ಅವನಲ್ಲಿರುವುದು, ಕರ್ತೃತ್ವ ಮತ್ತು ದಾನಶೀಲತೆ, ಮಹತ್ತ್ವ ಇವೂ ಆ ದೇವನಲ್ಲಿಯೇ ಇರುವುವು ಸಂತೋಷ, ಯಶಸ್ಸು, ಸುಖ, ಧರ್ಮ ಇವೆಲ್ಲವೂ ಆವನಲ್ಲಿ ನೆಲಸಿರುವುವು. ಇಂತಹ ಸೋಮನಾಥನನ್ನು ಶರಣುಹೊಂದಿರುವೆನು.

೩೧. ಆರ್ತರನ್ನು ಸದಾ ರಕ್ಷಿಸುವವನು ಶಿವನು. ಸದಾ ಮಂಗಳರೂಪನವನು. ಇಂತಹ ಸೋಮನಾಥನನ್ನು ಶರಣುಹೊಂದಿರುವೆನು ಎಂದು ಸ್ತೋತ್ರ ಮಾಡಿದನು.

೩೨. ಆಗ ಭಗವಾನ್ ಶಂಕರನು ಪ್ರಸನ್ನನಾಗಿ ಆಪಸ್ತಂಬನಿಗೆ ಬೇಕಾದ ವರವನ್ನು ಕೇಳು ಎಂದನು. ಅದಕ್ಕಾ ಮುನಿಯು ತನ್ನ ಮತ್ತು ಇತರರ ಕ್ಷೇಮಕ್ಕಾಗಿ ಈ ವರವನ್ನು ಕೇಳಿದನು.

೩೩. ಈ ತೀರ್ಥದಲ್ಲಿ ಸ್ನಾನಮಾಡಿ ಪರಮೇಶ್ವರನಾದ ಶಿವನನ್ನು ದರ್ಶನಮಾಡಿದವರಿಗೆ ಇಷ್ಟಾರ್ಥಗಳೆಲ್ಲವೂ ಸಿದ್ಧಿಸಲಿ ಎಂದು ಕೇಳಿಕೊಂಡನು. ಶಿವನು ಅದರಂತೆ ಅನುಗ್ರಹಿಸಿದನು.

ತತಃ ಪ್ರಭೃತಿ ತತ್ತೀರ್ಥಮಾಪಸ್ತಂಬಮುದಾಹೃತಂ ।
ಅನಾದ್ಯವಿದ್ಯಾತಿಮಿರವ್ರಾತನಿರ್ಮೂಲನಕ್ಷಮಂ ॥ ૩೪ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ದಕ್ಷಿಣಕೂಲಸ್ಥಾಪಸ್ತಂಬಸೋಮೇಶ್ವರತೀರ್ಥವರ್ಣನಂ
ನಾಮ ತ್ರಿಂಶಧಿಕಶತತಮೋಽಧ್ಯಾಯಃ

---

೩೪. ಅದುಮೊದಲುಗೊಂಡು ಆ ತೀರ್ಥವು ಆಪಸ್ತಂಬತೀರ್ಥವೆಂದು ಪ್ರಸಿದ್ಧವಾಯಿತು. ಅದು ಅನಾದಿಯಾದ ಅಜ್ಞಾನವೆಂಬ ಕತ್ತಲೆಯನ್ನು ಸಂಪೂರ್ಣವಾಗಿ ಹೋಗಲಾಡಿಸುವುದು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಆಪಸ್ತಂಬಸೋಮೇಶ್ವರತೀರ್ಥ ವರ್ಣನವೆಂಬ
ನೂರಮೂವತ್ತನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಅರವತ್ತೊಂದನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಏಕತ್ರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಯಮುತೀರ್ಥಮಿತಿ ಖ್ಯಾತಂ ಪಿತೄಣಾಂ ಪ್ರೀತಿವರ್ಧನಂ ।
ಅಶೇಷಪಾಪಶಮನಂ ತತ್ರ ವೃತ್ತಮಿದಂ ಶೃಣು ॥ ೧ ॥

ತತ್ರಾಖ್ಯಾನಮಿದಂ ತ್ವಾಸೀದಿತಿಹಾಸಂ ಪುರಾತನಂ ।
ಸರಮೇತಿ ಪ್ರಸಿದ್ಧಾಸ್ತಿ ನಾಮ್ನಾ ದೇವಶುನೀ ಮುನೇ ॥ ೨ ॥

ತಸ್ಯಾಃ ಪುತ್ರೌ ಮಹಾಶ್ರೇಷ್ಠೌ ಶ್ವಾನೌ ನಿತ್ಯಂ ಜನಾನನು ।
ಗಾಮಿನೌ ಪವನಾಹಾರೌ ಚತುರಕ್ಷೌ ಯಮಪ್ರಿಯೌ ॥ ೩ ॥

ನೂರಮೂವತ್ತೊಂದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಯಮತೀರ್ಥವೆಂಬ ಸಕಲ ಪಾಪಗಳನ್ನು ಹೋಗಲಾಡಿಸುವ ತೀರ್ಥವಿರುವುದು. ಪಿತೃದೇವತೆಗಳಿಗೆ ಆ ತೀರ್ಥವು ತುಂಬಾ ಪ್ರಿಯವಾದುದು. ಆ ತೀರ್ಥದ ಮಾಹಾತ್ಮ್ಯವನ್ನು ಹೇಳುವೆನು ಕೇಳು.

೨. ಆ ತೀರ್ಥದಲ್ಲಿ ನಡೆದ ಹಿಂದಿನ ಇತಿಹಾಸವು ಇದು. ದೇವಲೋಕದಲ್ಲಿ ಒಂದು ಹೆಣ್ಣುನಾಯಿಯು ಇತ್ತು. ಅದರ ಹೆಸರು ಸರಮಾ ಎಂದು.

೩. ಆ ಸರಮೆಗೆ ಈರ್ವರು ಮಕ್ಕಳು. ಅವಕ್ಕೆ ನಿತ್ಯವೂ ಗಾಳಿಯೇ

ಗಾ ರಕ್ಷತಿ ಸ್ಮ ದೇವಾನಾಂ ಯಜ್ಞಾರ್ಥಂ ಕಲ್ಪಿತಾನ್ಪಶೂನ್ ।
ರಕ್ಷಂತೀಮನುಜಗ್ಮುಸ್ತೇ ರಾಕ್ಷಸಾ ದೈತ್ಯದಾನವಾಃ ॥ ೪ ॥

ರಕ್ಷಂತೀಂ ತಾಂ ಮಹಾಪ್ರಾಜ್ಞಾಃ ಶ್ವಾನಯೋರ್ಮಾತರಂ ಶುನೀಂ ।
ಪ್ರಲೋಭಯಿತ್ವಾ ವಿವಿಧೈರ್ವಾಕ್ಯೈರ್ದಾನೈಶ್ಚ ಯತ್ನತಃ ॥ ೫ ॥

ಹೃತಾ ಗಾ ರಾಕ್ಷಸೈಃ ಪಾಪೈಃ ಪಶ್ವರ್ಥೇ ಕಲ್ಪಿತಾಃ ಶುಭಾಃ ।
ತತ ಆಗತ್ಯ ಸಾ ದೇವಾನಿದಮಾಹ ಕ್ರಮಾಚ್ಛುನೀ ॥ ೬ ॥

॥ ಸರಮೋವಾಚ ॥

ಮಾಂ ಬದ್ಧ್ವಾ ರಾಕ್ಷಸೈಃ ಪಾಶೈಸ್ತಾಡಯಿತ್ವಾ ಪ್ರಹಾರಕೈಃ ।
ನೀತಾ ಗಾ ಯಜ್ಞಸಿದ್ಧ್ಯರ್ಥಂ ಕಲ್ಪಿತಾಃ ಪಶವಃ ಸುರಾಃ ॥ ೭ ॥

ಆಹಾರ. ಸೂಕ್ಷ್ಮವಾದ ದೃಷ್ಟಿಯುಳ್ಳವುಗಳವು. ಯಮನಿಗೆ ಪ್ರಿಯಸೇವಕರಾಗಿದ್ದು ಆ ಶ್ವಾನಗಳು ನಿತ್ಯವೂ ಮೃತಜೀವರನ್ನು ಯಮಲೋಕಕ್ಕೆ ಒಯ್ಯುತ್ತಿದ್ದುವು.

೪. ಸರಮೆಯು ಯಜ್ಞಕ್ಕಾಗಿ ನಿಯಮಿಸಲ್ಪಟ್ಟ ದೇವಧೇನುಗಳನ್ನು ರಕ್ಷಿಸುತ್ತಲಿದ್ದಿತು. ಹೀಗೆ ರಕ್ಷಿಸುತ್ತಲಿದ್ದ ಸರಮೆಯನ್ನು ಒಂದುದಿನ ದೈತ್ಯದಾನವರೂ ರಾಕ್ಷಸರೂ ಅನುಸರಿಸಿದರು.

೫. ದೇವಧೇನುಗಳನ್ನು ರಕ್ಷಿಸುತ್ತಿದ್ದ ಆ ಶುನಕಿಯನ್ನು ಮೋಸಗಾರರಾದ ರಾಕ್ಷಸರು ರುಚಿಯಾದ ಆಹಾರದಿಂದಲೂ ಮಾತುಗಳಿಂದಲೂ ಆಸೆಹಚ್ಚಿ ಒಡಂಬಡಿಸಿ ಆ ಯಜ್ಞಪಶುಗಳೆಲ್ಲವನ್ನೂ ಅಪಹರಿಸಿದರು.

೬–೭. ಆಮೇಲೆ ಆ ಶುನಕಿಯು ದೇವತೆಗಳ ಬಳಿಗೆ ಬಂದು, ಓ ದೇವತೆಗಳೇ, ರಾಕ್ಷಸರು ನನ್ನನ್ನು ಬಂಧಿಸಿ ಹೊಡೆದು ನಿಮ್ಮ ಯಜ್ಞಪಶುಗಳಾದ ಹಸುಗಳನ್ನು ಅಪಹರಿಸಿದರು ಎಂದಿತು.

॥ ಬ್ರಹ್ಮೋವಾಚ ॥

ತಸ್ಯಾ ವಾಚಂ ನಿಶಮ್ಯಾಶು ಸುರಾನ್ಪ್ರಾಹ ಬೃಹಸ್ಪತಿಃ ॥ ೮ ॥

॥ ಬೃಹಸ್ಪತಿರುವಾಚ ॥

ಇಯಂ ವಿಕೃತರೂಪಾಸ್ತೇ ಅಸ್ಯಾಃ ಪಾಪಂ ಚ ಲಕ್ಷಯೇ ।
ಅಸ್ಯಾ ಮತೇನ ತಾ ಗಾವೋ ನೀತಾ ನಾನ್ಯೇನ ಹೇತುನಾ ।
ಪಾಪೇಯಂ ಸುಕೃತೀವೇತಿ ಲಕ್ಷ್ಯತೇ ದೇಹಚೇಷ್ಟಿತೈಃ ॥ ೯ ॥

॥ ಬ್ರಹ್ಮೋವಾಚ ॥

ತದ್ಗುರೋರ್ವಚನಾಚ್ಛಕ್ರಃ ಪದಾ ತಾಂ ಪ್ರಾಹರಚ್ಛುನೀಂ ।
ಪದಾಘಾತಾತ್ತದಾ ತಸ್ಯಾ ಮುಖಾತ್ಕ್ಷೀರಂ ಪ್ರಸುಸ್ರುವೇ ॥ ೧೦ ॥

ಪುನಃ ಪ್ರಾಹ ಶಚೀಭರ್ತಾ ಕ್ಷೀರಂ ಪೀತಂ ತ್ವಯಾ ಶುನಿ ।
ರಾಕ್ಷಸೈಶ್ಚ ತದಾ ದತ್ತಂ ತಸ್ಮಾನ್ನೀತಾಸ್ತ್ವ ಗಾ ಮಮ ॥ ೧೧ ॥

೮-೯. ಸರಮೆಯ ಆ ಮಾತನ್ನು ಕೇಳಿ ಬೃಹಸ್ಪತಿಯು ಆಕೂಡಲೇ ದೇವತೆಗಳನ್ನು ಕುರಿತು ಎಲೈ ದೇವತೆಗಳೇ, ಈ ಸರಮೆಯ ಮುಖಚರ್ಯೆಯನ್ನು ನೋಡಿದರೆ ಇದೂ ಪಾಪಾಚರಣೆಯನ್ನು ಮಾಡಿದಂತೆ ತೋರುವುದು. ಇದರ ಒಪ್ಪಿಗೆಯಿಂದಲೇ ದೈತ್ಯರು ಹಸುಗಳನ್ನಪಹರಿಸಿರುವರು. ನರರ ಮುಖಭಾವದಿಂದಲೇ ಅವರವರ ಸುಕೃತದುಷ್ಕೃತಗಳನ್ನು ತಿಳಿಯಬಹುದು ಎಂದನು.

೧೦. ಬೃಹಸ್ಪತಿಯ ಮಾತನ್ನು ಕೇಳಿ ಇಂದ್ರನು ಕೋಪದಿಂದ ಸರಮೆಯನ್ನು ಕಾಲಿನಿಂದ ಒದ್ದನು. ಆ ಏಟಿನಿಂದ ನಾಯಿಯ ಮುಖದಿಂದ ಹಾಲು ಸುರಿಯಿತು.

೧೧. ಆಗ ಇಂದ್ರನು—ಎಲೈ ಶುನಿ, ನೀನು ಹಾಲನ್ನು ಕುಡಿದಿರುವೆ. ರಾಕ್ಷಸರು ಆಗ ಹಾಲನ್ನು ನಿನಗೆ ಕೊಟ್ಟಿರುವರು. ಆದುದರಿಂದ ನಿನ್ನ ಒಪ್ಪಿಗೆಯಿಂದಲೇ ಹಸುಗಳನ್ನಪಹರಿಸಿರುವರು, ಎಂದು ಹೇಳಿದನು.

॥ ಸರಮೋವಾಚ ॥

ನಾಪರಾಧೋಽಸ್ತಿ ಮೇ ನಾಥ ನ ಚಾನ್ಯಸ್ಯಾಪಿ ಕಸ್ಯಚಿತ್ ।
ನಾಪರಾಧೋ ನ ಚೋಪೇಕ್ಷಾ ಮಮಾಸ್ತಿ ತ್ರಿದಶೇಶ್ವರ ।
ತಸ್ಮಾದ್ರುಷ್ಟೋಽಸಿ ಕಿಂ ನಾಥ ರಿಪವೋ ಬಲಿನಸ್ತು ತೇ ॥ ೧೨ ॥

॥ ಬ್ರಹ್ಮೋವಾಚ ॥

ತತೋ ಧ್ಯಾತ್ವಾ ದೇವಗುರುರ್ಜ್ಞಾತ್ವಾ ತಸ್ಯಾ ವಿಚೇಷ್ಟಿತಂ ।
ಸತ್ಯಂ ಶಕ್ರ ತ್ವಿಯಂ ದುಷ್ಟಾ ರಿಪೂಣಾಂ ಪಕ್ಷಕಾರಿಣೀ ॥ ೧೩ ॥

ತತಃ ಶಶಾಪ ತಾಂ ಶಕ್ರಃ ಪಾಪಿಷ್ಠೇ ತ್ವಂ ಶುನೀ ಭವ ।
ಮರ್ತ್ಯಲೋಕೇ ಪಾಪಭೂತಾ ಅಜ್ಞಾನಾತ್ಪಾಪಕಾರಿಣೀ ॥ ೧೪ ॥

ತದೇಂದ್ರಸ್ಯ ತು ಶಾಪೇನ ಮಾನುಷೇ ಸಾ ವ್ಯಜಾಯತ ।
ಯಥಾ ಶಪ್ತಾ ಮಘವತಾ ಪಾಪಾತ್ಸಾ ಹ್ಯತಿಭೀಷಣಾ ॥ ೧೫ ॥

---

೧೨. ಅದಕ್ಕೆ ಸರಮಾಶುನಿಯು ಓ ಸ್ವಾಮಿ, ಇದರಲ್ಲಿ ನನ್ನ ತಪ್ಪಿಲ್ಲ. ಔದಾಸೀನ್ಯವನ್ನೂ ನಾನು ಮಾಡಿಲ್ಲ. ನಿನ್ನ ಶತ್ರುಗಳಾದ ಆ ರಾಕ್ಷಸರು ಬಲಿಷ್ಠರು, ಬಲಾತ್ಕಾರದಿಂದ ಹಸುಗಳನ್ನು ಅಪಹರಿಸುವರು. ಕಾರಣವಿಲ್ಲದೇ ನನ್ನಲ್ಲಿ ನೀನು ಏಕೆ ಕೋಪಗೊಳ್ಳುವೆ ? ಎಂದಿತು.

೧೩. ಆಗ ಬೃಹಸ್ಪತಿಯು ಜ್ಞಾನದೃಷ್ಟಿಯಿಂದ ನೋಡಿ, ಎಲೈ ಇಂದ್ರ ನಿಜವಾಗಿಯೂ ಈ ಸರಮೆಯು ಪಾಪವನ್ನಾಚರಿಸಿದೆ, ಇದೂ ಶತ್ರುಗಳ ಪಕ್ಷಕ್ಕೆ ಸೇರಿ ಹಸುಗಳನ್ನು ಬಿಟ್ಟುಕೊಟ್ಟಿದೆ ಎಂದನು.

೧೪. ಆಗ ಇಂದ್ರನು ಕೋಪಗೊಂಡು ಪಾಪಿಷ್ಠೆಯಾದ ಎಲೌ ಸರಮೆ, ನೀನು ಭೂಲೋಕದಲ್ಲಿ ಶುನಿ (ಹೆಣ್ಣುನಾಯಿ) ಯಾಗಿ ಜನಿಸು, ಇದು ನಿನ್ನ ಪಾಪಕ್ಕೆ ತಕ್ಕ ಫಲವು ಎಂದು ಶಪಿಸಿದನು.

೧೫. ಆಮೇಲೆ ಇಂದ್ರನ ಶಾಪದಂತೆ ಆ ಸರಮೆಯು ಭೂಲೋಕದಲ್ಲಿ ಭಯಂಕರವಾದ ಶುನಿಯಾಗಿ ಜನಿಸಿತು.

ಗಾವೋ ಯಾ ರಾಕ್ಷಸೈರ್ನೀತಾಸ್ತಾಸಾಮಾನಯನಾಯ ಚ ।
ಯತ್ನಂ ಕುರ್ವನ್ಸುರಪತಿರ್ವಿಷ್ಣವೇ ತನ್ನ್ಯವೇದಯತ್ ॥ ೧೬ ॥

ವಿಷ್ಣುರ್ದೈತ್ಯಾಂಶ್ಚ ದನುಜಾನ್ಗೋಹರ್ತ್ರ್ಯಾಂಶ್ಚೈವ ರಾಕ್ಷಸಾನ್ ।
ಹಂತುಂ ಪ್ರಯತ್ನಮಕರೋಜ್ಜಗೃಹೇ ಚ ಮಹದ್ಧನುಃ ॥ ೧೭ ॥

ಶಾರ್ಙ್ಗಂ ಯಲ್ಲೋಕವಿಖ್ಯಾತಂ ದೈತ್ಯನಾಶನಮೇವ ಚ ।
ಜಿತಾರಿಃ ಪೂಜಿತೋ ದೇವೈಃ ಸ್ವಯಂ ಸ್ಥಿತ್ವಾ ಜನಾರ್ದನಃ ॥ ೧೮ ॥

ಯತ್ರ ವೈ ದಂಡಕಾರಣ್ಯೇ ಶಾರ್ಙ್ಗಪಾಣಿರ್ಜಗತ್ಪ್ರಭುಃ ।
ತತ್ರಸ್ಥಾನ್ದೈತ್ಯದನುಜಾನ್ರಾಕ್ಷಸಾಂಶ್ಚ ಬಲೀಯಸಃ ॥ ೧೯ ॥

ಪುನರ್ಜಘ್ನೇ ಸ ವೈ ವಿಷ್ಣುರ್ಗಾ ಯೈರ್ನೀತಾಶ್ಚ ರಾಕ್ಷಸೈಃ ।
ತತ್ರ ವೈ ದಂಡಕಾರಣ್ಯೇ ಶಾರ್ಙ್ಗಪಾಣಿರಿತಿ ಶ್ರುತಃ ॥ ೨೦ ॥

ಯುಧ್ಯಮಾನಸ್ತತೋ ವಿಷ್ಣುರ್ದಿತಿಜೈ ರಾಕ್ಷಸೈಃ ಸಹ ।
ತೇ ಜಗ್ಮುರ್ದಕ್ಷಿಣಾಮಾಶಾಂ ವಿಷ್ಣೋಸ್ತ್ರಾಸಾನ್ಮಹಾಮುನೇ ॥ ೨೧ ॥

---

೧೬. ನಂತರ ಇಂದ್ರನು, ರಾಕ್ಷಸರು ಅಪಹರಿಸಿದ ದೇವಧೇನುಗಳನ್ನು ಪುನಃ ಪಡೆಯಲು ಪ್ರಯತ್ನಿಸುತ್ತಾ ಆ ಸಮಾಚಾರವನ್ನು ವಿಷ್ಣುವಿಗೆ ನಿವೇದಿಸಿದನು.

೧೭. ಆಗ ವಿಷ್ಣುವು ಹಸುಗಳನ್ನಪಹರಿಸಿದ ದೈತ್ಯದಾನವರು ಮತ್ತು ರಾಕ್ಷಸರು ಇವರನ್ನು ಸಂಹರಿಸಲು ಉದ್ಯುಕ್ತನಾದನು. ಜಗತ್ಪ್ರಸಿದ್ಧವೂ ದೈತ್ಯನಾಶಕವೂ ಆದ ಶಾರ್ಙ್ಗವೆಂಬ ಧನಸ್ಸನ್ನು ಆ ಹರಿಯು ಧರಿಸಿದನು.

೧೮-೧೯. ದೇವತೆಗಳಿಂದ ಪೂಜಿಸಲ್ಪಟ್ಟು ಆ ಜನಾರ್ದನನು ದಂಡಕಾರಣ್ಯದಲ್ಲಿ ನೆಲಸಿ ಅಲ್ಲಿದ್ದ ಪಶುಚೋರರಾದ ದೈತ್ಯದಾನವ ರಾಕ್ಷಸರನ್ನು ಯುದ್ಧದಲ್ಲಿ ಸೋಲಿಸಿದನು.

೨೦-೨೧. ಹೀಗೆ ದಂಡಕಾರಣ್ಯದಲ್ಲಿ ,ಶಾರ್ಙ್ಗಧನುಸ್ಸನ್ನು ಧರಿಸಿ ನೆಲಸಿದ್ದ ಆ ಹರಿಯು ದೈತ್ಯದಾನವರಾಕ್ಷಸರೆಲ್ಲರನ್ನೂ ಸೋಲಿಸಿ ಓಡಿಸಿದನು. ಆ ದೇವಶತ್ರುಗಳು ವಿಷ್ಣುವಿನ ಭಯದಿಂದ ದಕ್ಷಿಣಕ್ಕೆ ಓಡಿಹೋದರು.

ಅನ್ವಗಚ್ಛತ್ತತೋ ವಿಷ್ಣುಸ್ತಾನೇವ ಪರಮೇಶ್ವರಃ ।
ಗರುತ್ಮತಾ ತಾನವಾಪ್ಯ ಶಾರ್ಙ್ಗಮುಕ್ತೈರ್ಮನೋಜವೈಃ ॥ ೨೨ ॥

ಬಾಣೈಸ್ತಾನ್ಹ್ಯಹನದ್ವಿಷ್ಣುರ್ಗಂಗಾಯಾ ಉತ್ತರೇ ತಟೇ ।
ದೇವಾರಯಃ ಕ್ಷಯಂ ನೀತಾ ವಿಷ್ಣುನಾ ಪ್ರಭವಿಷ್ಣುನಾ ॥ ೨೩ ॥

ಶಾರ್ಙ್ಗಮುಕ್ತೈರ್ಮಹಾವೇಗೈಃ ಸುಸ್ವನೈಶ್ಚ ಸುಮಂತ್ರಿತೈಃ ।
ಕ್ಷಯಂ ಪ್ರಾಪ್ತಾ ವಿಷ್ಣುಬಾಣೈಸ್ತತಸ್ತೇ ದೇವಶತ್ರವಃ ॥ ೨೪ ॥

ಗಾವೋ ಲಬ್ಧಾ ಯತ್ರ ದೇವೈರ್ಬಾಣತೀರ್ಥಂ ತದುಚ್ಯತೇ ।
ವೈಷ್ಣವಂ ಲೋಕವಿದಿತಂ ಗೋತೀರ್ಥಂ ಚೇತಿ ವಿಶ್ರುತಂ ॥ ೨೫ ॥

ಪಶ್ವರ್ಥೇ ಕಲ್ಪಿತಾ ಗಾವೋ ಗಂಗಾಯಾ ದಕ್ಷಿಣೇ ತಟೇ ।
ಪ್ರದ್ರುತಾಸ್ತೇ ಸುರಾಃ ಸರ್ವೇ ಗಂಗಾಯಾಂ ಸಂನ್ಯವೇಶಯನ್ ॥ ೨೬ ॥

೨೨-೨೩. ವಿಷ್ಣುವೂ ಸಹ ಗರುಡನನ್ನೇರಿ ಆ ದೇವಶತ್ರುಗಳನ್ನು ಅಟ್ಟಿಸಿಕೊಂಡು ಹೋಗಿ ಶಾರ್ಙ್ಗಧನುಸ್ಸಿನಿಂದ ಬಾಣಗಳನ್ನು ಪ್ರಯೋಗಿಸಿ ರಾಕ್ಷಸರನ್ನು ಸಂಹರಿಸಿದನು. ಮಹಾಪರಾಕ್ರಮಿಯಾದ ವಿಷ್ಣುವಿನಿಂದ ದೇವಶತ್ರುಗಳೆಲ್ಲರೂ ಗಂಗೆಯ ಉತ್ತರತೀರದಲ್ಲಿ ನಾಶವಾದರು.

೨೪. ಶಾರ್ಙ್ಗಧನುಸ್ಸಿನಿಂದ ಮಂತ್ರಶಕ್ತಿಪೂರ್ವಕವಾಗಿ ಹೊರಟ ಗಂಭೀರಧ್ವನಿಮಾಡುವ ಹರಿಯ ಬಾಣಗಳಿಂದ ದೇವಶತ್ರುಗಳೆಲ್ಲರೂ ನಾಶವಾದರು.

೨೫. ದೇವತೆಗಳು ಪುನಃ ಹಸುಗಳನ್ನು ಪಡೆದರು. ಆ ಸ್ಥಳವು ಬಾಣತೀರ್ಥವೆಂದೂ ವಿಷ್ಣುತೀರ್ಥವೆಂದೂ ಗೋತೀರ್ಥವೆಂದೂ ಪ್ರಸಿದ್ಧವಾಯಿತು.

೨೬. ರಾಕ್ಷಸರು ಅಪಹರಿಸಿದ ಯಜ್ಞಪಶುಗಳಾದ ಹಸುಗಳೆಲ್ಲವನ್ನೂ ದೇವತೆಗಳು ಗೌತಮಿಯ ದಕ್ಷಿಣತೀರದಲ್ಲಿ ಒಟ್ಟು ಸೇರಿದರು-

ತನ್ಮಧ್ಯೇ ಕಾರಯಾಮಾಸುರ್ದ್ವೀಪಂ ಚೈವಾಶ್ರಯಂ ಗವಾಂ ।
ತೈರ್ಗೋಭಿಸ್ತತ್ರ ಗಂಗಾಯಾಂ ಸುರಯಜ್ಞೋ ವ್ಯಜಾಯತ ॥ ೨೭ ॥

ಯಜ್ಞತೀರ್ಥಂ ತು ತತ್ಪ್ರೋಕ್ತಂ ಗೋಡೀಸಂ ಗಾಂಗಮಧ್ಯತಃ ।
ದೇವಾನಾಂ ಯಜನಂ ತಚ್ಚ ಸರ್ವಕಾಮಪ್ರದಂ ಶುಭಂ ॥ ೨೮ ॥

ಸ್ವಯಂ ಮೂರ್ತಿಮತೀ ಭೂತ್ವಾ ಗಂಗಾಶಕ್ತಿರ್ಮಹಾದ್ಯುತೇ ।
ಅಸಾರಾಪಾರಸಂಸಾರಸಾಗರೋತ್ತರಣೇ ತರಿಃ ॥ ೨೯ ॥

ವಿಶ್ವೇಶ್ವರೀ ಯೋಗಮಾಯಾ ಸದ್ಭಕ್ತಾಭಯದಾಯಿನೀ ।
ಗೋರಕ್ಷಂ ತು ತತಸ್ತೀರ್ಥಂ ಗಂಗಾಯಾ ದಕ್ಷಿಣೇ ತಟೇ ॥ ೩೦ ॥

ತೌ ಶ್ವಾನೌ ಸರಮಾಪುತ್ರೌ ಚತುರಕ್ಷೌ ಯಮಪ್ರಿಯೌ ।
ಮಾತುಃ ಶಾಪಂ ಚಾಪರಾಧಂ ಸರ್ವಂ ಚಾಪಿ ಸವಿಸ್ತರಂ ॥ ೩೧ ॥

---

೨೭. ಗೌತಮಿಯ ಮಧ್ಯದಲ್ಲಿ ದೇವತೆಗಳು ಒಂದು ದ್ವೀಪವನ್ನು ಕಲ್ಪಿಸಿದರು, ಆ ದ್ವೀಪದಲ್ಲಿ ಗೋಶಾಲೆಯೊಂದನ್ನು ನಿರ್ಮಿಸಿದರು, ಮುಂದೆ ಆ ಹಸುಗಳ ಸಹಾಯದಿಂದ ಯಜ್ಞವನ್ನು ಪ್ರಾರಂಭಿಸಿದರು.

೨೮. ಗೌತಮಿ ಮಧ್ಯದಲ್ಲಿ ಗೋದ್ವೀಪವಿರುವುದು. ಆ ದ್ವೀಪದಲ್ಲಿ ಯಾಗ ನಡೆದ ಸ್ಥಳವು ಯಜ್ಞತೀರ್ಥವು. ಆ ತೀರ್ಥವು ಇಷ್ಟಾರ್ಥಗಳೆಲ್ಲವನ್ನೂ ಉಂಟುಮಾಡುವುದು.

೨೯-೩೦. ಗೋರಕ್ಷವೆಂಬ ತೀರ್ಥವು ಗಂಗೆಯ ದಕ್ಷಿಣತೀರದಲ್ಲಿರುವುದು. ಆ ತೀರ್ಥದಲ್ಲಿ ಶಿವಸ್ವರೂಪಳೂ ಆದಿಮಾತೆಯೂ ಭಕ್ತರಿಗೆ ಅಭಯವನ್ನು ಕೊಡುವವಳೂ ಆದ ಗಂಗಾದೇವಿಯು ಮೂರ್ತಿರೂಪದಿಂದ ನೆಲಸಿರುವಳು. ಅವಳು ತುದಿಮೊಲಿಲ್ಲದ ಸಂಸಾರಸಾಗರವನ್ನು ದಾಟಲು ಜನರಿಗೆ ನೌಕೆಯಂತಿರುವಳು.

೩೧-೩೨. ಸರಮೆಯ ಮಕ್ಕಳಾದ ಯಮನ ಕಿಂಕರರಾದ ಆ ಎರಡು

ನಿವೇದ್ಯ ತು ಯಥಾನ್ಯಾಯಂ ಕಾರ್ಯಂ ಚಾಪಿ ಸುಖಪ್ರದಂ ।
ವಿಶಾಪಕರಣಂ ಚಾಪಿ ಪಪ್ರಚ್ಛತುರುಭೌ ಯಮಮ್ ॥ ೩೨ ॥

ಸ ತಾಭ್ಯಾಂ ಸಹಿತಃ ಸೌರಿಃ ಪಿತ್ರೇ ಸೂರ್ಯಾಯ ಚಾಬ್ರವೀತ್ ।
ಶ್ರುತ್ವಾ ಸೂರ್ಯಃ ಸುತಂ ಪ್ರಾಹ ಗಂಗಾಯಾಂ ಸುರಸತ್ತಮ ॥ ೩೩ ॥

ಲೋಕತ್ರಯೈಕಪಾವನ್ಯಾಂ ಗೌತಮ್ಯಾಂ ದಂಡಕೇ ವನೇ ।
ಶ್ರದ್ಧಯಾ ಪರಯಾ ವತ್ಸ ಸುಸ್ನಾತಃ ಸುಸಮಾಹಿತಃ ॥ ೩೪ ॥

ಬ್ರಹ್ಮಾಣಂ ಚೈವ ವಿಷ್ಣುಂ ಚ ಮಾಮೀಶಂ ಚ ಯಥಾಕ್ರಮಮ್ ।
ಸ್ತುಹಿ ತ್ವಂ ಸರ್ವಭಾವೇನ ಭೃತ್ಯೌ ಪ್ರೀತಿಮವಾಪ್ಸ್ಯತಃ ॥ ೩೫ ॥

ತತ್ಪಿತುರ್ವಚನಂ ಶ್ರುತ್ವಾ ಯಮಃ ಪ್ರೀತಮನಾಸ್ತದಾ ।
ತಯೋಶ್ಚ ಪ್ರೀತಯೇ ಪ್ರಾಯಾದ್ದೇವತರ್ಪಣಯೋರ್ಯಮಃ ॥ ೩೬ ॥

ಶ್ವಾನಗಳು ತಮ್ಮ ತಾಯಿಯ ಅಪರಾಧವನ್ನೂ ಇಂದ್ರಶಾಪವನ್ನೂ ಕೇಳಿ ಯಮನಿಗೆ ಆ ವಿಷಯವೆಲ್ಲವನ್ನೂ ತಿಳಿಸಿ ತಮ್ಮ ತಾಯಿಯು ಶಾಪಮುಕ್ತಳಾಗಬೇಕಾದರೆ ನಾವು ಮಾಡಬೇಕಾದುದೇನು ? ಎಂದು ಕೇಳಿದವು.

೩೩-೩೫. ಆಗ ಯಮನು ಶ್ವಾನ (ನಾಯಿ) ಗಳೊಡನೆ ತಂದೆಯಾದ ಸೂರ್ಯನ ಬಳಿಗೆ ಹೋಗಿ ಸಮಾಚಾರವನ್ನರುಹಿದನು, ಅದಕ್ಕೆ ಸೂರ್ಯನು ಎಲೈ ವತ್ಸ ಜಗತ್ಪವಿತ್ರವಾದ ಗಂಗಾನದಿಗೆ ಹೋಗಿ ಆ ನದಿಯಲ್ಲಿ ಸ್ನಾನಮಾಡಿ ಶುದ್ಧನಾಗಿ ಭಕ್ತಿಯಿಂದ ಬ್ರಹ್ಮ, ವಿಷ್ಣು, ನಾನು (ಸೂರ್ಯ) ಶಿವ ಇವರನ್ನು ಕ್ರಮವಾಗಿ ಸ್ತುತಿಸು. ಅದರಿಂದ ನಿನ್ನ ಸೇವಕರಾದ ಶ್ವಾನಗಳ ಇಷ್ಟಾರ್ಥವು ಸಿದ್ಧಿಸುವುದು ಎಂದನು.

೩೬. ತಂದೆಯ ಮಾತನ್ನು ಕೇಳಿ ಸಂತಸಗೊಂಡು ಆ ಯಮನು ತನ್ನ ಸೇವಕರ ಹಿತಸಾಧನೆಗಾಗಿ ಗಂಗಾತೀರಕ್ಕೆ ತೆರಳಿದನು.

ಗೌತಮ್ಯಾಮಘಹಾರಿಣ್ಯಾಂ ಸುಸಮಾಹಿತಮಾನಸಃ ।
ತಥೈವ ತೋಷಯಾಮಾಸ ಗಂಗಾಯಾಂ ಸುರಸತ್ತಮಾನ್ ॥ ೩೭ ॥

ಶ್ವಭ್ಯಾಂ ಚ ಸಹಿತಃ ಶ್ರೀಮಾನ್ದಕ್ಷಿಣಾಶಾಪತಿಃ ಪ್ರಭುಃ ।
ಬ್ರಹ್ಮಾಣಂ ತೋಷಯಾಮಾಸ ಭಾನುಂ ವೈ ದಕ್ಷಿಣೇ ತಟೇ ॥ ೩೮ ॥

ಈಶಾನಮುತ್ತರೇ ವಿಷ್ಣುಂ ಸ್ವಯಂ ಧರ್ಮಃ ಪ್ರತಾಪವಾನ್ ।
ದತ್ತವಂತೋ ವರಂ ಶ್ರೇಷ್ಠಂ ಸರಮಾಯಾ ವಿಶಾಪಕಂ ।
ವರಾನಯಾಚತ ಬಹೂಲ್ಲೋಕಾನಾಮುಪಕಾರಕಾನ್ ॥ ೩೯ ॥

॥ ಯಮ ಉವಾಚ ॥

ಏಷು ಸ್ನಾನಂ ತು ಯೇ ಕುರ್ಯುರ್ಬ್ರಹ್ಮವಿಷ್ಣುಮಹೇಶ್ವರಾಃ ।
ಆತ್ಮಾರ್ಥಂ ಚ ಪರಾರ್ಥಂ ಚ ತೇ ಕಾಮಾನಾಪ್ನುಯುಃ ಶುಭಾನ್ ॥ ೪೦ ॥

ಬಾಣತೀರ್ಥೇ ತು ಯೇ ಸ್ನಾತ್ವಾ ಶಾರ್ಙ್ಗಪಾಣಿಂ ಸ್ಮರಂತಿ ವೈ ।
ತೇಭ್ಯೋ ದಾರಿದ್ರ್ಯದುಃಖಾನಿ ನ ಭವೇಯುರ್ಯುಗೇ ಯುಗೇ ॥ ೪೧ ॥

---

೩೭. ಪಾಪನಾಶಕವಾದ ಗೌತಮೀನದಿಯಲ್ಲಿ ಶ್ರದ್ಧೆಯಿಂದ ಸ್ನಾನ ಮಾಡಿ ಯಮನು ಬ್ರಹ್ಮವಿಷ್ಣುಸೂರ್ಯಮಹೇಶ್ವರರನ್ನು ಭಕ್ತಿಯಿಂದ ಸ್ತುತಿಸಿದನು.

೩೮. ಶ್ವಾನಗಳೊಡನೆ ಆ ಯಮನು ಬ್ರಹ್ಮನನ್ನೂ ಸೂರ್ಯನನ್ನೂ ಗಂಗೆಯ ದಕ್ಷಿಣತೀರದಲ್ಲಿ ಸ್ತುತಿಸಿದನು.

೩೯. ಶಿವವಿಷ್ಣುಗಳನ್ನು ಗಂಗೆಯ ಉತ್ತರತೀರದಲ್ಲಿ ಭಕ್ತಿಯಿಂದ ಸ್ತುತಿಸಿದನು. ಬ್ರಹ್ಮವಿಷ್ಣುಮಹೇಶ್ವರಸೂರ್ಯರು ಯಮನಿಗೆ ವರವನ್ನು ಕೊಟ್ಟರು, ಸರಮೆಯ ಶಾಪವನ್ನೂ ಹೋಗಲಾಡಿಸಿದರು. ಅಲ್ಲದೆ ಯಮನು ಲೋಕಕ್ಷೇಮಕ್ಕಾಗಿ ಅನೇಕವರಗಳನ್ನು ಹೀಗೆ ಕೇಳಿದನು.

೪೦. ಓ ಬ್ರಹ್ಮವಿಷ್ಣುಮಹೇಶ್ವರರೇ, ಈ ತೀರ್ಥಗಳಲ್ಲಿ ಸ್ನಾನಮಾಡುವವರೆಲ್ಲರಿಗೂ ಇಷ್ಟಾರ್ಥಗಳು ಲಭಿಸಲಿ.

೪೧. ಬಾಣತೀರ್ಥದಲ್ಲಿ ಸ್ನಾನಮಾಡಿ ಶಾರ್ಙ್ಗಪಾಣಿಯನ್ನು ಸ್ತುತಿಸುವವರಿಗೆ ಯಾವ ಜನ್ಮದಲ್ಲೂ ದಾರಿದ್ರ್ಯದುಃಖವು ಬರಬಾರದು.

ಗೋತೀರ್ಥೇ ಬ್ರಹ್ಮತೀರ್ಥೇ ವಾ ಯತ್ತು ಸ್ನಾತ್ವಾ ಯತವ್ರತಃ ।
ಬ್ರಹ್ಮಾಣಂ ತಂ ನಮಸ್ಕೃತ್ಯ ದ್ವೀಪಸ್ಯಾಪಿ ಪ್ರದಕ್ಷಿಣಂ ॥ ೪೨ ॥

ಯಃ ಕುರ್ಯಾತ್ತೇನ ಪೃಥಿವೀ ಸಪ್ತದ್ವೀಪಾ ವಸುಂಧರಾ ।
ಪ್ರದಕ್ಷಿಣೀಕೃತಾ ತತ್ರ ಕಿಂಚಿದ್ದತ್ವಾ ವಸು ದ್ವಿಜಂ ॥ ೪೩ ॥

ತದ್ದೇವಯಜನಂ ಪ್ರಾಪ್ಯ ಕಿಂಚಿದ್ಧುತ್ವಾ ಹುತಾಶನೇ ।
ಅಶ್ವಮೇಧಾದಿಯಜ್ಞಾನಾಂ ಫಲಂ ಪ್ರಾಪ್ನೋತಿ ಪುಷ್ಕಲಂ ॥ ೪೪ ॥

ಯಃ ಸಕೃತ್ತತ್ರ ಪಠತಿ ಗಾಯತ್ರೀಂ ವೇದಮಾತರಂ ।
ಅಧೀತಾಸ್ತೇನ ವೇದಾ ವೈ ನಿಷ್ಕಾಮೋ ಮುಕ್ತಿಭಾಜನಂ ॥ ೪೫ ॥

ಸ್ನಾತ್ವಾ ತು ದಕ್ಷಿಣೇ ಕೂಲೇ ಶಕ್ತಿಂ ದೇವೀಂ ತು ಭಕ್ತಿತಃ ।
ಪೂಜಯಿತ್ವಾ ಯಥಾನ್ಯಾಯಂ ಸರ್ವಾನ್ಕಾಮಾನವಾಪ್ನುಯಾತ್ ॥ ೪೬ ॥

---

೪೨. ಗೋತೀರ್ಥದಲ್ಲಿಯಾಗಲೀ ಬ್ರಹ್ಮತೀರ್ಥದಲ್ಲಿಯಾಗಲೀ ಶ್ರದ್ಧೆಯಿಂದ ಸ್ನಾನಮಾಡಿ ಭಕ್ತಿಯಿಂದ ಬ್ರಹ್ಮನನ್ನು ನಮಸ್ಕರಿಸಿ ಆ ದ್ವೀಪಕ್ಕೆ ಪ್ರದಕ್ಷಿಣೆ ಮಾಡಿದರೆ ಇಡೀ ಭೂಮಿಯನ್ನು ಪ್ರದಕ್ಷಿಣೆಮಾಡಿದ ಫಲವು ಲಭಿಸಬೇಕು.

೪೩-೪೪. ಯಜ್ಞತೀರ್ಥದಲ್ಲಿ ಹೋಮಮಾಡಿ ಏನಾದರೂ ದ್ರವ್ಯವನ್ನು ದಾನಮಾಡಿದರೆ ಅಶ್ವಮೇಧ ಮೊದಲಾದ ಯಜ್ಞಗಳ ಫಲವು ಲಭಿಸಬೇಕು.

೪೫. ಆ ಯಜ್ಞತೀರ್ಥದಲ್ಲಿ ವೇದಮಾತೆಯಾದ ಗಾಯತ್ರಿಯನ್ನು ಒಂದುಬಾರಿ ಪಠಿಸಿದರೂ ಸಾಂಗವೇದಾಧ್ಯಯನಮಾಡಿದ ಫಲವು ಲಭಿಸಬೇಕು. ವಿರಕ್ತನಾಗಿ ಪಠಿಸಿದರೆ ಮುಕ್ತಿಯು ಲಭಿಸಬೇಕು.

೪೬. ದಕ್ಷಿಣತೀರದಲ್ಲಿ ಸ್ನಾನಮಾಡಿ ಗಂಗಾಶಕ್ತಿಯನ್ನು ವಿಧಿವತ್ತಾಗಿ ಪೂಜಿಸಿದರೆ ಇಷ್ಟಾರ್ಥಗಳೆಲ್ಲವು ಲಭಿಸಲಿ.

ಬ್ರಹ್ಮವಿಷ್ಣುಮಹೇಶಾನಾಂ ಶಕ್ತಿರ್ಮೂರ್ತಾ ತ್ರಯೀಮಯೀ ।
ಸರ್ವಾನ್ಕಾಮಾನವಾಪ್ನೋತಿ ಪುತ್ರವಾನ್ಧನವಾನ್ಭವೇತ್ ॥ ೪೭ ॥

ಆದಿತ್ಯಂ ಭಕ್ತಿತೋ ಯಸ್ತು ದಕ್ಷಿಣೇ ನಿಯತೋ ನರಃ ।
ಸ್ನಾತ್ವಾ ಪಶ್ಯೇತ ತೇನೇಷ್ಟಾ ಯಜ್ಞಾ ವಿವಿಧದಕ್ಷಿಣಾಃ ॥ ೪೮ ॥

ಕೂಲೇ ಯಶ್ಚೋತ್ತರೇ ಚೈವ ಗಂಗಾಯಾ ದೈತ್ಯಸೂದನಂ ।
ಸ್ನಾತ್ವಾ ಪಶ್ಯೇತ ತಂ ನತ್ವಾ ತಸ್ಯ ವಿಷ್ಣೋಃ ಪರಂ ಪದಂ ॥ ೪೯ ॥

ಯಮೇಶ್ವರಂ ತತೋ ಯಸ್ತು ಯಮತೀರ್ಥೇ ತು ಪೂಜಿತಂ ।
ಸ್ನಾತಃ ಪಶ್ಯತಿ ಯುಕ್ತಾತ್ಮಾ ಸ ಕರೋತ್ಯಚಿರೇಣ ಹಿ ॥ ೫೦ ॥

ಪಿತ್ರ್ಯಾಣಾಮಕ್ಷಯಂ ಪುಣ್ಯಂ ಫಲದಂ ಕೀರ್ತಿವರ್ಧನಂ ।
ತತ್ರ ಸ್ನಾನೇನ ದಾನೇನ ಜಪೇನ ಸ್ತವನೇನ ಚ ।
ಅಪಿ ದುಷ್ಕೃತಕರ್ಮಾಣಃ ಪಿತರೋ ಮೋಕ್ಷಮಾಪ್ನುಯುಃ ॥ ೫೧ ॥

---

೪೭. ಗಂಗೆಯು ಬ್ರಹ್ಮವಿಷ್ಣುಮಹೇಶ್ವರರ ಶಕ್ತಿಸ್ವರೂಪಳು, ಜಗನ್ಮಾತೆಯು, ವೇದಸ್ವರೂಪಳು. ದಕ್ಷಿಣತೀರದಲ್ಲಿ ಮೂರ್ತಿರೂಪದಿಂದ ನೆಲಸಿದ ಆ ಶಕ್ತಿದೇವಿಯನ್ನು ಆರಾಧಿಸಿದವನು, ಪುತ್ರವಂತನೂ ಧನವಂತನೂ ಆಗಲಿ.

೪೮. ಸೂರ್ಯನನ್ನು ದಕ್ಷಿಣತೀರದಲ್ಲಿ ಶ್ರದ್ಧೆಯಿಂದ ಸ್ನಾನಮಾಡಿ ಭಕ್ತಿಯಿಂದ ಸ್ತುತಿಸಿದರೆ ಮಹಾಯಜ್ಞಗಳ ಫಲವು ಲಭಿಸಲಿ.

೪೯. ಗಂಗೆಯ ಉತ್ತರತೀರದಲ್ಲಿ ಸ್ನಾನಮಾಡಿ ದೈತ್ಯಾರಿಯಾದ ಹರಿಯನ್ನು ದರ್ಶನಮಾಡಿದರೆ ವಿಷ್ಣುಲೋಕವು ಲಭಿಸಲಿ.

೫೦. ಯಮತೀರ್ಥದಲ್ಲಿ ಸ್ನಾನಮಾಡಿ ಅಲ್ಲಿ ನೆಲಸಿರುವ ಯಮೇಶ್ವರನನ್ನು ದರ್ಶನಮಾಡಿದವನ ಪಿತೃಗಳೆಲ್ಲರೂ ಉದ್ಧರಿಸಲ್ಪಡಲಿ, ಕೀರ್ತಿಲಭಿಸಲಿ ಪುಣ್ಯವುಂಟಾಗಲಿ.

೫೧. ಯಮತೀರ್ಥದಲ್ಲಿ ಸ್ನಾನದಾನಜಪಸ್ತೋತ್ರಗಳನ್ನು ಮಾಡಿದರೆ ಅವನ ಪಾಪಿಗಳಾದಂತಹ ಪಿತೃಗಳೂ ಮುಕ್ತಿಯನ್ನೈದಲಿ ಎಂದು ವರಗಳನ್ನು ಕೇಳಿಕೊಂಡನು.

॥ ಬ್ರಹ್ಮೋವಾಚ ॥

ಇತ್ಯಾದ್ಯಷ್ಟ ಸಹಸ್ರಾಣಿ ತೀರ್ಥಾನಿ ತ್ರೀಣಿ ನಾರದ ।
ತೇಷು ಸ್ನಾನಂ ಚ ದಾನಂ ಚ ಸರ್ವಮಕ್ಷಯಪುಣ್ಯದಂ ॥ ೫೨ ॥

ಏತೇಷಾಂ ಸ್ಮರಣಂ ಪುಣ್ಯಂ ನಾನಾಜನ್ಮಾಘನಾಶನಂ ।
ಶ್ರವಣಾತ್ಪಿತೃಭಿಃ ಸಾರ್ಧಂ ಪಠನಾತ್ಸ್ವಕುಲೈಃ ಸಹ ॥ ೫೩ ॥

ತೇಷಾಮಪ್ಯತಿಪಾಪಾನಿ ನಾಶಂ ಯಾಂತಿ ಮಮಾಜ್ಞಯಾ ।
ತತ್ರ ಸ್ನಾನಾದಿ ಯಃ ಕೃತ್ವಾ ಕಿಂಚಿದ್ದತ್ವಾ ಯತಾತ್ಮವಾನ್ ॥ ೫೪ ॥

ಪಿತೄಣಾಂ ಪಿಂಡದಾನಾದಿ ಕೃತ್ವಾ ನತ್ವಾ ಸುರಾನಿಮಾನ್ ।
ಧನಂ ಧಾನ್ಯಂ ಯಶೋ ವೀರ್ಯಮಾಯುರಾರೋಗ್ಯಸಂಪದಃ ॥ ೫೫ ॥

ಪುತ್ರಾನ್ಪೌತ್ರಾನ್ಪ್ರಿಯಾಂ ಭಾರ್ಯಾಂ ಲಬ್ಧ್ವಾ ಚಾನ್ಯನ್ಮನೀಷಿತಂ ।
ಅವಿಯುಕ್ತಃ ಪ್ರೀತಮನಾ ಬಂಧುಭಿರ್ಜ್ಞಾತಿಮಾನಿತಃ ॥ ೫೬ ॥

---

೫೨. ಎಲೈ ನಾರದ, ಆ ದಂಡಕವನದಲ್ಲಿ ಇವೇ ಮೊದಲಾದ ಎಂಟು ಸಾವಿರ ಪುಣ್ಯತೀರ್ಥಗಳಿರುವುವು. ಅವುಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಅಕ್ಷಯಪುಣ್ಯವು ಲಭಿಸುವುದು.

೫೩. ಈ ತೀರ್ಥಗಳನ್ನು ಸ್ಮರಿಸಿದರೆ ಜನ್ಮಜನ್ಮಗಳ ಪಾಪವೆಲ್ಲವೂ ನಾಶವಾಗುವುದು, ಮಾಹಾತ್ಮ್ಯವನ್ನು ಕೇಳಿದರೆ ಪಿತೃಗಳು ಸ್ವರ್ಗವನ್ನು ಪಡೆವರು, ಪಠಿಸಿದರೆ ವಂಶದವರೆಲ್ಲರೂ ಪಾಪವಿಲ್ಲದವರಾಗಿ ಸುಖವನ್ನು ಪಡೆಯುವರು. ಇದು ನನ್ನ ಅನುಗ್ರಹವು.

೫೪-೫೬. ಆ ತೀರ್ಥಗಳಲ್ಲಿ ಸ್ನಾನಾದಿಗಳನ್ನು ಮಾಡಿ ಶ್ರದ್ಧೆಯಿಂದ ಪಿತೃಗಳಿಗೆ ಪಿಂಡಪ್ರದಾನವನ್ನು ಮಾಡಿ ಈ ಬ್ರಹ್ಮವಿಷ್ಣುಮಹೇಶ್ವರಸೂರ್ಯರನ್ನು ನಮಸ್ಕರಿಸಿದವನು ಇಹದಲ್ಲಿ ಧನ, ಧಾನ್ಯ, ಯಶಸ್ಸು, ವೀರ್ಯ, ಆಯುಸ್ಸು ಆರೋಗ್ಯ ಮೊದಲಾದುವುಗಳಿಂದ ಕೂಡಿದ್ದು ಹೆಂಡತಿ ಮಕ್ಕಳು ಮೊಮ್ಮಕ್ಕಳುಗಳನ್ನು ಪಡೆದು ಮಿಕ್ಕ ಇಷ್ಟಾರ್ಥಗಳೆಲ್ಲವನ್ನೂ ಪಡೆದು ಬಂಧುಗಳ ಸ್ನೇಹಕ್ಕೆ ಪಾತ್ರನಾಗಿದ್ದು ಸುಖವಾಗಿರುವನು.

ನರಕಸ್ಥಾನಪಿ ಪಿತೄಂಸ್ತಾರಯಿತ್ವಾ ಕುಲಾನಿ ಚ ।
ಪಾವಯಿತ್ವಾ ಪ್ರಿಯೈರ್ಯುಕ್ತೋ ಹ್ಯಂತೇ ವಿಷ್ಣುಂ ಶಿವಂ ಸ್ಮರೇತ್ ।
ತತೋ ಮುಕ್ತಿಪದಂ ಗಚ್ಛೇದ್ದೇವಾನಾಂ ವಚನಂ ಯಥಾ ॥ ೫೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಬಾಣ-ತೀರ್ಥಶಾಙ್ಗ೯ಪಾಣೇಯಗೋದ್ವೀಪದೇವಯಜನಬ್ರಹ್ಮತೀರ್ಥಶಕ್ತಿಯಮಾದಿತ್ಯಸುಪರ್ಣದೈತ್ಯಸೂದನಯಮೇಶ್ವರಪಿತೃ-ತೀರ್ಥಾದಿತ್ರ್ಯಧಿಕಾಷ್ಟಸಹಸ್ರತೀರ್ಥವರ್ಣನಂ ನಾಮೈಕ-ತ್ರಿಂಶದಧಿಕಶತತಮೋಽಧ್ಯಾಯಃ

---

೫೭. ತನ್ನ ಪುಣ್ಯಕರ್ಮದಿಂದ ನರಕದಲ್ಲಿರುವಂತಹ ಪಿತೃಗಳನ್ನೂ ಉದ್ಧರಿಸುವನು, ತನ್ನ ಕುಲವನ್ನು ಪವಿತ್ರಗೊಳಿಸುವನು, ಕೊನೆಯಲ್ಲಿ ಶಿವ ವಿಷ್ಣುಗಳನ್ನು ಸ್ಮರಿಸುತ್ತಾ ಮುಕ್ತಿಯನ್ನೈದುವನು. ಹೀಗೆ ದೇವತೆಗಳು ಅನುಗ್ರಹಿಸಿರುವರು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಬಾಣತೀರ್ಥವೇ ಮೊದಲಾದ ಎಂಟುಸಾವಿರದ ಮೂರು ತೀರ್ಥಗಳ ವರ್ಣನವೆಂಬ ನೂರಮೂವತ್ತೊಂದನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಅರವತ್ತೆರಡನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ದ್ವಾತ್ರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಯಕ್ಷಿಣೀಸಂಗಮಂ ನಾಮ ತೀರ್ಥಂ ಸರ್ವಫಲಪ್ರದಂ ।
ತತ್ರ ಸ್ನಾನೇನ ದಾನೇನ ಸರ್ವಾನ್ಕಾಮಾನವಾಪ್ನುಯಾತ್ ॥ ೧ ॥

ಯತ್ರ ಯಕ್ಷೇಶ್ವರೋ ದೇವೋ ದರ್ಶನಾದ್ಭುಕ್ತಿಮುಕ್ತಿದಃ ।
ತತ್ರ ಚ ಸ್ನಾನಮಾತ್ರೇಣ ಸತ್ರಯಾಗಫಲಂ ಲಭೇತ್ ॥ ೨ ॥

ವಿಶ್ವಾವಸೋಃ ಸ್ವಸಾ ನಾಮ್ನಾ ಪಿಪ್ಪಲಾ ಗುರುಹಾಸಿನೀ ।
ಋಷೀಣಾಂ ಸತ್ರಮಗಮದ್ಗೌತಮೀತೀರವರ್ತಿನಾಂ ॥ ೩ ॥

ನೂರಮೂವತ್ತೆರಡನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಯಕ್ಷಿಣೀಸಂಗಮವೆಂಬ ಪುಣ್ಯತೀರ್ಥವಿರುವುದು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಇಷ್ಟಾರ್ಥಗಳೆಲ್ಲವೂ ಲಭಿಸುವುವು.

೨. ಆ ತೀರ್ಥದಲ್ಲಿ ಯಕ್ಷೇಶ್ವರನು ನೆಲಸಿದ್ದು ಆ ದೇವನನ್ನು ದರ್ಶನ ಮಾಡಿದರೆ ಭೋಗಮೋಕ್ಷಗಳೆರಡೂ ಲಭಿಸುವುವು. ಇಂತಹ ತೀರ್ಥದಲ್ಲಿ ಸ್ನಾನಮಾತ್ರದಿಂದ ಸತ್ರಯಾಗದ ಫಲವು ಲಭಿಸುವುದು.

೩. ಯಕ್ಷನಾದ ವಿಶ್ವಾವಸುವೆಂಬುವವನಿಗೆ ಪಿಪ್ಪಲಾದೇವಿಯೆಂಬ ಹಾಸ್ಯಪ್ರಿಯೆಯಾದ ಮಗಳಿದ್ದಳು. ಅವಳು, ಋಷಿಗಳು ಗೌತಮೀತೀರದಲ್ಲಿ ಮಾಡುತ್ತಿದ್ದ ಯಾಗಕ್ಕೆ ಒಂದುದಿನ ಬಂದಳು.

ದೃಷ್ಟ್ವಾ ತತ್ರ ಋಷೀನ್ಕೃಶಾನ್ಹಾಸಾತಿಗರ್ವಿತಾ ।
ಯಾ ಗತ್ವಾಶ್ರಾವಯ ವೌಷಡಸ್ತು ಶ್ರೌಷಡಿತಿ ಸ್ಥಿರಂ ॥ ೪ ॥

ವಿಸ್ವರೇಣ ಬ್ರುವತೀ ತಾಂ ತೇ ಶೇಪುಃ ಸ್ರಾವಿಣೀ ಭವ ।
ತತೋ ನದ್ಯಭವತ್ತತ್ರ ಯಕ್ಷಿಣೀತಿ ಸುವಿಶ್ರುತಾ ॥ ೫ ॥

ತತೋ ವಿಶ್ವಾವಸುಃ ಪೂಜ್ಯ ಋಷೀನ್ದೇವಂ ತ್ರಿಲೋಚನಂ ।
ಸಂಗಮ್ಯ ಚೈವ ಗೌತಮ್ಯಾ ತಾಂ ವಿಶಾಪಾಮಥಾಕರೋತ್ ॥ ೬ ॥

ತತಃ ಪ್ರಭೃತಿ ತತ್ತೀರ್ಥಂ ಯಕ್ಷಿಣೀಸಂಗಮಂ ಸ್ಮೃತಂ ।
ತತ್ರ ಸ್ನಾನಾದಿದಾನೇನ ಸರ್ವಾನ್ಕಾಮಾನವಾಪ್ನುಯಾತ್ ॥ ೭ ॥

ವಿಶ್ವಾವಸೋಃ ಪ್ರಸನ್ನೋಽಭೂದ್ಯತ್ರ ಶಂಭುಃ ಶಿವಾನ್ವಿತಃ ।
ಶೈವಂ ತತ್ಪರಮಂ ತೀರ್ಥಂ ದುರ್ಗಾತೀರ್ಥಂ ಚ ವಿಶ್ರುತಂ ॥ ೮ ॥

---

೪. ಅಲ್ಲಿ ಕೃಶರಾದ ಋಷಿಗಳನ್ನು ನೋಡಿ ಆ ಪಿಪ್ಪಲೆಯು ಗರ್ವದಿಂದ ಹಾಸ್ಯಮಾಡಿದಳು. ಆಶ್ರಾವಯ, ವೌಷಟ್, ಅಸ್ತುಶ್ರೌಷಟ್ ಎಂಬ ಮಂತ್ರಗಳನ್ನು ಅಪಸ್ವರದಿಂದ ಉಚ್ಚರಿಸಿದಳು, ಅದನ್ನು ನೋಡಿ ಋಷಿಗಳು ನದಿಯಾಗಿಹೋಗು ಎಂದವಳನ್ನು ಶಪಿಸಿದರು.

೫-೬. ಆಮೇಲಾ ಶಾಪದಿಂದ ಪಿಪ್ಪಲೆಯು ಯಕ್ಷಿಣಿ ಎಂಬ ನದಿಯಾಗಿ ಹರಿಯಿತು. ನಂತರ ವಿಶ್ವಾವಸುವು ಋಷಿಗಳನ್ನು ಪೂಜಿಸಿ ಸಮಾಧಾನಮಾಡಿ ಅವರ ಸಲಹೆಯಂತೆ ಮಹಾದೇವನನ್ನಾರಾಧಿಸಿ ಯಕ್ಷಿಣೀನದಿಯು ಗೌತಮೀ ನದಿಯೊಡನೆ ಸೇರುವಂತೆ ಮಾಡಿದನು. ಆದರಿಂದ ಯಕ್ಷಿಣಿಯ ಶಾಪವು ಕಳೆಯಿತು.

೭. ಅದುಮೊದಲುಗೊಂಡು ಆ ತೀರ್ಥವು ಯಕ್ಷಿಣೀಸಂಗಮವೆಂದು ಪ್ರಸಿದ್ಧವಾಯಿತು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಇಷ್ಟಾರ್ಥಗಳೆಲ್ಲವೂ ಲಭಿಸುವುವು.

೮. ಪಾರ್ವತಿಯೊಡನೆ ಶಿವನು ವಿಶ್ವಾವಸುವಿಗೆ ಪ್ರಸನ್ನನಾದ ಸ್ಥಳವು ಶೈವತೀರ್ಥ ಮತ್ತು ದುರ್ಗಾತೀರ್ಥವೆಂದು ಪ್ರಸಿದ್ಧವಾಯಿತು.

ಸರ್ವಪಾಪೌಘಹರಣಂ ಸರ್ವದುರ್ಗತಿನಾಶನಂ ।
ಸರ್ವೇಷಾಂ ತೀರ್ಥಮುಖ್ಯಾನಾಂ ತದ್ಧಿ ಸಾರಂ ಮಹಾಮುನೇ ।
ತೀರ್ಥಂ ಮುನಿವರ್ಯೈಃ ಖ್ಯಾತಂ ಸರ್ವಸಿದ್ಧಿಪ್ರದಂ ನೃಣಾಂ ॥ ೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಯಕ್ಷಿಣೀಸಂಗಮದುರ್ಗಾದಿತೀರ್ಥವರ್ಣನಂ ನಾಮ
ದ್ವಾತ್ರಿಂಶದಧಿಕಶತತಮೋಽಧ್ಯಾಯಃ

---

೯. ಆ ತೀರ್ಥವು ಪಾಪಗಳೆಲ್ಲವನ್ನೂ ಹೋಗಲಾಡಿಸುವುದು, ಕಷ್ಟಗಳೆಲ್ಲವನ್ನೂ ನಿವಾರಿಸುವುದು. ಸಕಲಸಿದ್ಧಿಗಳನ್ನೂ ಉಂಟುಮಾಡುವುದು. ಎಲೈ ನಾರದ ಆ ತೀರ್ಥವು ತೀರ್ಥಗಳಲ್ಲೆಲ್ಲಾ ಶ್ರೇಷ್ಠವಾದುದೆಂದು ಋಷಿಗಳೂ ಸೇವಿಸುವರು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಯಕ್ಷಿಣೀತೀರ್ಥವರ್ಣನವೆಂಬ ನೂರಮೂವತ್ತೆರಡನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯಯಲ್ಲಿ ಅರವತ್ತಮೂರನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಯಸ್ತ್ರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಶುಕ್ಲತೀರ್ಥಮಿತಿ ಖ್ಯಾತಂ ಸರ್ವಸಿದ್ಧಿಕರಂ ನೃಣಾಂ ।
ಯಸ್ಯ ಸ್ಮರಣಮಾತ್ರೇಣ ಸರ್ವಕಾಮಾನವಾಪ್ನುಯಾತ್ ॥ ೧ ॥

ಭರದ್ವಾಜ ಇತಿ ಖ್ಯಾತೋ ಮುನಿಃ ಪರಮಧಾರ್ಮಿಕಃ ।
ತಸ್ಯ ಪೈಠೀನಸೀ ನಾಮ ಭಾರ್ಯಾ ಸುಕಲಭೂಷಣಾ ॥ ೨ ॥

ಗೌತಮೀತೀರಮಧ್ಯಾಸ್ತೇ ಪತಿವ್ರತಪರಾಯಣಾ ।
ಅಗ್ನೀಷೋಮೀಯಮೈಂದ್ರಾಗ್ನಂ ಪುರೋಡಾಶಮಕಲ್ಪಯತ್ ॥ ೩ ॥

ನೂರಮೂವತ್ತಮೂರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಶುಕ್ಲತೀರ್ಥವೆಂಬ ಸಕಲ ಸಿದ್ಧಿಯನ್ನೂ ಉಂಟುಮಾಡುವ ಪುಣ್ಯತೀರ್ಥವಿರುವುದು, ಆ ತೀರ್ಥವನ್ನು ಸ್ಮರಿಸಿದ ಮಾತ್ರದಿಂದ ಇಷ್ಟಾರ್ಥಗಳೆಲ್ಲವೂ ಲಭಿಸುವುವು.

೨. ಭರದ್ವಾಜನೆಂಬ ಮಹಾಮುನಿಯಿದ್ದನು. ಅವನಿಗೆ ಸತ್ಕುಲಪ್ರಸೂತಳಾದ ಪೈಠೀನಸೀ ಎಂಬ ಪ್ರಿಯಪತ್ನಿಯಿದ್ದಳು. ಪತಿವ್ರತೆಯಾದಾ ಹೆಂಡತಿಯೊಡನೆ ಭರದ್ವಾಜನು ಗೌತಮೀತೀರದಲ್ಲಿ ವಾಸವಾಗಿದ್ದನು.

೩-೪. ಒಂದುದಿನ ಅವನು ಅಗ್ನಿ ಮತ್ತು ಇಂದ್ರರಿಗೂ ಅಗ್ನಿಚಂದ್ರರಿಗೂ ಪುರೋಡಾಶವನ್ನು ಕಲ್ಪಿಸಿದನು (ಹೋಮಮಾಡಿದನು) ಪುರೋಡಾಶ

ಪುರೋಡಾಶೇ ಶ್ರಪ್ಯಮಾಣೇ ಧೂಮಾತ್ಕಶ್ಚಿದಜಾಯತ ।
ಪುರೋಡಾಶಂ ಭಕ್ಷಯಿತ್ವಾ ಲೋಕತ್ರಿತಯಭೀಷಣಃ ॥ ೪ ॥

ಯಜ್ಞಂ ಮೇ ಹ್ಯತ್ರ ಕೋ ಹಂಸಿ ಕೋಪಾತ್ತ್ವಮಿತಿ ತಂ ಮುನಿಃ ।
ಪ್ರೋವಾಚ ಸತ್ವರಂ ಕ್ರುದ್ಧೋ ಭರದ್ವಾಜೋ ದ್ವಿಜೋತ್ತಮಃ ।
ತದೃಷೇರ್ವಚನಂ ಶ್ರುತ್ವಾ ರಾಕ್ಷಸಃ ಪ್ರತ್ಯುವಾಚ ತಂ ॥ ೫ ॥

॥ ರಾಕ್ಷಸ ಉವಾಚ ॥

ಹವ್ಯಘ್ನ ಇತಿ ವಿಖ್ಯಾತಂ ಭರದ್ವಾಜ ನಿಬೋಧ ಮಾಂ ।
ಸಂಧ್ಯಾಸುತೋಽಹಂ ಜ್ಯೇಷ್ಠಶ್ಚ ಸುತಃ ಪ್ರಾಚೀನಬರ್ಹಿಷಃ ॥ ೬ ॥

ಬ್ರಹ್ಮಣಾ ಮೇ ವರೋ ದತ್ತೋ ಯಜ್ಞಾನ್ನಾದ ಯಥಾಸುಖಂ ।
ಮಮಾನುಜಃ ಕಲಿಶ್ಚಾಪಿ ಬಲವಾನತಿಭೀಷಣಃ ॥ ೭ ॥

ಅಹಂ ಕೃಷ್ಣಃ ಪಿತಾ ಕೃಷ್ಣೋ ಮಾತಾ ಕೃಷ್ಣಾ ತದಾನುಜಃ ।
ಅಹಂ ಮಖಂ ಹನಿಷ್ಯಾಮಿ ಯೂಪಂ ಛೇದ್ಮಿ ಕೃತಾಂತಕಃ ॥ ೮ ॥

ವನ್ನು ಹೋಮಮಾಡುತ್ತಿರಲು ಧೂಮದಿಂದ ಭಯಂಕರನಾದ ರಾಕ್ಷಸನೋರ್ವನು ಜನಿಸಿದನು. ಅವನು ಆ ಪುರೋಡಾಶವೆಲ್ಲವನ್ನೂ ತಿಂದುಹಾಕಿದನು.

೫. ಆಗ ಭರದ್ವಾಜನು ಕೋಪದಿಂದ ನನ್ನ ಯಜ್ಞವನ್ನು ಹಾಳು ಮಾಡುವ ನೀನಾರು? ಎಂದು ಕೇಳಿದನು.

೬. ಭರದ್ವಾಜನ ಆ ಮಾತನ್ನು ಕೇಳಿ ರಾಕ್ಷಸನು ಓ ಮುನಿ, ನನ್ನ ಹೆಸರು ಹವ್ಯಘ್ನನೆಂದು, ಸಂಧ್ಯಾದೇವಿಯಲ್ಲಿ ಜನಿಸಿದವನು ನಾನು. ಪ್ರಾಚೀನ ಬರ್ಹಿ ಎಂಬುವವನ ಹಿರಿಯ ಮಗನು ನಾನು.

೭. ಬ್ರಹ್ಮನು ನನಗೆ ಯಜ್ಞಹವಿಸ್ಸನ್ನು ತಿನ್ನು ಎಂದು ವರವನ್ನು ಕೊಟ್ಟಿರುವನು. ಬಲಿಷ್ಠನೂ, ಭಯಂಕರನೂ ಆದ ಕಲಿಯೆಂಬುವನು ನನ್ನ ತಮ್ಮನು.

೮. ನನ್ನ ತಂದೆಯೂ ಕಪ್ಪು, ನಾನು ಕಪ್ಪು, ತಾಯಿಯೂ ಕಪ್ಪು ತಮ್ಮನೂ ಕಪ್ಪಾಗಿರುವನು. ಬ್ರಹ್ಮನ ವರಬಲದಿಂದ ಯಜ್ಞವನ್ನು ಹಾಳು ಮಾಡುವೆನು, ಯೂಪಸ್ತಂಭವನ್ನು ಕತ್ತರಿಸುವೆನು ಎಂದನು.

॥ ಭರದ್ವಾಜ ಉವಾಚ ॥

ರಕ್ಷ್ಯತಾಂ ಮೇ ತ್ವಯಾ ಯಜ್ಞಃ ಪ್ರಿಯೋ ಧರ್ಮಃ ಸನಾತನಃ ।
ಜಾನೇ ತ್ವಾಂ ಯಜ್ಞಹಂತಾರಂ ಸದ್ದ್ವಿಜಂ ರಕ್ಷ ಮೇ ಕ್ರತುಂ ॥ ೯ ॥

॥ ಯಜ್ಞಘ್ನ ಉವಾಚ ॥

ಭರದ್ವಾಜ ನಿಬೋಧೇದಂ ವಾಕ್ಯಂ ಮಮ ಸಮಾಸತಃ ।
ಬ್ರಹ್ಮಣಾಹಂ ಪುರಾ ಶಪ್ತೋ ದೇವದಾನವಸಂನಿಧೌ ॥ ೧೦ ॥

ತತಃ ಪ್ರಸಾದಿತೋ ದೇವೋ ಮಯಾ ಲೋಕಪಿತಾಮಹಃ ।
ಅಮೃತೈಃ ಪ್ರೋಕ್ಷಯಿಷ್ಯಂತಿ ಯದಾ ತ್ವಾಂ ಮುನಿಸತ್ತಮಾಃ ॥ ೧೧ ॥

ತದಾ ವಿಶಾಪೋ ಭವಿತಾ ಹವ್ಯಘ್ನ ತ್ವಂ ನ ಚಾನ್ಯಥಾ ।
ಏವಂ ಕರಿಷ್ಯಸಿ ಯದಾ ತತಃ ಸರ್ವಂ ಭವಿಷ್ಯತಿ ।
ಯದ್ಯದಾಕಾಂಕ್ಷಿತಂ ಬ್ರಹ್ಮನ್ನೈತನ್ಮಿಥ್ಯಾ ಕದಾಚನ ॥ ೧೨ ॥

---

೯. ಅದಕ್ಕೆ ಭರದ್ವಾಜನು ಎಲೈ ರಾಕ್ಷಸ, ನೀನು ಯಜ್ಞಶತ್ರುವೆಂದು ತಿಳಿದೆನು. ಆದರೂ ನನಗೆ ಧರ್ಮವು ಪ್ರಿಯವಾದುದು, ನನ್ನನ್ನೂ ಈ ಯಜ್ಞವನ್ನೂ ರಕ್ಷಿಸು ಎಂದನು.

೧೦. ಯಜ್ಞಘ್ನರಾಕ್ಷಸನು ಮತ್ತೆ ಹೇಳಿದನು—ಭರದ್ವಾಜಮುನಿ, ನನ್ನ ಸಮಾಚಾರವನ್ನು ಕೇಳು. ಹಿಂದೆ ಯಾವುದೋ ಅಪರಾಧಕ್ಕಾಗಿ ಬ್ರಹ್ಮನು ನನ್ನನ್ನು ದೇವದಾನವರೆದುರಿಗೆ ಶಪಿಸಿದನು.

೧೧. ಆಮೇಲೆ ನಾನು ಲೋಕಪಿತಾಮಹನಾದ ಬ್ರಹ್ಮನನ್ನು ಆರಾಧಿಸಲು ಅವರು ನಿನ್ನನ್ನು ಮುನಿಗಳು ಅಮೃತದಿಂದ ಅಭಿಷೇಕಿಸಿದರೆ ಈ ಶಾಪವು ಹೋಗುವುದು ಎಂದು ಅನುಗ್ರಹಿಸಿದನು.

೧೨. ಎಲೈ ಮುನಿ, ಬ್ರಹ್ಮನ ಮಾತಿನಂತೆ ನೀನು ಮಾಡಿದರೆ ನನಗೂ ನಿನಗೂ ಒಳ್ಳೆಯದಾಗುವುದು, ಈಮಾತು ನಿಜವಾದುದು ಎಂದನು.

॥ ಬ್ರಹ್ಮೋವಾಚ ॥

ಭರದ್ವಾಜಃ ಪುನಃ ಪ್ರಾಹ ಸಖಾ ನೋಽಸ್ಮಿ ಮಹಾಮತೇ ।
ಮಖಸಂರಕ್ಷಣಂ ಯೇನ ಸ್ಯಾನ್ಮೇ ವದ ಕರೋಮಿ ತತ್ ॥ ೧೩ ॥

ಸಂಭೂಯ ದೇವಾ ದೈತೇಯಾ ಮಮಂಥುಃ ಕ್ಷೀರಸಾಗರಂ ।
ಅಲಭಂತಾಮೃತಂ ಕಷ್ಟಾತ್ತದಸ್ಮತ್ಸುಲಭಂ ಕಥಂ ॥ ೧೪ ॥

ಪ್ರೀತ್ಯಾ ಯದಿ ಪ್ರಸನ್ನೋಽಸಿ ಸುಲಭಂ ಯದ್ವದಸ್ವ ತತ್ ।
ತದೃಷೇರ್ವಚನಂ ಶ್ರುತ್ವಾ ರಕ್ಷಃ ಪ್ರಾಹ ತದಾ ಮುದಾ ॥ ೧೫ ॥

॥ ರಕ್ಷ ಉವಾಚ ॥

ಅಮೃತಂ ಗೌತಮೀವಾರಿ ಅಮೃತಂ ಸ್ವರ್ಣಮುಚ್ಯತೇ ।
ಅಮೃತಂ ಗೋಭವಂ ಚಾಜ್ಯಮಮೃತಂ ಸೋಮ ಏವ ಚ ॥ ೧೬ ॥

ಏತೈರ್ಮಾಮಭಿಷಿಂಚಸ್ವ ಅಥ ವೈತೈಸ್ತಥಾ ತ್ರಿಭಿಃ ।
ಗಂಗಾಯಾ ವಾರಿಣಾಜ್ಯೇನ ಹಿರಣ್ಯೇನ ತಥೈವ ಚ ।
ಸರ್ವೇಭ್ಯೋಽಪ್ಯಧಿಕಂ ದಿವ್ಯಮಮೃತಂ ಗೌತಮೀಜಲಂ ॥ ೧೭ ॥

---

೧೩. ಆಗ ಭರದ್ವಾಜನು ಎಲೈ ಹವ್ಯಘ್ನ, ನಿನ್ನನ್ನು ಸ್ನೇಹಿತನಾಗಿ ಪರಿಗಣಿಸುವೆನು. ನನ್ನ ಯಾಗದ ರಕ್ಷಣೆಯು ಆಗುವಂತೆ ಯಾವ ಕಾರ್ಯವನ್ನು ಹೇಳಿದರೂ ಮಾಡುವೆನು.

೧೪–೧೫. ದೇವದೈತ್ಯರು ಒಟ್ಟುಸೇರಿ ಕಷ್ಟಪಟ್ಟು ಸಮುದ್ರವನ್ನು ಕಡೆದು ಅಮೃತವನ್ನು ಪಡೆದರು. ಆ ಅಮೃತವು ನಮಗೆ ಹೇಗೆ ಲಭಿಸುವುದು ? ಈ ವಿಷಯದಲ್ಲಿ ಸುಲಭವಾದ ಉಪಾಯವನ್ನು ಹೇಳು ಎಂದನು. ಭರದ್ವಾಜನ ಆ ಮಾತನ್ನು ಕೇಳಿ ರಾಕ್ಷಸನು ಸಂತಸದಿಂದ ಇಂತೆಂದನು.

೧೬, ಓ ಮುನಿ, ಗೌತಮೀನದಿಯ ಜಲವು ಅಮೃತ, ಚಿನ್ನವೂ ಅಮೃತ, ಹಸುವಿ ತುಪ್ಪವು ಅಮೃತ, ಸೋಮಲತೆಯ ರಸವೂ ಅಮೃತ.

೧೭. ಈ ನಾಲ್ಕು ವಸ್ತುಗಳಿಂದ ನನ್ನನ್ನು ಪ್ರೋಕ್ಷಿಸು, ಅಥವಾ ಗಂಗಾಜಲಗೋಘೃತಸುವರ್ಣಗಳಿಂದಲಾದರೂ ಪ್ರೋಕ್ಷಿಸು, ಅದರಲ್ಲಿಯೂ ಗೌತಮೀಜಲವು ಸರ್ವಶ್ರೇಷ್ಠವಾದ ಅಮೃತವು ಎಂದನು.

॥ ಬ್ರಹ್ಮೋವಾಚ ॥

ಏತದಾಕರ್ಣ್ಯ ಸ ಋಷಿಃ ಪರಂ ಸಂತೋಷಮಾಗತಃ ।
ಪಾಣಾವಾದಾಯ ಗಂಗಾಯಾಃ ಸಲಿಲಾಮೃತಮಾದರಾತ್ ॥ ೧೮ ॥

ತೇನಾಕರೋದೃಷೀ ರಕ್ಷೋ ಹ್ಯಭಿಷಿಕ್ತಂ ತದಾ ಮಖೇ ।
ಪುನಶ್ಚ ಯೂಪೇ ಚ ಪಶಾವೃತ್ವಿಕ್ಷು ಮಖಮಂಡಲೇ ॥ ೧೯ ॥

ಸರ್ವಮೇವಾಭವಚ್ಛುಕ್ಲಮಭಿಷೇಕಾನ್ಮಹಾತ್ಮನಃ ।
ತದ್ರಕ್ಷೋಽಪಿ ತದಾ ಶುಕ್ಲೋ ಭೂತ್ವೋತ್ಪನ್ನೋ ಮಹಾಬಲಃ ॥ ೨೦ ॥

ಯಃ ಪುರಾ ಕೃಷ್ಣರೂಪೋಽಭೂತ್ಸ ತು ಶುಕ್ಲೋಽಭವತ್ಕ್ಷಣಾತ್ ।
ಯಜ್ಞಂ ಸರ್ವಂ ಸಮಾಪ್ಯಾಥ ಭರದ್ವಾಜಃ ಪ್ರತಾಪವಾನ್ ॥ ೨೧ ॥

ಋತ್ವಿಜೋಽಪಿ ವಿಸೃಜ್ಯಾಥ ಯೂಯಂ ಗಂಗೋದಕೇಽಕ್ಷಿಪತ್ ।
ಗಂಗಾಮಧ್ಯೇ ತದ್ಧಿ ಯೂಪಮದ್ಯಾಪ್ಯಾಸ್ತೇ ಮಹಾಮತೇ ॥ ೨೨ ॥

---

೧೮. ಈ ಮಾತನ್ನು ಕೇಳಿ ಭದ್ವಾಜನು ಸಂತಸಗೊಂಡು ಗಂಗಾನದಿಯ ಅಮೃತಜಲವನ್ನು ಕೈಯಿಂದ ತೆಗೆದುಕೊಂಡು ಆ ಯಾಗಶಾಲೆಯಲ್ಲಿ ರಾಕ್ಷಸನಿಗೆ ಅಭಿಷೇಕಮಾಡಿದನು.

೧೯. ಪುನಃ ಆ ಮುನಿಯು ಯೂಪಸ್ತಂಬ ಪಶು ಋತ್ವಿಜರು ಯಜ್ಞ ಶಾಲೆ ಇವುಗಳನ್ನು ಗೌತಮೀಜಲದಿಂದ ಪ್ರೋಕ್ಷಿಸಿದನು. ಅದರಿಂದ ಅವೆಲ್ಲವೂ ಪರಿಶುದ್ಧವಾದುವು.

೨೦. ಹಿಂದೆ ಕಪ್ಪುಬಣ್ಣದವನಾಗಿದ್ದ ಆ ರಾಕ್ಷಸನೂ ಸಹ ಅಭಿಷೇಕ ದಿಂದ ಆ ಕೂಡಲೇ ಬಿಳಿಯಬಣ್ಣದವನಾದನು.

೨೧–೨೨. ಯಜ್ಞವನ್ನು ಮುಗಿಸಿ ಭರದ್ವಾಜನು ಋತ್ವಿಜರನ್ನು ಕಳು ಹಿಸಿಕೊಟ್ಟನು. ಯಜ್ಞದ ಯೂಪಸ್ತಂಭವನ್ನು ಗಂಗಾನದಿಯಲ್ಲಿ ಬಿಸುಟನು. ಆ ಯೂಪವು ಇಂದಿಗೂ ಗಂಗಾನದಿಯ ಮಧ್ಯದಲ್ಲಿರುವುದು.

ಅಭಿಷಿಕ್ತಂ ಚಾನ್ಯತೇನ ಅಭಿಜ್ಞಾನಂ ತು ತನ್ಮಹತ್ ।
ತತ್ರ ತೀರ್ಥೇ ಪುನಾ ರಕ್ಷೋಃ ಭರದ್ವಾಜಮುವಾಚ ಹ ॥ ೨೩ ॥

॥ ರಕ್ಷ ಉವಾಚ ॥

ಅಹಂ ಯಾಮಿ ಭರದ್ವಾಜ ಕೃತಃ ಶುಕ್ಲಸ್ತ್ವಯಾ ಪುನಃ ।
ತಸ್ಮಾತ್ತವಾತ್ರ ತೀರ್ಥೇ ಯೇ ಸ್ನಾನದಾನಾದಿಪೂಜನಂ ॥ ೨೪ ॥

ಕುರ್ಯುಸ್ತೇಷಾಮಭೀಷ್ಟಾನಿ ಭವೇಯುಃರ್ಯತ್ಫಲಂ ಮಖೇ ।
ಸ್ಮರಣಾದಪಿ ಪಾಪಾನಿ ನಾಶಂ ಯಾಂತು ಸದಾ ಮುನೇ ॥ ೨೫ ॥

ತತಃ ಪ್ರಭೃತಿ ತತ್ತೀರ್ಥಂ ಶುಕ್ಲತೀರ್ಥಮಿತಿ ಸ್ಮೃತಂ ।
ಗೌತಮ್ಯಾಂ ದಂಡಕಾರಣ್ಯೇ ಸ್ವರ್ಗದ್ವಾರಮುಪಾವೃತಂ ॥ ೨೬ ॥

---

೨೩. ಗಂಗಾನದಿಯಲ್ಲಿ ರಾಜಸಿಗೆ ಅಭಿಷೇಕವಾದುದಕ್ಕೆ ಆ ಯೂಪವು ದೊಡ್ಡ ಗುರುತಾಗಿ ಈಗಲೂ ಇದೆ, ಅಭಿಷೇಕಹೊಂದಿ ಆ ರಾಕ್ಷಸನು ಆ ಮುನಿಗೆ ಇಂತು ನುಡಿದನು.

೨೪-೨೫. ಓ ಭರದ್ವಾಜಮುನಿ, ನನ್ನನ್ನು ನೀನು ಪುನಃ ಶುಕ್ಲ (ಬಿಳಿಯ) ವರ್ಣದವನನ್ನಾಗಿ ಮಾಡಿರುವೆ, ಆದುದರಿಂದ ಈ ನಿನ್ನ ತೀರ್ಥದಲ್ಲಿ ಸ್ನಾನದಾನಪೂಜಾದಿಗಳನ್ನು ಮಾಡುವರ ಇಷ್ಟಸಿದ್ಧಿಯಾಗುವುದು. ಅಲ್ಲದೆ ಯಜ್ಞಮಾಡಿದ ಫಲವೂ ಲಭಿಸುವುದು. ಈ ತೀರ್ಥವನ್ನು ಸ್ಮರಣಮಾಡಿದ ಮಾತ್ರದಿಂದ ಪಾಪಗಳೆಲ್ಲವೂ ನಾಶವಾಗುವುವು.

೨೬. ಅದು ಮೊದಲುಗೊಂಡು ಆ ತೀರ್ಥವು ಶುಕ್ಲತೀರ್ಥವೆಂದು ಪ್ರಸಿದ್ಧವಾಯಿತು. ದಂಡಕಾರಣ್ಯದಲ್ಲಿ ಗೌತಮೀನದಿಯಲ್ಲಿರುವ ಈ ತೀರ್ಥವು ಮಾನವರಿಗೆ ತೆರೆದ ಬಾಗಿಲಿನಂತೆ ಇರುವುದು.

ಉಭಯೋಸ್ತೀರಯೋಃ ಸಪ್ತ ಸಹಸ್ರಾಣ್ಯಪರಾಣಿ ಚ |
ತೀರ್ಥಾನಾಂ ಮುನಿಶಾರ್ದೂಲ ಸರ್ವಸಿದ್ಧಿಪ್ರದಾಯಿನಾಂ ॥ ೨೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಶುಕ್ಲತೀರ್ಥಾದ್ಯುಭಯತೀರಸ್ಥಸಪ್ತಸಹಸ್ರತೀರ್ಥವರ್ಣನಂ
ನಾಮ ತ್ರಯಸ್ತ್ರಿಂಶದಧಿಕಶತತಮೋಽಧ್ಯಾಯಃ

---

೨೭. ಎಲೈ ನಾರದಮುನಿ ಶುಕ್ಲತೀರ್ಥದ ಎರಡು ತೀರಗಳಲ್ಲೂ ಏಳು ಸಾವಿರಕ್ಕೆ ಮೇಲ್ಪಟ್ಟು ಪುಣ್ಯತೀರ್ಥಗಳಿರುವುವು. ಆ ತೀರ್ಥಗಳೆಲ್ಲವೂ ಇಷ್ಟಾರ್ಥಗಳೆಲ್ಲವನ್ನೂ ಸಿದ್ಧಿಸಿ ಕೊಡುವಂತಹುವು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಶುಕ್ಲತೀರ್ಥವರ್ಣನವೆಂಬ ನೂರಮೂವತ್ತಮೂರನೆಯ ಅಧ್ಯಾಯವು ಮುಗಿದುದು.

ಗೌತಮೀಯ ಮಾಹಾತ್ಮ್ಯೆಯಲ್ಲಿ ಅರವತ್ತನಾಲ್ಕನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಚತುಸ್ತ್ರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಚಕ್ರತೀರ್ಥಮಿತಿ ಖ್ಯಾತಂ ಸ್ಮರಣಾತ್ಪಾಪನಾಶನಂ ।
ತಸ್ಯ ಪ್ರಭಾವಂ ವಕ್ಷ್ಯಾಮಿ ಶೃಣು ಯತ್ನೇನ ನಾರದ ॥ ೧ ॥

ಋಷಯಃ ಸಪ್ತ ವಿಖ್ಯಾತಾ ವಸಿಷ್ಠಪ್ರಮುಖಾ ಮುನೇ ।
ಗೌತಮ್ಯಾಸ್ತೀರಮಾಶ್ರಿತ್ಯ ಸತ್ರಯಜ್ಞಮುಪಾಸತೇ ॥ ೨ ॥

ತತ್ರ ವಿಘ್ನ ಉಪಕ್ರಾಂತೇ ರಕ್ಷೋಭಿರತಿಭೀಷಣೇ ।
ಮಾಮಭ್ಯೇತ್ಯಾಥ ಮುನಯೋ ರಕ್ಷಃಕೃತ್ಯಂ ನ್ಯವೇದಯನ್ ॥ ೩ ॥

ನೂರಮೂವತ್ತನಾಲ್ಕನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಸ್ಮರಣಮಾತ್ರದಿಂದ ಪಾಪವನ್ನು ನಾಶಮಾಡುವಂತಹ ಚಕ್ರತೀರ್ಥವೆಂಬ ತೀರ್ಥವಿರುವುದು. ಅದರ ಮಾಹಾತ್ಮ್ಯವನ್ನು ಹೇಳುವೆನು, ಶ್ರದ್ಧೆಯಿಂದ ಕೇಳು.

೨. ಎಲೈ ನಾರದ, ವಸಿಷ್ಠ ಮೊದಲಾದ ಸಪ್ತಋಷಿಗಳು ಗೌತಮೀ ತೀರದಲ್ಲಿ ಮಹಾಯಾಗವೊಂದನ್ನು ಆರಂಭಿಸಿದರು.

೩. ಆ ಯಜ್ಞಕ್ಕೆ ಭಯಂಕರರಾದ ರಾಕ್ಷಸರು ವಿಘ್ನಗಳನ್ನು ಮಾಡತೊಡಗಿದರು. ಆಗ ಮುನಿಗಳು ನನ್ನ (ಬ್ರಹ್ಮನ) ಬಳಿಗೆ ಬಂದು, ಆ ಸಮಾಚಾರವನ್ನರುಹಿದರು.

ತದಾಹಂ ಪ್ರಮದಾರೂಪಂ ಮಾಯಯಾಸೃಜ್ಯ ನಾರದ ।
ಯಸ್ಯಾಶ್ಚ ದರ್ಶನಾದೇವ ನಾಶಂ ಯಾಂತ್ಯಥ ರಾಕ್ಷಸಾಃ ॥ ೪ ॥

ಏವಮುಕ್ತ್ವಾ ತು ತಾಂ ಪ್ರಾದಾಮೃಷಿಭ್ಯಃ ಪ್ರಮದಾಂ ಮುನೇ ।
ಮದ್ವಾಕ್ಯಾದೃಷಯೋ ಮಾಯಾಮಾದಾಯ ಪುನರಾಗಮನ್ ॥ ೫ ॥

ಅಜ್ಜೈಕಾ ಯಾ ಸಮಾಖ್ಯಾತಾ ಕೃಷ್ಣಲೋಹಿತರೂಪಿಣೀ ।
ಮುಕ್ತಕೇಶೀತ್ಯಭಿಧಯಾ ಸಾಸ್ತೇಽದ್ಯಾಪಿ ಸ್ವರೂಪಿಣೀ ॥ ೬ ॥

ಲೋಕತ್ರಿತಯಸಂಮೋಹದಾಯಿನೀ ಕಾಮರೂಪಿಣೀ ।
ತದ್ಬಲಾತ್ಸ್ವಸ್ಥಮನಸಃ ಸರ್ವೇ ಚ ಮುನಿಪುಂಗವಾಃ ॥ ೭ ॥

ಗೌತಮೀಂ ಸರಿತಾಂ ಶ್ರೇಷ್ಠಾಂ ಪುನರ್ಯಜ್ಞಾಯ ದೀಕ್ಷಿತಾಃ ।
ಪುನಸ್ತನ್ಮಖನಾಶಾಯ ರಾಕ್ಷಸಾಃ ಸಮುಪಾಗಮನ್ ॥ ೮ ॥

---

೪. ಆಗ ನಾನು ಮಾಯೆಯಿಂದ ಸುಂದರಿಯೋರ್ವಳನ್ನು ಸೃಜಿಸಿ ಈ ಸ್ತ್ರೀಯನ್ನು ನೋಡಿದರೆ ರಾಕ್ಷಸರು ನಾಶವಾಗುವರು ಎಂದು ಹೇಳಿ ಆ ಋಷಿಗಳಿಗೆ ಸ್ತ್ರೀಯನ್ನು ಕೊಟ್ಟೆನು.

೫. ನನ್ನ ಮಾತಿನಂತೆ ಆ ಮಾಯಾದೇವಿಯನ್ನು ಕರೆದುಕೊಂಡು ಋಷಿಗಳು ಯಜ್ಞಶಾಲೆಗೆ ಬಂದರು.

೬. ಆ ಮಾಯಾದೇವಿಯು ಕಪ್ಪುಮಿಶ್ರವಾದ ಕೆಂಬಣ್ಣದವಳು. ಮುಕ್ತಕೇಶಿಯೆಂಬ ಹೆಸರಿನಿಂದ ಇಂದಿಗೂ ನೆಲಸಿರುವಳು. ಅಜ್ಜೈಕಾದೇವಿ ಎಂದು ಅವಳಿಗೆ ಮತ್ತೊಂದು ಹೆಸರಿರುವುದು. ನಾನಾರೂಪಗಳಿಂದ ಆ ದೇವಿಯು ಜಗತ್ತೆಲ್ಲವನ್ನೂ ಮೋಹಗೊಳಿಸುವಳು.

೭-೮. ಮಾಯಾದೇವಿಯ ಬಲದಿಂದ ಋಷಿಗಳೆಲ್ಲರೂ ಧೈರ್ಯಗೊಂಡು ಗೌತಮೀತೀರಕ್ಕೆ ಪುನಃ ಬಂದು ಯಜ್ಞವನ್ನು ಪ್ರಾರಂಭಿಸಿದರು. ಆ ಯಜ್ಞವನ್ನು ಹಾಳುಮಾಡಲು ಪುನಃ ರಾಕ್ಷಸರೂ ಬಂದರು.

ಯಜ್ಞವಾಟಾಂತಿಕೇ ಮಾಯಾಂ ದೃಷ್ಟ್ವಾ ರಾಕ್ಷಸಪುಂಗವಾಃ ।
ತತೋ ನೃತ್ಯಂತಿ ಗಾಯಂತಿ ಹಸಂತಿ ಚ ರುದಂತಿ ಚ ॥ ೯ ॥

ಮಾಹೇಶ್ವರೀ ಮಹಾಮಾಯಾ ಪ್ರಭಾವೇಣಾತಿದರ್ಶಿತಾ ।
ತೇಷಾಂ ಮಧ್ಯೇ ದೈತ್ಯಪತಿಃ ಶಂಬರೋ ನಾಮ ವೀರ್ಯವಾನ್ ॥ ೧೦ ॥

ಮಾಯಾರೂಪಾಂ ತು ಪ್ರಮದಾಂ ಭಕ್ಷಯಾಮಾಸ ನಾರದ ।
ತದದ್ಭುತಮತೀವಾಸೀತ್ತನ್ಮಾಯಾಬಲದರ್ಶಿನಾಂ ॥ ೧೧ ॥

ಮಖೇ ವಿಧ್ವಂಸ್ಯಮಾನೇ ತು ತೇ ವಿಷ್ಣುಂ ಶರಣಂ ಯಯುಃ ।
ಪ್ರಾದಾದ್ವಿಷ್ಣುಶ್ಚಕ್ರಮಥೋ ಮುನೀನಾಂ ರಕ್ಷಣಾಯ ತು ॥ ೧೨ ॥

ಚಕ್ರಂ ತದ್ರಾಕ್ಷಸಾನಾಜೌ ದೈತ್ಯಾಂಶ್ಚ ದನುಜಾಂಸ್ತಥಾ ।
ಚಿಚ್ಛೇದ ತದ್ಭಯಾದೇವ ಮೃತಾ ರಾಕ್ಷಸಪುಂಗವಾಃ ॥ ೧೩ ॥

---

೯. ಯಜ್ಞಶಾಲೆಯ ಎದುರಿನಲ್ಲಿ ಮಾಯಾದೇವಿಯನ್ನು ನೋಡಿ ನರ್ತನಮಾಡತೊಡಗಿದರು, ಗಾನಮಾಡತೊಡಗಿದರು, ಹಾಸ್ಯಮಾಡತೊಡಗಿದರು, ಅಳತೊಡಗಿದರು.

೧೦. ಯಜ್ಞಶಾಲೆಯಲ್ಲಿ ಸರ್ವಶಕ್ತಳಾದ ಮಹಾಮಾಯೆಯು ಮಹಾ ಪ್ರಭಾವದಿಂದ ಬೆಳಗುತ್ತಿದ್ದಳು.

೧೧. ರಾಕ್ಷಸರ ಮಧ್ಯದಲ್ಲಿ ಶಂಬರನೆಂಬ ಮಹಾಪರಾಕ್ರಮಿಯಿದ್ದನು. ಅವನು ಮಾಯಾಶಕ್ತಿಯ ಮಾಯೆಯನ್ನು ತನ್ನ ಮಾಯೆಯಿಂದ ನುಂಗಿಬಿಟ್ಟನು. ಅವನ ಈ ಮಾಯಾಕರ್ಮವು ತುಂಬಾ ಆಶ್ಚರ್ಯಕರವಾಗಿದ್ದಿತು.

೧೨. ಯಜ್ಞವು ರಾಕ್ಷಸರಿಂದ ಹಾಳಾಗುತ್ತಿರಲು ಋಷಿಗಳು ಹರಿಯನ್ನು ಮರೆಹೊಕ್ಕರು. ವಿಷ್ಣುವು ಯುಜ್ಞರಕ್ಷಣೆಗಾಗಿ ಮುನಿಗಳಿಗೆ ತನ್ನ ಚಕ್ರವನ್ನು ಕೊಟ್ಟನು.

೧೩. ಆ ಚಕ್ರವು ಯುದ್ಧದಲ್ಲಿ ದೈತ್ಯದಾನವರಾಕ್ಷಸರನ್ನು ಕತ್ತರಿಸಿತು. ಚಕ್ರದ ರಭಸದಿಂದಲೇ ರಾಕ್ಷಸರೆಲ್ಲರೂ ಮರಣಹೊಂದಿದರು.

ಋಷಿಭಿಸ್ತನ್ಮಹಾಸತ್ರಂ ಸಂಪೂರ್ಣಮಭವತ್ತದಾ ।
ವಿಷ್ಣೋಃ ಪ್ರಕ್ಷಾಲಿತಂ ಚಕ್ರಂ ಗಂಗಾಂಭೋಭಿಃ ಸುದರ್ಶನಂ ॥ ೧೪ ॥

ತತಃ ಪ್ರಭೃತಿ ತತ್ತೀರ್ಥಂ ಚಕ್ರತೀರ್ಥಮುದಾಹೃತಂ ।
ತತ್ರ ಸ್ನಾನೇನ ದಾನೇನ ಸತ್ರಯಾಗಫಲಂ ಲಭೇತ್ ॥ ೧೫ ॥

ತತ್ರ ಪಂಚ ಶತಾನ್ಯಾಸಂಸ್ತೀರ್ಥಾನಾಂ ಪಾಪಹಾರಿಣಾಂ ।
ತೇಷು ಸ್ನಾನಂ ತಥಾ ದಾನಂ ಪ್ರತ್ಯೇಕಂ ಮುಕ್ತಿದಾಯಕಂ ॥ ೧೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಚಕ್ರತೀರ್ಥಾದಿಪಂಚಶತತೀರ್ಥವರ್ಣನಂ ನಾಮ
ಚತುಸ್ತ್ರಿಂಶದಧಿಕಶತತಮೋಽಧ್ಯಾಯಃ

---

೧೪. ಆಮೇಲೆ ಋಷಿಗಳು ಆ ಮಹಾಯಾಗವನ್ನು ಸಂಪೂರ್ಣವಾಗಿ ಮುಗಿಸಿದರು. ದೈತ್ಯರ ರಕ್ತದಿಂದ ತುಂಬಿದ ಚಕ್ರವನ್ನು ಗಂಗೆಯ ನೀರಿನಲ್ಲಿ ತೊಳೆದರು.

೧೫. ಅದು ಮೊದಲುಗೊಂಡು ಆ ತೀರ್ಥವು ಚಕ್ರತೀರ್ಥವೆಂದು ಪ್ರಸಿದ್ಧವಾಯಿತು. ಆ ತೀರ್ಥವಲ್ಲಿ ಸ್ನಾನದಾನಗಳನ್ನು ಮಾಡಿದರೆ ಸತ್ರ ಯಾಗದ ಫಲವು ತಪ್ಪದೆ ಲಭಿಸುವುದು.

೧೬. ಆ ತೀರ್ಥದಲ್ಲಿ ಪಾಪನಾಶಕಗಳಾದಂತಹ ಐದುನೂರು ತೀರ್ಥಗಳು ಇರುವುವು. ಆ ತೀರ್ಥಗಳಲ್ಲಿ ಸ್ನಾನವನ್ನು ಮಾಡಿದರೂ ದಾನವನ್ನು ಮಾಡಿದರೂ ಮುಕ್ತಿಯು ಲಭಿಸುವುದು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಚಕ್ರತೀರ್ಥವರ್ಣನವೆಂಬ ನೂರಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಅರವತ್ತೈದನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಪಂಚತ್ರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಬಾಣೀಸಂಗಮಮಾಖ್ಯಾತಂ ಯತ್ರ ವಾಗೀಶ್ವರೋ ಹರಃ ।
ತತ್ತೀರ್ಥಂ ಸರ್ವಪಾಪಾನಾಂ ಮೋಚನಂ ಸರ್ವಕಾಮದಂ ॥ ೧ ॥

ತತ್ರ ಸ್ನಾನೇನ ದಾನೇನ ಬ್ರಹ್ಮಹತ್ಯಾದಿನಾಶನಂ ।
ಬ್ರಹ್ಮವಿಷ್ಣೋಶ್ಚ ಸಂವಾದೇ ಮಹತ್ತ್ವೇ ಚ ಪರಸ್ಪರಂ ॥ ೨ ॥

ನೂರಮೂವತ್ತೈದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ವಾಣೀಸಂಗಮವೆಂಬ ತೀರ್ಥವು ಇರುವುದು. ಆ ತೀರ್ಥದಲ್ಲಿ ಶಿವನು ವಾಗೀಶ್ವರನೆಂಬ ಹೆಸರಿನಿಂದ ನೆಲಸಿರುವನು. ಈ ತೀರ್ಥವು ಪಾಪಗಳೆಲ್ಲವನ್ನೂ ಹೋಗಲಾಡಿಸುವುದು, ಇಷ್ಟಾರ್ಥಗಳನ್ನೆಲಾ ಹೊಂದಿಸುವುದು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಬ್ರಹ್ಮಹತಿ ಮೊದಲಾದ ಪಾಪಗಳೂ ನಾಶವಾಗುವುವು.

೨. ಹಿಂದೆ ಬ್ರಹ್ಮವಿಷ್ಣುಗಳಿಗೆ ನಾನು ಶ್ರೇಷ್ಠ ತಾನು ಶ್ರೇಷ್ಠ ಎಂಬ ಜಗಳವುಂಟಾಯಿತು. ಆಗ ಅವರ ಮಧ್ಯದಲ್ಲಿ ಮಹಾದೇವನು ಜ್ಯೋತಿರ್ಮಯವಾದ ಲಿಂಗರೂಪದಿಂದ ಆವಿರ್ಭವಿಸಿದನು.

ತಯೋರ್ಮಧ್ಯೇ ಮಹಾದೇವೋ ಜ್ಯೋತಿರ್ಮೂರ್ತಿರಭೂತ್ಕಿಲ ।
ತತ್ರೈವ ವಾಗುವಾಚೇದಂ ದೈವೀ ಪುತ್ರ ತಯೋಃ ಶುಭಾ ॥ ೩ ॥

ಅಹಮಸ್ಮಿ ಮಹಾಂಸ್ತತ್ರ ಅಹಮಸ್ಮೀತಿ ವೈ ಮಿಥಃ ।
ದೈವೀ ವಾಕ್ತಾವುಭೌ ಪ್ರಾಹ ಯಸ್ತ್ವಸ್ಯಾಂತಂ ತು ಪಶ್ಯತಿ ॥ ೪ ॥

ಸ ತು ಜ್ಯೇಷ್ಠೋ ಭವೇತ್ತಸ್ಮಾನ್ಮಾ ವಾದಂ ಕರ್ತುಮರ್ಹಥಃ ।
ತದ್ವಾಕ್ಯಾದ್ವಿಷ್ಣುರಗಮದಧೋಽಹಂ ಚೋರ್ಧ್ವಮೇವ ಚ ॥ ೫ ॥

ತತೋ ವಿಷ್ಣುಃ ಶೀಘ್ರಮೇತ್ಯ ಜ್ಯೋತಿಃಪಾರ್ಶ್ವ ಉಪಾವಿಶತ್ ।
ಅಪ್ರಾಪ್ಯಾಂತಮಹಂ ಪ್ರಾಯಾಂ ದೂರಾದ್ದೂರತರಂ ಮುನೇ ॥ ೬ ॥

ತತಃ ಶ್ರಾಂತೋ ನಿವೃತ್ತೋಽಹಂ ದ್ರಷ್ಟುಮೀಶಂ ತು ತಂ ಪ್ರಭುಂ ।
ತದೈವಂ ಮಮ ಧೀರಾಸೀದ್ದೃಷ್ಟಃಶ್ಶಾಂತೋ ಮಯಾ ಭೃಶಂ ॥ ೭ ॥

---

೩. ಬ್ರಹ್ಮವಿಷ್ಣುಗಳ ಮಾತಿನ ರೂಪಳಾದ ವಾಗ್ದೇವಿಯು ನಾನು (ಬ್ರಹ್ಮನು) ಶ್ರೇಷ್ಠನು, ಎಂದೂ ವಿಷ್ಣುವು ತಾನು ಶ್ರೇಷ್ಠನು ಎಂದೂ ವಾದಿಸಿದರು.

೪. ಆಗ ಮಹಾದೇವನ ವಾಣಿಯು ಯಾರು ಈ ಶಿವಲಿಂಗದ ಕೊನೆಯನ್ನು ನೋಡುವನೋ ಅವನೇ ಶ್ರೇಷ್ಠನು. ಸುಮ್ಮನೆ ಜಗಳವಾಡಬೇಡಿ ಎಂದಿತು.

೫. ಆ ವಾಣಿಯಂತೆ ನಾನು (ಬ್ರಹ್ಮನು) ಲಿಂಗದ ಮೇಲ್ಭಾಗವನ್ನು ನೋಡಲು ಹೊರಟೆನು. ಹರಿಯು ಕೆಳಭಾಗವನ್ನು ನೋಡಲು ಹೊರಟನು. ಅವನು ಕೊನೆಗಾಣದೇ ಜಾಗ್ರತೇ ಬಂದು ಲಿಂಗದಬಳಿ ಸೇರಿದನು.

೬. ಕೊನೆಯನ್ನು ಕಾಣದೆ ನಾನೂ ಸಹ ಬಹಳ ದೂರದವರೆಗೆ ಹೋದೆನು, ಆದರೂ ಸಿಕ್ಕಲಿಲ್ಲ. ಆಗ ಬಳಲಿ ನಾನು ಮಹಾದೇವನ ಕೊನೆಯನ್ನು ನೋಡುವ ಪ್ರಯತ್ನದಿಂದ ಹಿಂತಿರುಗಿದೆನು.

೭. ಆಗ ನಾನು ಈ ಮಹಾದೇವನ ಕೊನೆಯನ್ನು ನಾನು ನೋಡಿದೆ

ಅಸ್ಯ ದೇವಸ್ಯ ತದ್ವಿಷ್ಣೋರ್ಮನು ಜ್ಯೈಷ್ಠ್ಯಂ ಸ್ಫುಟಂ ಭವೇತ್ ।
ಪುನಶ್ಚಾಪಿ ಮನು ತ್ವೇವಂ ಮತಿರಾಸೀನ್ಮಹಾಮತೇ ॥ ೮ ॥

ಸತ್ಯೈರ್ವಕ್ತ್ರೈಃ ಕಥಂ ವಕ್ಷ್ಯೇ ಪೀಡಿತೋಽಪ್ಯನೃತಂ ವಚಃ ।
ನಾನಾವಿಧೇಷು ಪಾಪೇಷು ನಾನೃತಾತ್ಪಾತಕಂ ಪರಂ ॥ ೯ ॥

ಸತ್ಯೈರ್ವಕ್ತ್ರೈರಸತ್ಯಾಂ ವಾ ವಾಚಂ ವಕ್ಷ್ಯೇ ಕಥಂ ತ್ವಿತಿ ।
ತತೋಽಹಂ ಪಂಚಮಂ ವಕ್ತ್ರಂ ಗರ್ದಭಾಕೃತಿಭೀಷಣಂ ॥ ೧೦ ॥

ಕೃತ್ವಾ ತೇನಾನೃತಂ ವಕ್ಷ್ಯ ಇತಿ ಧ್ಯಾತ್ವಾ ಚಿರಂ ತದಾ ।
ಅಬ್ರವಂ ತಂ ಹರಿಂ ತತ್ರ ಆಸೀನಂ ಜಗತಾಂ ಪ್ರಭುಂ ॥ ೧೧ ॥

ನೆಂದು ಹೇಳಿದರೆ ವಿಷ್ಣುವಿಗಿಂತ ನಾನೇ ಶ್ರೇಷ್ಠನಾಗುವೆನು ಎಂದು ಯೋಚಿಸಿದೆನು.

೮. ಪುನಃ ನಾನು ಹೀಗೆ ಆಲೋಚಿಸಿದೆನು—ಸತ್ಯವಾಕ್ಕುಗಳಾದ ಈ ನನ್ನ ಮುಖಗಳಿಂದ ಸುಳ್ಳನ್ನು ಹೇಗೆ ಹೇಳಲಿ? ಎಂತಹ ಆಪತ್ತಿನಲ್ಲೂ ಸುಳ್ಳನ್ನು ಹೇಳಬಾರದು.

೯. ನಾನಾವಿಧವಾದ ಪಾಪಗಳಲ್ಲಿ ಸುಳ್ಳು ಹೇಳುವುದಕ್ಕಿಂತ ಹೆಚ್ಚಿನ ಪಾಪವಿಲ್ಲ, ಸತ್ಯವಾದ ಮುಖಗಳಿಂದ ಅಸತ್ಯವನ್ನು ಹೇಗೆ ಹೇಳಲಿ? ಎಂದು ಚಿಂತಿಸಿದೆನು.

೧೦. ಆಮೇಲೆ ನಾನು ಕತ್ತೆಯ ಮುಖವುಳ್ಳ ಭಯಂಕರವಾದ ಐದನೆಯ ಮುಖವೊಂದನ್ನು ನಿರ್ಮಿಸಿಕೊಂಡು ಅದರಿಂದ ಸುಳ್ಳು ಹೇಳುವೆನು ಎಂದು ನಿಶ್ಚಯಿಸಿದೆನು.

೧೧. ನಂತರ ನಾನು ಶಿವಲಿಂಗದ ಬಳಿಗೆ ಬಂದು ಅಲ್ಲಿ ಕುಳಿತಿದ್ದ ನಾರಾಯಣನನ್ನು ಕುರಿತು ಎಲೈ ಜನಾರ್ದನ, ಈ ಶಿವಲಿಂಗದ ಕೊನೆಯನ್ನು ನಾನು ನೋಡಿದೆನು. ಆದಕಾರಣ ನಾನೇ ನಿನಗಿಂತ ಶ್ರೇಷ್ಠನು ಎಂದು ಐದನೆ ಮುಖದಿಂದ ಸುಳ್ಳು ಹೇಳಿದೆನು.

ಅಸ್ಯ ಚಾಂತೋ ಮಯಾ ದೃಷ್ಟಸ್ತೇನ ಜ್ಯೈಷ್ಠ್ಯಂ ಜನಾರ್ದನ !
ಮನೋತಿ ವದತಃ ಪಾರ್ಶ್ವೇ ಉಭೌ ತೌ ಹರಿಶಂಕರೌ ॥ ೧೨ ॥

ಏಕರೂಪತ್ವಮಾಪನ್ನೌ ಸೂರ್ಯಾಚಂದ್ರಮಸಾವಿವ ।
ತೌ ದೃಷ್ಟ್ವಾ ವಿಸ್ಮಿತೋ ಭೀತಶ್ಚಾಸ್ತವಂ ತಾವುಭಾವಪಿ ।
ತತಃ ಕ್ರುದ್ಧೌ ಜಗನ್ನಾಥೌ ವಾಚಂ ತಾಮಿದಮೂಚತುಃ ॥ ೧೩ ॥

॥ ಹರಿಹರಾವೂಚತುಃ ॥

ದುಷ್ಟೇ ತ್ವಂ ನಿಮ್ನಗಾ ಭೂಯಾ ನಾನೃತಾದಸ್ತಿ ಪಾತಕಂ ॥ ೧೪ ॥

॥ ಬ್ರಹ್ಮೋವಾಚ ॥

ತತಃ ಸಾ ವಿಹ್ವಲಾ ಭೂತ್ವಾ ನದೀಭಾವಮುಪಾಗತಾ ।
ತದ್ದೃಷ್ಟ್ವಾ ವಿಸ್ಮಿತೋ ಭೀತಸ್ತಾಮಬ್ರವಮಹಂ ತದಾ ॥ ೧೫ ॥

---

೧೨. ನಾನು ಹೀಗೆ ಸುಳ್ಳುಹೇಳುತ್ತಿರುವಂತೆಯೇ ಎದುರಿನಲ್ಲಿ ಹರಿ ಶಂಕರರು ಐಕ್ಯರಾಗಿ ಚಂದ್ರಸೂರ್ಯರಂತೆ ರಾರಾಜಿಸಿದರು.

೧೩. ಅಂತಹ ಹರಿಯನ್ನು ನೋಡಿ ಆಶ್ಚರ್ಯದಿಂದ ಭಯಗೊಂಡು ಇವರೀರ್ವರನ್ನೂ ಸ್ತುತಿಸಿದೆನು. ಕೋಪದಿಂದ ಆ ಹರಿಹರರು ನನ್ನ ಅಸತ್ಯ ರೂಪಳಾದ ವಾಗ್ದೇವಿಯನ್ನು ಕುರಿತು—

೧೪. ಎಲೌ ದುಷ್ಟಳಾದ ವಾಗ್ದೇವಿ, ಬ್ರಹ್ಮನ ಮಾತಿನಲ್ಲಿ ನೆಲಸಿ ಸುಳ್ಳುಹೇಳಿದ ನೀನು ಕೆಳದಾರಿಯಲ್ಲೇ ಹೋಗುವ ನದಿಯಾಗು. ಅಸತ್ಯ ಕ್ಕಿಂತಲೂ ಮಿಗಿಲಾದ ಪಾಪವು ಬೇರೊಂದಿಲ್ಲ ಎಂದು ಶಪಿಸಿದರು.

೧೫. ಹರಿಹರರ ಆ ಶಾಪದಿಂದ ವಾಗ್ದೇವಿಯು ತರಳೆಯಾಗಿ ನದೀ ರೂಪವನ್ನು ತಾಳಿದಳು. ಅದನ್ನು ನೋಡಿ ಆಶ್ಚರ್ಯಗೊಂಡು ನಾನೂ ಆ ವಾಗ್ದೇವಿಯನ್ನು ಕುರಿತು,

ಯಸ್ಮಾದಸತ್ಯಮುಕ್ತಾಸಿ ಬ್ರಹ್ಮಣಾಃ ಸ್ಥಿತಾ ಸತೀ ।
ತಸ್ಮಾದದೃಶ್ಯಾ ತ್ವಂ ಭೂಯಾಃ ಪಾಪರೂಪಾಸ್ಯಸಂಶಯಂ ॥ ೧೬ ॥

ಏತಚ್ಛಾಪಂ ವಿದಿತ್ವಾ ತು ತೌ ದೇವೌ ಪ್ರಣತಾ ತದಾ ।
ವಿಶಾಪತ್ವಂ ಪ್ರಾರ್ಥಯಂತೀ ತುಷ್ಟಾವ ಚ ಪುನಃ ಪುನಃ ॥ ೧೭ ॥

ತತಸ್ತುಷ್ಟೌ ದೇವದೇವೌ ಪ್ರಾರ್ಥಿತೌ ತ್ರಿದಶಾರ್ಚಿತೌ ।
ಪ್ರೀತ್ಯಾ ಹರಿಹರಾವೇವಂ ವಾಚಂ ವಾಚಮಥೋಚತುಃ ॥ ೧೮ ॥

॥ ಹರಿಹರಾವೂಚತುಃ ॥

ಗಂಗಯಾ ಸಂಗತಾ ಭದ್ರೇ ಯದಾ ತ್ವಂ ಲೋಕಪಾವನೀ ।
ತದಾ ಪುನರ್ವಪುಸ್ತೇ ಸ್ಯಾತ್ಪವಿತ್ರಂ ಹಿ ಸುಶೋಭನೇ ॥ ೧೯ ॥

---

೧೬. ಎಲೌ ವಾಗ್ದೇವಿ, ನನ್ನ ಮಾತಿನಲ್ಲಿ ನೆಲಸಿದ್ದು ನೀನು ಅಸತ್ಯವನ್ನು ಹೇಳಿದುದರಿಂದ ಇನ್ನು ಮುಂದೆ ಕಣ್ಣಿಗೆ ಕಾಣಿಸದಂತಹ ಅದೃಶ್ಯರೂಪವನ್ನು ಹೊಂದು ಎಂದು ಶಪಿಸಿದೆನು.

೧೭. ಈ ಶಾಪಗಳಿಂದ ಖಿನ್ನಳಾಗಿ ವಾಗ್ದೇವಿಯು ಹರಿಹರರನ್ನು ಭಕ್ತಿಯಿಂದ ನಮಸ್ಕರಿಸಿ ಸ್ತುತಿಸಿ ತನಗೆ ಶಾಪನಿವೃತ್ತಿಯಾಗಬೇಕೆಂದು ಕೇಳಿಕೊಂಡಳು.

೧೮. ವಾಗ್ದೇವಿಯ ಸ್ತುತಿಯಿಂದ ಪ್ರಸನ್ನರಾಗಿ ದೇವದೇವರಾದ ಹರಿಹರರು ಆ ದೇವಿಯನ್ನು ಕುರಿತು,

೧೯. ಎಲೌ ವಾಗ್ದೇವಿ, ನೀನು ಜಗತ್ಪಾವನಳಾದ ಗಂಗಾನದಿಯೊಡನೆ ಸೇರಿದರೆ ನಿನ್ನ ಶರೀರವು ಮೊದಲಿನಂತೆ ಪವಿತ್ರವಾಗುವುದು, ದೃಶ್ಯವಾಗುವುದು ಎಂದರು.

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಸಾಪಿ ದೇವೀ ಗಂಗಯಾ ಸಂಗತಾಭವತ್ ।
ಭಾಗೀರಥೀ ಗೌತಮೀ ಚ ತತಶ್ಚಾಪಿ ಸ್ವಕಂ ವಪುಃ ॥ ೨೦ ॥

ದೇವೀ ಸಾ ವ ಗಮದ್ಬ್ರಹ್ಮನ್ದೇವಾನಾಮಪಿ ದುರ್ಲಭಂ ।
ಗೌತಮ್ಯಾಂ ಸೈವ ವಿಖ್ಯಾತಾ ನಾಮ್ನಾ ವಾಣೀತಿ ಪುಣ್ಯದಾ ॥ ೨೧ ॥

ಭಾಗೀರಥ್ಯಾಂ ಸೈವ ದೇವೀ ಸರಸ್ವತ್ಯಭಿಧೀಯತೇ ।
ಉಭಯತ್ರಾಪಿ ವಿಖ್ಯಾತಃ ಸಂಗಮೋ ಲೋಕಪೂಜಿತಃ ॥ ೨೨ ॥

ಸರಸ್ವತೀಸಂಗಮಶ್ಚ ವಾಣೀಸಂಗಮ ಏವ ಚ ।
ಗೌತಮ್ಯಾ ಸಂಗತಾ ದೇವೀ ವಾಣೀ ವಾಚಾ ಸರಸ್ವತೀ ॥ ೨೩ ॥

ಸರ್ವತ್ರ ಪೂಜಿತಂ ತೀರ್ಥಂ ತತ್ರ ವಾಚಾ ಶಿವಂ ಪ್ರಭುಂ ।
ದೇವೇಶ್ವರಂ ಪೂಜಯಿತ್ವಾ ವಿಶಾಪಮಗಮದ್ಯತಃ ॥ ೨೪ ॥

---

೨೦. ಹರಿಹರರ ಅಪ್ಪಣೆಯಂತೆ ವಾಗ್ದೇವಿಯು ನದಿಯಾಗಿ ಭಾಗೀರಥೀ ಮತ್ತು ಗೌತಮೀನದಿಗಳನ್ನು ಸೇರಿದಳು. ಅದರಿಂದ ಆ ದೇವಿಗೆ ದೇವತೆಗಳಿಗೂ ದುರ್ಲಭವಾದ ದಿವ್ಯರೂಪವು ಲಭಿಸಿತು.

೨೧. ಗೌತಮೀನದಿಯಲ್ಲಿ ಸೇರಿದ ವಾಗ್ದೇವಿಯು ವಾಣೀನದಿಯೆಂದು ಪ್ರಸಿದ್ಧಳಾದಳು. ಭಾಗೀರಥಿಯಲ್ಲಿ ಸೇರಿದ ವಾಗ್ದೇವಿಯು ಸರಸ್ವತೀನದಿಯೆಂದು ಪ್ರಸಿದ್ಧಳಾದಳು.

೨೨. ಭಾಗೀರಥಿಗೌತಮೀನದಿಗಳಲ್ಲಿರುವ ಈ ಸರಸ್ವತೀಸಂಗಮ ವಾಣೀಸಂಗಮಗಳು ಪ್ರಸಿದ್ಧವಾಗಿರುವುವು. ಜಗದ್ವಂದ್ಯವಾಗಿರುವುವು.

೨೩. ಗೌತಮೀನದಿಯಲ್ಲಿ ಸೇರಿ ವಾಗ್ದೇವಿಯು ವಾಣೀನದಿಯ ರೂಪವನ್ನು ಬಿಟ್ಟು ತನ್ನ ನಿಜವಾದ ಸರಸ್ವತೀರೂಪವನ್ನು ಪಡೆದಳು.

೨೪. ವಾಗ್ದೇವಿಯು ದೇವದೇವನಾದ ಮಹಾದೇವನನ್ನು ಪೂಜಿಸಿ ಶಾಪನಿವೃತ್ತಿಯನ್ನು ಹೊಂದಿದುದರಿಂದ ವಾಣೀಸಂಗಮತೀರ್ಥವು ಜಗದ್ವಂದ್ಯವಾಗಿರುವುದು.

ಬ್ರಹ್ಮಾ ವಿಧೂಯ ವಾಗ್ದೋಷ್ಯಂ ಸ್ವಂ ಚ ಧಾಮಾಗಮತ್ಪುನಃ ।
ತಸ್ಮಾತ್ತತ್ರ ಶುಚಿರ್ಭೂತ್ವಾ ಸ್ನಾತ್ವಾ ತತ್ರ ಚ ಸಂಗಮೇ　　॥ ೨೫ ॥

ವಾಗೀಶ್ವರಂ ತತೋ ದೃಷ್ಟ್ವಾ ತಾವತಾ ಮುಕ್ತಿಮಾಪ್ನುಯಾತ್ ।
ದಾನಹೋಮಾದಿಕಂ ಕಿಂಚಿದುಪವಾಸಾದಿಕಾಂ ಕ್ರಿಯಾಂ　　॥ ೨೬ ॥

ಯಃ ಕುರ್ಯಾತ್ಸಂಗಮೇ ಪುಣ್ಯೇ ಸಂಸಾರೇ ನ ಭವೇತ್ಪುನಃ ।
ಏಕೋನವಿಂಶತಿಶತಂ ತೀರ್ಥಾನಾಂ ತೀರಯೋರ್ದ್ವಯೋಃ ।
ನಾನಾಜನ್ಮಾರ್ಜಿತಾಶೇಷಪಾಪಕ್ಷಯವಿಧಾಯಿನಾಂ　　॥ ೨೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ವಾಣೀಸಂಗಮವಾಗೀಶ್ವರಾದ್ಯುಭಯತಟಸ್ಥೈಕೋನ-
ವಿಂಶತಿಶತತೀರ್ಥವರ್ಣನಂ ನಾಮ
ಪಂಚತ್ರಿಂಶದಧಿಕಶತತಮೋಽಧ್ಯಾಯಃ

---

೨೫. ಬ್ರಹ್ಮನು ಆ ತೀರ್ಥದಲ್ಲಿ ತನ್ನ ಅಸತ್ಯದೋಷವನ್ನು ಕಳೆದು ಕೊಂಡು ಸ್ವಸ್ಥಾನಕ್ಕೆ ತೆರಳಿದನು. ಆದುದರಿಂದ ಆ ವಾಣೀಸಂಗಮತೀರ್ಥದಲ್ಲಿ ಸ್ನಾನಮಾಡಿ ವಾಗೀಶ್ವರನನ್ನು ದರ್ಶನಮಾಡಿದರೆ ಮುಕ್ತಿಯು ಲಭಿಸುವುದು.

೨೬. ಆ ಸಂಗಮಸ್ಥಳದಲ್ಲಿ ದಾನ ಹೋಮ ಉಪವಾಸ ಮೊದಲಾದ ಕರ್ಮಗಳನ್ನು ಶ್ರದ್ಧೆಯಿಂದ ಮಾಡಿದವನು ಪುನಃ ಸಂಸಾರದುಃಖಕ್ಕೆ ಸಿಲುಕಲಾರನು.

೨೭. ಆ ವಾಣಿಸಂಗಮದ ತೀರಗಳೆರಡರಲ್ಲೂ ಸಾವಿರದೊಂಭೈನೂರು (1900) ತೀರ್ಥಗಳಿರುವುವು. ಆ ತೀರ್ಥಗಳೆಲ್ಲವೂ ಜನ್ಮಜನ್ಮಾಂತರಗಳ ಪಾಪಗಳೆಲ್ಲವನ್ನೂ ಹೋಗಲಾಡಿಸುವಂತಹವು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ವಾಣೀಸಂಗಮತೀರ್ಥವರ್ಣನವೆಂಬ ನೂರ ಮೂವತ್ತೈದನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಅರವತ್ತಾರನೆಯ ಅಧಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಷಟ್ತ್ರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ವಿಷ್ಣುತೀರ್ಥಮಿತಿ ಖ್ಯಾತಂ ತತ್ರ ವೃತ್ತಮಿದಂ ಶೃಣು ।
ಮೌದ್ಗಲ್ಯ ಇತಿ ವಿಖ್ಯಾತೋ ಮುದ್ಗಲಸ್ಯ ಸುತೋ ಋಷಿಃ ॥ ೧ ॥

ತಸ್ಯ ಭಾರ್ಯಾ ತು ಜಾಬಾಲಾ ನಾಮ್ನಾ ಖ್ಯಾತಾ ಸುಪುತ್ರಿಣೀ ।
ಪಿತಾ ಋಷಿಸ್ತಥಾ ವೃದ್ಧೋ ಮುದ್ಗಲೋ ಲೋಕವಿಶ್ರುತಃ ॥ ೨ ॥

ತಸ್ಯ ಭಾರ್ಯಾ ತಥಾ ಖ್ಯಾತಾ ನಾಮ್ನಾ ಭಾಗೀರಥೀ ಶುಭಾ ।
ಸ ಮೌದ್ಗಲ್ಯಃ ಪ್ರಾತರೇವ ಗಂಗಾಂ ಸ್ನಾತಿ ಯತವ್ರತಃ ॥ ೩ ॥

ನೂರಮೂವತ್ತಾರನೆಯ ಅಧ್ಯಾಯವು

೧-೨. ಬ್ರಹ್ಮನು ಹೇಳಿದನು—ವಿಷ್ಣುತೀರ್ಥವೆಂಬ ಪುಣ್ಯತೀರ್ಥವಿರುವುದು. ಆ ತೀರ್ಥದ ಮಾಹಾತ್ಮ್ಯವನ್ನು ಹೇಳುವೆನು. ಮೌದ್ಗಲನೆಂಬ ಋಷಿ ಇದ್ದನು. ಅವನು ಮುದ್ಗಲಋುಷಿಯ ಮಗನು. ಜಾಬಾಲಾದೇವಿಯೆಂಬುವವಳು ಮೌದ್ಗಲ್ಯನ ಹೆಂಡತಿ. ತಂದೆಯಾದ ಮುದ್ಗಲಮಹಾಮುನಿಯು ವೃದ್ಧನಾಗಿದ್ದನು. ಭಾಗಿರಥೀದೇವಿಯೆಂಬುವವಳು ಮುದ್ಗಲಋುಷಿಯ ಹೆಂಡತಿ.

೩. ಆ ಮೌದ್ಗಲ್ಯಮುನಿಯು ನಿತ್ಯವೂ ಪ್ರಾತಃಕಾಲ ಗಂಗಾಸ್ನಾನವನ್ನು ಮಾಡುತ್ತಿದ್ದನು, ಗಂಗಾಸ್ನಾನವು ಆ ಮುನಿಯು ನಿತ್ಯಕರ್ಮವಾಗಿತ್ತು.

ನಿತ್ಯಮೇವ ತ್ವಿದಂ ಕರ್ಮ ತಸ್ಯಾಸೀನ್ಮುನಿಸತ್ತಮ ।
ಗಂಗಾತೀರೇ ಕುಶೈರ್ಮೃದ್ಭಿಃ ಶಮೀಪುಷ್ಪೈರಹರ್ನಿಶಂ ॥ ೪ ॥

ಗುರೂದಿತೇನ ಮಾರ್ಗೇಣ ಸ್ವಮಾನಸಸರೋರುಹೇ ।
ಆವಾಹನಂ ನಿತ್ಯಮೇವ ವಿಷ್ಣೋಶ್ಚಕ್ರೇ ಸ ಮೌದ್ಗಲಿಃ ॥ ೫ ॥

ತೇನಾಹೂತಸ್ತ್ವರನ್ನೇತಿ ಲಕ್ಷ್ಮೀಭರ್ತಾ ಜಗತ್ಪತಿಃ ।
ವೈನತೇಯಮಥಾರುಹ್ಯ ಶಂಖಚಕ್ರಗದಾಧರಃ ॥ ೬ ॥

ಪೂಜಿತಸ್ತೇನ ಋಷಿಣಾ ಸ ಮೌದ್ಗಲ್ಯೇನ ಯತ್ನತಃ ।
ಪ್ರಬ್ರೂತೇ ಚ ಕಥಾಶ್ಚಿತ್ರಾ ಮೌದ್ಗಲ್ಯಾಯ ಜಗತ್ಪ್ರಭುಃ ॥ ೭ ॥

ತತೋಽಪರಾಹ್ಣಸಮಯೇ ವಿಷ್ಣುಃ ಪ್ರಾಹ ಸ ಮೌದ್ಗಲಿಂ ।
ಯಾಹಿ ವತ್ಸ ಸ್ವಭವನಂ ಶ್ರಾಂತೋಽಸೀತಿ ಪುನಃ ಪುನಃ ॥ ೮ ॥

೪–೫. ಗಂಗಾತೀರದಲ್ಲಿ ಆ ಮೌದ್ಗಲ್ಯನು ನಿತ್ಯವೂ ಗುರುವು ಹೇಳಿದಂತೆ ದರ್ಭೆ, ಮಣ್ಣು, ಶಮೀಪುಷ್ಪ ಇವುಗಳಿಂದ ಹರಿಯನ್ನು ತನ್ನ ಹೃದಯ ಕಮಲವಲ್ಲಿ ಆವಾಹನ ಮಾಡುವನು.

೬. ಮೌದ್ಗಲ್ಯನು ಆವಾಹನೆಮಾಡಿದೊಡನೆಯೇ ಜಗತ್ಪ್ರಭುವಾದ ಲಕ್ಷ್ಮೀಪತಿಯು ಗರುಡನನ್ನೇರಿ ಶಂಖಚಕ್ರಗಧಾಧಾರಿಯಾಗಿ ಅಲ್ಲಿಗೆ ಬರುವನು.

೭. ಹರಿಯನ್ನು ಮೌದ್ಗಲ್ಯನು ಭಕ್ತಿಯಿಂದ ಅರ್ಚಿಸುವನು, ದೇವದೇವನು ಅವನಿಗೆ ಆಶ್ಚರ್ಯಕರವಾದ ಕಥೆಗಳನ್ನು ಹೇಳುವನು.

೮. ಆಮೇಲೆ ಮಧ್ಯಾಹ್ನಸಮಯದಲ್ಲಿ ವಿಷ್ಣುವು ಮೌದ್ಗಲ್ಯನಿಗೆ— ವತ್ಸ, ಮನೆಗೆ ಹೋಗು, ತುಂಬಾ ಬಳಲಿರುವೆ ಎನ್ನುವನು.

ಏವಮುಕ್ತಃ ಸ ದೇವೇನ ವಿಷ್ಣುನಾ ಯಾತಿ ಸ ದ್ವಿಜಃ ।
ಜಗತ್ಪ್ರಭುಸ್ತತೋ ಯಾತಿ ದೇವೈರ್ಯುಕ್ತಃ ಸ್ವಮಂದಿರಂ ॥ ೯ ॥

ಮೌದ್ಗಲ್ಯೋऽಪಿ ತಥಾಭ್ಯೇತ್ಯ ಕಿಂಚಿದಾದಾಯ ನಿತ್ಯಶಃ ।
ಸ್ವಮೇವ ಭವನಂ ವಿದ್ವಾನ್ಭಾರ್ಯಾಯೈ ಸ್ವಾರ್ಜಿತಂ ಧನಂ ॥ ೧೦ ॥

ದದಾತಿ ಸ ಮಹಾವಿಷ್ಣುಚರಣಾಬ್ಜಪರಾಯಣಃ ।
ಮೌದ್ಗಲ್ಯಸ್ಯ ಪ್ರಿಯಾ ಸಾಪಿ ಪತಿವ್ರತಪರಾಯಣಾ ॥ ೧೧ ॥

ಶಾಕಂ ಮೂಲಂ ಫಲಂ ವಾಪಿ ಭರ್ತ್ರಾನೀತಂ ತು ಯತ್ನತಃ ।
ಸುಸಂಸ್ಕೃತ್ಯಾಸ್ಯತಿಥೀನಾಂ ಬಾಲಾನಾಂ ಭರ್ತುರೇವ ಚ ॥ ೧೨ ॥

ದತ್ವಾ ತು ಭೋಜನಂ ತೇಭ್ಯಃ ಪಶ್ಚಾದ್ಭುಜ್ತೇ ಯತವ್ರತಾ ।
ಭುಕ್ತವತ್ಸ್ವಥ ಸರ್ವೇಷು ರಾತ್ರೌ ನಿತ್ಯಂ ಸ ಮೌದ್ಗಲಿಃ ॥ ೧೩ ॥

---

೯. ಹೀಗೆ ವಿಷ್ಣುವು ಹೇಳಲು ಆ ಮೌದ್ಗಲ್ಯನು ತನ್ನಾಶ್ರಮಕ್ಕೆ ತೆರಳುವನು. ವಿಷ್ಣುವೂ ಸಹ ದೇವತೆಗಳಿಂದ ಬೀಳ್ಕೊಂಡು ತನ್ನ ಸ್ಥಾನಕ್ಕೆ ತೆರಳುವನು.

೧೦. ಆಮೇಲೆ ಮೌದ್ಗಲ್ಯನು ಏನಾದರೂ ಆಹಾರವಸ್ತುವನ್ನು ಸಂಪಾದಿಸಿ ಮನೆಗೆ ಬಂದು ಪತ್ನಿಗೆ ಆ ಮಹಾವಿಷ್ಣುಭಕ್ತನು ಸಮರ್ಪಿಸುವನು.

11-12. ಮೌದ್ಗಲ್ಯನ ಪತಿವ್ರತೆಯಾದಾ ಪ್ರಿಯಪತ್ನಿಯು ಪತಿಯು ಕಷ್ಟಪಟ್ಟು ಸಂಪಾದಿಸಿದ ಆ ತರಕಾರಿಯನ್ನೋ ಗೆಡ್ಡೆಗೆಣಸುಗಳನ್ನೋ ಹಣ್ಣನ್ನೋ ಶುಚಿಯಾಗಿ ಸಂಸ್ಕರಿಸಿ ಮೊದಲು ಅತಿಥಿಗಳಿಗೂ ಪತಿಗೂ ಮಕ್ಕಳಿಗೂ ಬಡಿಸಿ ಆಮೇಲೆ ತಾನು ಭುಜಿಸುವಳು.

13. ಎಲ್ಲರೂ ಭೋಜನಮಾಡಿದ ಮೇಲೆ ಮೌದ್ಗಲ್ಯನು ವಿಷ್ಣುವು ಹೇಳಿದ ಆಶ್ಚರ್ಯಕರವಾದ ಕಥೆಗಳನ್ನು ರಾತ್ರಿಯಲ್ಲಿ ಅವರೆಲ್ಲರಿಗೂ ಮಧುರವಾಗಿ ವರ್ಣಿಸುವನು.

ವಿಷ್ಣೋಃ ಶ್ರುತಾಃ ಕಥಾಶ್ಚಿತ್ರಾಸ್ತೇಭ್ಯೋ ವಕ್ಷ್ಯೇಽಥ ಹರ್ಷಿತಃ ।
ಏವಂ ಬಹುತಿಥೇ ಕಾಲೇ ವ್ಯತೀತೇ ಜಾತಿವಿಸ್ಮಿತಾ
ಮೌದ್ಗಲ್ಯಸ್ಯ ರಹೋ ಭಾರ್ಯಾ ಭರ್ತಾರಂ ವಾಕ್ಯಮಬ್ರವೀತ್ ॥ ೧೪ ॥

॥ ಜಾಬಾಲ್ಯುವಾಚ ॥

ಯದಿ ತೇ ವಿಷ್ಣುರಭ್ಯೇತಿ ಸಮೀಪಂ ತ್ರಿದಶಾರ್ಚಿತಃ ।
ತಥಾಽಪಿ ಕಷ್ಟಮಸ್ಮಾಕಂ ಕಸ್ಮಾದಿತಿ ಜಗತ್ಪ್ರಭುಂ ॥ ೧೫ ॥

ತತ್ಪೃಚ್ಛ ತ್ವಂ ಮಹಾಪ್ರಾಜ್ಞ ಯದಾಽಸೌ ವಿಷ್ಣುರೇತಿ ಚ ।
ಯಸ್ಮಿಂಶ್ಚ ಸ್ಮೃತಮಾತ್ರೇ ತು ಜರಾಜನ್ಮರುಜೋ ಮೃತಿಃ ।
ನಾಶಂ ಯಾಂತಿ ಕುತೋ ದೃಷ್ಟೇ ತಸ್ಮಾತ್ಪೃಚ್ಛ ಜಗತ್ಪತಿಂ ॥ ೧೬ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಪ್ರಿಯಾವಾಕ್ಯಾನ್ಮೌದ್ಗಲ್ಯೋ ನಿತ್ಯವದ್ಧರಿಂ ।
ಪೂಜಯಿತ್ವಾ ವಿನೀತಶ್ಚ ಪಪ್ರಚ್ಛ ಸ ಕೃತಾಂಜಲಿಃ ॥ ೧೭ ॥

---

೧೪. ಹೀಗೆ ಬಹುಕಾಲ ಕಳೆಯಲು ಒಂದುದಿನ ಮೌದ್ಗಲ್ಯನ ಪತ್ನಿಯು ಏಕಾಂತದಲ್ಲಿ ತನ್ನ ಪತಿಯನ್ನು ಕುರಿತು,

೧೫. ಓ ಸ್ವಾಮಿ, ನಿನ್ನ ಬಳಿಗೆ ದೇವದೇವನಾದ ವಿಷ್ಣುವು ನಿತ್ಯವೂ ಬರುವನು. ಹಿಗಿದ್ದರೂ ನಮಗೀ ಕಷ್ಟವೇಕೆ? ಇನ್ನೊಂದುಬಾರಿ ಆ ದೇವನು ನಿನ್ನ ಬಳಿಗೆ ಬಂದಾಗ ಈ ವಿಷಯವನ್ನು ಅವನಲ್ಲಿ ಕೇಳು.

೧೬. ಆ ದೇವದೇವನನ್ನು ಸ್ಮರಿಸಿದ ಮಾತ್ರದಿಂದಲೇ ಜರಾರೋಗ ಜನನ ಮರಣಗಳು ನಾಶವಾಗುವುವು. ಇಂತಹ ದೇವನನ್ನು ದರ್ಶನ ಮಾಡಿದರೆ ಹೇಳಬೇಕು! ಆದುದರಿಂದ ಅವನನ್ನು ಕೇಳು ಎಂದಳು.

೧೭. ಹಾಗೆಯೇ ಆಗಲೆಂದು ಪತ್ನಿಗೆ ಹೇಳಿ ಮೌದ್ಗಲ್ಯನು ಆದಿನ ನಿತ್ಯವೂ ಪೂಜಿಸುವಂತೆ ಹರಿಯನ್ನು ಪೂಜಿಸಿ ವಿನಯದಿಂದ,

॥ ಮೌದ್ಗಲ್ಯ ಉವಾಚ ॥

ತ್ವಯಿ ಸ್ಮೃತೇ ಜಗನ್ನಾಥ ಶೋಕದಾರಿದ್ರ್ಯದುಷ್ಕೃತಂ ।
ನಾಶಂ ಯಾತಿ ವಿಪತ್ತಿರ್ಮೇ ತ್ವಯಿ ದೃಷ್ಟೇ ಕಥಂ ಸ್ಥಿತಾ ॥ ೧೮ ॥

॥ ಶ್ರೀವಿಷ್ಣುರುವಾಚ ॥

ಸ್ವಕೃತಂ ಭುಜ್ಯತೇ ಭೂತೈಃ ಸರ್ವೈಃ ಸರ್ವತ್ರ ಸರ್ವದಾ ।
ನ ಕೋಽಪಿ ಕಸ್ಯಚಿತ್ಕಿಂಚಿತ್ಕರೋತ್ಯತ್ರ ಹಿತಾಹಿತೇ ॥ ೧೯ ॥

ಯಾದೃಶಂ ಚೋಪ್ಯತೇ ಬೀಜಂ ಫಲಂ ಭವತಿ ತಾದೃಶಂ ।
ರಸಾಲಃ ಸ್ಯಾನ್ನ ನಿಂಬಸ್ಯ ಬೀಜಾಜ್ಜಾತ್ವಪಿ ಕುತ್ರಚಿತ್ ॥ ೨೦ ॥

ನ ಕೃತಾ ಗೌತಮೀಸೇವಾ ನಾರ್ಚಿತೌ ಹರಿಶಂಕರೌ ।
ನ ದತ್ತಂ ಯೈಶ್ಚ ವಿಪ್ರೇಭ್ಯಸ್ತೇ ಕಥಂ ಭಾಜನಂ ಶ್ರಿಯಃ ॥ ೨೧ ॥

---

೧೮. ಓ ಸ್ವಾಮಿ, ನಿನ್ನನ್ನು ಸ್ಮರಿಸಿದ ಮಾತ್ರದಿಂದಲೇ ದುಃಖ ದಾರಿದ್ರ್ಯಪಾಪಗಳು ನಾಶವಾಗುವುವು. ಹೀಗಿರಲು ನಿನ್ನ ದರ್ಶನ ಮಾಡಿದರೂ ಸಹ ನನಗೆ ದಾರಿದ್ರ್ಯವಿರಲು ಕಾರಣವೇನು? ಎಂದು ಪ್ರಶ್ನೆಮಾಡಲು,

೧೯. ಶ್ರೀ ಹರಿಯು ಹೇಳಿದನು—ಎಲೈ ಮೌದ್ಗಲ್ಯ, ಲೋಕದಲ್ಲಿ ಮಾನವನು ಸುಖವನ್ನಾಗಲೀ, ದುಃಖವನ್ನಾಗಲೀ ತಾನು ಮಾಡಿದುದನ್ನೇ ಅನುಭವಿಸುವನು. ಯಾರೊಬ್ಬ ದೇವನೂ ಸಹ ಯಾವನೊಬ್ಬನಿಗೂ ಸುಮ್ಮಸುಮ್ಮನೆ ಕೆಟ್ಟದನ್ನಾಗಲೀ ಒಳ್ಳೆಯದನ್ನಾಗಲೀ ಮಾಡುವುದಿಲ್ಲ. ಎಲ್ಲವೂ ಅವರ ಕರ್ಮಾಧೀನ.

೨೦. ಭೂಮಿಯಲ್ಲಿ ಎಂತಹ ಬೀಜವನ್ನು ನೆಡುವೆವೋ ಅಂತಹ ಫಲವೇ ಲಭಿಸುವುದು. ಬೇವಿನ ಬೀಜದಿಂದ ಮಾವಿನಮರವು ಹುಟ್ಟಲಾರದು.

೨೧. ಗೌತಮೀನದಿಯನ್ನು ಸೇವಿಸದ, ಹರಿಹರರನ್ನರ್ಚಿಸದ, ಬ್ರಾಹ್ಮಣರಿಗೆ ದಾನಮಾಡದ ಮಾನವರಿಗೆ ಶ್ರೇಯಃಪ್ರಾಪ್ತಿಯು ಹೇಗಾಗುವುದು?

ತ್ವಯಾ ನ ದತ್ತಂ ಕಿಂಚಿಚ್ಚ ಬ್ರಾಹ್ಮಣೇಭ್ಯೋ ಮಮಾಪಿ ಚ ।
ಯದ್ದೀಯತೇ ತದೇವೇಹ ಪರಸ್ಮಿಂಶ್ಚೋಪತಿಷ್ಠತಿ ॥ ೨೨ ॥

ಮೃದ್ಭಿರ್ದರ್ಭೈಃ ಕುಶೈರ್ಮಂತ್ರೈಃ ಶುಚಿಕರ್ಮ ಸದೈವ ಯತ್ ।
ಕರೋತಿ ತಸ್ಮಾತ್ಪೂತಾತ್ಮಾ ಶರೀರಸ್ಯ ಚ ಶೋಷಣಾತ್ ॥ ೨೩ ॥

ವಿನಾ ದಾನೇನ ನ ಕ್ವಾಪಿ ಭೋಗಾವಾಪ್ತಿರ್ನೃಣಾಂ ಭವೇತ್ ।
ಸತ್ಕರ್ಮಾಚರಣಾಚ್ಛುದ್ಧೋ ವಿರಕ್ತಃ ಸ್ಯಾತ್ತತೋ ನರಃ ॥ ೨೪ ॥

ತತೋಽಪ್ರತಿಹತಜ್ಞಾನೋ ಜೀವನ್ಮುಕ್ತಸ್ತತೋ ಭವೇತ್ ।
ಸರ್ವೇಷಾಂ ಸುಲಭಾ ಮುಕ್ತಿರ್ಮದ್ಭಕ್ತ್ಯಾ ಚೇಹ ಪೂರ್ತತಃ ॥ ೨೫ ॥

ಭುಕ್ತಿರ್ದಾನಾದಿನಾ ಸರ್ವಭೂತದುಃಖನಿಬರ್ಹಣಾತ್ ।
ಅಥವಾ ಲಪ್ಸ್ಯಸೇ ಮುಕ್ತಿಂ ಭಕ್ತ್ಯಾ ಭುಕ್ತಿಂ ನ ಲಪ್ಸ್ಯಸೇ ॥ ೨೬ ॥

---

೨೨. ನೀನು ಬ್ರಾಹ್ಮಣರಿಗೂ ನನಗೂ ಸಹ ಏನನ್ನೂ ದಾನಮಾಡಿಲ್ಲ. ಈ ಜನ್ಮದಲ್ಲಿ ದಾನಮಾಡಿದುದು ಪರದಲ್ಲಿ ನೂರ್ಮಡಿಯಾಗಿ ಲಭಿಸುವುದು.

೨೩. ಮಣ್ಣು, ದರ್ಭೆ ಮತ್ತು ಮಂತ್ರಗಳಿಂದಲೂ ತಪಸ್ಸಿನಿಂದಲೂ ಸಹ ಶರೀರಶುದ್ಧಿಯಾಗುವುದು. ಅದರಿಂದ ಮನಶುದ್ಧಿಯೂ ಆಗುವುದು.

೨೪. ದಾನವನ್ನು ಮಾಡದೇ ಭೋಗವು ಲಭಿಸಲಾರದು. ಸತ್ಕರ್ಮಗಳನ್ನಾಚರಿಸಿದರೆ ಕೇವಲ ಶುದ್ಧಿಯುಂಟಾಗುವುದು. ಅದರಿಂದ ವೈರಾಗ್ಯವುದಯಿಸುವುದು.

೨೫. ವೈರಾಗ್ಯದಿಂದ ಸ್ಥಿರವಾದ ಆತ್ಮಜ್ಞಾನವುಂಟಾಗುವುದು. ಅದರಿಂದ ಜೀವನ್ಮುಕ್ತನಾಗುವನು. ನನ್ನಲ್ಲಿ ಸ್ಥಿರಭಕ್ತಿಯನ್ನಿರಿಸಿದರೆ ಎಲ್ಲರೂ ಮುಕ್ತಿಯನ್ನು ಸುಲಭವಾಗಿ ಪಡೆಯುವರು.

೨೬. ದಾರಿದ್ರ್ಯದಿಂದಲೂ, ಹಸಿವೆಯಿಂದಲೂ ಬಳಲುತ್ತಿರುವ ಪ್ರಾಣಿಗಳಿಗೆ ದಾನಮಾಡಿದರೇ ಐಶ್ವರ್ಯವು ಲಭಿಸುವುದು. ಭಕ್ತಿಯಿಂದ ಮುಕ್ತಿಯು ಲಭಿಸುವುದು. ಭೋಗವು ಲಭಿಸಲಾರದು ಎಂದನು.

॥ ಮೌದ್ಗಲ್ಯ ಉವಾಚ ॥

ಭಕ್ತ್ಯಾ ಮುಕ್ತಿಃ ಕಥಂ ಭೂಯಾದ್ಭುಕ್ತೇರ್ಮುಕ್ತಿಃ ಸುದುರ್ಲಭಾ ।
ಜಾತಾ ಚೇದ್ದೇಹಿನಾಂ ಮುಕ್ತಿಃ ಕಿಮನ್ಯೇನ ಪ್ರಯೋಜನಂ ॥ ೨೭ ॥

ಭಕ್ತ್ಯಾ ಮುಕ್ತಿಃ ಸರ್ವಪೂಜ್ಯಾ ತಾಮಿಚ್ಛೇಯಂ ಜಗನ್ಮಯ । ॥ ೨೮ ॥

॥ ವಿಷ್ಣುರುವಾಚ ॥

ಏತದೇವಾಂತರಂ ಬ್ರಹ್ಮನ್ದೀಯತೇ ಮಾಮನುಸ್ಮರನ್ ।
ಬ್ರಾಹ್ಮಣಾಯಾಥವಾರ್ಥಿಭ್ಯಸ್ತದೇವಾಕ್ಷಯತಾಂ ವ್ರಜೇತ್ ॥ ೨೯ ॥

ಮಾಮಧ್ಯಾತ್ವಾಥ ಯದ್ದದ್ಯಾತ್ತತ್ತನ್ಮಾತ್ರಫಲಪ್ರದಂ ।
ತತ್ಪುನರ್ದತ್ತಮೇವೇಹ ನ ಭೋಗಾಯಾತ್ರ ಕಲ್ಪತೇ ॥ ೩೦ ॥

ತಸ್ಮಾದ್ದೇಹಿ ಮಹಾಬುದ್ಧೇ ಭೋಜ್ಯಂ ಕಿಂಚಿನ್ಮಮ ಧ್ರುವಂ ।
ಅಥವಾ ವಿಪ್ರಮುಖ್ಯಾಯ ಗೌತಮೀತೀರಮಾಶ್ರಿತಃ ॥ ೩೧ ॥

---

೨೭. ಮತ್ತೆ ಮೌದ್ಗಲ್ಯನು ಓ ದೇವ, ಭಕ್ತಿಯಿಂದ ಮುಕ್ತಿಯು ಹೇಗೆ ಲಭಿಸುವುದು? ಭೋಗದಿಂದ ಮುಕ್ತಿಯು ಲಭಿಸುವುದಿಲ್ಲವಾದರೆ ಅದು ಪ್ರಯೋಜನವಿಲ್ಲ.

೨೮. ಭಕ್ತಿಯಿಂದ ಶ್ರೇಷ್ಠವಾದ ಮುಕ್ತಿಯೇ ಸುಲಭವಾಗಿ ಲಭಿಸುವುದಾದರೆ ಅಂತಹ ಮುಕ್ತಿಯನ್ನೇ ನಾನು ಅಪೇಕ್ಷಿಸುವೆನು ಎನ್ನಲು,

೨೯. ಅದಕ್ಕೆ ವಿಷ್ಣುವು ಎಲೈ ಬ್ರಾಹ್ಮಣೋತ್ತಮ, ಇದೇ ಭಕ್ತಿಯ ರಹಸ್ಯವು. ನನ್ನನ್ನು ಭಕ್ತಿಯಿಂದ ಸ್ಮರಿಸುತ್ತಾ ಬ್ರಾಹ್ಮಣನಿಗಾಗಲೀ, ಯಾಚಕನಿಗಾಗಲೀ ದಾನಮಾಡಿದರೆ ಅಕ್ಷಯವಾದಂತಹ ಪುಣ್ಯವು ಲಭಿಸುವುದು.

೩೦. ನನ್ನನ್ನು ಭಕ್ತಿಯಿಂದ ಧ್ಯಾನಿಸದೇ ದಾನಮಾಡಿದರೆ ಆ ದಾನಕ್ಕೆ ಉಕ್ತವಾದ ಫಲವು ಲಭಿಸುವುದು. ಪರದಲ್ಲಿ ಭೋಗವನ್ನುಂಟುಮಾಡುವಂತಹುದಾಗಲಾರದು.

೩೧. ಆದುದರಿಂದ ನೀನು ಗೌತಮೀತೀರದಲ್ಲಿ ನನ್ನನ್ನುದ್ದೇಶಿಸಿ ಆಹಾರವನ್ನು ನಿವೇದಿಸು ಅಥವಾ ಬ್ರಾಹ್ಮಣೋತ್ತಮರಿಗೆ ದಾನಮಾಡು ಎಂದನು

॥ ಬ್ರಹ್ಮೋವಾಚ ॥

ಮೌದ್ಗಲ್ಯಃ ಪ್ರಾಹ ತಂ ವಿಷ್ಣುಂ ದೇಯಂ ಮಮ ನ ವಿದ್ಯತೇ ।
ನಾನ್ಯತ್ಕಿಂಚನ ದೇಹಾದಿ ಯತ್ತತ್ತ್ವಯಿ ಸಮರ್ಪಿತಂ ॥ ೩೨ ॥

ತತೋ ವಿಷ್ಣುರ್ಗರುತ್ಮಂತಂ ಪ್ರಾಹ ಶೀಘ್ರಂ ಜಗತ್ಪತಿಃ ।
ಇಹಾನಯಸ್ವ ಕಣಿಶಂ ಮಮಾಯಂ ಚಾರ್ಪಯಿಷ್ಯತಿ ॥ ೩೩ ॥

ತತೋ ಯೋಗ್ಯಾನಯಂ ಭೋಗಾನ್ಪ್ರಾಪ್ಸ್ಯತೇ ಮನಸಃ ಪ್ರಿಯಾನ್ ।
ಆಕರ್ಣ್ಯ ಸ್ವಾಮಿನಾಽಽದಿಷ್ಟಂ ತಥಾ ಚಕ್ರೇ ಸ ಪಕ್ಷಿರಾಟ್ ॥ ೩೪ ॥

ವಿಷ್ಣುಹಸ್ತೇ ಕಣಾನ್ಪ್ರಾದಾತ್ಸ ಮೌದ್ಗಲ್ಯೋ ಯತವ್ರತಃ ।
ಏತಸ್ಮಿನ್ನಂತರೇ ವಿಷ್ಣುರ್ವಿಶ್ವಕರ್ಮಾಣಮಬ್ರವೀತ್ ॥ ೩೫ ॥

---

೩೨. ಆಗ ಮೌದ್ಗಲ್ಯನು ಹರಿಯನ್ನು ಕುರಿತು ಓ ದೇವ, ದಾನಮಾಡಲು ನನ್ನಲ್ಲಿ ಯಾವ ವಸ್ತುವೂ ಇಲ್ಲ. ನನ್ನಲ್ಲಿದ್ದ ದೇಹ ಮೊದಲಾದುವನ್ನು ನಿನಗೇ ಅರ್ಪಿಸಿರುವೆನು ಎಂದನು.

೩೩. ಆಮೇಲೆ ಹರಿಯು ಗರುಡನನ್ನು ಕುರಿತು ಈಕೂಡಲೇ ಒಂದು ಧಾನ್ಯದ ಕಾಳನ್ನು ತಂದು ಈ ಮೌದ್ಗಲ್ಯನಿಗೆ ಕೊಡು, ಅದನ್ನಿವನು ನನಗೆ ಸಮರ್ಪಿಸುವನು. ಅದರಿಂದ ಈ ಮೌದ್ಗಲ್ಯನು ತನಗೆ ಬೇಕಾದಂತಹ ಭೋಗಗಳನ್ನು ಪಡೆಯುವನು ಎಂದನು.

೩೪. ಒಡೆಯನ ಮಾತಿನಂತೆ ಗರುಡನು ಮೌದ್ಗಲ್ಯನಿಗೆ ಧಾನ್ಯಕಣವನ್ನು ತಂದುಕೊಟ್ಟನು. ಮೌದ್ಗಲ್ಯನು ಅದನ್ನು ಭಕ್ತಿಯಿಂದ ವಿಷ್ಣುವಿಗೆ ಸಮರ್ಪಿಸಿದನು.

೩೫-೩೬. ಈ ಸಮಯದಲ್ಲಿ ಹರಿಯು ವಿಶ್ವಕರ್ಮನನ್ನು ಕುರಿತು ಎಲೈ ವಿಶ್ವಕರ್ಮ, ಈ ಮೌದ್ಗಲ್ಯನ ವಂಶದಲ್ಲಿ ಏಳು ಪುರುಷರವರೆಗೆ ಎಲ್ಲರೂ ಸುಖ

॥ ವಿಷ್ಣುರುವಾಚ ॥

ಯಾವಚ್ಚಾಸ್ಯ ಕುಲೇ ಸಪ್ತ ಪುರುಷಾಸ್ತಾವದೇವ ತು ।
ಭವಿತಾರೋ ಮಹಾಬುದ್ಧೇ ತಾವಕಾನಾ ಮನೀಷಿತಾಃ ।
ಗಾವೋ ಹಿರಣ್ಯಂ ಧಾನ್ಯಾನಿ ವಸ್ತ್ರಾಣ್ಯಾಭರಣಾನಿ ಚ ॥ ೩೬ ॥

॥ ಬ್ರಹ್ಮೋವಾಚ ॥

ಯಚ್ಚ ಕಿಂಚಿನ್ಮನಃಪ್ರೀತ್ಯೈ ಲೋಕೇ ಭವತಿ ಭೂಷಣಂ ।
ತತ್ಸರ್ವಮಾಪ ಮೌದ್ಗಲ್ಯೋ ವಿಷ್ಣುಗಂಗಾಪ್ರಭಾವತಃ ॥ ೩೭ ॥

ಗೃಹಂ ಗಚ್ಛೇತಿ ಮೌದ್ಗಲ್ಯೋ ವಿಷ್ಣುನೋಕ್ತಸ್ತತೋ ಯಯೌ ।
ಆಶ್ರಮೇ ಸ್ವಸ್ಯ ಸರ್ವರ್ಧಿಂ ದೃಷ್ಟ್ವಾ ಋಷಿರಭಾಷತ ॥ ೩೮ ॥

॥ ಋಷಿರುವಾಚ ॥

ಅಹೋ ದಾನಪ್ರಭಾವೋಽಯಮಹೋ ವಿಷ್ಣೋರನುಸ್ಮೃತಿಃ ।
ಅಹೋ ಗಂಗಾಪ್ರಭಾವಶ್ಚ ಕೈರ್ವಿಚಾರ್ಯೋ ಮಹಾನಯಂ ॥ ೩೯ ॥

ಭೋಗವುಳ್ಳವರಾಗುವಂತೆಯೂ, ಅವರ ಮನೆಯಲ್ಲಿ ಹಸು, ಚಿನ್ನ, ದವಸ, ವಸ್ತ್ರ, ಆಭರಣಗಳು ಹೇರಳವಾಗಿರುವಂತೆಯೂ ಮಾಡು ಎಂದನು.

೩೭. ಲೋಕದಲ್ಲಿ ಮನೋಹರವಾಗಿರುವಂತಹ ಅಲಂಕಾರಗಳೆಲ್ಲವನ್ನೂ ಆ ಮೌದ್ಗಲ್ಯನು ವಿಷ್ಣು ಮತ್ತು ಗೌತಮಿಯರ ಅನುಗ್ರಹದಿಂದ ಪಡೆದನು.

೩೮. ಆಮೇಲೆ ಹರಿಯು ಮನೆಗೆಹೋಗು ಎಂದು ಹೇಳಲು ಮೌದ್ಗಲ್ಯನು ಹೊರಟನು. ತನ್ನಾಶ್ರಮದಲ್ಲಿ ಸಕಲೈಶ್ವರ್ಯಗಳೂ ತುಂಬಿರುವುದನ್ನು ನೋಡಿ ಆಶ್ಚರ್ಯದಿಂದ ಇಂತು ಯೋಚಿಸಿದನು.

೩೯. ಆಹಾ! ಏನಾಶ್ಚರ್ಯವು! ಈ ದಾನದ ಮಹಿಮೆಯು ಆಶ್ಚರ್ಯಕರವಾದುದು. ಹರಿಯ ಸ್ಮರಣೆಯು ಆಶ್ಚರ್ಯಕರವಾದುದು. ಗಂಗೆಯ ಮಹಿಮೆಯೂ ಆಶ್ಚರ್ಯಕರವಾದುದು. ಇವುಗಳನ್ನು ಊಹಿಸಲೂ ಸಾಧ್ಯವಿಲ್ಲ.

॥ ಬ್ರಹ್ಮೋವಾಚ ॥

ಮೌದ್ಗಲ್ಯೋ ಭಾರ್ಯಯಾ ಸಾರ್ಧಂ ಪುತ್ರೈಃ ಪೌತ್ರೈಶ್ಚ ಬಂಧುಭಿಃ ।
ಪಿತೃಭ್ಯಾಂ ಬುಭುಜೇ ಭೋಗಾನ್ಭುಕ್ತಿಂ ಮುಕ್ತಿಮವಾಪ ಚ ॥ ೪೦ ॥

ತತಃ ಪ್ರಭೃತಿ ತತ್ತೀರ್ಥಂ ಮೌದ್ಗಲ್ಯಂ ವೈಷ್ಣವಂ ತಥಾ ।
ತತ್ರ ಸ್ನಾನಂ ಚ ದಾನಂ ಚ ಭುಕ್ತಿಮುಕ್ತಿಫಲಪ್ರದಂ ॥ ೪೧ ॥

ತತ್ರ ಶ್ರುತಿಃ ಸ್ಮೃತಿರ್ವಾಽಪಿ ತೀರ್ಥಸ್ಯ ಸ್ಯಾತ್ಕಥಂಚನ ।
ತಸ್ಯ ವಿಷ್ಣುರ್ಭವೇತ್ಪ್ರೀತಃ ಪಾಪೈರ್ಮುಕ್ತಃ ಸುಖೀ ಭವೇತ್ ॥ ೪೨ ॥

ಏಕಾದಶ ಸಹಸ್ರಾಣಿ ತೀರ್ಥಾನಾಂ ತೀರಯೋರ್ದ್ವಯೋಃ ।
ಸರ್ವಾರ್ಥದಾಯಿನಾಂ ತತ್ರ ಸ್ನಾನದಾನಜಪಾದಿಭಿಃ ॥ ೪೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಮೌದ್ಗಲ್ಯ ವಿಷ್ಣುತೀರ್ಥಾದ್ಯೇಕಾದಶಸಹಸ್ರತೀರ್ಥವರ್ಣನಂ ನಾಮ ಷಟ್ತ್ರಿಂಶದಧಿಕಶತತಮೋಽಧ್ಯಾಯಃ

---

೪೦. ಇಂತು ಆಶ್ಚರ್ಯ ಪಡುತ್ತಾ ಮೌದ್ಗಲ್ಯನು ಹೆಂಡತಿ ಮಕ್ಕಳು ಮೊಮ್ಮಕ್ಕಳು ತಾಯಿತಂದೆಗಳು ಬಂಧುಗಳು ಇವರೊಡನೆ ಬೇಕಾದ ಭೋಗಗಳನ್ನು ಅನುಭವಿಸಿದನು. ಕೊನೆಯಲ್ಲಿ ಮುಕ್ತಿಯನ್ನೂ ಪಡೆದನು.

೪೧. ಅದುಮೊದಲುಗೊಂಡು ಆ ತೀರ್ಥವು ಮೌದ್ಗಲ್ಯತೀರ್ಥ ವೈಷ್ಣವ ತೀರ್ಥಗಳೆಂಬ ಹೆಸರಿನಿಂದ ಪ್ರಸಿದ್ಧಿಹೊಂದಿತು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಭೋಗಮೋಕ್ಷಗಳೆರಡೂ ಲಭಿಸುವವು.

೪೨. ಆ ತೀರ್ಥದ ಹೆಸರನ್ನು ಕೇಳಿದರೂ ಸ್ಮರಿಸಿದರೂ ಸಹ ಶ್ರೀಹರಿಯು ಪ್ರಸನ್ನನಾಗುವನು. ಪಾಪಗಳೆಲ್ಲವೂ ನಾಶವಾಗುವವು, ಸುಖವು ಲಭಿಸುವುದು.

೪೩. ಆ ಮೌದ್ಗಲ್ಯವಿಷ್ಣುತೀರ್ಥಗಳ ತೀರದಲ್ಲಿ ಹನ್ನೊಂದುಸಾವಿರ (11000) ತೀರ್ಥಗಳಿರುವವು, ಆ ತೀರ್ಥಗಳಲ್ಲಿ ಸ್ನಾನದಾನಜಪ ಮೊದಲಾದುವನ್ನು ಮಾಡಿದರೆ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವವು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಮೌದ್ಗಲ್ಯವಿಷ್ಣುತೀರ್ಥವರ್ಣನವೆಂಬ ನೂರ ಮೂವತ್ತಾರನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಅರವತ್ತೇಳನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತತ್ರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಲಕ್ಷ್ಮೀತೀರ್ಥಮಿತಿ ಖ್ಯಾತಂ ಸಾಕ್ಷಾಲ್ಲಕ್ಷ್ಮೀವಿವರ್ಧನಂ ।
ಅಲಕ್ಷ್ಮೀನಾಶನಂ ಪುಣ್ಯಮಾಖ್ಯಾನಂ ಶೃಣು ನಾರದ ॥ ೧ ॥

ಸಂವಾದಶ್ಚ ಪುರಾ ತ್ವಾಸೀಲ್ಲಕ್ಷ್ಮ್ಯಾಃ ಪುತ್ರ ದರಿದ್ರಯಾ ।
ಪರಸ್ಪರವಿರೋಧಿನ್ಯಾವುಭೇ ವಿಶ್ವಂ ಸಮಿಯತುಃ ॥ ೨ ॥

ನೂರಮೂವತ್ತೇಳನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಲಕ್ಷ್ಮೀತೀರ್ಥವೆಂಬ ತೀರ್ಥವು ಇರುವುದು. ಆ ತೀರ್ಥವು ಐಶ್ವರ್ಯವನ್ನುಂಟುಮಾಡುವುದು, ಬಡತನವನ್ನು ಹೋಗಲಾಡಿಸುವುದು. ಇಂತಹ ತೀರ್ಥದ ಮಹಾತ್ಮ್ಯವನ್ನು ಹೇಳುವೆನು ಕೇಳು,

೨. ಹಿಂದೆ ಲಕ್ಷ್ಮಿಗೂ ದಾರಿದ್ರ್ಯಕ್ಕೂ ಜಗಳವುಂಟಾಯಿತು. ಪರಸ್ಪರ ವಿರೋಧಿಗಳಾದ ಅವರೀರ್ವರೂ ಜಗತ್ತನ್ನು ವ್ಯಾಪಿಸಿದರು.

ತಾಭ್ಯಾಮವ್ಯಾಪ್ತಂ ವಸ್ತು ತನ್ನಾಸ್ತಿ ಭುವನತ್ರಯೇ ।
ಮಮ ಜ್ಯೈಷ್ಠ್ಯಂ ಮಮ ಜ್ಯೈಷ್ಠ್ಯಮಿತ್ಯೂಚತುರುಭೇ ಮಿಥಃ ।
ಅಹಂ ಪೂರ್ವಂ ಸಮುದ್ಭೂತಾ ಇತ್ಯಾಹ ಶ್ರಿಯಮೋಜಸಾ ॥ ೩ ॥

॥ ಶ್ರೀಲಕ್ಷ್ಮೀರುವಾಚ ॥

ಕುಲಂ ಶೀಲಂ ಜೀವಿತಂ ವಾ ದೇಹಿನಾಮಹಮೇವ ತು ।
ಮಯಾ ವಿನಾ ದೇಹಭಾಜೋ ಜೀವಂತೋಽಪಿ ಮೃತಾ ಇವ ॥ ೪ ॥

॥ ಬ್ರಹ್ಮೋವಾಚ ॥

ದರಿದ್ರಯಾ ಚ ಸಾ ಪ್ರೋಕ್ತಾ ಸರ್ವೇಭ್ಯೋ ಹ್ಯಧಿಕಾ ಹ್ಯಹಂ ।
ಮುಕ್ತಿರ್ಮದಾಶ್ರಿತಾ ನಿತ್ಯಂ ದರಿದ್ರೈವಂ ವಚೋಽಬ್ರವೀತ್ ॥ ೫ ॥

ಕಾಮಃ ಕ್ರೋಧಶ್ಚ ಲೋಭಶ್ಚ ಮದೋ ಮಾತ್ಸರ್ಯಮೇವ ಚ ।
ಯತ್ರಾಹಮಸ್ಮಿ ತತ್ರೈತೇ ನ ತಿಷ್ಠಂತಿ ಕದಾಚನ ॥ ೬ ॥

---

೩. ಆ ಲಕ್ಷ್ಮೀದಾರಿದ್ರ್ಯದೇವತೆಯರು ವ್ಯಾಪಿಸದ ವಸ್ತುವೇ ಜಗತ್ತಿನಲಿಲ್ಲ. ನಾನೇ ಶ್ರೇಷ್ಠಳು, ತಾನೇ ಶ್ರೇಷ್ಠಳು ಎಂದು ಪರಸ್ಪರ ಜಗಳವಾಡಿದರು. ದಾರಿದ್ರ್ಯವು, ನಾನೇ ನಿನಗಿಂತ ಮೊದಲು ಜನಿಸಿದವಳು ಎಂದು ಲಕ್ಷ್ಮಿಗೆ ಹೇಳಿದಳು.

೪. ಅದಕ್ಕೆ ಶ್ರೀಲಕ್ಷ್ಮಿಯು ಮನುಷ್ಯನ ಕುಲಶೀಲ ಜೀವನ-ಎಲ್ಲವೂ ನಾನೇ ಆಗಿರುವೆನು, ನಾನಿಲ್ಲದ ಮನುಷ್ಯನು ಬದುಕಿದ್ದರೂ ಸತ್ತಂತೆಯೇ ಎಂದಳು.

೫. ಅದಕ್ಕೆ ದರಿದ್ರದೇವತೆಯು ಹೀಗೆ ಹೇಳಿದಳು—ಎಲ್ಲರಿಗಿಂತಲೂ ನಾನೇ ಶ್ರೇಷ್ಠಳು, ಮುಕ್ತಿಯೂ ಸಹ ನನ್ನನ್ನೇ ಆಶ್ರಯಿಸಿರುವುದು.

೬. ನಾನಿರುವಲ್ಲಿ ಕಾಮಕ್ರೋಧಲೋಭಮದಮಾತ್ಸರ್ಯಗಳು ಸುಳಿಯಲಾರವು.

ನ ಭಯೋದ್ಭೂತಿರುನ್ಮಾದ ಇರ್ಷ್ಯಾ ಉದ್ಧತವೃತ್ತಿತಾ ।
ಯತ್ರಾಹಮಸ್ಮಿ ತತ್ರೈತೇ ನ ತಿಷ್ಠಂತಿ ಕದಾಚನ ॥ ೭ ॥

ದರಿದ್ರಾಯಾ ವಚಃ ಶ್ರುತ್ವಾ ಲಕ್ಷ್ಮೀಸ್ತಾಂ ಪ್ರತ್ಯಭಾಷತ ॥ ೮ ॥

॥ ಲಕ್ಷ್ಮೀರುವಾಚ ॥

ಅಲಂಕೃತೋ ಮಯಾ ಜಂತುಃ ಸರ್ವೋ ಭವತಿ ಪೂಜಿತಃ ।
ನಿರ್ಧನಃ ಶಿವತುಲ್ಯೋಽಪಿ ಸರ್ವೈರಪ್ಯಭಿಭೂಯತೇ ॥ ೯ ॥

ದೇಹೀತಿ ವಚನದ್ವಾರಾ ದೇಹಸ್ಥಾಃ ಪಂಚ ದೇವತಾಃ ।
ಸದ್ಯೋ ನಿರ್ಗತ್ಯ ಗಚ್ಛಂತಿ ಧೀಶ್ರೀಹ್ರೀಶಾಂತಿಕೀರ್ತಯಃ ॥ ೧೦ ॥

ತಾವದ್ಗುಣಾ ಗುರುತ್ವಂ ಚ ಯಾವನ್ನಾರ್ಥಯತೇ ಪರಂ ।
ಅರ್ಥೀ ಚೇತ್ಪುರುಷೋ ಜಾತಃ ಕ್ವ ಗುಣಾಃ ಕ್ವ ಚ ಗೌರವಂ ॥ ೧೧ ॥

---

೭. ನಾನಿರುವಲ್ಲಿ ಭಯ, ಉನ್ಮಾದ, ಅಸೂಯೆ ಗರ್ವಗಳು ಸುಳಿಯಲಾರವು ಎಂದಳು.

೮-೯. ದರಿದ್ರಾದೇವತೆಯ ಆ ಮಾತನ್ನು ಕೇಳಿ ಲಕ್ಷ್ಮಿಯು ನನ್ನನ್ನು ಹೊಂದಿರುವ ಮಾನವನನ್ನು ಎಲ್ಲರೂ ಗೌರವಿಸುವರು. ಧನವಿಲ್ಲದವನು ಶಿವನಂತಹ ಸಾತ್ವಿಕನಾದರೂ ಅವನನ್ನು ಎಲ್ಲರೂ ತಿರಸ್ಕರಿಸುವರು.

೧೦. ದೇಹಿ (ಕೊಡು) ಮಾತಿನೊಡನೆಯೇ ಶರೀರದಲ್ಲಿರುವ ಬುದ್ಧಿ ಲಜ್ಜೆ, ಐಶ್ವರ್ಯ, ಕಾಂತಿ, ಕೀರ್ತಿಗಳೆಂಬ ಐದು ದೇವತೆಗಳು ಹೊರಹೊರಡುವರು.

೧೧. ಮಾನವನು ಪರರಲ್ಲಿಗೆ ಹೋಗಿ ದೇಹಿ ಅನ್ನುವವರೆಗೆ ಅವನಲ್ಲಿ ಗುಣಗಳೂ ಗೌರವವೂ ಇರುತ್ತವೆ. ದೇಹಿ ಎಂದು ಯಾಚಕನಾದನೆಂದರೆ ಸರಿ ಅವನ ಗುಣಗಳೆಲ್ಲವೂ ಮುಚ್ಚಿಹೋಗುವುವು, ಗೌರವವು ಮಾಯವಾಗುವುದು.

ತಾವತ್ಸರ್ವೋತ್ತಮೋ ಜಂತುಸ್ತಾವತ್ಸರ್ವಗುಣಾಲಯಃ ।
ನಮಸ್ಯಃ ಸರ್ವಲೋಕಾನಾಂ ಯಾವನ್ನಾರ್ಥಯತೇ ಪರಂ ॥ ೧೨ ॥

ಕಷ್ಟಮೇತನ್ಮಹಾಪಾಪಂ ನಿರ್ಧನತ್ವಂ ಶರೀರಿಣಾಂ ।
ನ ಮಾನಯತಿ ನೋ ವಕ್ತಿ ನ ಸ್ಪೃಶತ್ಯಧನಂ ಜನಃ ॥ ೧೩ ॥

ಅಹಮೇವ ತತಃ ಶ್ರೇಷ್ಠಾ ದರಿದ್ರೇ ಶೃಣು ಮೇ ವಚಃ ॥ ೧೪ ॥

॥ ಬ್ರಹ್ಮೋವಾಚ ॥

ತಲ್ಲಕ್ಷ್ಮೀವಚನಂ ಶ್ರುತ್ವಾ ದರಿದ್ರಾ ವಾಕ್ಯಮಬ್ರವೀತ್ ॥ ೧೫ ॥

॥ ದರಿದ್ರೋವಾಚ ॥

ವಕ್ತುಂ ನ ಲಕ್ಷ್ಮೀರ್ಜ್ಯೇಷ್ಠಾಹಮಿತಿ ವೈ ಲಜ್ಜಸೇ ಮುಹುಃ ।
ಪಾಪೇಷು ರಮಸೇ ನಿತ್ಯಂ ವಿಹಾಯ ಪುರುಷೋತ್ತಮಂ ॥ ೧೬ ॥

---

೧೨. ಮಾನವನು ಪರರನ್ನು ಯಾಚಿಸದವರೆಗೆ ಅವನಲ್ಲಿ ಎಲ್ಲ ಗುಣಗಳೂ ಕಾಣುವುವು. ಶ್ರೇಷ್ಠನಾಗಿರುವನು, ಗೌರವಾರ್ಹನಾಗಿರುವನು. ಯಾಚಿಸಿದರೆ ಇವೆಲ್ಲವೂ ಮರೆಯಾಗುವುವು, ಮತ್ತೊಬ್ಬನ್ನಲ್ಲಿ ಯಾಚಿಸುವವರಿಗೂ ಮನುಷ್ಯನು ಸರ್ವಶ್ರೇಷ್ಠನು, ಗುಣಪೂರ್ಣನು, ಸರ್ವಲೋಕಪೂಜ್ಯನು ಎನಿಸುವನು. ಮತ್ತೊಬ್ಬನಲ್ಲಿ ಯಾಚನೆಮಾಡಿದ ಕೂಡಲೇ ಈ ಗುಣಗಳು ಅವನನ್ನು ಬಿಟ್ಟುಹೋಗುವವು.

೧೩. ಮಾನವರಲ್ಲಿ ದಾರಿದ್ರ್ಯವೆಂಬುದು ಮಹಾಪಾಪವು, ದರಿದ್ರನನ್ನು ಯಾರೂ ಗೌರವಿಸುವುದಿಲ್ಲ, ಮಾತನಾಡಿಸುವುದಿಲ್ಲ, ಹತ್ತಿರ ಸೇರಿಸುವುದೂ ಇಲ್ಲ.

೧೪. ಆದುದರಿಂದ ಎಲೌ ದರಿದ್ರೆ, ನಿನಗಿಂತಲೂ ನಾನೇ ಶ್ರೇಷ್ಠಳು ಈಗಲಾದರೂ ತಿಳಿಯಿತೆ? ಎಂದಳು.

೧೫-೧೬. ಲಕ್ಷ್ಮಿಯ ಆ ಮಾತನ್ನು ಕೇಳಿ, ದರಿದ್ರಾದೇವಿಯು ಎಲೌ ಲಕ್ಷ್ಮಿ, ನಾನೇ ಶ್ರೇಷ್ಠಳೆಂದು ಹೇಳಿಕೊಳ್ಳಲು ನಿನಗೆ ನಾಚಿಕೆಯಾಗುವುದಿಲ್ಲವೆ? ನೀನು ಸದಾ ಪಾಪಿಗಳಲ್ಲಿ ನೆಲಸಿರುವೆ, ಪುಣ್ಯಾತ್ಮನನ್ನು ಬಿಟ್ಟಿರುವೆ.

ವಿಶ್ವಸ್ತವಂಚಕಾ ನಿತ್ಯಂ ಭವತೀ ಶ್ಲಾಘಸೇ ಕಥಂ ।
ಸುಖಂ ನ ತಾದೃಕ್ತ್ವತ್ಪ್ರಾಪ್ತೌ ಪಶ್ಚಾತ್ತಾಪೋ ಯಥಾ ಗುರುಃ ॥ ೧೭ ॥

ನ ತಥಾ ಜಾಯತೇ ಪುಂಸಾಂ ಸುರಯಾ ದಾರುಣೋ ಮದಃ ।
ತ್ವತ್ಸಂನಿಧಾನಮಾತ್ರೇಣ ಯಥಾ ವೈ ವಿದುಷಾಮಪಿ ॥ ೧೮ ॥

ಸದೈವ ರಮಸೇ ಲಕ್ಷ್ಮೀಃ ಪ್ರಾಯಸ್ತ್ವಂ ಪಾಪಕಾರಿಷು ।
ಅಹಂ ವಸಾಮಿ ಯೋಗ್ಯೇಷು ಧರ್ಮಶೀಲೇಷು ಸರ್ವದಾ ॥ ೧೯ ॥

ಶಿವವಿಷ್ಣ್ವಸುರಕ್ತೇಷು ಕೃತಜ್ಞೇಷು ಮಹತ್ಸು ಚ ।
ಸದಾಚಾರೇಷು ಶಾಂತೇಷು ಗುರುಸೇವೋದ್ಯತೇಷು ಚ ॥ ೨೦ ॥

ಸತ್ಸು ವಿದ್ವತ್ಸು ಶೂರೇಷು ಕೃತಬುದ್ಧಿಷು ಸಾಧುಷು ।
ನಿವಸಾಮಿ ಸದಾ ಲಕ್ಷ್ಮೀಸ್ತಸ್ಮಾಚ್ಛ್ರೇಷ್ಠ್ಯಂ ಮಯಿ ಸ್ಥಿತಂ ॥ ೨೧ ॥

---

೧೭. ನಂಬಿದವರನ್ನು ಮೋಸಗೊಳಿಸುವ ಸ್ವಭಾವವುಳ್ಳ ನೀನು ಶ್ಲಾಘಿಸಿಕೊಳ್ಳುವುದು ಹೇಗೆ? ನಿನ್ನನ್ನು ಪಡೆಯಬೇಕಾದರೆ ತುಂಬಾ ಕಷ್ಟಪಡಬೇಕು, ಸುಖವೆಲ್ಲಿ ಬಂತು ?

೧೮. ಹೆಂಡವನ್ನು ಕುಡಿಯುವವರಿಗೂ ಅಂತಹ ಮದವು ಉಂಟಾಗಲಾರದು, ಆದರೆ ನಿನ್ನ ಸನ್ನಿಧಾನವಿದ್ದರೇ ಸಾಕು ಎಂತಹ ತಿಳಿದವರಿಗೂ ಮದವೇರುವುದು.

೧೯. ಎಲೌ ಲಕ್ಷ್ಮಿ, ಪ್ರಾಯಶಃ ನೀನು ಪಾಪಿಗಳಲ್ಲಿಯೇ ನೆಲಸಿರುವೆ, ಆದರೆ ನಾನು ಧರ್ಮಿಷ್ಠರಾದ ಸಜ್ಜನರಲ್ಲಿ ನೆಲಸಿರುವೆನು.

೨೦-೨೧. ಶಿವಭಕ್ತರು, ವಿಷ್ಣುಭಕ್ತರು, ಕೃತಜ್ಞರು, ಮಹಾತ್ಮರು, ಆಚಾರಶೀಲರು, ಶಾಂತರು, ಗುರುಭಕ್ತರು, ಸಜ್ಜನರು, ವಿದ್ವಾಂಸರು, ಶೂರರು, ಜ್ಞಾನಿಗಳು, ಸಾಧುಗಳು ಇಂತವರಲ್ಲಿ ನಾನು ಸದಾ ನೆಲಸಿರುವೆನು, ಆದುದರಿಂದ ನಿನಗಿಂತ ನಾನೇ ಶ್ರೇಷ್ಠಳು.

ಬ್ರಾಹ್ಮಣೇಷು ಶುಚಿಷ್ಮತ್ಸು ವ್ರತಚಾರಿಷು ಭಿಕ್ಷುಷು ।
ನಿರ್ಭಯೇಷು ವಸಿಷ್ಯಾಮಿ ಲಕ್ಷ್ಮೀಸ್ತ್ವಂ ಶೃಣು ತೇ ಸ್ಥಿತಿಂ ॥ ೨೨ ॥

ರಾಜವರ್ತಿಷು ಪಾಪೇಷು ನಿಷ್ಠುರೇಷು ಖಲೇಷು ಚ ।
ಪಿಶುನೇಷು ಚ ಲುಬ್ಧೇಷು ವಿಕೃತೇಷು ಶಠೇಷು ಚ ॥ ೨೩ ॥

ಅನಾರ್ಯೇಷು ಕೃತಘ್ನೇಷು ಧರ್ಮಘಾತಿಷು ಸರ್ವದಾ ।
ಮಿತ್ರದ್ರೋಹಿಷ್ವನಿಷ್ಟೇಷು ಭಗ್ನಚಿತ್ತೇಷು ವರ್ತಸೇ ॥ ೨೪ ॥

॥ ಬ್ರಹ್ಮೋವಾಚ ॥

ಏವಂ ವಿವದಮಾನೇ ತೇ ಜಗ್ಮತುರ್ಮಾಮುಭೇ ಅಪಿ ।
ತಯೋರ್ವಾಕ್ಯಮುಪಶ್ರುತ್ಯ ಮಯೋಕ್ತೇ ತೇ ಉಭೇ ಅಪಿ ॥ ೨೫ ॥

ಮತ್ತಃ ಪೂರ್ವತರಾ ಪೃಥ್ವೀ ಆಪಃ ಪೂರ್ವತರಾಸ್ತತಃ ।
ಸ್ತ್ರೀಣಾಂ ವಿವಾದಂ ತಾ ಏವ ಸ್ತ್ರಿಯೋ ಜಾನಂತಿ ನೇತರೇ ॥ ೨೬ ॥

---

೨೨. ಬ್ರಾಹ್ಮಣರು, ಪುಣ್ಯಾತ್ಮರು, ವ್ರತನಿಷ್ಠರು, ಸನ್ಯಾಸಿಗಳು, ಸತ್ಯವಂತರು ಇವರಲ್ಲಿ ನಾನು ಸದಾ ವಾಸಿಸುವೆನು, ನೋಡು, ನನ್ನ ಉತ್ತಮ ಸ್ಥಿತಿಯನ್ನು.

೨೩-೨೪. ನೀನಾದರೋ ರಾಜಾಶ್ರಯದಲ್ಲಿರುವವರು, ಪಾಪಿಗಳು, ಕ್ರೂರರು, ದುಷ್ಟರು, ಚಾಡಿಕೋರರು, ಮೋಸಗಾರರು, ಜಿಪುಣರು, ಮೂರ್ಖರು ಅನಾಚಾರಿಗಳು, ಕೃತಘ್ನರು, ಧರ್ಮವಿರೋಧಿಗಳು, ದ್ರೋಹಿಗಳು ಇಂತಹವರಲ್ಲಿ ನೆಲಸಿರುವೆ ಎಂದಳು.

೨೫. ಹೀಗೆ ವಾದಿಸುತ್ತಾ ಆ ಲಕ್ಷ್ಮೀದರಿದ್ರೆಯರೀರ್ವರೂ ನನ್ನಬಳಿಗೆ ಬಂದರು, ಅವರ ಮಾತನ್ನು ಕೇಳಿ ನಾನು.

೨೬. ಎಲೌ ದೇವಿಯರೇ, ನನಗಿಂತಲೂ ಭೂಮಿಯು ಹಿರಿಯಳು, ಭೂಮಿಗಿಂತಲೂ ಜಲದೇವತೆಯು ಹಿರಿಯಳು, ಆ ಜಲದೇವತೆಯನ್ನೇ ವಿಚಾರಿಸಿ. ಸ್ತ್ರೀಯರ ವಿವಾದವನ್ನು ಸ್ತ್ರೀಯರೇ ತಿಳಿಯಬಲ್ಲರು, ಪುರುಷರು ತಿಳಿಯಲಾರರು.

ವಿಶೇಷತಃ ಪುನಸ್ತಾಭ್ಯಃ ಕಮಂಡಲುಭವಾಶ್ಚ ಯಾಃ ।
ತತ್ರಾಪಿ ಗೌತಮೀ ದೇವೀ ನಿಶ್ಚಯಂ ಕಥಯಿಷ್ಯತಿ ॥ ೨೭ ॥

ಸೈವ ಸರ್ವಾರ್ತಿಸಂಹರ್ತ್ರೀ ಸೈವ ಸಂದೇಹಕರ್ತರೀ ।
ತೇ ಮದ್ವಾಕ್ಯಾದ್ಭುವಂ ಗತ್ವಾ ಭೂಮ್ಯಾ ಚ ಸಹಿತೇ ಅಪಿ ॥ ೨೮ ॥

ಅದ್ಭಿಶ್ಚ ಸಹಿತಾಃ ಸರ್ವಾ ಗೌತಮೀಂ ಯಯುರಾಪಗಾಂ ।
ಭೂಮಿರಾಪಸ್ತಯೋರ್ವಾಕ್ಯಂ ಗೌತಮ್ಯೈ ಕ್ರಮಶಃ ಸ್ಫುಟಂ ॥ ೨೯ ॥

ಸರ್ವಂ ನಿವೇದಯಾಮಾಸುರ್ಯಥಾವೃತ್ತಂ ಪ್ರಣಮ್ಯ ತಾಂ ।
ದರಿದ್ರಾಯಾಶ್ಚ ಲಕ್ಷ್ಮ್ಯಾಶ್ಚ ವಾಕ್ಯಂ ಮಧ್ಯಸ್ಥವತ್ತದಾ ॥ ೩೦ ॥

ಶೃಣ್ವತ್ಸು ಲೋಕಪಾಲೇಷು ಶೃಣ್ವತ್ಯಾಂ ಭುವಿ ನಾರದ ।
ಶೃಣ್ವತೀಷ್ವಪ್ಸು ಸಾ ಗಂಗಾ ದರಿದ್ರಾಂ ವಾಕ್ಯಮಬ್ರವೀತ್ ।
ಸಂಪ್ರಶಸ್ಯ ತಥಾ ಲಕ್ಷ್ಮೀಂ ಗೌತಮೀ ವಾಕ್ಯಮಬ್ರವೀತ್ ॥ ೩೧ ॥

---

೨೭. ಅಲ್ಲಿಯೂ ಸಹ ನನ್ನ ಕಮಂಡಲುವಿನಿಂದ ಜನಿಸಿದ ಗಂಗೆಯು ಶ್ರೇಷ್ಠಳು, ಗಂಗೆಯಲ್ಲಿಯೂ ಗೌತಮೀನದಿಯು ಶ್ರೇಷ್ಠಳು. ಗೌತಮೀಬಳಿಗೆ ಹೋಗಿ. ದುಃಖನಾಶಕಳಾದ ಆ ಗೌತಮಿಯೇ ನಿರ್ಣಯವನ್ನು ಹೇಳಿ ನಿಮ್ಮ ಸಂದೇಹವನ್ನು ಹೋಗಲಾಡಿಸುವಳು ಎಂದೆನು.

೨೮-೩೦. ಆಮೇಲಾ ಲಕ್ಷ್ಮೀದರಿದ್ರವೇವತೆಯರು ಭೂಮಿ ಮತ್ತು ಜಲದೇವತೆಯರೊಡನೆ ಭೂಮಿಗೆ ಬಂದು ಗೌತಮಿಯ ಬಳಿಗೆ ಹೋಗಿ, ಗೌತಮಿಯನ್ನು ನಮಸ್ಕರಿಸಿ, ದರಿದ್ರೆಗೂ ಲಕ್ಷ್ಮಿಗೂ ನಡೆದ ವಾದವನ್ನು ಮಧ್ಯಸ್ಥರಂತೆ ಗೌತಮಿಗೆ ಹೇಳಿದರು.

೩೧. ಆಮೇಲೆ ಲೋಕಪಾಲಕರು, ಭೂಮಿ, ಜಲದೇವತೆ ಇವರೆಲ್ಲರೂ ಕೇಳುತ್ತಿದ್ದಂತೆ ಗೌತಮೀನದಿಯು ಲಕ್ಷ್ಮಿಯನ್ನು ಪ್ರಶಂಸಿಸುತ್ತಾ ದರಿದ್ರೆಗೆ ಹೀಗೆ ಹೇಳಿದಳು.

॥ ಗೌತಮ್ಯುವಾಚ ॥

ಬ್ರಹ್ಮಶ್ರೀಶ್ಚ ತಪಃಶ್ರೀಶ್ಚ ಯಜ್ಞಶ್ರೀಃ ಕೀರ್ತಿಸಂಜ್ಞಿತಾ ।
ಧನಶ್ರೀಶ್ಚ ಯಶಶ್ರೀಶ್ಚ ವಿದ್ಯಾ ಪ್ರಜ್ಞಾ ಸರಸ್ವತೀ ॥ ೩೨ ॥

ಭುಕ್ತಿಶ್ರೀಶ್ಚಾಥ ಮುಕ್ತಿಶ್ಚ ಸ್ಮೃತಿರ್ಲಜ್ಜಾ ಧೃತಿಃ ಕ್ಷಮಾ ।
ಸಿದ್ಧಿಸ್ತುಷ್ಟಿಸ್ತಥಾ ಪುಷ್ಟಿಃ ಶಾಂತಿರಾಪಸ್ತಥಾ ಮಹೀ ॥ ೩೩ ॥

ಅಹಂಶಕ್ತಿರಥೌಷಧ್ಯಃ ಶ್ರುತಿಃ ಶುದ್ಧಿರ್ವಿಭಾವರೀ ।
ದ್ಯೌರ್ಜ್ಯೋತ್ಸ್ನಾ ಆಶಿಷಃ ಸ್ವಸ್ತಿರ್ವ್ಯಾಪ್ತಿರ್ಮಾಯಾ ಉಷಾ ಶಿವಾ ॥ ೩೪ ॥

ಯತ್ಕಿಂಚಿದ್ವಿದ್ಯತೇ ಲೋಕೇ ಲಕ್ಷ್ಮ್ಯಾ ವ್ಯಾಪ್ತಂ ಚರಾಚರಂ ।
ಬ್ರಾಹ್ಮಣೇಷ್ವಥ ಧೀರೇಷು ಕ್ಷಮಾವತ್ಸ್ವಥ ಸಾಧುಷು ॥ ೩೫ ॥

ವಿದ್ಯಾಯುಕ್ತೇಷು ಚಾನ್ಯೇಷು ಭುಕ್ತಿಮುಕ್ತ್ಯನುಸಾರಿಷು ।
ಯದ್ಯದ್ರಮ್ಯಂ ಸುಂದರಂ ವಾ ತತ್ತಲ್ಲಕ್ಷ್ಮೀವಿಜೃಂಭಿತಂ ॥ ೩೬ ॥

---

೩೨. ಬ್ರಹ್ಮತೇಜಸ್ಸು, ತಪಶ್ಶಕ್ತಿ, ಯಜ್ಞಫಲ, ಕೀರ್ತಿ, ಧನ, ಯಶಸ್ಸು, ವಿದ್ಯೆ, ಪ್ರಜ್ಞೆ, ಸರಸ್ವತೀ ಇವೆಲ್ಲವೂ ಲಕ್ಷ್ಮಿಯ ಸ್ವರೂಪವೇ ಆಗಿದೆ.

೩೩. ಭೋಗಮೋಕ್ಷಗಳು, ಸ್ಮೃತಿ, ಲಜ್ಜೆ, ಧೈರ್ಯ, ಕ್ಷಮೆ, ಸಿದ್ಧಿ, ಸಂತೋಷ, ಪುಷ್ಟಿ, ಶಾಂತಿ, ಜಲ, ಭೂಮಿ ಇವೆಲ್ಲವೂ ಈ ಲಕ್ಷ್ಮಿಯ ಸ್ವರೂಪವೇ ಆಗಿದೆ.

೩೪. ನಾನು (ಗೌತಮಿ) ಶಕ್ತಿ, ಓಷಧಿಗಳು, ವೇದ, ಶುದ್ಧಿ, ರಾತ್ರಿ ಸ್ವರ್ಗ, ಬೆಳದಿಂಗಳು, ಆಶೀರ್ವಾದ, ಮಂಗಳ, ವ್ಯಾಪನೆ, ಮಾಯೆ, ಉಷೆ, ಪಾರ್ವತಿ ಇವರೆಲ್ಲರೂ ಲಕ್ಷ್ಮಿಯ ಸ್ವರೂಪರು, ಆದುದರಿಂದ ಲೋಕದಲ್ಲಿರುವ ಎಲ್ಲ ವಸ್ತುಗಳೂ ಈ ಲಕ್ಷ್ಮಿಯಿಂದ ವ್ಯಾಪಿಸಲ್ಪಟ್ಟಿರುವುವು.

೩೫–೩೬. ಬ್ರಾಹ್ಮಣರು, ಜ್ಞಾನಿಗಳು, ಕ್ಷಮಾಶೀಲರು, ಸಾಧುಗಳು ವಿದ್ಯಾವಂತರು, ಐಶ್ವರ್ಯವಂತರು, ಆಚಾರಶೀಲರು ಮೊದಲಾದವರಲ್ಲಿ ಇರುವ ರಮ್ಯವೂ ಸುಂದರವೂ ಆದಂತಹುದೆಲ್ಲವೂ ಲಕ್ಷ್ಮಿಯ ಮಹಿಮೆಯಾಗಿರುವುದು.

ಕಿಮತ್ರ ಬಹುನೋಕ್ತೇನ ಸರ್ವಂ ಲಕ್ಷ್ಮೀಮಯಂ ಜಗತ್ ।
ಯಸ್ಮಿನ್ಕಸ್ಮಿಂಶ್ಚ ಯತ್ಕಿಂಚಿದುತ್ಕೃಷ್ಟಂ ಪರಿದೃಶ್ಯತೇ ॥ ೩೭ ॥

ಲಕ್ಷ್ಮೀಮಯಂ ತು ತತ್ಸರ್ವಂ ತಯಾ ಹೀನಂ ನ ಕಿಂಚನ ।
ಅತ್ರೇಮಾಂ ಸುಂದರೀಂ ದೇವೀಂ ಸ್ಪರ್ಧಯಂತೀ ನ ಲಜ್ಜಸೇ ॥ ೩೮ ॥

ಗಚ್ಛ ಗಚ್ಛೇತಿ ತಾಂ ಗಂಗಾ ದರಿದ್ರಾಂ ವಾಕ್ಯಮಬ್ರವೀತ್ ।
ತತಃ ಪ್ರಭೃತಿ ಗಂಗಾಂಭೋ ದರಿದ್ರಾವೈರಕಾರ್ಯಭೂತ್ ॥ ೩೯ ॥

ತಾವದ್ದರಿದ್ರಾಭಿಭವೋ ಗಂಗಾ ಯಾವನ್ನ ಸೇವ್ಯತೇ ।
ತತಃ ಪ್ರಭೃತಿ ತತ್ತೀರ್ಥಮಲಕ್ಷ್ಮೀನಾಶನಂ ಶುಭಂ ॥ ೪೦ ॥

---

೩೭. ಹೆಚ್ಚು ಮಾತಿನಿಂದೇನು? ಜಗತ್ತೆಲ್ಲವೂ ಲಕ್ಷ್ಮೀಮಯವಾಗಿರುವುದು. ಯಾವಯಾವ ವಸ್ತುವಿನಲ್ಲಾದರೂ ಸಹ ಕಾಣುವ ಶ್ರೇಷ್ಠಭಾಗವೆಲ್ಲವೂ ಲಕ್ಷ್ಮೀರೂಪವಾದುದು, ಲಕ್ಷ್ಮಿಯಿಲ್ಲದ ವಸ್ತುವೇ ಇಲ್ಲ.

೩೮. ಹೀಗಿರಲು ಸುಂದರಿಯಾದೀ ಲಕ್ಷ್ಮೀದೇವಿಯನ್ನು ಸ್ಪರ್ಧಿಸುವುದಕ್ಕೆ ನಿನಗೆ ಲಜ್ಜೆಯಾಗುವುದಿಲ್ಲವೆ ? ಹೋಗು ಹೋಗು, ಎಂದು ಗಂಗೆಯು ದರಿದ್ರಾದೇವಿಗೆ ಹೇಳಿದಳು.

೩೯. ಆಮೊದಲುಗೊಂಡು ಗಂಗಾತೀರ್ಥವು ದಾರಿದ್ರ್ಯವನ್ನು ನಿವಾರಿಸುವಂತಹುದಾಯಿತು. ಗಂಗೆಯನ್ನು ಸೇವಿಸದೇ ಇರುವ ವರೆಗೆ ಮಾನವನಲ್ಲಿ ದಾರಿದ್ರ್ಯವಿರುವುದು, ಸೇವಿಸಿದ ಮೇಲೆ ಇರಲಾರದು.

೪೦. ಆ ಮೊದಲುಗೊಂಡು ಆ ತೀರ್ಥವು ಲಕ್ಷ್ಮಿತೀರ್ಥವೆಂದು ಪ್ರಸಿದ್ಧವಾಗಿ ದಾರಿದ್ರ್ಯವನ್ನು ಹೋಗಲಾಡಿಸುವಂತಹುದಾಯಿತು. ಆ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಐಶ್ವರ್ಯವಂತನೂ ಪುಣ್ಯವಂತನೂ ಆಗುವನು.

ತತ್ರ ಸ್ನಾನೇನ ದಾನೇನ ಲಕ್ಷ್ಮೀವಾನ್ಪುಣ್ಯವಾನ್ಭವೇತ್ ।
ತೀರ್ಥಾನಾಂ ಷಟ್ಸಹಸ್ರಾಣಿ ತಸ್ಮಿಂಸ್ತೀರ್ಥೇ ಮಹಾಮತೇ ।
ದೇವರ್ಷಿಮುನಿಜುಷ್ಟಾನಾಂ ಸರ್ವಸಿದ್ಧಿಪ್ರದಾಯಿನಾಂ ॥ ೪೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಲಕ್ಷ್ಮೀತೀರ್ಥಾದಿಷಟ್ಸಹಸ್ರತೀರ್ಥವರ್ಣನಂ ನಾಮ
ಸಪ್ತತ್ರಿಂಶದಧಿಕಶತತಮೋಽಧ್ಯಾಯಃ

---

೪೧. ಎಲೈ ನಾರದ ಆ ಲಕ್ಷ್ಮೀತೀರ್ಥದಲ್ಲಿ ಆರುಸಾವಿರ (6000) ತೀರ್ಥಗಳಿರುವುವು. ಆ ತೀರ್ಥಗಳನ್ನು ದೇವತೆಗಳು ದೇವಮುನಿಗಳು ಋಷಿಗಳು ಇವರೆಲ್ಲರೂ ಸೇವಿಸುವರು. ಇಷ್ಟಾರ್ಥಗಳೆಲ್ಲವನ್ನೂ ಆ ತೀರ್ಥಗಳುಂಟು ಮಾಡುವುವು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಲಕ್ಷ್ಮೀತೀರ್ಥವೇ ಮೊದಲಾದ ಆರುಸಾವಿರ
ತೀರ್ಥಗಳ ವರ್ಣನವೆಂಬ ನೂರಮೂವತ್ತೇಳನೆಯ
ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಅರವತ್ತೆಂಟನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಾತ್ರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಭಾನುತೀರ್ಥಮಿತಿ ಖ್ಯಾತಂ ಸರ್ವಸಿದ್ಧಿಕರಂ ನೃಣಾಂ ।
ತತ್ರೇದಂ ವೃತ್ತಮಾಖ್ಯಾಸ್ಯೇ ಮಹಾಪಾತಕನಾಶನಂ ॥ ೧ ॥

ಶರ್ಯಾತಿರಿತಿ ವಿಖ್ಯಾತೋ ರಾಜಾ ಪರಮಧಾರ್ಮಿಕಃ ।
ತಸ್ಯ ಭಾರ್ಯಾ ಸ್ಥವಿಷ್ಠೇತಿ ರೂಪೇಣಾಪ್ರತಿಮಾ ಭುವಿ ॥ ೨ ॥

ಮಧುಚ್ಛಂದಾ ಇತಿ ಖ್ಯಾತೋ ವೈಶ್ವಾಮಿತ್ರೋ ದ್ವಿಜೋತ್ತಮಃ ।
ಪುರೋಧಾಸ್ತಸ್ಯ ನೃಪತೇರ್ಬ್ರಹ್ಮರ್ಷಿಃ ಶಮಿನಾಂ ಪ್ರಭುಃ ॥ ೩ ॥

ನೂರಮೂವತ್ತೆಂಟನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಭಾನುತೀರ್ಥವೆಂಬ ಇಷ್ಟಾರ್ಥಗಳೆಲ್ಲವನ್ನೂ ಉಂಟುಮಾಡುವ ತೀರ್ಥವಿರುವುದು. ಆ ತೀರ್ಥದ ಪಾಪಪರಿಹಾರಿಯಾದ ಮಾಹಾತ್ಮ್ಯವನ್ನು ಹೇಳುವೆನು ಕೇಳು.

೨. ಹಿಂದೆ ಶರ್ಯಾತಿಯೆಂಬ ಮಹಾಧರ್ಮಾತ್ಮನಾದ ರಾಜನಿದ್ದನು, ಸ್ಥವಿಷ್ಠಾದೇವಿಯೆಂಬುವವಳು ಅವನ ರಾಣಿ, ಅವಳು ತುಂಬಾ ರೂಪವತಿಯಾಗಿದ್ದಳು.

೩. ಆ ರಾಜನಿಗೆ ವಿಶ್ವಾಮಿತ್ರನಮಗನೂ ಬ್ರಹ್ಮರ್ಷಿಯೂ ಜಿತೇಂದ್ರಿಯನೂ ಆದ ಮಧುಚ್ಛಂದನೆಂಬುವನು ಪುರೋಹಿತನಾಗಿದ್ದನು.

ದಿಶೋ ವಿಜೇತುಂ ಸ ಜಗಾಮ ರಾಜಾ
ಪುರೋಧಸಾ ತೇನ ನೃಪಪ್ರವೀರಃ ।
ಪುರೋಧಸಂ ಪ್ರಾಹ ಮಹಾನುಭಾವಂ
ಜಿತ್ವಾ ದಿಶಶ್ಚಾಧ್ವನಿ ಸಂನಿವಿಷ್ಟಃ ॥ ೪ ॥

ಪಪ್ರಚ್ಛೇದಂ ಕೇನ ಖೇದಂ ಗತೋಽಸಿ
ಹೇತುಂ ವದಸ್ವೇತಿ ಮಹಾನುಭಾವ ।
ತ್ವಮೇವ ರಾಜ್ಯೇ ಮಮ ಸರ್ವಮಾನ್ಯಃ
ಸಮಸ್ತವಿದ್ಯಾನಿರವದ್ಯಬೋಧಃ ॥ ೫ ॥

ವಿಧೂತಪಾಪಃ ಪರಿತಾಪಶೂನ್ಯಃ
ಕಿಮನ್ಯಚೇತಾ ಇವ ಲಕ್ಷ್ಯಸೇ ತ್ವಂ ।
ಜಿತೇಯಮುರ್ವೀ ವಿಜಿತಾ ನರೇಂದ್ರಾ
ಹರ್ಷಸ್ಯ ಹೇತೌ ಮಹತೀಹ ಜಾತೇ ॥ ೬ ॥

---

೪. ಒಂದುಸಾರಿ ಶರ್ಯಾತಿರಾಜನು ಪುರೋಹಿತನೊಡನೆ ದಿಗ್ವಿಜಯಕ್ಕಾಗಿ ಹೊರಟನು. ದಿಗ್ವಿಜಯವನ್ನು ಮಾಡಿ ದಾರಿಯಲ್ಲೊಂದು ಕಡೆ ಬೀಡುಬಿಟ್ಟು ವಿಶ್ರಮಿಸಿಕೊಳ್ಳುತ್ತಾ ಇದ್ದು ಪುರೋಹಿತನನ್ನು ಕುರಿತು,

೫. ರಾಜನು ಪ್ರಶ್ನಿಸಿದನು—ಓ ಬ್ರಾಹ್ಮಣೋತ್ತಮ, ಇದೇನು? ನೀನು ಹೀಗೆ ಪರಿತಪಿಸುತ್ತಿರುವೆ? ಕಾರಣವೇನು? ಈ ರಾಜ್ಯದಲ್ಲಿ ನೀನೇ ನನಗೆ ವಂದ್ಯನು, ಸಕಲ ವಿದ್ಯೆಗಳನ್ನೂ ಬಲ್ಲ ಮಹಾಜ್ಞಾನಿಯು ನೀನು.

೬. ಪುಣ್ಯಾತ್ಮನಾದ ನೀನು ಸಂತಸದಿಂದಿರಬೇಕು. ಭೂಮಿಯೆಲ್ಲವನ್ನೂ ನಾನು ಜಯಿಸಿರುವೆನು, ರಾಜರೆಲ್ಲರೂ ನನಗಂಕಿತರಾದರು. ಇಂತಹ ಸಂತೋಷಸಮಯದಲ್ಲಿ ನೀನು ಏನನ್ನೋ ಯೋಚಿಸುವಂತಿರುವೆಯಲ್ಲಾ? ಅದೇನು? ಹೇಳು.

ಕಿಂ ತ್ವಂ ಕೃಶೋ ಮೇ ವದ ಸತ್ಯಮೇವ
ದ್ವಿಜಾತಿವರ್ಯಾತಿಮಹಾನುಭಾವ ।
ಸಂಬೋಧ್ಯ ಶರ್ಯಾತಿಮುವಾಚ ವಿಪ್ರ-
ಶ್ಛಂದೋಮಧುಃ ಪ್ರೇಮಮಯೀಂ ಪ್ರಿಯೋಕ್ತಿಂ ॥ ೭ ॥

॥ ಮಧುಚ್ಛಂದಾ ಉವಾಚ ॥

ಶೃಣು ಭೂಪಾಲ ಮದ್ವಾಕ್ಯಂ ಭಾರ್ಯಯಾ ಯದುದೀರಿತಂ ।
ಸ್ಥಿತೇ ಯಾಮೇ ವಯಂ ಯಾಮೋ ಯಾಮಿನೀ ಚಾರ್ಧಗಾಮಿನೀ ॥ ೮ ॥

ಸ್ವಾಮಿನೀ ಚಾಸ್ಯ ದೇಹಸ್ಯ ಕಾಮಿನೀ ಮಾಂ ಪ್ರತೀಕ್ಷತೇ ।
ಸ್ಮೃತ್ವಾ ತತ್ಕಾಮಿನೀವಾಕ್ಯಂ ಶೋಷಂ ಯಾತಿ ಕಲೇವರಂ ।
ವಿಕಾರೇ ಸ್ಮರಸಂಜಾತೇ ಜೀವಾತುರ್ನಲಿನಾನನಾ ॥ ೯ ॥

॥ ಬ್ರಹ್ಮೋವಾಚ ॥

ವಿಹಸ್ಯ ಚಾಬ್ರವೀದ್ರಾಜಾ ಪುರೋಧಸಮರಿಂದಮಃ ॥ ೧೦ ॥

---

೭. ಮಹಾತ್ಮನಾದ ಓ ವಿಪ್ರೋತ್ತಮ, ನೀನು ಹೀಗೆ ಚಿಂತಿಸುತ್ತಾ ಕೃಶನಾಗಿರಲು ಕಾರಣವೇನು ? ನಿಜವನ್ನು ಹೇಳು ಎಂದನು. ಅದಕ್ಕೆ ಮಧುಚ್ಛಂದನು ಶರ್ಯಾತಿಯನ್ನು ಕುರಿತು ತನ್ನ ಪ್ರಿಯಪತ್ನಿಯು ನುಡಿದ ಪ್ರೇಮವಾಣಿಯನ್ನು ಹೀಗೆ ಹೇಳಿದನು.

೮. ಎಲೈ ರಾಜನೆ, ನನ್ನ ಕಾಂತೆಯು ಕತ್ತಲೆಯಾಗುವುದರೊಳಗೆ ಮನೆಗೆ ಬರಬೇಕೆಂದು ಹೇಳಿರುವಳು. ಈಗಾಗಲೇ ಅರ್ಧರಾತ್ರಿಯು ಕಳೆಯಿತು. ಅದಕ್ಕಾಗಿ ಚಿಂತಿಸುತ್ತಿರುವೆನು, ಈಗಲಾದರೂ ಊರಿಗೆ ಹೋಗೋಣ.

೯. ಅವಳು ಈ ನನ್ನ ದೇಹಕ್ಕೆ ಒಡತಿಯು. ಆಸೆಯಿಂದ ನನ್ನನ್ನು ಅವಳು ನಿರೀಕ್ಷಿಸುತ್ತಿರುವಳು. ಕಾಂತೆಯ ಆ ಮಾತನ್ನು ಚಿಂತಿಸುತ್ತಾ ನನ್ನ ಶರೀರವು ತಪಿಸುತ್ತಿರುವುದು. ಮನ್ಮಥವಿಕಾರಕ್ಕೆ ಕಾಂತೆಯೇ ಓಷಧಿಯು ಎಂದನು.

೧೦-೧೧. ಆಗ ಶರ್ಯಾತಿಯು ನಕ್ಕು ಓ ವಿಪ್ರೋತ್ತಮ, ನೀನು ನನಗೆ ಗುರುವು, ಮಿತ್ರನು. ಮೇಲಾಗಿ ನೀನು ಮಹಾಜ್ಞಾನಿಯು, ಇಂತಹ

॥ ರಾಜೋವಾಚ ॥

ತ್ವಂ ಗುರುರ್ಮಮ ಮಿತ್ರಂ ಚ ಕಿಮಾತ್ಮಾನಂ ವಿಡಂಬಸೇ ।
ಕಿಮನೇನ ಮಹಾಪ್ರಾಜ್ಞ ಮಮ ವಾಕ್ಯೇನ ಮಾನದ ।
ಕ್ಷಣವಿಧ್ವಂಸಿನಿ ಸುಖೇ ಕಾ ನಾಮಾಸ್ಥಾ ಮಹಾತ್ಮನಾಂ ॥ ೧೧ ॥

॥ ಬ್ರಹ್ಮೋವಾಚ ॥

ಏತದಾಕರ್ಣ್ಯ ಮತಿಮಾನ್ಮಧುಚ್ಛಂದಾ ವಚೋಽಬ್ರವೀತ್ ॥ ೧೨ ॥

॥ ಮಧುಚ್ಛಂದಾ ಉವಾಚ ॥

ಯತ್ರಾನುಕೂಲ್ಯಂ ದಂಪತ್ಯೋಸ್ತ್ರಿವರ್ಗಸ್ತತ್ರ ವರ್ಧತೇ ।
ನ ಚೇದಂ ದೂಷಣಂ ರಾಜನ್ಭೂಷಣಂ ಚಾತಿಮನ್ಯತಾಂ ॥ ೧೩ ॥

॥ ಬ್ರಹ್ಮೋವಾಚ ॥

ಆಜಗಾಮ ಸ್ವಕಂ ದೇಶಂ ಮಹತ್ಯಾ ಸೇನಯಾ ವೃತಃ ।
ಪರೀಕ್ಷಾರ್ಥಂ ಚ ತತ್ಪ್ರೇಮ ಪುರ್ಯಾಂ ವಾರ್ತಾಮುದೀರಿತತ್ ॥ ೧೪ ॥

ನಿನಗೆ ನಾನು ಹೇಳಬೇಕಾದುದೇನೂ ಇಲ್ಲ. ಅಸ್ಥಿರವಾದಂತಹ ಸಂಸಾರಸುಖದಲ್ಲಿ ನಿನ್ನಂತಹ ಮಹಾತ್ಮರಿಗೆ ಆಸೆಯಿರುವುದೆ? ಎನಲು,

೧೨. ರಾಜನ ಆ ಮಾತನ್ನು ಕೇಳಿ ಬುದ್ಧಿವಂತನಾದಾ ಮಧುಚ್ಛಂದನು—

೧೩. ಎಲೈ ರಾಜನೇ, ದಂಪತಿಗಳು ಪರಸ್ಪರ ಪ್ರೇಮದಿಂದಿರುವಲ್ಲಿ ಧರ್ಮಾರ್ಥಕಾಮಗಳು ಮೂರೂ ಸಿದ್ಧಿಸುವುವು. ಹಾಗೆ ಪ್ರೀತಿಯಿಂದಿರುವುದು ದೋಷವಲ್ಲ, ಅಲಂಕಾರವು ಎಂದನು.

೧೪. ಆಮೇಲೆ ರಾಜನು ದೊಡ್ಡಸೈನ್ಯದೊಡನೆ ತನ್ನ ದೇಶಕ್ಕೆ ತೆರಳಿದನು. ಪುರೋಹಿತಪತ್ನಿಯ ಪ್ರೇಮವನ್ನು ಪರೀಕ್ಷಿಸಲು ಅವನು ಪಟ್ಟಣದಲ್ಲಿ ಈ ವಾರ್ತೆಯನ್ನು ಹರಡಿಸಿದನು.

ದಿಶೋ ವಿಜೇತುಂ ಶರ್ಯಾತೌ ಯಾತೇ ರಾಕ್ಷಸಪುಂಗವಃ ।
ಹತ್ವಾ ರಸಾತಲಂ ಯಾತೋ ರಾಜಾನಂ ಸಪುರೋಧಸಂ ॥ ೧೫ ॥

ರಾಜ್ಞೋ ಭಾರ್ಯಾ ನಿಶ್ಚಯಾಯ ಪ್ರವೃತ್ತಾ ಮುನಿಸತ್ತಮ ।
ವಾರ್ತಾಂ ಶ್ರುತ್ವಾ ದೂತಮುಖಾನ್ಮಧುಚ್ಛಂದಃಪ್ರಿಯಾ ಪುನಃ ॥ ೧೬ ॥

ತದೈವಾಭೂದ್ಗತಪ್ರಾಣಾ ತದ್ವಿಚಿತ್ರಮಿವಾಭವತ್ ।
ತಸ್ಯಾ ವೃತ್ತಂ ತು ತೇ ದೃಷ್ಟ್ವಾ ದೂತಾ ರಾಜ್ಞೇ ನ್ಯವೇದಯನ್ ॥ ೧೭ ॥

ಯತ್ಕೃತಂ ರಾಜಪತ್ನೀಭಿಃ ಪ್ರಿಯಯಾ ಚ ಪುರೋಧಸಃ ।
ವಿಸ್ಮಿತೋ ದುಃಖಿತೋ ರಾಜಾ ಪುನರ್ದೂತಾನಭಾಷತ ॥ ೧೮ ॥

॥ ರಾಜೋವಾಚ ॥

ಶೀಘ್ರಂ ಗಚ್ಛಂತು ಹೇ ದೂತಾ ಬ್ರಾಹ್ಮಣ್ಯಾ ಯತ್ಕಲೇವರಂ ।
ರಕ್ಷಂತು ವಾರ್ತಾಂ ಕುರುತ ರಾಜಾಗಂತಾ ಪುರೋಧಸಾ ॥ ೧೯ ॥

---

೧೫. ಶರ್ಯಾತಿರಾಜನು ದಿಗ್ವಿಜಯಕ್ಕೆ ಹೊರಟಿರಲು ಮಧ್ಯದಲ್ಲಿ ಓರ್ವ ರಾಕ್ಷಸವೀರನು ಬಂದು ರಾಜನನ್ನೂ ಪುರೋಹಿತನನ್ನೂ ಕೊಂದು ಪಾತಾಳಕ್ಕೆ ಹೋದನು ಎಂಬ ಸುಳ್ಳುಸಮಾಚಾರವನ್ನು ಹರಡಿದನು.

೧೬. ರಾಣಿಯು ಆ ವಾರ್ತೆಯನ್ನು ಕೇಳಿ ಅದು ನಿಜವಾದುದೇ? ಎಂದು ನಿಶ್ಚಯಿಸಲು ಪ್ರಯತ್ನಿಸಿದಳು. ಆದರೆ ಮಧುಚ್ಛಂದನ ಹೆಂಡತಿಯು ಆ ಸಮಾಚಾರವನ್ನು ಕೇಳಿದೊಡನೇ ಪ್ರಾಣವನ್ನು ಬಿಟ್ಟಳು, ಇದು ತುಂಬಾ ಆಶ್ಚರ್ಯಕರವಾದುದಾಯಿತು.

೧೭. ಅದನ್ನು ನೋಡಿ ದೂತರು ರಾಜನಿಗೆ ರಾಜಪತ್ನಿಯರ ಕಾರ್ಯವನ್ನೂ, ಮಧುಚ್ಛಂದನ ಪ್ರಿಯೆಯು ಪ್ರಾಣಬಿಟ್ಟುದನ್ನೂ ನಿವೇದಿಸಿದರು.

೧೮. ಅದನ್ನು ಕೇಳಿ ರಾಜನು ಆಶ್ಚರ್ಯದಿಂದಲೂ ದುಃಖದಿಂದಲೂ ಪುನಃ ದೂತರನ್ನು ಕುರಿತು,

೧೯. ಎಲೈ ದೂತರೇ, ನೀವು ಹೋಗಿ ಮೊದಲು ಆ ಬ್ರಾಹ್ಮಣಪತ್ನಿಯ ಶರೀರವನ್ನು ರಕ್ಷಿಸಿ ಮತ್ತು ರಾಜನು ಪುರೋಹಿತನೊಡನೆ ಬರುತ್ತಿರುವನೆಂದು ಸಮಾಚಾರವನ್ನು ಹರಡಿರಿ ಎಂದನು.

॥ ಬ್ರಹ್ಮೋವಾಚ

ಇತಿ ಚಿಂತಾತುರೇ ರಾಜ್ಞಿ ವಾಗುವಾಚಾಶರೀರಿಣೀ ॥ ೨೦ ॥

॥ ಆಕಾಶವಾಗುವಾಚ ॥

ವಿಧಾಸ್ಯತ್ಯಖಿಲಂ ಗಂಗಾ ರಾಜಂಸ್ತವ ಸಮೀಹಿತಂ ।
ಸರ್ವಾಭಿಷಂಗಶಮನೀ ಪಾವನೀ ಭುವಿ ಗೌತಮೀ ॥ ೨೧ ॥

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ಸ ಶರ್ಯಾತಿರ್ಗೌತಮೀತಟಮಾಶ್ರಿತಃ ।
ಸರ್ವಾಭಿಷಂಗಶಮನೀ ಪಾವನೀ ಭುವಿ ಗೌತಮೀ ॥ ೨೧ ॥

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ಸ ಶರ್ಯಾತಿರ್ಗೌತಮೀತಟಮಾಶ್ರಿತಃ ।
ಬ್ರಾಹ್ಮಣೇಭ್ಯೋ ಧನಂ ದತ್ತ್ವಾ ತರ್ಪಯಿತ್ವಾ ಪಿತೄನ್ದ್ವಿಜಾನ್ ॥ ೨೨ ॥

ಪುರೋಹಿತಂ ದ್ವಿಜಶ್ರೇಷ್ಠಂ ಪ್ರೇಷಯಿತ್ವಾ ಧನಾನ್ವಿತಂ ।
ಅನ್ಯತ್ರ ತೀರ್ಥೇ ಸಾರ್ಥೇಷು ದಾನಂ ದೇಹಿ ಪ್ರಯತ್ನತಃ ॥ ೨೩ ॥

---

೨೦. ಹೀಗೆ ರಾಜನು ಚಿಂತಿಸುತ್ತಿರಲು ಅಶರೀರವಾಣಿಯು ಹೀಗೆ ಕೇಳಿಸಿತು.

೨೧. ಎಲೈ ರಾಜನೇ, ಗೌತಮೀನದಿಯು ನಿನ್ನಿಷ್ಟಾರ್ಥಗಳನ್ನು ಸಿದ್ಧಿಸಿಕೊಡುವುದು. ಸಕಲದುಃಖಗಳನ್ನೂ ಹೋಗಲಾಡಿಸುವುದರಲ್ಲಿ ಗಂಗೆಯಂತಹ ಪುಣ್ಯನದಿಯು ಬೇರೆ ಇಲ್ಲ.

೨೨. ಆಮೇಲೆ ಶರ್ಯಾತಿಯು ಗಂಗಾತೀರಕ್ಕೆ ತೆರಳಿ ಅಲ್ಲಿ ಬ್ರಾಹ್ಮಣರಿಗೆ ದಾನಮಾಡಿದನು, ಪಿತೃತರ್ಪಣವನ್ನು ಮಾಡಿದನು, ಬ್ರಾಹ್ಮಣಭೋಜನವನ್ನು ಮಾಡಿಸಿದನು.

೨೩. ನಂತರ ಪುರೋಹಿತನಾದ ಮಧುಚ್ಛಂದನಿಗೆ ಧನವನ್ನು ಕೊಟ್ಟು ಹೋಗು. ಬೇರೆ ತೀರ್ಥಗಳಲ್ಲಿ ಶ್ರದ್ಧೆಯಿಂದ ದಾನಮಾಡು ಎಂದು ಹೇಳಿಕಳುಹಿದನು. ರಾಜನ ಈ ಕಾರ್ಯದ ಮರ್ಮವು ಪುರೋಹಿತನಿಗೆ ತಿಳಿಯಲಿಲ್ಲ.

ಏತತ್ಸರ್ವಂ ನ ಜಾನಾತಿ ರಾಜ್ಞಃ ಕೃತ್ಯಂ ಪುರೋಹಿತಃ ।
ಗತೇ ತಸ್ಮಿನ್ಗುರೌ ರಾಜಾ ವೈಶ್ವಾಮಿತ್ರೇ ಮಹಾತ್ಮನಿ ॥ ೨೪ ॥

ಸರ್ವಂ ಬಲಂ ಪ್ರೇಷಯಿತ್ವಾ ಗಂಗಾತೀರೇಽಗ್ನಿಮಾವಿಶತ್ ।
ಇತ್ಯುಕ್ತ್ವಾ ಸ ತು ರಾಜೇಂದ್ರೋ ಗಂಗಾ ಭಾನುಂ ಸುರಾನಪಿ ॥ ೨೫ ॥

ಯದಿ ದತ್ತಂ ಯದಿ ಹುತಂ ಯದಿ ತ್ರಾತಾ ಪ್ರಜಾ ಮಯಾ ।
ತೇನ ಸತ್ಯೇನ ಸಾ ಸಾಧ್ವೀ ಮಮಾಯುಷ್ಯೇಣ ಜೀವತು ॥ ೨೬ ॥

ಇತ್ಯುಕ್ತ್ವಾಗ್ನೌ ಪ್ರವಿಷ್ಟೇ ತು ಶರ್ಯಾತೌ ನೃಪಸತ್ತಮೇ ।
ತದೈವ ಜೀವಿತಾ ಭಾರ್ಯಾ ರಾಜ್ಞಸ್ತಸ್ಯ ಪುರೋಧಸಃ ॥ ೨೭ ॥

ಅಗ್ನಿಪ್ರವಿಷ್ಟಂ ರಾಜಾನಂ ಶ್ರುತ್ವಾ ವಿಸ್ಮಯಕಾರಣಂ ।
ಪತಿವ್ರತಾಂ ತಥಾ ಭಾರ್ಯಾಂ ಮೃತಾಂ ಜೀವಾನ್ವಿತಾಂ ಪುನಃ ॥ ೨೮ ॥

---

೨೪. ಪುರೋಹಿತನೂ ಮಹಾತ್ಮನೂ ಆದ ಮಧುಚ್ಛಂದನು ಹೊರಟು ಹೋದಮೇಲೆ ರಾಜನು ತನ್ನ ಸೈನ್ಯವನ್ನೆಲ್ಲಾ ಕಳುಹಿ ಗಂಗಾತೀರದಲ್ಲಿ ಅಗ್ನಿ ಪ್ರವೇಶಮಾಡಲು ಸಿದ್ಧನಾದನು.

೨೫–೨೬. ಗಂಗಾದೇವಿ, ಸೂರ್ಯ, ದೇವತೆಗಳನ್ನು ಕುರಿತು ರಾಜನು-ನಾನು ದಾನಮಾಡಿದುದು ಯಜ್ಞಮಾಡಿದುದೂ, ಪ್ರಜಾಪಾಲನಮಾಡಿದುದೂ ನಿಜವಾದರೆ ಅವೆಲ್ಲವುಗಳ ಪುಣ್ಯದಿಂದ ಆ ಪುರೋಹಿತಪತ್ನಿಯಾದ ಸಾಧ್ವಿಯು ನನ್ನ ಆಯುಸ್ಸಿನಿಂದ ಬದುಕಲಿ ಎಂದು ಅಗ್ನಿಯನ್ನು ಪ್ರವೇಶಿಸಿದನು.

೨೭. ಹೀಗೆ ಹೇಳಿ ಅಗ್ನಿಯನ್ನು ಶರ್ಯಾತಿಯು ಪ್ರವೇಶಿಸಿದೊಡನೆಯೇ ಅವನು ಪುರೋಹಿತನ ಪತ್ನಿಯು ಪುನಃ ಬದುಕಿದರು.

೨೮-೨೯. ಆಮೇಲೆ ರಾಜಪುರೋಹಿತನಾದ ಮಧುಚ್ಛಂದನಿಗೆ ಎಲ್ಲವೂ ತಿಳಿಯಿತು. ಪತ್ನಿಯು ತನ್ನ ಮರಣವಾರ್ತೆಯಿಂದ ಸತ್ತುದು, ರಾಜನು ಅದಕ್ಕಾಗಿ ಅಗ್ನಿಪ್ರವೇಶಮಾಡಿದುದು, ಪುನಃ ಪತ್ನಿಯು ಬದುಕಿದುದು, ಇದೆಲ್ಲವೂ ಅವನಿಗೆ ತಿಳಿಯಿತು. ಅನಂತರ ಅವನು ತಾನು ಮಾಡಬೇಕಾದುದನ್ನು ಹೀಗೆ ನಿಶ್ಚಯಿಸಿದನು.

ತದರ್ಥಂ ಚಾಪಿ ರಾಜಾನಂ ತ್ಯಕ್ತ್ವಾತ್ಮಾನಂ ವಿಶೇಷತಃ ।
ಆತ್ಮಾನಶ್ಚ ಪುನಃ ಕೃತ್ಯಮಸ್ಮರನ್ನೃಪತೇರ್ಗುರುಃ ॥ ೨೯ ॥

ಅಹಮುಷ್ಯಗ್ನಿಮಾವೇಕ್ಷ್ಯೇ ಉತ ಯಾಸ್ಯೇ ಪ್ರಿಯಾಂತಿಕಂ ।
ಅಥವೇಹ ತಪಸ್ತಪ್ಸ್ಯೇ ತತೋ ನಿಶ್ಚಯವಾನ್ದ್ವಿಜಃ ॥ ೩೦ ॥

ಏತದೇವಾತ್ಮನಃ ಕೃತ್ಯಂ ಮನ್ಯೇ ಸುಕೃತಮೇವ ಚ ।
ಜೀವಯಾಮಿ ಚ ರಾಜಾನಂ ತತೋ ಯಾಮಿ ಪ್ರಿಯಾಂ ಪುನಃ ॥ ೩೧ ॥

ಏತದೇವ ಶುಭಂ ಮೇ ಸ್ಯಾತ್ತತಸ್ತುಷ್ಟಾವ ಭಾಸ್ಕರಂ ।
ನ ಹ್ಯನ್ಯಃ ಕೋಽಪಿ ದೇವೋಽಸ್ತಿ ಸರ್ವಾಭೀಷ್ಟಪ್ರದೋ ರವೇಃ ॥ ೩೨ ॥

॥ ಮಧುಚ್ಛಂದಾ ಉವಾಚ ॥

ನಮೋಽಸ್ತು ತಸ್ಮೈ ಸೂರ್ಯಾಯ ಮುಕ್ತಯೇಽಮಿತತೇಜಸೇ ।
ಛಂದೋಮಯಾಯ ದೇವಾಯ ಓಂಕಾರಾರ್ಥಾಯ ತೇ ನಮಃ ॥ ೩೩ ॥

---

೩೦. ನಾನೂ ಅಗ್ನಿಯನ್ನು ಪ್ರವೇಶಿಸಲೆ? ಅಥವಾ ಕಾಂತೆಯ ಬಳಿಗೆ ಹೋಗಲೆ? ಇಲ್ಲವೆ ಇಲ್ಲಿಯೇ ತಪಸ್ಸನ್ನು ಆಚರಿಸಲೇ?

೩೧. ಇದಾವುದೂ ಸರಿಯಲ್ಲ, ಇದೇ ನಾನು ಮಾಡಬೇಕಾದ ಕಾರ್ಯವು ಮೊದಲು ರಾಜನನ್ನು ಬದುಕಿಸುವೆನು. ಆಮೇಲೆ ಕಾಂತೆಯ ಬಳಿಗೆ ಹೋಗುವೆನು.

೩೨. ಹಾಗೆ ಮಾಡಿದರೇ ನ್ಯಾಯವಾಗುವುದು ಎಂದು ನಿಶ್ಚಯಿಸಿ ಆ ಮಧುಚ್ಛಂದನು ಆಮೇಲೆ ಭಾನುವನ್ನು ಭಕ್ತಿಯಿಂದ ಸ್ತುತಿಸಿದನು. ಇಷ್ಟಾರ್ಥಗಳನ್ನನುಗ್ರಹಿಸುವುದರಲ್ಲಿ ಭಾಸ್ಕರನಂತಹ ಮತ್ತೊಬ್ಬದೇವನಿಲ್ಲ.

೩೩. ಮಹಾತೇಜಸ್ವಿಯೂ ಮುಕ್ತಿಸ್ವರೂಪನೂ ಆದ ಸೂರ್ಯನಿಗೆ ನಮಸ್ಕಾರವು. ವೇದಸ್ವರೂಪನೂ ಓಂಕಾರಸ್ವರೂಪನೂ ಜ್ಞಾನಜ್ಯೋತಿಸ್ವರೂಪನೂ ಆದ ಭಾಸ್ಕರನಿಗೆ ನಮಸ್ಕಾರವು.

ವಿರೂಪಾಯ ಸುರೂಪಾಯ ತ್ರಿಗುಣಾಯ ತ್ರಿಮೂರ್ತಯೇ ।
ಸ್ಥಿತ್ಯುತ್ಪತ್ತಿವಿನಾಶಾನಾಂ ಹೇತವೇ ಪ್ರಭವಿಷ್ಣವೇ ॥ ೩೪ ॥

॥ ಬ್ರಹ್ಮೋವಾಚ ॥

ತತಃ ಪ್ರಸನ್ನಃ ಸೂರ್ಯೋಽಭೂದ್ವರಯಸ್ವೇತ್ಯಭಾಷತ ॥ ೩೫ ॥

॥ ಮಧುಚ್ಛಂದಾ ಉವಾಚ ॥

ರಾಜಾನಂ ದೇಹಿ ದೇವೇಶ ಭಾರ್ಯಾಂ ಚ ಪ್ರಿಯವಾದಿನೀಂ ।
ಆತ್ಮನಶ್ಚ ಶುಭಾನ್ಪುತ್ರಾನ್ರಾಜ್ಞಶ್ಚೈವ ಶುಭಾನ್ವರಾನ್ ॥ ೩೬ ॥

॥ ಬ್ರಹ್ಮೋವಾಚ ॥

ತತಃ ಪ್ರಾದಾಜ್ಜಗನ್ನಾಥಃ ಶರ್ಯಾತಿಂ ರತ್ನಭೂಷಿತಂ ।
ತಾಂ ಚ ಭಾರ್ಯಾಂ ವರಾನನ್ಯಾನ್ಸರ್ವಂ ಕ್ಷೇಮಮಯಂ ತಥಾ ॥ ೩೭ ॥

---

೩೪. ತೀಕ್ಷ್ಣಸ್ವರೂಪನೂ ಸುಂದರರೂಪನೂ ಆದ ದೇವನಿಗೆ ನಮಸ್ಕಾರವು. ಸತ್ತ್ವರಜಸ್ತಮೋಗುಣಸ್ವರೂಪನಾದ ಸೂರ್ಯನಿಗೆ ನಮಸ್ಕಾರವು. ಬ್ರಹ್ಮವಿಷ್ಣುಮಹೇಶ್ವರರೂಪದಿಂದ ಸೃಷ್ಟಿಸ್ಥಿತಿಲಯಗಳನ್ನು ಮಾಡುವಂತಹ ಸರ್ವೇಶ್ವರನಿಗೆ ನಮಸ್ಕಾರವು ಎಂದು ಸ್ತುತಿಸಲು,

೩೫. ಆಗ ಸೂರ್ಯನು ಪ್ರಸನ್ನನಾಗಿ ಮಧುಚ್ಛಂದನಿಗೆ ವರವನ್ನು ಕೇಳು ಎಂದು ಹೇಳಿದನು.

೩೬. ಅದಕ್ಕೆ ಮಧುಚ್ಛಂದನು ಓ ದೇವದೇವ, ನನ್ನ ರಾಜನನ್ನು ಬದುಕಿಸಿಕೊಡು, ನನ್ನ ಪ್ರಿಯಪತ್ನಿಯು ಪುನಃ ಲಭಿಸುವಂತೆ ಅನುಗ್ರಹಿಸು, ಸತ್ಪುತ್ರರು ಜನಿಸುವಂತೆ ವರವನ್ನು ಕೊಡು, ರಾಜನಿಗೂ ಶುಭವರಗಳನ್ನನುಗ್ರಹಿಸು ಎಂದು ಪ್ರಾರ್ಥಿಸಿದನು.

೩೭. ಆಗ ಸರ್ವೇಶ್ವರನಾದ ಸೂರ್ಯನು ರಾಜನನ್ನು ಬದುಕಿಸಿಕೊಟ್ಟನು. ಪತ್ನಿಯೂ ಲಭಿಸುವಂತೆ ಮಾಡಿದನು. ಎಲ್ಲವೂ ಸುಖಮಯವಾಯಿತು ಮಿಕ್ಕವರಗಳನ್ನೂ ಸೂರ್ಯನು ಅನುಗ್ರಹಿಸಿದನು.

ತತೋ ಯಾತಃ ಪ್ರಿಯಾವಿಷ್ಟಃ ಪ್ರೀತೇನ ಚ ಪುರೋಧಸಾ ।
ಯಯೌ ಸುಖೀ ಸ್ವಕಂ ದೇಶಂ ತತ್ತು ತೀರ್ಥಂ ಶುಭಂ ಸ್ಮೃತಂ ॥ ೩೮ ॥

ತತ್ರ ತ್ರೀಣಿ ಸಹಸ್ರಾಣಿ ತೀರ್ಥಾನಿ ಗುಣವಂತಿ ಚ ।
ತತಃ ಪ್ರಭೃತಿ ತತ್ತೀರ್ಥಂ ಭಾನುತೀರ್ಥಮುದಾಹೃತಂ ॥ ೩೯ ॥

ಮೃತಸಂಜೀವನಂ ಚೈವ ಶಾರ್ಯಾತಂ ಚೇತಿ ವಿಶ್ರುತಂ ।
ಮಾಧುಚ್ಛಂದಸಮಾಖ್ಯಾತಂ ಸ್ಮರಣಾತ್ಪಾಪನುನ್ಮನೇ ॥ ೪೦ ॥

ತೇಷು ಸ್ನಾನಂ ಚ ದಾನಂ ಚ ಸರ್ವಕ್ರತುಫಲಪ್ರದಂ ।
ಮೃತಸಂಜೀವನಂ ತತ್ಸ್ಯಾದಾಯುರಾರೋಗ್ಯವರ್ಧನಂ ॥ ೪೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಭಾನ್ವಾದಿತ್ರಿಸಹಸ್ರತೀರ್ಥವರ್ಣನಂ ನಾಮಾ-ಷ್ಟಾತ್ರಿಂಶದಧಿಕಶತತಮೋಽಧ್ಯಾಯಃ

---

೩೮. ಆಮೇಲೆ ಶರ್ಯಾತಿರಾಜನು ಪತ್ನಿಯೊಡಗೂಡಿದ ಪುರೋಹಿತನೊಡನೆ ಸಂತೋಷದಿಂದ ತನ್ನ ನಗರಕ್ಕೆ ತೆರಳಿದನು. ಅಂದಿನಿಂದ ಆ ತೀರ್ಥವು ಪ್ರಸಿದ್ಧವಾಯಿತು.

೩೯-೪೧. ಅಮೊದಲುಗೊಂಡು ಆ ತೀರ್ಥವು ಭಾನುತೀರ್ಥವೆಂದೂ ಮೃತಸಂಜೀವನ (ಸತ್ತವರನ್ನು ಬದುಕಿಸುವುದು) ವೆಂದೂ, ಶರ್ಯಾತಿತೀರ್ಥವೆಂದೂ, ಮಾಧುಚ್ಛಂದಸತೀರ್ಥವೆಂದೂ ಪ್ರಸಿದ್ಧವಾಯಿತು. ಆ ತೀರ್ಥವನ್ನು ಸ್ಮರಿಸಿದರೆ ಪಾಪಗಳೆಲ್ಲವೂ ಸಂಪೂರ್ಣವಾಗಿ ನಾಶವಾಗುವುವು. ಆ ತೀರ್ಥದಲ್ಲಿ ಮೂರು ಸಾವಿರ (3000) ತೀರ್ಥಗಳಿರುವುವು, ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಎಲ್ಲ ಯಾಗಗಳ ಫಲವೂ ಲಭಿಸುವುದು. ಮೃತಸಂಜೀವನ ತೀರ್ಥವು ಆಯುಸ್ಸು ಆರೋಗ್ಯಗಳನ್ನು ವೃದ್ಧಿಮಾಡುವುದು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಭಾನುತೀರ್ಥವರ್ಣನವೆಂಬ ನೂರಮೂವತ್ತೆಂಟನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಅರವತ್ತೊಂಭತ್ತನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಏಕೋನಚತ್ವಾರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಖಡ್ಗತೀರ್ಥಮಿತಿ ಖ್ಯಾತಂ ಗೌತಮ್ಯಾ ಉತ್ತರೇ ತಟೇ ।
ತತ್ರ ಸ್ನಾನೇನ ದಾನೇನ ಮುಕ್ತಿಭಾಗೀ ಭವೇನ್ನರಃ ॥ ೧ ॥

ತತ್ರ ವೃತ್ತಂ ಪ್ರವಕ್ಷ್ಯಾಮಿ ಶೃಣು ನಾರದ ಯತ್ನತಃ ।
ಪೈಲೂಷ ಇತಿ ವಿಖ್ಯಾತಃ ಕವಷಸ್ಯ ಸುತೋ ದ್ವಿಜಃ ॥ ೨ ॥

ಕುಟುಂಬಭಾರಾತ್ಪರಿತೋ ಹ್ಯರ್ಥಾರ್ಥೀ ಪರಿಧಾವತಿ ।
ನ ಕಿಮಪ್ಯಾಸಸಾದಾಸೌ ತತೋ ವೈರಾಗ್ಯಮಾಸ್ಥಿತಃ ॥ ೩ ॥

ನೂರಮುವತ್ತೊಂಭತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಗೌತಮೀನದಿಯ ಉತ್ತರತೀರದಲ್ಲಿ ಖಡ್ಗತೀರ್ಥವೆಂಬ ತೀರ್ಥವು ಇರುವುದು. ಆ ತೀರ್ಥದಲ್ಲಿ ಸ್ನಾನಮಾಡಿದವನು ಮುಕ್ತಿಯನ್ನೈದುವನು. ಆ ತೀರ್ಥದ ಮಾಹಾತ್ಮ್ಯವನ್ನು ಹೇಳುವೆನು. ಶ್ರದ್ಧೆಯಿಂದ ಕೇಳು.

೨-೩. ಪೈಲೂಷನೆಂಬ ಬ್ರಾಹ್ಮಣನಿದ್ದನು. ಅವನು ಕವಷಮುನಿಯ ಮಗನು. ಸಂಸಾರತಾಪತ್ರಯದಿಂದ ಆ ಕವಷನು ಧನವನ್ನು ಸಂಪಾದಿಸಲು ಊರೂರು ಅಲೆದನು. ಆದರೂ ಅವನಿಗೆ ಏನೂ ಲಭಿಸಲಿಲ್ಲ. ಅದರಿಂದ ಆ ಕವಷನಿಗೆ ನಿರಾಶೆಯಿಂದ ವೈರಾಗ್ಯವುಂಟಾಯಿತು.

ಅತ್ಯಂತವಿಮುಖೇ ದೈವೇ ವ್ಯರ್ಥೀಭೂತೇ ತು ಪೌರುಷೇ ।
ನ ವೈರಾಗ್ಯಾದನ್ಯದಸ್ತಿ ಪಂಡಿತಸ್ಯಾವಲಂಬನಂ ॥ ೪ ॥

ಇತಿ ಸಂಚಿಂತಯಾಮಾಸ ತದ್ವ್ಯಸೌ ನಿಃಶ್ವಸನ್ಮುಹುಃ ।
ಕ್ರಮಾಗತಂ ಧನಂ ನಾಸ್ತಿ ಪೋಷ್ಯಾಶ್ಚ ಬಹವೋ ಮಮ ॥ ೫ ॥

ಮಾನೀ ಚಾತ್ಮಾ ನ ಕೃಷ್ಯಾರ್ಹೋ ಹಾ ಧಿಗ್ದುರ್ದೈವಚೇಷ್ಟಿತಂ ।
ಸ ಕದಾಚಿದ್ವೃತ್ತಿಯುತೋ ವೃತ್ತಿಭಿಃ ಪರಿವರ್ತಯತ್ ॥ ೬ ॥

ನ ಲೇಭೇ ತದ್ಧನಂ ವೃತ್ತೇರ್ವಿರಾಗಮಗಮತ್ತದಾ ।
ಸೇವಾ ನಿಷಿದ್ಧಾ ಯಾ ಕಾಚಿದ್ಗಹನಾ ದುಷ್ಕರಂ ತಪಃ ॥ ೭ ॥

ಬಲಾದಾಕರ್ಷತೀಯಂ ಮಾಂ ತೃಷ್ಣಾ ಸರ್ವತ್ರ ದುಷ್ಕೃತೇ ।
ತ್ವಯ್ಯಾಪಕೃತಮಜ್ಞಾನಾತ್ತಸ್ಮಾತ್ತೃಷ್ಣೇ ನಮೋಽಸ್ತು ತೇ ॥ ೮ ॥

---

೪. ಅದೃಷ್ಟವು ಕೆಟ್ಟದಾಗಿದ್ದು ಪ್ರಯತ್ನವೆಲ್ಲವೂ ವ್ಯರ್ಥವಾದರೆ ಪಂಡಿತನಿಗೆ ವೈರಾಗ್ಯವೇ ಅವಲಂಬನವು.

೫. ಕುಲಕ್ರಮದಿಂದ ಬಂದ ಆಸ್ತಿಯು ಇಲ್ಲ, ಅನೇಕಜನಗಳನ್ನು ಸಲಹಬೇಕಾಗಿದೆ, ಕೆಟ್ಟದಾರಿಯಿಂದ ಸಂಪಾದಿಸಲು ಆತ್ಮಸಮ್ಮತಿಯಿಲ್ಲ, ಕಷ್ಟವನ್ನು ಸಹಿಸಲಾರೆ, ಅಯ್ಯೋ !! ಏನುಮಾಡಲಿ ? ದುರದೃಷ್ಟಶಾಲಿಯಾದ ನನಗೆ ಧಿಕ್ಕಾರವು ಎಂದು ದುಃಖಿಸಿದನು.

೬. ಆಮೇಲವನು ಧನಸಂಪಾದನೆಗಾಗಿ ವ್ಯಾಪಾರವನ್ನು ಮಾಡಿದನು. ಅದರಿಂದ ನಷ್ಟವಾಯಿತೇ ವಿನಾ ಸಂಪಾದನೆಯಾಗಲಿಲ್ಲ. ಅದರಿಂದ ಮತ್ತೂ ವೈರಾಗ್ಯಹೊಂದಿದನು.

೭-೮. ಸೇವೆಯನ್ನು ಮಾಡಬಾರದು, ಅಲ್ಲದೆ ಅದು ಕಷ್ಟತರವಾದುದು. ಸೇವೆಯೊಂದು ತಪಸ್ಸೆಂದೇ ಹೇಳಬಹುದು. ಆದರೂ ಆಸೆಯೆಂಬುದು ನನ್ನನ್ನು ಎಳೆಯುತ್ತಿದೆ. ಎಲೌ ಆಸೆಯೆ, ನಿನ್ನಿಂದ ನನಗೆ ತುಂಬಾ ಅಪಕಾರವಾಗಿರುವುದು. ನಿನಗೆ ದೂರದಲ್ಲಿಯೇ ನಮಸ್ಕಾರವು.

ಏವಂ ವಿಚಿಂತ್ಯ ಮೇಧಾವೀ ತೃಷ್ಣಾಚ್ಛೇದಾಯ ಕಿಂ ಭವೇತ್ ।
ಇತ್ಯಾಲೋಚ್ಯ ಸ ಶೈಲೂಷಃ ಪಿತರಂ ವಾಕ್ಯಮಬ್ರವೀತ್ ॥ ೯ ॥

॥ ಶೈಲೂಷ ಉವಾಚ ॥

ಜ್ಞಾನಾಸಿನಾ ಕ್ರೋಧಲೋಭೌ ಸಂಸೃತಿಂ ಚಾತಿದುಸ್ತರಾಂ ।
ಛೇತ್ತುಮಿಚ್ಛಾಮಿ ಕೇನ ಹೇ ತಾತ ತಮುಪಾಯಂ ವದ ಪ್ರಭೋ ॥ ೧೦ ॥

॥ ಕವಷ ಉವಾಚ ॥

ಈಶ್ವರಾಜ್ಜ್ಞಾನಮನ್ವಿಚ್ಛೇದಿತ್ಯೇಷಾ ವೈದಿಕೀ ಶ್ರುತಿಃ ।
ತಸ್ಮಾದಾರಾಧಯೇಶಾನಂ ತತೋ ಜ್ಞಾನಮವಾಪ್ಸ್ಯಸಿ ॥ ೧೧ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಸ ಶೈಲೂಷೋ ಜ್ಞಾನಾಯೇಶ್ವರಮಾರ್ಚಯತ್ ।
ತತಸ್ತುಷ್ಟೋ ಮಹೇಶಾನೋ ಜ್ಞಾನಂ ಪ್ರಾದಾದ್ದ್ವಿಜಾತಯೇ ।
ಪ್ರಾಪ್ತಜ್ಞಾನೋ ಮಹಾಬುದ್ಧಿರ್ಗಾಥಾಃ ಪ್ರೋವಾಚ ಮುಕ್ತಿದಾಃ ॥ ೧೨ ॥

---

೯. ಹೀಗೆ ಆಲೋಚಿಸಿ ಆ ಶೈಲೂಷನು ತೃಷ್ಣೆಯನ್ನು ಛೇದಿಸಲು ಏನು ಮಾಡಬೇಕು? ಎಂದು ಚಿಂತಿಸುತ್ತಾ ತಂದೆಯನ್ನು ಪ್ರಶ್ನಿಸಿದನು.

೧೦. ಓ ತಂದೆಯೇ, ಜ್ಞಾನಖಡ್ಗದಿಂದ ಕ್ರೋಧಲೋಭಗಳನ್ನೂ ಘೋರಸಂಸಾರವನ್ನೂ ಛೇದಿಸಬೇಕೆಂದಿರುವೆನು. ಅಂತಹ ಜ್ಞಾನವು ನನಗೆ ಹೇಗೆ ಲಭಿಸುವುದು? ಹೇಳಬೇಕೆನಲು,

೧೧. ಅದಕ್ಕೆ ಕವಷನು, ಈಶ್ವರನಿಂದ ಜ್ಞಾನವನ್ನು ಪಡೆಯಬೇಕು ಎಂಬುದಾಗಿ ಶ್ರುತಿಯಿದೆ. ಆದುದರಿಂದ ನೀನು ಈಶ್ವರನನ್ನಾರಾಧಿಸು. ಅದರಿಂದ ನಿನಗೆ ಜ್ಞಾನವು ಲಭಿಸುವುದು ಎಂದನು.

೧೨. ತಂದೆಯ ಮಾತಿನಂತೆ ಶೈಲೂಷನು ಶಿವನನ್ನಾರಾಧಿಸಿದನು. ಶಿವನು ಸಂತುಷ್ಟನಾಗಿ ಅವನಿಗೆ ಜ್ಞಾನವನ್ನನುಗ್ರಹಿಸಿದನು ಮಹಾಜ್ಞಾನಿಯಾದ ಆ ಶೈಲೂಷನು ಮುಕ್ತಿವಚನಗಳನ್ನು ಇಂತು ಹಾಡಿದನು.

॥ ಶೈಲೂಷ ಉವಾಚ ॥

ಕ್ರೋಧಸ್ತು ಪ್ರಥಮಂ ಶತ್ರುರ್ನಿಷ್ಫಲೋ ದೇಹನಾಶನಃ ।
ಜ್ಞಾನಖಡ್ಗೇನ ತಂ ಛಿತ್ವಾ ಪರಮಂ ಸುಖಮಾಪ್ನುಯಾತ್ ॥ ೧೩ ॥

ತೃಷ್ಣಾ ಬಹುವಿಧಾ ಮಾಯಾ ಬಂಧನೀ ಪಾಪಕಾರಿಣೀ ।
ಛಿತ್ತ್ವೈತಾಂ ಜ್ಞಾನಖಡ್ಗೇನ ಸುಖಂ ತಿಷ್ಠತಿ ಮಾನವಃ ॥ ೧೪ ॥

ಸಂಗಸ್ತು ಪರಮೋಽಧರ್ಮೋ ದೇವಾದೀನಾಮಿತಿ ಶ್ರುತಿಃ ।
ಅಸಂಗಸ್ಯಾತ್ಮನೋಽಪ್ಯಸ್ಯ ಸಂಗೋಽಯಂ ಪರಮೋ ರಿಪುಃ ॥ ೧೫ ॥

ಛಿತ್ತ್ವೈನಂ ಜ್ಞಾನಖಡ್ಗೇನ ಶಿವೈಕತ್ವಮವಾಪ್ನುಯಾತ್ ।
ಸಂಶಯಃ ಪರಮೋ ನಾಶೋ ಧರ್ಮಾರ್ಥಾನಾಂ ವಿನಾಶಕೃತ್ ॥ ೧೬ ॥

---

೧೩. ಮನುಷ್ಯನಿಗೆ ಕೋಪವು ಮೊದಲನೆಯ ಶತ್ರುವು. ಅದರಿಂದ ಯಾವ ಪ್ರಯೋಜನವೂ ಇಲ್ಲ, ದೇಹವನ್ನು ನಾಶಮಾಡುವುದು ಜ್ಞಾನಖಡ್ಗದಿಂದ ಆ ಕೋಪವನ್ನು ಛೇದಿಸಿದರೆ ಪರಮಸುಖವು ಲಭಿಸುವುದು.

೧೪. ಆಸೆಯೆಂಬುದು ಒಂದುಬಗೆಯ ಮಾಯೆ. ಮನುಷ್ಯನನ್ನು ತೃಷ್ಣೆಯು ಸಂಸಾರಬಂಧನದಲ್ಲಿ ಕೆಡುಹುವುದು, ಪಾಪಿಯನ್ನಾಗಿ ಮಾಡುವುದು. ಅಂತಹ ಆಸೆಯನ್ನು ಜ್ಞಾನಖಡ್ಗದಿಂದ ಛೇದಿಸಿದವನಿಗೇ ಸುಖವು ಲಭಿಸುವುದು.

೧೫. ದೇವತೆಗಳಂತಹವರ ಸಂಗವೂ ಕೂಡ ಪಾಪಕರವಾದುದು. ವಸ್ತುತಃ ಆತ್ಮನಿಗೆ ಯಾವ ಸಂಗವೂ ಇಲ್ಲ. ಹೀಗಿದ್ದರೂ ಸಹ ಮಾಯಾಮಯವಾದೀ ಸಂಗವನ್ನು ಬಯಸುವರು. ಅದು ಸರಿಯಲ್ಲ. ಸಂಗವು ಪರಮ ವೈರಿಯು. ಇಂತಹ ಸಂಗವನ್ನು ಜ್ಞಾನಖಡ್ಗದಿಂದ ಕತ್ತರಿಸಿದರೆ ಶಿವನೊಡನೆ ಐಕ್ಯವು (ಮುಕ್ತಿಯು) ಲಭಿಸುವುದು.

೧೬. ಸಂಶಯವು ನಾಶಸ್ವರೂಪವಾದುದು. ಅದು ಧರ್ಮಾರ್ಥಗಳನ್ನು ನಾಶಮಾಡುವುದು. ಇಂತಹ ಸಂಶಯವನ್ನು ಜ್ಞಾನಖಡ್ಗದಿಂದ ಕತ್ತರಿಸಿದರೆ ಪರಮಸುಖವು ತಪ್ಪದೇ ಲಭಿಸುವುದು.

ಛಿತ್ತ್ವೈನಂ ಸಂಶಯಂ ಜಂತುಃ ಪರಮೋಪ್ಸಿತಮಾಪ್ನುಯಾತ್ ।
ಪಿಶಾಚೀವ ವಿಶತ್ಯಾಶಾ ನಿರ್ದಹತ್ಯಖಿಲಂ ಸುಖಂ ।
ಪೂರ್ಣಾಹಂತಾಸಿನಾ ಛಿತ್ವಾ ಜೀವನ್ಮುಕ್ತಿಮವಾಪ್ನುಯಾತ್ ॥ ೧೭ ॥

॥ ಬ್ರಹ್ಮೋವಾಚ ॥

ತತೋ ಜ್ಞಾನಮವಾಪ್ಯಾಸೌ ಗಂಗಾತೀರಂ ಸಮಾಶ್ರಿತಃ ।
ಜ್ಞಾನಖಡ್ಗೇನ ನಿರ್ಮೋಹಸ್ತತೋ ಮುಕ್ತಿಮವಾಪ ಸಃ ॥ ೧೮ ॥

ತತಃ ಪ್ರಭೃತಿ ತತ್ತೀರ್ಥಂ ಖಡ್ಗತೀರ್ಥಮಿತಿ ಸ್ಮೃತಂ ।
ಜ್ಞಾನತೀರ್ಥಂ ಚ ಕವಷಂ ಪೈಲೂಷಂ ಸರ್ವಕಾಮದಂ ॥ ೧೯ ॥

ಇತ್ಯಾದಿಷಟ್ಸಹಸ್ರಾಣಿ ತೀರ್ಥಾನ್ಯಾಹುರ್ಮಹರ್ಷಯಃ ।
ಅಶೇಷಪಾಪತಾಪೌಘಹರಾಣೀಷ್ಟಪ್ರದಾನಿ ಚ ॥ ೨೦ ॥

ಇತಿ ಶ್ರೀ ಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಖಡ್ಗತೀರ್ಥ ವರ್ಣನಂ ನಾಮೈಕೋನಚತ್ವಾರಿಂಶದಧಿಕಶತತಮೋಽಧ್ಯಾಯಃ

---

೧೭. ಆಸೆಯೆಂಬುದು ಮನುಷ್ಯನನ್ನು ಪಿಶಾಚಿಯಂತೆ ವ್ಯಾಪಿಸುವುದು, ಸುಖವೆಲ್ಲವನ್ನೂ ಹಾಳುಮಾಡುವುದು. ಇಂತಹ ಆಸೆಯನ್ನು ಆತ್ಮಜ್ಞಾನದಿಂದ ಭೇದಿಸಿದರೆ ಜೀವನ್ಮುಕ್ತನಾಗುವನು. ಜೀವಂತನಾಗಿಯೇ ಆತ್ಮಸುಖವನ್ನನುಭವಿಸುವನು.

೧೮. ಹೀಗೆ ಮಹಾಜ್ಞಾನಿಯಾದಾ ಪೈಲೂಷನು ಗಂಗಾತೀರದಲ್ಲಿ ವಾಸಿಸುತ್ತಾ ಜೀವನ್ಮುಕ್ತನಾಗಿದ್ದು ಜ್ಞಾನಖಡ್ಗದಿಂದ ಅಜ್ಞಾನವನ್ನು ಕತ್ತರಿಸಿ, ನಂತರ ಪರಮಮುಕ್ತಿಯನ್ನು ಪಡೆದನು. ಅದುಮೊದಲುಗೊಂಡು ಆ ತೀರ್ಥವು ಖಡ್ಗತೀರ್ಥವೆಂದು ಪ್ರಸಿದ್ಧವಾಯಿತು.

೧೯-೨೦. ಆ ತೀರ್ಥದಲ್ಲಿ ಜ್ಞಾನತೀರ್ಥ ಕವಷತೀರ್ಥ ಪೈಲೂಷ ತೀರ್ಥ ಮೊದಲಾದ ಆರುಸಾವಿರ ಪುಣ್ಯತೀರ್ಥಗಳು ಇರುವುವು. ಆ ತೀರ್ಥಗಳೆಲ್ಲವೂ ಮಹಾಪಾಪಗಳನ್ನು ನಾಶಮಾಡುವಂತಹವು, ಇಷ್ಟಾರ್ಥಗಳೆಲ್ಲವನ್ನೂ ಕೊಡುವಂತಹವು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಖಡ್ಗತೀರ್ಥವರ್ಣನವೆಂಬ ನೂರಮೂವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಎಪ್ಪತ್ತನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಚತ್ವಾರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಆತ್ರೇಯಮಿತಿ ವಿಖ್ಯಾತಮನ್ವಿಂದ್ರಂ ತೀರ್ಥಮುತ್ತಮಂ ।
ತಸ್ಯ ಪ್ರಭಾವಂ ವಕ್ಷ್ಯಾಮಿ ಭ್ರಷ್ಟರಾಜ್ಯಪ್ರದಾಯಕಂ ॥ ೧ ॥

ಗೌತಮ್ಯಾ ಉತ್ತರೇ ತೀರೇ ಆತ್ರೇಯೋ ಭಗವಾನೃಷಿಃ ।
ಅನ್ವಾರೇಭೇಽಥ ಸತ್ರಾಣಿ ಋತ್ವಿಗ್ಭಿರ್ಮುನಿಭಿರ್ವೃತಃ ॥ ೨ ॥

ತಸ್ಯ ಹೋತಾಽಭವತ್ತ್ವಗ್ನಿರ್ಹವ್ಯವಾಹನ ಏವ ಚ ।
ಏವಂ ಸತ್ರೇ ತು ಸಂಪೂರ್ಣ ಇಷ್ಟಿಂ ಮಾಹೇಶ್ವರೀಂ ಪುನಃ ॥ ೩ ॥

ನೂರನಲವತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಆತ್ರೇಯತೀರ್ಥ, ಅನ್ವಿಂದ್ರತೀರ್ಥಗಳೆಂಬ ಹೆಸರುಗಳಿಂದ ಪ್ರಸಿದ್ಧವಾದುದೊಂದು ತೀರ್ಥವಿರುವುದು. ಆ ತೀರ್ಥವು ತಪ್ಪಿದ ರಾಜ್ಯವನ್ನು ಪುನಃ ಲಭಿಸುವಂತೆ ಮಾಡುವುದು, ಆ ತೀರ್ಥದ ಮಾಹಾತ್ಮ್ಯವನ್ನು ಹೇಳುವೆನು.

೨. ಹಿಂದೆ ಆತ್ರೇಯನೆಂಬ ಮಹರ್ಷಿಯು ಗೌತಮೀನದಿಯ ಉತ್ತರ ತೀರದಲ್ಲಿ ಮುನಿಗಳೊಡನೆ ಮಹಾಯಾಗಗಳನ್ನಾರಂಭಿಸಿದನು.

೩. ಆ ಯಾಗದಲ್ಲಿ ಹವ್ಯವಾಹನನಾದ ಅಗ್ನಿಯೇ ಹೋತೃ (ಹೋಮ ಮಾಡುವವ) ವಾಗಿದ್ದನು. ಇಂತಹ ಯಾಗವನ್ನು ಮುಗಿಸಿ ಆತ್ರೇಯನು ಮಹೇಶ್ವರ ಯಾಗವನ್ನು ಮಾಡಿದನು, ಅದರಿಂದ ಆ ಮುನಿಗೆ ಸಕಲ ಸಿದ್ಧಿಗಳೂ ಲಭಿಸಿದುವು. ಬೇಕಾದೆಡೆಯಲ್ಲಿ ಸಂಚರಿಸುವ ಶಕ್ತಿಯೂ ಲಭಿಸಿತು.

ಕೃತ್ವೈಶ್ವರ್ಯಮಗಾದ್ವಿಪ್ರಃ ಸರ್ವತ್ರ ಗತಿಮೇವ ಚ ।
ಇಂದ್ರಸ್ಯ ಭವನಂ ರಮ್ಯಂ ಸ್ವರ್ಗಲೋಕಂ ರಸಾತಲಂ ॥ ೪ ॥

ಸ್ವೇಚ್ಛಯಾ ಯಾತಿ ವಿಪ್ರೇಂದ್ರಃ ಪ್ರಭಾವಾತ್ತಪಸಃ ಶುಭಾತ್ ।
ಸ ಕದಾಚಿದ್ದಿವಂ ಗತ್ವಾ ಇಂದ್ರಲೋಕಮಗಾತ್ಪುನಃ ॥ ೫ ॥

ತತ್ರಾಪಶ್ಯತ್ಸಹಸ್ರಾಕ್ಷಂ ಸುರೈಃ ಪರಿವೃತಂ ಶುಭೈಃ ।
ಸ್ತೂಯಮಾನಂ ಸಿದ್ಧಸಾಧ್ಯೈಃ ಪ್ರೇಕ್ಷಂತಂ ನೃತ್ಯಮುತ್ತಮಂ ।
ಶೃಣ್ವಾನಂ ಮಧುರಂ ಗೀತಮಪ್ಸರೋಭಿಶ್ಚ ವೀಜಿತಂ ॥ ೬ ॥

ಉಪೋಪವಿಷ್ಟೈಃ ಸುರನಾಯಕೈಸ್ತೈಃ
ಸಂಪೂಜ್ಯಮಾನಂ ಮಹದಾಸನಸ್ಥಂ ।
ಜಯಂತಮಂಕೇ ವಿನಿಧಾಯ ಸೂನುಂ
ಶಚ್ಯಾ ಯುತಂ ಪ್ರಾಪ್ತರತಿಂ ಮಹಿಷ್ಠಂ ॥ ೭ ॥

---

೪. ತಪಸ್ಸಿನ ಶಕ್ತಿಯಿಂದ ಆ ಆತ್ರೇಯನು ಸ್ವರ್ಗಲೋಕವನ್ನೂ ಪಾತಾಳವನ್ನೂ ಮಿಕ್ಕಸ್ಥಳಗಳನ್ನೂ ತಡೆಯಿಲ್ಲದೇ ಸಂಚರಿಸುತ್ತಿದ್ದನು.

೫. ಹೀಗಿರಲೊಂದುದಿನ ಆ ಆತ್ರೇಯನು ಸ್ವರ್ಗಕ್ಕೆ ತೆರಳಿದನು. ಅಲ್ಲಿ ಇಂದ್ರನನ್ನು ನೋಡಿದನು, ದೇವೇಂದ್ರನನ್ನು ದೇವತೆಗಳು ಓಲೈಸುತ್ತಿದ್ದರು.

೬. ಸಿದ್ಧಸಾಧ್ಯರು ಆ ಇಂದ್ರನನ್ನು ಸ್ತುತಿಸುತ್ತಿದ್ದರು, ಎದುರಿಗೆ ನರ್ತನವು ನಡೆಯುತ್ತಿದ್ದಿತು, ಗಂಧರ್ವರು ಇಂಪಾಗಿ ಹಾಡುತ್ತಿದ್ದರು, ಅಪ್ಸರೆಯರು ಇಂದ್ರನಿಗೆ ಗಾಳಿ ಬೀಸುತ್ತಿದ್ದರು.

೭. ಅತ್ಯುನ್ನತವಾದ ಸಿಂಹಾಸನದಲ್ಲಿ ಆ ಇಂದ್ರನು ಮಂಡಿಸಿದ್ದನು. ಜೊತೆಯಲ್ಲಿ ಶಚೀದೇವಿಯು ಕುಳಿತಿದ್ದಳು. ಪುತ್ರನಾದ ಜಯಂತನನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡಿದ್ದನು. ದೇವನಾಯಕರು ಹತ್ತಿರ ಕುಳಿತಿದ್ದು ದೇವೇಂದ್ರನನ್ನು ಓಲೈಸುತ್ತಿದ್ದರು.

ಸತಾಂ ಶರಣ್ಯಂ ವರದಂ ಮಹೇಂದ್ರಂ
ಸಮೀಕ್ಷ್ಯ ವಿಪ್ರಾಧಿಪತಿರ್ಮಹಾತ್ಮಾ ।
ವಿಮೋಹಿತೋಽಸೌ ಮುನಿರಿಂದ್ರಲಕ್ಷ್ಮ್ಯಾ
ಸಮೀಹಯಾಮಾಸ ತದಿಂದ್ರರಾಜ್ಯಂ ॥ ೮ ॥

ಸಂಪೂಜಿತೋ ದೇವಗಣೈರ್ಯಥಾವ-
ತ್ಸ್ವಮಾಶ್ರಮಂ ವೈ ಪುನರಾಜಗಾಮ ।
ಸಮೀಕ್ಷ್ಯ ತಾಂ ಶಕ್ರಪುರೀಂ ಸುರಮ್ಯಾಂ
ರತ್ನೈರ್ಯುತಾಂ ಪುಣ್ಯಗುಣೈಃ ಸುಪೂರ್ಣಾಂ ॥ ೯ ॥

ಸ್ವಮಾಶ್ರಮಂ ನಿಷ್ಪ್ರಭಹೇಮವರ್ಜ್ಯಂ
ಸಮೀಕ್ಷ್ಯ ವಿಪ್ರೋ ವಿರಮಂ ಜಗಾಮ ।
ಸಮೀಹಮಾನಃ ಸುರರಾಜ್ಯಮಾಶು
ಪ್ರಿಯಾಂ ತದೋವಾಚ ಮಹಾತ್ರಿಪುತ್ರಃ ॥ ೧೦ ॥

॥ ಆತ್ರೇಯ ಉವಾಚ ॥

ಭೋಕ್ತುಂ ನ ಶಕ್ತೋಽಸ್ಮಿ ಫಲಾನಿ ಮೂಲಾ-
ನ್ಯನುತ್ತಮಾನ್ಯಪ್ಯತಿಸಂಸ್ಕೃತಾನಿ ।

---

೮. ಸಜ್ಜನರಕ್ಷಕನಾದಾ ಮಹೇಂದ್ರನನ್ನು ನೋಡಿ ಆತ್ರೇಯಮಹರ್ಷಿಯು ಆ ಇಂದ್ರವೈಭವಕ್ಕೆ ಮರುಳಾದನು, ಅಂತಹ ಇಂದ್ರಪದವಿಯು ತನಗೂ ಬೇಕೆಂಬ ಆಸೆಯುಳ್ಳವನಾದನು.

೯. ದೇವತೆಗಳಿಂದ ಪೂಜಿಸಲ್ಪಟ್ಟು ಆ ಮುನೀಂದ್ರನು ಪುಣ್ಯವಂತರು ನೆಲಸಿರುವ ಮನೋಹರವಾದ ಇಂದ್ರಪುರವನ್ನು ನೋಡಿಕೊಂಡು ಪುನಃ ತನ್ನ ಆಶ್ರಮಕ್ಕೆ ಬಂದನು.

೧೦. ಇಂದ್ರಪುರಿಯಂತೆ ಕಾಂತಿಯಿಲ್ಲದ, ವೈಭವವಿಲ್ಲದ ತನ್ನಾಶ್ರಮವನ್ನು ನೋಡಿ ಆ ಮುನಿಗೆ ತುಂಬಾ ಬೇಸರವಾಯಿತು. ಆಗಲವನು ತನ್ನ ಪ್ರಿಯಪತ್ನಿಯೊಡನೆ ಮಾತನಾಡುತ್ತಾ,

೧೧. ಎಲೌ ಕಾಂತೆ, ಇಂದ್ರನ ವೈಭವವನ್ನು ನೋಡಿ ಬಂದ ನನಗೆ ಈ ಆಶ್ರಮಜೀವನವು ಸೇರದಾಗಿದೆ. ಎಷ್ಟೊಂದು ರುಚಿಯಾಗಿದ್ದರೂ ಇಲ್ಲಿನ

ಸ್ಮೃತ್ವಾsಮೃತಂ ಪುಣ್ಯತಮಂ ಚ ತತ್ರ
ಭಕ್ಷ್ಯಂ ಚ ಭೋಜ್ಯಂ ಚ ವರಾಸನಾನಿ ।
ಸ್ತುತಿಂ ಚ ದಾನಂ ಚ ಸಭಾಂ ಶುಭಾಂ ಚ
ಅಸ್ತ್ರಂ ಚ ವಾಸಾಂಸಿ ಪುರೀಂ ವನಾನಿ ॥ ೧೧ ॥

॥ ಬ್ರಹ್ಮೋವಾಚ ॥

ತತೋ ಮಹಾತ್ಮಾ ತಪಸಃ ಪ್ರಭಾವಾ-
ತ್ತ್ವಷ್ಟಾರಮಾಹೂಯ ವಚೋ ಬಭಾಷೇ ॥ ೧೨ ॥

॥ ಆತ್ರೇಯ ಉವಾಚ ॥

ಇಚ್ಛೇಯಮಿಂದ್ರತ್ವಮಹಂ ಮಹಾತ್ಮ-
ನ್ಕುರುಷ್ವ ಶೀಘ್ರಂ ಪದಮೈಂದ್ರಮತ್ರ ।
ಬ್ರೂಷೇsನ್ಯಥಾ ಚೇನ್ಮದುದೀರಿತಂ ತ್ವಂ
ಭಸ್ಮೀ ಕರೋಮ್ಯೇವ ನ ಸಂಶಯೋsತ್ರ ॥ ೧೩ ॥

ಗೆಡ್ಡೆಗೆಣಸುಗಳು ಅಮೃತವನ್ನು ನೋಡಿಬಂದ ನನಗೆ ಸೇರದಾಗಿವೆ. ಇಂದ್ರಲೋಕದ ತಿಂಡಿತಿನಸುಗಳೆಂತಹವು, ಅಲ್ಲಿನ ಆಸನಗಳು, ಅಸ್ತ್ರಗಳು, ಅಲಂಕಾರಗಳು, ವಸ್ತ್ರಗಳು ವರ್ಣಿಸಲಸದಳವಾಗಿವೆ. ಇಂದ್ರಸಭೆಯು ಅದೆಷ್ಟು ಮನೋಹರ? ಅಲ್ಲಿನ ಸ್ತುತಿ ಮತ್ತು ಗಾನಗಳು ವರ್ಣನೆಗೇ ನಿಲುಕದಾಗಿವೆ. ಮನೋಹರವಾದ ಉಪವನಗಳನ್ನು ನೋಡುವುದಕ್ಕೆ ಕಣ್ಣೇ ಸಾಲದು ಎಂದನು.

೧೨. ಆಮೇಲಾ ಮಹಾತ್ಮನಾದ ಆತ್ರೇಯನು ತಪಶ್ಶಕ್ತಿಯಿಂದ ದೇವಶಿಲ್ಪಿಯಾದ ವಿಶ್ವಕರ್ಮನನ್ನು ಕರೆಯಿಸಿ,

೧೩. ಎಲೈ ಮಹಾತ್ಮನಾದ ವಿಶ್ವಕರ್ಮನೆ, ಇಂದ್ರವೈಭವವನ್ನು ನಾನು ಅಪೇಕ್ಷಿಸಿರುವೆನು, ಈ ಕೂಡಲೇ ಇಲ್ಲಿ ಇಂದ್ರಪದವಿಯನ್ನು ನಿರ್ಮಿಸು, ನನ್ನ ಮಾತನ್ನು ನಡೆಯಿಸದಿದ್ದರೆ ಈ ಕೊಡಲೇ ನಿನ್ನನ್ನು ಸುಟ್ಟುಬೂದಿಮಾಡುವೆನು ಎಂದಾಜ್ಞಾಪಿಸಿದನು.

॥ ಬ್ರಹ್ಮೋವಾಚ ॥

ತದತ್ರಿವಾಕ್ಯಾತ್ತ್ವರಿತಃ ಪ್ರಜಾನಾಂ
ಸ್ರಷ್ಟಾ ವಿಭುರ್ವಿಶ್ವಕರ್ಮಾ ತದೈವ ।
ಚಕಾರ ಮೇರುಂ ಚ ಪುರೀಂ ಸುರಾಣಾಂ
ಕಲ್ಪದ್ರುಮಾನ್ಕಲ್ಪಲತಾಂ ಚ ಧೇನುಂ ॥ ೧೪ ॥

ಚಕಾರ ವಜ್ರಾದಿವಿಭೂಷಿತಾನಿ
ಗೃಹಾಣಿ ಶುಭ್ರಾಣ್ಯತಿಚಿತ್ರಿತಾನಿ ।
ಚಕಾರ ಸರ್ವಾವಯವಾನವದ್ಯಾಂ
ಶಚೀಂ ಸ್ಮರಸ್ಯೇವ ವಿಹಾರಶಾಲಾಂ ॥ ೧೫ ॥

ಸಭಾಂ ಸುಧರ್ಮಾಣಮಹೋ ಕ್ಷಣೇನ
ತಥಾ ಚಕಾರಾಪ್ಸರಸೋ ಮನೋಜ್ಞಾಃ ।
ಚಕಾರ ಚೋಚ್ಚೈಃಶ್ರವಸಂ ಗಜಂ ಚ
ವಜ್ರಾದಿ ಚಾಸ್ತ್ರಾಣಿ ಸುರಾನಶೇಷಾನ್ ॥ ೧೬ ॥

ನಿವಾರ್ಯಮಾಣಃ ಪ್ರಿಯಯಾತ್ರಿಪುತ್ರಃ
ಶಚೀಸಮಾಮಾತ್ಮವಧೂಂ ಚಕಾರ ।
ತದಾತ್ರಿಪುತ್ರೋಽತ್ರಿಮುಖ್ಯೈಃ ಸಮೇತೋ
ವಜ್ರಾದಿರೂಪಂ ಚ ಚಕಾರ ಚಾಸ್ತ್ರಂ ॥ ೧೭ ॥

---

೧೪. ಆತ್ರೇಯನ ಆ ಮಾತಿನಂತೆ ಸೃಷ್ಟಿಕರ್ತನಾದ ವಿಶ್ವಕರ್ಮನು ತ್ವರೆಯಿಂದ ಇಂದ್ರ ರಾಜ್ಯವನ್ನು ಅಲ್ಲಿ ನಿರ್ಮಿಸಿದನು. ಮೇರುಪರ್ವತವನ್ನೂ ಅದರಲ್ಲಿ ಸ್ವರ್ಗಲೋಕವನ್ನೂ ನಿರ್ಮಿಸಿದನು. ಕಲ್ಪವೃಕ್ಷಗಳು, ಕಾಮಧೇನು ಮೊದಲಾದವರನ್ನೂ ನಿರ್ಮಿಸಿದನು.

೧೫. ಇಂದ್ರಲೋಕದಂತಹ ವಜ್ರಖಚಿತವಾದ ಅರಮನೆಗಳನ್ನು ನಿರ್ಮಿಸಿದನು. ಮನ್ಮಥನ ವಿಹಾರಶಾಲೆಯಂತಿರುವ ಸರ್ವಾಂಗಸುಂದರಿಯಾದ ಶಚೀದೇವಿಯನ್ನೂ ನಿರ್ಮಿಸಿದನು.

೧೬. ಸುಧರ್ಮಾ ಎಂಬ ದೇವಸಭೆಯನ್ನೂ ಸುಂದರಿಯರಾದ ಅಪ್ಸರೆಯರನ್ನೂ ಉಚ್ಚೈಶ್ರವಸ್ಸು ಐರಾವತಗಳನ್ನೂ ವಜ್ರಮೊದಲಾದ ಆಯುಧಗಳನ್ನೂ ಮಿಕ್ಕ ದೇವತೆಗಳೆಲ್ಲರನ್ನೂ ಕ್ಷಣದಲ್ಲಿ ಆ ವಿಶ್ವಕರ್ಮನು ನಿರ್ಮಿಸಿದನು.

೧೭. ಪತ್ನಿಯು ತಡೆದರೂ ಸಹ ಕೇಳದೆ ಆ ಆತ್ರೇಯನು ತನ್ನ ಪತ್ನಿಯನ್ನೇ ಶಚೀದೇವಿಯನ್ನಾಗಿ ಮಾಡಿದನು. ಮಿಕ್ಕ ವಜ್ರಾಯುಧ ಮೊದಲಾದ ಅಸ್ತ್ರಗಳನ್ನೂ ನಿರ್ಮಿಸಿದನು.

ನೃತ್ಯಾದಿ ಗೀತಾದಿ ಚ ಸರ್ವಮೇವ
ಚಕಾರ ಶಕ್ರಸ್ಯ ಪುರೇ ಚ ದೃಷ್ಟಂ ।
ತತ್ಸರ್ವಮಾಸಾದ್ಯ ತದಾ ಮುನೀಂದ್ರಃ
ಪ್ರಹೃಷ್ಟಚೇತಾಃ ಸುತರಾಂ ಬಭೂವ ॥ ೧೮ ॥

ಆಪಾತರಮ್ಯೇಷ್ಯಪಿ ಕಸ್ಯ ನಾಮ
ಭವತ್ಯಪೇಕ್ಷಾ ನ ಹಿ ಗೋಚರೇಷು ।
ಶ್ರುತ್ವಾ ಚ ದೈತ್ಯಾ ದನುಜಾಃ ಸಮೇತಾ
ರಕ್ಷಾಂಸಿ ಕೋಪೇನ ಯುತಾನಿ ಸದ್ಯಃ ॥ ೧೯ ॥

ಸ್ವರ್ಗಂ ಪರಿತ್ಯಜ್ಯ ಕುತೋ ಹರಿರ್ಭುವಂ
ಸಮಾಗತೋ ನ್ವೇಷ ಮಿಥಃ ಸುಖಾಯ ।
ತಸ್ಮಾದ್ವಯಂ ಯಾಮ ಇತೋ ನು ಯೋದ್ಧುಂ
ವೃತ್ರಸ್ಯ ಹಂತಾರಮುದೀರ್ಘಸತ್ರಂ ॥ ೨೦ ॥

---

೧೮. ಇಂದ್ರಲೋಕದಲ್ಲಿ ನೋಡಿದ ನರ್ತನ ಗಾನ ಮೊದಲಾದುವುಗಳೆಲ್ಲವನ್ನೂ ಆ ಆತ್ರೇಯನು ಕಲ್ಪಿಸಿದನು. ಅದೆಲ್ಲವೂ ಸಿದ್ಧವಾದುದನ್ನು ನೋಡಿ ಆ ಮುನಿಯು ತುಂಬಾ ಸಂತುಷ್ಟನಾದನು

೧೯. ಮೇಲುನೋಟಕ್ಕೆ ಸುಂದರವಾಗಿ ಮನೋಹರವಾಗಿ ಕಾಣಿಸುವಂತಹ ಸುಖವಸ್ತುಗಳಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಅಪೇಕ್ಷೆಯುಂಟಾಗುತ್ತದೆ. ಆತ್ರೇಯಾಶ್ರಮದಲ್ಲಿನ ಈ ಇಂದ್ರವೈಭವವನ್ನು ಕೇಳಿ ದೈತ್ಯದಾನವರು ರಾಕ್ಷಸರೊಡನೆ ನಮ್ಮ ವೈರಿಯಾದ ಇಂದ್ರನು ಸ್ವರ್ಗವನ್ನು ಬಿಟ್ಟು ಭೂಮಿಗೆ ಬರಲು ಕಾರಣವೇನು ? ಭೂಮಿಯ ಸುಖವನ್ನನುಭವಿಸಲೋಸುಗವೆ ?

೨೦. ಆದುದರಿಂದ ನಾವು ಈ ಕೂಡಲೇ ಆತ್ರೇಯಾಶ್ರಮಕ್ಕೆ ಹೋಗಿ ವೃತ್ರನನ್ನು ಸಂಹರಿಸಿದಂತಹ ಆ ನಮ್ಮ ಶತ್ರುವಾದ ಇಂದ್ರನನ್ನುಎದುರಿಸೋಣ ಎಂದು ಯೋಚಿಸಿದರು.

ತತಃ ಸಮಾಗತ್ಯ ತದಾತ್ರಿಪುತ್ರಂ
ಸಂವೇಷ್ಟಯಾಮಾಸುರಥಾಸುರಾಸ್ತೇ ।
ಸಂವೇಷ್ಟಯಿತ್ವಾ ಪುರಮತ್ರಿಪುತ್ರ-
ಕೃತಂ ತಥಾ ಚೇಂದ್ರಪುರಾಭಿಧಾನಂ ।
ಸ್ತೈರ್ವಧ್ಯಮಾನಃ ಶಸ್ತ್ರಪಾತೈರ್ಮಹದ್ಭಿ-
ಸ್ತತೋ ಭೀತೋ ವಾಕ್ಯಮಿದಂ ಜಗಾದ ॥ ೨೧ ॥

॥ ಆತ್ರೇಯ ಉವಾಚ ॥

ಯೋ ಜಾತ ಏವ ಪ್ರಥಮೋ ಮನಸ್ವಾ-
ನ್ದೇವೋ ದೇವಾನ್ಕ್ರತುನಾ ಪರ್ಯಭೂಷತ್ ।
ಯಸ್ಯ ಶುಷ್ಮಾದ್ರೋದಸೀ ಅಭ್ಯಸೇತಾಂ
ನೃಮ್ಣಸ್ಯ ಮಹ್ನಾ ಸಜನಾ ಸ ಇಂದ್ರಃ ॥ ೨೨ ॥

॥ ಬ್ರಹ್ಮೋವಾಚ ॥

ಇತ್ಯಾದಿಸೂಕ್ತೇನ ರಿಪೂನುವಾಚ
ಹರಿಂ ಚ ತುಷ್ಟಾವ ತದಾತ್ರಿಪುತ್ರಃ ॥ ೨೩ ॥

॥ ಆತ್ರೇಯ ಉವಾಚ ॥

ನಾಹಂ ಹರಿರ್ನೈವ ಶಚೀ ಮದೀಯಾ
ನೇಯಂ ಪುರೀ ನೈವ ವನಂ ತದೈಂದ್ರಂ ।

---

೨೧. ಆಮೇಲಾ ದೈತ್ಯದಾನವರು ಆತ್ರೇಯನು ನಿರ್ಮಿಸಿದ ಇಂದ್ರಪುರಿಗೆ ಬಂದು ಆ ನಗರವನ್ನು ಮುತ್ತಿದರು, ಆತ್ರೇಯನನ್ನು ಎದುರಿಸಿದರು. ದೈತ್ಯದಾನವರ ಶಸ್ತ್ರಪ್ರಯೋಗದಿಂದ ಪೀಡಿಸಲ್ಪಟ್ಟು ಆ ಆತ್ರೇಯನು ಹೆದರಿ,

೨೨. ನೂರು ಯಾಗಗಳನ್ನು ಮಾಡಿ ಇಂದ್ರಪದವಿಯನ್ನು ಪಡೆದವನೂ ಹವಿರ್ಭಾಗಿಯಾದವನೂ ಮೂರು ಲೋಕಗಳನ್ನೂ ಪಾಲಿಸುವವನೂ ಆದ ಇಂದ್ರನು ನಮ್ಮೆಲ್ಲರನ್ನೂ ರಕ್ಷಿಸಲಿ.

೨೩. ಇದೇ ಮೊದಲಾದ ಇಂದ್ರಸೂಕ್ತದಿಂದ ಇಂದ್ರನನ್ನು ಸ್ತುತಿಸಿ ಆತ್ರೇಯನು ದೈತ್ಯದಾನವರನ್ನು ಕುರಿತು,

೨೪. ಎಲೈ ದೈತ್ಯದಾನವರೇ, ನಾನು ಇಂದ್ರನಲ್ಲ, ಇವಳು ನಿಜವಾಗಿ ಶಚೀದೇವಿಯಲ್ಲ. ಇದು ಅಮರಾವತಿಯಲ್ಲ, ನಂದನವನವೂ ಇದಲ್ಲ. ವೃತ್ರ

ಸ ಏವ ಚೇಂದ್ರೋ ವೃತ್ರಹಂತಾ ಸ ವಜ್ರೀ
ಸಹಸ್ರಾಕ್ಷೋ ಗೋತ್ರಭಿದ್ವಜ್ರಬಾಹುಃ ॥ ೨೪ ॥

ಅಹಂ ತು ವಿಪ್ರೋ ವೇದವಿದ್ಬ್ರಹ್ಮವೃಂದೈಃ
ಸಮಾವಿಷ್ಟೋ ಗೌತಮೀತೀರಸಂಸ್ಥಃ ।
ಯತ್ರಾಯತ್ಯಾಂ ನಾದ್ಯ ವಾ ಸೌಖ್ಯಹೇತು-
ಸ್ತಚ್ಚಾಕಾರ್ಷಂ ಕರ್ಮ ದುರ್ದೈವಯೋಗಾತ್ ॥ ೨೫ ॥

॥ ಅಸುರಾ ಊಚುಃ ॥

ಸಂಹರಸ್ವೇದಮಾತ್ರೇಯ ಯದಿಂದ್ರಸ್ಯ ವಿಡಂಬನಂ ।
ಕ್ಷೇಮಸ್ತೇ ಭವಿತಾ ಸತ್ಯಂ ನಾನ್ಯಥಾ ಮುನಿಸತ್ತಮ ॥ ೨೬ ॥

॥ ಬ್ರಹ್ಮೋವಾಚ ॥

ತದಾತ್ರೇಯೋಽಬ್ರವೀದ್ವಾಕ್ಯಂ ಯಥಾ ವಕ್ಷ್ಯಂತಿ ಮಾಮಿಹ ।
ಕರೋಮ್ಯೇವ ಮಹಾಭಾಗಾಃ ಸತ್ಯೇನಾಗ್ನಿಂ ಸಮಾಲಭೇ ॥ ೨೭ ॥

ಏವಮುಕ್ತ್ವಾ ಸ ದೈತೇಯಾಂಸ್ತ್ವಷ್ಟಾರಂ ಪುನರಬ್ರವೀತ್ ॥ ೨೮ ॥

ವೈರಿಯೂ ಸಹಸ್ರಾಕ್ಷನೂ ವಜ್ರಧಾರಿಯೂ, ಬೆಟ್ಟಗಳ ರೆಕ್ಕೆಗಳನ್ನು ಕತ್ತರಿಸಿದವನೂ ಆದಂತಹ ಇಂದ್ರನು ಸ್ವರ್ಗದಲ್ಲಿರುವನು.

೨೫. ನಾನು ಬ್ರಾಹ್ಮಣನು, ವೇದವಿತ್ತುಗಳಾದ ಬ್ರಾಹ್ಮಣರೊಡನೆ ಗೌತಮೀತೀರದಲ್ಲಿ ವಾಸಮಾಡುತ್ತಿರುವೆನು. ತಪಶ್ಶಕ್ತಿಯಿಂದ ಇಂದ್ರವೈಭವವನ್ನು ಇಲ್ಲಿಗೆ ಆಕರ್ಷಿಸಿದೆನು, ಆದರೀಗ ನಿಮ್ಮಿಂದ ದುಃಖವೊದಗಿರುವುದು ಎಂದನು.

೨೬. ಅದನ್ನು ಕೇಳಿ ದೈತ್ಯದಾನವರು—ಎಲೈ ಆತ್ರೇಯನೆ, ಈ ಇಂದ್ರನ ಅನುಕರಣವನ್ನು ಬಿಟ್ಟುಬಿಡು. ಆಗ ನಿನಗೆ ಕ್ಷೇಮವಾಗುವುದು, ಇಲ್ಲದಿದ್ದರೆ ಇಲ್ಲ ಎಂದರು.

೨೭–೨೮. ಆಗ ಆತ್ರೇಯನು ದೈತ್ಯದಾನವರಿಗೆ ಓ ಅಸುರರೇ, ಈಗ ನಾನೇನು ಮಾಡಲಿ ? ನೀವು ಹೇಳಿದಂತೆಯೇ ಮಾಡುವೆನು. ಅಗ್ನಿಸಾಕ್ಷಿ

॥ ಆತ್ರೇಯ ಉವಾಚ ॥

ಯತ್ಕೃತಂ ತ್ವತ್ರ ಮತ್ಪ್ರೀತ್ಯಾ ಐಂದ್ರಂ ತ್ವಷ್ಟಃ ಪದಂ ತ್ವಯಾ ।
ಸಂಹರಸ್ವ ಪುನಃ ಶೀಘ್ರಂ ರಕ್ಷ ಮಾಂ ಬ್ರಾಹ್ಮಣಂ ಮುನಿಂ ॥ ೨೯ ॥

ಪುನರ್ದೇಹಿ ಪದಂ ಮಹ್ಯಮಾಶ್ರಮಂ ಮೃಗಪಕ್ಷಿಣಃ ।
ವೃಕ್ಷಾಂಶ್ಚ ವಾರಿ ಯತ್ರಾಸೀನ್ನ ಮೇ ದಿವ್ಯೈಃ ಪ್ರಯೋಜನಂ ।
ಸರ್ವಮಕ್ರಮಮಾಯಾತಂ ನ ಸುಖಾಯ ಮನೀಷಿಣಾಂ ॥ ೩೦ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಪ್ರಜಾನಾಥಸ್ತ್ವಷ್ಟಾ ಸಂಹೃತವಾಂಸ್ತದಾ ।
ದೈತ್ಯಾಶ್ಚ ಜಗ್ಮುಃ ಸ್ವಸ್ಥಾನಂ ಕೃತ್ವಾ ದೇಶಮಕಂಟಕಂ ॥ ೩೧ ॥

ತ್ವಷ್ಟಾ ಚಾಪಿ ಯಯೌ ಸ್ಥಾನಂ ಸ್ವಕಂ ಸಂಪ್ರಹಸನ್ನಿವ ।
ಆತ್ರೇಯೋಽಪಿ ತದಾ ಶಿಷ್ಯೈಃ ಸಂವೃತಃ ಸಹ ಭಾರ್ಯಯಾ ॥ ೩೨ ॥

ಗೌತಮೀತೀರಮಾಶ್ರಿತ್ಯ ತಪೋನಿಷ್ಠೋಽಖಿಲೈರ್ವೃತಃ ।
ವರ್ತಮಾನೇ ಮಹಾಯಜ್ಞೇ ಲಜ್ಜಿತೋ ವಾಕ್ಯಮಬ್ರವೀತ್ ॥ ೩೩ ॥

ಯಾಗಿ ಹೇಳುವೆನು ಎಂದು ಮತ್ತಿಂತೆಂದನು. ಓ ವಿಶ್ವಕರ್ಮ, ನೀನು ನಿರ್ಮಿಸಿದ ಇಂದ್ರವೈಭವವನ್ನು ಈ ಕೂಡಲೇ ಉಪಸಂಹರಿಸು. ಬ್ರಾಹ್ಮಣನಾದ ನನ್ನನ್ನು ರಕ್ಷಿಸು.

೩೦. ಮೃಗಪಕ್ಷಿಗಳೂ, ಗಿಡಮರಗಳೂ, ನಿರ್ಮಲನದಿಗಳೂ, ನೆಲಸಿದ್ದಂತಹ ನನ್ನ ಹಿಂದಿನ ಆಶ್ರಮವನ್ನೇ ನನಗೆ ಅನುಗ್ರಹಿಸು. ಇಂದ್ರವೈಭವದಿಂದ ನನಗೆ ಪ್ರಯೋಜನವಿಲ್ಲ. ಅನ್ಯಾಯವಾಗಿ ಬಂದುದರಿಂದ ಎಂದೆಂದೂ ಸುಖವು ಉಂಟಾಗಲಾರದು ಎನ್ನಲು,

೩೧. ವಿಶ್ವಕರ್ಮನು ಆತ್ರೇಯನ ಮಾತಿನಂತೆ ಇಂದ್ರವೈಭವವನ್ನು ಉಪಸಂಹರಿಸಿದನು. ನಂತರ ದೈತ್ಯರು ಆತ್ರೇಯನನ್ನು ಬಿಟ್ಟು ತಮ್ಮ ಸ್ಥಾನಕ್ಕೆ ಹೊರಟುಹೋದರು.

೩೨–೩೩. ವಿಶ್ವಕರ್ಮನೂ ನಗುತ್ತಾ ತನ್ನ ಸ್ಥಳಕ್ಕೆ ತೆರಳಿದನು. ಆತ್ರೇಯಮುನಿಯು ಶಿಷ್ಯರೊಡನೆಯೂ ಪತ್ನಿಯೊಡನೆಯೂ ಗೌತಮೀತೀರದ ತನ್ನ ಮೊದಲಿನ ಆಶ್ರಮದಲ್ಲಿ ವಾಸಿಸುತ್ತಾ ಯಜ್ಞಗಳನ್ನು ನಡೆಯಿಸುತ್ತಿದ್ದನು ಹಾಗೆ ಯಜ್ಞತತ್ಪರನಾಗಿದ್ದಾಗೊಂದುಸಾರಿ ತನ್ನ ಹಿಂದಿನ ಅವಿವೇಕವನ್ನು ನೆನೆದು ಚಿಂತಿಸಿದನು.

॥ ಆತ್ರೇಯ ಉವಾಚ ॥
ಅಹೋ ಮೋಹಸ್ಯ ಮಹಿಮಾ ಮಮಾಪಿ ಭ್ರಾಂತಚಿತ್ತತಾ ।
ಕಿಂ ಮಹೇಂದ್ರಪದಂ ಲಬ್ಧಂ ಕಿಂ ಮಯಾತ್ರ ಪುರಾ ಕೃತಂ ॥ ೩೪ ॥

॥ ಬ್ರಹ್ಮೋವಾಚ ॥
ಏವಂ ವದಂತಮಾತ್ರೇಯಂ ಲಜ್ಜಿತಂ ಪ್ರಾಬ್ರುವನ್ಸುರಾಃ ॥ ೩೫ ॥

॥ ಸುರಾ ಊಚುಃ ॥
ಲಜ್ಜಾಂ ಜಹಿ ಮಹಾಬಾಹೋ ಭವಿತಾ ಖ್ಯಾತಿರುತ್ತಮಾ ।
ಆತ್ರೇಯತೀರ್ಥೇ ಯೋ ಸ್ನಾನಂ ಪ್ರಾಣಿನಃ ಕುರ್ಯುರಂಜಸಾ ॥ ೩೬ ॥

ಇಂದ್ರಾಸ್ತೇ ಭವಿತಾರೋ ವೈ ಸ್ಮರಣಾತ್ಸುಖಭಾಗಿನಃ ।
ತತ್ರ ಪಂಚ ಸಹಸ್ರಾಣಿ ತೀರ್ಥಾನ್ಯಾಹುರ್ಮನೀಷಿಣಃ ॥ ೩೭ ॥

ಅಸ್ವಿಂದ್ರಾತ್ರೇಯದೈತೇಯನಾಮಭಿಃ ಕೀರ್ತಿತಾನಿ ಚ ।
ತೇಷು ಸ್ನಾನಂ ಚ ದಾನಂ ಚ ಸರ್ವಮಕ್ಷಯಪುಣ್ಯದಂ ॥ ೩೮ ॥

---

೩೪. ಮೋಹದ ಮಹಿಮೆಯು ಅಗಾಧವಾದುದು. ನನ್ನಂತಹವನಿಗೂ ಭ್ರಾಂತಿಯುಂಟಾಯಿತೆ? ಈಗ ನಾನು ಮಾಡಿದುದೇನು? ಮಹೇಂದ್ರ ಪದವಿಯು ನನಗೆ ಲಭಿಸಿತೇ?

೩೫. ಹೀಗೆ ಲಜ್ಜೆಯಿಂದ ಹೇಳಿಕೊಳ್ಳುತ್ತಿದ್ದ ಆತ್ರೇಯನನ್ನು ಕುರಿತು ದೇವತೆಗಳು ಇಂತುಸುರಿದರು.

೩೬. ಎಲೈ ಮಹರ್ಷಿ, ಲಜ್ಜೆಯನ್ನು ಬಿಡು, ನಿನಗೆ ತುಂಬಾ ಪ್ರಸಿದ್ಧಿಯುಂಟಾಗುಗುವುದು, ಈ ಆತ್ರೇಯತೀರ್ಥದಲ್ಲಿ ಸ್ನಾನವನ್ನು ಮಾಡುವವರಿಗೆ ಇಂದ್ರಪದವಿಯು ಲಭಿಸುವುದು. ಈ ತೀರ್ಥವನ್ನು ಸ್ಮರಿಸಿದರೆ ಪಾಪನಾಶವಾಗುವುದು.

೩೭-೩೮. ಆತ್ರೇಯತೀರ್ಥದಲ್ಲಿ ಅಸ್ವಿಂದ್ರತೀರ್ಥ, ಆತ್ರೇಯತೀರ್ಥ ದೈತೇಯ ಮೊದಲಾದ ಐದುಸಾವಿರತೀರ್ಥಗಳಿರುವುವು, ಆ ತೀರ್ಥಗಳಲ್ಲಿ ಸ್ನಾನ ದಾನಗಳನ್ನು ಮಾಡಿದರೆ ಅಕ್ಷಯಪುಣ್ಯವು ಲಭಿಸುವುದು ಎಂದರು.

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ವಿಬುಧಾ ಯಾತಾಃ ಸಂತುಷ್ಟಶ್ಚಾಭವನ್ಮುನಿಃ ॥ ೩೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಅನ್ವಿನ್ದ್ರಾತ್ರೇಯಾದಿಪಂಚಸಹಸ್ರತೀರ್ಥವರ್ಣನಂ ನಾಮ ಚತ್ವಾರಿಂಶದಧಿಕಶತತಮೋಽಧ್ಯಾಯಃ

---

೩೯. ಹೀಗೆ ಹೇಳಿ ದೇವತೆಗಳು ಸ್ವರ್ಗಕ್ಕೆ ತೆರಳಿದರು. ಅದರಿಂದ ಆತ್ರೇಯಮುನಿಯು ಸಂತುಷ್ಟನಾದನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಆತ್ರೇಯತೀರ್ಥವರ್ಣನವೆಂಬ ನೂರನಲವತ್ತನೆಯ ಅಧ್ಯಾಯವು ಮುಗಿದುದು-

ಗೌತಮೀಮಾಹಾತ್ಮ್ಯೆಯಲ್ಲಿ ಎಪ್ಪತ್ತೊಂದನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಏಕಚತ್ವಾರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಕಪಿಲಾಸಂಗಮಂ ನಾಮ ತೀರ್ಥಂ ತ್ರೈಲೋಕ್ಯವಿಶ್ರುತಂ ।
ತತ್ರ ನಾರದ ವಕ್ಷ್ಯಾಮಿ ಕಥಾಂ ಪುಣ್ಯಾಮನುತ್ತಮಾಂ ॥ ೧ ॥

ಕಪಿಲೋ ನಾಮ ತತ್ತ್ವಜ್ಞೋ ಮುನಿರಾಸೀನ್ಮಹಾಯಶಾಃ ।
ಕ್ರೂರಶ್ಚಾಪಿ ಪ್ರಸನ್ನಶ್ಚ ತಪೋವ್ರತಪರಾಯಣಃ ॥ ೨ ॥

ತಪಸ್ಯಂತಂ ಮುನಿಶ್ರೇಷ್ಠಂ ಗೌತಮೀತೀರಮಾಶ್ರಿತಂ ।
ತಮಾಗತ್ಯ ಮಹಾತ್ಮಾನಂ ವಾಮದೇವಾದಯೋಽಬ್ರುವನ್ ॥ ೩ ॥

ಹತ್ವಾ ವೇನಂ ಬ್ರಹ್ಮಶಾಪೈರ್ನಷ್ಟಧರ್ಮೇ ತ್ವರಾಜಕೇ ।
ಕಪಿಲಂ ಸಿದ್ಧಮಾಚಾರ್ಯಮೂಚುರ್ಮುನಿಗಣಾಸ್ತದಾ ॥ ೪ ॥

ನೂರನಲವತ್ತೊಂದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಕಪಿಲಾಸಂಗಮವೆಂಬ ಪ್ರಸಿದ್ಧ ತೀರ್ಥವಿರುವುದು. ಆ ತೀರ್ಥದ ಪುಣ್ಯಮಾಹಾತ್ಮ್ಯವನ್ನು ಹೇಳುವೆನು, ಕೇಳು.

೨. ಹಿಂದೆ ಕಪಿಲನೆಂಬ ಮಹಾಜ್ಞಾನಿಯಾದ ಋಷಿಯಿದ್ದನು, ತಪಸ್ವಿಯಾದಾ ಮುನಿಯು ಶಾಂತನಾಗಿದ್ದರೂ ಗಂಭೀರನಾಗಿದ್ದನು.

೩-೪. ಗೌತಮೀತೀರದಲ್ಲಿ ಆ ಕಪಿಲಮುನಿಯು ತಪಸ್ಸುಮಾಡುತ್ತಿದ್ದನು. ಆಗ ವೇನರಾಜನು ಬ್ರಹ್ಮರ್ಷಿಗಳ ಶಾಪದಿಂದ ನಾಶವಾಗಿದ್ದನು. ರಾಜ್ಯವು ಅರಾಜಕವಾಗಿತ್ತು. ಇಂತಹ ಸ್ಥಿತಿಯಲ್ಲಿ ವಾಮದೇವಮೊದಲಾದ ಮುನಿಗಳು ಈ ಕಪಿಲಮುನಿಯು ಬಳಿಗೆ ಬಂದು

॥ ಮುನಿಗಣಾ ಊಚುಃ ॥

ಗತೇ ವೇದೇ ಗತೇ ಧರ್ಮೇ ಕಿಂ ಕರ್ತವ್ಯಂ ಮುನೀಶ್ವರ ॥ ೫ ॥

॥ ಬ್ರಹ್ಮೋವಾಚ ॥

ತತೋಽಬ್ರವೀನ್ಮುನಿರ್ಧ್ಯಾತ್ವಾ ಕಪಿಲಸ್ತ್ವಾಗತಾನ್ಮುನೀನ್ ॥ ೬ ॥

॥ ಕಪಿಲ ಉವಾಚ ॥

ವೇನಸ್ಯೋರುರ್ವಿಮಥ್ಯೋಽಭೂತ್ತತಃ ಕಶ್ಚಿದ್ಭವಿಷ್ಯತಿ ॥ ೭ ॥

॥ ಬ್ರಹ್ಮೋವಾಚ ॥

ತಥೈವ ಚಕ್ರುರ್ಮುನಯೋ ವೇನಸ್ಯೋರುಂ ವಿಮಥ್ಯ ವೈ ।
ತತ್ರೋತ್ಪನ್ನೋ ಮಹಾಪಾಪಃ ಕೃಷ್ಣೋ ರೌದ್ರಪರಾಕ್ರಮಃ ॥ ೮ ॥

ತಂ ದೃಷ್ಟ್ವಾ ಮುನಯೋ ಭೀತಾ ನಿಷೀದಸ್ವೇತಿ ಚಾಬ್ರುವನ್ ।
ನಿಷಾದಃ ಸೋಽಭವತ್ತಸ್ಮಾನ್ನಿಷಾದಾಶ್ಚಾಭವಂಸ್ತತಃ ॥ ೯ ॥

---

೫. ಓ ಋಷಿವರ್ಯ, ವೇನನ ಉಪಟಳದಿಂದ ವೇದಧರ್ಮವು ನಷ್ಟವಾಗಿರುವುದು, ಈಗೇನು ಮಾಡಬೇಕು? ಎಂದು ಕೇಳಲು,

೬-೭. ಆಗ ಕಪಿಲನು ಧ್ಯಾನದೃಷ್ಟಿಯಿಂದ ನೋಡಿ ಮುನಿಗಳನ್ನು ಕುರಿತು ಎಲೈ ಮುನಿಗಳೇ, ವೇನನ ತೊಡೆಯನ್ನು ಕಡೆಯಿರಿ, ಅದರಿಂದ ಓರ್ವ ಪುರುಷನು ಜನಿಸುವನು ಎಂದನು.

೮. ಕಪಿಲನ ಮಾತಿನಂತೆ ಮುನಿಗಳು ವೇನನ ತೊಡೆಯನ್ನು ಕಡೆದರು ಅದರಿಂದ ಕಪ್ಪುಬಣ್ಣದವನೂ ಭಯಂಕರನೂ ಪಾಪಸ್ವರೂಪನೂ ಆದಂತಹ ಪುರುಷನೋರ್ವನು ಜನಿಸಿದನು.

೯. ಆ ಪುರುಷನನ್ನು ನೋಡಿ ಭಯಗೊಂಡು ಮುನಿಗಳು ನಿಷೀದಸ್ವ (ಕುಳಿತುಕೊ) ಎಂದು ಹೇಳಿದರು. ಆ ಮಾತಿನಿಂದ ಅವನು ನಿಷಾದ (ಬೇಡ) ನಾದನು, ಅವನಿಂದ ಮುಂದೆ ನಿಷಾದ (ಬೇಡ) ಸಂತತಿಯು ಬೆಳೆಯಿತು.

ವೇನಬಾಹುಂ ಮಮಂಥುಸ್ತೇ ದಕ್ಷಿಣಂ ಧರ್ಮಸಂಹಿತಂ ।
ತತಃ ಪೃಥುಸ್ಸ್ವರಶ್ಚೈವ ಸರ್ವಲಕ್ಷಣಲಕ್ಷಿತಃ ॥ ೧೦ ॥
ರಾಜಾಭವತ್ಪೃಥುಃ ಶ್ರೀಮಾನ್ಬ್ರಹ್ಮಸಾಮರ್ಥ್ಯಸಂಯುತಃ ।
ತಮಾಗತ್ಯ ಸುರಾಃ ಸರ್ವೇ ಅಭಿನಂದ್ಯ ವರಾನ್ ಶುಭಾನ್ ॥ ೧೧ ॥
ತಸ್ಮೈ ದದುಸ್ತಥಾಸ್ತ್ರಾಣಿ ಮಂತ್ರಾಣಿ ಗುಣವಂತಿ ಚ ।
ತತೋಽಬ್ರುವನ್ಮುನಿಗಣಾಸ್ತಂ ಪೃಥುಂ ಕಪಿಲೇನ ಚ ॥ ೧೨ ॥

॥ ಮುನಯ ಊಚುಃ ॥

ಆಹಾರಂ ದೇಹಿ ಜೀವೇಭ್ಯೋ ಭುವಾ ಗ್ರಸ್ತೌಷಧೀರಪಿ ॥ ೧೩ ॥

॥ ಬ್ರಹ್ಮೋವಾಚ ॥

ತತಃ ಸ ಧನುರಾದಾಯ ಭುವಮಾಹ ನೃಪೋತ್ತಮಃ ॥ ೧೪ ॥

॥ ಪೃಥುರುವಾಚ ॥

ಓಷಧೀರ್ದೇಹಿ ಯಾ ಗ್ರಸ್ತಾಃ ಪ್ರಜಾನಾಂ ಹಿತಕಾಮ್ಯಯಾ ॥ ೧೫ ॥

---

೧೦. ಆಮೇಲೆ ವೇನನ ಧರ್ಮಪರವಾದ ಬಲಗೈಯನ್ನು ಮುನಿಗಳು ಕಡೆದರು. ಆಕೈಯಿಂದ ಗಂಭೀರಸ್ವರವುಳ್ಳ ಸಕಲರಾಜಲಕ್ಷಣಗಳಿಂದ ಶೋಭಿಸುವ, ಬ್ರಹ್ಮತೇಜಸ್ಸಿನಿಂದ ತುಂಬಿರುವಂತಹ ಪೃಥುವೆಂಬ ರಾಜನು ಜನಿಸಿದನು.

೧೧–೧೨. ದೇವತೆಗಳೆಲ್ಲರೂ ಪೃಥುಚಕ್ರವರ್ತಿಯ ಬಳಿಗೆ ಬಂದು ಅಭಿನಂದಿಸಿ ಅವನಿಗೆ ಬೇಕಾದ ವರಗಳನ್ನೂ ಮಂತ್ರಾಸ್ತ್ರಗಳನ್ನೂ ಅನುಗ್ರಹಿಸಿದರು. ಆಮೇಲೆ ಕಪಿಲ ಮೊದಲಾದ ಮುನಿಗಳು ಪೃಥುವಿಗೆ ಹೀಗೆ ಹೇಳಿದರು.

೧೩. ಎಲೈ ಪೃಥುರಾಜ, ಪ್ರಾಣಿಗಳಿಗೆ ಆಹಾರವನ್ನು ಕಲ್ಪಿಸು, ಆಹಾರವಸ್ತುಗಳೆಲ್ಲವನ್ನೂ ಭೂಮಿಯು ಕಬಳಿಸುತ್ತಲಿರುವುದು ಎಂದರು.

೧೪-೧೫. ಆಗ ಪೃಥುರಾಜನು ಧನುಸ್ಸನ್ನು ಹಿಡಿದು ಭೂಮಿಯನ್ನು ಕುರಿತು ಎಲೌ ಭೂಮಿ, ನೀನು ಅಡಗಿಸಿಟ್ಟಿರುವ ಆಹಾರವಸ್ತುಗಳನ್ನು ಹಿಂದಕ್ಕೆ ಕೊಡು ಅದರಿಂದ ಪ್ರಜೆಗಳಿಗೆ ಹಿತವಾಗುವುದು ಎಂದಾಜ್ಞಾಪಿಸಿದನು.

॥ ಬ್ರಹ್ಮೋವಾಚ ॥

ತಮುವಾಚ ಮಹೀ ಭೀತಾ ಪೃಥುಂ ತಂ ಪೃಥುಲೋಚನಂ ॥ ೧೬ ॥

॥ ಮಹ್ಯುವಾಚ ॥

ಮಯಿ ಜೀರ್ಣಾ ಮಹೌಷಧ್ಯಃ ಕಥಂ ದಾತುಮಹಂ ಕ್ಷಮಾ ॥ ೧೭ ॥

॥ ಬ್ರಹ್ಮೋವಾಚ ॥

ತತಃ ಸಕೋಪೋ ನೃಪತಿಸ್ತಾಮಾಹ ಪೃಥಿವೀಂ ಪುನಃ ॥ ೧೮ ॥

॥ ಪೃಥುರುವಾಚ ॥

ನೋ ಚೇದ್ದದಾಸ್ಯದ್ಯ ತ್ವಾಂ ವೈ ಹತ್ವಾ ದಾಸ್ಯೇ ಮಹೌಷಧೀಃ ॥ ೧೯ ॥

॥ ಭೂಮಿರುವಾಚ ॥

ಕಥಂ ಹಂಸಿ ಸ್ತ್ರಿಯಂ ರಾಜನ್ ಜ್ಞಾನೀ ಭೂತ್ವಾ ನೃಪೋತ್ತಮ ।
ವಿನಾ ಮಯಾ ಕಥಂ ಚೇಮಾಃ ಪ್ರಜಾಃ ಸಂಧಾರಯಿಷ್ಯಸಿ ॥ ೨೦ ॥

೧೬- ಆಗ ಭೂಮಿಯು ಹೆದರಿ ಆ ಪೃಥುವನ್ನು ಕುರಿತು,

೧೭. ಆಹಾರವಸ್ತುಗಳೆಲ್ಲವೂ ನನ್ನಲ್ಲಿ ಜೀರ್ಣವಾಗಿ ಹೋಗಿರುವುವು, ನಾನವನ್ನು ಕೊಡುವಬಗೆ ಹೇಗೆ ಎನ್ನಲು,

೧೮–೧೯. ಅದನ್ನುಕೇಳಿ ಪೃಥುರಾಜನಿಗೆ ಮತ್ತಷ್ಟು ಕೋಪ ಬಂದಿತು. ಮತ್ತೆ ಭೂಮಿಯನ್ನು ಕುರಿತು ಎಲೌ ಭೂಮಿ, ಆಹಾರವಸ್ತುಗಳನ್ನು ಕೊಡದಿದ್ದರೆ ನಾನೇ ನಿನ್ನನ್ನು ಸಂಹರಿಸಿ ಕಿತ್ತುಕೊಳ್ಳುವೆನು, ತಿಳಿಯಿತೇ ಎಂದನು,

೨೦, ಭೂಮಿಯು ಹೇಳಿದಳು—ಎಲೈರಾಜ, ತಿಳಿದವನಾದ ನೀನು ಸ್ತ್ರೀಯನ್ನು ಕೊಲ್ಲಬಹುದೇ? ನನ್ನನ್ನು ಸಂಹರಿಸಿದರೆ ಈ ಪ್ರಜೆಗಳಾದರೂ ನಿಲ್ಲಬಹುದೆ? ಅವರಿಗೆ ನನ್ನ ಹೊರತು ಬೇರೆ ಆಧಾರವೆಲ್ಲಿಯದು ? ಹೇಳು ಎಂದಳು.

॥ ಪೃಥುರುವಾಚ ॥

ಯತ್ರೋಪಕಾರೋಽನೇಕಾನಾಮೇಕನಾಶೇ ಭವಿಷ್ಯತಿ ।
ನ ದೋಷಸ್ತತ್ರ ಪೃಥಿವಿ ತಪಸಾ ಧಾರಯೇ ಪ್ರಜಾಃ ॥ ೨೧ ॥

ನ ದೋಷಮತ್ರ ಪಶ್ಯಾಮಿ ನಾಚಕ್ಷೇಽನರ್ಥಕಂ ವಚಃ ।
ಯಸ್ಮಿನ್ನಿಪಾತಿತೇ ಸೌಖ್ಯಂ ಬಹೂನಾಮುಪಜಾಯತೇ ।
ಮುನಯಸ್ತದ್ವಧಂ ಪ್ರಾಹುರಶ್ವಮೇಧಶತಾಧಿಕಂ ॥ ೨೨ ॥

॥ ಬ್ರಹ್ಮೋವಾಚ ॥

ತತೋ ದೇವಾಶ್ಚ ಋಷಯಃ ಸಾಂತ್ವಯಿತ್ವಾ ನೃಪೋತ್ತಮಂ ।
ಮಹೀಂ ಚ ಮಾತರಂ ದೇವೀಮೂಚುಃ ಸುರಗಣಾಸ್ತದಾ ॥ ೨೩ ॥

॥ ದೇವಾ ಊಚುಃ ॥

ಭೂಮೇ ಗೋರೂಪಿಣೀ ಭೂತ್ವಾ ಪಯೋರೂಪಾ ಮಹೌಷಧೀಃ ।
ದೇಹಿ ತ್ವಂ ಪೃಥವೇ ರಾಜ್ಞೇ ತತಃ ಪ್ರೀತೋ ಭವೇನ್ನೃಪಃ ।
ಪ್ರಜಾಸಂರಕ್ಷಣಂ ಚ ಸ್ಯಾತ್ತತಃ ಕ್ಷೇಮಂ ಭವಿಷ್ಯತಿ ॥ ೨೪ ॥

---

೨೧. ಅದಕ್ಕೆ ಪೃಥುವು ಎಲೌ ಭೂಮಿ, ಓರ್ವನಳಿವಿನಿಂದ ಅನೇಕ ಜನಗಳಿಗೆ ಉಪಕಾರವಾಗುವಂತಿದ್ದರೆ ಆ ಓರ್ವನು ಸ್ತ್ರೀಯಾಗಲೀ ಪುರುಷನಾಗಲೀ ಸಂಹರಿಸಬಹುದು. ಪ್ರಜೆಗಳನ್ನು ನನ್ನ ತಪಶ್ಶಕ್ತಿಯಿಂದ ಧರಿಸುವೆನು.

೨೨. ಒಬ್ಬನ ನಾಶದಿಂದ ಬಹುಜನಗಳಿಗೆ ಸುಖವಾಗುವಂತಿದ್ದರೆ ಅಂತಹವನನ್ನು ಕೊಲ್ಲಬಹುದು, ದೋಷವಿಲ್ಲ. ಮೇಲಾಗಿ ನೂರು ಅಶ್ವಮೇಧ ಯಾಗಗಳ ಫಲವು ಲಭಿಸುವುದು ಎಂದು ಋಷಿಗಳು ಹೇಳುವರು ಎಂದನು.

೨೩. ಆಮೇಲೆ ದೇವತೆಗಳೂ ಋಷಿಗಳೂ ಪೃಥುರಾಜನನ್ನು ಸಮಾಧಾನಮಾಡಿ ಭೂಮಾತೆಗೆ ಹೀಗೆ ಹೇಳಿದರು.

೨೪. ಎಲೌ ಭೂದೇವಿ, ನೀನು ಹಸುವಿನ ರೂಪವನ್ನು ಧರಿಸಿ ಹಾಲಿನ ರೂಪದಿಂದ ಆಹಾರವಸ್ತುಗಳೆಲ್ಲವನ್ನೂ ಪೃಥುರಾಜನಿಗೆ ಕೊಡು. ಅದರಿಂದ ಅವನು ಸಂತುಷ್ಟನಾಗುವನು. ಅದರಿಂದ ಪ್ರಜಾರಕ್ಷಣೆಯೂ ಕ್ಷೇಮವೂ ಆಗುವುದು ಎಂದರು.

॥ ಬ್ರಹ್ಮೋವಾಚ ॥

ತತೋ ಗೋರೂಪಮಾಸ್ಥಾಯ ಭೂಮ್ಯಾಸೀತ್ಕಪಿಲಾಂತಿಕೇ ।
ದುದೋಹ ಚ ಮಹೌಷಧ್ಯೋ ರಾಜಾ ವೇನಕರೋದ್ಭವಃ ॥ ೨೫ ॥

ಯತ್ರ ದೇವಾಃ ಸಗಂಧರ್ವಾ ಋಷಯಃ ಕಪಿಲೋ ಮುನಿಃ ।
ಮಹೀಂ ಗೋರೂಪಮಾಪನ್ನಾಂ ನರ್ಮದಾಯಾಂ ಮಹಾಮುನೇ ॥ ೨೬ ॥

ಸರಸ್ವತ್ಯಾಂ ಭಾಗೀರಥ್ಯಾಂ ಗೋದಾವರ್ಯಾಂ ವಿಶೇಷತಃ ।
ಮಹಾನದೀಷು ಸರ್ವಾಸು ದುದುಹೇಽಸೌ ಪಯೋ ಮಹತ್ ॥ ೨೭ ॥

ಸಾ ದುಹ್ಯಮಾನಾ ಪೃಥುನಾ ಪುಣ್ಯತೋಯಾಭವನ್ನದೀ ।
ಗೌತಮ್ಯಾ ಸಂಗತಾ ಚಾಭೂತ್ತದದ್ಭುತಮಿವಾಭವತ್ ॥ ೨೮ ॥

ತತಃ ಪ್ರಭೃತಿ ತತ್ತೀರ್ಥಂ ಕಪಿಲಾಸಂಗಮಂ ವಿದುಃ ।
ತತ್ರಾಷ್ಟಾಶೀತಿಃ ಪೂಜ್ಯಾನಿ ಸಹಸ್ರಾಣಿ ಮಹಾಮತೇ ॥ ೨೯ ॥

---

೨೫. ಆಮೇಲೆ ಭೂಮಿಯು ಹಸುವಿನ ರೂಪವನ್ನು ಧರಿಸಿ ಕಪಿಲ ಮುನಿಯ ಬಳಿಯಲ್ಲಿ ನಿಂತಳು. ಪೃಥುರಾಜನು ಆ ಹಸುವಿನಿಂದ ಆಹಾರವಸ್ತುಗಳೆಲ್ಲವನ್ನೂ ಕರೆದನು.

೨೬–೨೭. ದೇವತೆಗಳು, ಗಂಧರ್ವರು, ಋಷಿಗಳು, ಕಪಿಲಮುನಿ ಮೊದಲಾದವರು ನರ್ಮದಾ, ಸರಸ್ವತೀ, ಭಾಗೀರಥಿ, ಗೋದಾವರೀ ಮೊದಲಾದ ಮಹಾನದಿಗಳಲ್ಲಿ ಭೂಗೋವಿನಿಂದ ಹಾಲನ್ನು ಕರೆದರು.

೨೮. ಗೌತಮೀತೀರದಲ್ಲಿ ಪೃಥುರಾಜನು ಕರೆಯಲು ಅದರಿಂದ ಪವಿತ್ರವಾದ ಕಪಿಲೆಯೆಂಬ ನದಿಯು ಜನಿಸಿ ಗೌತಮೀನದಿಯಲ್ಲಿ ಸೇರಿತು.

೨೯-೩೦. ಅದುಮೊದಲುಗೊಂಡು ಆ ತೀರ್ಥವು ಕಪಿಲಾಸಂಗಮವೆಂದು ಪ್ರಸಿದ್ಧವಾಯಿತು. ಆ ತೀರ್ಥದಲ್ಲಿ ಎಂಭತ್ತೆಂಟುಸಾವಿರ (88000)

ತೀರ್ಥಾನ್ಯಾಹುರ್ಮುನಿಗಣಾಃ ಸ್ಮರಣಾದಪಿ ನಾರದ ।
ಪಾವನಾನಿ ಜಗತ್ಯಸ್ಮಿಂಸ್ತಾನಿ ಸರ್ವಾಣ್ಯನುಕ್ರಮಾತ್ ॥ ೩೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಕಪಿಲಾಸಂಗಮಾದ್ಯಷ್ಟಾಶೀತಿಸಹಸ್ರತೀರ್ಥವರ್ಣನಂ
ನಾಮೈಕಚತ್ವಾರಿಂಶದಧಿಕಶತತಮೋಽಧ್ಯಾಯಃ

ತೀರ್ಥಗಳಿರುವುವು. ಆ ತೀರ್ಥಗಳನ್ನು ಸ್ಮರಣಮಾಡಿದಮಾತ್ರದಿಂದಲೇ ಪಾಪವು ನಾಶವಾಗುವುದು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಕಪಿಲಾಸಂಗಮತೀರ್ಥವರ್ಣನವೆಂಬ ನೂರನಲವತ್ತೊಂದನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಎಪ್ಪತ್ತೆರಡನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ದ್ವಿಚತ್ವಾರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ದೇವಸ್ಥಾನಮಿತಿ ಖ್ಯಾತಂ ತೀರ್ಥಂ ತ್ರೈಲೋಕ್ಯವಿಶ್ರುತಂ ।
ತಸ್ಯ ಪ್ರಭಾವಂ ವಕ್ಷ್ಯಾಮಿ ಶೃಣು ಯತ್ನೇನ ನಾರದ ॥ ೧ ॥

ಪುರಾ ಕೃತಯುಗಸ್ಯಾದೌ ದೇವದಾನವಸಂಗರೇ ।
ಪ್ರವೃತ್ತೇ ವಾ ಸಿಂಹಿಕೇತಿ ವಿಖ್ಯಾತಾ ದೈತ್ಯಸುಂದರೀ ॥ ೨ ॥

ತಸ್ಯಾಃ ಪುತ್ರೋ ಮಹಾದೈತ್ಯೋ ರಾಹುರ್ನಾಮ ಮಹಾಬಲಃ ।
ಅಮೃತೇ ತು ಸಮುತ್ಪನ್ನೇ ಸೈಂಹಿಕೇಯೋ ಚ ಭೇದಿತೇ ॥ ೩ ॥

ನೂರನಲವತ್ತೆರಡನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ದೇವಸ್ಥಾನವೆಂಬ ಪ್ರಸಿದ್ಧತೀರ್ಥವಿರುವುದು. ಆ ತೀರ್ಥದ ಮಾಹಾತ್ಮ್ಯವನ್ನು ಹೇಳುವೆನು ಶ್ರದ್ಧೆಯಿಂದ ಕೇಳು.

೨. ಹಿಂದೆ ಕೃತಯುಗದ ಪ್ರಾರಂಭದಲ್ಲಿ ದೇವದಾನವರಿಗೆ ಯುದ್ಧವಾಯಿತಷ್ಟೆ. ಆಮೇಲೆ ಅವರೀರ್ವರೂ ಸಮಾಧಾನಗೊಂಡು ಅಮೃತಕ್ಕಾಗಿ ಸಮುದ್ರವನ್ನು ಕಡೆದರು, ಅಮೃತವೂ ಹುಟ್ಟಿತು. ಆಗ ರಾಕ್ಷಸರಲ್ಲಿ ಸಿಂಹಿಕೆಯೆಂಬ ದೈತ್ಯಸುಂದರಿಯಿದ್ದಳು.

೩. ಆ ಸಿಂಹಿಕೆಗೆ ರಾಹುವೆಂಬ ಬಲಿಷ್ಠನಾದ ಸುತನಿದ್ದನು, ಆ ಅಸುರನು ಮೋಸದಿಂದ ದೇವತೆಗಳ ಸಾಲಿನಲ್ಲಿ ಕುಳಿತು ಅಮೃತಪಾನಮಾಡಿದನು. ಸೂರ್ಯಚಂದ್ರರ ಪ್ರೇರಣೆಯಿಂದ ಹರಿಯು ರಾಹುವನ್ನು ಕತ್ತರಿಸಿದನು.

ತಸ್ಯ ಪುತ್ರೋ ಮಹಾದ್ಯೈತ್ಯೋ ಮೇಘಹಾಸ ಇತಿ ಶ್ರುತಃ ।
ಪಿತರಂ ಘಾತಿತಂ ಶ್ರುತ್ವಾ ತಪಸ್ತೇಪೇಽತಿದುಃಖಿತಃ ॥ ೪ ॥

ತಪಸ್ಯಂತಂ ರಾಹುಸುತಂ ಗೌತಮೀತೀರಮಾಶ್ರಿತಂ ।
ದೇವಾಶ್ಚ ಋಷಯಃ ಸರ್ವೇ ತಮೂಚುರತಿಭೀತವತ್ ॥ ೫ ॥

॥ ದೇವರ್ಷಯ ಊಚುಃ ॥

ತಪೋ ಜಹಿ ಮಹಾಬಾಹೋ ಯತ್ತೇ ಮನಸಿ ಸಂಸ್ಥಿತಂ ।
ಸರ್ವಂ ಭವತು ನಾಮೇದಂ ಶಿವಗಂಗಾಪ್ರಸಾದತಃ ।
ಶಿವಗಂಗಾಪ್ರಸಾದೇನ ಕಿಂ ನಾಮಾಸ್ತ್ಯತ್ರ ದುರ್ಲಭಂ ॥ ೬ ॥

॥ ಮೇಘಹಾಸ ಉವಾಚ ॥

ಪರಿಭೂತಃ ಪಿತಾ ಪೂಜ್ಯೋ ಯುಷ್ಮಾಭಿರ್ಮಮ ದೈವತಂ ।
ತಸ್ಯಾಪಿ ಮಮ ಚಾತ್ಯಂತಂ ಪ್ರೀತಿಶ್ಚ ಕ್ರಿಯತೇ ಯದಿ ॥ ೭ ॥

---

೪. ರಾಹುವಿಗೆ ಮೇಘಹಾಸನೆಂಬ ಮಗನಿದ್ದನು, ಅವನು ತಂದೆಯ ದುರವಸ್ಥೆಯನ್ನು ಕೇಳಿ ದುಃಖಗೊಂಡು ಗೌತಮೀತೀರದಲ್ಲಿ ಘೋರತಪವನ್ನಾಚರಿಸಿದನು.

೫. ಗೌತಮೀತೀರದಲ್ಲಿ ಹೀಗೆ ತಪಸ್ಸುಮಾಡುತ್ತಲಿದ್ದ ಮೇಘಹಾಸನ ಬಳಿಗೆ ದೇವತೆಗಳೂ ಋಷಿಗಳೂ ಸಹ ಬಂದು ವಿನಯದಿಂದ,

೬. ಎಲೈ ಮಹಾಬಲ, ಈ ತಪಸ್ಸನ್ನು ನಿಲ್ಲಿಸು. ನಿನ್ನ ಇಷ್ಟಾರ್ಥವು ಶಿವ ಮತ್ತು ಗಂಗೆಯರ ಅನುಗ್ರಹದಿಂದ ಸಿದ್ಧಿಸುವುದು. ಶಿವಗಂಗೆಯರ ಅನುಗ್ರಹಕ್ಕೆ ದುರ್ಲಭವಾದ ವಸ್ತುವು ಯಾವುದಿರುವುದು ? ಎಂದರು.

೭. ಅದನ್ನು ಕೇಳಿ ಮೇಘಹಾಸನು ನನಗೆ ದೇವನೂ ಪೂಜ್ಯನೂ ಆದ ತಂದೆಯನ್ನು ನೀವು ಪೀಡಿಸಿರುವಿರಿ. ಆ ನನ್ನ ತಂದೆಗೂ ನನಗೂ ಸಂತೋಷವಾಗುವಂತೆ ನೀವು ಮಾಡಿದರೆ ಈ ತಪಸ್ಸನ್ನು ಬಿಡುವೆನು, ನಿಮ್ಮ ವೈರವನ್ನೂ ಬಿಡುವೆನು.

ಭವದ್ಭಿಸ್ತಪಸೋಽಸ್ಮಾಚ್ಚ ಅಹಂ ವ್ಯೆರಾನ್ನಿವರ್ತಯೇ ।
ವೈರನಿರ್ಯಾತನಂ ಕಾರ್ಯಂ ಪುತ್ರೇಣ ಪಿತುರಾದರಾತ್ ।
ಪ್ರಾರ್ಥಯಂತೇ ಭವಂತಶ್ಚೇತ್ಪೂರ್ಣಾಸ್ತನ್ಮೇ ಮನೋರಥಾಃ ॥ ೮ ॥

॥ ಬ್ರಹ್ಮೋವಾಚ ॥

ತತಃ ಸುರಗಣಾಃ ಸರ್ವೇ ರಾಹುಂ ಚಕ್ರುರ್ಗ್ರಹಾನುಗಂ ।
ತಂ ಚಾಪಿ ಮೇಘಹಾಸಂ ತೇ ಚಕ್ರೂ ರಾಕ್ಷಸಪುಂಗವಂ ॥ ೯ ॥

ತತೋಽಭವದ್ರಾಹುಸುತೋ ನೈರ್ಋತಾಧಿಪತಿಃ ಪ್ರಭುಃ ।
ಪುನಶ್ಚಾಹ ಸುರಾನ್ದೈತ್ಯೋ ಮಮ ಖ್ಯಾತಿರ್ಯಥಾ ಭವೇತ್ ॥ ೧೦ ॥

ತೀರ್ಥಸ್ಯಾಸ್ಯ ಪ್ರಭಾವಶ್ಚ ದಾತವ್ಯ ಇತಿ ಮೇ ಮತಿಃ ।
ತಥೇತ್ಯುಕ್ತ್ವಾ ದದುರ್ದೇವಾಃ ಸರ್ವಮೇವ ಮನೋಗತಂ ॥ ೧೧ ॥

---

೮. ಪುತ್ರನಾದವನು ತಂದೆಯ ಸೇಡನ್ನು ತೀರಿಸಬೇಕು. ನನ್ನ ತಂದೆಯನ್ನು ತಿರಸ್ಕರಿಸಿದ ನೀವು ಈಗ ನನ್ನನ್ನು ಪ್ರಾರ್ಥಿಸುತ್ತಿರವಿರಿ. ಇದರಿಂದಲೇ ನನ್ನ ಸೇಡು ತೀರಿತು. ನಮ್ಮಿಬ್ಬರಿಗೂ ಸಂತೋಷವಾಗುವಂತೆ ಮಾಡಿರಿ ಎಂದನು.

೯. ಆಮೇಲೆ ದೇವತೆಗಳು ರಾಹುವನ್ನು ಗ್ರಹಗಳಲ್ಲಿ ಓರ್ವನನ್ನಾಗಿ ಮಾಡಿದರು. ಮೇಘಹಾಸನನ್ನು ರಾಕ್ಷಸರಾಜನನ್ನಾಗಿ ಮಾಡಿದರು. ಅವನು ರಾಕ್ಷಸಾಧಿಪತಿಯಾಗಿ ನೈರ್ಋತ್ಯದಿಕ್ಕಿನಲ್ಲಿ ನೆಲಸಿದನು.

೧೦. ಪುನಃ ಮೇಘಹಾಸನು ನನಗೆ ಖ್ಯಾತಿಯುಂಟಾಗುವಂತೆಯೂ ಈ ತೀರ್ಥಕ್ಕೆ ಮಹಿಮೆಯುಂಟಾಗುವಂತೆಯೂ ಮಾಡಿರಿ ಎಂದು ಹೇಳಿದನು.

೧೧. ದೇವತೆಗಳು ಮೇಘಹಾಸನ ಕೋರಿಕೆಯನ್ನು ಈಡೇರಿಸಿದರು. ಅವನ ಹೆಸರಿನಿಂದ ಆ ತೀರ್ಥಕ್ಕೆ ದೈತ್ಯೇಶ್ವರತೀರ್ಥವೆಂದೂ ಹೆಸರಿಟ್ಟರು.

ದೈತ್ಯೇಶ್ವರಸ್ಯ ದೇವರ್ಷೇ ತನ್ನಾಮ್ನಾ ತೀರ್ಥಮುಚ್ಯತೇ ।
ದೇವಾ ಯತೋಽಭವನ್ಸರ್ವೇ ತತ್ರ ಸ್ಥಾನೇ ಮಹಾಮತೇ ॥ ೧೨ ॥

ದೇವಸ್ಥಾನಂ ತು ತತ್ತೀರ್ಥಂ ದೇವಾನಾಮಪಿ ದುರ್ಲಭಂ ।
ಯತ್ರ ದೇವೇಶ್ವರೋ ದೇವೋ ದೇವತೀರ್ಥಂ ತತಃ ಸ್ಮೃತಂ ॥ ೧೩ ॥

ತತ್ರಾಷ್ಟಾದಶ ತೀರ್ಥಾನಿ ದೈತ್ಯಪೂಜ್ಯಾನಿ ನಾರದ ।
ತೇಷು ಸ್ನಾನಂ ಚ ದಾನಂ ಚ ಮಹಾಪಾತಕನಾಶನಂ ॥ ೧೪ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ದೇವಸ್ಥಾನಾದ್ಯಷ್ಟಾದಶತೀರ್ಥವರ್ಣನಂ ನಾಮ
ದ್ವಿಚತ್ವಾರಿಂಶದಧಿಕಶತತಮೋಽಧ್ಯಾಯಃ

೧೨–೧೩. ಆ ಸ್ಥಳದಲ್ಲಿ ದೇವತೆಗಳೆಲ್ಲರೂ ಮೇಘಹಾಸನ ಸಮಾಧಾನಕ್ಕಾಗಿ ಸೇರಿದುದರಿಂದ ದೇವತೀರ್ಥವೆಂದೂ ಆ ತೀರ್ಥಕ್ಕೆ ಹೆಸರಾಯಿತು. ಮತ್ತು ದೇವದೇವನಾದ ಮಹಾದೇವನು ಅಲ್ಲಿ ನೆಲಸಿದುದರಿಂದ ದೇವತೀರ್ಥವೆಂದೂ ಹೆಸರಾಯಿತು.

೧೪. ಆ ತೀರ್ಥದಲ್ಲಿ ದೈತ್ಯರೂ ಸೇವಿಸುತ್ತಿರುವ ಹದಿನೆಂಟುತೀರ್ಥಗಳು ಇರುವುವು. ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಮಹಾಪಾಪಗಳೂ ನಾಶವಾಗುವುವು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ದೇವಸ್ಥಾನತೀರ್ಥವರ್ಣನವೆಂಬ ನೂರನಲವತ್ತೆರಡನೆಯ ಅಧ್ಯಾಯವು ಮುಗಿದುದು.

ಗೌತಮೀಯ ಮಾಹಾತ್ಮ್ಯೆಯಲ್ಲಿ ಎಪ್ಪತ್ತಮೂರನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ತ್ರಿಚತ್ವಾರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಸಿದ್ಧತೀರ್ಥಮಿತಿ ಖ್ಯಾತಂ ಯತ್ರ ಸಿದ್ಧೇಶ್ವರೋ ಹರಃ ।
ತಸ್ಯ ಪ್ರಭಾವಂ ವಕ್ಷ್ಯಾಮಿ ಸರ್ವಸಿದ್ಧಿಕರಂ ನೃಣಾಂ ॥ ೧ ॥

ಪುಲಸ್ತ್ಯವಂಶಸಂಭೂತೋ ರಾವಣೋ ಲೋಕರಾವಣಃ ।
ದಿಶೋ ವಿಜಿತ್ಯ ಸರ್ವಾಶ್ಚ ಸೋಮಲೋಕಮುಪಾಗಮತ್ ॥ ೨ ॥

ಸೋಮೇನ ಸಹ ಯೋತ್ಸ್ಯಂತಂ ದಶಾಸ್ಯಮಹಮಬ್ರವಂ ।
ಮಂತ್ರಂ ದಾಸ್ಯೇ ನಿವರ್ತಸ್ವ ಸೋಮಯುದ್ಧಾದ್ದಶಾನನ ॥ ೩ ॥

ನೂರನಲವತ್ತಮೂರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಸಿದ್ಧೇಶ್ವರವೆಂಬ ಪುಣ್ಯತೀರ್ಥವಿರುವುದು. ಆ ತೀರ್ಥದಲ್ಲಿ ಸಿದ್ಧೇಶ್ವರನೆಂಬ ಹೆಸರಿಂದ ಶಿವನು ನೆಲಸಿರುವನು. ಇಷ್ಟಸಿದ್ಧಿಯನ್ನುಂಟುಮಾಡುವಂತಹ ಆ ತೀರ್ಥದ ಮಾಹಾತ್ಮ್ಯವನ್ನು ಹೇಳುವೆನು.

೨. ಹಿಂದೆ ಪುಲಸ್ತ್ಯಬ್ರಹ್ಮನ ವಂಶದಲ್ಲಿ ಲೋಕಭಯಂಕರನಾದ ರಾವಣಾಸುರನು ಜನಿಸಿದನಷ್ಟೆ. ಆ ರಾವಣನು ದಿಗ್ವಿಜಯವನ್ನು ಮಾಡುತ್ತಾ ಚಂದ್ರಲೋಕಕ್ಕೆ ಬಂದನು.

೩. ಚಂದ್ರನೊಡನೆ ಯುದ್ಧಮಾಡುತ್ತಿದ್ದ ದಶಕಂಠನಿಗೆ—ನಾನು (ಬ್ರಹ್ಮನು) ರಹಸ್ಯವಾದೊಂದು ಮಂತ್ರವನ್ನುಪದೇಶಿಸುವೆನು, ಈ ಯುದ್ಧದಿಂದ ಹಿಂತಿರುಗು ಎಂದೆನು.

ಇತ್ಯುಕ್ತ್ವಾಷ್ಟೋತ್ತರಂ ಮಂತ್ರಂ ಶತನಾಮಭಿರನ್ವಿತಂ ।
ಶಿವಸ್ಯ ರಾಕ್ಷಸೇಂದ್ರಾಯ ಪ್ರಾದಾಂ ನಾರದ ಶಾಂತಯೇ ॥ ೪ ॥

ನಿಃಶ್ರೀಕಾಣಾಂ ವಿಪನ್ನಾನಾಂ ನಾನಾಕ್ಲೇಶಜುಷಾಂ ನೃಣಾಂ ।
ಶರಣಂ ಶಿವ ಏವಾತ್ರ ಸಂಸಾರೇಽನ್ಯೋ ನ ಕಶ್ಚನ ॥ ೫ ॥

ತತೋ ನಿವೃತ್ತಃ ಸ ಹ ಮಂತ್ರಿಯುಕ್ತ-
ಸ್ತತ್ಸೋಮಲೋಕಾಜ್ಜಯಮಾಪ್ಯ ರಕ್ಷಃ ।
ಸ ಪುಷ್ಪಕಾರೂಢಗತಿಃ ಸಗರ್ವೋ
ಲೋಕಾನ್ಪುನಃ ಪ್ರಾಪ ಜವಾದ್ದಶಾಸ್ಯಃ ॥ ೬ ॥

ಸ ಪ್ರೇಕ್ಷಮಾಣೋ ದಿವಮಂತರಿಕ್ಷಂ
ಭುವಂ ಚ ನಾಗಾಂಶ್ಚ ಗಜಾಂಶ್ಚ ವಿಪ್ರಾನ್ ।
ಆಲೋಕಯಾಮಾಸ ನಗಂ ಮಹಾಂತಂ
ಕೈಲಾಸಮಾವಾಸ ಉಮಾಪತೇರ್ಯಃ ॥ ೭ ॥

---

೪. ಹೀಗೆ ಹೇಳಿ ಆ ರಾಕ್ಷಸಾಧಿಪತಿಗೆ ಶಿವನ ಅಷ್ಟೋತ್ತರಶತನಾಮ ಮಂತ್ರವನ್ನುಪದೇಶಿಸಿದೆನು.

೫. ಎಲೈ ನಾರದ, ಈ ಸಂಸಾರದಲ್ಲಿ ದರಿದ್ರರಾಗಿದ್ದು ನಾನಾಬಗೆಯ ಕಷ್ಟಗಳಿಗೆ ಸಿಕ್ಕಿ ಬಳಲುತ್ತಿರುವವರಿಗೆ ಶಿವನೊರ್ವನು ಹೊರತು ಬೇರೆ ರಕ್ಷಕರು ಇಲ್ಲವು.

೬. ಆಮೇಲಾ ದಶಕಂಠನು ತನ್ನ ಮಂತ್ರಿಯೊಡನೆ ಚಂದ್ರಲೋಕ ದಿಂದ ಹೊರಟು ಪುಷ್ಪಕವಿಮಾನವೇರಿ ಲಂಕೆಗೆ ಹಿಂತಿರುಗಿದನು.

೭. ಆಕಾಶಮಾರ್ಗದಲ್ಲಿ ಬರುತ್ತಾ ಆ ರಾವಣನು ಸ್ವರ್ಗ, ಅಂತರಿಕ್ಷ ಭೂಲೋಕಗಳನ್ನೂ ಸರ್ಪಗಳನ್ನೂ ಆನೆಗಳನ್ನೂ ಬ್ರಾಹ್ಮಣರನ್ನೂ ನೋಡುತ್ತಾ ದಾರಿಯಲ್ಲಿ ಉಮಾಪತಿಗೆ ವಾಸಸ್ಥಾನವಾದ ಸುಂದರವಾದ ಗಗನ ಚುಂಬಿಯಾದ ಕೈಲಾಸಗಿರಿಯನ್ನು ನೋಡಿದನು.

ದೃಷ್ಟ್ವಾ ಸ್ಮಯೋತ್ಫುಲ್ಲದೃಗದ್ರಿರಾಜಂ
ಸ ಮಂತ್ರಿಣೌ ರಾವಣ ಇತ್ಯುವಾಚ ॥ ೮ ॥

॥ ರಾವಣ ಉವಾಚ ॥

ಕೋ ವಾ ಗಿರಾವತ್ರ ವಸೇನ್ಮಹಾತ್ಮಾ
ಗಿರಿಂ ನಯಾಮ್ಯೇನಮುಥಾಧಿ ಭೂಮೇಃ ।
ಲಂಕಾಗತೋಽಯಂ ಗಿರಿರಾಶು ಶೋಭಾಂ
ಲಂಕಾಪಿ ಸತ್ಯಂ ಶ್ರಿಯಮಾತನೋತಿ ॥ ೯ ॥

॥ ಬ್ರಹ್ಮೋವಾಚ ॥

ಇತ್ಥಂ ವಚೋ ರಾಕ್ಷಸಮಂತ್ರಿಣೌ ತೌ
ನಿಶಮ್ಯ ರಕ್ಷೋಽಧಿಪತೇಶ್ಚ ಭಾವಂ ।
ನ ಯುಕ್ತಮಿತ್ಯೂಚತುರಿಷ್ಟಬುದ್ಧ್ಯಾ
ನಿಶಾಚರಸ್ತದ್ವಚನಂ ನ ಮೇನೇ ॥ ೧೦ ॥
ಸಂಸ್ಥಾಪ್ಯ ತತ್ಪುಷ್ಪಕಮಾಶು ರಕ್ಷಃ
ಪುಪ್ಲಾವ ಕೈಲಾಸಗಿರೇಶ್ಚ ಮೂಲೇ ।
ಹಿಂದೋಲಯಾಮಾಸ ಗಿರಿಂ ದಶಾಸ್ಯೋ
ಜ್ಞಾತ್ವಾ ಭವಃ ಕೃತ್ಯಮಿದಂ ಚಕಾರ ॥ ೧೧ ॥

---

೮. ಆಶ್ಚರ್ಯದಿಂದ ಅರಳಿದ ಕಣ್ಣುಗಳಿಂದ ಆ ಗಿರಿಯನ್ನು ನೋಡಿ ರಾವಣನು ಮಂತ್ರಿಗಳನ್ನು ಪ್ರಶ್ನಿಸಿದನು.

೯. ಎಲೈ ಮಂತ್ರಿಗಳೇ, ಈ ಗಿರಿಯಲ್ಲಿ ಅದಾವ ಮಹಾತ್ಮನು ವಾಸವಾಗಿರುವನು? ಈ ಬೆಟ್ಟವನ್ನು ಭೂಮಿಗೆ ತೆಗೆದುಕೊಂಡು ಹೋಗುವೆನು. ನಮ್ಮ ಲಂಕೆಯಲ್ಲೀಗಿರಿಯನ್ನಿರಿಸಿದರೆ ತುಂಬಾ ಶೋಭಿಸುವುದು ಎಂದನು.

೧೦. ರಾವಣನ ಆಮಾತನ್ನು ಕೇಳಿ ಮಂತ್ರಿಗಳು ಹಿತದೃಷ್ಟಿಯಿಂದ ಕೈಲಾಸವನ್ನು ಒಯ್ಯುವುದು ಸರಿಯಲ್ಲ ಎಂದು ಹೇಳಿದರು. ಆದರೂ ರಾವಣನು ಅವರಮಾತನ್ನು ಕೇಳಲಿಲ್ಲ.

೧೧. ಆಮೇಲಾ ದಶಕಂಠನು ಪುಷ್ಪಕವಿಮಾನವನ್ನು ನಿಲ್ಲಿಸಿ ಕೈಲಾಸಗಿರಿಯ ಬುಡಕ್ಕೆ ಹೋದನು. ಬಲದ ಗರ್ವದಿಂದ ಆ ಗಿರಿಯನ್ನೆತ್ತಿ ಅಲುಗಾಡಿಸತೊಡಗಿದನು. ಮೇಲೆ ನೆಲಸಿದ್ದ ಮಹಾದೇವನು ಇದನ್ನು ತಿಳಿದು ತನ್ನ ಒಂದು ಕಾಲಿನ ಹೆಬ್ಬೆರಳಿನಿಂದ ಆಗಿರಿಯನ್ನೊತ್ತಿದನು.

ಜಿತ್ವಾ ದಿಗೀಶಾಂಶ್ಚ ಸಗರ್ವಿತಸ್ಯ
ಕೈಲಾಸಮಾಂದೋಲಯತಃ ಸುರಾರೇಃ ।
ಅಂಗುಷ್ಠಕೃತ್ಯೈವ ರಸಾತಲಾದಿ-
ಲೋಕಾಂಶ್ಚ ಯಾತಸ್ಯ ದಶಾನನಸ್ಯ ॥ ೧೨ ॥

ಆಲೂನಕಾಯಸ್ಯ ಗಿರಂ ನಿಶಮ್ಯ
ವಿಹಸ್ಯ ದೇವ್ಯಾ ಸಹ ದತ್ತಮಿಷ್ಟಂ ।
ತಸ್ಮೈ ಪ್ರಸನ್ನಃ ಕುಪಿತೋಽಪಿ ಶಂಭು-
ರಯುಕ್ತದಾತೇತಿ ನ ಸಂಶಯೋಽತ್ರ ॥ ೧೩ ॥

ತತೋಽಯಮಾವಾಪ್ಯ ವರಾನ್ಸುವೀರೋ
ಭವಪ್ರಸಾದಾತ್ಕುಸುಮಂ ಜಗಾಮ ।
ಗಚ್ಛನ್ಸ ಲಂಕಾಂ ಭವಪೂಜನಾಯ
ಗಂಗಾಮಗಾಚ್ಛಂಭುಜಟಾಪ್ರಸೂತಾಂ ॥ ೧೪ ॥

---

೧೨. ದಿಕ್ಪಾಲಕರನ್ನು ಜಯಿಸಿ ಗರ್ವದಿಂದ ರಾವಣನು ಉಬ್ಬಿಹೋಗಿದ್ದನು, ಇಲ್ಲಿ ಶಿವನು ಅಂಗುಷ್ಠವನ್ನೂರಿದೊಡನೆಯೇ ಆ ರಾಕ್ಷಸನು ಬಲಿರಾಜನಂತೆ ಪಾತಾಳಕ್ಕಿಳಿದುಹೋದನು. ಶರೀರವೆಲ್ಲವೂ ಜರ್ಝರಿತವಾಯಿತು.

೧೩. ವ್ಯಥೆಯಿಂದಲೂ ಆಯಾಸದಿಂದಲೂ ರಾವಣನು ಕಂಗೆಟ್ಟು ಶಿವನಿಗೆ ಮೊರೆಯಿಟ್ಟನು. ಕುಪಿತನಾಗಿದ್ದರೂ ಸಹ ಶಿವನು ಅವನ ಮೊರೆಗೆ ಮನಕರಗಿ ದೇವಿಯೊಡನೆ ರಾವಣನಿಗೆ ಇಷ್ಟಾರ್ಥಗಳನ್ನು ಕರುಣಿಸಿದನು. ಮಹಾತ್ಮರ ಸ್ವಭಾವವೇ ಅಂತಹುದು, ಅಪರಾಧಿಗಳಿಗೂ ಅನುಗ್ರಹಿಸುವರು.

೧೪. ಶಿವನ ವರದಿಂದ ರಾವಣನು ಪಾತಾಳದಿಂದ ಮೇಲಕ್ಕೆ ಬಂದನು. ಆಮೇಲವನು ಲಂಕೆಗೆ ಹೊರಟು ದಾರಿಯಲ್ಲಿ ಶಿವನನ್ನು ಪೂಜಿಸುವ ಉದ್ದೇಶದಿಂದ ಶಿವನ ಜಟೆಯಿಂದ ಹೊರಟ ಗಂಗಾನದಿಗೆ ತೆರಳಿದನು.

ಸಂಪೂಜಯಿತ್ವಾ ವಿವಿಧೈಶ್ಚ ಮಂತ್ರೈ-
ರ್ಗಂಗಾಜಲೈಃ ಶಂಭುಮದೀನಸತ್ತ್ವಃ ।
ಅಸಿಂ ಸ ಲೇಭೇ ಶಶಿಖಂಡಭೂಷಾ-
ತ್ಸಿದ್ಧಿಂ ಚ ಸರ್ವಾರ್ಥಿಮಭೀಪ್ಸಿತಾಂ ಚ ॥ ೧೫ ॥

ಮದ್ದತ್ತಮಂತ್ರಂ ಶಶಿರಕ್ಷಣಾಯ
ಸ ಸಾಧಯಾಮಾಸ ಭವಂ ಪ್ರಪೂಜ್ಯ ।
ಸಿದ್ಧೇ ತು ಮಂತ್ರೇ ಪುನರೇವ ಲಂಕಾ-
ಮಯಾತ್ಸ ರಕ್ಷೋಧಿಪತಿಃ ಸ ತುಷ್ಟಃ ॥ ೧೬ ॥

ತತಃ ಪ್ರಭೃತ್ಯೇತದತಿಪ್ರಭಾವಂ
ತೀರ್ಥಂ ಮಹಾಸಿದ್ಧಿದಮಿಷ್ಟದಂ ಚ ।
ಸಮಸ್ತಪಾಪೌಘವಿನಾಶನಂ ಚ
ಸಿದ್ಧೈರಶೇಷೈಃ ಪರಿಸೇವಿತಂ ಚ ॥ ೧೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಸಿದ್ಧತೀರ್ಥಾದ್ಯಷ್ಟೋತ್ತರಶತತೀರ್ಥವರ್ಣನಂ ನಾಮ
ತ್ರಿಚತ್ವಾರಿಂಶದಧಿಕಶತತಮೋಽಧ್ಯಾಯಃ

---

೧೫. ಗಂಗಾತೀರದಲ್ಲಿ ಶಂಕರನನ್ನು ಮಂತ್ರಪೂರ್ವಕವಾಗಿ ಗಂಗಾಜಲದಿಂದ ಅಭಿಷೇಕಮಾಡಿ ಭಕ್ತಿಯಿಂದ ಪೂಜಿಸಿದನು. ಪ್ರಸನ್ನನಾದ ಶಿವನಿಂದ ಮಹಾಖಡ್ಗವೊಂದನ್ನು ಪಡೆದನು ಮತ್ತು ಸರ್ವಸಿದ್ಧಿಯನ್ನೂ ಐಶ್ವರ್ಯವನ್ನೂ ಪಡೆದನು.

೧೬. ಆ ರಾವಣನು ಶಿವನನ್ನರ್ಚಿಸಿ ನಾನು ಉಪದೇಶಿಸಿದ ಶಿವಾಷ್ಟೋತ್ತರಮಂತ್ರವನ್ನು ಸಿದ್ಧಿಮಾಡಿಕೊಂಡನು, ಮಂತ್ರಸಿದ್ಧಿಯಾದಮೇಲಾ ಮಹಾತ್ಮನಾದ ರಾವಣನು ಲಂಕೆಗೆ ಬಂದನು.

೧೭. ಆಮೊದಲುಗೊಂಡು ಆ ತೀರ್ಥವು ಸಿದ್ಧತೀರ್ಥವೆಂದು ಪ್ರಸಿದ್ಧವಾಯಿತು. ಇಷ್ಟಾರ್ಥಗಳೆಲ್ಲವನ್ನೂ ಸಿದ್ಧಿಗಳೆಲ್ಲವನ್ನೂ ಉಂಟುಮಾಡುವುದೂ ಪಾಪಗಳನ್ನು ಹೋಗಲಾಡಿಸುವುದೂ ಆದ ತೀರ್ಥವನ್ನು ಸಿದ್ಧಯೋಗಿಗಳೆಲ್ಲರೂ ಸೇವಿಸುವರು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸಿದ್ಧತೀರ್ಥವರ್ಣನವೆಂಬ ನೂರನಲವತ್ತಮೂರನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಎಪ್ಪತ್ತನಾಲ್ಕನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಚತುಶ್ಚತ್ವಾರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಪರುಷ್ಣೀಸಂಗಮಂ ಚೇತಿ ತೀರ್ಥಂ ತ್ರೈಲೋಕ್ಯವಿಶ್ರುತಂ ।
ತಸ್ಯ ಸ್ವರೂಪಂ ವಕ್ಷ್ಯಾಮಿ ಶೃಣು ಪಾಪವಿನಾಶನಂ ॥ ೧ ॥

ಅತ್ರಿರಾರಾಧಯಾಮಾಸ ಬ್ರಹ್ಮವಿಷ್ಣುಮಹೇಶ್ವರಾನ್ ।
ತೇಷು ತುಷ್ಟೇಷು ಸ ಪ್ರಾಹ ಪುತ್ರಾ ಯೂಯಂ ಭವಿಷ್ಯಥ ॥ ೨ ॥

ತಥಾ ಚೈಕಾ ರೂಪವತೀ ಕನ್ಯಾ ಮಮ ಭವೇತ್ಸುರಾಃ ।
ತಥಾ ಪುತ್ರತ್ವಮಾಪುಸ್ತೇ ಬ್ರಹ್ಮವಿಷ್ಣುಮಹೇಶ್ವರಾಃ ॥ ೩ ॥

ನೂರನಲವತ್ತನಾಲ್ಕನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಪರುಷ್ಣೀಸಂಗಮವೆಂಬ ಮಹಾಪುಣ್ಯತೀರ್ಥವು ಇರುವುದು. ಅದರ ಮಾಹಾತ್ಮ್ಯವನ್ನು ಹೇಳುವೆನು ಕೇಳು.

೨. ಅತ್ರಿಮುನಿಯು ಹಿಂದೆ ಬ್ರಹ್ಮವಿಷ್ಣುಮಹೇಶ್ವರರನ್ನು ಭಕ್ತಿಯಿಂದ ಆರಾಧಿಸಿದನು. ತ್ರಿಮೂರ್ತಿಗಳು ಪ್ರಸನ್ನರಾಗಲು ಆ ಮುನಿಯು ನೀವು ನನಗೆ ಮಕ್ಕಳಾಗಿ ಜನಿಸಿರಿ ಎಂದು ವರವನ್ನು ಬೇಡಿದನು ಮತ್ತು ರೂಪವತಿಯಾದ ಕನ್ಯೆಯೋರ್ವಳು ನನಗೆ ಜನಿಸಲಿ ಎಂದೂ ವರವನ್ನು ಬೇಡಿದನು.

೩–೪. ಅತ್ರಿಮುನಿಯ ಕೋರಿಕೆಯಂತೆ ಬ್ರಹ್ಮವಿಷ್ಣುಮಹೇಶ್ವರರು ಅತ್ರಿಯ ಮಕ್ಕಳಾಗಿ ಜನಿಸಿದರು. ಆತ್ರೇಯೀ ಎಂಬ ರೂಪವತಿಯಾದ ಮಗ

ಕನ್ಯಾಂ ಚ ಜನಯಾಮಾಸ ಶುಭಾತ್ರೇಯೀತಿ ನಾಮತಃ ।
ದತ್ತಃ ಸೋಮೋಽಥ ದುರ್ವಾಸಾಃ ಪುತ್ರಾಸ್ತಸ್ಯ ಮಹಾತ್ಮನಃ ॥ ೪ ॥

ಅಗ್ನೇರಂಗಿರಸೋ ಜಾತೋ ಹ್ಯಂಗಾರೈರಂಗಿರಾ ಯತಃ ।
ತಸ್ಮಾದಂಗಿರಸೇ ಪ್ರಾದಾದಾತ್ರೇಯೀಮತಿರೋಚಿಷಂ ॥ ೫ ॥

ಅಗ್ನೇಃ ಪ್ರಭಾವಾತ್ಪುರುಷಮಾತ್ರೇಯೀಂ ಸರ್ವದಾವದತ್ ।
ಆತ್ರೇಯ್ಯಪಿ ಚ ಶುಶ್ರೂಷಾಂ ಕುರ್ವತೀ ಸರ್ವದಾಭವತ್ ॥ ೬ ॥

ತಸ್ಯಾಮಾಂಗಿರಸಾ ಜಾತಾ ಮಹಾಬಲಪರಾಕ್ರಮಾಃ ।
ಅಂಗಿರಾಃ ಪರುಷಂ ವಾದೀದಾತ್ರೇಯೀಂ ನಿತ್ಯಮೇವ ಚ ॥ ೭ ॥

ಪುತ್ರಾಸ್ತ್ವಾಂಗಿರಸಾ ನಿತ್ಯಂ ಪಿತರಂ ಶಮಯಂತಿ ತೇ ।
ಸಾ ಕದಾಚಿದ್ಭರ್ತೃವಾಕ್ಯಾದುದ್ವಿಗ್ನಾ ಪರುಷಾಕ್ಷರಾತ್ ।
ಕೃತಾಂಜಲಿಪುಟಾ ದೀನಾ ಪ್ರಾಬ್ರವೀಚ್ಛ್ವಶುರಂ ಗುರುಂ ॥ ೮ ॥

ಳನ್ನು ಪಡೆದನು. ದತ್ತಾತ್ರೇಯ, ಚಂದ್ರ, ದೂರ್ವಾಸಮುನಿ ಇವರೇ ಅತ್ರಿಯ ಗಂಡುಮಕ್ಕಳು.

೫. ಅಗ್ನಿಯಿಂದ ಆಂಗಿರಸ್ಸನು ಜನಿಸಿದನು, ಅಗ್ನಿಯಂತೆ ತೇಜಸ್ವಿಯಾದ ಆಂಗಿರಸನಿಗೆ ಆತ್ರೇಯಾದೇವಿಯನ್ನು ಅತ್ರಿಯು ಮದುವೆಮಾಡಿ ಕೊಟ್ಟನು.

೬. ಅಗ್ನಿಯ ಮಗನಾದುದರಿಂದ ಆಂಗಿರಸ್ಸನು ಪತ್ನಿಯಾದ ಆತ್ರೇಯೀದೇವಿಯೊಡನೆ ಕಠಿಣವಾಗಿ ಮಾತನಾಡುತ್ತಿದ್ದನು, ಆದರೆ ಅವಳು ಸದಾ ಪತಿಸೇವೆಯನ್ನು ಮಾಡುತ್ತಿದ್ದಳು.

೭. ಆತ್ರೇಯಿಯಲ್ಲಿ ಮಹಾತೇಜಸ್ವಿಗಳಾದಂತಹ ಆಂಗಿರಸಕುಮಾರರು ಜನಿಸಿದರು. ಅಂಗಿರಸ್ಸನು ಆತ್ರೇಯಿಗೆ ಕಠಿಣಮಾತುಗಳನ್ನಾಡುವಾಗಲೆಲ್ಲಾ ಈ ಆಂಗಿರಸರು ಸಮಾಧಾನಗೊಳಿಸುತ್ತಿದ್ದರು.

೮. ಪತಿಯ ಕಠಿಣ ವಾಕ್ಯಗಳಿಗೆ ನೊಂದು ಆ ಆತ್ರೇಯಿಯು ಮಾವನ ಬಳಿಗೆ ಬಂದು ಕೈಗಳನ್ನು ಜೋಡಿಸಿ ವಿನಯದಿಂದ—

॥ ಆತ್ರೇಯ್ಯುವಾಚ ॥

ಅತ್ರಿಜಾಹಂ ಹವ್ಯವಾಹ ಭಾರ್ಯಾ ತವ ಸುತಸ್ಯ ವೈ ।
ಶುಶ್ರೂಷಣಪರಾ ನಿತ್ಯಂ ಪುತ್ರಾಣಾಂ ಭರ್ತುರೇವ ಚ ॥ ೯ ॥

ಪತಿರ್ಮಾಂ ಪರುಷಂ ವಕ್ತಿ ವೃಥೈವೋದ್ವೀಕ್ಷತೇ ರುಷಾ ।
ಪ್ರಶಾಧಿ ಮಾಂ ಸುರಜ್ಯೇಷ್ಠ ಭರ್ತಾರಂ ಮಮ ದೈವತಂ ॥ ೧೦ ॥

॥ ಜ್ವಲನ ಉವಾಚ ॥

ಅಂಗಾರೇಭ್ಯಃ ಸಮುದ್ಭೂತೋ ಭರ್ತಾ ತೇ ಹ್ಯಂಗಿರಾ ಋಷಿಃ ।
ಯಥಾ ಶಾಂತೋ ಭವೇದ್ಭದ್ರೇ ತಥಾ ನೀತಿರ್ವಿಧೀಯತಾಂ ॥ ೧೧ ॥

ಆಗ್ನೇಯೋಽಗ್ನಿಂ ಸಮಾಯಾತೋ ತವ ಭರ್ತಾ ವರಾನನೇ ।
ತದಾ ತ್ವಂ ಜಲರೂಪೇಣ ಪ್ಲಾವಯೇಥಾ ಮದಾಜ್ಞಯಾ ॥ ೧೨ ॥

---

೯. ಓ ಅಗ್ನಿಯೇ, ನಾನು, ಅತ್ರಿಮುನಿಯ ಮಗಳು ನಿನ್ನ ಮಗನ ಪತ್ನಿಯು ಸದಾ ನಾನು ಶ್ರದ್ಧೆಯಿಂದ ಪತಿಯನ್ನು ಸೇವಿಸುವೆನು. ಮಕ್ಕಳನ್ನು ಪೋಷಿಸುವೆನು.

೧೦. ಹೀಗಿದ್ದರೂ ಪತಿಯು ನನಗೆ ಕಠಿಣವಾಕ್ಯವನ್ನಾಡುವನು, ಸುಮ್ಮಸುಮ್ಮನೆ ಕೋಪಗೊಳ್ಳುವನು. ಈ ಬಾಧೆಯನ್ನು ಪರಿಹರಿಸಿ ನನ್ನನ್ನೂ ನನ್ನ ದೈವವಾದ ಪತಿಯನ್ನೂ ಸಲಹು. ನೀನು ದೇವಶ್ರೇಷ್ಠನಲ್ಲವೇ ಎಂದಳು.

೧೧. ಅಗ್ನಿಯು ಹೇಳಿದನು—ಎಲೌ ಕಲ್ಯಾಣಿ, ನಿನ್ನ ಪತಿಯಾದ ಅಂಗಿರಸ್ಸನು ನನ್ನ (ಅಗ್ನಿಯ) ಕಣಗಳಿಂದ ಜನಿಸಿರುವನು, ಅಂತಹವನು ಶಾಂತನಾಗುವಂತಹ ಉಪಾಯವನ್ನು ಮಾಡಬೇಕು.

೧೨. ಎಲೌ ಆತ್ರೇಯಿ, ಅಂಗಿರಸ್ಸನು ಅಗ್ನಿಯಲ್ಲಿ ಸೇರುವಂತೆ ಮಾಡಿ ಆಗ ನೀನು ಜಲರೂಪದಿಂದ ಅವನನ್ನು ಶಾಂತಗೊಳಿಸು ಎಂದನು.

॥ ಆತ್ರೇಯ್ಯುವಾಚ ॥

ಸಹೇಯಂ ಪರುಷಂ ವಾಕ್ಯಂ ಮಾ ಭರ್ತಾಗ್ನಿಂ ಸಮಾವಿಶೇತ್ ।
ಭರ್ತರಿ ಪ್ರತಿಕೂಲಾನಾಂ ಯೋಷಿತಾಂ ಜೀವನೇನ ಕಿಂ ॥ ೧೩ ॥

ಇಚ್ಛೇಯಂ ಶಾಂತಿವಾಕ್ಯಾನಿ ಭರ್ತಾರಂ ಲಭತೇ ತಥಾ ॥ ೧೪ ॥

॥ ಜ್ವಲನ ಉವಾಚ ॥

ಅಗ್ನಿಸ್ತ್ವಪ್ಸು ಶರೀರೇಷು ಸ್ಥಾವರೇ ಜಂಗಮೇ ತಥಾ ।
ತವ ಭರ್ತುರಹಂ ಧಾಮ ನಿತ್ಯಂ ಚ ಜನಕೋ ಮತಃ ॥ ೧೫ ॥

ಯೋಽಹಂ ಸೋಽಹಮಿತಿ ಜ್ಞಾತ್ವಾ ನ ಚಿಂತಾಂ ಕರ್ತುಮರ್ಹಸಿ ।
ಕಿಂಚಾಪೋ ಮಾತರೋ ದೇವ್ಯೋ ಹ್ಯಗ್ನಿಃ ಶ್ವಶುರ ಇತ್ಯಪಿ ।
ಇತಿ ಬುದ್ಧ್ವಾ ವಿನಿಶ್ಚಿತ್ಯ ಮಾ ವಿಷಣ್ಣಾ ಭವ ಸ್ನುಷೇ ॥ ೧೬ ॥

॥ ಸ್ನುಷೋವಾಚ ॥

ಆಪೋ ಜನನ್ಯ ಇತಿ ಯದ್ಬಭಾಷೇ
ಅಗ್ನೇರಹಂ ತವ ಪುತ್ರಸ್ಯ ಭಾರ್ಯಾ ।

೧೩-೧೪. ಅದನ್ನು ಕೇಳಿ ಆತ್ರೇಯಿಯು ಕಠಿಣವಾಕ್ಯಗಳನ್ನಾದರೂ ಸಹಿಸಬಲ್ಲೆನು. ಪತಿಯು ಅಗ್ನಿಪ್ರವೇಶಮಾಡುವುದು ಬೇಡ. ಪತಿಗೆ ವಿರುದ್ಧ ವಾಗಿ ಸ್ತ್ರೀಯರು ಜೀವಿಸಿ ಪ್ರಯೋಜನವೇನು ? ಪತಿಯು ಶಾಂತರೀತಿಯಿಂದ ನಡೆದರೆ ಅಷ್ಟೇ ನನಗೆ ಸಾಕು ಎಂದಳು.

೧೫. ಅಗ್ನಿಯಿಂತೆಂದನು—ಅಗ್ನಿಯು ಜಲ ಮತ್ತು ಸ್ಥಿರಚರರೂಪ ವಾದ ಶರೀರಗಳಲ್ಲಿ ನೆಲಸಿರುವನು. ಅದರಂತೆ ನಿನ್ನ ಪತಿಗೆ ನಾನು ಆಶ್ರಯನು ಮೇಲಾಗಿ ತಂದೆಯು. ತಂದೆಯೂ ಮಗನೂ ಒಂದೇ. ಈ ಕಾರಣದಿಂದ ಅಂಗಿರಸ್ಸನು ನನ್ನಲ್ಲಿ ಪ್ರವೇಶಿಸಿದರೆ ತೊಂದರೆಯಿಲ್ಲ. ಇದನ್ನು ಯೋಚಿಸಿ ನೀನು ಚಿಂತೆಯನ್ನು ಬಿಡು.

೧೬. ಅಲ್ಲದೆ ಜಲದೇವತೆಯು ಜಗತ್ತಿಗೆ ಮಾತೃವಾದುದು, ಅಗ್ನಿಯು ಜಲಕ್ಕೆ ಮಾವನು. ಇದನ್ನು ತಿಳಿದು ನೀನು ವ್ಯಥೆಯನ್ನು ಬಿಡು ಎಂದನು.

೧೭. ಸೊಸೆಯಾದ ಆತ್ರೇಯಿಯು ಜಲದೇವತೆಯು ಜಗ ತ್ತಿಗೆ ಮಾತೃವು ಎಂದು ಹೇಳಿದೆಯಲ್ಲವೇ ? ಹೀಗಿರಲು ನಾನು ಜಲರೂಪ

ಕಥಂ ಭೂತ್ವಾ ಜನನೀ ಚಾಪಿ ಭಾರ್ಯಾ
ವಿರುದ್ಧಮೇತಜ್ಜ್ವಲರೂಪೇಣ ನಾಥ ॥ ೧೭ ॥

॥ ಜ್ವಲನ ಉವಾಚ ॥

ಆದೌ ತು ಪತ್ನೀ ಭರಣಾತ್ತು ಭಾರ್ಯಾ
ಜನೇಸ್ತು ಜಾಯಾ ಸ್ವಗುಣೈಃ ಕಲತ್ರಂ ।
ಇತ್ಯಾದಿರೂಪಾಣಿ ಬಿಭರ್ಷಿ ಭದ್ರೇ
ಕುರುಷ್ವ ವಾಕ್ಯಂ ಮದುದೀರಿತಂ ಯತ್ ॥ ೧೮ ॥

ಯೋಽಸ್ಯಾಂ ಪ್ರಜಾತಃ ಸ ತು ಪುತ್ರ ಏವ
ಸಾ ತಸ್ಯ ಮಾತೈವ ನ ಸಂಶಯೋಽತ್ರ ।
ತಸ್ಮಾದ್ವದಂತಿ ಶ್ರುತಿತತ್ತ್ವವಿಜ್ಞಾಃ
ಸಾ ನೈವ ಯೋಷಿತ್ತನಯೋಽಭಿಜಾತೇ ॥ ೧೯ ॥

ವನ್ನು ಹೊಂದಿದರೆ ಮಾತೆಯಾದಂತಾಗುವುದು, ಪತ್ನಿಯು ಪತಿಗೆ ಮಾತೆಯಾಗುವುದು ವಿರುದ್ಧವಲ್ಲವೇ ? ಎನ್ನಲು,

೧೮. ಅಗ್ನಿಯು ಮತ್ತೆ ಹೇಳಿದನು—ಎಲೌ ಮಗಳೇ, ಮದುವೆಯಾದೊಡನೆ ಸ್ತ್ರೀಯು ಪತ್ನಿಯೆನಿಸಿಕೊಳ್ಳುವಳು. ಗೃಹಕೃತ್ಯವನ್ನು ಮಾಡುತ್ತಾ ಪತಿಪುತ್ರರನ್ನು ಪೋಷಿಸುವುದರಿಂದ ಮುಂದೆ ಭಾರ್ಯೆಯೆನಿಸುವಳು. ತನ್ನ ಶೃಂಗಾರಗುಣಗಳಿಂದ ಹೆಂಡತಿಯೆನಿಸುವಳು. ಹೀಗೆ ನೀನೂ ಸಹ ಅನೇಕ ರೂಪಗಳನ್ನು ಧರಿಸುವೆ. ಪೋಷಿಸುವಂತಹ ಶಕ್ತಿಯು ಮಾತೆಯ ಅಂಶವೇ ಆಗಿರುವುದು. ಆದುದರಿಂದ ನೀನು ನಿನ್ನ ಪತಿಗೆ ಮಾತೃಸ್ಥಾನವನ್ನು ಹೊಂದುವುದು ವಿರುದ್ಧವಲ್ಲ.

೧೯. ಸ್ತ್ರೀಯಲ್ಲಿ ಜನಿಸಿದವನು ಅವಳಿಗೆ ಪುತ್ರನು. ಅವಳವನಿಗೆ ಮಾತೆಯು. ಅಲ್ಲದೆ ಪುತ್ರನು ಪಿತೃಸ್ವರೂಪನು. ಪುತ್ರನಿಗೆ ಅವಳು ಮಾತೆಯಾದರೆ ಪಿತೃವಿಗೂ ಮಾತೆಯಾದಂತೆಯೇ. ಆದುದರಿಂದಲೇ ತಿಳಿದವರು ಮಕ್ಕಳಾದಮೇಲೆ ಸ್ತ್ರೀಯು ಕೇವಲಸ್ತ್ರೀಯಲ್ಲ. ಅವಳು ಮಾತೆಯು ಎಂದು ಹೇಳುವರು ಎಂದನು.

॥ ಬ್ರಹ್ಮೋವಾಚ ॥

ಶ್ವಶುರಸ್ಯ ತು ತದ್ವಾಕ್ಯಂ ಶ್ರುತ್ವಾತ್ರೇಯಿಶಾ ತದೈವ ತತ್ ।
ಆಗ್ನೇಯಂ ರೂಪಮಾಪನ್ನಮಂಭಸಾಪ್ಲಾವಯತ್ಪತಿಂ ॥ ೨೦ ॥

ಉಭೌ ತೌ ದಂಪತೀ ಬ್ರಹ್ಮನ್ಸಂಗತೌ ಗಾಂಗವಾರಿಣಾ ।
ಶಾಂತರೂಪಧರೌ ಚೋಭೌ ದಂಪತೀ ಸಂಬಭೂವತುಃ ॥ ೨೧ ॥

ಲಕ್ಷ್ಮ್ಯಾ ಯುಕ್ತೋ ಯಥಾ ವಿಷ್ಣುರುಮಯಾ ಶಂಕರೋ ಯಥಾ ।
ರೋಹಿಣ್ಯಾ ಚ ಯಥಾ ಚಂದ್ರಸ್ತಥಾಭೂನ್ಮಿಥುನಂ ತದಾ ॥ ೨೨ ॥

ಭರ್ತಾರಂ ಪ್ಲಾವಯಂತೀ ಸಾ ದಧಾರಾಂಬುಮಯಂ ವಪುಃ ।
ಪರುಷ್ಣೀ ಚೇತಿ ವಿಖ್ಯಾತಾ ಗಂಗಯಾ ಸಂಗತಾ ನದೀ ॥ ೨೩ ॥

ಗೋಶತಾರ್ಪಣಜಂ ಪುಣ್ಯಂ ಪರುಷ್ಣೀಸ್ನಾನತೋ ಭವೇತ್ ।
ತತ್ರ ಚಾಂಗಿರಸಾಶ್ಚಕ್ರುರ್ಯಜ್ಞಾಂಶ್ಚ ಬಹುದಕ್ಷಿಣಾನ್ ॥ ೨೪ ॥

---

೨೦. ಮಾವನ ಆ ಮಾತನ್ನು ಕೇಳಿ ಅತ್ರೇಯಿಯು ಆ ಕೂಡಲೇ ಅಗ್ನಿರೂಪವನ್ನು ಧರಿಸಿದ್ದ ಪತಿಯನ್ನು ಜಲರೂಪದಿಂದ ಆವರಿಸಿದಳು.

೨೧. ಆಗ ಆ ಆತ್ರೇಯಾಂಗಿರಸ್ಸರು ಗಂಗಾಸಲಿಲದಿಂದ ಪರಿಶುದ್ಧರಾಗಿ ಶಾಂತವೂ ಸುಂದರವೂ ಆದ ರೂಪವುಳ್ಳವರಾದರು.

೨೨. ಆ ಋಷಿದಂಪತಿಗಳು ಲಕ್ಷ್ಮೀನಾರಾಯಣರಂತೆಯೂ ಪಾರ್ವತೀಪರಮೇಶ್ವರರಂತೆಯೂ ರೋಹಿಣೀಚಂದ್ರರಂತೆಯೂ ಆಗ ಶೋಭಿಸಿದರು.

೨೩. ಪತಿಯನ್ನು ಆವರಿಸಲು ಆತ್ರೇಯಿಯು ಜಲರೂಪಳಾದಾಗ ಪರುಷ್ಣಿಯೆಂಬ ನದಿಯಾದಳು. ಆ ನದಿಯು ಗಂಗೆಯನ್ನು ಸೇರಿತು.

೨೪. ಪರುಷ್ಣೀನದಿಯಲ್ಲಿ ಸ್ನಾನಮಾಡಿದರೆ ನೂರು ಗೋದಾನಗಳ ಫಲವು ಲಭಿಸುವುದು. ಆ ಪರುಷ್ಣೀನದಿಯ ತೀರದಲ್ಲಿ ಮುಂದೆ ಆಂಗೀರಸವಂಶದ ಮುನಿಗಳು ಅನೇಕ ಮಹಾಯಾಗಗಳನ್ನು ನಡೆಯಿಸಿದರು.

ತತ್ರ ತ್ರೀಣಿ ಸಹಸ್ರಾಣಿ ತೀರ್ಥಾನ್ಯಾಹುಃ ಪುರಾಣಗಾಃ ।
ಉಭಯೋಸ್ತೀರಯೋಸ್ತಾತ ಪೃಥಗ್ಯಾಗಫಲಂ ವಿದುಃ ॥ ೨೫ ॥

ತೇಷು ಸ್ನಾನಂ ಚ ದಾನಂ ಚ ವಾಜಪೇಯಾಧಿಕಂ ಮತಂ ।
ವಿಶೇಷತಸ್ತು ಗಂಗಾಯಾಃ ಪರುಷ್ಣ್ಯಾ ಸಹ ಸಂಗಮೇ ॥ ೨೬ ॥

ಸ್ನಾನದಾನಾದಿಭಿಃ ಪುಣ್ಯಂ ಯತ್ತದ್ವಕ್ತುಂ ನ ಶಕ್ಯತೇ ॥ ೨೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಪರುಷ್ಣೀಸಂಗಮಾದಿತ್ರಿಸಹಸ್ರತೀರ್ಥವರ್ಣನಂ ನಾಮ ಚತುಶ್ಚತ್ವಾರಿಂಶದಧಿಕಶತತಮೋಽಧ್ಯಾಯಃ

---

೨೫. ಆ ನದಿಯ ಎರಡು ತೀರಗಳಲ್ಲೂ ಮೂರುಸಾವಿರ ತೀರ್ಥಗಳ್ ಇರುವುವು. ಅವುಗಳೊಂದೊಂದೂ ಅಶ್ವಮೇಧಯಾಗಫಲವನ್ನುಂಟುಮಾಡುವುದು.

೨೬-೨೭. ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ವಾಜಪೇಯಯಾಗದ ಫಲವು ಲಭಿಸುವುದು. ವಿಶೇಷವಾಗಿ ಗಂಗಾಪರುಷ್ಣೀನದಿಗಳ ಸಂಗಮಸ್ಥಳದಲ್ಲಿ ಸ್ನಾನದಾನಗಳನ್ನು ಮಾಡುವುದರಿಂದ ಲಭಿಸುವ ಪುಣ್ಯವನ್ನು ಹೇಳಲು ಸಾಧ್ಯವಿಲ್ಲ.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಪರುಷ್ಣೀತೀರ್ಥವರ್ಣನವೆಂಬ ನೂರನಲವತ್ತ ನಾಲ್ಕನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಎಪ್ಪತ್ತೈದನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಚತ್ವಾರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಮಾರ್ಕಂಡೇಯಂ ನಾಮ ತೀರ್ಥಂ ಸರ್ವಪಾಪವಿಮೋಚನಂ ।
ಸರ್ವಕ್ರತುಫಲಂ ಪುಣ್ಯಮಘೌಘವಿನಿವಾರಣಂ ॥ ೧ ॥

ತಸ್ಯ ಪ್ರಭಾವಂ ವಕ್ಷ್ಯಾಮಿ ಶೃಣು ನಾರದ ಯತ್ನತಃ ।
ಮಾರ್ಕಂಡೇಯೋ ಭರದ್ವಾಜೋ ವಸಿಷ್ಠೋಽತ್ರಿಶ್ಚ ಗೌತಮಃ ॥ ೨ ॥

ಯಾಜ್ಞವಲ್ಕ್ಯಶ್ಚ ಜಾಬಾಲಿರ್ಮುನಯೋಽನ್ಯೇಽಪಿ ನಾರದ ।
ಏತೇ ಶಾಸ್ತ್ರಪ್ರಣೇತಾರೋ ವೇದವೇದಾಂಗಪಾರಗಾಃ ॥ ೩ ॥

ಪುರಾಣನ್ಯಾಯಮೀಮಾಂಸಾಕಥಾಸು ಪರಿನಿಷ್ಠಿತಾಃ ।
ಮಿಥಃ ಸಮೂಚುರ್ವಿದ್ವಾಂಸೋ ಮುಕ್ತಿಂ ಪ್ರತಿ ಯಥಾಮತಿ ॥ ೪ ॥

ನೂರನಲವತ್ತೈದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಮಾರ್ಕಂಡೇಯವೆಂಬ ಪುಣ್ಯತೀರ್ಥವಿರುವುದು. ಅದು ಪಾಪಗಳೆಲ್ಲವನ್ನೂ ಹೋಗಲಾಡಿಸುವುದಲ್ಲದೆ ಯಾಗಫಲವೆಲ್ಲವನ್ನೂ ಉಂಟುಮಾಡುವುದು. ಆ ತೀರ್ಥದ ಮಾಹಾತ್ಮ್ಯವನ್ನು ಹೇಳುವೆನು, ಶ್ರದ್ಧೆಯಿಂದ ಕೇಳು.

೨-೩. ಮಾರ್ಕಂಡೇಯ, ಭರದ್ವಾಜ, ವಸಿಷ್ಠ, ಅತ್ರಿ, ಗೌತಮ, ಯಾಜ್ಞವಲ್ಕ್ಯ, ಜಾಬಾಲಿ ಮೊದಲಾದ ಮಹಾಮುನಿಗಳು ಶಾಸ್ತ್ರಕಾರರು. ವೇದವೇದಾಂಗಗಳಲ್ಲಿ ಪಂಡಿತರು.

೪. ಪುರಾಣನ್ಯಾಯಮೀಮಾಂಸಗಳಲ್ಲಿ ಈ ಮುನಿಗಳು ಪಾರಂಗತರು. ಇಂತಹವರಲ್ಲಿ ಪರಸ್ಪರವಾಗಿ ಹೀಗೆ ವಾದವು ಉಂಟಾಯಿತು.

ಕೇಚಿಜ್ಞ್ಞಾನಂ ಪ್ರಶಂಸಂತಿ ಕೇಚಿತ್ಕರ್ಮ ತಥೋಭಯಂ ।
ಏವಂ ವಿವದಮಾನಾಸ್ತೇ ಮಾಮುಪಜಗ್ಮುರುಭಯಂ ಮತಂ ॥ ೫ ॥

ಮದೀಯಂ ತು ಮತಂ ಜ್ಞಾತ್ವಾ ಯಯುಃ ಸ್ಸಕ್ರಗದಾಧರಂ ।
ತಸ್ಯ ಚಾಪಿ ಮತಂ ಜ್ಞಾತ್ವಾ ಋಷಯಸ್ತೇ ಮಹೌಜಸಃ ॥ ೬ ॥

ಪುನರ್ವಿವದಮಾನಾಸ್ತೇ ಶಂಕರಂ ಪ್ರಷ್ಟುಮುದ್ಯತಾಃ ।
ಗಂಗಾಯಾಂ ಚ ಭವಂ ಪೂಜ್ಯ ತಮೋರ್ವಾರ್ಥಂ ಶಶಂಸಿರೇ ॥ ೭ ॥

ಕರ್ಮಣಸ್ತು ಪ್ರಧಾನತ್ವಮುವಾಚ ತ್ರಿಪುರಾಂತಕಃ ।
ಕ್ರಿಯಾರೂಪಂ ಚ ತಜ್ಞ್ಞಾನಂ ಕ್ರಿಯಾ ಸೈವ ತದುಚ್ಯತೇ ॥ ೮ ॥

ತಸ್ಮಾತ್ಸರ್ವಾಣಿ ಭೂತಾನಿ ಕರ್ಮಣಾ ಸಿದ್ಧಿಮಾಪ್ನುಯುಃ ।
ಕರ್ಮೇವ ವಿಶ್ವತೋವ್ಯಾಪಿ ತದೃತೇ ನಾಸ್ತಿ ಕಿಂಚನ ॥ ೯ ॥

---

೫. ಆ ಮುನಿಗಳಲ್ಲಿ ಕೆಲವರು ಜ್ಞಾನವನ್ನು ಪ್ರಶಂಸಿಸಿದರು. ಕೆಲವರು ಕರ್ಮವೇ ಶ್ರೇಷ್ಠವೆಂದು ವಾದಿಸಿದರು. ಜ್ಞಾನಕರ್ಮಗಳೆರಡನ್ನೂ ಕೆಲವರು ಪ್ರಶಂಸಿಸಿದರು. ಹೀಗೆ ವಾದಮಾಡುತ್ತಾ ಅವರು ನನ್ನ (ಬ್ರಹ್ಮನ) ಲ್ಲಿಗೆ ಬಂದು ವಿಷಯವನ್ನು ಅರುಹಿದರು.

೬. ಆಮೇಲಾ ವಿಷಯದಲ್ಲಿ ನನ್ನ ಮತವನ್ನು ತಿಳಿದು ಹರಿಯ ಬಳಿಗೆ ಹೋದರು. ಅವನ ಮತವನ್ನೂ ಒಪ್ಪದೆ ಆ ಋಷಿಗಳು ವಾದಿಸುತ್ತಾ ಶಂಕರ ನಲ್ಲಿ ನಿಶ್ಚಯಿಸಲು ಉದ್ಯುಕ್ತರಾದರು.

೭. ಗಂಗಾತೀರದಲ್ಲಿ ಶಿವನನ್ನು ಪೂಜಿಸಿ ಆ ಮುನಿಗಳು ತಮ್ಮ ತಮ್ಮ ವಿಷಯಗಳನ್ನು ಮುಂದಿಟ್ಟರು. ಶಿವನು ಕರ್ಮವೇ ಶ್ರೇಷ್ಠವೆಂದು ಪ್ರಶಂಸಿಸಿದನು.

೮-೯. ಜ್ಞಾನವೂ ಸಹ ಕ್ರಿಯಾ (ಕರ್ಮ) ರೂಪವಾದುದು, ಕ್ರಿಯೆ ಯನ್ನು ಬಿಟ್ಟು ಜ್ಞಾನವಿಲ್ಲ. ಆದುದರಿಂದ ಕರ್ಮದಿಂದಲೇ ಎಲ್ಲ ಪ್ರಾಣಿಗಳೂ ಸಿದ್ಧಿಯನ್ನೈದುವುವು. ಜಗತ್ತೆಲ್ಲವನ್ನೂ ಕರ್ಮವು ವ್ಯಾಪಿಸಿರುವುದು, ಅದಿಲ್ಲದ ಜೀವಂತವಸ್ತುವಿಲ್ಲ.

ವಿದ್ಯಾಭ್ಯಾಸೋ ಯಜ್ಞಕೃತಿರ್ಯೋಗಾಭ್ಯಾಸಃ ಶಿವಾರ್ಚನಂ ।
ಸರ್ವಂ ಕರ್ಮೈವ ನಾಕರ್ಮಾ ಪ್ರಾಣೀ ಕ್ವಾಪ್ಯತ್ರ ವಿದ್ಯತೇ ॥ ೧೦ ॥

ಕರ್ಮೈವ ಕಾರಣಂ ತಸ್ಮಾದನ್ಯದುನ್ಮತ್ತಚೇಷ್ಟಿತಂ ।
ಋಷೀಣಾಂ ಯತ್ರ ಸಂವಾದೋ ಯತ್ರ ದೇವೋ ಮಹೇಶ್ವರಃ ॥ ೧೧ ॥

ಚಕಾರ ನಿರ್ಣಯಂ ಸರ್ವಂ ಕರ್ಮಣಾವಾಪ್ಯತೇ ನೃಭಿಃ ।
ಮಾರ್ಕಂಡಂ ಮುಖ್ಯತಃ ಕೃತ್ವಾ ತತೋ ಮಾರ್ಕಂಡಮುಚ್ಯತೇ ॥ ೧೨ ॥

ತೀರ್ಥಮೃಷಿಗಣಾಕೀರ್ಣಂ ಗಂಗಾಯಾ ಉತ್ತರೇ ತಟೇ ।
ಪಿತೄಣಾಂ ಪಾವನಂ ಪುಣ್ಯಂ ಸ್ಮರಣಾದಪಿ ಸರ್ವದಾ ॥ ೧೩ ॥

---

೧೦. ವಿದ್ಯಾಭ್ಯಾಸ, ಯಜ್ಞಕರ್ಮ, ಯೋಗಾಭ್ಯಾಸ, ದೇವಾರ್ಚನೆ— ಇವೆಲ್ಲವೂ ಸಹ ಕರ್ಮರೂಪವಾದುವು. ಕರ್ಮವನ್ನು ಮಾಡದ ಜೀವಂತ ಪ್ರಾಣಿಯು ಯಾವುದೂ ಇಲ್ಲ. ಆದುದರಿಂದ ಎಲ್ಲಕ್ಕೂ ಕರ್ಮವೇ ಕಾರಣವು ಹೆಚ್ಚೇನು ? ಕರ್ಮದಿಂದಲೇ ಜಗತ್ತು ನಡಿಯುತ್ತಿರುವುದು. ಕರ್ಮವಿಲ್ಲದಂದು ಪ್ರಳಯವು ಸಿದ್ಧ, ಎಂದು ಶಿವನು ಮುನಿಗಳಿಗೆ ಉಪದೇಶಿಸಿದನು.

೧೧-೧೨. ಗಂಗಾ ತೀರದಲ್ಲಿ ಮುನಿಗಳು ಶಿವನೆದುರಿನಲ್ಲಿ ತಮ್ಮ ವಾದ ವನ್ನು ಮುಂದಿಟ್ಟರು. ಕರ್ಮವೇ ಶ್ರೇಷ್ಠವೆಂದು ಶಿವನು ನಿರ್ಣಯಿಸಿದನು. ಈ ಚರ್ಚೆಯಲ್ಲಿ ಮಾರ್ಕಂಡೇಯಮುನಿಯು ಮುಂದಾಳಾಗಿದ್ದುದರಿಂದ ಆ ತೀರ್ಥಕ್ಕೆ ಮಾರ್ಕಂಡೇಯತೀರ್ಥವೆಂದು ಮುಂದೆ ಹೆಸರಾಯಿತು.

೧೩. ಈ ಮಾರ್ಕಂಡೇಯತೀರ್ಥವು ಗಂಗೆಯ ಉತ್ತರತೀರದಲ್ಲಿರು ವುದು. ಇದು ಪಿತೃಗಳಿಗೆ ತುಂಬಾ ಪ್ರಿಯವಾದುದು. ಸ್ಮರಣಮಾತ್ರದಿಂದ ಪಾಪಗಳನ್ನು ಸಂಪೂರ್ಣವಾಗಿ ನಾಶಮಾಡುವುದು.

ತತ್ರಾಷ್ಟೌ ನವತಿಸ್ತಾತ ತೀರ್ಥಾನ್ಯಾಹ ಜಗನ್ಮಯಃ ।
ವೇದೇನ ಚಾಪಿ ತತ್ಪ್ರೋಕ್ತಮೃಷಯೋ ಮೇನಿರೇ ಚ ತತ್ ॥ ೧೪ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಮಾರ್ಕಂಡೇಯಾದ್ಯಷ್ಟನವತಿತೀರ್ಥವರ್ಣನಂ ನಾಮ
ಪಂಚಚತ್ವಾರಿಂಶದಧಿಕಶತತಮೋಽಧ್ಯಾಯಃ

---

೧೪. ಆ ಸ್ಥಳದಲ್ಲಿ ತೊಂಬತ್ತೆಂಟು ತೀರ್ಥಗಳಿರುವುವೆಂದು ಪರಮೇಶ್ವರನೇ ಹೇಳಿರುವನು. ವೇದಗಳಲ್ಲಿಯೂ ಆ ತೀರ್ಥಗಳ ಪ್ರಶಂಸೆಯಿರುವುದು ಋಷಿಗಳೂ ಆ ತೀರ್ಥವನ್ನು ಶ್ರದ್ಧೆಯಿಂದ ಸೇವಿಸುವರು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಮಾರ್ಕಂಡೇಯತೀರ್ಥವರ್ಣನವೆಂಬ ನೂರ
ನಲವತ್ತೈದನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಎಪ್ಪತ್ತಾರನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಷಟ್ಚತ್ವಾರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಯಾಯಾತಮಪರಂ ತೀರ್ಥಂ ಯತ್ರ ಕಾಲಂಜರಃ ಶಿವಃ ।
ಸರ್ವಪಾಪಪ್ರಶಮನಂ ತದ್ವೃತ್ತಮುಚ್ಯತೇ ಮಯಾ ॥ ೧ ॥

ಯಯಾತಿರ್ನಾಹುಷೋ ರಾಜಾ ಸಾಕ್ಷಾದಿಂದ್ರ ಇವಾಪರಃ ।
ತಸ್ಯ ಭಾರ್ಯಾದ್ವಯಂ ಚಾಸೀತ್ಕುಲಲಕ್ಷಣಭೂಷಿತಂ ॥ ೨ ॥

ಜ್ಯೇಷ್ಠಾ ತು ದೇವಯಾನೀತಿ ನಾಮ್ನಾ ಶುಕ್ರಸುತಾ ಶುಭಾ ।
ಶರ್ಮಿಷ್ಠೇತಿ ದ್ವಿತೀಯಾ ಸಾ ಸುತಾ ಸ್ಯಾದ್ವೃಷಪರ್ವಣಃ ॥ ೩ ॥

ನೂರನಲವತ್ತಾರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಯಾಯಾತವೆಂಬ ಪುಣ್ಯ ತೀರ್ಥವಿರುವುದು. ಆ ತೀರ್ಥದಲ್ಲಿ ಶಿವನು ಕಾಲಂಜರನೆಂಬ ಹೆಸರಿನಿಂದ ನೆಲಸಿರುವನು. ಇಂತಹ ತೀರ್ಥದ ಮಾಹಾತ್ಮ್ಯವನ್ನು ಹೇಳುವೆನು.

೨. ನಹುಷರಾಜನ ಮಗನಾದ ಯಯಾತಿಯೆಂಬ ರಾಜನು ಇಂದ್ರ ವೈಭವದಿಂದ ರಾಜ್ಯವಾಳುತ್ತಿದ್ದನು. ಆ ರಾಜನಿಗೆ ಕುಲಜೆಯರೂ ಲಕ್ಷಣ ವತಿಯರೂ ಆದಂತಹ ರಾಣಿಯರೀರ್ವರು ಇದ್ದರು.

೩. ಹಿರಿಯವಳು ದೇವಯಾನಿಯೆಂಬುವವಳು ಅವಳು ಶುಕ್ರಾಚಾರ್ಯನ ಮಗಳು. ಎರಡನೆಯವಳು ಶರ್ಮಿಷ್ಠೆಯೆಂಬುವವಳು. ವೃಷಪರ್ವನೆಂಬ ರಾಕ್ಷಸರಾಜನ ಕುವರಿಯವಳು.

ಬ್ರಾಹ್ಮಣ್ಯಪಿ ಮಹಾಪ್ರಾಜ್ಞಾ ದೇವಯಾನೀ ಸುಮಧ್ಯಮಾ ।
ಯಯಾತೇರಭವದ್ಭಾರ್ಯಾ ಸಾ ತು ಶುಕ್ರಪ್ರಸಾದತಃ ॥ ೪ ॥

ಶರ್ಮಿಷ್ಠಾ ಚಾಪಿ ತಸ್ಯೈವ ಭಾರ್ಯಾ ಯಾ ವೃಷಪರ್ವಜಾ ।
ದೇವಯಾನಿ ಶುಕ್ರಸುತಾ ದ್ವೌ ಪುತ್ರೌ ಸಮಜೀಜನತ್ ॥ ೫ ॥

ಯದುಂ ಚ ತುರ್ವಸುಂ ಚೈವ ದೇವಪುತ್ರಸಮಾವುಭೌ ।
ಶರ್ಮಿಷ್ಠಾ ಚ ನೃಪಾಲ್ಲೇಭೇ ತ್ರೀನ್ಸುತಾನ್ದೇವಸಂನಿಭಾನ್ ॥ ೬ ॥

ದ್ರುಹ್ಯುಂ ಚಾನುಂ ಚ ಪೂರುಂ ಚ ಯಯಾತೇರ್ನೃಪಸತ್ತಮಾತ್ ।
ದೇವಯಾನ್ಯಾಃ ಸುತೌ ಬ್ರಹ್ಮನ್ಸದೃಶೌ ಶುಕ್ರರೂಪತಃ ॥ ೭ ॥

ಶರ್ಮಿಷ್ಠಾಯಾಸ್ತು ತನಯಾಃ ಶಕ್ರಾಗ್ನಿವರುಣಪ್ರಭಾಃ ।
ದೇವಯಾನೀ ಕದಾಚಿತ್ತು ಪಿತರಂ ಪ್ರಾಹ ದುಃಖಿತಾ ॥ ೮ ॥

---

೪. ಸುಂದರಿಯೂ ಪ್ರಾಜ್ಞಳೂ ಆದ ದೇವಯಾನಿಯು ಬ್ರಾಹ್ಮಣ ಕುಮಾರಿಯಾಗಿದ್ದರೂ ಅಸುರಗುರುವಾದ ಶುಕ್ರಾಚಾರ್ಯನ ಅನುಗ್ರಹದಿಂದ ಯಯಾತಿಯ ಪತ್ನಿಯಾದಳು. ಹಾಗೆಯೇ ರಾಕ್ಷಸರಾಜನಾದ ವೃಷಪರ್ವನ ಮಗಳಾದ ಶರ್ಮಿಷ್ಠೆಯೂ ಸಹ ಯಯಾತಿಯ ಹೆಂಡತಿಯಾದಳು.

೫. ದೇವಯಾನಿಯು ದೇವಕುಮಾರರಂತಿರುವ ಯದು, ತುರ್ವಸುಗಳೆಂಬೀರ್ವರು ಕುಮಾರರನ್ನು ಹಡೆದಳು.

೬. ಶರ್ಮಿಷ್ಠಾದೇವಿಯು ಯಾಯಾತಿರಾಜನಿಂದ ದೇವಕುಮಾರರಂತಿರುವ ದ್ರುಹ್ಯು, ಅನು, ಪೂರುಗಳೆಂಬ ಮೂವರು ಕುವರರನ್ನು ಹಡೆದಳು.

೭. ದೇವಯಾನಿಯ ಮಕ್ಕಳು ಶುಕ್ರಾಚಾರ್ಯನಂತೆಯೇ ಇದ್ದರು. ಶರ್ಮಿಷ್ಠೆಯ ಮಕ್ಕಳು ಇಂದ್ರಾಗ್ನಿವರುಣರಂತೆ ತೇಜಸ್ವಿಗಳಾಗಿದ್ದರು.

೮–೯. ಹೀಗಿರಲೊಂದುದಿನ ದೇವಿಯಾನಿಯು ತಂದೆಯಾದ ಶುಕ್ರಾಚಾರ್ಯನನ್ನು ಕುರಿತು ದುಃಖದಿಂದ–ಓ ತಂದೆಯೇ, ಅದೃಷ್ಟಹೀನಳಾದ ನನಗೆ

॥ ದೇವಯಾನ್ಯುವಾಚ ॥

ಮಮ ತ್ವಪತ್ಯದ್ವಿತಯಮಭಾಗ್ಯಾಯಾ ಭೃಗೂದ್ವಹ ।
ಮಮ ದಾಸ್ಯಾಃ ಸಭಾಗ್ಯಾಯಾ ಅಪತ್ಯತ್ರಿತಯಂ ಪಿತಃ ॥ ೯ ॥

ತದೇತದನುಮೃಶ್ಯಾಯಂ ದುಃಖಮತ್ಯಂತಮಾಗತಾ ।
ಮರಿಷ್ಯೇ ದಾನವಗುರೋ ಯಯಾತಿಕೃತವಿಪ್ರಿಯಾತ್ ।
ಮಾನಭಂಗಾದ್ವರಂ ತಾತ ಮರಣಂ ಹಿ ಮನಸ್ವಿನಾಂ ॥ ೧೦ ॥

॥ ಬ್ರಹ್ಮೋವಾಚ ॥

ತದೇತತ್ಪುತ್ರಿಕಾವಾಕ್ಯಂ ಶ್ರುತ್ವಾ ಶುಕ್ರಃ ಪ್ರತಾಪವಾನ್ ।
ಕುಪಿತೋಽಭ್ಯಾಯಯೌ ಶೀಘ್ರಂ ಯಯಾತಿಮಿದಮಬ್ರವೀತ್ ॥ ೧೧ ॥

॥ ಶುಕ್ರ ಉವಾಚ ॥

ಯದಿದಂ ವಿಪ್ರಿಯಂ ಮೇ ತ್ವಂ ಸುತಾಯಾಃ ಕೃತವಾನಸಿ ।
ರೂಪೋನ್ಮತ್ತೇನ ರಾಜೇಂದ್ರ ತಸ್ಮಾದ್ವೃದ್ಧೋ ಭವಿಷ್ಯಸಿ ॥ ೧೨ ॥

ಈರ್ವರೇ ಮಕ್ಕಳು. ನನ್ನ ದಾಸಿಯಾದ ಶರ್ಮಿಷ್ಠೆಗೆ ಮೂವರು ಮಕ್ಕಳು. ಅವಳೇ ನನಗಿಂತ ಅದೃಷ್ಟವತಿಯಾಗಿರುವಳು.

೧೦. ಇದನ್ನು ಯೋಚಿಸಿ ನಾನು ತುಂಬಾ ದುಃಖಿತಳಾಗಿರುವೆನು. ಓ ದೇವಗುರು, ಯಯಾತಿಯು ಈ ಭೇದವನ್ನು ಸಹಿಸಲಾರೆ, ಸಾಯುವೆನು. ಅಭಿಮಾನಿಗಳಿಗೆ ಅಪಮಾನಕ್ಕಿಂತಲೂ ಮರಣವೇ ಮೇಲು ಎನ್ನಲು,

೧೧. ಮಗಳ ಆ ಮಾತನ್ನು ಕೇಳಿ ಶುಕ್ರಾಚಾರ್ಯನಿಗೆ ಯಯಾತಿಯ ಮೇಲೆ ತುಂಬಾ ಕೋಪಬಂದಿತು. ಕೂಡಲೇ ಯಯಾತಿಯಬಳಿಗೆ ಬಂದು,

೧೨. ಎಲೈ ರಾಜನೆ, ರೂಪಯೌವನದಿಂದ ಮತ್ತನಾದ ನೀನು ನನ್ನ ಮಗಳಿಗೆ ವಿರುದ್ಧವನ್ನಾಚರಿಸಿರುವೆ. ಈ ಕಾರಣ ನೀನು ಮುದುಕನಾಗಿ ಹೋಗು.

ನ ಚ ಭೋಕ್ತುಂ ನ ಚ ತ್ಯಕ್ತುಂ ಶಕ್ನೋತಿ ವಿಷಯಾತುರಃ ।
ಸ್ಪೃಹಯನ್ನನಸ್ಯೈವಾಸ್ತೇ ನಿಃಶ್ವಾಸೋಚ್ಛ್ವಾಸನಷ್ಟಧೀಃ ॥ ೧೩ ॥

ವೃದ್ಧತ್ವಮೇವ ಮರಣಂ ಜೀವತಾಮಪಿ ದೇಹಿನಾಂ ।
ತಸ್ಮಾಚ್ಛೀಘ್ರಂ ಪ್ರಯಾಹಿ ತ್ವಂ ಜರಾಂ ಭೂಪಾತಿದುರ್ಧರಾಂ ॥ ೧೪ ॥

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ಯಯಾತಿಸ್ತು ಶಾಪಂ ಶುಕ್ರಸ್ಯ ಧೀಮತಃ ।
ಕೃತಾಂಜಲಿಪುಟೋ ರಾಜಾ ಯಯಾತಿಃ ಶುಕ್ರಮಬ್ರವೀತ್ ॥ ೧೫ ॥

॥ ಯಯಾತಿರುವಾಚ ॥

ನಾಪರಾಧ್ಯೇ ನ ಸಂಕುಪ್ಯೇ ನೈವಾಧರ್ಮಂ ಪ್ರವರ್ತಯೇ ।
ಅಧರ್ಮಕಾರಿಣಃ ಪಾಪಾಃ ಶಾಸ್ಯಾ ಏವ ಮಹಾತ್ಮನಾಂ ॥ ೧೬ ॥

ಧರ್ಮಮೇವ ಚರಂತಂ ವೈ ಕಥಂ ಮಾಂ ಶಪ್ತವಾನಸಿ ।
ದೇವಯಾನೀ ದ್ವಿಜಶ್ರೇಷ್ಠ ವೃಥಾ ಮಾಂ ವಕ್ತಿ ಕಿಂಚನ ॥ ೧೭ ॥

---

೧೩. ಮುದಿಕನಾದವನು ವಿಷಯಸುಖವನ್ನನುಭವಿಸಲು ಅಶಕ್ತನಾಗಿರುವನು, ಆದರೂ ಬಿಡಲಾರದವನಾಗಿರುವನು. ಮನಸ್ಸಿನಲ್ಲಿಯೇ ಆಶಿಸುತ್ತಾ ದುಃಖದಿಂದ ನಿಟ್ಟುಸಿರುಗಳನ್ನು ಬಿಡುವನು.

೧೪. ವೃದ್ಧತ್ವವನ್ನೈದಿದವನು ಬದುಕಿದ್ದರೂ ಸತ್ತಂತೆಯೇ. ಅಂತಹ ವೃದ್ಧತ್ವವನ್ನು ನೀನು ಹೊಂದು ಎಂದು ಶಪಿಸಿದನು.

೧೫. ಶುಕ್ರಾಚಾರ್ಯನ ಆ ಮಾತನ್ನು ಕೇಳಿ ಯಯಾತಿರಾಜನು ವ್ಯಥೆಗೊಂಡು ವಿನಯದಿಂದ ಅಜಂಲಿಯನ್ನು ಧರಿಸಿ,

೧೬. ಓ ಗುರುವೆ, ನಾನು ದೇವಯಾನಿಯ ವಿಷಯದಲ್ಲಿ ಯಾವ ತಪ್ಪನ್ನೂ ಮಾಡಿಲ್ಲ, ಕೋಪವನ್ನೂ ಸಹ ಪ್ರದರ್ಶಿಸಿಲ್ಲ, ಅಧರ್ಮವನ್ನೆಂದಿಗೂ ಆಚರಿಸಿಲ್ಲ. ಅಧರ್ಮವನ್ನಾಚರಿಸುವವರನ್ನು ನಿಮ್ಮಂತಹ ಮಹಾತ್ಮರು ಶಿಕ್ಷಿಸಬೇಕು.

೧೭. ಧರ್ಮವನ್ನೇ ಆಚರಿಸುತ್ತಲಿರುವ ನನ್ನನ್ನು ನೀನು ಏಕೆ ಶಪಿಸಿದೆ ? ಈ ದೇವಯಾನಿಯು ನನ್ನ ವಿಷಯದಲ್ಲಿ ಅಸೂಯೆಯಿಂದ ಇಲ್ಲದುದನ್ನು ಹೇಳಿರುವಳು.

ತಸ್ಮಾನ್ನ ಮಮ ವಿಪ್ರೇಂದ್ರ ಶಾಪಂ ದಾತುಂ ತ್ವಮರ್ಹಸಿ ।
ವಿದ್ವಾಂಸೋऽಪಿ ಹಿ ನಿರ್ದೋಷೇ ಯದಿ ಕುಪ್ಯಂತಿ ಮೋಹಿತಾಃ ।
ತದಾ ನ ದೋಷೋ ಮೂರ್ಖಾಣಾಂ ದ್ವೇಷಾಗ್ನಿಪ್ಲುಷ್ಟಚೇತಸಾಂ ॥ ೧೮ ॥

॥ ಬ್ರಹ್ಮೋವಾಚ ॥

ಯಯಾತಿವಾಕ್ಯಾಚ್ಛುಕ್ರೋऽಪಿ ಸಸ್ಮಾರ ಸುತಯಾ ಕೃತಂ ।
ಅಸಕೃದ್ವಿಪ್ರಿಯಂ ತಸ್ಯ ದಿವಾ ರಾತ್ರೌ ಪ್ರಚಂಡಯಾ ॥ ೧೯ ॥

ಗತಕೋಪೋऽಹಮಿತ್ಯುಕ್ತ್ವಾ ಕಾವ್ಯೋ ರಾಜಾನಮಬ್ರವೀತ್ ॥ ೨೦ ॥

॥ ಶುಕ್ರ ಉವಾಚ ॥

ಜ್ಞಾತಂ ಮಯಾನಯಾಕಾರಿ ವಿಪ್ರಿಯಂ ನ ವದೇऽನೃತಂ ।
ಶಾಪಸ್ಯೇಮಂ ಕರಿಷ್ಯಾಮಿ ಶೃಣುಷ್ವಾನುಗ್ರಹಂ ನೃಪ ॥ ೨೧ ॥

---

೧೮. ಆದುದರಿಂದ ಓ ಬ್ರಾಹ್ಮಣೋತ್ತಮ, ನೀನು ನನ್ನನ್ನು ಶಪಿಸಿರುವುದು ಯುಕ್ತವಲ್ಲ. ವಿದ್ವಾಂಸರೂ ಸಹ ಸಾಮಾನ್ಯ ಮಾನವರಂತೆ ನಿರಪರಾಧಿಗಳಲ್ಲಿ ಕಾರಣವಿಲ್ಲದೇ ಕೋಪಗೊಳ್ಳುವುದಾದರೆ ಪಾಮರರಿಗೂ ಅವರಿಗೂ ವ್ಯತ್ಯಾಸವೇನು ? ಎಂದನು.

೧೯. ಯಯಾತಿಯ ಆ ಮಾತನ್ನು ಕೇಳಿ ಶುಕ್ರಾಚಾರ್ಯನು ತನ್ನ ಮಗಳ ದುಶ್ಚೇಷ್ಟೆಗಳನ್ನು ಸ್ಮರಣದೃಷ್ಟಿಯಿಂದ ತಿಳಿದನು. ಗರ್ವಿಷ್ಠಳಾದ ದೇವಯಾನಿಯು ಯಯಾತಿಗೆ ರಾತ್ರಿಹಗಲು ತೊಂದರೆಕೊಡುತ್ತಿದ್ದುದನ್ನೂ ತಿಳಿದನು.

೨೦. ಆಗ ನನ್ನ ಸಿಟ್ಟು ಶಾಂತವಾಯಿತು ಎಂದು ಹೇಳಿ ಶುಕ್ರಾಚಾರ್ಯನು ಯಯಾತಿರಾಜನಿಗೆ ಇಂತೆಂದನು,

೨೧. ಎಲೈ ರಾಜ, ದೇವಯಾನಿಯು ನಿನಗೆ ಕಾರಣವಿಲ್ಲದೆ ಕೆಡಕು ಮಾಡಿದಳೆಂದು ತಿಳಿದೆನು. ಇದು ನಿಜ. ಆದುದರಿಂದ ನಿನ್ನ ಶಾಪಕ್ಕೆ ನಿವೃತ್ತಿಯನ್ನು ಹೇಳುವೆನು ಕೇಳು.

ಯಸ್ಮೈ ಪುತ್ರಾಯ ಸಂದಾತುಂ ಜರಾಮಿಚ್ಛಸಿ ಮಾನದ ।
ತಸ್ಯ ಸಾ ಯಾಸ್ಯತಿ ರಾಜನ್ ಜರಾ ಪುತ್ರಾಯ ಮದ್ವರಾತ್ ॥ ೨೨ ॥

॥ ಬ್ರಹ್ಮೋವಾಚ ॥
ಪುನರ್ಯಯಾತಿಃ ಶ್ವಶುರಂ ಶುಕ್ರಂ ಪ್ರಾಹ ವಿನೀತವತ್ ॥ ೨೩ ॥

॥ ಯಯಾತಿರುವಾಚ ॥
ಯೋ ಗೃಹ್ಣಾತಿ ಮಯಾ ದತ್ತಾಂ ಜರಾಂ ಭಕ್ತಿಸಮನ್ವಿತಃ ।
ಸ ರಾಜಾ ಸ್ಯಾದ್ದೈತ್ಯಗುರೋ ತದೇತದನುಮನ್ಯತಾಂ ॥ ೨೪ ॥

ಯೋ ಮದ್ವಾಕ್ಯಂ ನಾಭಿನಂದೇತ್ಸುತೋ ದೈತ್ಯಗುರೋ ದೃಢಂ ।
ತಂ ಶಪೇಯಮನುಜ್ಞಾತ್ರ ದಾತವ್ಯೈವ ತ್ವಯಾ ಗುರೋ ॥ ೨೫ ॥

॥ ಬ್ರಹ್ಮೋವಾಚ ॥
ಏವಮಸ್ತ್ವಿತಿ ರಾಜಾನಮುವಾಚ ಭೃಗುನಂದನಃ ।
ತತೋ ಯಯಾತಿಃ ಸ್ವಂ ಪುತ್ರಮಾಹೂಯೇದಂ ವಚೋಽಬ್ರವೀತ್ ॥೨೬॥

---

೨೨. ಈ ಮುಪ್ಪನ್ನು ನೀನು ನಿನ್ನ ಮಕ್ಕಳಲ್ಲಿ ಯಾರಿಗೆ ಇಷ್ಟಪಡು ವಿಯೋ ಅವರಿಗೆ ಕೊಡಬಹುದು, ಇದು ನನ್ನ ಅನುಗ್ರಹವು ಎಂದನು.

೨೩. ಯಯಾತಿಯು ಪುನಃ ತನ್ನ ಮಾವನಾದ ಶುಕ್ರಾಚಾಯನನ್ನು ಕುರಿತು,

೨೪. ನನ್ನ ಮಕ್ಕಳಲ್ಲಿ ಯಾವನು ನನ್ನ ಮುಪ್ಪನ್ನು ಭಕ್ತಿಯಿಂದ ತೆಗೆದುಕೊಳ್ಳುವನೋ ಅವನು ರಾಜನಾಗಲಿ, ಅದರಂತೆ ನೀನು ಅನುಗ್ರಹಿಸು.

೨೫. ಆದರೆ ನನ್ನ ಮಾತನ್ನು ಯಾವನು ಮನ್ನಿಸುವುದಿಲ್ಲವೋ ಅಂತ ಹವನನ್ನು ಶಪಿಸುವೆನು. ಈ ವಿಷಯದಲ್ಲಿ ಅನುಮತಿಯನ್ನು ದಯಪಾಲಿಸು ಎಂದು ಕೇಳಿಕೊಂಡನು.

೨೬. ಶುಕ್ರಾಚಾರ್ಯನು ಹಾಗೆಯೇ ಆಗಲಿ ಎಂದನುಗ್ರಹಿಸಿದನು. ಯಯಾತಿಯು ಆಮೇಲೆ ಹಿರಿಯಮಗನನ್ನು ಕರೆದು,

॥ ಯಯಾತಿರುವಾಚ ॥
ಯದೋ ಗೃಹಾಣ ಮೇ ಶಾಪಾಜ್ಜರಾಂ ಜಾತಾಂ ಸುತೋ ಭವಾನ್ ।
ಜ್ಯೇಷ್ಠಃ ಸರ್ವಾರ್ಥವಿತ್ಪ್ರೌಢಃ ಪುತ್ರಾಣಾಂ ಧುರಿ ಸಂಸ್ಥಿತಃ ।
ಪುತ್ರೀ ತೇನೈವ ಜನಕೋ ಯಸ್ತದಾಜ್ಞಾವಶೇ ಸ್ಥಿತಃ ॥ ೨೭ ॥

॥ ಬ್ರಹ್ಮೋವಾಚ ॥
ನೇತ್ಯುವಾಚ ಯದುಸ್ತಾತಂ ಯಯಾತಿಂ ಭೂರಿದಕ್ಷಿಣಂ ।
ಯಯಾತಿಶ್ಚ ಯದುಂ ಶಪ್ತ್ವಾ ತುರ್ವಸುಂ ಕಾಮಮಬ್ರವೀತ್ ॥ ೨೮ ॥

ನಾಗೃಹ್ಣಾತ್ತುರ್ವಸುಶ್ಚಾಪಿ ಪಿತ್ರಾ ದತ್ತಾಂ ಜರಾಂ ತದಾ ।
ತಂ ಶಪ್ತ್ವಾ ಚಾಬ್ರವೀದ್ದ್ರುಹ್ಯುಂ ಗೃಹಾಣೇಮಾಂ ಜರಾಂ ಮಮ ॥ ೨೯ ॥

ದ್ರುಹ್ಯುಶ್ಚ ನೈಚ್ಛತ್ತಾಂ ದತ್ತಾಂ ಜರಾಂ ರೂಪವಿನಾಶಿನೀಂ ।
ಅನುಮಪ್ಯಬ್ರವೀದ್ರಾಜಾ ಗೃಹಾಣೇಮಾಂ ಜರಾಂ ಮಮ ॥ ೩೦ ॥

ಅನುರ್ನೇತಿ ತದೋವಾಚ ಶಪ್ತ್ವಾ ತಂ ಪೂರುಮಬ್ರವೀತ್ ।
ಅಭಿಸಂಧ್ಯ ತದಾ ಪೂರುರ್ಜರಾಂ ತಾಂ ಜಗೃಹೇ ಪಿತುಃ ॥ ೩೧ ॥

---

೨೭. ಎಲೈ ಯದುಕುಮಾರ, ಶಾಪದಿಂದ ಬಂದ ನನ್ನ ಮುಪ್ಪನ್ನು ತೆಗೆದುಕೋ. ನೀನೇ ನನಗೆ ಹಿರಿಯಮಗನು, ಮೇಲಾಗಿ ವಿದ್ಯಾವಂತನು. ಎಲ್ಲವೂ ನಿನಗೆ ತಿಳಿದಿದೆ. ತಂದೆಯ ಆಜ್ಞೆಯನ್ನು ನಡೆಸುವವನೇ ಪುತ್ರನು ಎಂದನು.

೨೮. ಯದುವು ಯಯಾತಿಯ ಮಾತನ್ನು ಕೇಳಲಿಲ್ಲ. ಆದಕಾರಣ ಯದುವನ್ನು ಶಪಿಸಿ ರಾಜನು ತುರ್ವಸುವಿಗೆ ಹೀಗೆ ಹೇಳಿದನು.

೨೯. ತುರ್ವಸುವೂ ಸಹ ತಂದೆಯ ಜರೆಯನ್ನು ತೆಗೆದುಕೊಳ್ಳಲಿಲ್ಲ. ಅವನನ್ನೂ ಶಪಿಸಿ ಯಯಾತಿಯು ದ್ರುಹ್ಯುವಿಗೆ ನೀನು ನನ್ನ ಮುಪ್ಪನ್ನು ತೆಗೆದುಕೊ ಎಂದು ಹೇಳಿದನು.

೩೦. ದ್ರುಹ್ಯುವೂ ತಂದೆಯ ಮುಪ್ಪನ್ನು ತೆಗೆದುಕೊಳ್ಳಲಿಲ್ಲ. ಅವನನ್ನೂ ಶಪಿಸಿ ರಾಜನು ಅನುವಿಗೆ ನೀನಾದರೂ ಈ ಜರೆಯನ್ನು ತೆಗೆದುಕೊ ಎಂದನು.

೩೧. ಅನುವೂ ಒಪ್ಪಲಿಲ್ಲ. ಅವನನ್ನೂ ಶಪಿಸಿ ರಾಜನು ಪೂರುವನ್ನು ಕೇಳಿದನು. ಪೂರುವು ತಂದೆಯ ಮಾತನ್ನು ಮನ್ನಿಸಿ ತಂದೆಯ ಜರೆಯನ್ನು ತೆಗೆದುಕೊಂಡನು.

ಸಹಸ್ರಮೇಕಂ ವರ್ಷಾಣಾಂ ಯಾವತ್ಪ್ರೀತೋಽಭವತ್ಪಿತಾ ।
ಯೌವನೇ ಯಾನಿ ಭೋಗ್ಯಾನಿ ವಸ್ತೂನಿ ವಿವಿಧಾನಿ ಚ ॥ ೩೨ ॥

ಪುತ್ರಯೌವನಸಂತುಷ್ಟೋ ಯಯಾತಿರ್ಬುಭುಜೇ ಸುಖಂ ।
ತತಸ್ತೃಪ್ತೋಽಭವದ್ರಾಜಾ ಸರ್ವಭೋಗೇಷು ನಾಹುಷಃ ।
ತತೋ ಹರ್ಷಾತ್ಸಮಾಹೂಯ ಪೂರುಂ ಪುತ್ರಮಥಾಬ್ರವೀತ್ ॥ ೩೩ ॥

॥ ಯಯಾತಿರುವಾಚ ॥

ತೃಪ್ತೋಽಸ್ಮಿ ಸರ್ವಭೋಗೇಷು ಯೌವನೇನ ತವಾನಘ ।
ಗೃಹಾಣ ಯೌವನಂ ಪುತ್ರ ಜರಾಂ ಮೇ ದೇಹಿ ಕಶ್ಮಲಾಂ ॥ ೩೪ ॥

॥ ಬ್ರಹ್ಮೋವಾಚ ॥

ನೇತ್ಯುವಾಚ ತದಾ ಪೂರುರ್ಜರಯಾ ಕ್ಷೀಯತೇ ಮಯಾ ।
ವಿಕಾರಾಸ್ತಾತ ಭಾವಾನಾಂ ದುರ್ನಿವಾರಾಃ ಶರೀರಿಣಾಂ ॥ ೩೫ ॥

ಬಲಾತ್ಕಾಲಾಗತಾ ಸಹ್ಯಾ ಜರಾಪ್ಯಖಿಲದೇಹಿಭಿಃ ।
ಸಾ ಚೇದುಪಕಾರಾಯ ಗೃಹೀತಾ ತ್ಯಜ್ಯತೇ ಕಥಂ ॥ ೩೬ ॥

---

೩೨. ಆಮೇಲೆ ಯಯಾತಿಯು ಮಗನ ಯೌವನದಿಂದ ಒಂದುಸಾವಿರ ವರ್ಷಗಳವರೆಗೆ ಸುಖವನ್ನನುಭವಿಸಿದನು. ಯೌವನದಲ್ಲಿ ಅನುಭವಿಸಬಹುದಾದಂತಹ ಸುಖವಸ್ತುಗಳೆಲ್ಲವನ್ನೂ ಅನುಭವಿಸಿದನು.

೩೩. ಆಗ ಯಯಾತಿರಾಜನಿಗೆ ಭೋಗಗಳಲ್ಲಿ ತೃಪ್ತಿಯುಂಟಾಯಿತು. ಅನಂತರ ಪೂರುವನ್ನು ಕರೆದು ಸಂತೋಷದಿಂದ,

೩೪. ಎಲೈ ಮಗನೇ, ನಿನ್ನ ಯೌವನದಿಂದ ನಾನು ಭೋಗಗಳೆಲ್ಲವನ್ನೂ ಅನುಭವಿಸಿ ತೃಪ್ತನಾಗಿರುವೆನು. ಈ ಯೌವನವನ್ನು ತೆಗೆದುಕೋ, ನನ್ನ ಮುಪ್ಪನ್ನು ನನಗೆ ಕೊಡು ಎಂದನು.

೩೫. ಅದನ್ನೊಪ್ಪದೆ ಪೂರುವು ಓ ತಂದೆಯೇ, ನಾನು ಮುಪ್ಪಿನಿಂದ ಹೀಗೆಯೇ ಕ್ಷಯಿಸುವೆನು. ಜನಿಸುವ ವಸ್ತುಗಳಿಗೆ ಒಂದಿಲ್ಲೊಂದುದಿನ ಮುಪ್ಪಿನಂತ ವಿಕಾರಗಳು ಬಂದೇ ಬರುವುವು.

೩೬. ಬಲಾತ್ಕಾರವಾಗಿ ಮುಪ್ಪಿನಕಾಲದಲ್ಲಿ ಬರುವಂತಹ ಮುಪ್ಪನ್ನಾದರೂ ಅನುಭವಿಸಬೇಕಷ್ಟೆ ? ಅದು ಈಗಲೇ ನನ್ನಂತಹವನಿಗ ತಂದೆಯ ಉಪಕಾರಕ್ಕಾಗಿ ಲಭಿಸಿರಲು ಅದನ್ನು ಬಿಡುವುದು ನ್ಯಾಯವಲ್ಲ.

ಸ್ವೀಕೃತತ್ಯಾಗಪಾಪಾದ್ಧಿ ದೇಹಿನಾಂ ಮರಣಂ ವರಂ ।
ಅಥವಾ ತು ಜರಾಂ ರಾಜಂಸ್ತಪಸಾ ನಾಶಯಾಮ್ಯಹಂ ॥ ೩೭ ॥

॥ ಬ್ರಹ್ಮೋವಾಚ

ಏವಮುಕ್ತ್ವಾ ತು ಪಿತರಂ ಯಯೌ ಗಂಗಾಮನುತ್ತಮಾಂ ।
ಗೌತಮ್ಯಾ ದಕ್ಷಿಣೇ ಪಾರೇ ತತಸ್ತೇಪೇ ತಪೋ ಮಹತ್ ॥ ೩೮ ॥

ತತಃ ಪ್ರೀತೋऽಭವದ್ದೇವಃ ಕಾಲೇನ ಮಹತಾ ಶಿವಃ ।
ಲೋಕಾತೀತಮಹೋದಾರಗುಣಸನ್ಮಣಿಭೂಷಿತಂ ।
ಕಿಂ ದದಾಮೀತಿ ತಂ ಪ್ರಾಹ ಪೂರುಂ ಸ ಸುರಸತ್ತಮಃ ॥ ೩೯ ॥

॥ ಪೂರುರುವಾಚ ॥

ಶಾಪಪ್ರಾಪ್ತಾಂ ಜರಾಂ ನಾಥ ಪಿತುರ್ಮಮ ಸುರಾಧಿಪ ।
ತಾಂ ನಾಶಯಸ್ವ ದೇವೇಶ ಪಿತೃಶಪ್ತಾಂಶ್ಚ ಕೋಪತಃ ।
ಮದ್ಭ್ರಾತೄನ್ ಶಾಪತೋ ಮುಕ್ತಾನ್ಕುರುಷ್ವ ಸುರಪೂಜಿತ ॥ ೪೦ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಜಗನ್ನಾಥಃ ಶಾಪಾಜ್ಜಾತಾಂ ಜರಾಂ ತಥಾ ।
ಅನಾಶಯಜ್ಜಗನ್ನಾಥೋ ಭ್ರಾತೄಂಶ್ಚಕ್ರೇ ವಿಶಾಪಿನಃ ॥ ೪೧ ॥

---

೩೭. ಅಂಗೀಕರಿಸಿದುದನ್ನು ಬಿಡುವುದಕ್ಕಿಂತಲೂ ಮರಣವು ಲೇಸು. ಅಥವಾ ನಾನೇ ಈ ಜರೆಯನ್ನು ತಪಸ್ಸಿನಿಂದ ನಾಶಗೊಳಿಸುವೆನು ಎಂದನು.

೩೮. ಹೀಗೆ ಹೇಳಿ ಪೂರುವು ಗಂಗಾನದಿಗೆ ಬಂದನು. ಅಲ್ಲಿ ದಕ್ಷಿಣ ತೀರದಲ್ಲಿ ಘೋರತಪಸ್ಸನ್ನಾಚರಿಸಿದನು.

೩೯. ಕೆಲವುಕಾಲದ ಮೇಲೆ ಶಿವನು ಪೂರುವಿಗೆ ಪ್ರಸನ್ನನಾದನು. ಮಹಾಮಹಿಮನೂ ಉದಾರನೂ ಆದಂತಹ ಶಿವನು ಪ್ರತ್ಯಕ್ಷನಾಗಿ ನಿನಗೆ ಯಾವ ವರವನ್ನು ಕೊಡಲಿ ಎಂದು ಕೇಳಿದನು.

೪೦. ಪೂರುವು ಓ ಸ್ವಾಮಿ, ಶುಕ್ರನ ಶಾಪದಿಂದ ಬಂದ ನನ್ನ ತಂದೆಯ ಮುಪ್ಪನ್ನು ಹೋಗಲಾಡಿಸು. ತಂದೆಯಿಂದ ಶಪಿಸಲ್ಪಟ್ಟ ನನ್ನ ಸಹೋದರರು ಶಾಪಮುಕ್ತರಾಗುವಂತೆ ಅನುಗ್ರಹಿಸು ಎಂದು ಪ್ರಾರ್ಥಿಸಿದನು.

೪೧. ಪೂರುವಿನ ಕೇಳಿಕೆಯಂತೆ ಮಹಾದೇವನು ಶಾಪದಿಂದ ಬಂದ ಮುಪ್ಪನ್ನು ಹೋಗಲಾಡಿಸಿದನು ಮತ್ತು ಅವನ ಸಹೋದರರ ಶಾಪವನ್ನೂ ಹೋಗಲಾಡಿಸಿದನು.

ತತಃ ಪ್ರಭೃತಿ ತತ್ತೀರ್ಥಂ ಜರಾರೋಗವಿನಾಶನಂ ।
ಅಕಾಲಜಜರಾದೀನಾಂ ಸ್ಮರಣಾದಪಿ ನಾಶನಂ ॥ ೪೨ ॥

ತನ್ನಾಮ್ನಾ ಚಾಪಿ ವಿಖ್ಯಾತಂ ಕಾಲಂಜರಮುದಾಹೃತಂ ।
ಯಾಯಾತಂ ನಾಹುಷಂ ಪೌರಂ ಶೌಕ್ರಂ ಶಾರ್ಮಿಷ್ಠಮೇವ ಚ ॥ ೪೩ ॥

ಏವಮಾದೀನಿ ತೀರ್ಥಾನಿ ತತ್ರಾಷ್ಟೋತ್ತರಮೇವ ಚ ।
ಶತಂ ವಿದ್ಯಾನ್ಮಹಾಬುದ್ಧೇ ಸರ್ವಸಿದ್ಧಿಕರಂ ತಥಾ ॥ ೪೪ ॥

ತೇಷು ಸ್ನಾನಂ ಚ ದಾನಂ ಚ ಶ್ರವಣಂ ಪಠನಂ ತಥಾ ।
ಸರ್ವಪಾಪಪ್ರಶಮನಂ ಭುಕ್ತಿಮುಕ್ತಿಪ್ರದಂ ಭವೇತ್ ॥ ೪೫ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಕಾಲಂಜರಾದ್ಯಷ್ಟೋತ್ತರಶತತೀರ್ಥವರ್ಣನಂ ನಾಮ ಷಟ್ಚತ್ವಾರಿಂಶದಧಿಕಶತತಮೋಽಧ್ಯಾಯಃ

---

೪೨. ಆ ಮೊದಲುಗೊಂಡು ಆ ತೀರ್ಥವು ಜರಾರೋಗಗಳನ್ನು ಹೋಗಲಾಡಿಸುವಂತಹುದಾಯಿತು. ಅಕಾಲದಲ್ಲುಂಟಾದ ಜರೆಯನ್ನೂ ತೀರ್ಥವು ಸ್ಮರಣಮಾತ್ರದಿಂದ ಹೋಗಲಾಡಿಸುವುದು. ಆದುದರಿಂದ ಆ ತೀರ್ಥಕ್ಕೆ ಕಾಲಂಜರ ತೀರ್ಥವೆಂದೂ ಹೆಸರಾಯಿತು.

೪೩–೪೪. ಆ ಸ್ಥಳದಲ್ಲಿ ಯಯಾತಿತೀರ್ಥ, ನಹುಷತೀರ್ಥ, ಪೂರುತೀರ್ಥ, ಶುಕ್ರತೀರ್ಥ, ಶರ್ಮಿಷ್ಠಾತೀರ್ಥ ಮೊದಲಾದ ನೂರೆಂಟು ಪುಣ್ಯತೀರ್ಥಗಳಿರುವುವು.

೪೫. ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೂ ತೀರ್ಥಮಹಾತ್ಮ್ಯವನ್ನು ಓದಿದರೂ, ಕೇಳಿದರೂ, ಪಾಪಗಳೆಲ್ಲವೂ ನಾಶವಾಗುವುವು, ಭೋಗಮೋಕ್ಷಗಳೆರಡೂ ಲಭಿಸುವುವು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಕಾಲಂಜರತೀರ್ಥವೇ ಮೊದಲಾದ ನೂರೆಂಟು ತೀರ್ಥಗಳ ವರ್ಣನವೆಂಬ ನೂರನಲವತ್ತಾರನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಎಪ್ಪತ್ತೇಳನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತಚತ್ವಾರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಅಪ್ಸರೋಯುಗಮಾಖ್ಯಾತಮಪ್ಸರಾಸಂಗಮಂ ತತಃ ।
ತೀರೇ ಚ ದಕ್ಷಿಣೇ ಪುಣ್ಯಂ ಸ್ಮರಣಾತ್ಸುಭಗೋ ಭವೇತ್ ॥ ೧ ॥

ಮುಕ್ತೋ ಭವತ್ಯಸಂದೇಹಂ ತತ್ರ ಸ್ನಾನಾದಿನಾ ನರಃ ।
ಸ್ತ್ರೀ ಸತೀ ಸಂಗಮೇ ತಸ್ಮಿನ್ನೃತುಸ್ನಾತಾ ಚ ನಾರದ ॥ ೨ ॥

ವಂಧ್ಯಾಪಿ ಜನಯೇತ್ಪುತ್ರಂ ತ್ರಿಮಾಸಾತ್ಪತಿನಾ ಸಹ ।
ಸ್ನಾನದಾನೇನ ವರ್ತಂತೀ ನಾನ್ಯಥಾ ಮದ್ವಚೋ ಭವೇತ್ ॥ ೩ ॥

ನೂರನಲವತ್ತೇಳನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದ, ಅಪ್ಸರೋಯುಗತೀರ್ಥ ಮತ್ತು ಅಪ್ಸರಾಸಂಗಮಗಳೆಂಬ ಎರಡು ಪುಣ್ಯತೀರ್ಥಗಳಿರುವುವು. ಆ ತೀರ್ಥಗಳಲ್ಲಿ ಸ್ನಾನದಾನಗಳನ್ನು ಮಾಡಿದರೆ ಮುಕ್ತಿಯು ಲಭಿಸುವುದು. ಸ್ಮರಣ ಮಾಡಿದುದರಿಂದಲೇ ಪಾಪವನ್ನು ಹೋಗಲಾಡಿಸುವ ಆ ತೀರ್ಥಗಳು ದಕ್ಷಿಣ ತೀರದಲ್ಲಿರುವುವು.

೨–೩. ಋತುಸ್ನಾತಳಾದ ಸ್ತ್ರೀಯು ಅಪ್ಸರಾಸಂಗಮದಲ್ಲಿ ಸ್ನಾನ ಮಾಡಿದರೆ ಅವಳು ಹುಟ್ಟುಬಂಜೆಯಾಗಿದ್ದರೂ ಸಹ ಮೂರು ತಿಂಗಳೊಳಗೇ ಪುತ್ರವತಿಯಾಗುವಳು. ಇದು ನಿಜವಾದ ಮಾತು.

ಅಪ್ಸರೋಯುಗಮಾಖ್ಯಾತಂ ತೀರ್ಥಂ ಯೇನ ಚ ಹೇತುನಾ ।
ತತ್ರೇದಂ ಕಾರಣಂ ವಕ್ಷ್ಯೇ ಶೃಣು ನಾರದ ಯತ್ನತಃ ॥ ೪ ॥

ಸ್ಪರ್ಧಾಸೀನ್ಮಹತೀ ಬ್ರಹ್ಮನ್ವಿಶ್ವಾಮಿತ್ರವಸಿಷ್ಠಯೋಃ ।
ತಪಸ್ಯಂತಂ ಗಾಧಿಸುತಂ ಬ್ರಾಹ್ಮಣ್ಯಾರ್ಥೇ ಯತವ್ರತಂ ॥ ೫ ॥

ಗಂಗಾದ್ವಾರೇ ಸಮಾಸೀನಂ ಪ್ರೇರಿತೇಂದ್ರೇಣ ಮೇನಕಾ ।
ತಂ ಗತ್ವಾ ತಪಸೋ ಭ್ರಷ್ಟಂ ಕುರು ಭದ್ರೇ ಮಮಾಜ್ಞಯಾ ॥ ೬ ॥

ತದೋಕ್ತೇಂದ್ರೇಣ ಸಾ ಮೇನಾ ವಿಶ್ವಾಮಿತ್ರಂ ತಪಶ್ಚ್ಯುತಂ ।
ಕೃತ್ವಾ ಕನ್ಯಾಂ ತಥಾ ದತ್ವಾ ಜಗಾಮೇಂದ್ರಪುರಂ ಪುನಃ ॥ ೭ ॥

ತಸ್ಯಾಂ ಗತಾಯಾಂ ಸಸ್ಮಾರ ಗಾಧಿಪುತ್ರೋऽಖಿಲಂ ಕೃತಂ ।
ತಂ ತು ದೇಶಂ ಪರಿತ್ಯಜ್ಯ ತೀರ್ಥಂ ತು ಸುರವಲ್ಲಭಂ ॥ ೮ ॥

---

೪. ಯಾವಕಾರಣದಿಂದ ಆ ತೀರ್ಥವು ಅಪ್ಸರೋಯುಗತೀರ್ಥವೆಂಬ ಹೆಸರನ್ನು ಪಡೆಯಿತೋ ಅಂತಹ ಮಹಾತ್ಮ್ಯವನ್ನು ಹೇಳುವೆನು, ಶ್ರದ್ಧೆಯಿಂದ ಕೇಳು.

೫. ಯಾವುದೋ ಒಂದು ಕಾರಣದಿಂದ ವಸಿಷ್ಠವಿಶ್ವಾಮಿತ್ರರಿಗೆ ಜಿದ್ದುಂಟಾಯಿತು. ವಿಶ್ವಾಮಿತ್ರನು ಬ್ರಾಹ್ಮಣತ್ವವನ್ನು ಪಡೆಯಲೋಸುಗ ನಿಯಮದಿಂದ ಗಂಗಾದ್ವಾರದಲ್ಲಿ ತಪಸ್ಸನ್ನಾಚರಿಸುತ್ತಲಿದ್ದನು.

೬. ಆ ವಿಶ್ವಾಮಿತ್ರನ ತಪಸ್ಸನ್ನು ಹಾಳುಮಾಡಲು ಇಂದ್ರನು ಮೇನಕೆಗೆ– ಎಲೌ ಸುಂದರಿ, ನೀನು ಹೋಗಿ ವಿಶ್ವಾಮಿತ್ರನ ತಪಸ್ಸನ್ನು ಹಾಳುಮಾಡು ಎಂದು ಹೇಳಿದನು.

೭. ಇಂದ್ರನ ಮಾತಿನಂತೆ ಮೇನಕೆಯು ವಿಶ್ವಾಮಿತ್ರನನ್ನು ಮೋಹಗೊಳಿಸಿ ತಪಸ್ಸನ್ನು ಹಾಳುಮಾಡಿದಳು. ಆ ಮುನಿಯಿಂದ ಕನ್ಯೆಯೋರ್ವಳನ್ನು ಹಡೆದು ಅವನಿಗೆ ಕೊಟ್ಟು ಪುನಃ ತನ್ನ ಲೋಕಕ್ಕೆ ಬಂದಳು.

೮. ಮೇನಕೆಯು ಹೊರಟುಹೋದಮೇಲೆ ವಿಶ್ವಾಮಿತ್ರನು ತಾನು

ಜಗಾಮ ದಕ್ಷಿಣಾಂ ಗಂಗಾಂ ಯತ್ರ ಕಾಲಂಜರೋ ಹರಃ ।
ತಪಸ್ಯಂತಂ ತದೋವಾಚ ಪುನರಿಂದ್ರಃ ಸಹಸ್ರದೃಕ್ ॥ ೯ ॥

ಉರ್ವಶೀಂ ಚ ತತೋ ಮೇನಾಂ ರಂಭಾಂ ಚಾಪಿ ತಿಲೋತ್ತಮಾಂ ।
ನೈವೇತ್ಯೂಚುರ್ಭಯತ್ರಸ್ತಾಃ ಪುನರಾಹ ಶಚೀಪತಿಃ ॥ ೧೦ ॥

ಗಂಭೀರಾಂ ಚಾತಿಗಂಭೀರಾಮುಭೇ ಯೇ ಗರ್ವಿತೇ ತದಾ ।
ತೇ ಊಚತುರುಭೇ ದೇವಂ ಸಹಸ್ರಾಕ್ಷಂ ಪುರಂದರಂ ॥ ೧೧ ॥

॥ ಗಂಭೀರಾತಿಗಂಭೀರೇ ಊಚತುಃ ॥

ಆವಾಂ ಗತ್ವಾ ತಪಸ್ಯಂತಂ ಗಾಧಿಪುತ್ರಂ ಮಹಾದ್ಯುತಿಂ
ಚ್ಯಾವಯಾವೋ ನೃತ್ಯಗೀತೈ ರೂಪಯೌವನಸಂಪದಾ ॥ ೧೨ ॥

ಮೋಹಕ್ಕೊಳಗಾದುದನ್ನು ಆಗ ತಿಳಿದನು. ಆಮೇಲವನು ಆ ತೀರ್ಥವನ್ನು ಬಿಟ್ಟು ಗಂಗೆಯ ದಕ್ಷಿಣತೀರ್ಥವಾದ, ಕಾಲಂಜರೇಶ್ವರನು ನೆಲಸಿರುವ ಸ್ಥಳಕ್ಕೆ ಬಂದು

೯. ಅಲ್ಲಿ ತಪಸ್ಸುಮಾಡತೊಡಗಿದನು. ಅತ್ತ ಇಂದ್ರನು ಪುನಃ ಊರ್ವಶಿ, ಮೇನಕೆ, ರಂಭೆ, ತಿಲೋತ್ತಮೆಯರಿಗೆ ವಿಶ್ವಾಮಿತ್ರನ ತಪಸ್ಸನ್ನು ಹಾಳುಮಾಡುವಂತೆ ಹೇಳಿದನು.

೧೦. ಆ ಊರ್ವಶಿ ಮೊದಲಾದವರು ಭಯದಿಂದ ಆಗುವುದಿಲ್ಲವೆಂದರು. ಪುನಃ ಇಂದ್ರನು ಗಂಭೀರೆ, ಅತಿಗಂಭೀರೆಯರೆಂಬ ಸೌಂದರ್ಯಗರ್ವಿತರಾದ ಅಪ್ಸರೆಯರೀರ್ವರಿಗೆ ತಪಸ್ಸನ್ನು ಭಂಗಮಾಡಲೋಸುಗ ಹೇಳಿದನು.

೧೧–೧೨. ಆ ಅಪ್ಸರೆಯರು ಇಂದ್ರನಿಗೆ—ಓ ದೇವ, ನಾವು ಹೋಗಿ ಮಹಾತೇಜಸ್ವಿಯಾದ ವಿಶ್ವಾಮಿತ್ರನ ತಪಸ್ಸನ್ನು ನರ್ತನ, ಗಾನ, ರೂಪ, ಯೌವನಗಳಿಂದ ಹಾಳುಮಾಡುವೆವು.

ಯಾಸಾಮಪಾಂಗೇ ಹಸಿತೇ ವಾಚಿ ವಿಭ್ರಮಸಂಪದಿ ।
ನಿತ್ಯಂ ವಸತಿ ಪಂಚೇಷುಸ್ತಾಭಿಃ ಕೋऽತ್ರ ನ ಜೀಯತೇ ॥ ೧೩ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವೇ ಸಹಸ್ರಾಕ್ಷೇ ತೇ ಆಗತ್ಯ ಮಹಾನದೀಂ ।
ದದೃಶಾತೇ ತಪಸ್ಯಂತಂ ವಿಶ್ವಾಮಿತ್ರಂ ಮಹಾಮುನಿಂ ॥ ೧೪ ॥

ಮೃತ್ಯೋರಪಿ ದುರಾಧರ್ಷಂ ಭೂಮಿಷ್ಠಮಿವ ಧೂರ್ಜಟಿಂ ।
ಸಹಸ್ರಮೇಕಂ ವರ್ಷಾಣಾಮೀಕ್ಷಿತುಂ ನ ಚ ಶಕ್ನುತಃ ॥ ೧೫ ॥

ದೂರೇ ಸ್ಥಿತೇ ನೃತ್ಯಗೀತಚಾಟುಕಾರರತೇ ತದಾ ।
ವಿಲೋಕ್ಯ ಮುನಿಶಾರ್ದೂಲಸ್ತತಃ ಕೋಪಾಕುಲೋऽಭವತ್ ॥ ೧೬ ॥

---

೧೩. ಯಾವ ಸುಂದರಿಯರ ನೋಟ, ಹಾಸ್ಯ, ಮಾತು, ವಿಲಾಸಗಳಲ್ಲಿ ಮನ್ಮಥನು ಸದಾ ನೆಲಸಿರುವನೋ ಅಂತಹ ಕಾಮಿನಿಯರು ಯಾರನ್ನುಬೇಕಾದರೂ ಜಯಿಸಬಲ್ಲರು ಎಂದು ಗರ್ವದಿಂದ ನುಡಿದರು.

೧೪. ಆಮೇಲಾ ಅಪ್ಸರೆಯರು ಗೌತಮೀನದಿಗೆ ಬಂದು ತಪಸ್ಸುಮಾಡುತ್ತಲಿದ್ದ ವಿಶ್ವಾಮಿತ್ರನನ್ನು ನೋಡಿದರು.

೧೫. ಆ ಮುನಿಯು ಮೃತ್ಯುವಿಗೂ ಜಗ್ಗದವನಂತಿದ್ದು ಭೂಮಿಗಿಳಿದು ಬಂದ ಪರಮೇಶ್ವರನಂತೆ ತೋರುತ್ತಿದ್ದನು. ಒಂದುಸಾವಿರ ವರ್ಷಗಳವರೆಗೆ ಆ ಅಪ್ಸರೆಯರು ವಿಶ್ವಾಮಿತ್ರನ ತಪೋಭಂಗಕ್ಕಾಗಿ ನಿರೀಕ್ಷಿಸಿದರು. ಆದರೆ ಅವನನ್ನು ನೋಡುವುದಕ್ಕೂ ಅವರಿಂದಾಗಲಿಲ್ಲ.

೧೬. ಆ ಅಪ್ಸರೆಯರು ದೂರದಲ್ಲಿಯೇ ನಿಂತು ನರ್ತನಗಾನವಿಲಾಸಗಳನ್ನು ಮಾಡುತ್ತಿದ್ದರು. ಅದನ್ನು ನೋಡಿ ವಿಶ್ವಾಮಿತ್ರನಿಗೆ ತುಂಬಾ ಕೋಪವುಂಟಾಯಿತು. ವಿರುದ್ಧವನ್ನಾಚರಿಸಿದರೆ ಎಂತಹವನಿಗಾದರೂ ಕೋಪವುಂಟಾಗುವುದು.

ಪ್ರತೀಪಾಚರಣಂ ದೃಷ್ಟ್ವಾ ಕ್ರೋಧಃ ಕಸ್ಯ ನ ಜಾಯತೇ ।
ನಿಸ್ಪೃಹೋಽಪಿ ಮಹಾಬಾಹುಸ್ತಮಿಂದ್ರಂ ಪ್ರಹಸನ್ನಿವ ॥ ೧೭ ॥

ಆಭ್ಯಾಂ ಮುಕ್ತಃ ಸಹಸ್ರಾಕ್ಷೋ ಹ್ಯಪ್ಸರೋಭ್ಯಾಂ ಬ್ರುವನ್ನಿವ ।
ಶಶಾಪ ತೇ ಸ ಗಾಧೇಯೋ ದ್ರವರೂಪೇ ಭವಿಷ್ಯಥಃ ॥ ೧೮ ॥

ದ್ರವಿತುಂ ಮಾಂ ಸಮಾಯಾತೇ ಯತಸ್ತ್ವಿಹ ತತೋ ಲಘುಃ ।
ತತಃ ಪ್ರಸಾದಿತಸ್ತಾಭ್ಯಾಂ ಶಾಪಮೋಕ್ಷಂ ಚಕಾರ ಸಃ ॥ ೧೯ ॥

ಭವೇತಾಂ ದಿವ್ಯರೂಪೇ ವಾಂ ಗಂಗಯಾ ಸಂಗತೇ ಯದಾ ।
ತಚ್ಛಾಪಾತ್ತೇ ನದೀರೂಪೇ ತತ್ಕ್ಷಣಾತ್ಸಂಬಭೂವತುಃ ॥ ೨೦ ॥

ಅಪ್ಸರೋಯುಗಮಾಖ್ಯಾತಂ ನದೀದ್ವಯಮತೋಽಭವತ್ ।
ತಾಭ್ಯಾಂ ಪರಸ್ಪರಂ ಚಾಪಿ ತಾಭ್ಯಾಂ ಗಂಗಾಸು ಸಂಗಮಃ ॥ ೨೧ ॥

೧೭-೧೮. ನಿಸ್ಪೃಹನಾಗಿದ್ದರೂ ಆ ಮುನಿಯು ಇಂದ್ರನಿಗೆ ಬುದ್ಧಿಗಲಿಸಬೇಕೆಂಬ ಮತಿಯಿಂದ ಆ ಅಪ್ಸರೆಯನ್ನು ನನ್ನನ್ನು ದ್ರವಿಸಲು (ಮೋಹಗೊಳಿಸಲು) ಬಂದಿರುವುದರಿಂದ ನೀವೇ ದ್ರವ (ಜಲ) ರೂಪವನ್ನು ಹೊಂದಿರಿ ಎಂದು ಶಪಿಸಿದನು.

೧೯. ಆಗ ಆ ಅಪ್ಸರೆಯರು ಹೆದರಿ ವಿಶ್ವಾಮಿತ್ರನನ್ನು ಪ್ರಾರ್ಥಿಸಿದರು. ಮುನಿಯು ಪ್ರಸನ್ನನಾಗಿ ನೀವು ನದಿಯಾಗಿ ಹರಿದು ಗಂಗೆಯೊಡನೆ ಸೇರಿದರೆ ಮೊದಲಿನ ದಿವ್ಯರೂಪವು ನಿಮಗೆ ಬರುವುದು ಎಂದು ಅನುಗ್ರಹಿಸಿದನು.

೨೦. ವಿಶ್ವಾಮಿತ್ರನ ಶಾಪದಿಂದ ಆ ಅಪ್ಸರೆಯರು ಕೂಡಲೇ ನದಿಯಾದರು. ಆ ನದಿಗಳಿಗೆ ಅಪ್ಸರೋಯುಗವೆಂದು ಹೆಸರಾಯಿತು.

೨೧. ಆಮೇಲಾ ನದಿಗಳು ಒಂದಕ್ಕೊಂದು ಸೇರಿ ಗಂಗಾನದಿಯಲ್ಲಿ ಸಂಗಮವಾದುವು. ಆ ಅಪ್ಸರಾಸಂಗಮತೀರ್ಥವು ಭೋಗಮೋಕ್ಷಗಳನ್ನುಂಟು ಮಾಡುವಂತಹುದಾಗಿ ಪ್ರಸಿದ್ಧವಾಗಿರುವುದು.

ಸರ್ವಲೋಕೇಷು ವಿಖ್ಯಾತೋ ಭುಕ್ತಿಮುಕ್ತಿಪ್ರದಃ ಶಿವಃ ।
ತತ್ರಾಸ್ತೇ ದೃಷ್ಟ ಏವಾಸೌ ಸರ್ವಸಿದ್ಧಿಪ್ರದಾಯಕಃ ॥ ೨೨ ॥

ತತ್ರ ಸ್ನಾತ್ವಾ ತು ತಂ ದೃಷ್ಟ್ವಾ ಮುಚ್ಯತೇ ಸರ್ವಬಂಧನಾತ್ ॥ ೨೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಅಪ್ಸರೋಯುಗಸಂಗಮತೀರ್ಥವರ್ಣನಂ ನಾಮ
ಸಪ್ತಚತ್ವಾರಿಂಶದಧಿಕಶತತಮೋಽಧ್ಯಾಯಃ

೨೨-೨೩. ಆ ಅಪ್ಸರಾಸಂಗಮತೀರ್ಥದಲ್ಲಿ ಸರ್ವಸಿದ್ಧಿಗಳನ್ನು ದರ್ಶನಮಾತ್ರದಿಂದ ಅನುಗ್ರಹಿಸುತ್ತಾ ಪರಮೇಶ್ವರನು ನೆಲಸಿರುವನು. ಆ ತೀರ್ಥದಲ್ಲಿ ಸ್ನಾನಮಾಡಿ ಶಿವನನ್ನು ದರ್ಶನಮಾಡಿದರೆ ಸಂಸಾರಬಂಧನಗಳೆಲ್ಲವೂ ಹರಿದು ತಪ್ಪದೇ ಮುಕ್ತಿಯು ಲಭಿಸುವುದು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಅಪ್ಸರೋಯುಗಸಂಗಮತೀರ್ಥವರ್ಣನವೆಂಬ
ನೂರನಲವತ್ತೇಳನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಎಪ್ಪತ್ತೆಂಟನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಅಷ್ಟಚತ್ವಾರಿಂಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಕೋಟಿತೀರ್ಥಮಿತಿ ಖ್ಯಾತಂ ಗಂಗಾಯಾ ದಕ್ಷಿಣೇ ತಟೇ ।
ಯಸ್ಯಾನುಸ್ಮರಣಾದೇವ ಸರ್ವಪಾಪೈಃ ಪ್ರಮುಚ್ಯತೇ ॥ ೧ ॥

ಯತ್ರ ಕೋಟೀಶ್ವರೋ ದೇವಃ ಸರ್ವಂ ಕೋಟಿಗುಣಂ ಭವೇತ್ ।
ಕೋಟಿದ್ವಯಂ ತತ್ರ ಪೂರ್ಣಂ ತೀರ್ಥಾನಾಂ ಶುಭದಾಯಿನಾಂ ॥ ೨ ॥

ತತ್ರ ವ್ಯುಷ್ಟಿಂ ಪ್ರವಕ್ಷ್ಯಾಮಿ ಶೃಣು ನಾರದ ತನ್ಮನಾಃ ।
ಕಣ್ವಸ್ಯ ತು ಸುತೋ ಜ್ಯೇಷ್ಠೋ ಬಾಹ್ಲೀಕ ಇತಿ ವಿಶ್ರುತಃ ॥ ೩ ॥

ನೂರನಲವತ್ತೆಂಟನೆಯ ಅಧ್ಯಾಯವು.

೧. ಬ್ರಹ್ಮನು ಹೇಳಿದನು:— ಕೋಟಿತೀರ್ಥವೆಂಬ ಪುಣ್ಯತೀರ್ಥವು ಗಂಗಾನದಿಯ ಉತ್ತರ ತೀರದಲ್ಲಿರುವುದು. ಆ ತೀರ್ಥದ ಸ್ಮರಣಮಾತ್ರದಿಂದ ಪಾಪಗಳೆಲ್ಲವೂ ನಾಶವಾಗುವುದು.

೨. ಆ ತೀರ್ಥದಲ್ಲಿ ಶಿವನು "ಕೋಟೀಶ್ವರ" ನೆಂಬ ಹೆಸರಿನಿಂದ ನೆಲಸಿರುವನು. ಅಲ್ಲಿ ಕೋಟಿಮಡಿಯಾಗಿ ಫಲವು ಲಭಿಸುವುದು. ಇಂತಹ ತೀರ್ಥದಲ್ಲಿ ಎರಡುಕೋಟಿ ಪುಣ್ಯತೀರ್ಥಗಳಿರುವುವು. ಆ ತೀರ್ಥದ ಮಾಹಾತ್ಮ್ಯವನ್ನು ಹೇಳುವೆನು ಶ್ರದ್ಧೆಯಿಂದ ಕೇಳು.

೩. ಕಣ್ವನಿಗೆ ಬಾಹ್ಲೀಕನೆಂಬ ಮಗನಿದ್ದನು, ಅವನು ಜ್ಯೇಷ್ಠಪುತ್ರನು. ಕಾಣ್ವನೆಂದೂ ಅವನಿಗೆ ಹೆಸರಿದ್ದಿತು. ವೇದವೇದಾಂಗಗಳಲ್ಲಿ ಪಂಡಿತನಾಗಿದ್ದನು.

ಕಾಣ್ವಶ್ಚೇತಿ ಜನ್ಯೈಃ ಖ್ಯಾತೋ ವೇದವೇದಾಂಗಪಾರಗಃ ।
ಇಷ್ಟೀಃ ಸಾರ್ವಾರ್ಯಣಾನ್ನೀಯರ್ಾಃ ಸಭಾರ್ಯೋ ವೇದಪಾರಗಃ ॥ ೪ ॥

ಕುರ್ವನ್ನಾಸ್ತೇ ಸ ಗೌತಮ್ಯಾಸ್ತೀರಸ್ಥೋ ಲೋಕಪೂಜಿತಃ ।
ಪ್ರಾತಃಕಾಲೇ ಸಭಾರ್ಯೋಽಸೌ ಜುಹ್ವದಗ್ನೌ ಸಮಾಹಿತಃ ॥ ೫ ॥

ಸರ್ವದಾಸ್ತೇ ಕದಾಚಿತ್ತು ಹವನಾಯ ಸಮುದ್ಯತಃ ।
ಏಕಾಹುತಿಂ ಸ ಹುತ್ವಾ ತು ಸಮಿದ್ಧೇ ಹವ್ಯವಾಹನೇ ॥ ೬ ॥

ಆಹುತ್ಯಂತರದಾನಾಯ ಹವಿರ್ದ್ರವ್ಯಂ ಕರೇಽಗ್ರಹೀತ್ ।
ಏತಸ್ಮಿನ್ನಂತರೇ ವಹ್ನಿರುಪಶಾಂತೋಽಭವತ್ತದಾ ॥ ೭ ॥

ತತಶ್ಚಿಂತಾಪರಃ ಕಾಣ್ವಃ ಕರ್ತವ್ಯಂ ಕಿಂ ಭವೇದಿತಿ ।
ಅಂತರ್ವಿಚಾರಯಾಮಾಸ ವಿಷಾದಂ ಪರಮಂ ಗತಃ ॥ ೮ ॥

---

೪. ಕರ್ಮಠನಾದಾ ಕಾಣ್ವನು ಗೌತಮೀನದಿಯ ತೀರದಲ್ಲಿ ವಾಸಿಸುತ್ತಾ ನಿತ್ಯವೂ ಅಗ್ನಿಹೋತ್ರವನ್ನು ಮಾಡುತ್ತಾ, ಪ್ರತಿಪರ್ವಗಳಲ್ಲಿಯೂ ಇಷ್ಟಿಗಳನ್ನು ಮಾಡುತ್ತಿದ್ದನು.

೫. ನಿತ್ಯವೂ ಕಾಣ್ವನು ಪ್ರಾತಃಕಾಲದಲ್ಲಿ ಪತ್ನಿಯೊಡನೆ ಅಗ್ನಿಹೋತ್ರವನ್ನು ಮಾಡುತ್ತಿದ್ದನು. ಹೀಗಿರಲೊಂದುದಿನ ಎಂದಿನಂತೆ ಅಗ್ನಿಹೋತ್ರವನ್ನು ಪ್ರಾರಂಭಿಸಿದನು.

೬–೭. ಒಂದು ಆಹುತಿಯನ್ನು ಜ್ವಲಿಸುತ್ತಿದ್ದ ಅಗ್ನಿಯಲ್ಲಿ ಹೋಮಮಾಡಿ ಎರಡನೇ ಆಹುತಿಯನ್ನು ಕೊಡಲು ಸಿದ್ಧನಾದನು. ಆ ಸಮಯದಲ್ಲಿ ಅಗ್ನಿಯು ಶಾಂತವಾಯಿತು.

೮. ಆಗ ಕಾಣ್ವನಿಗೆ ತುಂಬಾ ವಿಷಾದವಾಯಿತು. ಈಗ ಮಾಡಬೇಕಾದುದೇನು ಎಂದು ಚಿಂತಿಸತೊಡಗಿದನು.

ಆಹುತ್ಯೋಶ್ಚ ದ್ವಯೋರ್ಮಧ್ಯ ಉಪಶಾಂತೋ ಹುತಾಶನಃ ।
ಅಗ್ನ್ಯಂತರಮುಪಾದೇಯಂ ವೈದಿಕಂ ಲೌಕಿಕಂ ತಥಾ ॥ ೯ ॥

ಕ್ವ ಹೋಷ್ಯಂ ಸ್ಯಾದ್ದ್ವಿತೀಯಂ ತು ಆಹುತ್ಯಂತರಮೇವ ಚ ।
ಏವಂ ಮೀಮಾಂಸಮಾನೇ ತು ದೈವೀ ವಾಗಬ್ರವೀತ್ತದಾ ॥ ೧೦ ॥

ಅಗ್ನ್ಯಂತರಂ ನೈವ ತೇಽತ್ರ ಉಪಾದೇಯಂ ಭವಿಷ್ಯತಿ ।
ಯಾನಿ ತತ್ರ ಭವಿಷ್ಯಂತಿ ಶಕಲಾನಿ ಸಮೀಪತಃ ॥ ೧೧ ॥

ಅರ್ಧದಗ್ಧೇಷು ಕಾಷ್ಠೇಷು ವಿಪ್ರರಾಜ ಪ್ರಹೂಯತಾಂ ।
ನೇತ್ಯುವಾಚ ತದಾ ಕಾಣ್ವಃ ಸೈವ ವಾಗಬ್ರವೀತ್ಪುನಃ ॥ ೧೨ ॥

ಅಗ್ನೇಃ ಪುತ್ರೋ ಹಿರಣ್ಯಸ್ತು ಪಿತಾ ಪುತ್ರಃ ಸ ಏವ ತು ।
ಪುತ್ರೇ ದತ್ತಂ ಪ್ರಿಯಾಯೈವ ಪಿತುಃ ಪ್ರೀತ್ಯೈ ಭವಿಷ್ಯತಿ ॥ ೧೩ ॥

---

೯. ಎರಡು ಆಹುತಿಗಳ ಮಧ್ಯದಲ್ಲಿ ಅಗ್ನಿಯು ನಂದಿಹೋಗಿರುವುದು. ಬೇರೆ ವೈದಿಕಾಗ್ನಿಯನ್ನಾಗಲೀ, ಲೌಕಿಕಾಗ್ನಿಯನ್ನಾಗಲೀ ಪ್ರತಿಷ್ಠಿಸಬೇಕೆ? ಎರಡನೇಆಹುತಿಯನ್ನು ಎಲ್ಲಿ ಹೋಮಮಾಡಲಿ? ಅಥವಾ ಬೇರೆ ಆಹುತಿಯನ್ನೇ ತೆಗೆದುಕೊಳ್ಳಬೇಕೆ?

೧೦. ಹೀಗೆ ಕಾಣ್ವನು ಯೋಚಿಸುತ್ತಿರಲು ಅಶರೀರವಾಣಿಯು ಹೀಗೆ ಕೇಳಿಸಿತು. ಎಲೈ ಮುನಿಯೇ, ನೀನು ಬೇರೆ ಅಗ್ನಿಯನ್ನು ಪ್ರತಿಷ್ಠಿಸಬೇಕಾಗಿಲ್ಲ.

೧೧. ಹಿಂದೆ ಅರ್ಧ ಸುಟ್ಟಿರುವ ಚಕ್ಕೆಗಳಲ್ಲಿ ಅಗ್ನಿಯಕಣಗಳು ಉಳಿದಿರುವುವು. ಅದರಲ್ಲಿ ಎರಡನೆ ಆಹುತಿಯನ್ನು ಹೋಮಮಾಡು ಎಂದು ಕೇಳಿಸಿತು.

೧೨. ಆದರೆ ಕಾಣ್ವನು ಶಾಸ್ತ್ರವಿರುದ್ಧವಾದುದರಿಂದ ಅಶರೀರವಾಣಿಯ ಮಾತನ್ನು ಒಪ್ಪಲಿಲ್ಲ. ಪುನಃ ಆಕಾಶವಾಣಿಯು ಹೀಗೆ ಕೇಳಿಸಿತು.

೧೩. ಹಿರಣ್ಯವು ಅಗ್ನಿಯ ಪುತ್ರನು. ತಂದೆಯೂ ಮಗನೂ ಒಂದೇ. ಪುತ್ರನಿಗೆ ಸಮರ್ಪಿಸಿದರೆ ತಂದೆಗೂ ಸಂತೋಷವಾಗುವುದು ತಂದೆಗೆ ಕೊಡಬೇಕಾದುದನ್ನು ಮಗನಿಗೆ ಕೊಟ್ಟರೆ ಕೋಟಿಯಷ್ಟು ಫಲವು ಬರುವುದು.

ಪಿತ್ರೇ ದೇಯಂ ಸುತೇ ದದ್ಯಾತ್ಕೋಟಿಪ್ರೀತಿಗುಣಂ ಭವೇತ್ ।
ದೈವೀ ವಾಗಬ್ರವೀದೇವಂ ತತಃ ಸರ್ವೇ ಮಹರ್ಷಯಃ ॥ ೧೪ ॥

ನಿಶ್ಚಿತ್ಯ ಧರ್ಮಸರ್ವಸ್ವಂ ತಥಾ ಚಕ್ರುರ್ಯಥೋದಿತಂ ।
ಏತಜ್ಜ್ಞಾತ್ವಾ ಜಗತ್ಯತ್ರ ಪುತ್ರೇ ದತ್ತಂ ಪಿತುರ್ಭವೇತ್ ॥ ೧೫ ॥

ಅಪತ್ಯಾದ್ಯುಪಕಾರೇಣ ಪಿತ್ರೋಃ ಪ್ರೀತಿರ್ಯಥಾ ಭವೇತ್ ।
ತಥಾ ನಾನ್ಯೇನ ಕೇನಾಪಿ ಜಗತ್ಯೇತದ್ಧಿ ವಿಶ್ರುತಂ ॥ ೧೬ ॥

ಸುಪ್ರಸಿದ್ಧಂ ಜಗತ್ಯೇತತ್ಸರ್ವಲೋಕೇಷು ಪೂಜಿತಂ ।
ತಸ್ಮಿನ್ದತ್ತೇ ಭವೇತ್ಪುಣ್ಯಂ ಸರ್ವಂ ಕೋಟಿಗುಣಂ ಸುತ ॥ ೧೭ ॥

ಮನೋಗ್ಲಾನಿನಿವೃತ್ತಿಶ್ಚ ಜಾಯತೇ ಚ ಮಹತ್ಸುಖಂ ।
ಪುನರಪ್ಯಾಹ ಸಾ ವಾಣೀ ಕಾಣ್ವೇಽಸ್ಮಿಂಸ್ತೀರ್ಥ ಉತ್ತಮೇ ॥ ೧೮ ॥

ಅಭವತ್ತನ್ಮಹತ್ತೀರ್ಥಂ ಕಾಣ್ವ ಪುಣ್ಯಪ್ರಭಾವತಃ ।
ಲೋಕತ್ರಯಾಶ್ರಯಾಶೇಷತೀರ್ಥೇಭ್ಯೋಽಪಿ ಮಹಾಫಲಂ ॥ ೧೯ ॥

---

೧೪. ಹೀಗೆ ಅಶರೀರವಾಣಿಯು ಹೇಳಲು, ಎಲ್ಲ ಮಹರ್ಷಿಗಳೂ ಅದರಂತೆಯೇ ನಿಶ್ಚಯಿಸಿ ಕರ್ಮವನ್ನು ನಡೆಯಿಸಿದರು.

೧೫-೧೬. ಇದರಿಂದ ನಾವು ಹೀಗೆ ತಿಳಿಯಬಹುದು—ಮಗನಿಗೆ ದಾನ ಮಾಡಿದರೆ ತಂದೆಗೂ ಸಂತೋಷವಾಗುವುದು. ಮಗನಿಗೆ ಉಪಕಾರಮಾಡುವುದರಿಂದ ಅವನ ತಂದೆತಾಯಿಗಳಿಗುಂಟಾಗುವಂತಹ ಸಂತೋಷವು ಇನ್ನಾವುದರಿಂದಲೂ ಆಗಲಾರದು. ಇದು ಜಗತ್ತಿನಲ್ಲಿ ಪ್ರಸಿದ್ಧವಾಗಿದೆ.

೧೭. ಎಲೈ ನಾರದ, ಈ ಅಂಶವು ಜಗತ್ತಿನಲ್ಲಿ ಗೌರವಿಸಲ್ಪಡುತ್ತಿಲ್ಲವೆ? ತಂದೆಗೆ ಕೊಡುವುದನ್ನು ಮಗನಿಗೆ ಕೊಟ್ಟರೆ ಕೋಟಿಪುಣ್ಯವು ಲಭಿಸುವುದು. ಮನೋವ್ಯಥೆಯು ತೊಲಗುವುದು. ಮಹಾಸುಖವು ಲಭಿಸುವುದು.

೧೮-೧೯. ಪುನಃ ಆ ದೇವವಾಣಿಯು ಹೀಗೆ ಹೇಳಿತು—ಎಲೈ ಕಾಣ್ವ, ಈ ತೀರ್ಥವು ನಿನ್ನ ಹೆಸರಿನಿಂದ ಪುಣ್ಯತೀರ್ಥವಾಗುವುದು. ಮಿಕ್ಕ ತೀರ್ಥಗಳೆಲ್ಲಕ್ಕಿಂತಲೂ ಶ್ರೇಷ್ಠವಾದುದಾಗಿ ರಾರಾಜಿಸುವುದು.

ಸ್ನಾನದಾನಾದಿಕಂ ಕಿಂಚಿದ್ಭಕ್ತ್ಯಾ ಕುರ್ವನ್ಸಮಾಹಿತಃ ।
ಫಲಂ ಪ್ರಾಪ್ಸ್ಯಸ್ಯಶೇಷೇಣ ಸರ್ವಂ ಕೋಟಿಗುಣಂ ಮುನೇ ॥ ೨೦ ॥

ಯತ್ಕಿಂಚಿತ್ಕ್ರಿಯತೇ ಚಾತ್ರ ಸ್ನಾನದಾನಾದಿಕಂ ನರೈಃ ।
ಸರ್ವಂ ಕೋಟಿಗುಣಂ ವಿದ್ಯಾತ್ಕೋಟಿತೀರ್ಥಂ ತತೋ ವಿದುಃ ॥ ೨೧ ॥

ಯತ್ರೈತದ್ವೃತ್ತಮಾಗ್ನೇಯಂ ಕಾಣ್ವಂ ಪೌತ್ರಂ ಹಿರಣ್ಯಕಂ ।
ವಾಣೀಸಂಜ್ಞಂ ಕೋಟಿತೀರ್ಥಂ ಕೋಟಿತೀರ್ಥಫಲಂ ಯತಃ ॥ ೨೨ ॥

ಕೋಟಿತೀರ್ಥಸ್ಯ ಮಾಹಾತ್ಮ್ಯಮತ್ರ ವಕ್ತುಂ ನ ಶಕ್ಯತೇ ।
ವಾಚಸ್ಪತಿಪ್ರಭೃತಿಭಿರಥ ವಾನ್ಯೈಃ ಸುರೈರಪಿ ॥ ೨೩ ॥

ಯತ್ರಾನುಷ್ಠೀಯಮಾನಂ ಹಿ ಸರ್ವಂ ಕರ್ಮ ಯಥಾ ತಥಾ ।
ಗೋದಾವರ್ಯಾಃ ಪ್ರಸಾದೇನ ಸರ್ವಂ ಕೋಟಿಗುಣಂ ಭವೇತ್ ॥ ೨೪ ॥

---

೨೦. ಈ ಕಾಣ್ವತೀರ್ಥದಲ್ಲಿ ಭಕ್ತಿಯಿಂದ ಸ್ನಾನದಾನಗಳನ್ನು ನೀನು ನಿತ್ಯವೂ ಶ್ರದ್ಧೆಯಿಂದ ಮಾಡಿದರೆ ಕೋಟಿಮಡಿಯಾಗಿ ಫಲವನ್ನನುಭವಿಸುವೆ.

೨೧. ಈ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದರೆ ಕೋಟಿಗುಣವಾದ ಫಲವು ಲಭಿಸುವುದರಿಂದ ಇದು ಕೋಟಿತೀರ್ಥವೆಂದು ಪ್ರಸಿದ್ಧವಾಯಿತು.

೨೨. ಈ ತೀರ್ಥದಲ್ಲಿ ಹೀಗೆ ಕೋಟಿತೀರ್ಥ, ಆಗ್ನೇಯ ತೀರ್ಥ, ಕಾಣ್ವತೀರ್ಥ, ಪುತ್ರತೀರ್ಥ, ಹಿರಣ್ಯ ತೀರ್ಥ, ವಾಣೀತೀರ್ಥಗಳೆಂಬ ತೀರ್ಥ ಗಳಿರುವುವು.

೨೩. ಈ ಕೋಟಿತೀರ್ಥದ ಮಾಹಾತ್ಮ್ಯೆಯನ್ನು ಬೃಹಸ್ಪತಿಯೇ ಮೊದಲಾದಂತಹ ದೇವತೆಗಳೂ ವರ್ಣಿಸಲಾರರು.

೨೪. ಈ ತೀರ್ಥದಲ್ಲಿ ಕರ್ಮವನ್ನು ಹೇಗೆ ಅನುಷ್ಠಾನ ಮಾಡಿದರೂ ಸಹ ಫಲವು ಕೋಟಿರೂಪವಾಗಿ ಲಭಿಸುವುದು. ಗೌತಮಿಯ ಮಾಹಾತ್ಮ್ಯೆ ವಂತಹುದು.

ಕೋಟಿತೀರ್ಥೇ ದ್ವಿಜಾಗ್ರ್ಯಾಯ ಗಾಮೇಕಾಂ ಯಃ ಪ್ರಯಚ್ಛತಿ ।
ತಸ್ಯ ತೀರ್ಥಸ್ಯ ಮಾಹಾತ್ಮ್ಯಾದ್ಗೋಕೋಟಿಫಲಮಶ್ನುತೇ ॥ ೨೫ ॥

ತಸ್ಮಿಂಸ್ತೀರ್ಥೇ ಶುಚಿರ್ಭೂತ್ವಾ ಭೂಮಿದಾನಂ ಕರೋತಿ ಯಃ ।
ಶ್ರದ್ಧಾಯುಕ್ತೇನ ಮನಸಾ ಸ್ಯಾತ್ತತ್ಕೋಟಿಗುಣೋತ್ತರಂ ॥ ೨೬ ॥

ಸರ್ವತ್ರ ಗೌತಮೀತೀರೇ ಪಿತೄಣಾಂ ದಾನಮುತ್ತಮಂ ।
ವಿಶೇಷತಃ ಕೋಟಿತೀರ್ಥೇ ತದನಂತಫಲಪ್ರದಂ ।
ಅತ್ರೈಕನ್ಯೂನಪಂಚಾಶತ್ತೀರ್ಥಾನಿ ಮುನಯೋ ವಿದುಃ ॥ ೨೭ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಕಾಣ್ವಾದ್ಯೇಕೋನಪಂಚಾಶತ್ತೀರ್ಥವರ್ಣನಂ ನಾಮಾ-ಷ್ಟಚತ್ವಾರಿಂಶದಧಿಕಶತತಮೋಽಧ್ಯಾಯಃ

---

೨೫. ಕೋಟಿತೀರ್ಥದಲ್ಲಿ ಬ್ರಾಹ್ಮಣನೋರ್ವನಿಗೆ ಒಂದು ಹಸುವನ್ನು ದಾನಮಾಡಿದರೆ ಕೋಟಿ ಗೋದಾನಗಳನ್ನು ಮಾಡಿದ ಫಲವು ಲಭಿಸುವುದು.

೨೬. ಕೋಟಿತೀರ್ಥದಲ್ಲಿ ಶುಚಿಯಾಗಿ ಸ್ನಾನಮಾಡಿ ಭೂದಾನವನ್ನು ಶ್ರದ್ಧೆಯಿಂದ ಮಾಡಿದರೆ ಕೋಟಿಗುಣವಾಗಿ ಫಲವು ಲಭಿಸುವುದು.

೨೭. ಗೌತಮೀತೀರದಲ್ಲೆಲ್ಲಾ ಸ್ನಾನದಾನಗಳನ್ನು ಮಾಡಿದರೆ ಮುಖ್ಯವಾಗಿ ಪಿತೃದೇವತೆಗಳಿಗೆ ತೃಪ್ತಿಯಾಗುವುದು. ಅದರಲ್ಲಿಯೂ ಈ ಕೋಟಿತೀರ್ಥದಲ್ಲಿ ಕೊಟಿಗುಣವಾಗಿ ಫಲವು ಲಭಿಸುವುದು. ಈ ತೀರ್ಥದಲ್ಲಿ ನಲವತ್ತೊಂಭತ್ತು ಪುಣ್ಯ ತೀರ್ಥಗಳಿರುವುವು.

ಇಲ್ಲಿಗೆ ಬ್ರಹ್ಮಪುರಾಣದಲ್ಲಿ ಕಾಣ್ವತೀರ್ಥವರ್ಣನವೆಂಬ ನೂರ ನಲವತ್ತೆಂಟನೆಯ ಅಧ್ಯಾಯವುಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಎಪ್ಪತ್ತೊಂಭತ್ತನೆಯ ಅಧ್ಯಾಯವು

ಶ್ರೀಃ

ಅಥ ಮಹಾಪುರಾಣೇ ಬ್ರಾಹ್ಮೇ

ಏಕೋನಪಂಚಾಶದಧಿಕತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ನಾರಸಿಂಹಮಿತಿ ಖ್ಯಾತಂ ಗಂಗಾಯಾ ಉತ್ತರೇ ತಟೇ ।
ತಸ್ಯಾನುಭಾವಂ ವಕ್ಷ್ಯಾಮಿ ಸರ್ವರಕ್ಷಾವಿಧಾಯಕಂ ॥ ೧ ॥

ಹಿರಣ್ಯಕಶಿಪುಃ ಪೂರ್ವಮಭವದ್ಬಲಿನಾಂ ವರಃ ।
ತಪಸಾ ವಿಕ್ರಮೇಣಾಪಿ ದೇವಾನಾಮಪರಾಜಿತಃ ॥ ೨ ॥

ನೂರನಲವತ್ತೊಂಭತ್ತನೆಯ ಅಧ್ಯಾಯವು.

೧. ಬ್ರಹ್ಮನಿಂತೆಂದನು—ಗಂಗಾನದಿಯ ಉತ್ತರಭಾಗದ ದಡದಲ್ಲಿ ನಾರಸಿಂಹವೆಂಬ ತೀರ್ಥವಿರುವುದು. ಅದು ಸರ್ವಭಯನಾಶಕವಾದುದು. ಅದರ ವಿಷಯವನ್ನು ಹೇಳುವೆನು.

೨. ಪೂರ್ವದಲ್ಲಿ ಬಲಿಷ್ಠನಾದ ಹಿರಣ್ಯಕಶಿಪುವೆಂಬ ರಾಕ್ಷಸನಿದ್ದನು. ಅವನು ತಪಸ್ಸಿನಿಂದಲೂ, ಪರಾಕ್ರಮದಿಂದಲೂ ದೇವತೆಗಳಿಗೂ ಸೋಲದವ ವನಾಗಿದ್ದನು. ಅವನ ಮಗನಾದ ಪ್ರಹ್ಲಾದನು ಹರಿಭಕ್ತನಾದುದರಿಂದ ಅವ ನನ್ನು ದ್ವೇಷಿಸುತ್ತಾ ಅದರಿಂದ ಕಲುಷಿತನಾಗಿದ್ದನು.

ಹರಿಭಕ್ತಾತ್ಮಜದ್ವೇಷಜಾಲುಷ್ಮೀಕೃತಮಾನಸಃ ।
ಆವಿರ್ಭೂಯ ಸಭಾಸ್ತಂಭಾದ್ವಿಶ್ವಾತ್ಮತ್ವಂ ಪ್ರದರ್ಶಯನ್ ॥ ೩ ॥

ತಂ ಹತ್ವಾ ನರಸಿಂಹಸ್ತತ್ಸೈನ್ಯಮದ್ರಾವಯತ್ತದಾ ।
ಸರ್ವಾನ್ಹತ್ವಾ ಮಹಾದೈತ್ಯಾನ್ಕ್ರಮೇಣಾಜೌ ಮಹಾಮೃಗಃ ॥ ೪ ॥

ರಸಾತಲಸ್ಥಾನ್ ಶತ್ರೂಂಶ್ಚ ಜಿತ್ವಾ ಸ್ವರ್ಲೋಕಮಿಯಿವಾನ್ ।
ತತ್ರ ಜಿತ್ವಾ ಭುವಂ ಗತ್ವಾ ದೈತ್ಯಾನ್ಹತ್ವಾ ನಗಸ್ಥಿತಾನ್ ॥ ೫ ॥

ಸಮುದ್ರಸ್ಥಾನ್ನದೀಸಂಸ್ಥಾನ್ಗ್ರಾಮಸ್ಥಾನ್ವನವಾಸಿನಃ ।
ನಾನಾರೂಪಧರಾನ್ದೈತ್ಯಾನ್ನಿಜಘಾನ ಮೃಗಾಕೃತಿಃ ॥ ೬ ॥

ಆಕಾಶಗಾನ್ವಾಯುಸಂಸ್ಥಾನ್ ಜ್ಯೋತಿರ್ಲೋಕಮುಪಾಗತಾನ್ ।
ವಜ್ರಪಾತಾಧಿಕನಖಃ ಸಮುದ್ಧೂತಮಹಾಸಟಃ ॥ ೭ ॥

---

೩. ಆಗ ನರಸಿಂಹನು ಆಸ್ಥಾನದ ಕಂಭದಿಂದ ತನ್ನ ವಿಶ್ವಾತ್ಮತ್ವ (ಪ್ರಪಂಚವೆಲ್ಲಾ ಪರಮಾತ್ಮನ ಆತ್ಮ) ವನ್ನು ಪ್ರದರ್ಶಿಸುತ್ತಾ ಬಂದು ಆ ಹಿರಣ್ಯಕಶಿಪುವನ್ನು ಕೊಂದು ಅವನ ಸೈನ್ಯವನ್ನೆಲ್ಲಾ ಬೆದರಿಸಿದನು.

೪–೬. ಅನಂತರ ಯುದ್ಧದಲ್ಲಿ ದೊಡ್ಡ ದೊಡ್ಡ ರಾಕ್ಷಸರನ್ನೆಲ್ಲಾ ಕೊಂದು ಪಾತಾಳಲೋಕದಲ್ಲಿರುವ ರಾಕ್ಷಸರನ್ನೆಲ್ಲಾ ಜಯಿಸಿ ಸ್ವರ್ಗಲೋಕಕ್ಕೆ ಹೋದನು. ಅಲ್ಲಿರುವ ರಾಕ್ಷಸರನ್ನೆಲ್ಲಾ ಜಯಿಸಿ ಅನಂತರ ಭೂಮಿಗೆ ಬಂದು ಅಲ್ಲಿರುವ ಬೆಟ್ಟಗಳಮೇಲೆಯೂ, ಸಮುದ್ರದಲ್ಲಿಯೂ, ನದಿ, ಗ್ರಾಮಗಳಲ್ಲಿಯೂ ಇರುವ ನಾನಾರೂಪಗಳನ್ನು ಧರಿಸಿರುವ ರಾಕ್ಷಸರನ್ನೆಲ್ಲಾ ಮೃಗಾಕೃತಿಯಾದ ನರಸಿಂಹನು ಕೊಂದುಹಾಕಿದನು.

೭–೯. ಆಕಾಶದಲ್ಲಿಯೂ, ವಾಯುಲೋಕದಲ್ಲಿಯೂ, ಜ್ಯೋತಿರ್ಲೋಕದಲ್ಲಿಯೂ ಇರುವ ರಾಕ್ಷಸರನ್ನೆಲ್ಲಾ ವಜ್ರಾಯುಧಕ್ಕಿಂತಲೂ ಚೂಪಾದ ಉಗುರುಗಳಿಂದ ಸೀಳಿಹಾಕಿದನು. ತನ್ನ ಕೇಸರಗಳನ್ನು ಅಲುಗಾಡಿಸುತ್ತಾ ದೈತ್ಯಸ್ತ್ರೀಯರ ಗರ್ಭಸ್ರಾವವಾಗುವಂತೆ ಕೂಗುತ್ತಾ, ಎಲ್ಲಾ ರಾಕ್ಷಸರನ್ನೂ ಕೊಂದನು.

ದೈತ್ಯಗರ್ಭಸ್ರಾವಿಗರ್ಜೀ ನಿರ್ಜಿತಾಶೇಷರಾಕ್ಷಸಃ ।
ಮಹಾನಾದೈರ್ವಿಲೋಕಿತೈಶ್ಚ ಪ್ರಲಯಾನಲಸಂನಿಭೈಃ ॥ ೮ ॥

ಚಪೇಟೈರಂಗವಿಕ್ಷೇಪೈರಸುರಾನ್ಪರ್ಯಚೂರ್ಣಯತ್ ।
ಏವಂ ಹತ್ವಾ ಬಹುವಿಧಾನ್ಗೌತಮೀಮಾಗಮದ್ಧರಿಃ ॥ ೯ ॥

ಸ್ವಪದಾಂಬುಜಸಂಭೂತಾಂ ಮನೋನಯನನಂದಿನೀಂ ।
ತತ್ರಾಂಬರ್ಯ ಇತಿ ಖ್ಯಾತೋ ದಂಡಕಾಧಿಪತೇ ರಿಪುಃ ॥ ೧೦ ॥

ದೇವಾನಾಂ ದುರ್ಜಯೋ ಯೋದ್ಧಾ ಬಲೇನ ಮಹತಾವೃತಃ ।
ತೇನಾಭವನ್ಮಹಾರೌದ್ರಂ ಭೀಷಣಂ ಲೋಮಹರ್ಷಣಂ ॥ ೧೧ ॥

ಶಸ್ತ್ರಾಸ್ತ್ರವರ್ಷಣಂ ಯುದ್ಧಂ ಹರಿಣಾ ದೈತ್ಯಸೂನುನಾ ।
ನಿಜಘಾನ ಹರಿಃ ಶ್ರೀಮಾಂಸ್ತಂ ರಿಪುಂ ಹ್ಯುತ್ತರೇ ತಟೇ ॥ ೧೨ ॥

ಮಹಾಭಯಂಕರವಾಗಿ ಘರ್ಜಿಸುತ್ತಾ, ಭಯಂಕರವಾಗಿ ನೋಡುತ್ತಾ ಆಗಾಗ್ಯೆ ಚಪ್ಪಾಳೆಗಳನ್ನು ಹಾಕುತ್ತಾ, ಮೈಯನ್ನೆಲ್ಲಾ ಅಲುಗಾಡಿಸುತ್ತಾ ರಾಕ್ಷಸರನ್ನೆಲ್ಲಾ ನಾಶಮಾಡಿದನು. ಈರೀತಿಯಾಗಿ ರಾಕ್ಷಸರನ್ನು ಕೊಂದು ಗೌತಮೀ ಎಂಬ ಕ್ಷೇತ್ರಕ್ಕೆ ಆ ವಿಷ್ಣುವು ಹೋದನು.

೧೦. ಆ ನರಸಿಂಹನು ತನ್ನ ಪಾದದಿಂದ ಹುಟ್ಟಿದ, ಕಣ್ಮನಗಳಿಗಾನಂದವನ್ನುಂಟುಮಾಡುವ ಆ ಗೌತಮೀಕ್ಷೇತ್ರದಲ್ಲಿ ಆಂಬರ್ಯವೆಂದು ಪ್ರಸಿದ್ಧವಾದ ಸ್ಥಳಕ್ಕೆ ಹೋದನು.

೧೧–೧೨. ಆ ಸ್ಥಳದಲ್ಲಿ ಹರಿ ಎಂಬ ರಾಕ್ಷಸನಿದ್ದನು. ಅವನು ದೇವತೆಗಳಿಂದಲೂ ದುರ್ಜಯನಾಗಿಯೂ ಮಹಾಪರಾಕ್ರಮಿಯಾಗಿಯೂ ಇದ್ದನು. ನರಸಿಂಹನು ಅವನೊಡನೆ ರೋಮಾಂಚವನ್ನುಂಟುಮಾಡುವ ಭಯಂಕರವಾದ ಯುದ್ಧವನ್ನು ಮಾಡಿದನು. ಶಸ್ತ್ರಗಳಿಂದಲೂ ಅಸ್ತ್ರಗಳಿಂದಲೂ ಭಯಂಕರವಾದ ಯುದ್ಧ ನಡೆದು ಕೊನೆಗೆ ನರಸಿಂಹನು ಆ ಹರಿಯನ್ನು ಗಂಗಾನದಿಯ ಉತ್ತರ ದಡದಲ್ಲಿ ಕೊಂದುಹಾಕಿದನು.

ಗಂಗಾಯಾಂ ನಾರಸಿಂಹಂ ತು ತೀರ್ಥಂ ತ್ರೈಲೋಕ್ಯವಿಶ್ರುತಂ ।
ಸ್ನಾನದಾನಾದಿಕಂ ತತ್ರ ಸರ್ವಪಾಪಗ್ರಹಾರ್ದನಂ ॥ ೧೩ ॥

ಸರ್ವರಕ್ಷಾಕರಂ ನಿತ್ಯಂ ಜರಾಮರಣವಾರಣಂ ।
ಯಥಾ ಸುರಾಣಾಂ ಸರ್ವೇಷಾಂ ನ ಕೋಽಪಿ ಹರಿಣಾ ಸಮಃ ॥ ೧೪ ॥

ತೀರ್ಥಾನಾಮಪ್ಯಶೇಷಾಣಾಂ ತಥಾ ತತ್ತೀರ್ಥಮುತ್ತಮಂ ।
ತತ್ರ ತೀರ್ಥೇ ನರಃ ಸ್ನಾತ್ವಾ ಕುರ್ಯಾನ್ನೃಹರಿಪೂಜನಂ ॥ ೧೫ ॥

ಸ್ವರ್ಗೇ ಮರ್ತ್ಯೇ ತಲೇ ವಾಪಿ ತಸ್ಯ ಕಿಂಚಿನ್ನ ದುರ್ಲಭಂ ।
ಇತ್ಯಾದ್ಯಷ್ಟೌ ಮುನೇ ತತ್ರ ಮಹಾತೀರ್ಥಾನಿ ನಾರದ ॥ ೧೬ ॥

ಪೃಥಕ್ಪೃಥಕ್ತೀರ್ಥಕೋಟಿಫಲಮಾಹುರ್ಮನೀಷಿಣಃ ।
ಅಶ್ರದ್ಧಯಾಪಿ ಯನ್ನಾಮ್ನಿ ಸ್ಮೃತೇ ಸರ್ವಾಘಸಂಕ್ಷಯಃ ॥ ೧೭ ॥

೧೩–೧೪. ಗಂಗಾನದಿಯ ದಡದಲ್ಲಿ ನಾರಸಿಂಹವೆಂಬ ತೀರ್ಥಕ್ಷೇತ್ರವು ಮೂರುಲೋಕದಲ್ಲಿಯೂ ಉತ್ತಮವಾದುದು. ಅಲ್ಲಿ ಸ್ನಾನವನ್ನಾಗಲೀ, ದಾನವನ್ನಾಗಲೀ ಮಾಡಿದರೆ ಎಲ್ಲ ಪಾಪವೂ ಮತ್ತು ಪಾಪಗ್ರಹಗಳೂ ನಾಶವಾಗುವುವು. ಸರ್ವಭಯನಿವಾರಕವಾದುದು. ಮುಪ್ಪುಮರಣಾದಿಗಳಿರುವುದಿಲ್ಲ. ಸ್ನಾನಮಾಡಲು ದೇವತೆಗಳಿಗೆ ಸಮನಾಗುವನು. ಆದುದರಿಂದ ಹರಿಗೆ ಸಮನಾದವರು ಯಾರೂ ಇಲ್ಲ.

೧೫. ಆ ನಾರಸಿಂಹತೀರ್ಥವು ಎಲ್ಲ ತೀರ್ಥಗಳಿಗಿಂತಲೂ ಶ್ರೇಷ್ಠವಾದುದು. ಆ ತೀರ್ಥದಲ್ಲಿ ಸ್ನಾನಮಾಡಿದ ಮೇಲೆ ನರಸಿಂಹನ ಪೂಜೆಯನ್ನು ಮಾಡಬೇಕು.

೧೬. ಎಲೈ ನಾರದ, ಸ್ವರ್ಗದಲ್ಲಿಯಾಗಲೀ, ಭೂಲೋಕದಲ್ಲಿಯಾಗಲೀ, ಪಾತಾಳದಲ್ಲಿಯಾಗಲೀ ಇಂತಹ ತೀರ್ಥವು ಸಿಗಲಾರದು. ಆ ಗಂಗಾತೀರದಲ್ಲಿ ಈರೀತಿಯಾದ ಎಂಟು ಮಹಾತೀರ್ಥಗಳಿವೆ.

೧೭-೧೮. ವಿದ್ವಾಂಸರು ಒಂದೊಂದು ತೀರ್ಥಗಳಿಗೂ ಒಂದೊಂದು ಕೋಟಿ ಫಲವನ್ನು ಹೇಳುವರು. ಯಾರು ಆ ತೀರ್ಥಗಳ ಹೆಸರನ್ನು ಅಶ್ರದ್ಧೆ

ಭವೇತ್ಸಾಕ್ಷಾನ್ನೃಸಿಂಹೋಽಸೌ ಸರ್ವದಾ ಯತ್ರ ಸಂಸ್ಥಿತಃ ।
ತತ್ತೀರ್ಥಸೇವಾಸಂಜಾತಂ ಫಲಂ ಕೈರಿಹ ವರ್ಣ್ಯತೇ ॥ ೧೮ ॥

ಯಥಾ ನ ದೇವೋ ನೃಹರೇರಧಿಕಃ ಕ್ವಾಪಿ ವರ್ತತೇ ।
ತಥಾ ನೃಸಿಂಹತೀರ್ಥೇನ ಸಮಂ ತೀರ್ಥಂ ನ ಕುತ್ರಚಿತ್ ॥ ೧೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ನಾರಸಿಂಹಾದ್ಯಷ್ಟತೀರ್ಥವರ್ಣನಂ ನಾಮೈಕೋನ-
ಪಂಚಾಶದಧಿಕಶತತಮೋಽಧ್ಯಾಯಃ

ಯಿಂದಲಾದರೂ ಸ್ಮರಿಸಿಕೊಳ್ಳುವರೋ ಅವರ ಪಾಪಗಳೆಲ್ಲಾ ನಾಶವಾಗುವುವು. ಆ ನರಸಿಂಹಕ್ಷೇತ್ರದಲ್ಲಿ ಯಾರು ಯಾವಾಗಲೂ ಇರುವರೋ ಅವರು ಸಾಕ್ಷಾತ್ ನೃಸಿಂಹನೇ ಆಗುವರು. ಆ ತೀರ್ಥಸೇವೆಯಿಂದ ಉಂಟಾಗುವ ಫಲವು ವರ್ಣನಾತೀತವಾದುದು.

೧೯. ಹೇಗೆ ನರಸಿಂಹನಿಗಿಂತ ಶ್ರೇಷ್ಠನಾದ ದೇವತೆ ಯಾರೂ ಇಲ್ಲವೋ ಹಾಗೆಯೇ ನರಸಿಂಹತೀರ್ಥಕ್ಕಿಂತ ಶ್ರೇಷ್ಠವಾದ ತೀರ್ಥವು ಮತ್ತೊಂದಿಲ್ಲವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ನಾರಸಿಂಹತೀರ್ಥವರ್ಣನವೆಂಬ ನೂರನಲವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಎಂಭತ್ತನೆಯ ಅಧ್ಯಾಯವು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಾಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಪೈಶಾಚಂ ತೀರ್ಥಮಾಖ್ಯಾತಂ ಗಂಗಾಯಾ ಉತ್ತರೇ ತಟೇ ।
ಪಿಶಾಚತ್ವಾತ್ಪುರಾ ವಿಪ್ರೋ ಮುಕ್ತಿಮಾಪ ಮಹಾಮತೇ ॥ ೧ ॥

ಸುಯವಸ್ಯಾತ್ಮಜೋ ಲೋಕೇಽಜೀಗರ್ತಿರಿತಿ ವಿಶ್ರುತಃ ।
ಕುಟುಂಬಭಾರದುಃಖಾರ್ತೋ ದುರ್ಭಿಕ್ಷೇಣ ತು ಪೀಡಿತಃ ॥ ೨ ॥

ಮಧ್ಯಮಂ ತು ಶುನಃಶೇಪಂ ಪುತ್ರಂ ಬ್ರಹ್ಮವಿದಾಂ ವರಂ ।
ವಿಕ್ರೀತವಾನ್ಕ್ಷತ್ರಿಯಾಯ ವಧಾಯ ಬಹುಲೈರ್ಧನೈಃ ॥ ೩ ॥

ನೂರಐವತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಗಂಗಾನದಿಯ ಉತ್ತರದಡದಲ್ಲಿ ಪೈಶಾಚ ವೆಂಬ ಪ್ರಸಿದ್ಧವಾದ ತೀರ್ಥವಿದೆ. ಪೂರ್ವದಲ್ಲಿ ಪಿಶಾಚಿಯಾದ ಒಬ್ಬ ಬ್ರಾಹ್ಮಣನು ಇಲ್ಲಿ ಮುಕ್ತಿಯನ್ನು ಪಡೆದನು.

೨-೩. ಸುಯವನೆಂಬುವನಿಗೆ ಅಜೀಗರ್ತಿ ಎಂಬ ಮಗನಿದ್ದನು. ಅವನು ಲೋಕದಲ್ಲಿ ಪ್ರಸಿದ್ಧನಾಗಿರುವನು. ಅವನು ಬಹಳ ದರಿದ್ರನಾಗಿ ಸಂಸಾರವನ್ನು ನಿರ್ವಹಿಸಲು ಅಸಮರ್ಥನಾಗಿ ದುಃಖಿಯಾಗಿದ್ದನು. ಹೀಗಿರುವಲ್ಲಿ ತನ್ನ ಮಧ್ಯಮಮಗನಾದ ಶುನಃಶೇಪನೆಂಬ ಬ್ರಹ್ಮಜ್ಞಾನಿಯನ್ನು ಒಬ್ಬ ಕ್ಷತ್ರಿಯನಿಗೆ ಯಜ್ಞಪಶುವಿಗಾಗಿ ಹೆಚ್ಚಾದ ಹಣವನ್ನು ತೆಗೆದುಕೊಂಡು ಮಾರಿಬಿಟ್ಟನು.

ಕಿಂ ನಾಮಾಪದ್ಗತಃ ಪಾಪಂ ನಾಚರತ್ಯಪಿ ಪಂಡಿತಃ ।
ಶಮಿತ್ವೈಷ್ವೇ ಧನಂ ಚಾಪಿ ಜಗೃಹೇ ಬಹುಲಂ ಮುನಿಃ ॥ ೪ ॥

ವಿದಾರಣಾರ್ಥಂ ಚ ಧನಂ ಜಗೃಹೇ ಬ್ರಾಹ್ಮಣಾಧಮಃ ।
ತತೋऽಪ್ರತಿಸಮಾಧೇಯಮಹಾರೋಗನಿಪೀಡಿತಃ ॥ ೫ ॥

ಸ ಮೃತಃ ಕಾಲಪರ್ಯಾಯೋ ನರಕೇಷ್ವಥ ಪಾತಿತಃ ।
ಭೋಗಾದೃತೇ ನ ಕ್ಷಯೋऽಸ್ತಿ ಪ್ರಾಕ್ತನಾನಾಮಿಹಾಂಹಸಾಂ ॥ ೬ ॥

ಕಿಂಕರೈರ್ಯಮವಾಕ್ಯೇನ ಬಹುಯೋನ್ಯಂತರಂ ಗತಃ ।
ತತಃ ಪಿಶಾಚೋ ಹ್ಯಭವದ್ದಾರುಣೋ ದಾರುಣಾಕೃತಿಃ ॥ ೭ ॥

ಶುಷ್ಕಕಾಷ್ಠೇಷ್ವಥಾರಣ್ಯೇ ನಿರ್ಜಲೇ ನಿರ್ಜನೇ ತಥಾ ।
ಗ್ರೀಷ್ಮೇ ಗ್ರೀಷ್ಮದವವ್ಯಾಪ್ತೇ ಕ್ಷಿಪ್ಯತೇ ಯಮಕಿಂಕರೈಃ ॥ ೮ ॥

---

೪. ದಾರಿದ್ರ್ಯದಿಂದ ಪೀಡಿತನಾಗಲು ಪಂಡಿತನಾದರೂ ಪಾಪವನ್ನು ಮಾಡುವನು. ಆ ದಾರಿದ್ರ್ಯವನ್ನು ಅಡಗಿಸಲು ಆ ಮುನಿಯು ಬಹಳ ಹಣವನ್ನೂ ಪಡೆದನು.

೫. ತನ್ನ ಪುತ್ರನನ್ನು ಕೊಲ್ಲುವುದಕ್ಕೋಸ್ಕರ ಕೊಟ್ಟ ಆ ಬ್ರಾಹ್ಮಣಾಧಮನಾದ ಅಜೀಗರ್ತಿಯು ಹಣವನ್ನು ತೆಗೆದುಕೊಂಡನು. ಅನಂತರ ಯಾವುದರಿಂದಲೂ ಹೋಗಲಾಡಿಸಲಸಾಧ್ಯವಾದ ಮಹಾರೋಗದಿಂದ ನರಳಿದನು.

೬. ಕೆಲವು ಕಾಲವಾದ ನಂತರ ಅವನು ಸತ್ತುಹೋದನು. ಅನಂತರ ಅವನಿಗೆ ನರಕವು ಪ್ರಾಪ್ತವಾಯಿತು. ನರಕದಲ್ಲಿ ಕಷ್ಟಗಳನ್ನನುಭವಿಸಿದ ಹೊರತು ಮಾಡಿದ ಪಾಪಗಳು ನಾಶವಾಗುವುದಿಲ್ಲ.

೭. ಯಮನ ಅಪ್ಪಣೆಯಂತೆ ಅವನ ಕಿಂಕರರು ಆ ಅಜೀಗರ್ತಿಗೆ ಅನೇಕ ಜನ್ಮಗಳನ್ನು ಕೊಟ್ಟರು. ಅನೇಕ ಜನ್ಮಗಳನ್ನೆತ್ತಿ ಅವನು ಕೊನೆಗೆ ಭಯಂಕರವಾದ ಪಿಶಾಚಿಯಾದನು.

೮. ಯಮಕಿಂಕರರು ಆ ಪಿಶಾಚವನ್ನು ಒಣಗಿದ ಮರಗಳುಳ್ಳ ಅರಣ್ಯದಲ್ಲಿಯೂ, ನೀರೂ ಜನರೂ ಇಲ್ಲದಿರುವ ಪ್ರದೇಶದಲ್ಲಿಯೂ, ಗ್ರೀಷ್ಮಕಾಲದಲ್ಲಿ ಬಿಸಲಿನ ಬೇಗೆಯಲ್ಲಿಯೂ ನೂಕುತ್ತಿದ್ದರು.

ಕನ್ಯಾಪುತ್ರಮಹೀವಾಜಿಗವಾಂ ವಿಕ್ರಯಕಾರಿಣಃ ।
ನರಕಾನ್ನ ನಿವರ್ತಂತೇ ಯಾವದಾಭೂತಸಂಪ್ಲವಂ ॥ ೯ ॥

ಸ್ವಕೃತಾಘವಿಪಾಕೇನ ದಾರುಣೈರ್ಯಮಕಿಂಕರೈಃ ।
ಸಂಘಾತೇ ಪಚ್ಯಮಾನೋಽಸೌ ರುರೋದೋಚ್ಚೈಃ ಕೃತಂ ಸ್ಮರನ್ ॥ ೧೦ ॥

ಪಥಿ ಗಚ್ಛನ್ಕದಾಚಿತ್ಸ ಜೀಗರ್ತೇರ್ಮಧ್ಯಮಃ ಸುತಃ ।
ಶುಶ್ರಾವ ರುದತೋ ವಾಣೀಂ ಪಿಶಾಚಸ್ಯ ಮುಹುರ್ಮುಹುಃ ॥ ೧೧ ॥

ಪುತ್ರಕ್ರೇತುರ್ಬ್ರಹ್ಮಹಂತುರ್ಜೀಗರ್ತೇಸ್ತು ಪಿತುಸ್ತದಾ ।
ಪಾಪಿನಃ ಪುತ್ರವಿಕ್ರೇತುರ್ಬ್ರಹ್ಮಹಂತುಃ ಪಿತುಶ್ಚ ತಾಂ ॥ ೧೨ ॥

ಶುನಃಶೇಪಸ್ತದೋವಾಚ ಕೋ ಭವಾನತಿದುಃಖಿತಃ ।
ಜೀಗರ್ತಿರಬ್ರವೀದ್ದುಃಖಾಚ್ಛುನಃಶೇಪಪಿತಾ ಹ್ಯಹಂ ॥ ೧೩ ॥

---

೯. ತನ್ನ ಮಗಳು, ಮಗ, ಭೂಮಿ, ಕುದುರೆ, ಹಸು ಮುಂತಾದುವುಗಳನ್ನು ಯಾರು ಮಾರುವರೋ ಅವರು ಪ್ರಳಯಕಾಲದವರೆಗೂ ನರಕದಿಂದ ಹಿಂತಿರುಗವುದಿಲ್ಲವು.

೧೦. ತನ್ನ ಪಾಪದ ಪರಿಣಾಮವಾಗಿ (ಫಲ) ಭಯಂಕರರಾದ ಯಮಕಿಂಕರರು ಆ ಪಿಶಾಚವನ್ನು ಹಿಂಸಿಸುತ್ತಿದ್ದರು. ಅದನ್ನು ತಡೆಯಲಾರದೆ ತಾನು ಹಿಂದೆ ಮಾಡಿದುದೆಲ್ಲವನ್ನೂ ಸ್ಮರಿಸಿಕೊಳ್ಳುತ್ತಾ ಆ ಪಿಶಾಚಿಯು ಗಟ್ಟಿಯಾಗಿ ಅಳುತ್ತಿದ್ದಿತು.

೧೧. ಪಿಶಾಚಜನ್ಮವನ್ನು ಹೊಂದಿದ ಆ ಜೀಗರ್ತಿಯ ಮಧ್ಯಮ ಮಗನಾದ ಶುನಃಶೇಪನು ದಾರಿಯಲ್ಲಿ ಹೋಗುತ್ತಾ ಆ ಪಿಶಾಚಿಯು ಬಾರಿಬಾರಿಗೂ ಅಳುತ್ತಿರುವುದನ್ನು ಕೇಳಿದನು.

೧೨. ಶುನಃಶೇಪನ ತಂದೆಯಾದ ಅಜೀಗರ್ತಿಯು ಪುತ್ರನನ್ನು ಮಾರಿ ಬ್ರಹ್ಮಹತ್ಯವನ್ನು ಮಾಡಿ ಪಾಪಿಯಾಗಿದ್ದನು.

೧೩. ಅನಂತರ ಶುನಃಶೇಪನು ತನ್ನ ತಂದೆಯನ್ನು ಕುರಿತು ದುಃಖಿಯಾದ ನೀನು ಯಾರು? ಎಂಬುದಾಗಿ ಕೇಳಲು ಆ ಪಿಶಾಚವು ನಾನು ಶುನಃಶೇಪನ ತಂದೆಯು,

ಪಾಪೀಯಸೀಂ ಕ್ರಿಯಾಂ ಕೃತ್ವಾ ಯೋನಿಂ ಪ್ರಾಪ್ತೋಽಸ್ಮಿ ದಾರುಣಾಂ ।
ನರಕೇಷ್ವಥ ಪಕ್ವಶ್ಚ ಪುನಃ ಪ್ರಾಪ್ತೋಂಽತರಾಲಕಂ ।
ಯೇ ಯೇ ದುಷ್ಕೃತಕರ್ಮಾಣಸ್ತೇಷಾಂ ತೇಷಾಮಿಯಂ ಗತಿಃ ॥ ೧೪ ॥

ಜೀಗರ್ತಿಪುತ್ರಸ್ತಮುವಾಚ ದುಃಖಾ-
ತ್ತೋಽಹಂ ಸುತಸ್ತೇ ಮಮ ದೋಷೇಣ ತಾತ ।
ವಿಕ್ರೀತ್ವಾ ಮಾಂ ನರಕಾನೇವಮಾಪ್ತ-
ಸ್ತತಃ ಕರಿಷ್ಯೇ ಸ್ವರ್ಗತಂ ತ್ವಾಮಿದಾನೀಂ ॥ ೧೫ ॥

ಏವಂ ಪ್ರತಿಜ್ಞಾಯ ಸ ಗಾಧಿಪುತ್ರ-
ಪುತ್ರತ್ವಮಾಪ್ತೋಽಥ ಮುನಿಪ್ರವೀರಃ ।
ಗಂಗಾಮಭಿಧ್ಯಾಯ ಪಿತುಶ್ಚ ಲೋಕಾ-
ನನುತ್ತಮಾನೀಹಮಾನೋ ಜಗಾಮ ॥ ೧೬ ॥

---

೧೪. ಪಾಪಾಚರಣೆಯನ್ನು ಮಾಡಿ ಈ ಜನ್ಮವನ್ನು ಹೊಂದಿರುವೆನು. ನರಕಯಾತನೆಯನ್ನು ಅನುಭವಿಸಿ ಪುನಃ ಈಗ ಈ ಭೂಮಿಗೆ ಬಂದಿರುವೆನು. ಯಾರುಯಾರು ದುಷ್ಕೃತಗಳನ್ನು ಮಾಡುವರೋ ಅವರೆಲ್ಲರಿಗೂ ಇದೇ ಗತಿಯು.

೧೫. ಅದನ್ನು ಕೇಳಿ ಶುನಃಶೇಪನು ದುಃಖದಿಂದ ಎಲೈ ತಂದೆಯೇ, ನಾನು ನಿನ್ನ ಮಗನು. ನನ್ನನ್ನು ಮಾರಿದುದರಿಂದ ನಿನಗೆ ನರಕವೂ ಈ ಜನ್ಮವೂ ಪ್ರಾಪ್ತವಾಗಿರುವುದು. ಇದು ನನ್ನ ದೋಷವು. ಆದುದರಿಂದ ನಾನು ನಿನಗೆ ಸ್ವರ್ಗವು ಪ್ರಾಪ್ತವಾಗುವಂತೆ ಮಾಡುವೆನು ಎಂದನು.

೧೬. ಶುನಃಶೇಪನು ಈರೀತಿಯಾಗಿ ಪ್ರತಿಜ್ಞೆಮಾಡಿ ಮಗನಾದುದಕ್ಕೆ ಸಾರ್ಥಕವನ್ನು ಪಡೆದನು. ಗಂಗಾನದಿಯನ್ನು ಧ್ಯಾನಿಸುತ್ತಾ ಅದರಿಂದ ತಂದೆಗೆ ಉತ್ತಮವಾದ ಲೋಕವನ್ನು ಹೊಂದಿಸಬೇಕೆಂದು ಅಲ್ಲಿಂದ ಹೊರಟನು.

ಅಶೇಷದುಃಖಾನಲಧೂಪಿತಾನಾಂ
ನಿಮಜ್ಜತಾಂ ಮೋಹಮಹಾಸಮುದ್ರೇ ।
ಶರೀರಿಣಾಂ ನಾನ್ಯದಹೋ ತ್ರಿಲೋಕ್ಯಾ-
ಮಾಲಂಬನಂ ವಿಷ್ಣುಪದೀಂ ವಿಹಾಯ ॥ ೧೭ ॥

ಏವಂ ವಿನಿಶ್ಚಿತ್ಯ ಮುನಿರ್ಮಹಾತ್ಮಾ
ಸಮುದ್ದಿಧೀರ್ಷುಃ ಪಿತರಂ ಸ ದುರ್ಗತೇಃ ।
ಶುಚಿಸ್ತತೋ ಗೌತಮೀಮಾಶು ಗತ್ವಾ
ತತ್ರ ಸ್ನಾತ್ವಾ ಸಂಸ್ಮರಞ್ಶಂಭುವಿಷ್ಣೂ ॥ ೧೮ ॥

ದದೌ ಜಲಂ ಪ್ರೇತರೂಪಾಯ ಪಿತ್ರೇ
ಪಿಶಾಚರೂಪಾಯ ಸುದುಃಖಿತಾಯ ।
ತದ್ದಾನಮಾತ್ರೇಣ ತದೈವ ಪೂತೋಽ-
ಜೀಗರ್ತಿರಾಪಾಪ ವಪುಃ ಸುಪುಣ್ಯಂ ॥ ೧೯ ॥

---

೧೭. ಅನೇಕ ದುಃಖಗಳನ್ನನುಭವಿಸುತ್ತಿರುವ ಮೋಹವೆಂಬ ಮಹಾ ಸಮುದ್ರದಲ್ಲಿ ಮುಳುಗುತ್ತಿರುವ ಜನರನ್ನು ಉದ್ಧಾರಮಾಡಲು ಗಂಗಾನದಿಯನ್ನು ಬಿಟ್ಟರೆ ಮೂರು ಲೋಕಗಳಲ್ಲಿಯೂ ಬೇರೊಂದು ಆಧಾರವಿಲ್ಲ.

೧೮. ಈ ರೀತಿಯಾಗಿ ಮಹಾತ್ಮನಾದ ಶುನಃಶೇಪನು ನಿಶ್ಚಯಿಸಿ ದುರ್ಗತಿಯನ್ನು ಪಡೆದಿರುವ ತಂದೆಯನ್ನು ಉದ್ಧಾರಮಾಡಲು ಶುಚಿಯಾಗಿ ಗೌತಮೀಕ್ಷೇತ್ರಕ್ಕೆ ಹೋದನು. ಅಲ್ಲಿ ಜಾಗ್ರತೆಯಾಗಿ ಗಂಗೆಯಲ್ಲಿ ಸ್ನಾನ ಮಾಡಿ ಈಶ್ವರನನ್ನೂ ವಿಷ್ಣುವನ್ನೂ ಧ್ಯಾನಮಾಡಿದನು.

೧೯. ಅನಂತರ ಆ ಶುನಃಶೇಪನು ಪ್ರೇತರೂಪವನ್ನು ಹೊಂದಿ ಪಿಶಾಚಿಯಾಗಿ, ಅದರಿಂದ ದುಃಖಿತನಾದ ತನ್ನ ತಂದೆಗೆ ಆ ಗಂಗೆಯ ನೀರನ್ನು ಕೊಟ್ಟನು. ನೀರನ್ನು ಕೊಟ್ಟಕ್ಷಣವೇ ಆ ಅಜೀಗರ್ತಿಗೆ ಒಳ್ಳೆಯ ಶರೀರ ಬಂದಿತು. ಅದರಿಂದ ಅವನು ಪವಿತ್ರನಾದನು.

ವಿಮಾನಯುಕ್ತಃ ಸುರಸಂಘಜುಷ್ಟಂ
ವಿಷ್ಣೋಃ ಪದಂ ಪ್ರಾಪ ಸುತಪ್ರಭಾವಾತ್ ।
ಗಂಗಾಪ್ರಭಾವಾಚ್ಚ ಹರೇಶ್ಚ ಶಂಭೋ-
ರ್ವಿಧಾತುರರ್ಕಾಯುತತುಲ್ಯತೇಜಾಃ ॥ ೨೦ ॥

ತತಃ ಪ್ರಭೃತ್ಯೇತದತಿಪ್ರಸಿದ್ಧಂ
ಪೈಶಾಚನಾಶಂ ಚ ಮಹಾಗದಂ ಚ ।
ಮಹಾಂತಿ ಪಾಪಾನಿ ಚ ನಾಶಮಾಶು
ಪ್ರಯಾಂತಿ ಯಸ್ಯ ಸ್ಮರಣೇನ ಪುಂಸಾಂ ॥ ೨೧ ॥

ತೀರ್ಥಸ್ಯ ಚೇದಂ ಗದಿತಂ ತದಾದ್ಯ
ಮಾಹಾತ್ಮ್ಯಮೇತತ್ತ್ರಿಶತಾನಿ ಯತ್ರ ।
ತೀರ್ಥಾನ್ಯಥಾನ್ಯಾನಿ ಭವಂತಿ ಭುಕ್ತಿ-
ಮುಕ್ತಿಪ್ರದಾಯೀನಿ ಕಿಮನ್ಯದತ್ರ ॥ ೨೨ ॥

---

೨೦. ದೇವತೆಗಳು ತಂದಿರುವ ವಿಮಾನದಲ್ಲಿ ಅವರೊಡನೆ ಕುಳಿತು ವಿಷ್ಣುವಿನ ಸ್ಥಾನವನ್ನು ಪಡೆದನು. ತನ್ನ ಮಗನ ಪ್ರಭಾವದಿಂದಲೂ ಗಂಗಾನದಿಯ ಪ್ರಭಾವದಿಂದಲೂ ವಿಷ್ಣು, ಈಶ್ವರ, ಬ್ರಹ್ಮ ಮುಂತಾದ ದೇವತೆಗಳ ಅನುಗ್ರಹದಿಂದಲೂ ಸೂರ್ಯನಂತೆ ತೇಜಸ್ವಿಯಾದ ಅಜೀಗರ್ತಿಗೆ ಸ್ವರ್ಗವು ಪ್ರಾಪ್ತವಾಯಿತು.

೨೧. ಅಂದಿನಿಂದ ಈ ಪೈಶಾಚತೀರ್ಥವು ಅತಿಪ್ರಸಿದ್ಧವಾಗಿದೆ. ಇದರಲ್ಲಿ ಸ್ನಾನಮಾಡಿದರೆ ಪಿಶಾಚತ್ವವು ನಾಶವಾಗುವುದು. ರೋಗಗಳು ನಾಶವಾಗುವುವು. ಇದರ ಸ್ಮರಣೆ ಮಾತ್ರದಿಂದಲೇ ಮಹಾಪಾಪಗಳೆಲ್ಲವೂ ನಾಶವಾಗುವುವು.

೨೨. ಎಲೈ ಮುನಿಯೇ, ಈಗ ನಾನು ನಿನಗೆ ಪೈಶಾಚತೀರ್ಥವನ್ನು ಹೇಳಿದೆನು. ಅಲ್ಲಿ ನೂರು ವಿಧವಾದ ಮಾಹಾತ್ಮ್ಯ ಇದೆ. ಬೇರೆ ತೀರ್ಥಗಳಂತೆ ಈ ತೀರ್ಥದಿಂದಲೂ ಭುಕ್ತಿಯೂ ಮುಕ್ತಿಯೂ ದೊರಕುವುದು.

ಸರ್ವಸಿದ್ಧಿದಮಾಖ್ಯಾತಮಿತ್ಯಾದ್ಯತ್ರ ಶತತ್ರಯಂ ।
ತೀರ್ಥಾನಾಂ ಮುನಿಜುಷ್ಟಾನಾಂ ಸ್ಮರಣಾದಪ್ಯಭೀಷ್ಟದಂ ॥ ೨೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಪೈಶಾಚಾದಿಶತತ್ರಯತೀರ್ಥವರ್ಣನಂ ನಾಮ ಪಂಚಾಶದಧಿಕಶತತಮೋಽಧ್ಯಾಯಃ

---

೨೩. ಸರ್ವಾಭೀಷ್ಟಗಳನ್ನೂ ನೆರವೇರಿಸುವ ಮುನ್ನೂರು ತೀರ್ಥಗಳನ್ನು ಹೇಳಿರುವೆನು. ಇವುಗಳನ್ನೆಲ್ಲಾ ಋಷಿಗಳು ಸೇವಿಸುವರು. ಇವುಗಳ ಸ್ಮರಣೆಯಿಂದ ಅಭೀಷ್ಟವು ನೆರವೇರುವುದು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಪೈಶಾಚಾದಿಶತತ್ರಯತೀರ್ಥವರ್ಣನವೆಂಬ ನೂರ ಐವತ್ತನೆಯ ಅಧ್ಯಾಯವು ಮುಗಿದುದು-

ಗೌತಮೀಮಾಹಾತ್ಮ್ಯಯಲ್ಲಿ ಎಂಭತ್ತೊಂದನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಏಕಪಂಚಾಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ನಿಮ್ನಭೇದಮಿತಿ ಖ್ಯಾತಂ ಸರ್ವಪಾಪಪ್ರಣಾಶನಂ ।
ಗಂಗಾಯಾ ಉತ್ತರೇ ಪಾರೇ ತೀರ್ಥಂ ತ್ರೈಲೋಕ್ಯವಿಶ್ರುತಂ ॥ ೧ ॥

ಯಸ್ಯ ಸಂಸ್ಮರಣೇನಾಪಿ ಸರ್ವಪಾಪಕ್ಷಯೋ ಭವೇತ್ ।
ವೇದದ್ವೀಪಶ್ಚ ತತ್ರೈವ ದರ್ಶನಾದ್ವೇದವಿದ್ಭವೇತ್ ॥ ೨ ॥

ಉರ್ವಶೀಂ ಚಕಮೇ ರಾಜಾ ಐಲಃ ಪರಮಧಾರ್ಮಿಕಃ ।
ಕೋ ನ ಮೋಹಮುಪಾಯಾತಿ ವಿಲೋಕ್ಯ ಮದಿರೇಕ್ಷಣಾಂ ॥ ೩ ॥

ನೂರೈವತ್ತೊಂದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಗಂಗಾನದಿಯ ಉತ್ತರದಡದಲ್ಲಿ ನಿಮ್ನಭೇದವೆಂಬ ತೀರ್ಥವಿರುವುದು. ಅದು ಎಲ್ಲ ಪಾಪಗಳನ್ನೂ ನಾಶಮಾಡುವುದು. ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಗಿರುವುದು.

೨. ಈ ನಿಮ್ನಭೇದತೀರ್ಥವನ್ನು ಸ್ಮರಣೆಮಾಡಿದ ಮಾತ್ರದಿಂದಲೇ ಎಲ್ಲ ಪಾಪಗಳೂ ನಾಶವಾಗುವುವು. ಅಲ್ಲಿ ವೇದದ್ವೀಪವೆಂಬುದು ಇರುವುದು. ಅದರ ದರ್ಶನದಿಂದ ವೇದವನ್ನು ತಿಳಿದವನಾಗುವನು.

೩. ಹಿಂದೆ ಪರಮ ಧಾರ್ಮಿಕನಾದ (ಪುರೂರವನೆಂಬ) ಐಲನೆಂಬ ರಾಜನು ಊರ್ವಶಿಯನ್ನು ಮೋಹಿಸಿದನು. ಅಂತಹ ಮದಿರೇಕ್ಷಣೆಯನ್ನು ನೋಡಿದರೆ ಯಾರಿಗೆ ತಾನೇ ಮೋಹವುಂಟಾಗುವುದಿಲ್ಲ?

ಸಾ ಸ್ನಾಯಾಸ್ಯತ್ರ ರಾಜಾಸೌ ಘೃತಂ ಸ್ತೋಕಂ ಸಮಶ್ನುತೇ ।
ಆನಗ್ನದರ್ಶನಾತ್ಕೃತ್ವಾ ತಸ್ಯಾಃ ಕಾಲಾವಧಿಂ ನೃಪಃ ॥ ೪ ॥

ತಾಂ ಸ್ವೀಚಕಾರ ಲಲನಾಂ ಯೂನಾಂ ರಮ್ಯಾಂ ನವಾಂ ನವಾಂ ।
ಸುಪ್ತಾಯಾಂ ಶಯನೇ ತಸ್ಯಾಂ ಸಮುತ್ತಸ್ಥೌ ಪುರೂರವಾಃ ॥ ೫ ॥

ವಿಲೋಕ್ಯ ತಂ ವಿವಸನಂ ತದೈವಾಸೌ ವಿನಿರ್ಗತಾ ।
ವಿದ್ಯುಚ್ಚಂಚಲಚಿತ್ತಾನಾಂ ಕ್ವ ಸ್ಥೈರ್ಯಂ ನನು ಯೋಷಿತಾಂ ॥ ೬ ॥

೪, ಯಾವಾಗ ರಾಜನು ಸ್ವಲ್ಪವಾದರೂ ತುಪ್ಪವನ್ನು ಉಪಯೋಗಿಸುವನೋ, ಮತ್ತು ಎಂದು ಊರ್ವಶಿಯು ರಾಜನನ್ನು ಬರಿಯಮೈಲಿರುವಾಗ ನೋಡುವಳೋ ಅಂದೇ ಅವಳು ಹೊರಟುಹೋಗುವಳು. ಈರೀತಿಯಾಗಿ ಇಬ್ಬರೂ ನಿಯಮಮಾಡಿಕೊಂಡರು.

೫. ಅನಂತರ ಪುರೂರವನು ಯುವತಿಯೂ ಸುಂದರಿಯೂ ಆದ ಊರ್ವಶಿಯನ್ನು ಮದುವೆಮಾಡಿಕೊಂಡನು. ಹೀಗೆ ಇರುತ್ತಿರಲು ಒಂದುದಿನ ಊರ್ವಶಿಯು ಹಾಸಿಗೆಯಲ್ಲಿ ಮಲಗಿರುವ ಸಮಯದಲ್ಲಿ ರಾಜನು ಜಾಗ್ರತೆಯಾಗಿ ಎದ್ದನು.

೬. ಪುರೂರವನು !ಎರಡು ಟಗರುಗಳನ್ನು ಅತಿಪ್ರೀತಿಯಿಂದ ಸಾಕಿದ್ದನು. ಅವುಗಳನ್ನು ಬಾಗಿಲಿನ ಇಕ್ಕೆಲಗಳಲ್ಲೇ ಕಟ್ಟುತ್ತಿದ್ದರು. ಒಂದದಿನ ರಾತ್ರೆ ಊರ್ವಶಿಯೊಡನೆ ರಾಜನು ಮಲಗಿರಲು ಆ ಟಗರುಗಳನ್ನು ಚೋರರು ಅಪಹರಿಸುತ್ತಿರುವರೆಂಬ ಕೂಗನ್ನು ಕೇಳಿ ರಾಜನು ಜಾಗ್ರತೆಯಾಗಿ ಎದ್ದು ಅವುಗಳನ್ನು ಬಿಡಿಸಿಕೊಳ್ಳಲು ಹೊರಟನು. ಆ ಸಂಭ್ರಮದಲ್ಲಿ ಅವನು ಉಟ್ಟಿದ್ದ ವಸ್ತ್ರವು ಕಳಚಿಕೊಂಡಿತು. ಆ ಸಮಯದಲ್ಲಿ ಮೋಡವಾಗಿದ್ದುದರಿಂದ ಮಿಂಚಿತು. ಮಿಂಚಿನ ಬೆಳಕಿನಲ್ಲಿ ಊರ್ವಶಿಯು ರಾಜನು ದಿಗಂಬರನಾಗಿರವುದನ್ನು ನೋಡಿದಳು. ಅವಳ ಅವಧಿಯು ಅಂದಿಗೆ ಮುಗಿಯಿತು. ಬಟ್ಟೆಯಿಲ್ಲದೆ ದಿಗಂಬರನಾದ ರಾಜನನ್ನು ನೋಡಿ ಊರ್ವಶಿಯು ಹೊರಟುಹೋದಳು. ಮಿಂಚಿನಂತೆ ಚಪಲಚಿತ್ತರಾದ ಸ್ತ್ರೀಯರು ಎಲ್ಲಿತಾನೇ ಸ್ಥಿರವಾಗಿ ನಿಲ್ಲುವರು.

ಈಕ್ಷಾಂಚಕ್ರೇ ಸ ಶರ್ವರ್ಯಾಂ ವಿವಸ್ತ್ರಾಂ ವಿಸ್ಮಿತೋ ಮಹಾನ್ ।
ಏತಸ್ಮಿನ್ನಂತರೇ ರಾಜಾ ಯುದ್ಧಾಯಾಗಾದ್ರಿಪೂನ್ಸ್ಪೃತಿ ॥ ೭ ॥

ತಾಞ್ಜಿತ್ವಾ ಪುನರಪ್ಯಾಗಾದ್ದೇವಲೋಕಂ ಸುಪೂಜಿತಂ ।
ಸ ಚಾಗತ್ಯ ಮಹಾರಾಜೋ ವಸಿಷ್ಠಾಚ್ಚ ಪುರೋಧಸಃ ॥ ೮ ॥

ಉರ್ವಶ್ಯಾ ಗಮನಂ ಶ್ರುತ್ವಾ ತತೋ ದುಃಖಸಮನ್ವಿತಃ ।
ನ ಜುಹೋತಿ ನ ಚಾಶ್ನಾತಿ ನ ಶೃಣೋತಿ ನ ಪಶ್ಯತಿ ॥ ೯ ॥

ಏತಸ್ಮಿನ್ನಂತರೇ ತತ್ರ ಮೃತಾವಸ್ಥಂ ನೃಪೋತ್ತಮಂ ।
ಬೋಧಯಾಮಾಸ ವಾಕ್ಯೈಶ್ಚ ಹೇತುಭೂತೈಃ ಪುರೋಹಿತಃ ॥ ೧೦ ॥

॥ ವಸಿಷ್ಠ ಉವಾಚ ॥

ಸಾ ಮೃತಾದ್ಯ ಮಹಾರಾಜ ಮಾ ವ್ಯಥಸ್ವ ಮಹಾಮತೇ ।
ಏವಂ ಸ್ಥಿತಂ ತು ಮಾ ತ್ವಾಂ ವೈ ಅಶಿವಾಃ ಸ್ಪೃಶ್ಯುರಾಶುಗಾಃ ॥ ೧೧ ॥

---

೭. ತಾನು ಆ ರಾತ್ರಿಯಲ್ಲಿ ನಗ್ನನಾಗಿದ್ದುದನ್ನು ನೋಡಿ ರಾಜನು ಅತ್ಯಂತ ಆಶ್ಚರ್ಯಗೊಂಡನು. ಅನಂತರ ಟಗರುಗಳನ್ನು ಎಳೆದುಕೊಂಡು ಹೋಗುತ್ತಿರುವ ಶತ್ರುಗಳನ್ನಟ್ಟಿಕೊಂಡು ಹೊರಟನು.

೮. ಆ ಶತ್ರುಗಳನ್ನು ಗೆದ್ದು ದೇವಲೋಕಕ್ಕೆ ಹೋದನು. ಅನಂತರ ಪುರೋಹಿತರಾದ ವಸಿಷ್ಠರೊಡನೆ ರಾಜಧಾನಿಗೆ ಬಂದನು.

೯. ಅನಂತರ ಊರ್ವಶಿಯು ಹೊರಟುಹೋದಳೆಂಬ ವಿಷಯವನ್ನು ಕೇಳಿ ಬಹಳ ದುಃಖಿಯಾದನು. ಆ ದುಃಖದಿಂದ ಹೋಮವಾಡುತ್ತಿರಲಿಲ್ಲ. ಊಟವನ್ನೇ ಬಿಟ್ಟುಬಿಟ್ಟನು. ಯಾವ ವಿಷಯವನ್ನೂ ಕೇಳುತ್ತಿರಲಿಲ್ಲ. ಏನನ್ನೂ ನೋಡುತ್ತಿರಲಿಲ್ಲ. ಮನಸ್ಸಿಗೆ ಯಾವುದೂ ಬೇಕಾಗಿರಲಿಲ್ಲ.

೧೦. ಊರ್ವಶಿಯ ವಿಯೋಗದಿಂದ ಮೃತಾವಸ್ಥೆಯನ್ನು ಹೊಂದಿರುವ ಪುರೂರವನನ್ನು ವಸಿಷ್ಠನು ಸಮಾಧಾನವಾಕ್ಯಗಳಿಂದ ಇಂತು ಬೋಧಿಸಿದನು.

೧೧. ಎಲೈ ಮಹಾರಾಜನೇ, ಊರ್ವಶಿಯು ಸತ್ತುಹೋದಳು. ಆದುದರಿಂದ ನೀನು ವ್ಯಥೆಪಡಬೇಡ. ನೀನು ಈರೀತಿ ವ್ಯಥೆಪಡುತ್ತಲಿದ್ದರೆ ಜಾಗ್ರತೆಯಾಗಿ ನಿನಗೆ ಅಮಂಗಳವುಂಟಾಗುವುದು.

ನ ವೈ ಸ್ತ್ರೈಣಾನಿ ಜಾನೀಷೇ ಹೃದಯಾನಿ ಮಹಾಮತೇ ।
ಶಾಲಾವೃಕಾಣಾಂ ಯಾದ್ವ್ಯಂಶಿ ತಸ್ಮಾತ್ತ್ವಂ ಭೂಪ ಮಾ ಶುಚಃ ॥ ೧೨ ॥

ಕೋ ನಾಮ ಲೋಕೇ ರಾಜೇಂದ್ರ ಕಾಮಿನೀಭಿರ್ನ ವಂಚಿತಃ ।
ವಂಚಕತ್ವಂ ನೃಶಂಸತ್ವಂ ಚಂಚಲತ್ವಂ ಕುಶೀಲತಾ ॥ ೧೩ ॥

ಇತಿ ಸ್ವಾಭಾವಿಕಂ ಯಾಸಾಂ ತಾಃ ಕಥಂ ಸುಖಹೇತವಃ ।
ಕಾಲೇನ ಕೋ ನ ನಿಹತಃ ಕೋಽರ್ಥೀ ಗೌರವಮಾಗತಃ ॥ ೧೪ ॥

ಶ್ರಿಯಾ ನ ಭ್ರಾಮಿತಃ ಕೋ ವಾ ಯೋಷಿದ್ಭಿಃ ಕೋ ನ ಖಂಡಿತಃ ।
ಸ್ವಪ್ನಮಾಯೋಪಮಾ ರಾಜನ್ಮದವಿಪ್ಲುತಚೇತಸಃ ॥ ೧೫ ॥

---

೧೨. ಎಲೈ ಮಹಾಬುದ್ಧಿಶಾಲಿಯೇ, ಸ್ತ್ರೀಯರುಗಳ ಹೃದಯವನ್ನು ನೀನು ತಿಳಿದಿಲ್ಲ. ಅವರ ಹೃದಯವು ಕಪಿಗಳಂತೆ ಬಲು ಚಂಚಲವಾದುದು. ಆದುದರಿಂದ ನೀನು ದುಃಖಿಸಬೇಡ.

೧೩. ಎಲೈ ರಾಜೇಂದ್ರನೇ, ಲೋಕದಲ್ಲಿ ಸ್ತ್ರೀಯರುಗಳು ಯಾರನ್ನು ತಾನೇ ವಂಚಿಸುವುದಿಲ್ಲ? ವಂಚಕತನವೂ, ಕ್ರೌರ್ಯವೂ, ಚಪಲತೆಯೂ ಕೆಟ್ಟ ಗುಣವೂ ಸ್ತ್ರೀಯರುಗಳ ಸ್ವಭಾವಸಿದ್ಧವಾದ ಗುಣಗಳು. ಹೀಗಿರಲು ಅವರಿಂದ ಸುಖವು ಹೇಗೆತಾನೆ ಲಭಿಸೀತು ?

೧೪. ಮೃತ್ಯುವಿನಿಂದ ಕೊಲ್ಲಲ್ಪಡದಿರುವವನು ಯಾವನು ತಾನೇ ಇರುವನು ? ಯಾವ ಯಾಚಕನು ತಾನೇ ಗೌರವವನ್ನು ಹೊಂದಿರುವನು ? ಧನ ಕ್ಕೋಸ್ಕರವಾಗಿ ಯಾರುತಾನೇ ಸುತ್ತಿಲ್ಲವು ? ಅಂತೆಯೇ ಸ್ತ್ರೀಯರುಗಳಿಂದ ಯಾರುತಾನೇ ಖಂಡಿಸಲ್ಪಟ್ಟಿಲ್ಲ ?

೧೫. ಎಲೈ ರಾಜನೇ, ಸ್ತ್ರೀಯರುಗಳು ಸ್ವಪ್ನಕ್ಕೂ ಮಾಯೆಗೂ ಸಮ ನಾದವರು. ಮದಾವಿಷ್ಟಚಿತ್ತರಾದ ಅಂತಹ ಸ್ತ್ರೀಯರಿಂದ ಯಾರಿಗೆ ತಾನೇ ಸುಖವುಂಟಾಗುವುದು? ಈರೀತಿಯಾಗಿ ತಿಳಿದು ನೀನು ನಿಶ್ಚಿಂತೆಯಿಂದಿರು.

ಸುಖಾಯ ಯೋಽಕ್ಷಿತಃ ಕಸ್ಯ ಜ್ಞಾತ್ವೈತದ್ವಿಜ್ವರೋ ಭವ ।
ವಿಹಾಯ ಶಂಕರಂ ವಿಷ್ಣುಂ ಗೌತಮೀಂ ವಾ ಮಹಾಮತೇ
ದುಃಖಿನಾಂ ಶರಣಂ ನಾನ್ಯದ್ವಿದ್ಯತೇ ಭುವನತ್ರಯೇ ॥ ೧೬ ॥

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ತತೋ ರಾಜಾ ದುಃಖಂ ಸಂಹೃತ್ಯ ಯತ್ನತಃ ।
ಗೌತಮ್ಯಾ ಮಧ್ಯಸಂಸ್ಥೋಽಸಾವೈಲಃ ಪರಮಧಾರ್ಮಿಕಃ ॥ ೧೭ ॥

ತತ್ರ ಚಾರಾಧಯಾಮಾಸ ಶಿವಂ ದೇವಂ ಜನಾರ್ದನಂ ।
ಬ್ರಹ್ಮಾಣಂ ಭಾಸ್ಕರಂ ಗಂಗಾಂ ದೇವಾನನ್ಯಾಂಶ್ಚ ಯತ್ನತಃ ॥ ೧೮ ॥

ಯೋ ವಿಪನ್ನೋ ನ ತೀರ್ಥಾನಿ ದೇವತಾಶ್ಚ ನ ಸೇವತೇ ।
ಸ ಕಾಲವಶಗೋ ಜಂತುಃ ಕಾಂ ದಶಾಮನುಯಾಸ್ಯತಿ ॥ ೧೯ ॥

ತದೀಶ್ವರೈಕಶರಣೋ ಗೌತಮೀಸೇವನೋತ್ಸುಕಃ ।
ಪರಾಂ ಶ್ರದ್ಧಾಮುಪಗತಃ ಸಂಸಾರಾಸ್ಥಾಪರಾಙ್ಮುಖಃ ॥ ೨೦ ॥

---

೧೬. ಶಂಕರನನ್ನೂ, ವಿಷ್ಣುವನ್ನೂ, ಗೌತಮೀತೀರ್ಥವನ್ನೂ ಬಿಟ್ಟರೆ ಮೂರು ಲೋಕದಲ್ಲಿಯೂ ದುಃಖಗಳನ್ನು ನಾಶಮಾಡುವುದು ಮತ್ತೊಂದಿಲ್ಲವು ಎಂದನು.

೧೭–೧೮. ಅನಂತರ ಪುರೂರವನು ದುಃಖವನ್ನು ಬಹಳ ಕಷ್ಟದಿಂದ ತಡೆದು ಗೌತಮೀತೀರ್ಥಕ್ಕೆ ಹೋದನು. ಅಲ್ಲಿ ಪರಮಧಾರ್ಮಿಕನಾದ ಆ ರಾಜನು ಶಿವನನ್ನೂ, ವಿಷ್ಣುವನ್ನೂ, ಬ್ರಹ್ಮ, ಸೂರ್ಯ, ಗಂಗಾ ಮುಂತಾದವರನ್ನೂ ಇನ್ನೂ ಇತರ ದೇವತೆಗಳನ್ನೂ ಪೂಜೆಮಾಡಿದನು.

೧೯. ಯಾವನು ಕಷ್ಟಕ್ಕೆ ಸಿಕ್ಕಿರುವನೋ ಅವನು ತೀರ್ಥಗಳನ್ನೂ ದೇವತೆಗಳನ್ನೂ ಸೇವಿಸದಿದ್ದಲ್ಲಿ ಅವನಿಗೆ ಕಷ್ಟವಾದ ಅವಸ್ಥೆಯು ಪ್ರಾಪ್ತವಾಗುವುದು.

೨೦–೨೧. ಪುರೂರವನು ಈಶ್ವರನೊಬ್ಬನೇ ರಕ್ಷಕನೆಂದು ತಿಳಿದು ಗೌತಮೀಕ್ಷೇತ್ರದಲ್ಲಿ ಸೇವೆಮಾಡುತ್ತಾ ಸಂಸಾರದಿಂದ ಮುಕ್ತನಾಗಬೇಕೆಂಬ

ಈಜೇ ಯಜ್ಞಾಂಶ್ಚ ಬಹುಲಾನ್ಋತ್ವಿಗ್ಭಿರ್ಬಹುದಕ್ಷಿಣಾನ್ ।
ವೇದದ್ವೀಪೋಽಭವತ್ತೇನ ಯಜ್ಞದ್ವೀಪಃ ಸ ಉಚ್ಯತೇ ॥ ೨೧ ॥

ಪೌರ್ಣಮಾಸ್ಯಾಂ ತು ಶರ್ವರ್ಯಾಂ ತತ್ರಾಯಾತಿ ಸದೋರ್ವಶೀ ।
ತಸ್ಯ ದ್ವೀಪಸ್ಯ ಯಃ ಕುರ್ಯಾತ್ಪ್ರದಕ್ಷಿಣಮುಖೋ ನರಃ ॥ ೨೨ ॥

ಪ್ರದಕ್ಷಿಣೀಕೃತಾ ತೇನ ಪೃಥಿವೀ ಸಾಗರಾಂಬರಾ ।
ವೇದಾನಾಂ ಸ್ಮರಣಂ ತತ್ರ ಯಜ್ಞಾನಾಂ ಸ್ಮರಣಂ ತಥಾ ॥ ೨೩ ॥

ಸುಕೃತೀ ತತ್ರ ಯಃ ಕುರ್ಯಾದ್ವೇದಯಜ್ಞಫಲಂ ಲಭೇತ್ ।
ಐಲತೀರ್ಥಂ ತು ತಜ್ಜ್ಞೇಯಂ ತದೇವ ಚ ಪುರೂರವಂ ॥ ೨೪ ॥

ವಾಸಿಷ್ಠಂ ಚಾಪಿ ತತ್ತು ಸ್ಯಾನ್ನಿಮ್ನಭೇದಂ ತದುಚ್ಯತೇ ।
ಐಲೇ ರಾಜ್ಞಿ ನ ಕಿಂಚಿತ್ಸ್ಯಾನ್ನಿಮ್ನಂ ಸರ್ವೇಷು ಕರ್ಮಸು ॥ ೨೫ ॥

ಯದೇತನ್ನಿಮ್ನಮುರ್ವಶ್ಯಾಂ ಸರ್ವಭಾವೇನ ವರ್ತನಂ ।
ತಚ್ಚಾಪಿ ಭೇದಿತಂ ನಿಮ್ನಂ ವಸಿಷ್ಠೇನ ಚ ಗಂಗಯಾ ॥ ೨೬ ॥

ಇಚ್ಛೆಯಿಂದ ವೇದದ್ವೀಪದಲ್ಲಿ ಅನೇಕ ಯಜ್ಞಗಳನ್ನು ಮಾಡಿದನು. ಋತ್ವಿಕ್ಕುಗಳಿಗೆ ಬಹು ದಕ್ಷಿಣೆಗಳನ್ನು ಕೊಟ್ಟನು. ಯಜ್ಞವನ್ನು ವೇದದ್ವೀಪದಲ್ಲಿ ಮಾಡಿದುದರಿಂದ ಅದಕ್ಕೆ ಯಜ್ಞದ್ವೀಪವೆಂತಲೂ ಹೆಸರಾಯಿತು.

೨೨. ಪ್ರತಿ ಹುಣ್ಣಿಮೆಯ ರಾತ್ರಿಯವೇಳೆಯಲ್ಲಿಯೂ ಊರ್ವಶಿಯು ಯಜ್ಞದ್ವೀಪಕ್ಕೆ ಬರುವಳು.

೨೩. ಯಾವನು ಆ ದ್ವೀಪನ್ನು ಪ್ರದಕ್ಷಿಣೆಮಾಡುವನೋ ಅವನು ಚತುಸ್ಸಮುದ್ರಪರಿವೃತವಾದ ಭೂಮಿಯನ್ನೇ ಪ್ರದಕ್ಷಿಣೆಮಾಡಿದಂತಾಗುವುದು. ಅಲ್ಲಿ ವೇದಗಳ ಮತ್ತು ಯಜ್ಞಗಳ ಸ್ಮರಣೆಯನ್ನು ಯಾರು ಮಾಡುವರೋ ಪುಣ್ಯಶಾಲಿಯಾದ ಅವನಿಗೆ ವೇದಗಳ ಮತ್ತು ಯಜ್ಞಗಳ ಫಲವು ಬರುವುದು.

೨೪. ಈ ತೀರ್ಥಕ್ಕೆ ಐಲತೀರ್ಥವೆಂತಲೂ ಹೆಸರು. ಇದೇ ಪುರೂರವ ತೀರ್ಥವು. ವಾಸಿಷ್ಠತೀರ್ಥವೆಂದೂ ಇದಕ್ಕೆ ಹೆಸರು. ಅಲ್ಲದೆ ಇದು ನಿಮ್ನ ಭೇದವೆಂದು ಕರೆಯಲ್ಪಡುವುದು.

೨೫–೨೬. ಪುರೂರವನು ಯಾವ ಕೆಲಸದಲ್ಲಿಯೂ ನಿಮ್ನ (ನ್ಯೂನತೆ) ವನ್ನು ಮಾಡುತ್ತಿರಲಿಲ್ಲ. ಊರ್ವಶಿಯು ರಾಜನ ವಿಷಯದಲ್ಲಿ ನಿಮ್ನ

ನಿಮ್ನಭೇದಮಭೂತ್ತೇನ ದೃಷ್ಟಾದೃಷ್ಟೇಷ್ಟಸಿದ್ಧಿದಂ ।
ತತ್ರ ಸಪ್ತ ಶತಾನ್ಯಾಹುಸ್ತೀರ್ಥಾನಿ ಗುಣವಂತಿ ಚ ॥ ೨೭ ॥

ತೇಷು ಸ್ನಾನಂ ಚ ದಾನಂ ಚ ಸರ್ವಕ್ರತುಫಲಪ್ರದಂ ।
ಸ್ನಾನಂ ಕೃತ್ವಾ ನಿಮ್ನಭೇದೇ ಯಃ ಪಶ್ಯತಿ ಸುರಾನಿಮಾನ್ ॥ ೨೮ ॥

ಇಹ ಚಾಮುತ್ರ ವಾ ನಿಮ್ನಂ ನ ಕಿಂಚಿತ್ತಸ್ಯ ವಿದ್ಯತೇ ।
ಸರ್ವೋನ್ನತಿಮವಾಪ್ಯಾಸೌ ಮೋದತೇ ದಿವಿ ಶಕ್ರವತ್ ॥ ೨೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ನಿಮ್ನಭೇದಾದಿಸಪ್ತಶತತೀರ್ಥವರ್ಣನಂ ನಾಮೈಕ-
ಪಂಚಾಶದಧಿಕಶತತಮೋಽಧ್ಯಾಯಃ

(ನ್ಯೂನತೆ) ವನ್ನು ತೋರಿದಳು ಅದನ್ನು ನಾಶಮಾಡಿದುದರಿಂದ ಆ ತೀರ್ಥಕ್ಕೆ ನಿಮ್ನಭೇದವೆಂದು ಹೆಸರಾಯಿತು. ಇದನ್ನು ನೋಡಿದ ಮಾತ್ರದಿಂದಲೇ ಇಷ್ಟಾರ್ಥವು ಸಿದ್ಧಿಸುವುದು. ಇಲ್ಲಿ ಉತ್ಕೃಷ್ಟಗುಣವುಳ್ಳ ಏಳುನೂರು ತೀರ್ಥಗಳಿರುವುವೆಂದು ಹೇಳುವರು.

೨೮-೨೯. ಈ ತೀರ್ಥಗಳಲ್ಲಿ ಸ್ನಾನವನ್ನಾಗಲೀ ದಾನವನ್ನಾಗಲೀ ಮಾಡಿದರೆ ಸರ್ವ ಯಜ್ಞಗಳನ್ನು ಮಾಡಿದ ಫಲವು ಬರುವುದು. ನಿಮ್ನಭೇದದಲ್ಲಿ ಸ್ನಾನಮಾಡಿ ಯಾರು ದೇವತೆಗಳನ್ನು (ಈಶ್ವರ, ವಿಷ್ಣು, ಬ್ರಹ್ಮ ಮುಂತಾದವರನ್ನು) ದರ್ಶನಮಾಡುವರೋ ಅವರಿಗೆ ಈ ಲೋಕದಲ್ಲಿಯಾಗಲೀ, ಪರಲೋಕದಲ್ಲಿಯಾಗಲೀ ಯಾವುದಕ್ಕೂ ಕಡಿಮೆ ಇರುವುದಿಲ್ಲ. ಅವನು ಎಲ್ಲರಿಗಿಂತಲೂ ಉತ್ಕೃಷ್ಟಸ್ಥಾನವನ್ನು ಪಡೆದು ಸ್ವರ್ಗದಲ್ಲಿ ಇಂದ್ರನಂತೆ ಆನಂದಪಡುವನು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ನಿಮ್ನಭೇದಾದಿ ಸಪ್ತಶತತೀರ್ಥವರ್ಣನವೆಂಬ
ನೂರಐವತ್ತೊಂದನೆಯ ಅಧ್ಯಾಯವು ಮುಗಿದುದು.

ಗೌತಮೀಯ ಮಾಹಾತ್ಮ್ಯೆಯಲ್ಲಿ ಎಂಭತ್ತೆರಡನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ದ್ವಿಪಂಚಾಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ನಂದೀತಟಮಿತಿ ಖ್ಯಾತಂ ತೀರ್ಥಂ ವೇದವಿದೋ ವಿದುಃ ।
ತಸ್ಯ ಪ್ರಭಾವಂ ವಕ್ಷ್ಯಾಮಿ ಶೃಣು ಯತ್ನೇನ ನಾರದ ॥ ೧ ॥

ಅತ್ರಿಪುತ್ರೋ ಮಹಾತೇಜಾಶ್ಚಂದ್ರಮಾ ಇತಿ ವಿಶ್ರುತಃ ।
ಸರ್ವಾನ್ವೇದಾಂಶ್ಚ ವಿಧಿವದ್ಧನುರ್ವೇದಂ ಯಥಾವಿಧಿ ॥ ೨ ॥

ಅಧೀತ್ಯ ಜೀವಾತ್ಸರ್ವಾಶ್ಚ ವಿದ್ಯಾಶ್ಚಾನ್ಯಾ ಮಹಾಮತೇ ।
ಗುರುಪೂಜಾಂ ಕರೋಮೀತಿ ಜೀವಮಾಹ ಸ ಚಂದ್ರಮಾಃ ।
ಬೃಹಸ್ಪತಿಸ್ತದಾ ಪ್ರಾಹ ಚಂದ್ರಂ ಶಿಷ್ಯಂ ಮುದಾನ್ವಿತಃ ॥ ೩ ॥

ನೂರೈವತ್ತೆರಡನೆಯ ಅಧ್ಯಾಯವು

೧. ಬ್ರಹ್ಮನಿಂತೆಂದನು—ಎಲೈ ನಾರದನೇ, ನಂದೀತಟವೆಂಬ ಪ್ರಸಿದ್ಧವಾದ ತೀರ್ಥವುಂಟು. ಅದರ ಪ್ರಭಾವವನ್ನು ಹೇಳುವೆನು ಕೇಳು.

೨-೩. ಅತ್ರಿಋುಷಿಗೆ ಚಂದ್ರನೆಂಬ ಪ್ರಸಿದ್ಧನಾದ ಮಗನಿದ್ದನು. ಅವನು ಬೃಹಸ್ಪತ್ಯಾಚಾರ್ಯನಲ್ಲಿ ಎಲ್ಲಾ ವೇದಗಳನ್ನೂ, ಧನುರ್ವೇದವನ್ನೂ ಇನ್ನೂ ಅನೇಕ ವಿದ್ಯೆಗಳನ್ನೂ ವಿಧಿವತ್ತಾಗಿ ಓದಿದನು. ಅನಂತರ ಬೃಹಸ್ಪತಿಯನ್ನು ಕುರಿತು, ನಾನು ಗುರುಪೂಜೆಯನ್ನು ಮಾಡುವೆನು ಎಂದು ಹೇಳಿದನು.

॥ ಬೃಹಸ್ಪತಿರುವಾಚ ॥
ಮಮ ಪ್ರಿಯಾ ತು ಜಾನೀತೇ ತಾರಾ ರತಿಸಮಪ್ರಭಾ ॥ ೪ ॥

॥ ಬ್ರಹ್ಮೋವಾಚ ॥
ಪ್ರಷ್ಟುಂ ತಾಂ ಚ ತದಾ ಪ್ರಾಯಾದಂತರ್ವೇಶ್ಮ ಸ ಚಂದ್ರಮಾಃ ।
ತಾರಾಂ ತಾರಾಮುಖೀಂ ದೃಷ್ಟ್ವಾ ಜಗೃಹೇ ತಾಂ ಕರೇಣ ಸಃ ॥ ೫ ॥

ಸ್ವವೇಶ್ಮ ಪ್ರತಿ ತಾಂ ಲೋಭಾದ್ಬಲಾದಾಕರ್ಷಯತ್ತದಾ ।
ತಾವದ್ಧೈರ್ಯನಿಧಿರ್ಜ್ಞಾನೀ ಮತಿಮಾನ್ವಿಜಿತೇಂದ್ರಿಯಃ ॥ ೬ ॥

ಯಾವನ್ನ ಕಾಮಿನೀನೇತ್ರವಾಗುರಾಭಿರ್ನಿಬಧ್ಯತೇ ।
ವಿಶೇಷತೋ ರಹಃಸಂಸ್ಥಾಂ ಕಾಮಿನೀಮಾಯತೇಕ್ಷಣಾಂ ॥ ೭ ॥

ವಿಲೋಕ್ಯ ನ ಮನೋ ಯಾತಿ ಕಸ್ಯ ಕಾಮೇಷು ವಶ್ಯತಾಂ ।
ಅತ ಏವಾನ್ಯಪುರುಷದರ್ಶನಂ ನ ಕದಾಚನ ॥ ೮ ॥

ಆಮೇಲೆ ಬೃಹಸ್ಪತಿಯು ಚಂದ್ರನನ್ನು ಕುರಿತು ಆನಂದದಿಂದ ರತಿಯಂತೆ ಸುಂದರಳಾದ ನನ್ನ ಹೆಂಡತಿ ತಾರೆಯನ್ನು ಕೇಳು ಎಂದು ಹೇಳಿದನು.

೫. ಅನಂತರ ಚಂದ್ರನು ತಾರೆಯನ್ನು ಕೇಳಲು ಮನೆಯ ಒಳಭಾಗಕ್ಕೆ ಹೋದನು. ಅಲ್ಲಿ ನಕ್ಷತ್ರದಂತೆ ಸುಂದರವಾದ ಮುಖವುಳ್ಳ ತಾರೆಯನ್ನು ನೋಡಿ ಅವಳನ್ನು ತನ್ನ ಕೈಯಿಂದ ಹಿಡಿದುಕೊಂಡನು.

೬-೮. ಅನಂತರ ತಾರೆಯನ್ನು ಚಂದ್ರನು ಬಲಾತ್ಕಾರದಿಂದ ತನ್ನ ಮನೆಗೆ ಬರಬೇಕೆಂದು ಪೀಡಿಸಿದನು. ಯಾವಾಗ ಪುರುಷನು ಸ್ತ್ರೀಯರ ಕಟಾಕ್ಷ ವೀಕ್ಷಣಗಳಿಗೆ ಪಾತ್ರನಾಗುವನೋ, ಅದರಲ್ಲಿಯೂ ಯಾರೂ ಇಲ್ಲದಿರುವ ಸ್ಥಳ ದಲ್ಲಿ ಸ್ತ್ರೀಯನ್ನು ನೋಡುವನೋ ಆಗ ಅವನು ಧೈರ್ಯಶಾಲಿಯೇ ಆಗಲಿ, ಜ್ಞಾನಿಯೇ ಆಗಲೀ, ಬುದ್ಧಿವಂತನೇ ಆಗಲೀ, ಜಿತೇಂದ್ರಿಯನೇ ಆಗಲೀ ಅವನ ಮನಸ್ಸು ಕಾಮವಶನಾಗುತ್ತದೆ. ಅದಕ್ಕೋಸ್ಕರವಾಗಿಯೇ ಸ್ತ್ರೀಯರು ಅನ್ಯ ಪುರುಷರನ್ನು ನೋಡಬಾರದೆಂದು ಹೇಳಿರುವುದು. ಕುಲವಧುಗಳು ಮಾನ ಹೋದೀತೆಂದು ಹೆದರಿಕೆಯಿಂದ ಗುಟ್ಟಾಗಿ ಕ್ರೀಡಿಸುವರು.

ಕುಲವಧ್ವಾ ರಹಃ ಕಾರ್ಯಂ ಭೀತಯಾ ಶೀಲವಿಪ್ಲುತೇಃ ।
ವಿಜ್ಞಾಯ ತತ್ಪರಿಜನಾತ್ಸಹಸೋತ್ಥಾಯ ನಿರ್ಗತಃ ॥ ೯ ॥

ದೃಷ್ಟ್ವಾ ತದ್ದುಷ್ಕೃತಂ ಕರ್ಮ ಬೃಹಸ್ಪತಿರುದಾರಧೀಃ ।
ಶಶಾಪ ಕೋಪಾಚ್ಚಾಕ್ಷಿಪ್ಯ ವಾಗ್ಭಿರ್ವಿಪ್ರಿಯಕಾರಿಭಿಃ ॥ ೧೦ ॥

ಪರಾಭಿಭೂತಾಮಾಲೋಕ್ಯ ಕಾಂತಾಂ ಕಃ ಸೋಢುಮೀಶ್ವರಃ ।
ಯುಯುಧೇ ತೇನ ಜೀವೋऽಪಿ ದೇವಶ್ಚಂದ್ರಸಮಾ ರುಷಾ ॥ ೧೧ ॥

ನ ಶಾಪೈರ್ಹನ್ಯತೇ ಚಂದ್ರೋ ನಾಯುಧೈಃ ಸುರಮಂತ್ರಿತೈಃ ।
ಬೃಹಸ್ಪತಿಪ್ರಣೀತೈಶ್ಚ ನ ಮಂತ್ರೈರ್ಹನ್ಯತೇ ಶಶೀ ॥ ೧೨ ॥

ತದಾ ಚಂದ್ರಸ್ತು ತಾಂ ತಾರಾಂ ನೀತ್ವಾ ಸಂಸ್ಥಾಪ್ಯ ಮಂದಿರೇ ।
ಬುಭುಜೇ ಬಹುವರ್ಷಾಣಿ ರೋಹಿಣೀಂ ಚಾಕುತೋಭಯಃ ॥ ೧೩ ॥

೯-೧೦. ಚಂದ್ರನು ಪರಿಜನರಿಂದ ಇಷ್ಟು ವಿಷಯಗಳನ್ನು ತಿಳಿದುಕೊಂಡು ಜಾಗ್ರತೆಯಾಗಿ ಎದ್ದು ಹೊರಟುಹೋದನು. ಅನಂತರ ಬೃಹಸ್ಪತಿಯು ಇವನೀರೀತಿ ಮಾಡಿರುವ ದುಷ್ಕೃತ್ಯವನ್ನು ನೋಡಿ ಕೆಟ್ಟದಾದ ಮಾತುಗಳಿಂದ ಶಾಪವನ್ನು ಕೊಟ್ಟನು.

೧೧. ತನ್ನ ಪತ್ನಿಯು ಪರರ ವಶಕ್ಕೆ ಸಿಕ್ಕಲು ಯಾವಪತಿಯು ತಾನೇ ಸುಮ್ಮನಿದ್ದಾನು ? ಅಂತೆಯೇ ಬೃಹಸ್ಪತಿಯೂ ಕೋಪಗೊಂಡವನಾಗಿ ಚಂದ್ರನೊಡನೆ ಯುದ್ಧಮಾಡಿದನು.

೧೨. ಚಂದ್ರನಾದರೋ ಶಾಪದಿಂದಲಾಗಲೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಆಯುಧಗಳಿಂದಲಾಗಲೀ, ಬೃಹಸ್ಪತಿಯಿಂದ ರಚಿಸಿದ ಮಂತ್ರಗಳಿಂದಲಾಗಲೀ ಕೊಲ್ಲಲ್ಪಡಲಿಲ್ಲ.

೧೩. ಆಗ ಚಂದ್ರನು ಆ ತಾರೆಯನ್ನು ತನ್ನ ಮಂದಿರಕ್ಕೆ ಕರೆದುಕೊಂಡು ಬಂದು, ರೋಹಿಣಿಯ ಭಯವನ್ನೂ ಲೆಕ್ಕಿಸದೆ ಅನೇಕ ವರ್ಷಗಳಕಾಲ ಅವಳೊಡನೆ ರಮಿಸಿದನು.

ನ ಜೇಯೋತ ತದಾ ದೇವೈರ್ನ ಕೋಪೈಃ ಶಾಪಮಂತ್ರಕೈಃ ।
ನ ರಾಜಭಿರ್ನ ಋಷಿಭಿರ್ನ ಸಾಮ್ನಾ ಭೇದದಂಡನೈಃ ॥ ೧೪ ॥

ಯದಾ ಭಾರ್ಯಾಂ ನ ಲೇಭೇಽಸೌ ಗುರುಃ ಸರ್ವಪ್ರಯತ್ನತಃ ।
ಸರ್ವೋಪಾಯಕ್ಷಯೇ ಜೀವಸ್ತದಾ ನೀತಿಮಥಾಸ್ಮರತ್ ॥ ೧೫ ॥

ಅಪಮಾನಂ ಪುರಸ್ಕೃತ್ಯ ಮಾನಂ ಕೃತ್ವಾ ತು ಪೃಷ್ಠತಃ ।
ಸ್ವಾರ್ಥಮುದ್ಧರತೇ ಪ್ರಾಜ್ಞಃ ಸ್ವಾರ್ಥಭ್ರಂಶೋ ಹಿ ಮೂರ್ಖತಾ ॥ ೧೬ ॥

ಸಾಧ್ಯಂ ಕೇನಾಪ್ಯುಪಾಯೇನ ಜಾನದ್ಭಿಃ ಪುರುಷೈಃ ಫಲಂ ।
ವೃಥಾಭಿಮಾನಿನಃ ಶೀಘ್ರಂ ವಿಪದ್ಯಂತೇ ವಿಮೋಹಿತಾಃ ॥ ೧೭ ॥

ಏವಂ ನಿಶ್ಚಿತ್ಯ ಮೇಧಾವೀ ಶುಕ್ರಂ ಗತ್ವಾ ನ್ಯವೇದಯತ್ ।
ತಮಾಗತಂ ಕವಿರ್ಜ್ಞಾತ್ವಾ ಸಂಮಾನೇನಾಭ್ಯನಂದಯತ್ ॥ ೧೮ ॥

---

೧೪. ಅನಂತರ ದೇವತೆಗಳ ಮಾತಿನಿಂದಾಗಲೀ, ಅವರ ಕೋಪದಿಂದಲಾಗಲೀ, ಶಾಪದಮಂತ್ರದಿಂದಲಾಗಲೀ, ರಾಜರುಗಳುಋಷಿಗಳ ಮಾತಿನಿಂದಲಾಗಲೀ, ಸಾಮ, ಭೇದ, ದಂಡೋಪಾಯಗಳಿಂದಲಾಗಲೀ ಎಷ್ಟೇಪ್ರಯತ್ನಪಟ್ಟರೂ ಕೂಡ ಬೃಹಸ್ಪತಿಯು ಚಂದ್ರನಿಂದ ಹೆಂಡತಿಯನ್ನು ಪಡೆಯಲಾಗಲಿಲ್ಲ.

೧೫-೧೭. ಉಪಾಯಗಳೆಲ್ಲಾ ವ್ಯರ್ಥವಾಗಲು ಬೃಹಸ್ಪತಿಯು ಶುಕ್ರನನ್ನು ಸ್ಮರಿಸಿಕೊಂಡನು. ಪ್ರಾಜ್ಞನಾದವನು ಅಪಮಾನವನ್ನೇ ಮುಂದಾಗಿ ಎಣಿಸಿ ಮಾನವನ್ನು ಹಿಂಬದಿಗೆ ತಳ್ಳಿ ತನ್ನ ಪ್ರಯೋಜನವನ್ನು ಸಾಧಿಸಿಕೊಳ್ಳುವನು. ಸ್ವಾರ್ಥವನ್ನು ಸಾಧಿಸಿಕೊಳ್ಳದಿರುವುದು ಮೂರ್ಖತೆಯು. ಆದುದರಿಂದ ತಿಳಿದವರು ಏನಾದರೂ ಉಪಾಯದಿಂದ ಸ್ವಪ್ರಯೋಜನವನ್ನು ಸಾಧಿಸಬೇಕು. ವೃಥಾಭಿಮಾನಿಗಳು ಸ್ವಪ್ರಯೋಜನವನ್ನು ಸಾಧಿಸಿಕೊಳ್ಳದೆ ವಿಮೋಹಿತರಾಗಿ ನಾಶವಾಗುವರು.

೧೮. ಈ ರೀತಿಯಾಗಿ ನಿಶ್ಚಯಿಸಿ ಬುದ್ಧಿವಂತನಾದ ಗುರುವು ಈ ವಿಷಯವನ್ನು ತಿಳಿಸಲು ಶುಕ್ರನೆಡೆಗೆ ಹೋದನು. ಶುಕ್ರನು ಗುರುವು ಬರುತ್ತಿರುವುದನ್ನು ನೋಡಿ ಅವನನ್ನು ಸನ್ಮಾನಪೂರ್ವಕವಾಗಿ ಅಭಿನಂದಿಸಿದನು.

ಉಪವಿಷ್ಟಂ ಸುವಿಶ್ರಾಂತಂ ಪೂಜಿತಂ ಚ ಯಥಾವಿಧಿ ।
ಪರ್ಯಪೃಚ್ಛದ್ದೈತ್ಯಗುರುಸ್ತದಾಗಮನಕಾರಣಂ ॥ ೧೯ ॥

ಗೃಹಾಗತಸ್ಯ ವಿಮುಖಾಃ ಶತ್ರವೋಽಪ್ಯುತ್ತಮಾ ನ ಹಿ ।
ತಸ್ಮೈ ಸ ವಿಸ್ತರೇಣಾಹ ಭಾರ್ಯಾಹರಣಮಾದಿತಃ ॥ ೨೦ ॥

ಬೃಹಸ್ಪತೇಸ್ತದಾ ವಾಕ್ಯಂ ಶ್ರುತ್ವಾ ಕೋಪಾನ್ವಿತಃ ಕವಿಃ ।
ಅಪರಾಧಂ ತು ಚಂದ್ರಸ್ಯ ಮೇನೇ ಶಿಷ್ಯಸ್ಯ ನಾರದ ।
ಅತಿಕ್ರಮಮಿಮಂ ಶ್ರುತ್ವಾ ಕೋಪಾತ್ಕವಿರಥಾಬ್ರವೀತ್ ॥ ೨೧ ॥

॥ ಶುಕ್ರ ಉವಾಚ ॥

ತದಾ ಭೋಕ್ಷ್ಯೇ ತದಾ ಪಾಸ್ಯೇ ತದಾ ಸ್ವಪ್ಸ್ಯೇ ತದಾ ವದೇ ।
ಯದಾನಯೇ ಪ್ರಿಯಾಂ ಭ್ರಾತಸ್ತವ ಭಾರ್ಯಾಂ ಪರಾರ್ದಿತಾಂ ॥ ೨೨ ॥

ತಾಮಾನೀಯ ಭವಂ ಪೂಜ್ಯ ಚಂದ್ರಂ ಶಪ್ತ್ವಾ ಗುರುದ್ರುಹಂ ।
ಪಶ್ಚಾದ್ಭೋಕ್ಷ್ಯೇ ಮಹಾಬಾಹೋ ಶೃಣು ವಾಚಂ ಗ್ರಹೇಶ್ವರ ॥ ೨೩ ॥

---

೧೯. ಯಥಾವಿಧಿಯಾಗಿ ಪೂಜಿಸಿದನಂತರ ವಿಶ್ರಾಂತನಾಗಿ ಕುಳಿತಿರುವ ಗುರುವನ್ನು ಕುರಿತು ಶುಕ್ರನು ಅವನು ಬಂದಕಾರಣವೇನೆಂದು ಕೇಳಿದನು.

೨೦. ಪರಾಙ್ಮುಖರಾದರೂ ಶತ್ರುಗಳು ಮನೆಗೆ ಬಂದರೆ ಅವರು ಉತ್ತಮರಲ್ಲವು. ಬೃಹಸ್ಪತಿಯು ಶುಕ್ರನಿಗೆ ಚಂದ್ರನು ತನ್ನ ಹೆಂಡತಿಯನ್ನು ಅಪಹರಿಸಿದುದನ್ನು ಮೊದಲಿನಿಂದ ವಿಸ್ತಾರವಾಗಿ ತಿಳಿಸಿದನು.

೨೧. ಶುಕ್ರನು ಬೃಹಸ್ಪತಿಯು ಹೇಳಿದುದನ್ನು ಕೇಳಿ ಕೋಪಗೊಂಡನು. ಎಲೈ ನಾರದನೇ, ಅನಂತರ ಶುಕ್ರನು ಈ ಅಪರಾಧವು ಶಿಷ್ಯನಾದ ಚಂದ್ರನದೆಂದು ತಿಳಿದುಕೊಂಡು ಈ ಅತಿಕ್ರಮಕ್ಕೋಸ್ಕರ ಬಹು ಸಿಟ್ಟಿನಿಂದ ಈರೀತಿ ಹೇಳಿದನು.

೨೨-೨೩. ಎಲೈ ಸಹೋದರನೇ, ಪರರಕೈಗೆ ಸಿಕ್ಕಿರುವ ನಿನ್ನ ಪತ್ನಿಯನ್ನು ನಾನು ಯಾವಾಗ ಕರೆದುಕೊಂಡುಬರುವೆನೋ ಆಗ ಊಟಮಾಡುವೆನು. ಪಾನಮಾಡಲು ಶಕ್ತನಾಗುವೆನು. ಮಲಗಿ ನಿದ್ರಿಸುವೆನು. ಸರಿ

॥ ಬ್ರಹ್ಮೋವಾಚ ॥

ಏವಮುಕ್ತ್ವಾ ಸ ಜೀವೇನ ದೈತ್ಯಾಚಾರ್ಯೋ ಜಗಾಮ ಹ ।
ಶಿವಮಾರಾಧ್ಯ ಯತ್ನೇನ ಪರಂ ಸಾಮರ್ಥ್ಯಮಾಪ್ತವಾನ್ ॥ ೨೪ ॥

ವರಾನವಾಪ್ಯ ವಿವಿಧಾಞ್ಛಂಕರಾದ್ಭಾವಪೂಜಿತಾನ್ ।
ಶಿವಪ್ರಸಾದಾತ್ಕಿಂ ನಾಮ ದೇಹಿನಾಮಿಹ ದುರ್ಲಭಂ ॥ ೨೫ ॥

ಜಗಾಮ ಶಕ್ರೋ ಜೀವೇನ ತಾರಯಾ ಯತ್ರ ಚಂದ್ರಮಾಃ ।
ವರ್ತತೇ ತಂ ಶಶಾಪೋಚ್ಚೈಃ ಶೃಣು ತ್ವಂ ಚಂದ್ರ ಮೇ ವಚಃ ॥ ೨೬ ॥

ಯಸ್ಮಾತ್ಪಾಪತರಂ ಕರ್ಮ ತ್ವಯಾ ಪಾಪ ಮುದಾತ್ಕೃತಂ ।
ಕುಷ್ಠೀ ಭೂಯಾಸ್ತತಶ್ಚಂದ್ರಂ ಶಶಾಪೈವಂ ರುಷಾ ಕವಿಃ ॥ ೨೭ ॥

ಯಾಗಿ ಮಾತನಾಡುವೆನು. ಆದುದರಿಂದ ತಾರೆಯನ್ನು ಕರೆದುಕೊಂಡು ಬಂದು ಗುರುದ್ರೋಹಮಾಡಿದ ಆ ಚಂದ್ರನಿಗೆ ಶಾಪವನ್ನುಕೊಟ್ಟು ಬಳಿಕ ಊಟಮಾಡುವೆನು, ಅದುವರಿಗೂ ಮಾಡುವುದಿಲ್ಲ. ಎಲೈ ಬೃಹಸ್ಪತಿಯೇ ಇದೇ ನನ್ನ ಶಪಥವು.

೨೪. ಈ ರೀತಿಯಾಗಿ ಶುಕ್ರನು ಹೇಳಿ ಬೃಹಸ್ಪತಿಯೊಡನೆ ಅಲ್ಲಿಂದ ಹೊರಟನು ಮತ್ತು ಈಶ್ವರನನ್ನು ಪೂಜಿಸಿ ಸಾಮರ್ಥ್ಯವನ್ನು ಪಡೆದನು.

೨೫. ಈಶ್ವರನನ್ನು ಭಕ್ತಿಭಾವಗಳಿಂದ ಪೂಜಿಸಿ ಅನೇಕ ವರಗಳನ್ನು ಪಡೆದನು. ಶಿವನ ಅನುಗ್ರಹವುಂಟಾಗಲು ಜನಗಳಿಗೆ ಯಾವುದುತಾನೇ ದುರ್ಲಭವು?

೨೬. ಅನಂತರ ಶುಕ್ರನು ಬೃಹಸ್ಪತಿಯೊಡಗೂಡಿ, ತಾರೆಯೊಡನೆ ಚಂದ್ರನಿರುವ ಸ್ಥಳಕ್ಕೆ ಹೋದನು ಮತ್ತು ಅವನನ್ನು ಶಪಿಸಿದನು–ಎಲೈ ಚಂದ್ರನೇ, ನನ್ನ ಮಾತನ್ನು ಕೇಳು.

೨೭. ಎಲೈ ಪಾಪಿಯೇ, ನೀನು ಅತ್ಯಂತ ಪಾಪವಾದ ಕೆಲಸವನ್ನು ಮಾಡಿ ಮದಿಸಿರುವೆ. ಆದುದರಿಂದ ನಿನಗೆ ಕುಷ್ಠರೋಗವು ಬರಲಿ ಎಂಬುದಾಗಿ ಶುಕ್ರನು ಕೋಪದಿಂದ ಶಪಿಸಿದನು.

ಕವಿಶಾಪಪ್ರದಗ್ಧೋಽಭೂತ್ತದೈವ ಮೃಗಲಾಂಛನಃ ।
ಪ್ರಾಪುಃ ಕ್ಷಯಂ ನ ಕೇ ನಾಮ ಗುರುಸ್ವಾಮಿಸಖಿದ್ರುಹಃ ॥ ೨೮ ॥

ತತ್ಯಾಜ ತಾಂ ಸ ಚಂದ್ರೋಽಪಿ ತಾಂ ತಾರಾಂ ಜಗೃಹೇ ಕವಿಃ ।
ಶುಕ್ರೋಽಪಿ ದೇವಾನಾಹೂಯ ಋಷೀನ್ಪಿತೃಗಣಾಂಸ್ತಥಾ ॥ ೨೯ ॥

ನದೀರ್ನದಾಂಶ್ಚ ವಿವಿಧಾನೋಷಧೀಶ್ಚ ಪತಿವ್ರತಾಃ ।
ತತಃ ಸಂಪ್ರಷ್ಟುಮಾರೇಭೇ ತಾರಾಪ್ರಸ್ತಿವಿನಿಶ್ಚಯಂ ॥ ೩೦ ॥

ತತಃ ಶ್ರುತಿಃ ಸುರಾನಾಹ ಗೌತಮ್ಯಾಂ ಭಕ್ತಿತಸ್ತ್ವಿಯಂ ।
ಸ್ನಾನಂ ಕರೋತು ಜೀವೇನ ತಾರಾ ಪೂತಾ ಭವಿಷ್ಯತಿ ॥ ೩೧ ॥

ರಹಸ್ಯಮೇತತ್ಪರಮಂ ನ ಕಥ್ಯಂ ಯಸ್ಯ ಕಸ್ಯಚಿತ್ ।
ಸರ್ವಾಸ್ವಪಿ ದಶಾಸ್ವೇಹ ಶರಣಂ ಗೌತಮೀ ನೃಣಾಂ ॥ ೩೨ ॥

---

೨೮. ಶುಕ್ರನ ಶಾಪದಿಂದ ಚಂದ್ರನು ಕ್ಷಯರೋಗಪೀಡಿತನಾದನು. ಗುರುಗಳಿಗೂ, ಯಜಮಾನನಿಗೂ ಸ್ನೇಹಿತನಿಗೂ ದ್ರೋಹಮಾಡಿದರೆ ಯಾರಿಗೆ ತಾನೆ ಕ್ಷಯವು ಉಂಟಾಗುವುದಿಲ್ಲ.

೨೯-೩೦. ಅನಂತರ ಚಂದ್ರನು ತಾರೆಯನ್ನು ಬಿಟ್ಟುಬಿಟ್ಟನು. ಶುಕ್ರನು ದೇವತೆಗಳನ್ನೂ, ಋಷಿಗಳನ್ನೂ, ಪಿತೃಗಣಗಳನ್ನೂ, ನದಿಗಳನ್ನೂ ನದಗಳನ್ನೂ ವಿವಿಧವಾದ ಓಷಧಿಗಳನ್ನೂ, ಪತಿವ್ರತೆಯರನ್ನೂ ಕರೆಸಿ ತಾರೆಯು ಮಾಡಿರುವ ಕೆಲಸಕ್ಕೆ ಪ್ರಾಯಶ್ಚಿತ್ತವೇನೆಂದು ಕೇಳಿದನು.

೩೧. ಆಗ ಶ್ರುತಿಯು ದೇವತೆಗಳನ್ನು ಕುರಿತು ಈ ತಾರೆಯು ಬೃಹಸ್ಪತಿಯೊಡನೆ ಭಕ್ತಿಯಿಂದ ಗೌತಮೀತೀರ್ಥದಲ್ಲಿ ಸ್ನಾನಮಾಡಲಿ. ಆರೀತಿ ಮಾಡಿದರೆ ಪವಿತ್ರಳಾಗುವಳು.

೩೨. ಇದು ರಹಸ್ಯವಾದ ವಿಷಯವು. ಇದನ್ನು ಯಾರಿಗೂ ಹೇಳಬಾರದು. ಗೌತಮಿಯು ಮನುಷ್ಯರಿಗೆ ಎಲ್ಲಾ ದೆಸೆಗಳಲ್ಲಿಯೂ ರಕ್ಷಕಳು.

ತಥಾಕರೋಚ್ಚೈವ ತಾರಾ ಭರ್ತ್ರಾ ಸ್ನಾನಂ ಯಥಾವಿಧಿ ।
ಪುಷ್ಪವೃಷ್ಟಿರಭೂತ್ತತ್ರ ಜಯಶಬ್ದೋ ವ್ಯವರ್ತತ ॥ ೩೩ ॥

ಪುನರ್ನ್ಯೆ ದೇವಾ ಅದದುಃ ಪುನರ್ಮನುಷ್ಯಾ ಉತ ।
ರಾಜಾನಃ ಸತ್ಯಂ ಕೃಣ್ವಾನಾ ಬ್ರಹ್ಮಜಾಯಾಂ ಪುನರ್ದದುಃ ॥ ೩೪ ॥

ಪುನರ್ದತ್ತ್ವಾ ಬ್ರಹ್ಮಜಾಯಾಂ ಕೃತಾಂ ದೇವೈರಕಲ್ಮಷಾಂ ।
ಸರ್ವಂ ಕ್ಷೇಮಮಭೂತ್ತತ್ರ ತಸ್ಮಾತ್ತೀರ್ಥಂ ಮಹಾಮುನೇ ॥ ೩೫ ॥

ತದಭೂತ್ಸಕಲಾಘೌಘಧ್ವಂಸನಂ ಸರ್ವಕಾಮದಂ ।
ಆನಂದಂ ಕ್ಷೇಮಮಭವತ್ಸುರಾಣಾಮಸುರಾರಿಣಾಂ ॥ ೩೬ ॥

ಬೃಹಸ್ಪತೇಶ್ಚ ಶುಕ್ರಸ್ಯ ತಾರಾಯಾಶ್ಚ ವಿಶೇಷತಃ ।
ಪರಮಾನಂದಮಾಪನ್ನೋ ಗುರುರ್ಗಂಗಾಮಭಾಷತ ॥ ೩೭ ॥

---

೩೩. ಅನಂತರ ತಾರೆಯು ಗಂಡನೊಡನೆ ಗೌತಮಿಯಲ್ಲಿ ಯಥಾವಿಧಿಯಾಗಿ ಸ್ನಾನಮಾಡಿದಳು. ಆಗ ಪುಷ್ಪವೃಷ್ಟಿಯಾಯಿತು. ಜಯಶಬ್ದವು ಕೇಳಿಸಿತು.

೩೪-೩೫. ಎಲೈ ಮಹಾಮುನಿಯೇ, ದೇವತೆಗಳೂ, ಮನುಷ್ಯರೂ ರಾಜರುಗಳೆಲ್ಲರೂ ಸತ್ಯವನ್ನು ತಿಳಿದವರಾಗಿ ತಾರೆಯನ್ನು ಬೃಹಸ್ಪತಿಗೆ ಒಪ್ಪಿಸಿದರು. ದೇವತೆಗಳಿಂದ ಪವಿತ್ರಳಾದ ತಾರೆಯನ್ನು ಬೃಹಸ್ಪತಿಗೆ ಕೊಟ್ಟು ಎಲ್ಲರೂ ಕ್ಷೇಮದಿಂದಿದ್ದರು. ಎಲ್ಲವೂ ಕ್ಷೇಮವಾದುವು.

೩೬. ಅಂದಿನಿಂದ ಆ ತೀರ್ಥವು ಸಕಲ ಪಾಪಗಳನ್ನು ನಾಶಮಾಡುವುದಾಗಿಯೂ ಸರ್ವೇಷ್ಟಾರ್ಥಗಳನ್ನು ಕೊಡುವುದಾಗಿಯೂ ಇರುವುದು. ಅಸುರಾರಿಗಳಾದ ದೇವತೆಗಳಿಗೆ ಆನಂದವೂ ಕ್ಷೇಮವೂ ಉಂಟಾಯಿತು.

೩೭. ಬೃಹಸ್ಪತಿಗೂ, ಶುಕ್ರನಿಗೂ, ತಾರೆಗೂ ವಿಶೇಷವಾದ ಆನಂದ ಉಂಟಾಯಿತು. ಪರಮಾನಂದಯುಕ್ತನಾದ ಗುರುವು ಗಂಗೆಯನ್ನು ಕುರಿತು,

॥ ಗುರುರುವಾಚ ॥

ತ್ವಂ ಗೌತಮಿ ಸದಾ ಪೂಜ್ಯಾ ಸರ್ವೇಷಾಮಪಿ ಮುಕ್ತಿದಾ ।
ವಿಶೇಷತಸ್ತು ಸಿಂಹಸ್ಥೇ ಮಯಿ ತ್ರೈಲೋಕ್ಯಪಾವನೀ ॥ ೩೮ ॥

ಭವಿಷ್ಯಸಿ ಸರಿಚ್ಛ್ರೇಷ್ಠೇ ಸರ್ವತೀರ್ಥೈಃ ಸಮನ್ವಿತಾ ।
ಯಾನಿ ಕಾನಿ ಚ ತೀರ್ಥಾನಿ ಸ್ವರ್ಗಮರ್ತ್ಯರಸಾತಲೇ ।
ತ್ವಾಂ ಸ್ನಾತುಂ ತಾನಿ ಯಾಸ್ಯಂತಿ ಮಯಿ ಸಿಂಹಸ್ಥಿತೇಽಂಬಿಕೇ ॥ ೩೯ ॥

॥ ಬ್ರಹ್ಮೋವಾಚ ॥

ಧನ್ಯಂ ಯಶಸ್ಯಮಾಯುಷ್ಯಮಾರೋಗ್ಯಶ್ರೀವಿವರ್ಧನಂ ।
ಸೌಭಾಗ್ಯೈಶ್ವರ್ಯಜನನಂ ತೀರ್ಥಮಾನಂದನಾಮಕಂ ॥ ೪೦ ॥

ತತ್ರ ಪಂಚ ಸಹಸ್ರಾಣಿ ತೀರ್ಥಾನ್ಯಾಹ ಸ ಗೌತಮಃ ।
ಸ್ಮರಣಾತ್ಪಠನಾದ್ವಾಪಿ ಇಷ್ಟೈಃ ಸಂಯುಜ್ಯತೇ ಸದಾ ॥ ೪೧ ॥

೩೮-೩೯. ಎಲೌ ತ್ರೈಲೋಕ್ಯಪಾವಿನಿಯಾದ ಗಂಗೆಯೇ, ನೀನು ಗೌತಮಿಯು, ಸದಾಪೂಜ್ಯಳು. ಎಲ್ಲರಿಗೂ ಮುಕ್ತಿಯನ್ನು ಕೊಡತಕ್ಕವಳು. ನಾನು ಸಿಂಹರಾಶಿಗೆ ಬರಲು ಆದಿನದಲ್ಲಿ ಸ್ನಾನಮಾಡಿದರೆ ವಿಶೇಷವಾದ ಫಲವನ್ನು ಕೊಡುವೆ. ನಾನು ಸಿಂಹರಾಶಿಗೆ ಬಂದಾಗ ಸ್ವರ್ಗ, ಭೂಮಿ, ಪಾತಾಳ ಲೋಕಗಳಲ್ಲಿ ಯಾವಯಾವತೀರ್ಥಗಳಿರುವುವೋ ಅವೆಲ್ಲವೂ ಆದಿನ ನಿನ್ನಲ್ಲಿ ಸ್ನಾನಮಾಡಲು ಬರುವುವು ಎಂದನು.

೪೦. ಅಲ್ಲಿ ಆನಂದವೆಂಬ ಹೆಸರುಳ್ಳ ಮತ್ತೊಂದು ತೀರ್ಥವಿರುವುದು. ಇದು ಯಶಸ್ಸನ್ನೂ ಆಯುಸ್ಸನ್ನೂ ಆರೋಗ್ಯವನ್ನೂ ಧನವನ್ನೂ ಹೆಚ್ಚಿಸುವುದು, ಸೌಭಾಗ್ಯವನ್ನೂ ಐಶ್ವರ್ಯವನ್ನೂ ಕೊಡುವುದು.

೪೧-೪೨. ಇಲ್ಲಿ ಐದು ಸಹಸ್ರ ತೀರ್ಥಗಳಿರುವುವೆಂದು ಗೌತಮನು ಹೇಳಿರುವನು. ಇವುಗಳನ್ನು ಸ್ಮರಣೆಮಾಡಿದರೂ, ಪಠಿಸಿದರೂ

ಶಿವಸ್ಯಾತ್ರ ನಿವಿಷ್ಟಸ್ಯ ನಂದೀ ಗಂಗಾತಟೇಽನಿಶಂ ।
ಸಾಕ್ಷಾಚ್ಚರತ್ಯಸೌ ಧರ್ಮಸ್ತಸ್ಮಾನ್ನಂದೀತಟಂ ಸ್ಮೃತಂ ।
ಆನಂದಮಪಿ ತತ್ತೀರ್ಥಂ ಸರ್ವಾನಂದವಿವರ್ಧನಾತ್ ॥ ೪೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಆನಂದತೀರ್ಥಾದಿಪಂಚಸಹಸ್ರತೀರ್ಥವರ್ಣನಂ ನಾಮ
ದ್ವಿಪಂಚಾಶದಧಿಕಶತತಮೋಽಧ್ಯಾಯಃ

ಇಷ್ಟಾರ್ಥವು ನೆರವೇರುವುದು. ಈ ಗಂಗಾನದಿಯ ತಟದಲ್ಲಿ ಸಾಕ್ಷಾತ್ ಧರ್ಮಸ್ವರೂಪವಾದ ಶಿವನ ವಾಹನವಾದ ನಂದಿಯು ಸಂಚರಿಸುವುದರಿಂದ ಇದಕ್ಕೆ ನಂದೀತಟವೆಂದು ಹೆಸರಾಯಿತು. ಅದು ಎಲ್ಲರಿಗೂ ಆನಂದವನ್ನುಂಟುಮಾಡುವುದಾದುದರಿಂದ ಆನಂದವೆಂದು ಹೆಸರಾಯಿತು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಆನಂದತೀರ್ಥಾದಿ ಪಂಚಸಹಸ್ರತೀರ್ಥವರ್ಣನವೆಂಬ ನೂರೈವತ್ತೆರಡನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಎಂಭತ್ತಮೂರನೆಯ ಅಧ್ಯಾಯವು

ಶ್ರೀಃ

ಅಥ ಮಹಾಪುರಾಣೇ ಬ್ರಾಹ್ಮೇ

ತ್ರಿಪಂಚಾಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಭಾವತೀರ್ಥಮಿತಿ ಪ್ರೋಕ್ತಂ ಯತ್ರ ಸಾಕ್ಷಾದ್ಭವಃ ಸ್ಥಿತಃ ।
ಅಶೇಷಜಗದಂತಸ್ಥೋ ಭೂತಾತ್ಮಾ ಸಚ್ಚಿದಾಕೃತಿಃ ॥ ೧ ॥

ತತ್ರೇಮಾಂ ಶೃಣು ವಕ್ಷ್ಯಾಮಿ ಕಥಾಂ ಪುಣ್ಯತಮಾಂ ಶುಭಾಂ ।
ಸೂರ್ಯವಂಶಕರಃ ಶ್ರೀಮಾನ್ಕ್ಷತ್ರಿಯಾಣಾಂ ಧುರಂಧರಃ ॥ ೨ ॥

ಪ್ರಾಚೀನಬರ್ಹಿರಾಖ್ಯಾತಃ ಸರ್ವಧರ್ಮೇಷು ಪಾರಗಃ ।
ತಿಸ್ರಃ ಕೋಟ್ಯೋಽರ್ಧಕೋಟಿಶ್ಚ ವರ್ಷಾಣಾಂ ರಾಜ್ಯ ಆಸ್ಥಿತಃ ॥ ೩ ॥

ನೂರೈವತ್ತಮೂರನೆಯ ಅಧ್ಯಾಯವು

೧. ಬ್ರಹ್ಮನಿಂತೆಂದನು—ಭಾವತೀರ್ಥವೆಂಬ ತೀರ್ಥವಿರುವುದು. ಇಲ್ಲಿ ಸಮಸ್ತ ಜಗದಂತಸ್ಥನಾದ ಸಾಕ್ಷಾತ್ ಈಶ್ವರನು ವಾಸವಾಗಿರುವನು. ಈಶ್ವರನು ಭೂತಾತ್ಮನೂ, ಸಚ್ಚಿದಾಕೃತಿಯೂ ಆಗಿರುವನು.

೨–೩. ಇದರ ವಿಷಯದಲ್ಲಿ ಪುಣ್ಯತಮವೂ ಶುಭವೂ ಆದ ಕಥೆಯನ್ನು ಹೇಳುವೆನು ಕೇಳು. ಸೂರ್ಯವಂಶದಲ್ಲಿ ಕ್ಷತ್ರಿಯಶ್ರೇಷ್ಠನಾದ ಪ್ರಾಚೀನಬರ್ಹಿ ಎಂಬ ರಾಜನಿದ್ದನು. ಅವನು ಸರ್ವಧರ್ಮಪಾರಂಗತನಾಗಿದ್ದನು. ಅವನು ಮೂರುವರೆಕೋಟಿ ವರ್ಷ ರಾಜ್ಯವಾಳಿದನು.

ತಸ್ಯೇದೃಶಂ ವ್ರತಂ ಚಾಸೀದ್ಯದಹಂ ಯೌವನಚ್ಯುತಃ ।
ಭವೇಯಂ ಪ್ರಿಯಯಾ ವಾಪಿ ಪುತ್ರೈರ್ವಾ ಪ್ರಿಯವಸ್ತುಭಿಃ ॥ ೪ ॥

ವಿಯುಜ್ಯೇಯಂ ತತೋ ರಾಜ್ಯಂ ತ್ಯಕ್ಷ್ಯೇಽಹಂ ನಾತ್ರ ಸಂಶಯಃ ।
ವಿವೇಕಿನಾಂ ಕುಲೀನಾನಾಮಿದಮೇವೋಚಿತಂ ನೃಣಾಂ ॥ ೫ ॥

ಸ್ಥೀಯತೇ ವಿಜನೇ ಕ್ವಾಪಿ ವಿರಕ್ತೈರ್ವಿಭವಕ್ಷಯೇ ।
ತಸ್ಮಿನ್ಪ್ರಶಾಸತಿ ಮಹೀಂ ನ ವಿಯೋಗಃ ಪ್ರಿಯೈಃ ಕ್ವಚಿತ್ ॥ ೬ ॥

ನಾಧಿರ್ವ್ಯಾಧೀ ನ ದುರ್ಭಿಕ್ಷಂ ನ ಬಂಧುಕಲಹೋ ನೃಣಾಂ ।
ತಸ್ಮಿನ್ ಶಾಸತಿ ರಾಜ್ಯಂ ತು ನ ಚ ಕಶ್ಚಿದ್ವಿಯುಜ್ಯತೇ ॥ ೭ ॥

ತತಃ ಪುತ್ರಾರ್ಥಮಕರೋದ್ಯಜ್ಞಂ ರಾಜಾ ಮಹಾಮತಿಃ ।
ತತಃ ಪ್ರಸನ್ನೋ ಭಗವಾನ್ವರಂ ಪ್ರಾದಾದ್ಯಥೇಪ್ಸಿತಂ ॥ ೮ ॥

೪-೫. ಆ ಪ್ರಾಚೀನಬರ್ಹಿಯ ನಿಯಮವೀರೀತಿ ಇದ್ದಿತು. ನಾನು ಯಾವಾಗ ಮುದುಕನಾಗುವೆನೋ ಆಗ ಹೆಂಡತಿಯನ್ನೂ, ಮಕ್ಕಳನ್ನೂ, ಇಷ್ಟ ವಸ್ತುಗಳನ್ನೂ ಬಿಟ್ಟುಬಿಟ್ಟು ರಾಜ್ಯವನ್ನು ತ್ಯಜಿಸುವೆನು. ಇದರಲ್ಲಿ ಸಂಶಯ ವಿಲ್ಲ, ವಿವೇಕಿಗಳೂ ಕುಲೀನರೂ ಆದ ಜನರಿಗೆ ಇದು ಯೋಗ್ಯವಾದುದು. ಮನುಷ್ಯನಿಗೆ ವಿಭವಗಳೆಲ್ಲವೂ ನಾಶವಾಗಲು ವಿರಕ್ತಿಯುಂಟಾಗಿ ಜನರಹಿತವಾದ ಪ್ರದೇಶದಲ್ಲಿ ಇರುವನು.

೬-೭. ಆ ಪ್ರಾಚೀನಬರ್ಹಿಯು ರಾಜ್ಯವಾಳುತ್ತಿರಲು ಯಾರಿಗೂ ಇಷ್ಟ ವಾದ ವಸ್ತುಗಳಿಂದ ವಿಯೋಗವು ಬರುತ್ತಿರಲಿಲ್ಲ. ಮನೋವ್ಯಥೆಯಾಗಲೀ ರೋಗವಾಗಲೀ ಇರುತ್ತಿರಲಿಲ್ಲ. ದುರ್ಭಿಕ್ಷವು ಬರುತ್ತಿರಲಿಲ್ಲ. ಬಂಧುಗಳು ಪರಸ್ಪರ ಕಲಹವಾಡುತ್ತಿರಲಿಲ್ಲ. ಯಾರಿಗೂ ಯಾರ ವಿಯೋಗವೂ ಇರಲಿಲ್ಲ.

೮. ರಾಜನು ತನಗೆ ಮಕ್ಕಳಾಗಬೇಕೆಂದು ಯಜ್ಞವನ್ನು ಮಾಡಿದನು. ಆದರಿಂದ ಪ್ರಸನ್ನನಾದ ಈಶ್ವರನು ಅವನಿಗಿಷ್ಟವಾದ ವರವನ್ನು ಕೊಟ್ಟನು.

ಗೌತಮೀತೀರಸಂಸ್ಥಾಯ ರಾಜ್ಞೇ ದೇವೋ ಮಹೇಶ್ವರಃ ।
ಪುತ್ರಂ ದೇಹೀತಿ ರಾಜಾ ವೈ ಭವಂ ಪ್ರಾಹ ಸ ಭಾರ್ಯಯಾ ॥ ೯ ॥

ಭವಃ ಪ್ರಾಹ ನೃಪಂ ಪ್ರೀತ್ಯಾ ಪಶ್ಯ ನೇತ್ರಂ ತೃತೀಯಕಂ ।
ತತಃ ಪಶ್ಯತಿ ರಾಜೇಂದ್ರೇ ಭವಸ್ಯಾಕ್ಷಿ ತು ಮಾನದ ॥ ೧೦ ॥

ಚಕ್ಷುರ್ದೀಪ್ತ್ಯಾ ಭವತ್ಪುತ್ರೋ ಮಹಿಮಾ ನಾಮ ವಿಶ್ರುತಃ ।
ಯೇನಾಕಾರಿ ಸ್ತುತಿಃ ಪುಣ್ಯಾ ಮಹಿಮ್ನ ಇತಿ ವಿಶ್ರುತಾ ॥ ೧೧ ॥

ಕಿಮಲಭ್ಯಂ ಭಗವತಿ ಪ್ರಸನ್ನೇ ತ್ರಿಪುರಾಂತಕೇ ।
ಯಂ ನಿತ್ಯಮನುವರ್ತಂತೇ ಹರಿಬ್ರಹ್ಮಾದಯಃ ಸುರಾಃ ॥ ೧೨ ॥

ಪ್ರಾಪ್ತಪುತ್ರಶ್ಚ ನೃಪತಿಸ್ತೀರ್ಥಶ್ರೈಷ್ಠ್ಯಮಯಾಚತ ।
ಮಹಾಪಾಪಮಹಾರೋಗಮಹಾವ್ಯಸನಿನಾಂ ನೃಣಾಂ ॥ ೧೩ ॥

---

೯. ರಾಜನು ಗೌತಮೀತೀರದಲ್ಲಿದ್ದುಕೊಂಡು ತನ್ನ ಹೆಂಡತಿಯೊಡನೆ ನನಗೆ ಪುತ್ರನನ್ನು ಕರುಣಿಸು ಎಂಬುದಾಗಿ ಮಹೇಶ್ವರನನ್ನು ಕೇಳಿದನು.

೧೦-೧೧. ಈಶ್ವರನು ರಾಜನನ್ನು ಕುರಿತು, ನನ್ನ ಮೂರನೆಯ ಕಣ್ಣನ್ನು ನೋಡು ಎಂದು ಹೇಳಿದನು. ರಾಜನು ಈಶ್ವರನ ಮೂರನೆಯ ಕಣ್ಣನ್ನು ನೋಡುತ್ತಿರಲಾಗಿ ಆ ಕಣ್ಣಿನ ತೇಜಸ್ಸಿನಿಂದ ಒಬ್ಬ ಪುತ್ರನು ಹುಟ್ಟಿದನು. ಅವನಿಗೆ ಮಹಿಮನೆಂದು ಹೆಸರಾಯಿತು ಅವನು ಈಶ್ವರನ ಮಹಿಮೆಯ ಸ್ತೋತ್ರವನ್ನು ಮಾಡಿದನು.

೧೨. ಭಗವಂತನಾದ ಈಶ್ವರನು ಪ್ರಸನ್ನನಾಗಲು ಯಾವುದು ತಾನೇ ದುರ್ಲಭವು ? ಹರಿಬ್ರಹ್ಮಾದಿಗಳೆಲ್ಲರೂ ಆ ಈಶ್ವರನನ್ನು ನಿತ್ಯವೂ ಅನುಸರಿಸುವರು, ಈಶ್ವರನು ಅಂತಹ ಮಹಿಮೆಯುಳ್ಳವನು.

೧೩-೧೪. ಪುತ್ರನನ್ನು ಪಡೆದು ಆ ರಾಜನು ಈಶ್ವರನನ್ನು ಕುರಿತು ಈ ತೀರ್ಥವು ಮಹಾಪಾಪ, ಮಹಾರೋಗಗಳನ್ನು ನಾಶಮಾಡುವುದಾಗಿಯೂ ಮಹಾ ವ್ಯಸನವನ್ನುಳ್ಳ ಜನರಿಗೆ ವ್ಯಸನನಿವಾರಣೆ ಮಾಡುವುದಾಗಿಯೂ ಅನೇಕ

ನಾನಾವಿಪದ್ಗಣಾರ್ತಾನಾಂ ಸರ್ವಾಭಿಮತಲಬ್ಧಯೇ ।
ಪ್ರಾದಾಚ್ಛ್ರೈಷ್ಠ್ಯಂ ಭವಶ್ಚಾಪಿ ಭಾವತೀರ್ಥಂ ತದುಚ್ಯತೇ ॥ ೧೪ ॥

ತತ್ರ ಸ್ನಾನೇನ ದಾನೇನ ಸರ್ವಾನ್ಕಾಮಾನವಾಪ್ನುಯಾತ್ ।
ಭವಪ್ರಸಾದಾದಭವತ್ಸುತಃ ಪ್ರಾಚೀನಬರ್ಹಿಷಃ ॥ ೧೫ ॥

ಮಹಿಮಾ ಗೌತಮೀತೀರೇ ಭಾವತೀರ್ಥಂ ತದುಚ್ಯತೇ ।
ತತ್ರ ಸಪ್ತತಿತೀರ್ಥಾನಿ ಪುಣ್ಯಾನ್ಯಖಿಲದಾನಿ ಚ ॥ ೧೬ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಭಾವತೀರ್ಥಾದಿಸಪ್ತತಿತೀರ್ಥವರ್ಣನಂ ನಾಮ
ತ್ರಿಪಂಚಾಶದಧಿಕಶತತಮೋಽಧ್ಯಾಯಃ

ತೊಂದರೆಗಳನ್ನನುಭವಿಸುವವರಿಗೆ ತೊಂದರೆಗಳೆಲ್ಲಾ ನಾಶವಾಗಿ ಸರ್ವಾಭೀಷ್ಟವು ನೆರವೇರಿಸುವುದಾಗಿಯೂ ಆಗಬೇಕೆಂದು ಕೇಳಿಕೊಂಡನು. ಈಶ್ವರನು ಹಾಗೆಯೇ ಆಗಲೆಂದು ಹೇಳಿದನು. ಆದುದರಿಂದ ಇದಕ್ಕೆ ಭಾವತೀರ್ಥವೆಂದು ಹೆಸರಾಯಿತು.

೧೫.೧೬. ಅಲ್ಲಿ ಸ್ನಾನಮಾಡಿದರೂ, ದಾನಮಾಡಿದರೂ ಸಹ ಎಲ್ಲಾ ಇಷ್ಟಾರ್ಥಗಳೂ ನೆರವೇರುವುವು. ಈಶ್ವರನ ಅನುಗ್ರಹದಿಂದ ಆ ಪ್ರಾಚೀನ ಬರ್ಹಿಗೆ ಮಗನಾದನು. ಗೌತಮೀತೀರದಲ್ಲಿ ಭವನ ಅನುಗ್ರಹದಿಂದ ಮಹಿಮನೆಂಬ ಮಗನಾದುದರಿಂದ ಅದಕ್ಕೆ ಭಾವತೀರ್ಥವೆಂದು ಹೆಸರಾಯಿತು. ಅಲ್ಲಿ ಪುಣ್ಯಕರವೂ, ಸರ್ವಾಭೀಷ್ಟಪ್ರದವೂ ಆದ ಎಪ್ಪತ್ತು ತೀರ್ಥಗಳಿರುವುವು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಭಾವತೀರ್ಥವೇ ಮೊದಲಾದ ಎಪ್ಪತ್ತುತೀರ್ಥ ವರ್ಣನವೆಂಬ ನೂರಐವತ್ತಮೂರನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಎಂಭತ್ತನಾಲ್ಕನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಚತುಃಪಂಚಾಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಸಹಸ್ರಕುಂಡಮಾಖ್ಯಾತಂ ತೀರ್ಥಂ ವೇದವಿದೋ ವಿದುಃ ।
ಯಸ್ಯ ಸ್ಮರಣಮಾತ್ರೇಣ ಸುಖೀ ಸಂಪದ್ಯತೇ ನರಃ ॥ ೧ ॥

ಪುರಾ ದಾಶರಥೀ ರಾಮಃ ಸೇತುಂ ಬದ್ಧ್ವಾ ಮಹಾರ್ಣವೇ ।
ಲಂಕಾಂ ದಗ್ಧ್ವಾ ರಿಪೂನ್ಹತ್ವಾ ರಾವಣಾದೀನ್ರಣೇ ಶರೈಃ ॥ ೨ ॥

ವೈದೇಹೀಂ ಚ ಸಮಾಸಾದ್ಯ ರಾಮೋ ವಚನಮಬ್ರವೀತ್ ।
ಪಶ್ಯತ್ಸು ಲೋಕಪಾಲೇಷು ತಸ್ಯಾಚಾರ್ಯೇ ಪುರಃ ಸ್ಥಿತೇ ॥ ೩ ॥

ನೂರೈವತ್ತನಾಲ್ಕನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಸಹಸ್ರಕುಂಡವೆಂಬ ತೀರ್ಥವಿರುವುದೆಂದು ವೇದಜ್ಞರಾದವರು ಹೇಳುವರು. ಇದರ ಸ್ಮರಣೆಮಾತ್ರದಿಂದಲೇ ಮನುಷ್ಯನು ಸುಖಿಯಾಗುವನು.

೨. ಪೂರ್ವದಲ್ಲಿ ದಶರಥನ ಮಗನಾದ ರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಲಂಕಾಪಟ್ಟಣವನ್ನು ಸುಟ್ಟು ರಾವಣನೇ ಮೊದಲಾದ ಶತ್ರುಗಳನ್ನು ಯುದ್ಧದಲ್ಲಿ ಕೊಂದು ಸೀತೆಯನ್ನು ಪಡೆದನು.

೩-೪. ಲೋಕಪಾಲಕರೆಲ್ಲರೂ ನೋಡುತ್ತಿರಲಾಗಿ ವಸಿಷ್ಠನು ಎದುರಿನಲ್ಲಿ ನಿಂತಿರಲು, ಅಗ್ನಿಯಲ್ಲಿ ಪರಿಶುದ್ಧಳಾದ ಸೀತೆಯನ್ನು ಕುರಿತು, ರಾಮನು

ಅಗ್ನೌ ಶುದ್ಧಿಗತಾಂ ಸೀತಾಂ ರಾಮೋ ಲಕ್ಷ್ಮಣಸಂನಿಧೌ ।
ಏಹಿ ವೈದೇಹಿ ಶುದ್ಧಾಸಿ ಅಂಕಮಾರೋಢುಮರ್ಹಸಿ ॥ ೪ ॥

ನೇತ್ಯುವಾಚ ತದಾ ಶ್ರೀಮಾನಂಗದೋ ಹನುಮಾಂಸ್ತಥಾ ।
ಅಯೋಧ್ಯಾಯಾಂ ತು ವೈದೇಹಿ ಸಾರ್ಧಂ ಯಾಮಃ ಸುಹೃಜ್ಜನೈಃ ॥ ೫ ॥

ತತ್ರ ಶುದ್ಧಿಮವಾಪ್ಯಾಥ ಪುನರ್ಭ್ರಾತೃಷು ಮಾತೃಷು ।
ಲೌಕಿಕೇಷ್ವಪಿ ಪಶ್ಯತ್ಸು ತತಃ ಶುದ್ಧಾ ನೃಪಾತ್ಮಜಾ ॥ ೬ ॥

ಅಯೋಧ್ಯಾಯಾಂ ಸುಪುಣ್ಯೇಽಹ್ನಿ ಅಂಕಮಾರೋಢುಮರ್ಹಸಿ ।
ಅಸ್ಯಾಶ್ಚರಿತ್ರವಿಷಯೇ ಸಂದೇಹಃ ಕಸ್ಯ ಜಾಯತೇ ॥ ೭ ॥

ಲೋಕಾಪವಾದಸ್ತದಪಿ ನಿರಸ್ಯಃ ಸ್ವಜನೇಷು ಹಿ ।
ತಯೋರ್ವಾಕ್ಯಮನಾದೃತ್ಯ ಲಕ್ಷ್ಮಣಃ ಸವಿಭೀಷಣಃ ॥ ೮ ॥

ಲಕ್ಷ್ಮಣನ ಎದುರಿನಲ್ಲಿ ಎಲೌ ಸೀತೆಯೇ, ನೀನೀಗ ಪರಿಶುದ್ಧಳಾಗಿರುವೆ. ನೀನಿನ್ನು ನನ್ನ ತೊಡೆಯಮೇಲೆ ಕುಳಿತುಕೊಳ್ಳಬಹುದು ಎಂದನು.

೫-೬. ಆ ಸಮಯದಲ್ಲಿ ಅಂಗದನೂ ಹನುಮಂತನೂ ಈಗ ಕೂಡದು ಎಂಬುದಾಗಿ ಹೇಳಿದರು ಮತ್ತೂ ಅಯೋಧ್ಯೆಗೆ ಸೀತಾದೇವಿಯೊಡನೆಯೂ ಸುಹೃಜ್ಜನರೊಡನೆಯೂ ಹೋಗಬೇಕು. ಅಲ್ಲಿ ತಾಯಿಯರು ಸಹೋದರರು ಲೌಕಿಕಜನರು ಇವರುಗಳೆದುರಿಗೆ ಶುದ್ಧಿಯಾದರೆ ಆಗ ಸೀತೆಯು ಶುದ್ಧಳಾಗುವಳು.

೭. ಅಯೋಧ್ಯೆಗೆ ಹೋದನಂತರ ಒಂದು ಒಳ್ಳೆಯದಿನದಲ್ಲಿ ರಾಮನ ತೊಡೆಯಮೇಲೆ ಕುಳಿತುಕೊಳ್ಳಬಹುದು. ಸೀತಾದೇವಿಯ ನಡವಳಿಕೆಯ ವಿಷಯದಲ್ಲಿ ಯಾರಿಗೆತಾನೇ ಸಂದೇಹವಿರುವುದು ? ಆದರೂ ಲೋಕಾಪವಾದಕ್ಕೆ ಹೆದರಬೇಕು. ಆದುದರಿಂದ ಸ್ವಜನರ ಎದುರಿಗೇ ಸೀತೆಯು ಶುದ್ಧಿಯಾಗಬೇಕು ಎಂದರು.

೮-೯. ಅವರಿಬ್ಬರ ಮಾತುಗಳನ್ನೂ ಲಕ್ಷಿಸದೆ ಲಕ್ಷ್ಮಣನೂ, ವಿಭೀಷಣರಾಮು, ಜಾಂಬವಂತ ಮುಂತಾದವರೆಲ್ಲರೂ ಸೀತಾದೇವಿಯನ್ನು ಕರೆದು,

ರಾಮಶ್ಚ ಜಾಂಬವಾಂಶ್ಚೈವ ತಾಮಾಹ್ವಯನ್ನೃಪಾತ್ಮಜಾಂ ।
ಸ್ವಸ್ತೀತ್ಯುಕ್ತ್ವಾ ದೇವತಾಭೀ ರಾಜ್ಞೋಽಂಕಂ ಚಾರುರೋಹ ಸಾ ॥ ೯ ॥

ಮುದಿತಾಸ್ತೇ ಯಯುಃ ಶೀಘ್ರಂ ಪುಷ್ಪಕೇಣ ವಿರಾಜತಾ ।
ಅಯೋಧ್ಯಾಂ ನಗರೀಂ ಪ್ರಾಪ್ಯ ತಥಾ ರಾಜ್ಯಂ ಸ್ವಕಂ ತು ಯತ್ ॥ ೧೦ ॥

ಮುದಿತಾಸ್ತೇಽಭವನ್ಸರ್ವೇ ಸದಾ ರಾಮಾನುವರ್ತಿನಃ ।
ತತಃ ಕತಿಪಯಾಹೇಷು ಅನಾರ್ಯೇಭ್ಯೋ ವಿರೂಪಿಕಾಂ ॥ ೧೧ ॥

ವಾಚಂ ಶ್ರುತ್ವಾ ಸ ತತ್ಯಾಜ ಗುರ್ವಿಣೀಂ ತಾಮಯೋನಿಜಾಂ ।
ಮಿಥ್ಯಾಪವಾದಮಪಿ ಹಿ ನ ಸಹಂತೇ ಕುಲೋನ್ನತಾಃ ॥ ೧೨ ॥

ವಾಲ್ಮೀಕೇರ್ಮುನಿಮುಖ್ಯಸ್ಯ ಆಶ್ರಮಸ್ಯ ಸಮೀಪತಃ ।
ತತ್ಯಾಜ ಲಕ್ಷ್ಮಣಃ ಸೀತಾಮದುಷ್ಟಾಂ ರುದತೀಂ ರುದನ್ ॥ ೧೩ ॥

ದೇವತೆಗಳೆಲ್ಲರೂ ಮಂಗಳವಾಗಲಿ ಎಂದನ್ನುತ್ತಿರಲಾಗಿ ಸೀತೆಯು ರಾಮನ ತೊಡೆಯಮೇಲೆ ಬಂದು ಕುಳಿತಳು.

೧೦. ಅನಂತರ ಎಲ್ಲರೂ ಸಂತೋಷದಿಂದ ಪ್ರಕಾಶಮಾನವಾದ ಪುಷ್ಪಕ ವಿಮಾನದಲ್ಲಿ ರಾಜ್ಯವಾದ ಅಯೋಧ್ಯೆಗೆ ಹೊರಟರು. ಆಗೆಲ್ಲರೂ ಆನಂದದಿಂದ ರಾಮನನ್ನೇ ಅನುಸರಿಸಿ ಬಂದರು.

೧೧-೧೨. ಅನಂತರ ಕೆಲವು ದಿವಸಗಳು ಕಳೆಯಲು ಒಂದಾನೊಂದು ದಿನ ರಾಮನು ಜನಾಪವಾದದ ಮಾತನ್ನು ಕೇಳಿ ಗರ್ಭಿಣಿಯಾಗಿರುವ ಆ ಸೀತೆಯನ್ನು ಬಿಟ್ಟುಬಿಟ್ಟನು. ಸತ್ಕುಲಪ್ರಸೂತರಾದವರು, ಅಪವಾದವು ಸುಳ್ಳಾಗಿದ್ದರೂ ಸಹ ಅದನ್ನು ಸಹಿಸಲಾರರು.

೧೩. ರಾಮನ ಅಪ್ಪಣೆಯಂತೆ ಲಕ್ಷ್ಮಣನು ಋಷಿಶ್ರೇಷ್ಠನಾದ ವಾಲ್ಮೀಕಿಯ ಆಶ್ರಮದ ಸಮೀಪದಲ್ಲಿ ಅಳುತ್ತಿರುವ ಸೀತೆಯನ್ನು ತಾನೂ ಅಳುತ್ತಾ ದೊಡ್ಡವರ - ಅಪ್ಪಣೆಯನ್ನು ಮೀರಬಾರದೆಂಬ ಭಯದಿಂದ ಈ ಕಾರ್ಯದಲ್ಲಿ ಪ್ರವರ್ತಿಸಿದನು.

ನೋಲ್ಲಂಘ್ಯಾಜ್ಞಾ ಗುರೂಣಾಮಿತ್ಯಸೌ ತದಕರೋದ್ಧ್ರಿಯಾ ।
ತತಃ ಕತಿಪಯಾಹೇಷು ವ್ಯತೀತೇಷು ನೃಪಾತ್ಮಜಃ ॥ ೧೪ ॥

ರಾಮಃ ಸೌಮಿತ್ರಿಣಾ ಸಾರ್ಧಂ ಹಯಮೇಧಾಯ ದೀಕ್ಷಿತಃ ।
ತತ್ರೈವಾಜಗ್ಮತುರುಭೌ ರಾಮಪುತ್ರೌ ಯಶಸ್ವಿನೌ ॥ ೧೫ ॥

ಲವಃ ಕುಶಶ್ಚ ವಿಖ್ಯಾತೌ ನಾರದಾವಿವ ಗಾಯಕೌ ।
ರಾಮಾಯಣಂ ಸಮಗ್ರಂ ತದ್ಗಂಧರ್ವಾವಿವ ಸುಸ್ವರೌ ॥ ೧೬ ॥

ರಾಮಸ್ಯ ಚರಿತಂ ಸರ್ವಂ ಗಾಯಮಾನೌ ಸಮೀಯತುಃ ।
ಯಜ್ಞವಾಟಂ ರಾಜಸುತೌ ಹೇತುಭಿರ್ಲಕ್ಷಿತೌ ತದಾ ॥ ೧೭ ॥

ರಾಮಪುತ್ರಾವುಭೌ ಶೂರೌ ವೈದೇಹ್ಯಾಸ್ತನಯಾವಿತಿ ।
ತಾವಾನೀಯ ತತಃ ಪುತ್ರಾವಭಿಷಿಚ್ಯ ಯಥಾಕ್ರಮಂ ॥ ೧೮ ॥

---

೧೪. ಈರೀತಿಯಾಗಿ ಕೆಲವು ದಿನಗಳು ಕಳೆಯಲು ರಾಜಪುತ್ರನಾದ ಶ್ರೀರಾಮನು ಅಶ್ವಮೇಧಯಾಗವನ್ನು ಮಾಡಲು ಲಕ್ಷ್ಮಣನೊಡನೆ ದೀಕ್ಷೆಯನ್ನು ಕೈಗೊಂಡನು.

೧೫. ಈ ಸಮಯದಲ್ಲಿ ಕೀರ್ತಿಶಾಲಿಗಳಾದ ಲವಕುಶರೆಂಬ ರಾಮನ ಮಕ್ಕಳು ತುಂಬುರುನಾರದರಂತೆ ಗಾನಮಾಡುತ್ತಾ ಅಲ್ಲಿಗೆ ಬಂದರು.

೧೬. ಅವರಿಬ್ಬರೂ ಗಂಧರ್ವರಂತೆ ಇಂಪಾಗಿ ರಾಮನ ಚರಿತ್ರೆಯನ್ನೆಲ್ಲಾ ಹಾಡುತ್ತಿದ್ದರು.

೧೭–೧೮. ಯಜ್ಞವನ್ನು ಮಾಡುತ್ತಿರುವ ಸ್ಥಳದಲ್ಲಿ ನಿಂತು ಇಬ್ಬರೂ ಗಾನಮಾಡುತ್ತಿರಲು ಅನೇಕ ಕಾರಣಗಳಿಂದ ಇವರು ರಾಮನ ಮಕ್ಕಳು, ಶೂರರು. ಸೀತೆಯ ಸುತರೆಂದು ತಿಳಿದು ರಾಮನು ಅವರಿಗೆ ಪಟ್ಟಾಭಿಷೇಕವನ್ನು ಮಾಡಿದನು.

ಅಂಕಾರೂಢೌ ತತಃ ಕೃತ್ವಾ ಸಸ್ವಜೇ ತೌ ಪುನಃ ಪುನಃ ।
ಸಂಸಾರದುಃಖಖಿನ್ನಾನಾಮನುಗತೀನಾಂ ಶರೀರಿಣಾಂ ॥ ೧೯ ॥

ಪುತ್ರಾಲಿಂಗನಮೇವಾತ್ರ ಪರಂ ವಿಶ್ರಾಂತಿಕಾರಣಂ ।
ಮುಹುರಾಲಿಂಗ್ಯ ತೌ ಪುತ್ರೌ ಮುಹುಃ ಸ್ವಜತಿ ಚುಂಬತಿ ॥ ೨೦ ॥

ಕಿಮಪ್ಯಂತರ್ಧ್ಯಾಯತಿ ಚ ನಿಃಶ್ವಸತ್ಯಪಿ ವೈ ಮುಹುಃ ।
ಏತಸ್ಮಿನ್ನಂತರೇ ಪ್ರಾಪ್ತಾ ರಾಕ್ಷಸಾ ಲಂಕವಾಸಿನಃ ॥ ೨೧ ॥

ಸುಗ್ರೀವೋ ಹನುಮಾಂಶ್ಚೈವ ಅಂಗದೋ ಜಾಂಬವಾಂಸ್ತಥಾ ।
ಅನ್ಯೇ ಚ ವಾನರಾಃ ಸರ್ವೇ ವಿಭೀಷಣಪುರಃಸರಾಃ ॥ ೨೨ ॥

ತೇ ಚಾಗತ್ಯ ನೃಪಂ ಪ್ರಾಪ್ತಾಃ ಸಿಂಹಾಸನಮುಪಸ್ಥಿತಂ ।
ಸೀತಾಮದೃಷ್ಟ್ವಾ ಹನುಮಾನಂಗದಃ ಕನಕಾಂಗದಃ ॥ ೨೩ ॥

೧೯-೨೦. ರಾಮನು ಅವರನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಪುನಃ ಪುನಃ ಆಲಂಗಿಸುತ್ತಿದ್ದನು. ಸಂಸಾರದುಃಖದಿಂದ ಖಿನ್ನರಾದವರಿಗೆ ಪುತ್ರರನ್ನು ಆಲಂಗಿಸುವುದೇ ಉತ್ತಮವಾದ ವಿಶ್ರಾಂತಿಯು. ಬಾರಿಬಾರಿಗೂ ಲವಕುಶರನ್ನಾಲಂಗಿಸುತ್ತಾ, ಅವರಿಗೆ ಮುತ್ತಿಡುತ್ತಾ, ಯಾವುದೋ ಪ್ರಿಯವಸ್ತುವನ್ನು ಮನಸ್ಸಿನಲ್ಲಿ ಧ್ಯಾನಿಸಿ ಬಾರಿಬಾರಿಗೂ ನಿಟ್ಟುಸುರುಬಿಡುತ್ತಾ ಇದ್ದನು.

೨೧-೨೨. ಈ ಸಮಯದಲ್ಲೇ ಲಂಕೆಯಿಂದ ವಿಭೀಷಣಾದಿ ರಾಕ್ಷಸರೂ, ಸುಗ್ರೀವ, ಹನುಮಂತ, ಅಂಗದ, ಜಾಂಬವ ಮುಂತಾದ ಇನ್ನೂ ಅನೇಕ ಕಪಿಗಳೂ ಅಯೋಧ್ಯೆಗೆ ಬಂದು ಸಿಂಹಾಸನದಲ್ಲಿ ರಾಮನು ಕುಳಿತಿರುವುದನ್ನೂ,

೨೩-೨೪. ರಾಮನ ಸಮೀಪದಲ್ಲಿ ಸೀತೆಯಿಲ್ಲದಿರುವುದನ್ನೂ ನೋಡಿ ಅಯೋನಿಜಳಾದ ಸೀತೆಯು ಎಲ್ಲಿ? ರಾಮನೊಬ್ಬನೇ ಕಾಣುತ್ತಿರುವನಲ್ಲಾ

ಕ್ವ ಗತಾಯೋನಿಜಾ ಮಾತಾ ಏಕೋ ರಾಮೋऽತ್ರ ದೃಶ್ಯತೇ ।
ರಾಮೇಣ ಸಾ ಪರಿತ್ಯಕ್ತಾ ಇತ್ಯೂಚುರ್ದ್ವಾರಪಾಲಕಾಃ ॥ ೨೪ ॥

ಪಶ್ಯತ್ಸು ಲೋಕಪಾಲೇಷು ಆರ್ಯೇ ತತ್ರ ಪ್ರವಾದಿನಿ ।
ಅಗ್ನೌ ಶುದ್ಧಿಗತಾಂ ಸೀತಾಂ ಕಿಂತು ರಾಜಾ ನಿರಂಕುಶಃ ॥ ೨೫ ॥

ಉತ್ಪನ್ನೈರ್ಲೌಕಿಕೈರ್ವಾಕ್ಯೈ ರಾಮಸ್ತ್ಯಜತಿ ತಾಂ ಪ್ರಿಯಾಂ ।
ಮರಿಷ್ಯಾವ ಇತಿ ಹ್ಯುಕ್ತ್ವಾ ಗೌತಮೀಂ ಪುನರೀಯತುಃ ॥ ೨೬ ॥

ರಾಮಸ್ತೌ ಪೃಷ್ಠತಾಭ್ಯೇತ್ಯ ಅಯೋಧ್ಯಾವಾಸಿಭಿಃ ಸಹ ।
ಆಗತ್ಯ ಗೌತಮೀಂ ತತ್ರಾಕುರ್ವಂಸ್ತೇ ಪರಮಂ ತಪಃ ॥ ೨೭ ॥

ಸ್ಮಾರಂ ಸ್ಮಾರಂ ನಿಶ್ವಸಂತಸ್ತಾಂ ಸೀತಾಂ ಲೋಕಮಾತರಂ ।
ಸಂಸಾರಾಸ್ಥಾವಿರಹಿತಾ ಗೌತಮೀಸೇವನೋತ್ಸುಕಾಃ ॥ ೨೮ ॥

ಎಂಬುದಾಗಿ ಕೇಳಲು ದ್ವಾರಪಾಲಕರು, ರಾಮನು ಸೀತೆಯನ್ನು ಪರಿತ್ಯಜಿಸಿದನು ಎಂದು ಹೇಳಿದರು.

೨೫-೨೬. ಹಿಂದೆ ಲೋಕಪಾಲಕರೆಲ್ಲರೂ ನೋಡುತ್ತಿರಲಾಗಿ ಸೀತೆಯು ಪೂಜ್ಯಳು ಮತ್ತು ಅಗ್ನಿಯುಲ್ಲಿ ಪರಿಶುದ್ಧಳಾಗಿರುವಳು ಆದರೆ ರಾಜನು ಮಾತ್ರ ಸ್ವೇಚ್ಛಾಚಾರಿಯು. ಕೇವಲ ಲೌಕಿಕವಾಕ್ಯಗಳನ್ನು ಕೇಳಿ, ರಾಮನು ಸೀತೆಯನ್ನು ಬಿಟ್ಟಿರುವನು. ಆದುದರಿಂದ ನಾವು ಸಾಯುವೆವು ಎಂದು ಹೇಳುತ್ತಾ ಹನುಮಂತನೂ ಅಂಗದನೂ ಗೌತಮೀ ತೀರ್ಥದ ದಡಕ್ಕೆ ಬಂದರು.

೨೭. ಅನಂತರ ರಾಮನು ಅಯೋಧ್ಯೆಯ ಜನರೊಡನೆ ಅವರಿಬ್ಬರನ್ನೂ ಹಿಂಬಾಲಿಸಿ ಹೋದನು. ಗೌತಮಿಯ ಕ್ಷೇತ್ರಕ್ಕೆ ಬಂದು ಎಲ್ಲರೂ ತಪಸ್ಸನ್ನು ಮಾಡಿದರು.

೨೮-೨೯. ಎಲ್ಲರೂ ಲೋಕಮಾತೃವಾದ ಸೀತೆಯನ್ನು ಸ್ಮರಿಸುತ್ತಾ ಸಂಸಾರಚಿಂತಾರಹಿತರಾಗಿ ಗೌತಮಿಯನ್ನು ಸೇವಿಸುತ್ತಿದ್ದರು. ತ್ರಿಲೋ

ಲೋಕತ್ರಯಪತಿಃ ಸಾಕ್ಷಾದ್ರಾಮೋಽನುಜಸಮನ್ವಿತಃ ।
ಪ್ರಾಪ್ತಃ ಸ್ನಾತ್ವಾ ಚ ಗೌತಮ್ಯಾಂ ಶಿವಾರಾಧನತತ್ಪರಃ ॥ ೨೯ ॥

ಪರಿತಾಪಂ ಜಹೌ ಸರ್ವಂ ಸಹಸ್ರಪರಿವಾರಿತಃ ।
ಯತ್ರ ಚಾಸೀತ್ಸ ವೃತ್ತಾಂತಃ ಸಹಸ್ರಕುಂಡಮುಚ್ಯತೇ ॥ ೩೦ ॥

ದಶಾಪರಾಣಿ ತೀರ್ಥಾನಿ ತತ್ರ ಸರ್ವಾರ್ಥದಾನಿ ಚ ।
ತತ್ರ ಸ್ನಾನಂ ಚ ದಾನಂ ಚ ಸಹಸ್ರಫಲದಾಯಕಂ ॥ ೩೧ ॥

ಯತ್ರ ಶ್ರೀಗೌತಮೀತೀರೇ ವಸಿಷ್ಠಾದಿಮುನೀಶ್ವರೈಃ ।
ಸರ್ವಾಪತ್ತಾರಕಂ ಹೋಮಮಕಾರಯದಘಾಂತಕಂ ॥ ೩೨ ॥

ಸಹಸ್ರಸಂಖ್ಯಾಯುಕ್ತೇಷು ಕುಂಡೇಷು ವಸುಧಾರಯಾ ।
ಸರ್ವಾನಪೇಕ್ಷಿತಾನ್ಕಾಮಾನವಾಪಾಸೌ ಮಹಾತಪಾಃ ॥ ೩೩ ॥

ಕಾಧಿಪತಿಯಾದ ಶ್ರೀರಾಮನೂ ಲಕ್ಷ್ಮಣನೊಡನೆ ಗೌತಮಿಯಲ್ಲಿ ಸ್ನಾನಮಾಡಿ ಶಿವನಪೂಜೆಯನ್ನು ಮಾಡಿದನು.

೩೦. ಅಲ್ಲಿದ್ದ ಸಹಸ್ರಜನರ ದುಃಖವೆಲ್ಲವೂ ನಾಶವಾಯಿತು. ಆದುದರಿಂದ ಇದಕ್ಕೆ ಸಹಸ್ರಕುಂಡವೆಂದು ಹೆಸರಾಯಿತು.

೩೧. ಇಲ್ಲಿ ಬೇರೆ ಹತ್ತು ತೀರ್ಥಗಳಿರುವುವು. ಇವುಗಳಲ್ಲಿ ಸ್ನಾನವನ್ನಾಗಲೀ ದಾನವನ್ನಾಗಲೀ ಮಾಡಿದರೆ ಸರ್ವಾರ್ಥಗಳೂ ಉಂಟಾಗುವುವು. ಸಹಸ್ರವಿಧವಾದ ಫಲವು ಬರುವುದು.

೩೨. ಆ ಗೌತಮೀ ತೀರದಲ್ಲಿ ವಸಿಷ್ಠಾದಿ ಋಷಿಶ್ರೇಷ್ಠರಿಂದ ಸಮಸ್ತ ಕಷ್ಟಗಳನ್ನೂ ಪಾಪಗಳನ್ನೂ ನಾಶಮಾಡುವ ಒಂದು ಹೋಮವನ್ನು ರಾಮನು ಮಾಡಿಸಿದನು.

೩೩–೩೪. ಅಲ್ಲಿರತಕ್ಕ ಸಾವಿರಾರುಕುಂಡಗಳಲ್ಲಿ ಹೋಮಮಾಡಿ

ಗೌತಮ್ಯಾಃ ಸರಿದಂಬಾಯಾಃ ಪ್ರಸಾದಾದ್ರಾಕ್ಷಸಾಂತಕಃ ।
ಸಹಸ್ರಕುಂಡಾಭಿಧಂ ತದಭೂತ್ತೀರ್ಥಂ ಮಹಾಫಲಂ ॥ ೩೪ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಸಹಸ್ರಕುಂಡಾದಿದಶತೀರ್ಥವರ್ಣನಂ ನಾಮ ಚತುಷ್ಪಂಚಾಶದಧಿಕಶತತಮೋಽಧ್ಯಾಯಃ

ಮಹಾತಪಸ್ವಿಯಾದ ಶ್ರೀರಾಮನು ಸಂಪತ್ಸಮೃದ್ಧಿಯನ್ನೂ ತನ್ನ ಇಷ್ಟಾರ್ಥಗಳೆಲ್ಲವನ್ನೂ ಪಡೆದನು. ನದಿಗಳಿಗೆ ಮಾತೃಸ್ವರೂಪಳಾದ ಗೌತಮಿಯ ಅನುಗ್ರಹವನ್ನೂ ಪಡೆದನು. ಆ ತೀರ್ಥಕ್ಕೆ ಸಹಸ್ರಕುಂಡವೆಂದು ಹೆಸರಾಯಿತು. ಇದು ಮಹತ್ತಾದ ಫಲವನ್ನು ಕೊಡುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಸಹಸ್ರಕುಂಡಾದಿ ದಶತೀರ್ಥವರ್ಣನವೆಂಬ ನೂರೈವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಎಂಭತ್ತೈದನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಪಂಚಪಂಚಾಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಕಪಿಲಾತೀರ್ಥಮಾಖ್ಯಾತಂ ತದೇವಾಂಗಿರಸಂ ಸ್ಮೃತಂ ।
ತದೇವಾದಿತ್ಯಮಾಖ್ಯಾತಂ ಸೈಂಹಿಕೇಯಂ ತದುಚ್ಯತೇ ॥ ೧ ॥

ಗೌತಮ್ಯಾ ದಕ್ಷಿಣೇ ಪಾರೇ ಆದಿತ್ಯಾನ್ಮುನಿಸತ್ತಮ ।
ಅಯಾಜಯನ್ನಂಗಿರಸೋ ದಕ್ಷಿಣಾಂ ತೇ ಭುವಂ ದದುಃ ॥ ೨ ॥

ಅಂಗಿರೋಭ್ಯಸ್ತದಾದಿತ್ಯಾಸ್ತಪಸೇಽಂಗಿರಸೋ ಯಯುಃ ।
ಸಾ ಭೂಮಿಃ ಸೈಂಹಿಕೀ ಭೂತ್ವಾ ಜನಾನ್ಸರ್ವಾನಭಕ್ಷಯತ್ ॥ ೩ ॥

ನೂರೈವತ್ತೈದನೆಯ ಅಧ್ಯಾಯವು

೧. ಬ್ರಹ್ಮನಿಂತೆಂದನು—ಗೌತಮಿಾತೀರದಲ್ಲಿ ಕಪಿಲಾ ಎಂಬ ತೀರ್ಥವಿರುವುದು. ಅದಕ್ಕೆ ಆಂಗಿರಸತೀರ್ಥವೆಂತಲೂ ಆದಿತ್ಯತೀರ್ಥವೆಂತಲೂ ಸೈಂಹಿಕೇಯತೀರ್ಥವೆಂತಲೂ ಹೆಸರುಗಳುಂಟು.

೨. ಎಲೈ ಮುನಿವರನೇ, ಗೌತಮಿಯ ದಕ್ಷಿಣತೀರದಲ್ಲಿ ಅಂಗಿರಸರೆಂಬ ಋಷಿಗಳು ಸೂರ್ಯನನ್ನು ಪೂಜೆಮಾಡಿದರು. ಸೂರ್ಯನು ಪ್ರಸನ್ನನಾಗಿ ಅವರಿಗೆ ದಕ್ಷಿಣಭಾಗದ ಭೂಮಿಯನ್ನು ಕೊಟ್ಟನು.

೩. ಆ ಅಂಗಿರಸರಿಗೆ ಭೂಮಿಯನ್ನು ಕೊಟ್ಟನಂತರ ಅವರೆಲ್ಲರೂ ತಪಸ್ಸಿಗೆ ಹೊರಟುಹೋದರು. ಅನಂತರ ಆ ಭೂಮಿಯು ಸೈಂಹಿಕೆಯಾಗಿ ಅಲ್ಲಿರುವ ಜನರನ್ನೆಲ್ಲಾ ತಿನ್ನಲು ಪ್ರಾರಂಭಿಸಿತು.

ತತ್ರಸುಸ್ತೇ ಜನಾಃ ಸರ್ವೇ ಅಂಗಿರೋಭ್ಯೋ ನ್ಯವೇದಯನ್ ।
ವಿಭೀತಾ ಜ್ಞಾನತೋ ಜ್ಞಾತ್ವಾ ಭುವಂ ತಾಂ ಸೈಂಹಿಕೀಮಿತಿ ॥ ೪ ॥

ಆದಿತ್ಯಾನನುಗತ್ವಾಥ ವಾಚಮಂಗಿರಸೋಽಬ್ರುವನ್ ।
ಭುವಂ ಗೃಹ್ಣಂತು ಯಾ ದತ್ತಾ ನೇತ್ಯಾದಿತ್ಯಾಸ್ತದಾಬ್ರುವನ್ ॥ ೫ ॥

ನಿವೃತ್ತಾಂ ದಕ್ಷಿಣಾಂ ನೈವ ಪ್ರತಿಗೃಹ್ಣಂತಿ ಸೂರಯಃ ।
ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾಂ ॥ ೬ ॥

ಷಷ್ಟಿರ್ವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕೃಮಿಃ ।
ಭೂಮೇಃ ಸ್ವಪರದತ್ತಾಯಾ ಹರಣಾನ್ನಾಧಿಕಂ ಕ್ವಚಿತ್ ॥ ೭ ॥

---

೪. ಜನರೆಲ್ಲರೂ ಹೆದರಿ ಈ ವಿಷಯವನ್ನು ಅಂಗಿರಸ್ಸುಗಳಿಗೆ ತಿಳಿಸಿದರು. ಈ ಭೂಮಿಯು ಸೈಂಹಿಕೆಯಾಗಿರುವುದೆಂಬುದನ್ನು ತಿಳಿದು ಹೆದರಿದವರಾದರು.

೫. ಅನಂತರ ಅಂಗಿರಸರು ಆದಿತ್ಯನ ಹತ್ತಿರಕ್ಕೆ ಹೋಗಿ ನೀನು ಕೊಟ್ಟಿರುವ ಭೂಮಿಯನ್ನು ಹಿಂದಕ್ಕೆ ತೆಗೆದುಕೊ ಎಂದು ಹೇಳಿದರು. ಆಗ ಸೂರ್ಯನು ನಾನು ತೆಗೆದುಕೊಳ್ಳುವುದಿಲ್ಲ.

೬-೭. ಜ್ಞಾನಿಯಾದವರು ಕೊಟ್ಟರತಕ್ಕ ದಕ್ಷಿಣೆಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ಭೂಮಿಯನ್ನು ತಾನೇ ದಾನವಾಗಿ ಕೊಡಲಿ, ಅಥವಾ ಮತ್ತೊಬ್ಬನು ದಾನವಾಗಿ ಕೊಡಲಿ ಅದನ್ನು ಮತ್ತೆ ಅಪಹರಿಸಿದರೆ ಅರವತ್ತು ಸಾವಿರ ವರ್ಷಗಳಕಾಲ ಅಮೇಧ್ಯದಲ್ಲಿ ಕ್ರಿಮಿಯಾಗಿ ಹುಟ್ಟುವನು. ದಾನವಾಗಿ ಕೊಟ್ಟ ಭೂಮಿಯನ್ನು ಅಪಹರಿಸಿದ ಪಾಪಕ್ಕಿಂತ ಕ್ರೂರವಾದ ಪಾಪವು ಬೇರೆ ಇಲ್ಲ. ಆದುದರಿಂದ ನಾನು ಭೂಮಿಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ.

ಪಾಪಮುಸ್ತಿ ಮಹಾರೌದ್ರಂ ನ ಸ್ವೀಕುರ್ಮಃ ಪುನಸ್ತು ತಾಂ ।
ಏವಂ ಯದಾ ಸ್ವದತ್ತಾಯಾ ಹರಣೇ ಕಿಂ ತದಾ ಭವೇತ್ ॥ ೮ ॥

ತಥಾಪಿ ಕ್ರಯರೂಪೇಣ ಗೃಹ್ಣೀಮೋ ದಕ್ಷಿಣಾಂ ಭುವಂ ।
ತಥೇತ್ಯುಕ್ತೇ ತು ತೇ ದೇವಾಃ ಕಪಿಲಾಂ ಶುಭಲಕ್ಷಣಾಂ ॥ ೯ ॥

ಗಂಗಾಯಾ ದಕ್ಷಿಣೇ ಪಾರೇ ಭುವಃ ಸ್ಥಾನೇ ತು ತಾಂ ದದುಃ ।
ಭುಕ್ತಿಮುಕ್ತಿಪ್ರದಃ ಸಾಕ್ಷಾದ್ವಿಷ್ಣುಸ್ತಿಷ್ಠತಿ ಮೂರ್ತಿಮಾನ್ ॥ ೧೦ ॥

ಕಪಿಲಾಸಂಗಮಂ ತಚ್ಚ ಸರ್ವಾಘೌಘವಿನಾಶನಂ ।
ತತ್ರಾಭವದ್ದಾನತೋಽಯಾದಾಪಗಾ ಕಪಿಲಾಭಿಧಾ ॥ ೧೧ ॥

ಸಸ್ಯವತ್ಯಾ ಅಪಿ ಭುವೋ ದಾನಾದ್ಗೋದಾನಮುತ್ತಮಂ ।
ಲೋಕರಕ್ಷಾಂ ಚಕಾರಾಸೌ ಕೃತ್ವಾ ವಿನಿಮಯಂ ಮುನಿಃ ॥ ೧೨ ॥

---

೮. ಈರೀತಿಯಾಗಿ ತಾನೇ ದಾನವಾಗಿ ಕೊಟ್ಟಿರತಕ್ಕದ್ದನ್ನು ತಾನೇ ತೆಗೆದುಕೊಳ್ಳಲು ಏನಾದೀತು ಎಂದು ಅನ್ನುವಪಕ್ಷದಲ್ಲಿ ಮಹಾಪಾಪ ಬರುವುದು. ಆದರೆ ಆ ಭೂಮಿಯನ್ನು ಕ್ರಯರೂಪವಾಗಿ ತೆಗೆದುಕೊಳ್ಳುವೆವು ಎನ್ನಲು,

೯. ಹಾಗೆಯೇ ಆಗಲಿ ಎಂದು ಆ ದೇವತೆಗಳು ಗಂಗಾನದಿಯ ದಕ್ಷಿಣ ಪಡದಲ್ಲಿ ಗೋರೂಪದಿಂದಿರುವ ಭೂಮಿಯನ್ನು ಕೊಟ್ಟರು.

೧೦- ಇಲ್ಲಿ ಸಾಕ್ಷಾದ್ವಿಷ್ಣುವು ವಾಸವಾಗಿರುವನು. ಇದು ಭಕ್ತಿಯನ್ನೂ ಮುಕ್ತಿಯನ್ನೂ ಕೊಡುವುದು. ಇಲ್ಲಿ ಕಪಿಲಾಸಂಗಮವಾದುದರಿಂದ ಎಲ್ಲಾ ಪಾಪಗಳೂ ನಾಶವಾಗುವುವು.

೧೧. ಆ ಪ್ರದೇಶದಲ್ಲಿ ಅಂಗಿರಸರು ಕಪಿಲಾ ದಾನಮಾಡಿದುದರಿಂದ ಅದಕ್ಕೆ ಕಪಿಲಾಸಂಗಮವೆಂದು ಹೆಸರಾಯಿತು. ಸಮೃದ್ಧಿಯಾಗಿ ಸಸ್ಯಗಳು ಬೆಳೆದಿರುವ ಭೂಮಿಯ ದಾನಕ್ಕಿಂತ ಇಲ್ಲಿ ಗೋದಾನವು ಶ್ರೇಷ್ಠವಾದುದು.

೧೨. ಇಲ್ಲಿ ಭೂಮಿ ದಾನಕ್ಕೆ ಬದಲು ಗೋದಾನವನ್ನು ಈ ತೀರ್ಥದಲ್ಲಿ ಮಾಡಿದುದರಿಂದ ಇದಕ್ಕೆ ಗೋತೀರ್ಥವೆಂದು ಹೆಸರಾಯಿತು.

ಯತ್ರ ತೀರ್ಥೇ ಚ ತದ್ವೃತ್ತಂ ಗೋತೀರ್ಥಂ ತದುದಾಹೃತಂ ।
ಪುಣ್ಯದಂ ತತ್ರ ತೀರ್ಥಾನಾಂ ಶತಮುಕ್ತಂ ಮನೀಷಿಭಿಃ ॥ ೧೩ ॥

ತತ್ರ ಸ್ನಾನೇನ ದಾನೇನ ಭೂಮಿದಾನಫಲಂ ಲಭೇತ್ ।
ಸಂಗತಾ ಗಂಗಯಾ ತಚ್ಚ ಕಪಿಲಾಸಂಗಮಂ ವಿದುಃ ॥ ೧೪ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಕಪಿಲಾಸಂಗಮಾದಿಶತತೀರ್ಥವರ್ಣನಂ ನಾಮ
ಪಂಚಪಂಚಾಶದಧಿಕಶತತಮೋಽಧ್ಯಾಯಃ

೧೩-೧೪. ಇಲ್ಲಿ ನೂರು ಪುಣ್ಯಕರವಾದ ತೀರ್ಥಗಳಿವೆ ಎಂದು ಜ್ಞಾನಿಗಳು ಹೇಳುವರು. ಅಲ್ಲಿ ಸ್ನಾನ, ದಾನಗಳನ್ನು ಮಾಡಿದರೆ ಭೂದಾನದ ಫಲವು ಬರುವುದು. ಇಲ್ಲಿ ಗಂಗಾನದಿಯೊಡನೆ ಕಪಿಲಾನದಿಯು ಸೇರುವುದರಿಂದ ಈ ತೀರ್ಥಕ್ಕೆ ಕಪಿಲಾಸಂಗಮವೆಂದು ಹೇಳುವರು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಕಪಿಲಾಸಂಗಮತೀರ್ಥವರ್ಣನವೆಂಬ ನೂರೈವತ್ತೈದನೆಯ ಅಧ್ಯಾಯವು ಮುಗಿದುದು

ಗೌತಮೀಯಮಾಹಾತ್ಮ್ಯೆಯಲ್ಲಿ ಎಂಭತ್ತಾರನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಷಟ್ಪಂಚಾಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಶಂಖಹ್ರದಂ ನಾಮ ತೀರ್ಥಂ ಯತ್ರ ಶಂಖಗದಾಧರಃ ।
ತತ್ರ ಸ್ನಾತ್ವಾ ಚ ತಂ ದೃಷ್ಟ್ವಾ ಮುಚ್ಯತೇ ಭವಬಂಧನಾತ್ ॥ ೧ ॥

ತತ್ರೇದಂ ವೃತ್ತಮಾಖ್ಯಾಸ್ಯೇ ಭುಕ್ತಿಮುಕ್ತಿಪ್ರದಾಯಕಂ ।
ಪುರಾ ಕೃತಯುಗಸ್ಯಾದೌ ಬ್ರಹ್ಮಣಃ ಸಾಮಗಾಯಿನಃ ॥ ೨ ॥

ಬ್ರಹ್ಮಾಂಡಾಗಾರಸಂಭೂತಾ ರಾಕ್ಷಸಾ ಬಹುರೂಪಿಣಃ ।
ಬ್ರಹ್ಮಾಣಂ ಖಾದಿತುಂ ಪ್ರಾಪ್ತಾ ಬಲೋನ್ಮತ್ತಾ ಧೃತಾಯುಧಾಃ ॥ ೩ ॥

ನೂರಐವತ್ತಾರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಶಂಖಹ್ರದವೆಂಬ ತೀರ್ಥವಿರುವುದು. ಅಲ್ಲಿ ಶಂಖವನ್ನೂ ಗದೆಯನ್ನೂ ಧರಿಸಿ ವಿಷ್ಣುವು ನೆಲಸಿರುವನು. ಇದರಲ್ಲಿ ಸ್ನಾನ ಮಾಡಿ ವಿಷ್ಣುವಿನ ದರ್ಶನವನ್ನು ಮಾಡಿದವನು ಸಂಸಾರದಿಂದ ಬಿಡುಗಡೆ ಹೊಂದುವನು.

೨-೩ ಈ ಶಂಖಹ್ರದದ ವಿಷಯವಾಗಿ ಒಂದು ವೃತ್ತಾಂತವನ್ನು ಹೇಳುವೆನು. ಇದು ಭುಕ್ತಿಯನ್ನೂ, ಮುಕ್ತಿಯನ್ನೂ ಕೊಡುವುದು. ಪೂರ್ವದಲ್ಲಿ ಕೃತಯುಗದ ಆದಿಯಲ್ಲಿ ಬ್ರಹ್ಮನು ಸಾಮವೇದವನ್ನು ಗಾನಮಾಡುತ್ತಿರಲು ಬ್ರಹ್ಮನ ಮನೆಯಲ್ಲಿ ಅನೇಕ ರೂಪವುಳ್ಳ ರಾಕ್ಷಸರು ಹುಟ್ಟಿದರು. ಅವರು ನಾನಾ ಆಯುಧಗಳನ್ನು ಧರಿಸಿ ಬಲದಿಂದ ಮದಿಸಿದವರಾಗಿ ಬ್ರಹ್ಮನನ್ನೇ ತಿನ್ನಲು ಬಂದರು.

ತದಾಹಮಬ್ರವಂ ವಿಷ್ಣುಂ ರಕ್ಷಣಾಯ ಜಗದ್ಗುರುಂ ।
ಸ ವಿಷ್ಣುಸ್ತಾನಿ ರಕ್ಷಾಂಸಿ ಹಂತುಂ ಚಕ್ರೇಣ ಚೋದ್ಯತಃ ॥ ೪ ॥

ಛಿತ್ವಾ ಚಕ್ರೇಣ ರಕ್ಷಾಂಸಿ ಶಂಖಮಾಪೂರಯತ್ತದಾ ।
ನಿಷ್ಕಂಟಕಂ ತಲಂ ಕೃತ್ವಾ ಸ್ವರ್ಗಂ ನಿರ್ವೈರಮೇವ ಚ ॥ ೫ ॥

ತತೋ ಹರ್ಷಪ್ರಕರ್ಷೇಣ ಶಂಖಮಾಪೂರಯದ್ಧರಿಃ ।
ತತೋ ರಕ್ಷಾಂಸಿ ಸರ್ವಾಣಿ ಹ್ಯನೀನಶುರಶೇಷತಃ ॥ ೬ ॥

ಯತ್ರೈತದ್ವೃತ್ತಮಖಿಲಂ ವಿಷ್ಣುಶಂಖಪ್ರಭಾವತಃ ।
ಶಂಖತೀರ್ಥಂ ತು ತತ್ಪ್ರೋಕ್ತಂ ಸರ್ವಕ್ಷೇಮಕರಂ ನೃಣಾಂ ॥ ೭ ॥

ಸರ್ವಾಭೀಷ್ಟಪ್ರದಂ ಪುಣ್ಯಂ ಸ್ಮರಣಾನ್ಮಂಗಲಪ್ರದಂ ।
ಆಯುರಾರೋಗ್ಯಜನನಂ ಲಕ್ಷ್ಮೀಪುತ್ರಪ್ರವರ್ಧನಂ ॥ ೮ ॥

---

೪. ಅನಂತರ ನನ್ನನ್ನು ಕಾಪಾಡಬೇಕೆಂದು ಜಗದ್ಗುರುವಾದ ವಿಷ್ಣುವನ್ನು ಕೇಳಿಕೊಂಡೆನು. ಆಗ ವಿಷ್ಣುವು ಆ ರಾಕ್ಷಸರನ್ನು ಕೊಲ್ಲಲು ಚಕ್ರವನ್ನು ಹಿಡಿದು ಹೊರಟನು.

೫-೭. ರಾಕ್ಷಸರನ್ನೆಲ್ಲಾ ಚಕ್ರದಿಂದ ಕೊಂದು ಶಂಖವನ್ನೂದಿದನು. ಭೂಮಿಯಲ್ಲಿಯೂ, ಸ್ವರ್ಗದಲ್ಲಿಯೂ ಇರುವ ರಾಕ್ಷಸರನ್ನೆಲ್ಲಾ ಸಂಹರಿಸಿ ಆನಂದದಿಂದ ವಿಷ್ಣುವು ಪುನಃ ಶಂಖವನ್ನೂದಿದನು. ಅನಂತರ ಉಳಿದ ರಾಕ್ಷಸರನ್ನೆಲ್ಲಾ ಕೊಂದುಹಾಕಿದನು. ವಿಷ್ಣುವಿನ ಶಂಖದ ಪ್ರಭಾವದಿಂದ ಇವೆಲ್ಲವೂ ನಡೆದುದರಿಂದ ಇದಕ್ಕೆ ಶಂಖತೀರ್ಥವೆಂದು ಹೆಸರಾಯಿತು ಇದರಲ್ಲಿ ಸ್ನಾನ ಮಾಡಿದರೆ ಜನರಿಗೆ ಎಲ್ಲಾ ವಿಧದಲ್ಲಿಯೂ ಕ್ಷೇಮವುಂಟಾಗುವುದು.

೮. ಈ ಶಂಖಹ್ರದದ ಸ್ಮರಣೆಯಿಂದ ಸರ್ವೇಷ್ಟಾರ್ಥಸಿದ್ಧಿಯಾಗುವುದು. ಪುಣ್ಯವು ಬರುವುದು. ಮಂಗಳವುಂಟಾಗುವುದು. ಆಯುಸ್ಸು, ಆರೋಗ್ಯ, ಧನಸಂಪತ್ತು ಹೆಚ್ಚಾಗುವುದು.

ಸ್ಮರಣಾತ್ಪಠನಾದ್ವಾಪಿ ಸರ್ವಕಾಮಾನವಾಪ್ನುಯಾತ್ ।
ತೀರ್ಥಾನಾಮಯುತಂ ತತ್ರ ಸರ್ವಪಾಪನುದಂ ಮುನೇ ॥ ೯ ॥
ತೀರ್ಥಾನ್ಯಯುತಸಂಖ್ಯಾನಿ ಸರ್ವಪಾಪಹರಾಣಿ ಚ ।
ಯೇಷಾಂ ಪ್ರಭಾವಂ ಜಾನಾತಿ ವಕ್ತುಂ ದೇವೋ ಮಹೇಶ್ವರಃ ॥ ೧೦ ॥
ಪಾಪಕ್ಷಯಪ್ರತಿನಿಧಿರ್ನೈತೇಭ್ಯೋಽಸ್ತ್ಯಪರಃ ಕ್ವಚಿತ್ ॥ ೧೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಶಂಖತೀರ್ಥಾದ್ಯಯುತತೀರ್ಥವರ್ಣನಂ ನಾಮ
ಷಟ್ಪಂಚಾಶದಧಿಕಶತತಮೋಽಧ್ಯಾಯಃ

---

೯. ಈ ಶಂಖಹ್ರದದ ಸ್ಮರಣೆಯನ್ನು ಮಾಡಿದರೂ, ಇದನ್ನು ಓದಿದರೂ, ತನಗಿಷ್ಟವಾದುದನ್ನೆಲ್ಲವನ್ನೂ ಪಡೆಯುವನು. ಅಲ್ಲಿ ಹತ್ತು ಸಾವಿರ ತೀರ್ಥಗಳಿರುವುವು. ಅವುಗಳಲ್ಲಿ ಸ್ನಾನಮಾಡಿದರೆ ಎಲ್ಲಾ ಪಾಪಗಳೂ ನಾಶವಾಗುವುವು.

೧೦-೧೧. ಇಲ್ಲಿರುವ ಹತ್ತುಸಾವಿರ ತೀರ್ಥಗಳು ಸರ್ವಪಾಪಗಳನ್ನೂ ನಾಶಮಾಡುವುವು. ಇವುಗಳ ಪ್ರಭಾವವನ್ನು ತಿಳಿಯಲು ದೇವನಾದ ಮಹೇಶ್ವರನೇ ಶಕ್ತನಲ್ಲದೆ ಮತ್ತಾರಿಗೂ ಸಾಧ್ಯವಿಲ್ಲ. ಇವುಗಳಂತೆ ಪಾಪಗಳನ್ನು ನಾಶಮಾಡುವ ಬೇರೊಂದು ತೀರ್ಥವಿಲ್ಲ.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಶಂಖತೀರ್ಥಾದ್ಯಯುತತೀರ್ಥವರ್ಣನವೆಂಬ ನೂರೈವತ್ತಾರನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ಎಂಭತ್ತೇಳನೆಯ ಅಧ್ಯಾಯವು

ಶ್ರೀಃ

ಅಥ ಮಹಾ ಪುರಾಣೇ ಬ್ರಾಹ್ಮೇ

ಸಪ್ತಪಂಚಾಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಕಿಷ್ಕಿಂಧಾತೀರ್ಥಮಾಖ್ಯಾತಂ ಸರ್ವಕಾಮಪ್ರದಂ ನೃಣಾಂ ।
ಸರ್ವಪಾಪಪ್ರಶಮನಂ ಯತ್ರ ಸಂನಿಹಿತೋ ಭವಃ ॥ ೧ ॥

ತಸ್ಯ ಸ್ವರೂಪಂ ವಕ್ಷ್ಯಾಮಿ ಯತ್ನೇನ ಶೃಣು ನಾರದ ।
ಪುರಾ ದಾಶರಥೀ ರಾಮೋ ರಾವಣಂ ಲೋಕರಾವಣಂ ॥ ೨ ॥

ಕಿಷ್ಕಿಂಧಾವಾಸಿಭಿಃ ಸಾರ್ಧಂ ಜಘಾನ ರಣಮೂರ್ಧನಿ ।
ಸಪುತ್ರಂ ಸಬಲಂ ಹತ್ವಾ ಸೀತಾಮಾದಾಯ ಶತ್ರುಹಾ ॥ ೩ ॥

ನೂರೈವತ್ತೇಳನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಕಿಷ್ಕಿಂಧಾ ಎಂಬ ಒಂದು ತೀರ್ಥವಿರುವುದು. ಅದು ಸರ್ವರ ಇಷ್ಟಾರ್ಥಗಳನ್ನು ನೆರವೇರಿಸುವುದು. ಎಲ್ಲಾ ಪಾಪಗಳನ್ನೂ ನಾಶಮಾಡುವುದು. ಇಲ್ಲಿ ಈಶ್ವರನು ಸದಾ ವಾಸವಾಗಿರುವನು.

೨. ಎಲೈ ನಾರದನೇ, ಆ ತೀರ್ಥದ ಮಹಿಮೆಯನ್ನು ಹೇಳುವೆನು ಕೇಳು. ಪೂರ್ವದಲ್ಲಿ ದಶರಥಪುತ್ರನಾದ ರಾಮನು ಪ್ರಪಂಚಕ್ಕೆ ಭಯಂಕರನಾದ ರಾವಣನನ್ನು ಕಿಷ್ಕಿಂಧಾವಾಸಿಗಳ ಸಹಾಯದಿಂದ ಯುದ್ಧದಲ್ಲಿ ಕೊಂದನು.

೩–೪. ರಾವಣನ ಪುತ್ರನನ್ನೂ ಅವನ ಸೈನ್ಯವನ್ನೂ ಕೊಂದು ಸೀತೆಯನ್ನು ಕರೆದುಕೊಂಡು ರಾಮನು ಲಕ್ಷ್ಮಣ, ಬಲಶಾಲಿಗಳಾದ ಕಪಿಗಳು,

ಭ್ರಾತ್ರಾ ಸೌಮಿತ್ರಿಣಾ ಸಾರ್ಧಂ ವಾನರೈಶ್ಚ ಮಹಾಬಲೈಃ ।
ವಿಭೀಷಣೇನ ಬಲಿನಾ ದೇವ್ಯೈಃ ಪ್ರತ್ಯಾಗತೋ ನೃಪಃ ॥ ೪ ॥

ಕೃತಸ್ವಸ್ತ್ಯಯನಃ ಶ್ರೀಮಾನ್ಪುಷ್ಪಕೇಣ ವಿರಾಜಿತಃ ।
ಯದಾಸೀದ್ಧನರಾಜಸ್ಯ ಕಾಮಗೇನಾಶುಗಾಮಿನಾ ॥ ೫ ॥

ಅಯೋಧ್ಯಾಮಗಮನ್ಸರ್ವೇ ಗಚ್ಛನ್ಗಂಗಾಮುಪಶ್ಯತ ।
ರಾಮೋ ವಿರಾಮಃ ಶತ್ರೂಣಾಂ ಶರಣ್ಯಃ ಶರಣಾರ್ಥಿನಾಂ ॥ ೬ ॥

ಗೌತಮೀಂ ತು ಜಗತ್ಪುಣ್ಯಾಂ ಸರ್ವಕಾಮಪ್ರದಾಯಿನೀಂ ।
ಮನೋನಯನಸಂತಾಪನಿವಾರಣಪರಾಯಣಾಂ ॥ ೭ ॥

ತಾಂ ದೃಷ್ಟ್ವಾ ನೃಪತಿಃ ಶ್ರೀಮಾನ್ಗಂಗಾತೀರಮಥಾವಿಶತ್ ।
ತಾಂ ದೃಷ್ಟ್ವಾ ಪ್ರಾಹ ನೃಪತಿರ್ಹರ್ಷಗದ್ಗದಯಾ ಗಿರಾ ।
ಹರೀನ್ಸರ್ವಾನಥಾಮಂತ್ರ್ಯ ಹನುಮತ್ಪ್ರಮುಖಾನ್ಮುನೇ ॥ ೮ ॥

ಬಲಿಷ್ಠನಾದ ವಿಭೀಷಣ, ದೇವತೆಗಳು ಇವರುಗಳೊಡನೆ ಅಯೋಧ್ಯೆಗೆ ಬಂದನು.

೫. ಮಂಗಳಯುಕ್ತನಾದ ಶ್ರೀರಾಮನು ಎಲ್ಲರೊಡಗೂಡಿ ಕುಬೇರನು ಕೊಟ್ಟ, ಜಾಗ್ರತೆಯಾಗಿ ತನ್ನಿಷ್ಟಬಂದಕಡೆಗೆ ಹೋಗುವ, ಪ್ರಕಾಶಮಾನವಾದ ಪುಷ್ಕರವಿಮಾನದಲ್ಲಿ ಕುಳಿತು ಅಯೋಧ್ಯೆಗೆ ಹೊರಟನು. ಬರುತ್ತಾ ದಾರಿಯಲ್ಲಿ ಗಂಗಾನದಿಯನ್ನು ಕಂಡನು.

೬-೭. ದುಷ್ಟಶಿಕ್ಷಕ, ಶಿಷ್ಟರಕ್ಷಕನಾದ ರಾಮನು ಜಗತ್ಪಾವನಳಾದ ಗೌತಮಿಯ ತೀರಕ್ಕೆ ಹೋದನು. ಆ ಗೌತಮೀತೀರ್ಥವು ಸರ್ವಾಭೀಷ್ಟವನ್ನು ನೆರವೇರಿಸುವುದು. ಮನಸ್ಸಿಗೂ, ಕಣ್ಣಿಗೂ ಉಂಟಾಗಿರುವ ಸಂತಾಪವನ್ನು ನಿವಾರಿಸಿ ಆನಂದವನ್ನುಂಟುಮಾಡುವುದು.

೮. ಅದನ್ನು ನೋಡಿ ಶ್ರೀರಾಮನು ಹನುಮಂತನೇ ಮೊದಲಾದ ಕಪಿಗಳೆಲ್ಲರನ್ನೂ ಕರೆದು ಹರ್ಷಾತಿಶಯದಿಂದ ಗದ್ಗದವಾದ ಧ್ವನಿಯಲ್ಲಿ ಈರೀತಿಯಾಗಿ ಹೇಳಿದನು.

|| ರಾಮ ಉವಾಚ ||

ಅಸ್ಯಾಃ ಪ್ರಭಾವಾದ್ಧರಯೋ ಯೋऽಸೌ ಮಮ ಪಿತಾ ಪ್ರಭುಃ ।
ಸರ್ವಪಾಪವಿನಿರ್ಮುಕ್ತಸ್ತತೋ ಯಾತಸ್ತ್ರಿವಿಷ್ಟಪಂ || ೯ ||

ಇಯಂ ಜನಿತ್ರೀ ಸಕಲಸ್ಯ ಜಂತೋ-
ರ್ಭುಕ್ತಿಪ್ರದಾ ಮುಕ್ತಿಮಥಾಪಿ ದದ್ಯಾತ್ ।
ಪಾಪಾನಿ ಹನ್ಯಾದಪಿ ದಾರುಣಾನಿ
ಕಾನ್ಯಾನಯಾಸ್ತ್ಯತ್ರ ನದೀ ಸಮಾನಾ || ೧೦ ||

ಹತಾನಿ ಶಶ್ವದ್ದುರಿತಾನಿ ಚೈವ
ಅಸ್ಯಾಃ ಪ್ರಭಾವಾದರಯಃ ಸಖಾಯಃ ।
ವಿಭೀಷಣೋ ಮೈತ್ರಮುಪೈತಿ ನಿತ್ಯಂ
ಸೀತಾ ಚ ಲಬ್ಧಾ ಹನುಮಾಂಶ್ಚ ಬಂಧುಃ || ೧೧ ||

ಲಂಕಾ ಚ ಭಗ್ನಾ ಸಗಣಂ ಹಿ ರಕ್ಷೋ
ಹತಂ ಹಿ ಯಸ್ಯಾಃ ಪರಿಸೇವನೇನ ।

---

೯. ಎಲೈ ವಾನರರೇ, ನಮ್ಮ ತಂದೆಯು ಈ ಗೌತಮಿಯ ಪ್ರಭಾವದಿಂದ ಸರ್ವಪಾಪಗಳಿಂದ ವಿಮುಕ್ತನಾಗಿ ಸ್ವರ್ಗವನ್ನು ಪಡೆದನು.

೧೦. ಸಕಲಪ್ರಾಣಿಗಳೂ ಮಾತೆಯಾದ ಈ ಗೌತಮಿಯು ಭುಕ್ತಿಯನ್ನೂ ಮುಕ್ತಿಯನ್ನೂ ಕೊಡುವುದು. ಭಯಂಕರವಾದ ಪಾಪಗಳನ್ನೂ ನಾಶಮಾಡುವುದು. ಇಂತಹ ನದಿಗೆ ಸಮಾನವಾದ ನದಿಯು ಯಾವುದುತಾನೇ ಇರುವುದು ?

೧೧. ಇದರ ಪ್ರಭಾವದಿಂದ ಪಾಪಗಳೆಲ್ಲವೂ ಜಾಗ್ರತೆಯಾಗಿ ನಾಶವಾಗುವುವು. ಶತ್ರುಗಳೆಲ್ಲರೂ ಸ್ನೇಹಿತರಾಗುವರು. ವಿಭೀಷಣನು ನಿತ್ಯ ಸ್ನೇಹಿತನಾದನು. ಸೀತೆಯೂ ಸಿಕ್ಕಿದಳು. ಹನುಮಂತನೂ ಆಪ್ತನಾದನು.

೧೨. ಈ ಗೌತಮಿಯುನ್ನು ಸೇವಿಸಿದುದರಿಂದ ಲಂಕೆಯುನ್ನು ಸುಟ್ಟು

ಯಾಂ ಗೌತಮೋ ದೇವವರಂ ಪ್ರಪೂಜ್ಯ
ಶಿವಂ ಶರಣ್ಯಂ ಸಜಟಾಮವಾಪ ॥ ೧೨ ॥

ಸೇಯಂ ಜನಿತ್ರೀ ಸಕಲೇಪ್ಸಿತಾನಾ-
ಮಮಂಗಲಾನಾಮಪಿ ಸಂನಿಹಂತ್ರೀ ।
ಜಗತ್ಪವಿತ್ರೀಕರಣೈಕದಕ್ಷಾ
ದೃಷ್ಟಾದ್ಯ ಸಾಕ್ಷಾತ್ಸರಿತಾಂ ಸವಿತ್ರೀ ॥ ೧೩ ॥

ಕಾಯೇನ ವಾಚಾ ಮನಸಾ ಸದೈನಾಂ
ವ್ರಜಾಮಿ ಗಂಗಾಂ ಶರಣಂ ಶರಣ್ಯಾಂ ॥ ೧೪ ॥

॥ ಬ್ರಹ್ಮೋವಾಚ ॥

ಏತತ್ಸಮಾಕರ್ಣ್ಯ ವಚೋ ನೃಪಸ್ಯ
ತತ್ರಾಪ್ಲುವನ್ಹರಯಃ ಸರ್ವ ಏವ ।
ಪೂಜಾಂ ಚಕ್ರುರ್ವಿಧಿವತ್ತೇ ಪೃಥಕ್ಚ
ಪುಷ್ಪೈರನೇಕೈಃ ಸರ್ವಲೋಕೋಪಹಾರೈಃ ॥ ೧೫ ॥

ಸೈನಿಕರೊಡನೆ ರಾಕ್ಷಸರನ್ನು ಕೊಂದೆನು. ಗೌತಮನು ಇದನ್ನು ಸೇವಿಸಿ ಜಟೆಯನ್ನು ಧರಿಸಿರುವ ಈಶ್ವರನನ್ನು ಪೂಜಿಸಿ ಅವನನ್ನು ಶರಣು ಹೊಂದಿದನು.

೧೩-೧೪. ಈ ಗೌತಮಿಯು ಸಕಲ ಇಷ್ಟಾರ್ಥಗಳನ್ನೂ ನೆರವೇರಿಸುವುದು. ಅಮಂಗಳವನ್ನು ನಾಶಮಾಡುವುದು. ಜಗತ್ತಿನ ಜನರನ್ನು ಪವಿತ್ರರನ್ನಾಗಿ ಮಾಡುವುದರಲ್ಲಿಯೇ ಸಮರ್ಥಳಾದ ಈ ಗೌತಮಿಯನ್ನು ನಾನೀಗ ನೋಡಿದೆನು. ಇದು ನದಿಗಳಿಗೆಲ್ಲಾ ತಾಯಿಯು. ಮನೋವಾಕ್ಕಾಯಗಳಿಂದ ಈ ಗಂಗಾನದಿಯನ್ನು ಶರಣು ಹೊಂದುವೆನು ಎಂದನು.

೧೫. ರಾಮನು ಹೇಳಿದ ಮಾತನ್ನು ಕೇಳಿ ವಾನರರೆಲ್ಲರೂ ಆ ನದಿಯಲ್ಲಿ ಸ್ನಾನಮಾಡಿ ಅನೇಕ ಪುಷ್ಪಗಳಿಂದಲೂ ಉಪಹಾರಗಳಿಂದಲೂ ವಿಧಿವತ್ತಾಗಿ ಪೂಜೆಮಾಡಿದರು.

ಸಂಪೂಜ್ಯ ಶರ್ವಂ ನೃಪತಿರ್ಯಥಾವ-
ತ್ಸ್ತುತ್ವಾ ವಾಕ್ಯೈಃ ಸರ್ವಭಾವೋಪಯುಕ್ತೈಃ ।
ತೇ ವಾನರಾ ಮುದಿತಾಃ ಸರ್ವ ಏವ
ನೃತ್ಯಂ ಚ ಗೀತಂ ಚ ತಥೈವ ಚಕ್ರುಃ ॥ ೧೬ ॥

ಸುಖೋಷಿತಸ್ತಾಂ ರಜನೀಂ ಮಹಾತ್ಮಾ
ಪ್ರಿಯಾನುಯುಕ್ತಃ ಸಂವೃತಃ ಪ್ರೇಮವದ್ಭಿಃ ।
ದುಃಖಂ ಜಹೌ ಸರ್ವಮಮಿತ್ರಸಂಭವಂ
ಕಿಂ ನಾಪ್ಯತೇ ಗೌತಮೀಸೇವನೇನ ॥ ೧೭ ॥

ಸವಿಸ್ಮಯಃ ಪಶ್ಯತಿ ಭೃತ್ಯವರ್ಗಂ
ಗೋದಾವರೀಂ ಸ್ತೌತಿ ಚ ಸಂಪ್ರಹೃಷ್ಟಃ ।
ಸಂಮಾನಯನ್ಭೃತ್ಯಗಣಂ ಸಮಗ್ರ-
ಮವಾಪ ರಾಮಃ ಕಮಪಿ ಪ್ರಮೋದಂ ।
ಪುನಃ ಪ್ರಭಾತೇ ವಿಮಲೇ ತು ಸೂರ್ಯೇ
ವಿಭೀಷಣೋ ದಾಶರಥಿಂ ಬಭಾಷೇ ॥ ೧೮ ॥

---

೧೬. ಅನಂತರ ರಾಮನೂ ಯಥಾವಿದಿಯಾಗಿ ಈಶ್ವರನನ್ನು ಪೂಜಿಸಿ ಭಾವಪೂರ್ಣವಾದ ವಾಕ್ಯಗಳಿಂದ ಸ್ತೋತ್ರಮಾಡಿದನು. ಆ ವಾನರರೆಲ್ಲಾ ಬಹಳ ಸಂತೋಷದಿಂದ ಹಾಡುತ್ತಾ ಕುಣಿದಾಡಿದರು.

೧೭. ಅನಂತರ ಆ ರಾತ್ರೆ ಸುಖವಾಗಿ ಅಲ್ಲಿಯೇ ಇದ್ದು ಪ್ರಿಯಳಾದ ಸೀತೆಯೊಡನೆಯೂ, ಸ್ನೇಹಿತರೊಡನೆಯೂ ಹೊರಟನು. ಶತ್ರುಗಳಿಂದ ಉಂಟಾದ ದುಃಖವನ್ನು ಮರೆತುಬಿಟ್ಟನು. ಗೌತಮಿಯ ಸೇವನದಿಂದ ಯಾವುದು ತಾನೇ ದುರ್ಲಭವು?

೧೮. ಆಶ್ಚರ್ಯದಿಂದ ರಾಮನು ತನ್ನ ಭೃತ್ಯವರ್ಗವನ್ನೆಲ್ಲಾ ನೋಡುತ್ತಾ ಸಂತೋಷದಿಂದ ಗೋದಾವರಿಯನ್ನು ಸ್ತೋತ್ರಮಾಡಿದನು. ಭೃತ್ಯಗಣವನ್ನೆಲ್ಲಾ ಗೌರವಿಸುತ್ತಾ ಅನಿರ್ವಚನೀಯವಾದ ಆನಂದವನ್ನು ಪಡೆದನು. ಪುನಃ ಪ್ರಾತಃಕಾಲವಾಗಲು ಸೂರ್ಯನು ಪ್ರಕಾಶಿಸುತ್ತಿರುವಾಗ ವಿಭೀಷಣನು ರಾಮನನ್ನು ಕುರಿತು,

॥ ವಿಭೀಷಣ ಉವಾಚ ॥
ನಾದ್ಯಾಪಿ ತೃಪ್ತಾಸ್ತು ಭವಾಮ ತೀರ್ಥೇ
ಕಂಚಿಚ್ಚ ಕಾಲಂ ನಿವಸಾಮ ಚಾತ್ರ ।
ವತ್ಸ್ಯಾಮ ಚಾತ್ರೈವ ಪರಾಶ್ಚತಸ್ರೋ
ರಾತ್ರೀರಥೋ ಯಾಮ ವೃತಾಸ್ತ್ವಯೋಧ್ಯಾಂ ॥ ೧೯ ॥

॥ ಬ್ರಹ್ಮೋವಾಚ ॥
ತಸ್ಯಾಥ ವಾಕ್ಯಂ ಹರಯೋಽನುಮೇನಿರೇ
ತಥೈವ ರಾತ್ರೀರಪರಾಶ್ಚತಸ್ರಃ ।
ಸಂಪೂಜ್ಯ ದೇವಂ ಸಕಲೇಶ್ವರಂ ತಂ
ಭ್ರಾತೃಪ್ರಿಯಂ ತೀರ್ಥಮಥೋ ಜಗಾಮ ॥ ೨೦ ॥

ಸಿದ್ಧೇಶ್ವರಂ ನಾಮ ಜಗತ್ಪ್ರಸಿದ್ಧಂ
ಯಸ್ಯ ಪ್ರಭಾವಾತ್ಪ್ರಬಲೋ ದಶಾಸ್ಯಃ ।
ಏವಂ ತು ಪಂಚಾಹಮಥೋಷಿರೋ ತೇ
ಸ್ವಂ ಸ್ವಂ ಪ್ರತಿಷ್ಠಾಪಿತಲಿಂಗಮರ್ಚ್ಯ ॥ ೨೧ ॥

---

೧೯. ಎಷ್ಟಾದರೂ ನಮಗಿನ್ನೂ ತೃಪ್ತಿಯಾಗಿಲ್ಲ. ಆದುದರಿಂದ ಈ ತೀರ್ಥದಲ್ಲಿಯೇ ಇನ್ನೂ ನಾಲ್ಕು ರಾತ್ರಿಗಳನ್ನು ಕಳೆಯೋಣ, ಅನಂತರ ಅಯೋಧ್ಯೆಗೆ ಹಿಂತಿರುಗೋಣ ಎಂದು ಹೇಳಿದನು.

೨೦. ವಾನರರೆಲ್ಲರೂ ವಿಭೀಷಣನ ಮಾತನ್ನೇ ಅನುಮೋದಿಸಿದರು. ಅನಂತರ ನಾಲ್ಕು ರಾತ್ರಿಗಳು ಅಲ್ಲಿಯೇ ಇದ್ದರು. ಸರ್ವೇಶ್ವರನಾದ ಶಿವನನ್ನು ಪೂಜಿಸಿ ಅನಂತರ ಭ್ರಾತೃಪ್ರಿಯವೆಂಬ ತೀರ್ಥಕ್ಕೆ ಹೋದರು.

೨೧. ಅಲ್ಲಿ ಸಿದ್ಧೇಶ್ವರನೆಂಬ ಜಗತ್ಪ್ರಸಿದ್ಧನಾದ ಈಶ್ವರನನ್ನು ಪೂಜಿಸಿದನು. ಇದರ ಪ್ರಭಾವದಿಂದಲೇ ರಾವಣನು ಅಷ್ಟು ಪ್ರಬಲನಾಗಿದ್ದುದು. ಅಲ್ಲಿ ಅವರೆಲ್ಲರೂ ತಮತಮಗೆ ಬೇಕಾದ ಲಿಂಗಗಳನ್ನು ಸ್ಥಾಪಿಸಿಕೊಂಡು ಪೂಜೆ ಮಾಡುತ್ತಾ ಐದು ದಿನಗಳು ಅಲ್ಲಿಯೇ ವಾಸವಾಗಿದ್ದರು.

ಶುಶ್ರೂಷಣಂ ತತ್ರ ಕರೋತಿ ವಾಯೋಃ
ಸುತೋಽನುಗಾಮೀ ಹನುಮಾನ್ನೃಪಸ್ಯ ।
ಗಚ್ಛನ್ನೃಪೇಂದ್ರೋ ಹನುಮಂತಮಾಹ
ಲಿಂಗಾನಿ ಸರ್ವಾಣಿ ವಿಸರ್ಜಯಸ್ವ ॥ ೨೨ ॥

ಮತ್ಸ್ಥಾಪಿತಾನ್ಯುತ್ತಮಮಂತ್ರವಿದ್ಭಿ-
ಸ್ತಥೇತರೈಃ ಶಂಕರಕಿಂಕರೈಶ್ಚ ।
ನೋದ್ವಾಸ್ಯ ಪೂಜಾಂ ಪರಶಂಕರೇಣ
ಬಾಹ್ಯಂ ಸಮಾಯೋಜ್ಯಮಹೋ ಭವಸ್ಯ ॥ ೨೩ ॥

ತಿಷ್ಠಂತಿ ಸುಸ್ಥಾಸ್ತದನಾದರೇಣ
ತೇ ಖಡ್ಗಪತ್ರಾದಿಷು ಸಂಭವಂತಿ ।
ಯೇಽಶ್ರದ್ಧದಾನಾಃ ಶಿವಲಿಂಗಪೂಜಾಂ
ವಿಧಾಯ ಕೃತ್ಯಂ ನ ಸಮಾಚರಂತಿ ॥ ೨೪ ॥

---

೨೨. ಅಲ್ಲಿ ವಾಯುಪುತ್ರನಾದ ಹನುಮಂತನು ಶ್ರೀರಾಮನ ಸೇವೆಯನ್ನು ಮಾಡುತ್ತಿದ್ದನು. ಶ್ರೀರಾಮನು ಅಲ್ಲಿ ತಿರುಗಾಡುತ್ತಾ ಹನುಮಂತನನ್ನು ಕುರಿತು ಪೂಜೆಯು ಮುಗಿದಿರುವುದರಿಂದ ಲಿಂಗಗಳೆಲ್ಲವನ್ನೂ ವಿಸರ್ಜನೆಮಾಡು.

೨೩. ಈಶ್ವರನ ಭಕ್ತರಿಂದಲೂ ಮತ್ತು ಇತರರಿಂದಲೂ, ನನ್ನಿಂದಲೂ ಮಂತ್ರಪೂರ್ವಕವಾಗಿ ಸ್ಥಾಪಿಸಿರುವ ಲಿಂಗಗಳನ್ನು ವಿಸರ್ಜನೆ ಮಾಡು ಎಂದು ಹೇಳಿದನು.

೨೪. ಯಾರು ಈಶ್ವರನ ವಿಷಯದಲ್ಲಿ ಅನಾದರವನ್ನು ತೋರಿಸುವರೋ ಅವರು ಖಡ್ಗಪತ್ರವೇ ಮುಂತಾದ ನರಕದಲ್ಲಿ ಬೀಳುವರು. ಯಾರು ಶಿವಲಿಂಗ ಪೂಜೆಯಲ್ಲಿ ಅಪನಂಬಿಕೆಯನ್ನಿಡುವರೋ ಮತ್ತು ಪೂಜಾಚರಣೆಯನ್ನು ಮಾಡುವುದಿಲ್ಲವೋ ಅವರನ್ನು ಯಮಕಿಂಕರರು ಸಕಲ ದುರ್ಗತಿಗಳಲ್ಲಿಯೂ ಪೀಡಿಸುವರು.

ಯಥೋಚಿತಂ ತೇ ಯಮಕಿಂಕರೈರ್ಹಿ
ಪಚ್ಯಂತ ಏವಾಖಿಲದುರ್ಗತೀಷು ।
ರಾಮಾಜ್ಞಯಾ ವಾಯುಸುತೋ ಜಗಾಮ
ದೋರ್ಭ್ಯಾಂ ನ ಚೋತ್ಪಾಟಯಿತುಂ ಶಶಾಕ ॥ ೨೫ ॥

ತತಃ ಸ್ವಪುಚ್ಛೇನ ಗ್ರಹೀತುಕಾಮಃ
ಸಂವೇಷ್ಟ್ಯ ಲಿಂಗಂ ತು ವಿಸ್ಪಷ್ಟಕಾಮಃ ।
ನೈವಾಶಕತ್ತನ್ಮಹದದ್ಭುತಂ ಸ್ಯಾ-
ತ್ಕಪೀಶ್ವರಾಣಾಂ ನೃಪತೇಸ್ತಥೈವ ॥ ೨೬ ॥

ಕಶ್ಚಾಲಯೇಲ್ಲಬ್ಧಮಹಾನುಭಾವಂ
ಮಹೇಶಲಿಂಗಂ ಪುರುಷೋ ಮನಸ್ವೀ ।
ತನ್ನಿಶ್ಚಲಂ ಪ್ರೇಕ್ಷ್ಯ ಮಹಾನುಭಾವೋ
ನೃಪಪ್ರವೀರಃ ಸಹಸಾ ಜಗಾಮ ॥ ೨೭ ॥

ವಿಪ್ರಾನಥಾಮಂತ್ರ್ಯ ವಿಧಾಯ ಪೂಜಾಂ
ಪ್ರದಕ್ಷಿಣೀಕೃತ್ಯ ಚ ರಾಮಚಂದ್ರಃ ।
ಶುದ್ಧಾತಿಶುದ್ಧೇನ ಹೃದಾಖಿಲೈಸ್ತೈ-
ರ್ಲಿಂಗಾನಿ ಸರ್ವಾಣಿ ನನಾಮ ರಾಮಃ ॥ ೨೮ ॥

೨೫-೨೬. ಅನಂತರ ವಾಯುಪುತ್ರನಾದ ಹನುಮಂತನು ರಾಮನ ಅಪ್ಪಣೆಯಂತೆ ಲಿಂಗವನ್ನು ಕೈಯಿಂದ ಕೀಳಲು ಪ್ರಯತ್ನಪಟ್ಟನು. ಆದರೆ ಸಾಧ್ಯವಾಗಲಿಲ್ಲ. ಅನಂತರ ತನ್ನ ಬಾಲವನ್ನು ಸುತ್ತಿ ಕೀಳಲು ಪ್ರಯತ್ನ ಪಟ್ಟನು. ಆದರೆ ಅವನಾಶೆಯಲ್ಲವೂ ನಿರರ್ಥಕವಾಯಿತು. ಆಗ ವಾನರರೂ ಶ್ರೀರಾಮನೂ ಬಹಳ ಆಶ್ಚರ್ಯಪಟ್ಟರು.

೨೭. ಯಾವ ಮನಸ್ವಿಯಾದ ಪುರುಷನು ತಾನೇ ಮಹಾನುಭಾವವಾದ ಮಹೇಶ್ವರಲಿಂಗವನ್ನು ಅಲುಗಾಡಿಸಲು ಸಮರ್ಥನಾದಾನು ? ನಿಶ್ಚಲವಾಗಿ ರುವ ಆ ಲಿಂಗವನ್ನು ನೋಡಿ ಮಹಾನುಭಾವನಾದ ಶ್ರೀರಾಮನು ಜಾಗ್ರತೆ ಯಾಗಿ ಅದರ ಹತ್ತಿರಕ್ಕೆ ಹೋದನು.

೨೮. ಅನಂತರ ಶ್ರೀರಾಮಚಂದ್ರನು ಬ್ರಾಹ್ಮಣರುಗಳನ್ನು ಕರೆಸಿ ಆ ಲಿಂಗಕ್ಕೆ ಪೂಜೆಯನ್ನು ಮಾಡಿಸಿ ಪ್ರದಕ್ಷಿಣೆಯನ್ನು ಮಾಡಿ ಅತ್ಯಂತ ಪರಿಶುದ್ಧ ವಾದ ಮನಸ್ಸಿನಿಂದ ಅಲ್ಲಿರುವ ಲಿಂಗಗಳನ್ನೆಲ್ಲಾ ನಮಸ್ಕರಿಸಿದನು.

ಕಿಷ್ಕಿಂಧವಾಸಿಪ್ರವರೈರಶೇಷೈಃ
ಸಂಸೇವಿತಂ ತೀರ್ಥಮತೋ ಬಭೂವ ।
ಅತ್ರಾಪ್ಲವಾದೇವ ಮಹಾಂತಿ ಪಾಪಾ-
ನ್ಯಪಿ ಕ್ಷಯಂ ಯಾಂತಿ ನ ಸಂಶಯೋಽತ್ರ ॥ ೨೯ ॥

ಪುನಶ್ಚ ಗಂಗಾಂ ಪ್ರಣನಾಮ ಭಕ್ತ್ಯಾ
ಪ್ರಸೀದ ಮಾತರ್ಮಮ ಗೌತಮೀತಿ ।
ಜಲ್ಪನ್ಮುಹುರ್ವಿಸ್ಮಿತಚಿತ್ತವೃತ್ತಿ-
ರ್ವಿಲೋಕಯನ್ಪ್ರಣಮನ್ಗೌತಮೀಂ ತಾಂ ॥ ೩೦ ॥

ತತಃ ಪ್ರಭೃತ್ಯೇತದತೀವ ಪುಣ್ಯಂ
ಕಿಷ್ಕಿಂಧತೀರ್ಥಂ ವಿಬುಧಾ ವದಂತಿ ।
ಪಠೇತ್ಸ್ಮರೇದ್ವಾಪಿ ಶೃಣೋತಿ ಭಕ್ತ್ಯಾ
ಪಾಪಾಪಹಂ ಕಿಂ ಪುನಃ ಸ್ನಾನದಾನೈಃ ॥ ೩೧ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಕಿಷ್ಕಿಂಧತೀರ್ಥವರ್ಣನಂ ನಾಮ
ಸಪ್ತಪಂಚಾಶದಧಿಕಶತತಮೋಽಧ್ಯಾಯಃ

---

೨೯. ಕಿಷ್ಕಿಂಧಾವಾಸಿಗಳಾದ ವಾನರರೆಲ್ಲರೂ ಆ ತೀರ್ಥವನ್ನು ಸೇವಿಸಿದರಾದುದರಿಂದ ಅದಕ್ಕೆ ಕಿಷ್ಕಿಂಧಾತೀರ್ಥವೆಂದು ಹೆಸರುಬಂದಿತು. ಅದರಲ್ಲಿ ಸ್ನಾನಮಾಡಿದರೆ ನಿಸ್ಸಂಶಯವಾಗಿ ಮಹಾಪಾಪಗಳೆಲ್ಲವೂ ನಾಶವಾಗುವುವು.

೩೦. ಪುನಃ ಶ್ರೀರಾಮನು ಗೌತಮಿಯನ್ನು ನೋಡುತ್ತಾ ಮಾತೆಯೇ, ಪ್ರಸನ್ನಳಾಗು ಎಂದು ಬಾರಿಬಾರಿಗೂ ಹೇಳುತ್ತಾ ವಿಸ್ಮಿತಮನಸ್ಕನಾಗಿ ನಮಸ್ಕರಿಸಿದನು.

೩೧. ಅಂದಿನಿಂದ ಆ ಕಿಷ್ಕಿಂದಾತೀರ್ಥವನ್ನು ಅತ್ಯಂತ ಪುಣ್ಯದಾಯಕವೆಂದು ಜ್ಞಾನಿಗಳು ಹೇಳುವರು. ಇದರ ವಿಷಯವನ್ನು ಓದಿದರೆ ಅಥವಾ ಸ್ಮರಣೆ ಮಾಡಿದರೆ ಪಾಪಗಳೆಲ್ಲವೂ ನಾಶವಾಗುವುವು. ಇನ್ನು ಸ್ನಾನದಾನಗಳನ್ನು ಮಾಡಿದರೆ ಬರುವ ಫಲವನ್ನು ಹೇಳವುದೇನು?

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಕಿಷ್ಕಿಂಧಾದಿತೀರ್ಥವರ್ಣನವೆಂಬ ನೂರಐವತ್ತೇಳನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ಎಂಭತ್ತೆಂಟನೆಯ ಅಧ್ಯಾಯವು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಅಷ್ಟಪಂಚಾಶದಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ವ್ಯಾಸತೀರ್ಥಮಿತಿ ಖ್ಯಾತಂ ಪ್ರಾಚೇತಸಮತಃ ಪರಂ ।
ನಾತಃ ಪರತರಂ ಕಿಂಚಿತ್ಪಾವನಂ ಸರ್ವಸಿದ್ಧಿದಂ ॥ ೧ ॥

ದಶ ಮೇ ಮಾನಸಾಃ ಪುತ್ರಾಃ ಸ್ರಷ್ಟಾರೋ ಜಗತಾಮಪಿ ।
ಅಂತಂ ಜಿಜ್ಞಾಸವಸ್ತೇ ವೈ ಪೃಥಿವ್ಯಾ ಜಗ್ಮುರೋಜಸಾ ॥ ೨ ॥

ಪುನಃ ಸೃಷ್ಟಾಃ ಪುನಸ್ತೇಽಪಿ ಯಾತಾಸ್ತಾನ್ಸಮವೇಕ್ಷಿತುಂ ।
ನೈವ ತೇಽಪಿ ಸಮಾಯಾತಾ ಯೇ ಗತಾಸ್ತೇ ಗತಾ ಗತಾಃ ॥ ೩ ॥

ನೂರಐವತ್ತೆಂಟನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು— ವ್ಯಾಸತೀರ್ಥವೆಂಬುದೂ ಪ್ರಾಚೇತಸ ತೀರ್ಥವೆಂಬುದೂ ಪ್ರಸಿದ್ಧವಾದುದು. ಸರ್ವಾಭೀಷ್ಟಸಿದ್ಧಿಯನ್ನುಂಟುಮಾಡುವ ಇಂತಹ ಪವಿತ್ರವಾದ ತೀರ್ಥಕ್ಕಿಂತ ಬೇರೊಂದು ಶ್ರೇಷ್ಠವಾದ ತೀರ್ಥವಿಲ್ಲ.

೨. ನನಗೆ ಹತ್ತುಜನ ಜಗತ್ಸೃಷ್ಟಿಕರ್ತರಾದ ಮಾನಸಪುತ್ರರಿದ್ದರು. ಅವರೆಲ್ಲರೂ ಪೃಥಿವಿಯ ಕೊನೆಯನ್ನು ತಿಳಿಯಬೇಕೆಂದು ತಮ್ಮ ಪರಾಕ್ರಮದಿಂದ ಹೊರಟುಹೋದರು.

೩. ಪುನಃ ನಾನು ಮಕ್ಕಳನ್ನು ಸೃಷ್ಟಿಸಿದೆನು. ಅವರೆಲ್ಲರೂ ಹಿಂದೆ ಹೋದವರನ್ನು ಹುಡುಕಲು ಹೋದರು. ಹೋದವರು ಹೊರಟೇಹೋದರು. ಪುನಃ ಬರಲೇ ಇಲ್ಲ.

ತದೋತ್ಪನ್ನಾ ಮಹಾಪ್ರಾಜ್ಞಾ ದಿವ್ಯಾ ಆಂಗಿರಸೋ ಮುನೇ ।
ವೇದವೇದಾಂಗತತ್ತ್ವಜ್ಞಾಃ ಸರ್ವಶಾಸ್ತ್ರವಿಶಾರದಾಃ ॥ ೪ ॥

ತೇಽನುಜ್ಞಾತಾ ಅಂಗಿರಸಾ ಗುರುಂ ನತ್ವಾ ತಪೋಧನಾಃ ।
ತಪಸೇ ನಿಶ್ಚಿತಾಃ ಸರ್ವೇ ನೈವ ಪೃಷ್ಟ್ವಾ ತು ಮಾತರಂ ॥ ೫ ॥

ಸರ್ವೇಭ್ಯೋ ಹ್ಯಧಿಕಾ ಮಾತಾ ಗುರುಭ್ಯೋ ಗೌರವೇಣ ಹಿ ।
ತದಾ ನಾರದ ಕೋಪೇನ ಸಾ ಶಶಾಪ ತದಾತ್ಮಜಾನ್ ॥ ೬ ॥

॥ ಮಾತೋವಾಚ ॥

ಮಾಮನಾದೃತ್ಯ ಯೇ ಪುತ್ರಾಃ ಪ್ರವೃತ್ತಾಶ್ಚರಿತುಂ ತಪಃ ।
ಸರ್ವೈರಪಿ ಪ್ರಕಾರೈಸ್ತನ್ನ ತೇಷಾಂ ಸಿದ್ಧಿಮೇಷ್ಯತಿ ॥ ೭ ॥

॥ ಬ್ರಹ್ಮೋವಾಚ ॥

ನಾನಾದೇಶಾಂಶ್ಚ ಚಿನ್ವಾನಾಸ್ತಪಃಸಿದ್ಧಿಂ ನ ಯಾಂತಿ ಚ ।
ವಿಘ್ನಮನ್ವೇತಿ ತಾನ್ಸರ್ವಾನಿತಶ್ಚೇತಶ್ಚ ಧಾವತಃ ॥ ೮ ॥

---

೪. ಅನಂತರ ಮಹಾ ಪ್ರಾಜ್ಞರಾದ ಅಂಗೀರಸರೆಂಬುವರನ್ನು ಸೃಷ್ಟಿಸಿದೆನು. ಅವರು ವೇದವೇದಾಂಗತತ್ವಜ್ಞರೂ, ಸರ್ವಶಾಸ್ತ್ರವಿಶಾರದರೂ ಆಗಿದ್ದರು.

೫. ಆ ಅಂಗಿರಸರೆಲ್ಲರೂ ತಂದೆಯಾದ ಬ್ರಹ್ಮನನ್ನು ನಮಸ್ಕರಿಸಿ ಅವನಿಂದ ಅಪ್ಪಣೆಯನ್ನು ಪಡೆದು ತಪಸ್ಸಿಗೆ ಹೊರಡಲು ನಿಶ್ಚಯಿಸಿದರು. ಆದರೆ ತಮ್ಮ ತಾಯಿಯನ್ನು ಮಾತ್ರ ಕೇಳಲಿಲ್ಲ.

೬. ಎಲೈ ನಾರದನೇ, ಗುರುಗಳಿಗಿಂತಲೂ ಮತ್ತು ಎಲ್ಲರಿಗಿಂತಲೂ ತಾಯಿಯು ದೊಡ್ಡವಳು. ಆಗ ಅವರ ತಾಯಿಯು ಕೋಪಗೊಂಡು ಅಂಗಿರಸರನ್ನು ಶಪಿಸಿದಳು.

೭. ನನ್ನನ್ನು ತಿರಸ್ಕರಿಸಿ ನನ್ನ ಮಕ್ಕಳು ತಪಸ್ಸಿಗೆ ಹೋಗಿರುವರು. ಆದುದರಿಂದ ಯಾವಪ್ರಕಾರದಿಂದಲೂ ಅವರಿಗೆ ತಪಸ್ಸಿದ್ಧಿಯಾಗಬಾರದು ಎಂದು ಶಪಿಸಿದಳು.

೮. ಆ ಅಂಗಿರಸರೆಲ್ಲರೂ ಅನೇಕ ದೇಶಗಳನ್ನು ತಿರುಗಿ ತಪಸ್ಸುಮಾಡಿದರೂ ತಪಸ್ಸಿದ್ಧಿಯನ್ನು ಹೊಂದಲಿಲ್ಲ. ಎಲ್ಲೆಲ್ಲಿ ಹೋದರೂ ವಿಘ್ನವು ಉಂಟಾಗುತ್ತಲೇ ಇದ್ದಿತು.

ಕ್ವಾಪಿ ತದ್ರಾಕ್ಷಸೈರ್ವಿಘ್ನಂ ಕ್ವಾಪಿ ತನ್ಮಾನುಷ್ಯೈರಭೂತ್ ।
ಪ್ರಮದಾಭಿಃ ಕ್ವಚಿಚ್ಚಾಪಿ ಕ್ವಾಪಿ ತದ್ದೇಹದೋಷತಃ ॥ ೯ ॥

ಏವಂ ತು ಭ್ರಮಮಾಣಾಸ್ತೇ ಯಯುಃ ಸರ್ವೇ ತಪೋನಿಧಿಂ ।
ಅಗಸ್ತ್ಯಂ ತಪತಾಂ ಶ್ರೇಷ್ಠಂ ಕುಂಭಯೋನಿಂ ಜಗದ್ಗುರುಂ ॥ ೧೦ ॥

ನಮಸ್ಕೃತ್ವಾ ಹ್ಯಾಂಗಿರಸಾ ಹ್ಯಗ್ನಿವಂಶಸಮುದ್ಭವಾಃ ।
ದಕ್ಷಿಣಾಶಾಪತಿಂ ಶಾಂತಂ ವಿನೀತಾಃ ಪ್ರಷ್ಟುಮುದ್ಯತಾಃ ॥ ೧೧ ॥

॥ ಆಂಗಿರಸಾ ಊಚುಃ ॥

ಭಗವನ್ಕೇನ ದೋಷೇಣ ತಪೋಽಸ್ಮಾಕಂ ನ ಸಿಧ್ಯತಿ ।
ನಾನಾವಿಧೈರಪ್ಯುಪಾಯೈಃ ಕುರ್ವತಾಂ ಚ ಪುನಃ ಪುನಃ ॥ ೧೨ ॥

ಕಿಂ ಕುರ್ಮಃ ಕಃ ಪ್ರಕಾರೋಽತ್ರ ತಪಸ್ಯೇವ ಭವಾಮ ಕಿಂ ।
ಉಪಾಯಂ ಬ್ರೂಹಿ ವಿಪ್ರೇಂದ್ರ ಜ್ಯೇಷ್ಠೋಽಸಿ ತಪಸಾ ಧ್ರುವಂ ॥ ೧೩ ॥

---

೯. ಕೆಲವು ಕಡೆ ಅವರಿಗೆ ರಾಕ್ಷಸರಿಂದಲೂ ಮತ್ತೊಂದುಕಡೆ ಮನುಷ್ಯ ರಿಂದಲೂ ಇನ್ನೊಂದುಕಡೆ ಸ್ತ್ರೀಯರಿಂದಲೂ, ಕೆಲವು ಸ್ಥಳದಲ್ಲಿ ತಮ್ಮ ದೇಹ ದೋಷದಿಂದಲೂ ವಿಘ್ನವುಂಟಾಯಿತು.

೧೦. ಈರೀತಿಯಾಗಿ ಅವರೆಲ್ಲರೂ ಎಲ್ಲೂ ತಪಸ್ಸಿದ್ಧಿಯನ್ನು ಪಡೆಯದೆ ತಿರುಗುತ್ತಾ ಕೊನೆಗೆ ಜಗದ್ಗುರುವೂ, ತಾಪಸಶ್ರೇಷ್ಠನೂ ಆದ ಅಗಸ್ತ್ಯಋಷಿಯ ಹತ್ತಿರಕ್ಕೆ ಹೋದರು.

೧೧. ಅಗ್ನಿವಂಶಸಂಭೂತರಾದ ಆ ಆಂಗಿರಸರು ದಕ್ಷಿಣಾದಿಕ್ಪತಿಯಾದ ಅಗಸ್ತ್ಯನನ್ನು ವಿನೀತರಾಗಿ ನಮಸ್ಕರಿಸಿ ಪ್ರಶ್ನೆಮಾಡಿದರು.

೧೨. ಭಗವನ್, ಯಾವ ದೋಷದಿಂದ ನಮಗೆ ತಪಸ್ಸಿದ್ಧಿಯಾಗುವು ದಿಲ್ಲ? ನಾವು ಅನೇಕ ಉಪಾಯಗಳನ್ನು ಮಾಡಿದರೂ ಸಿದ್ಧಿಸುವುದಿಲ್ಲವಲ್ಲಾ ಕಾರಣವೇನು ?

೧೩-೧೪. ಈಗ ನಾವು ತಪಸ್ಸಿದ್ಧಿಯನ್ನು ಪಡೆಯಲು ಏನುಮಾಡೋಣ? ಯಾವರೀತಿ ತಪಸ್ಸುಮಾಡಿದರೆ ಸಿದ್ಧಿಯಾಗುವುದು ? ಇದಕ್ಕೆ ಉಪಾಯವನ್ನು ಹೇಳು. ಎಲೈ ತಾಪಸಶ್ರೇಷ್ಠನೇ, ತಪಸ್ಸಿನಿಂದ ನೀನು ಎಲ್ಲರಿಗಿಂತಲೂ ದೊಡ್ಡ

ಜ್ಞಾತಾಸಿ ಜ್ಞಾನಿನಾಂ ಬ್ರಹ್ಮನ್ವಕ್ತಾಸಿ ವದತಾಂ ವರಃ ।
ಶಾಂತೋಽಸಿ ಯಮಿನಾಂ ನಿತ್ಯಂ ದಯಾವಾನ್ಪ್ರಿಯಕೃತ್ತಥಾ ॥ ೧೪ ॥

ಅಕ್ರೋಧನಶ್ಚ ನ ದ್ವೇಷ್ಟಾ ತಸ್ಮಾದ್ಬ್ರೂಹಿ ವಿವಕ್ಷಿತಂ ।
ಸಾಹಂಕಾರಾ ದಯಾಹೀನಾ ಗುರುಸೇವಾವಿವರ್ಜಿತಾಃ ।
ಅಸತ್ಯವಾದಿನಃ ಕ್ರೂರಾ ನ ತೇ ತತ್ತ್ವಂ ವಿಜಾನತೇ ॥ ೧೫ ॥

॥ ಬ್ರಹ್ಮೋವಾಚ ॥

ಅಗಸ್ತ್ಯಃ ಪ್ರಾಹ ತಾನ್ಸರ್ವಾನ್ಕ್ಷಣಂ ಧ್ಯಾತ್ವಾ ಶನೈಃ ಶನೈಃ ॥ ೧೬ ॥

॥ ಅಗಸ್ತ್ಯ ಉವಾಚ ॥

ಶಾಂತಾತ್ಮಾನೋ ಭವಂತೋ ವೈ ಸ್ರಷ್ಟಾರೋ ಬ್ರಹ್ಮಣಾ ಕೃತಾಃ ।
ನ ಪರ್ಯಾಪ್ತಂ ತಪಶ್ಚಾಭೂತ್ಸ್ಮರಧ್ವಂ ಸ್ಮಯಕಾರಣಂ ॥ ೧೭ ॥

ಬ್ರಹ್ಮಣಾ ನಿರ್ಮಿತಾಃ ಪೂರ್ವಂ ಯೇ ಗತಾಃ ಸುಖಮೇಧತೇ ।
ಯೇ ಗತಾಃ ಪುನರನ್ವೇಷ್ಟುಂ ತೇ ಚ ತ್ವಾಂಗಿರಸೋಽಭವನ್ ॥ ೧೮ ॥

ವನಾಗಿರುವೆ. ಜ್ಞಾನಿಗಳಲ್ಲೆಲ್ಲಾ ಜ್ಞಾನಿಯಾಗಿರುವೆ. ವಕ್ತೃಗಳಲ್ಲೆಲ್ಲಾ ವಾಚಾಳಿಯಾಗಿರುವೆ. ಜಿತೇಂದ್ರಿಯರುಗಳಲ್ಲೆಲ್ಲಾ ಶಾಂತನು ನೀನಾಗಿರುವೆ. ದ್ವೇಷರಹಿತನಾಗಿರುವೆ. ಆದುದರಿಂದ ನಾವು ಕೇಳಿದ ವಿಷಯವನ್ನು ತಿಳಿಸು.

೧೫. ಅಹಂಕಾರಿಗಳೂ, ದಯಾರಹಿತರೂ, ಗುರುಸೇವಾರಹಿತರೂ, ಅಸತ್ಯವಾದಿಗಳೂ, ಕ್ರೂರರೂ ಆದವರು ಮಾತ್ರ ತತ್ವವನ್ನು ತಿಳಿಯಲಾರರು ಎಂದರು.

೧೬. ಅನಂತರ ಅಗಸ್ತ್ಯನು ಕ್ಷಣಕಾಲ ಧ್ಯಾನಮಾಡಿ ಅವರೆಲ್ಲರನ್ನೂ ಕುರಿತು ನಿಧಾನವಾಗಿ ಹೇಳಲುಪಕ್ರಮಿಸಿದನು.

೧೭. ಶಾಂತಾತ್ಮರಾದ ನಿಮ್ಮನ್ನು ಬ್ರಹ್ಮನು ಸೃಷ್ಟಿಸಿರುವನು. ನಿಮಗೆ ತಪಸ್ಸಿದ್ಧಿಯು ಆಗಿರುವುದಿಲ್ಲ. ಈ ಆಶ್ಚರ್ಯಕ್ಕೆ ಕಾರಣವೇನೆಂದು ಹೇಳುವೆನು ಕೇಳಿರಿ.

೧೮-೧೯. ಮೊದಲು ಬ್ರಹ್ಮನು ಸೃಷ್ಟಿಸಿದ ಹತ್ತು ಜನಗಳು ಪೃಥುವಿಯ ಅಂತ್ಯವನ್ನು ತಿಳಿಯಲು ಹೋದರಷ್ಟೆ, ಅವರು ಸುಖವಾಗಿರುವರು. ಅನಂತರ

ತೇ ಯೂಯಂ ಚ ಪುನಃ ಕಾಲೇ ಯಾತಾ ಯಾತಾಃ ಶನೈಃ ಶನೈಃ ।
ಪ್ರಜಾಪತೇರಪ್ಯಧಿಕಾ ಭವಿತಾರೋ ನ ಸಂಶಯಃ ॥ ೧೯ ॥

ಇತೋ ಯಾಂತು ತಪಸ್ತಪ್ತುಂ ಗಂಗಾಂ ತ್ರೈಲೋಕ್ಯಪಾವನೀಂ ।
ನೋಪಾಯೋಽನ್ಯೋಽಸ್ತಿ ಸಂಸಾರೇ ವಿನಾ ಗಂಗಾಂ ಶಿವವಿಪ್ರಿಯಾಂ ॥೨೦॥

ತತ್ರಾಶ್ರಮೇ ಪುಣ್ಯದೇಶೇ ಜ್ಞಾನದಂ ಪೂಜಯಿಷ್ಯಥ ।
ಸ ಚ್ಛೇದಯಿಷ್ಯತ್ಯಖಿಲಂ ಸಂಶಯಂ ವೋ ಮಹಾಮತಿಃ ।
ನ ಸಿದ್ಧಿಃ ಕ್ವಾಪಿ ಕೇಷಾಂಚಿದ್ವಿನಾ ಸದ್ಗುರುಣಾ ಯತಃ ॥ ೨೧ ॥

॥ ಬ್ರಹ್ಮೋವಾಚ ॥

ತೇ ತಮೂಚುರ್ಮುನಿವರಂ ಜ್ಞಾನದಃ ಕೋಽಭಿಧೀಯತೇ ।
ಬ್ರಹ್ಮಾ ವಿಷ್ಣುರ್ಮಹೇಶೋ ವಾ ಆದಿತ್ಯೋ ವಾಪಿ ಚಂದ್ರಮಾಃ ॥ ೨೨ ॥

ಅವರೆಲ್ಲರನ್ನೂ ಹುಡುಕಲು ಆಂಗಿರಸರು ಹೊರಟರು. ಅವರೇ ನೀವು. ನೀವು ಈ ರೀತಿಯಾಗಿ ನಿಧಾನವಾಗಿ ಹೋಗುತ್ತಾ ಮುಂದೆ ಬ್ರಹ್ಮನಿಗಿಂತಲೂ ಶ್ರೇಷ್ಠರಾಗುವಿರಿ. ಈ ವಿಷಯದಲ್ಲಿ ಸಂಶಯವಿಲ್ಲ.

೨೦. ನೀವೀಗ ತ್ರೈಲೋಕ್ಯಪಾವನಿಯಾದ ಗಂಗಾನದಿಯ ತೀರಕ್ಕೆ ಹೋಗಿ ತಪಸ್ಸುಮಾಡಿರಿ. ಈ ಪ್ರಪಂಚದಲ್ಲಿ ಶಿವಪ್ರಿಯಳಾದ ಗಂಗೆಯನ್ನು ಬಿಟ್ಟರೆ ನಿಮಗೆ ಬೇರೆ ಉಪಾಯವಿಲ್ಲವು.

೨೧. ಆ ಗಂಗಾನದಿಯ ಪುಣ್ಯಪ್ರದೇಶದಲ್ಲಿ ಆಶ್ರಮವನ್ನು ನಿರ್ಮಿಸಿಕೊಂಡು ಜ್ಞಾನಪ್ರದನಾದ ಶಿವನನ್ನು ಪೂಜಿಸಿರಿ. ಮಹಾಜ್ಞಾನಿಯಾದ ಆತನು ನಿಮ್ಮ ಸಂಶಯಗಳನ್ನೆಲ್ಲಾ ನಿವಾರಿಸುವನು. ಸದ್ಗುರುವಿನ ಸೇವೆಯನ್ನು ಮಾಡದೆ ತಪಸ್ಸಿದ್ಧಿಯು ನಿಮಗೆಲ್ಲಿಯೂ ಆಗಲಾರದು ಎಂದನು.

೨೨. ಅನಂತರ ಆ ಆಂಗಿರಸರು ಅಗಸ್ತ್ಯನನ್ನು ಕುರಿತು ಎಲೈ ಮುನಿಯೇ, ಜ್ಞಾನಪ್ರದನೆಂದರೆ ಯಾರು? ಬ್ರಹ್ಮನೇ? ವಿಷ್ಣುವೇ? ಅಥವಾ ಮಹೇಶ್ವರನೇ? ಸೂರ್ಯನು ಜ್ಞಾನಪ್ರದನೇ? ಅಥವಾ ಚಂದ್ರ, ಅಗ್ನಿ, ವರುಣ ಇವರುಗಳು ಜ್ಞಾನಪ್ರದರೇ? ಎಂಬುದಾಗಿ ಪ್ರಶ್ನೆ ಮಾಡಿದರು.

ಅಗ್ನಿಶ್ಚ ವರುಣಃ ಕಃ ಸ್ಯಾಜ್ಞಾನದೋ ಮುನಿಸತ್ತಮ ।
ಅಗಸ್ತ್ಯಃ ಪ್ರಸರೇಷ್ಯಾಹ ಜ್ಞಾನದಃ ಶ್ರೂಯತಾಮಯಂ ॥ ೨೩ ॥

ಯಾ ಆಪಃ ಸೋಽಗ್ನಿರಿತ್ಯುಕ್ತೋ ಯೋಽಗ್ನಿಃ ಸೂರ್ಯಃ ಸ ಉಚ್ಯತೇ ।
ಯಶ್ಚ ಸೂರ್ಯಃ ಸ ವೈ ವಿಷ್ಣುರ್ಯಶ್ಚ ವಿಷ್ಣುಃ ಸ ಭಾಸ್ಕರಃ ॥ ೨೪ ॥

ಯಶ್ಚ ಬ್ರಹ್ಮಾ ಸ ವೈ ರುದ್ರೋ ಯೋ ರುದ್ರಃ ಸರ್ವಮೇವ ತತ್ ।
ಯಸ್ಯ ಸರ್ವಂ ತು ತಜ್ಞಾನಂ ಜ್ಞಾನದಃ ಸೋಽತ್ರ ಕೀರ್ತ್ಯತೇ ॥ ೨೫ ॥

ದೇಶಿಕಪ್ರೇರಕವ್ಯಾಖ್ಯಾಕೃದುಪಾಧ್ಯಾಯದೇಹದಾಃ ।
ಗುರವಃ ಸಂತಿ ಬಹವಸ್ತೇಷಾಂ ಜ್ಞಾನಪ್ರದೋ ಮಹಾನ್ ॥ ೨೬ ॥

ತದೇವ ಜ್ಞಾನಮುತ್ಕೃಷ್ಟಂ ಯೇನ ಭೇದೋ ವಿಹನ್ಯತೇ ।
ಏಕ ಏವಾದ್ವಯಃ ಶಂಭುರಿಂದ್ರಮಿತ್ರಾಗ್ನಿನಾಮಭಿಃ ।
ವದಂತಿ ಬಹುಧಾ ವಿಪ್ರಾ ಭ್ರಾಂತೋಪಕೃತಿಹೇತವೇ ॥ ೨೭ ॥

೨೩-೨೫. ಅದಕ್ಕೆ ಅಗಸ್ತ್ಯನು ಜ್ಞಾನಪ್ರದನನ್ನು ಹೇಳುವೆನು ಕೇಳಿರಿ. ಜಲಕ್ಕೆ ಅಗ್ನಿ ಎಂಬುದಾಗಿ ಹೆಸರು. ಅಗ್ನಿಯೇ ಸೂರ್ಯನು. ಸೂರ್ಯನೇ ವಿಷ್ಣುವು. ವಿಷ್ಣುವೇ ಭಾಸ್ಕರನು. ಭಾಸ್ಕರನೇ ಬ್ರಹ್ಮನು. ಬ್ರಹ್ಮನೇ ರುದ್ರನು. ಆ ರುದ್ರನೇ ಎಲ್ಲಾ ಪದಾರ್ಥಗಳು. ಅವಕ್ಕೆಲ್ಲಾ ಜ್ಞಾನವೆಂದು ಹೆಸರು. ಆದುದರಿಂದ ಈಶ್ವರನೇ ಜ್ಞಾನಪ್ರದನು.

೨೬. ದೇಶಿಕ (ಗುರು) ಪ್ರೇರೇಪಿಸುವವನು, ವ್ಯಾಖ್ಯಾನಕಾರ, ಉಪಾಧ್ಯಾಯ, ತಂದೆ ಇವರೇ ಮೊದಲಾದ ಅನೇಕ ಗುರುಗಳಿರುವರು. ಅವರೆಲ್ಲರಿಗಿಂತಲೂ ಜ್ಞಾನಪ್ರದನು ಶ್ರೇಷ್ಠನು.

೨೭. ಅಂತಹ ಶ್ರೇಷ್ಠವಾದ ಜ್ಞಾನವನ್ನೇ ನಾನೀಗ ಹೇಳಿದುದು. ಇದರಿಂದ ಭೇದವು ನಾಶವಾಗುವುದು. ಒಬ್ಬನೇ ಆದ ಪರಮಾತ್ಮನೇ ಶಂಭು ಇಂದ್ರ, ವರುಣ, ಅಗ್ನಿ ಮುಂತಾದ ಹೆಸರುಗಳಿಂದ ಕರೆಯಲ್ಪಡುವನು. ಈರೀತಿ ಬೇರೆಬೇರೆ ಹೆಸರಿನಿಂದ ಬ್ರಾಹ್ಮಣರು ಭ್ರಾಂತರಾದ ಜನರಿಗೆ ಉಪಕಾರಮಾಡಲು ಕರೆದರು ಎಂದು ಹೇಳಿದರು.

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ಮುನೇರ್ವಾಕ್ಯಂ ಗಾಥಾ ಗಾಯಂತ ಏವ ತೇ ।
ಜಗ್ಮುಃ ಪಂಚೋತ್ತರಾಂ ಗಂಗಾಂ ಪಂಚ ಜಗ್ಮುಶ್ಚ ದಕ್ಷಿಣಾಂ ॥ ೨೮ ॥

ಅಗಸ್ತ್ಯೇನೋದಿತಾನ್ದೇವಾನ್ಪೂಜಯಂತೋ ಯಥಾವಿಧಿ ।
ಆಸನೇಷು ವಿಶೇಷೇಣ ಹ್ಯಾಸೀನಾಸ್ತತ್ತ್ವಚಿಂತಕಾಃ ॥ ೨೯ ॥

ತೇಷಾಂ ಸರ್ವೇ ಸುರಗಣಾಃ ಪ್ರೀತಿಮಂತೋಽಭವನ್ಮುನೇ ।
ಸ್ರಷ್ಟೃತ್ವಂ ತು ಯುಗಾದೌ ಯತ್ಕಲ್ಪಿತಂ ವಿಶ್ವಯೋನಿನಾ ॥ ೩೦ ॥

ಅಧರ್ಮಾಣಾಂ ನಿವೃತ್ತ್ಯರ್ಥಂ ವೇದಾನಾಂ ಸ್ಥಾಪನಾಯ ಚ ।
ಲೋಕಾನಾಮುಪಕಾರಾರ್ಥಂ ಧರ್ಮಕಾಮಾರ್ಥಸಿದ್ಧಯೇ ॥ ೩೧ ॥

ಪುರಾಣಸ್ಮೃತಿವೇದಾರ್ಥಧರ್ಮಶಾಸ್ತ್ರಾರ್ಥನಿಶ್ಚಯೇ ।
ಸ್ರಷ್ಟೃತ್ವಂ ಜಗತಾಮಿಷ್ಟಂ ತಾದೃಗ್ರೂಪಾ ಭವಿಷ್ಯಥ ॥ ೩೨ ॥

---

೨೮ ಅಗಸ್ತ್ಯನ ಮಾತನ್ನು ಕೇಳಿ ಆ ಆಂಗಿರಸರೆಲ್ಲರೂ ಪ್ರಾಕೃತ ಗೀತಗಳನ್ನು ಹಾಡುತ್ತಾ ಐದುಜನರು ಗಂಗಾನದಿಯ ಉತ್ತರಭಾಗಕ್ಕೂ ಉಳಿದ ಐದು ಜನರು ಗಂಗಾನದಿಯ ದಕ್ಷಿಣಭಾಗಕ್ಕೂ ಹೋದರು.

೨೯. ಅವರೆಲ್ಲರೂ ಅಗಸ್ತ್ಯನು ಹೇಳಿರುವ ದೇವತೆಗಳನ್ನು ಯಥಾವಿಧಿಯಾಗಿ ಪೂಜೆಮಾಡುತ್ತಾ ತಮ್ಮತಮ್ಮ ಆಸನಗಳಲ್ಲಿ ತತ್ವಾರ್ಥಗಳನ್ನು ಯೋಚಿಸುತ್ತಾ ಕುಳಿತರು.

೩೦. ಎಲೈ ನಾರದನೇ, ಅವರ ವಿಷಯದಲ್ಲಿ ದೇವತೆಗಳೆಲ್ಲರೂ ಪ್ರೀತಿಗೊಂಡರು. ಬ್ರಹ್ಮನು ಅವರಿಗೆ ಯುಗದ ಆದಿಯಲ್ಲಿ ಸೃಷ್ಟಿಮಾಡುವಿಕೆಯನ್ನು ತಿಳಿಸಿದನು.

೩೧-೩೨. ಅಧರ್ಮವನ್ನು ನಾಶಮಾಡಿ ವೇದಗಳನ್ನು ಸ್ಥಾಪನೆಮಾಡಿ ಲೋಕದ ಜನಗಳಿಗೆ ಉಪಕಾರಮಾಡುವುದಕ್ಕೂ, ಧರ್ಮ, ಕಾಮ, ಅರ್ಥ ಮುಂತಾದುವುಗಳು ಸಿದ್ಧಿಯಾಗುವುದಕ್ಕೂ, ಪುರಾಣ, ಸ್ಮೃತಿ, ವೇದಾರ್ಥ, ಧರ್ಮಶಾಸ್ತ್ರ ಇವುಗಳನ್ನು ನಿಶ್ಚಯಿಸುವುದಕ್ಕೂ ಜಗತ್ತಿನ ಸೃಷ್ಟಿಕರ್ತರನ್ನಾಗಿ ಮಾಡಿದನು.

ಪ್ರಜಾಪತಿತ್ವಂ ತೇಷಾಂ ವೈ ಭವಿಷ್ಯತಿ ಶನೈಃ ಕ್ರಮಾತ್ ।
ಯದಾ ಹ್ಯಧರ್ಮೋ ಭವಿತಾ ವೇದಾನಾಂ ಚ ಪರಾಭವಃ ॥ ೩೩ ॥

ವೇದಾನಾಂ ವ್ಯಸನಂ ತೇಭ್ಯೋ ಭಾವಿವ್ಯಾಸಾಸ್ತತಸ್ತು ತೇ ।
ಯದಾ ಯದಾ ತು ಧರ್ಮಸ್ಯ ಗ್ಲಾನಿರ್ವೇದಸ್ಯ ದೃಶ್ಯತೇ ॥ ೩೪ ॥

ತದಾ ತದಾ ತು ತೇ ವ್ಯಾಸಾ ಭವಿಷ್ಯಂತ್ಯುಪಕಾರಿಣಃ ।
ತೇಷಾಂ ಯತ್ತಪಸಃ ಸ್ಥಾನಂ ಗಂಗಾಯಾಸ್ತೀರಮುತ್ತಮಂ ॥ ೩೫ ॥

ತತ್ರ ತತ್ರ ಶಿವೋ ವಿಷ್ಣುರಹಮಾದಿತ್ಯ ಏವ ಚ ।
ಅಗ್ನಿರಾಪಃ ಸರ್ವಮಿತಿ ತತ್ರ ಸಂನಿಹಿತಂ ಸದಾ ॥ ೩೬ ॥

ನೈತೇಭ್ಯಃ ಪಾವನಂ ಕಿಂಚಿನ್ನೈತೇಭ್ಯಸ್ತ್ವಧಿಕಃ ಕ್ವಚಿತ್ ।
ತತ್ತದಾಕಾರತಾಂ ಪ್ರಾಪ್ತಂ ಪರಂ ಬ್ರಹ್ಮೈವ ಕೇವಲಂ ॥ ೩೭ ॥

---

೩೩. ಯಾವಾಗ ಅಧರ್ಮವು ಹರಡಿ ವೇದಗಳಿಗೆ ಚ್ಯುತಿಯು ಬರುವುದೋ ಆಗ ಆಂಗಿರಸರೆಲ್ಲರೂ ಒಬ್ಬೊಬ್ಬರಾಗಿ ಬ್ರಹ್ಮರಾಗುವರು.

೩೪. ಅವರೆಲ್ಲರೂ ಮುಂದೆ ವೇದಗಳನ್ನು ವಿಭಾಗಮಾಡಿ ವ್ಯಾಸರಾಗುವರು. ಯಾವಾಗ ಧರ್ಮಕ್ಕೋ, ವೇದಕ್ಕೋ ನಾಶಬರುವುದೋ ಅಗ ಅವರೆಲ್ಲರೂ ವೇದವನ್ನು ವಿಭಾಗಮಾಡಿ ಲೋಕೋಪಕಾರಿಗಳಾಗುವರು.

೩೫-೩೬. ಅವರುಗಳಿಗೆ ಗಂಗಾತೀರವೇ ಉತ್ತಮವಾದ ತಪಸ್ಸಿನ ಸ್ಥಾನವಾಯಿತು. ಅಲ್ಲಿ ಶಿವನೂ, ವಿಷ್ಣುವೂ, ನಾನೂ (ಬ್ರಹ್ಮನೂ) ಸೂರ್ಯನೂ ಅಗ್ನಿಯೂ, ಜಲವೂ ಎಲ್ಲರೂ ಯಾವಾಗಲೂ ಇರುವರು.

೩೭. ಶಿವ, ವಿಷ್ಣು ಮೊದಲಾದಗರಿಗಿಂತ ಶ್ರೇಷ್ಠರಾದವರೂ, ಇವರುಗಳಿಗಿಂತ ಅಧಿಕರಾದವರೂ ಎಲ್ಲಿಯೂ ಯಾರೂ ಇಲ್ಲವೇಇಲ್ಲ. ಪರಬ್ರಹ್ಮನೇ ಶಿವ ವಿಷ್ಣು ಮುಂತಾದ ಆಕಾರವನ್ನು ಹೊಂದಿರುವನು.

ಸರ್ವಾತ್ಮಕಃ ಶಿವೋ ವ್ಯಾಪೀ ಸರ್ವಭಾವಸ್ವರೂಪಧೃಕ್ ।
ವಿಶೇಷತಸ್ತತ್ರ ತೀರ್ಥೇ ಸರ್ವಪ್ರಾಣ್ಯನುಕಂಪಯಾ ॥ ೩೮ ॥

ಸರ್ವೈರ್ದೇವೈರನುವೃತಸ್ತದನುಗ್ರಹಕಾರಕಃ ।
ಧರ್ಮವ್ಯಾಸಾಸ್ತು ತೇ ಜ್ಞೇಯಾ ವೇದವ್ಯಾಸಾಸ್ತಥೈವ ಚ ॥ ೩೯ ॥

ತೇಷಾಂ ತೀರ್ಥಂ ತೇನ ನಾಮ್ನಾ ವ್ಯಪದಿಷ್ಟಂ ಜಗತ್ತ್ರಯೇ ।
ಪಾಪಪಂಕಕ್ಷಾಲನಾಂಭೋ ಮೋಹಧ್ವಾಂತಮುದಾಪಹಂ
ಸರ್ವಸಿದ್ಧಿಪ್ರದಂ ಪುಂಸಾಂ ವ್ಯಾಸತೀರ್ಥಮನುತ್ತಮಂ ॥ ೪೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ವ್ಯಾಸತೀರ್ಥವರ್ಣನಂ ನಾಮಾಷ್ಟಪಂಚಾಶದಧಿಕ-
ಶತತಮೋಽಧ್ಯಾಯಃ

---

೩೮. ಶಿವನು ಸರ್ವಾತ್ಮಕನು, ಸರ್ವವ್ಯಾಪಿಯು. ಸರ್ವ ಭಾವವನ್ನೂ ಸ್ವರೂಪವನ್ನೂ ಧರಿಸಿರುವವನು. ವಿಶೇಷವಾಗಿ ಆ ತೀರ್ಥದಲ್ಲಿ ಸರ್ವಪ್ರಾಣಿಗಳಿಗೂ ದಯೆಯನ್ನುಂಟುಮಾಡುವನು.

೩೯. ಶಿವನು ಸರ್ವದೇವತೆಗಳಿಂದ ಅನುವೃತನಾಗಿ ಜನರಿಗೆ ಅನುಗ್ರಹವನ್ನುಂಟುಮಾಡುವವನಾಗಿರುವನು. ಆ ಆಂಗಿರಸರನ್ನೆಲ್ಲಾ ಧರ್ಮವ್ಯಾಸರೆಂದೂ ವೇದವ್ಯಾಸರೆಂದೂ ತಿಳಿಯಬೇಕು.

೪೦. ಆ ತೀರ್ಥವು ವೇದವ್ಯಾಸರಾದ ಆಂಗಿರಸರ ತೀರ್ಥವಾದುದರಿಂದ ಇದಕ್ಕೆ ವ್ಯಾಸತೀರ್ಥವೆಂದು ಮೂರು ಲೋಕದಲ್ಲಿಯೂ ಹೆಸರಾಗಿದೆ. ಈ ತೀರ್ಥವು ಪಾಪವೆಂಬ ಕೆಸರನ್ನು ನಾಶಮಾಡುವುದು. ಮೋಹವೆಂಬ ಕತ್ತಲೆಯನ್ನು ನಾಶಮಾಡುವುದು. ಉತ್ತಮವಾದ ಈ ವ್ಯಾಸತೀರ್ಥವು ಮನುಷ್ಯರಿಗೆ ಸರ್ವಸಿದ್ಧಿಯನ್ನುಂಟುಮಾಡುವುದು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ವ್ಯಾಸತೀರ್ಥವರ್ಣನವೆಂಬ ನೂರೈವತ್ತೆಂಟನೆಯ ಅಧ್ಯಾಯವು ಮುಗಿದುದು-

ಗೌತಮೀಮಾಹಾತ್ಮ್ಯೆಯಲ್ಲಿ ಎಂಭತ್ತೊಂಭತ್ತನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ಏಕೋನಷಷ್ಟ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ವಂಜರಾಸಂಗಮಂ ನಾಮ ತೀರ್ಥಂ ತ್ರೈಲೋಕ್ಯವಿಶ್ರುತಂ ।
ಋಷಿಭಿಃ ಸೇವಿತಂ ನಿತ್ಯಂ ಸಿದ್ಧ್ಯೈ ರಾಜರ್ಷಿಭಿಸ್ತಥಾ ॥ ೧ ॥

ದಾಸತ್ವಮಗಮತ್ಪೂರ್ವಂ ನಾಗಾನಾಂ ಗರುಡಃ ಖಗಃ ।
ಮಾತೃದಾಸ್ಯಾತ್ತದಾ ದುಃಖಪರಿಸಂತಪ್ತಮಾನಸಃ ।
ಕದಾಚಿಚ್ಚಿಂತಯಾಮಾಸ ರಹಃ ಸ್ಥಿತ್ವಾ ವಿನಿಶ್ವಸನ್ ॥ ೨ ॥

॥ ಗರುಡ ಉವಾಚ ॥

ತ ಏವ ಧನ್ಯಾ ಲೋಕೇಽಸ್ಮಿನ್ಸ್ತ ಪುಣ್ಯಾಸ್ತ ಏವ ಹಿ ।
ನಾನ್ಯಸೇವಾ ಕೃತಾ ಯೈಸ್ತು ನ ಯೇಷಾಂ ವ್ಯಸನಾಗಮಃ ॥ ೩ ॥

ನೂರೈವತ್ತೊಂಭತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ವಂಜರಾಸಂಗಮವೆಂಬ ತೀರ್ಥವು ಮೂರು ಲೋಕಗಳಲ್ಲಿಯೂ ಉತ್ತಮವಾದುದು. ಋಷಿಗಳೂ, ರಾಜಋಷಿಗಳೂ ತಪಸ್ಸಿದ್ಧಿಗೋಸ್ಕರ ಈ ತೀರ್ಥವನ್ನು ಸೇವಿಸುವರು.

೨. ಹಿಂದೆ ಗರುಡನು ಸರ್ಪಗಳಿಗೆ ದಾಸನಾಗಿದ್ದನು. ತನ್ನ ತಾಯಿಯಾದ ವಿನತೆಯು ಕದ್ರುವಿಗೆ ದಾಸಳಾದುದರಿಂದ ಬಹಳ ದುಃಖಗೊಂಡವನಾಗಿ ಒಂದಾನೊಂದು ದಿವಸ ನಿಟ್ಟುಸಿರುಬಿಡುತ್ತಾ ತಾನೊಬ್ಬನೇ ಯೋಚಿಸಿದನು.

೩–೪. ಯಾರು ಪರರ ಸೇವೆಯನ್ನು ಮಾಡುವುದಿಲ್ಲವೋ ಅವರೇ ಲೋಕದಲ್ಲಿ ಧನ್ಯರು. ಪುಣ್ಯವಂತರು. ಅವರಿಗೆ ವ್ಯಸನವೇ ಇರುವುದಿಲ್ಲ.

ಸುಖಂ ತಿಷ್ಠಂತಿ ಗಾಯಂತಿ ಸ್ವಪಂತಿ ಚ ಹಸಂತಿ ಚ ।
ಸ್ವದೇಹಪ್ರಭವೋ ಧನ್ಯಾ ಧಿಗ್ಧಿಗನ್ಯವಶೇ ಸ್ಥಿತಾನ್ ॥ ೪ ॥

॥ ಬ್ರಹ್ಮೋವಾಚ ॥

ಇತಿ ಚಿಂತಾಸಮಾವಿಷ್ಟೋ ಜನನೀಮೇತ್ಯ ದುಃಖಿತಃ ।
ಪರ್ಯಪೃಚ್ಛದಮೇಯಾತ್ಮಾ ವೈನತೇಯೋಽಥ ಮಾತರಂ ॥ ೫ ॥

॥ ಗರುಡ ಉವಾಚ ॥

ಕಸ್ಯಾಪರಾಧಾನ್ಮಾತಸ್ತ್ವಂ ಪಿತುರ್ವಾ ಮಮ ವಾನ್ಯತಃ ।
ದಾಸೀತ್ವಮಾಪ್ತಾ ವದ ತತ್ಕಾರಣಂ ಮಮ ಪೃಚ್ಛತಃ ॥ ೬ ॥

॥ ಬ್ರಹ್ಮೋವಾಚ ॥

ಸಾಬ್ರವೀತ್ಪುತ್ರಮಾತ್ಮೀಯಮರುಣಸ್ಯಾನುಜಂ ಪ್ರಿಯಂ ॥ ೭ ॥

॥ ವಿನತೋವಾಚ ॥

ನೈವ ಕಸ್ಯಾಪರಾಧೋಽಸ್ತಿ ಸ್ವಾಪರಾಧೋ ಮಯೋದಿತಃ ।
ಯಸ್ಯಾ ವಾಕ್ಯಂ ವಿಪರ್ಯೇತಿ ಸಾ ದಾಸೀ ಸ್ಯಾನ್ಮಯೋದಿತಂ ॥ ೮ ॥

ಯಾರು ಸ್ವತಂತ್ರರೋ ಅವರು ಸುಖಿಗಳಾಗಿರುವರು. ಅವರು ಆನಂದದಿಂದ ಹಾಡುವರು. ಸುಖವಾಗಿ ಮಲಗಿ ನಿದ್ರಿಸುವರು. ಅವರೇ ಧನ್ಯರು. ಪರರ ದಾಸತ್ವದಲ್ಲಿರತಕ್ಕವರಿಗೆ ಧಿಕ್ಕಾರವಿರಲಿ.

೫. ಈರೀತಿಯಾಗಿ ಚಿಂತೆಯನ್ನು ಮಾಡುತ್ತಾ ದುಃಖಗೊಂಡು ತನ್ನ ತಾಯಿಯ ಹತ್ತಿರಕ್ಕೆ ಹೋಗಿ,

೬. ಎಲೌ ಮಾತೆಯೇ, ನೀನು ದಾಸಿಯಾಗಿರುವುದು ಯಾರ ಅಪರಾಧದಿಂದ? ನನ್ನ ಅಪರಾಧದಿಂದಲೇ? ಅಥವಾ ನಮ್ಮ ತಂದೆಯ ಅಪರಾಧದಿಂದಲೇ? ಅದಕ್ಕೆ ಕಾರಣವನ್ನು ತಿಳಿಸು ಎಂದು ಕೇಳಿದನು.

೭-೮. ಅದಕ್ಕೆ ವಿನತೆಯು ಅರುಣನ ಅಣ್ಣನಾದ ತನ್ನ ಪುತ್ರ ಗರುಡನನ್ನು ಕುರಿತು, ಯಾರು ಆಡಿದ ವಾಕ್ಯವು ಸುಳ್ಳಾಯಿತೋ ಆಕಾರಣದಿಂದಲೇ ನಾನು ದಾಸಿಯಾದುದು. ಇದರಲ್ಲಿ ಯಾರದೂ ಅಪರಾಧವಿಲ್ಲ. ನನ್ನದೇ ಅಪರಾಧವು.

ಕದ್ರೂಶ್ಚಾಪಿ ತಥೈವಾಹಂ ಸಾ ಮಯಾ ಸಂಯುತಾ ಯಯೌ ।
ಕದ್ರ್ವಾ ಮಮಾಭವದ್ವಾದಶ್ಛದ್ಮನಾಹಂ ತಯಾ ಜಿತಾ ॥ ೯ ॥

ವಿಧಿರ್ಹಿ ಬಲವಾಂಸ್ತಾತ ಕಾಂ ಕಾಂ ಚೇಷ್ಟಾಂ ನ ಚೇಷ್ಟತೇ ।
ಏವಂ ದಾಸೀತ್ವಮಗಮಂ ಕದ್ರ್ವಾಃ ಕಶ್ಯಪನಂದನ ।
ಯದಾ ದಾಸೀ ತು ಜಾತಾಹಂ ದಾಸೋಽಭೂಸ್ತ್ವಂ ದ್ವಿಜನ್ಮಜ ॥ ೧೦ ॥

॥ ಬ್ರಹ್ಮೋವಾಚ ॥

ತೂಷ್ಣೀಂ ತದಾ ಬಭೂವಾಸೌ ಗರುಡೋಽತೀವ ದುಃಖಿತಃ ।
ನ ಕಿಂಚಿದೂಚೇ ಜನನೀಂ ಚಿಂತಯನ್ಭವಿತವ್ಯತಾಂ ॥ ೧೧ ॥

ಕದ್ರೂಃ ಕದಾಚಿತ್ಸಾ ಸ್ಮಾಹ ಪುತ್ರಾಣಾಂ ಹಿತಮಿಚ್ಛತೀ ।
ಆತ್ಮನೋ ಭೂತಿಮಿಚ್ಛಂತೀ ವಿನತಾಂ ಖಗಮಾತರಂ ॥ ೧೨ ॥

---

೯. ಕದ್ರುವೂ ಕೂಡ ನನ್ನೊಡನೆ ಸರಿಯಾಗಿ ಇರುತ್ತಿದ್ದಳು. ಆದರೆ ಕದ್ರುವಿಗೂ ನನಗೂ ವಾದವುಂಟಾಗಲು ಅವಳು ನನಗೆ ಮೋಸಮಾಡಿ ನನ್ನನ್ನು ಜಯಿಸಿದಳು.

೧೦. ಅಪ್ಪಾ ಮಗು, ಗರುಡನೇ, ಎಲ್ಲದಕ್ಕೂ ಅದೃಷ್ಟವೇ ಬಲವಾದುದು. ಅದು ಯಾವಯಾವ ಆಟಗಳನ್ನು ತಾನೇ ಆಡುವುದಿಲ್ಲ? ಈ ರೀತಿಯಾಗಿ ನಾನು ದಾಸಿಯಾದೆನು. ನಾನು ಯಾವಾಗ ದಾಸಿಯಾದೆನೋ ನೀನೂ ದಾಸನೇ ಆದೆ ಎಂದಳು.

೧೧. ಅನಂತರ ಗರುಡನು ಬಹಳ ದುಃಖದಿಂದ ಸುಮ್ಮನಾದನು ಮುಂದೇನಾಗುವುದೆಂದು ಯೋಚಿಸುತ್ತಾ ತಾಯಿಯೊಡನೆ ಪುನಃ ಏನನ್ನೂ ಹೇಳಲಿಲ್ಲ.

೧೨. ಒಂದುಸಾರಿ ಕದ್ರುವು ತನ್ನ ಪುತ್ರರಿಗೆ ಹಿತವನ್ನುಂಟುಮಾಡಲೂ, ತಾನು ಗೌರವವನ್ನು ಪಡೆಯಲೂ, ಗರುಡನ ತಾಯಿಯಾದ ವಿನತೆಯನ್ನು ಕುರಿತು,

॥ ಕದ್ರೂರುವಾಚ ॥
ಪುತ್ರಃ ಸೂರ್ಯಂ ನಮಸ್ಕರ್ತುಂ ತವ ಯಾತ್ಯನಿವಾರಿತಃ ।
ಅಹೋ ಲೋಕತ್ರಯೇಽಪ್ಯಸ್ಮಿನ್ಧನ್ಯಾಸಿ ಬತ ದಾಸ್ಯಪಿ ॥ ೧೩ ॥
॥ ಬ್ರಹ್ಮೋವಾಚ ॥
ಸ್ವದುಃಖಂ ಗೂಹಮಾನಾ ಸಾ ಕದ್ರೂಂ ಪ್ರಾಹ ಸುವಿಸ್ಮಿತಾ ॥ ೧೪ ॥
॥ ವಿನತೋವಾಚ ॥
ತವ ಪುತ್ರಾಸ್ತು ಕಿಮಿತಿ ರವಿಂ ದ್ರಷ್ಟುಂ ನ ಯಾಂತಿ ಚ ॥ ೧೫ ॥
॥ ಕದ್ರೂರುವಾಚ ॥
ಪುತ್ರಾನ್ಮದೀಯಾನ್ಸುಭಗೇ ನಯ ನಾಗಾಲಯಂ ಪ್ರತಿ ।
ಸಮುದ್ರಸ್ಯ ಸಮೀಪೇ ತು ತದಾಸ್ತೇ ಶೀತಲಂ ಸರಃ ॥ ೧೬ ॥
॥ ಬ್ರಹ್ಮೋವಾಚ ॥
ಸುಪರ್ಣಸ್ತ್ವವಹನ್ನಾಗಾನ್ಕದ್ರೂಂ ಚ ವಿನತಾ ತಥಾ ।
ತತಃ ಪ್ರೋವಾಚ ಮುದಿತಾ ವೈನತೇಯಸ್ಯ ಮಾತರಂ ॥ ೧೭ ॥

---

೧೩. ಎಲೌ ವಿನತೆಯೇ, ನಿನ್ನ ಮಗನು ಯಾವ ಅಡ್ಡಿಯೂ ಇಲ್ಲದೆ ಸೂರ್ಯನನ್ನು ನಮಸ್ಕರಿಸಲು ಅವನ ಹತ್ತಿರಕ್ಕೆ ಹೋಗಬಲ್ಲನು. ನೀನು ದಾಸಿಯಾದರೂ ಲೋಕತ್ರಯದಲ್ಲಿಯೂ ನೀನು ಧನ್ಯಳು ಎಂದಳು.

೧೪–೧೫. ಈರೀತಿಯಾಗಿ ಹೇಳಿದ ಕದ್ರುವಿನ ಮಾತನ್ನು ಕೇಳಿ ದುಃಖಗೊಂಡವಳಾಗಿ ತನ್ನ ದುಃಖವನ್ನು ತೋರ್ಪಡಿಸದೆ ನಗುತ್ತಾ ಕದ್ರುವನ್ನು ಕುರಿತು, ನಿನ್ನ ಮಕ್ಕಳು ಸೂರ್ಯನ ಹತ್ತಿರಕ್ಕೆ ಏಕೆ ಹೋಗಲಾರರು? ಎನ್ನಲು,

೧೬. ಅದಕ್ಕೆ ಕದ್ರುವು ಎಲೌ ಸೌಭಾಗ್ಯವಂತಳೇ, ನನ್ನ ಮಕ್ಕಳನ್ನು ಪಾತಾಳಕ್ಕೆ ಕರೆದುಕೊಂಡುಹೋಗು. ಶೀತಲವಾದ ಸರೋವರವುಳ್ಳ ಸಮುದ್ರದ ಸಮೀಪಕ್ಕೂ ಕರೆದುಕೊಂಡು ಹೋಗು ಎಂದಳು.

೧೭. ಗರುಡನು ಸರ್ಪಗಳನ್ನು ಪಾತಾಳಕ್ಕೆ ಕರೆದುಕೊಂಡು ಹೋದನು ಆದರಿಂದ ಕದ್ರುವು ಸಂತೋಷಪಟ್ಟು ವಿನತೆಯನ್ನು ಕುರಿತು,

ಸುರಾಣಾಂ ನೇತು ನಿಲಯಂ ಗರುಡೋ ಮತ್ಸುತಾನಿತಿ ।
ಪುನಃ ಪ್ರಾಹ ಸರ್ಪಮಾತಾ ಗರುಡಂ ವಿನಯಾನ್ವಿತಂ ॥ ೧೮ ॥

॥ ಸರ್ಪಮಾತೋವಾಚ ॥

ಪುತ್ರಾ ಮೇ ದ್ರಷ್ಟುಮಿಚ್ಛಂತಿ ಹಂಸಂ ತ್ರಿಜಗತಾಂ ಗುರುಂ ।
ನಮಸ್ಕೃತ್ವಾ ತತಃ ಸೂರ್ಯಮೇಷ್ಯಂತಿ ನಿಲಯಂ ಮಮ ।
ಹಂಡೇ ತ್ವಂ ನಯ ಪುತ್ರಾನ್ಮೇ ಸೂರ್ಯಮಂಡಲಮನ್ವಹಂ ॥ ೧೯ ॥

॥ ಬ್ರಹ್ಮೋವಾಚ ॥

ಸಾ ವೇಪಮಾನಾ ವಿನತಾ ದೀನಾ ಕದ್ರೂಮಭಾಷತ ॥ ೨೦ ॥

॥ ವಿನತೋವಾಚ ॥

ನಾಹಂ ಕ್ಷಮಾ ಸರ್ಪಮಾತಃ ಪುತ್ರೋ ಮೇ ನೇಷ್ಯತೇ ಸುತಾನ್ ।
ದೃಷ್ಟ್ವಾ ದಿನಕರಂ ದೇವಂ ಪುನರೇವ ಪ್ರಯಾಂತು ತೇ ॥ ೨೧ ॥

॥ ಬ್ರಹ್ಮೋವಾಚ ॥

ವಿನತಾ ಸ್ವಸುತಂ ಪ್ರಾಹ ವಿಹಗಾನಾಮಧೀಶ್ವರಂ ।
ನಮಸ್ಕರ್ತುಮಥೇಚ್ಛಂತಿ ನಾಗಾಃ ಸ್ವಾಮಿತ್ವಮಾಗತಾಃ ॥ ೨೨ ॥

೧೮-೧೯. ನನ್ನ ಮಕ್ಕಳನ್ನು ಗರುಡನು ಸ್ವರ್ಗಕ್ಕೆ ಕರೆದುಕೊಂಡು ಹೋಗಲಿ, ತ್ರಿಲೋಕಗುರುವಾದ ಸೂರ್ಯನನ್ನು ನಮಸ್ಕರಿಸಿ ಪುನಃ ಇಲ್ಲಿಗೆ ಬರುವರು. ಆದುದರಿಂದ ಎಲೌ ಸಖಿಯೇ ನನ್ನ ಪುತ್ರರನ್ನು ಸೂರ್ಯ ಮಂಡಲಕ್ಕೆ ಕರೆದುಕೊಂಡುಹೋಗು ಎಂದಳು.

೨೦-೨೧. ಅದನ್ನು ಕೇಳಿ ವಿನತೆಯು ಭಯದಿಂದ ನಡುಗುತ್ತಾ ದೀನಳಾಗಿ ಕದ್ರುವನ್ನು ಕುರಿತು ಎಲೌ ಸರ್ಪಮಾತೆಯೇ, ನನ್ನಿಂದ ಆ ಕಾರ್ಯವು ಸಾಧ್ಯ ವಿಲ್ಲ. ನನ್ನ ಮಗನು ನಿನ್ನ ಮಕ್ಕಳನ್ನು ಸೂರ್ಯನಲ್ಲಿಗೆ ಕರೆದೊಯ್ಯಲಾರನು ಅವರೇ ಸೂರ್ಯನನ್ನು ನೋಡಿ ಪುನಃ ಬರಲಿ ಎಂದಳು

೨೨. ಅನಂತರ ವಿನತೆಯು ತನ್ನ ಮಗನನ್ನು ಕುರಿತು ನಮಗೆ ಸ್ವಾಮಿಗಳಾದ ಸರ್ಪಗಳೆಲ್ಲರೂ ಸೂರ್ಯನನ್ನು ನಮಸ್ಕರಿಸಲಿಚ್ಛಿಸುವರು. ಅವ ರನ್ನು ಅಲ್ಲಿಗೆ ಕರೆದುಕೊಂಡುಹೋಗಬೇಕೆಂದು ಕದ್ರುವು ಹೇಳಿರುವಳು ಎಂದು ಹೇಳಿದಳು.

ಭಾಸ್ವಂತಮಿತ್ಯುವಾಚೇಯಂ ಮಾಂ ಸರ್ಪಜನನೀ ಹಠಾತ್ ।
ತಥೇತ್ಯುಕ್ತ್ವಾ ಸ ಗರುಡೋ ಮಾಮಾರೋಹಂತು ಪನ್ನಗಾಃ ॥ ೨೩ ॥

ತದಾರೂಢಂ ಸರ್ಪಸೈನ್ಯಂ ಗರುಡಂ ವಿಹಗಾಧಿಪಂ ।
ಶನೈಃ ಶನೈರುಪಗಮದ್ಯತ್ರ ದೇವೋ ದಿವಾಕರಃ ।
ತೇ ದಹ್ಯಮಾನಾಸ್ತೀಕ್ಷ್ಣೇನ ಭಾನುತಾಪೇನ ವಿವ್ಯಥುಃ ॥ ೨೪ ॥

॥ ಸರ್ಪಾ ಊಚುಃ ॥

ನಿವರ್ತಸ್ವ ಮಹಾಪ್ರಾಜ್ಞ ಪತಂಗಾಯ ನಮೋ ನಮಃ ।
ಅಲಂ ಸೂರ್ಯಸ್ಯ ಸದನಂ ದಗ್ಧಾಃ ಸೂರ್ಯಸ್ಯ ತೇಜಸಾ ।
ಯಾಮಸ್ತ್ವಯಾ ವಾ ಗರುಡ ನಿಹಾಯ ತ್ವಾಮಥಾಪಿ ವಾ ॥ ೨೫ ॥

॥ ಬ್ರಹ್ಮೋವಾಚ

ಏವಂ ನಾಗೈರುಚ್ಯಮಾನ ಆದಿತ್ಯಂ ದರ್ಶಯಾಮಿ ವಃ ।
ಇತ್ಯುಕ್ತ್ವಾ ಗಗನಂ ಶೀಘ್ರಂ ಜಗಾಮಾದಿತ್ಯಸಂಮುಖಃ ॥ ೨೬ ॥

೨೩-೨೪. ಅನಂತರ ಗರುಡನು ಸರ್ಪಗಳೆಲ್ಲವೂ ನನ್ನ ಬೆನ್ನಮೇಲೆ ಕುಳಿತುಕೊಳ್ಳಲಿ ಎನ್ನಲು, ಆ ಸರ್ಪಸೈನ್ಯವು ಪಕ್ಷಿರಾಜನಾದ ಗರುಡನನ್ನು ಏರಿ ಕುಳಿತವು. ಬಳಿಕ ಗರುಡನು ಮೆಲ್ಲಮೆಲ್ಲಗೆ ಸೂರ್ಯನ ಹತ್ತಿರಕ್ಕೆ ಹೋಗುತ್ತಿದ್ದನು. ಆ ಸರ್ಪಗಳೆಲ್ಲವೂ ಸೂರ್ಯನ ತಾಪದಿಂದ ಸುಡಲ್ಪಡುತ್ತಾ ಬಹುವಾಗಿ ದುಃಖಗೊಂಡರು.

೨೫. ಸರ್ಪಗಳಿಂತೆಂದವು—ಎಲೈ ಮಹಾಪ್ರಾಜ್ಞನಾದ ಗರುಡನೇ ನಿನಗೆ ನಮಸ್ಕಾರವು. ನೀನು ಹಿಂತಿರುಗು. ಸೂರ್ಯನಲ್ಲಿಗೆ ಹೋದುದು ಸಾಕು. ಸೂರ್ಯನ ತೇಜಸ್ಸಿನಿಂದ ಸುಟ್ಟುಹೋಗುತ್ತಿರುವೆವು. ನೀನಾದರೂ ನಮ್ಮನ್ನು ಹಿಂತಿರುಗಿಸು ಅಥವಾ ನೀನಿಲ್ಲೇ ಇದ್ದರೂ ಸರಿಯೇ. ನಾವು ಹೊರಡುವೆವು ಎಂದು ಬೇಡಿಕೊಂಡವು.

೨೬. ಈರೀತಿಯಾಗಿ ಸರ್ಪಗಳು ಹೇಳುತ್ತಿರಲು ಗರುಡನು ನಿಮಗೆ ಸೂರ್ಯನನ್ನು ತೋರಿಸುವೆನು ಎಂದೆನ್ನುತ್ತಾ ಜಾಗ್ರತೆಯಾಗಿ ಸೂರ್ಯನಿಗೆದುರಾಗಿ ಆಕಾಶದಲ್ಲಿ ಹಾರಿದನು.

ದಗ್ಧಭೋಗಾ ನಿಪೇತುಸ್ತೇ ದ್ವೀಪಂ ತಂ ವೀರಣಂ ಪ್ರತಿ ।
ಬಹವಃ ಶತಸಾಹಸ್ರಾಃ ಪೀಡಿತಾ ದಗ್ಧವಿಗ್ರಹಾಃ ॥ ೨೭ ॥

ಪುತ್ರಾಣಾಮಾರ್ತಸಂನಾದಂ ಪತಿತಾನಾಂ ಮಹೀತಲೇ ।
ಆಶ್ವಾಸಿತುಂ ಸಮಾಯಾತಾ ತಾನ್ಸಾ ಕದ್ರೂಃ ಸುವಿಹ್ವಲಾ ॥ ೨೮ ॥

ಉವಾಚ ವಿನತಾಂ ಕದ್ರೂಸ್ತವ ಪುತ್ರೋಽತಿದುಷ್ಕೃತಂ ।
ಕೃತವಾನತಿದುರ್ಮೇಧಾ ಯೇಷಾಂ ಶಾಂತಿರ್ನ ವಿದ್ಯತೇ ॥ ೨೯ ॥

ನಾನ್ಯಥಾ ಕರ್ತುಮಾಯಾತಿ ಸ್ವಾಮಿವಾಕ್ಯಂ ಫಣೀಶ್ವರಃ ।
ಸ ಕಾಶ್ಯಪೋ ಬೃಹತ್ತೇಜಾ ಯದ್ಯತ್ರ ಸ್ಯಾದನಾಮಯಂ ॥ ೩೦ ॥

ಭವೇಚ್ಚೈವಂ ಕಥಂ ಶಾಂತಿಃ ಪುತ್ರಾಣಾಂ ಮಮ ಭಾಮಿನಿ ।
ಕದ್ರ್ವಾಸ್ತದ್ವಚನಂ ಶ್ರುತ್ವಾ ವಿನತಾ ಹ್ಯತಿಭೀತವತ್ ॥ ೩೧ ॥

ಪುತ್ರಮಾಹ ಮಹಾತ್ಮಾನಂ ಗರುಡಂ ವಿಹಗಾಧಿಪಂ ॥ ೩೨ ॥

---

೨೭. ಸೂರ್ಯನ ತಾಪದಿಂದ ಅನೇಕ ಸರ್ಪಗಳಿಗೆ ಹೆಡೆಗಳೆಲ್ಲವೂ ಸುಟ್ಟು ಹೋದವು. ಅವೆಲ್ಲವೂ ವೀರಣವೆಂಬ ದ್ವೀಪದಲ್ಲಿ ಬಿದ್ದವು. ಸಾವಿರಾರು ಸರ್ಪಗಳು ಶರೀರವೆಲ್ಲವೂ ಸುಟ್ಟುಹೋಗುತ್ತಿರಲು ಕೆಳಗೆ ಬಿದ್ದವು.

೨೮. ತನ್ನ ಪುತ್ರರು ಕೆಳಕ್ಕೆ ಬಿದ್ದು ಆರ್ತನಾದವನ್ನು ಮಾಡುತ್ತಿರುವುದನ್ನು ಕೇಳಿ ಕದ್ರುವು ಅವರನ್ನು ಸಮಾಧಾನಗೊಳಿಸಲು ಬಂದು,

೨೯. ವಿನತೆಯನ್ನು ಕುರಿತು ನಿನ್ನ ಮಗನು ಮಾಡಬಾರದ ಕೆಲಸವನ್ನು ಮಾಡಿರುವನು. ಅವನು ಕೆಡಕುಬುದ್ಧಿಯುಳ್ಳವನು. ನನ್ನ ಮಕ್ಕಳೆಲ್ಲರೂ ಅಶಾಂತರಾಗಿರುವರು.

೩೦. ಸರ್ಪಗಳಿಗೆ ತಂದೆಯಾದ ತೇಜಸ್ವಿಯಾದ ಕಾಶ್ಯಪನು ಆರೋಗ್ಯವಂತನಾಗಿ ಇಲ್ಲಿ ಈಗ ಇದ್ದಿದ್ದೇ ಆದರೆ ನಾನು ನಿನಗೆ ಹೇಳಿದ ವಾಕ್ಯವು ವ್ಯರ್ಥವಾಗುತ್ತಿರಲಿಲ್ಲ. ಎಲೌ ಭಾಮಿನಿಯೇ, ನನ್ನ ಮಕ್ಕಳಿಗೆ ಹೇಗೆ ತಾನೇ ಶಾಂತಿಯು ದೊರಕುವುದು ಎಂದು ಹೇಳಿದಳು.

೩೧-೩೨. ಕದ್ರುವು ಆಡಿದ ಮಾತುಗಳನ್ನು ಕೇಳಿ ವಿನತೆಯು ಅತ್ಯಂತ ಭೀತಿಗೊಂಡು ಪಕ್ಷಿರಾಜನಾದ ಗರುಡನನ್ನು ಕುರಿತು,

॥ ವಿನತೋವಾಚ ॥

ನೇದಂ ಯುಕ್ತತರಂ ಪುತ್ರ ಭೂಷಣಂ ವಿನಯೇನ ಹಿ ।
ವರ್ತಿತುಂ ಯುಕ್ತಮಿತ್ಯುಕ್ತಂ ವೈಪರೀತ್ಯಂ ನ ಯುಜ್ಯತೇ ॥ ೩೩ ॥

ನಾಮಿತ್ರೇಷ್ವಪಿ ಕರ್ತವ್ಯಂ ಸದ್ಭಿರ್ಜಿಹ್ಮಂ ಕದಾಚನ ।
ಶ್ರೋತ್ರಿಯೇ ಚಾಂತ್ಯಜೇ ವಾಪಿ ಸಮಂ ಚಂದ್ರಃ ಪ್ರಕಾಶತೇ ॥ ೩೪ ॥

ಕುರ್ವಂತ್ಯನಿಷ್ಟಂ ಕಪಟೈಸ್ತ ಏವ ಮಮ ಪುತ್ರಕ ।
ಪ್ರಸಹ್ಯ ಕರ್ತುಂ ಯೇ ಸಾಕ್ಷಾದಶಕ್ತಾಃ ಪುರುಷಾಧಮಾಃ ॥ ೩೫

॥ ಬ್ರಹ್ಮೋವಾಚ ॥

ವಿನತಾ ಚ ತತಃ ಪ್ರಾಹ ಕದ್ರೂಂ ತಾಂ ಸರ್ಪಮಾತರಂ ॥ ೩೬ ॥

॥ ವಿನತೋವಾಚ ॥

ಕಿಂ ಕೃತ್ವಾ ಶಾಂತಿರಭ್ಯೇತಿ ಪುತ್ರಾಣಾಂ ತೇ ಕರೋಮಿ ತತ್ ।
ಜರಯಾ ತು ಗೃಹೀತಾಸ್ತೇ ವದ ಶಾಂತಿಂ ಕರೋಮಿ ತತ್ ॥ ೩೭ ॥

೩೩-೩೫. ಮಗು, ಇದು ನಿನಗೆ ಯೋಗ್ಯವಾದುದಲ್ಲ. ವಿನಯವಾಗಿ ನಡೆಯುವುದೇ ಭೂಷಣವಾದುದು. ಯಾವಾಗಲೂ ವಿಪರೀತವಾಗಿ ನಡೆಯಬಾರದು. ಶತ್ರುಗಳಿಗೂ ಈರೀತಿ ಮಾಡಬಾರದು. ಸತ್ಪುರುಷರು ಅನಿಷ್ಟವನ್ನು ಯಾರಿಗೂ ಮಾಡುವುದಿಲ್ಲ. ನೋಡು, ಚಂದ್ರನು–ಇವನು ಶ್ರೋತ್ರಿಯನು, ಇವನು ಅಂತ್ಯಜ ಎಂಬ ಭೇದಭಾವನೆಯಿಲ್ಲದೆ ಎಲ್ಲರಲ್ಲಿಯೂ ಒಂದೇ ಸಮನಾಗಿ ಪ್ರಕಾಶಿಸುವನು. ಎಲೈ ಪುತ್ರನೇ, ಯಾರು ಮೋಸದಿಂದ ಅನಿಷ್ಟವನ್ನು ಮಾಡುವರೋ ಅವರು ಪುರುಷಾಧಮರು ಎಂದು ಹೇಳಿದಳು.

೩೬-೩೭. ಅನಂತರ ಸರ್ಪಮಾತೃವಾದ ಕದ್ರುವನ್ನು ಕುರಿತು ನಿನ್ನ ಮಕ್ಕಳಿಗೆ ಏನುಮಾಡಿದರೆ ಶಾಂತಿಯುಂಟಾಗುವುದು ? ಅವರೆಲ್ಲರೂ ಮುಪ್ಪಿನಿಂದ ಕೂಡಿರುವರು. ಶಾಂತಿಯು ಏತರಿಂದ ಉಂಟಾಗುವುದೆಂಬುದನ್ನು ಹೇಳು ಎನ್ನಲು,

॥ ಬ್ರಹ್ಮೋವಾಚ ॥

ಕದ್ರೂರಪ್ಯಾಹ ವಿನತಾಂ ರಸಾತಲಗತಂ ಪಯಃ ।
ತೇನಾಭಿಷೇಚಿತಾನಾಂ ಮೇ ಪುತ್ರಾಣಾಂ ಶಾಂತಿರೇಷ್ಯತಿ ॥ ೩೮ ॥

ಕದ್ರ್ವಾಸ್ತದ್ವಚನಂ ಶ್ರುತ್ವಾ ರಸಾತಲಗತಂ ಪಯಃ ।
ಕ್ಷಣೇನೈವ ಸಮಾನೀಯ ನಾಗಾಂಸ್ತಾನಭ್ಯಷೇಚಯತ್ ।
ತತಃ ಪ್ರೋವಾಚ ಗರುಡೋ ಮಘವಾನಂ ಶತಕ್ರತುಂ ॥ ೩೯ ॥

॥ ಗರುಡ ಉವಾಚ ॥

ಮೇಘಾಶ್ಚಾಪ್ಯತ್ರ ವರ್ಷಂತು ತ್ರೈಲೋಕ್ಯಸ್ಯೋಪಕಾರಿಣಃ ॥ ೪೦ ॥

॥ ಬ್ರಹ್ಮೋವಾಚ ॥

ತಥಾ ವವರ್ಷ ಪರ್ಜನ್ಯೋ ನಾಗಾನಾಮುಭವಚ್ಛಿವಂ ।
ರಸಾತಲಭವಂ ಗಾಂಗಂ ನಾಗಸಂಜೀವನಂ ಪಯಃ ॥ ೪೧ ॥

ಜರಾಶೋಕವಿನಾಶಾರ್ಥಮಾನೀತಂ ಗರುಡೇನ ಯತ್ ।
ಯತ್ರಾಭಿಷೇಚಿತಾ ನಾಗಸ್ತನ್ನಾಗಾಲಯಮುಚ್ಯತೇ ॥ ೪೨ ॥

---

೩೮. ಕದ್ರುವು ವಿನತೆಯನ್ನು ಕುರಿತು ಪಾತಾಳದಲ್ಲಿರುವ ನೀರನ್ನು ತಂದು ನನ್ನ ಮಕ್ಕಳ ಮೇಲೆ ಚುಮುಕಿಸಿದರೆ ಆಗ ಅವರಿಗೆ ಶಾಂತಿಯುಂಟಾಗುವುದು ಎಂದು ಹೇಳಿದಳು.

೩೯-೪೦. ಕದ್ರುವಿನ ಆ ಮಾತನ್ನು ಕೇಳಿ ಗರುಡನು ಜಾಗ್ರತೆಯಾಗಿ ಪಾತಾಳಕ್ಕೆ ಹೋಗಿ ನೀರನ್ನು ತಂದು ಸರ್ಪಗಳಮೇಲೆ ಚುಮುಕಿಸಿದನು. ಅನಂತರ ಗರುಡನು ಇಂದ್ರನನ್ನು ಕುರಿತು ತ್ರಿಲೋಕೋಪಕಾರಿಗಳಾದ ಮೇಘಗಳು ಇಲ್ಲಿ ಮಳೆಗರೆಯಲಿ ಎಂದು ಕೇಳಿದನು.

೪೧-೪೨. ಅದೇರೀತಿಯಾಗಿ ಮೇಘಗಳು ಮಳೆಕರೆದವು. ಸರ್ಪಗಳಿಗೆ ಶುಭವುಂಟಾಯಿತು. ರಸಾತಲದಲ್ಲಿದ್ದ ಗಂಗಾನದಿಯ ನೀರು, ನಾಗಗಳಿಗೆ ಸಂಜೀವನವಾಯಿತು. ಮುಪ್ಪಿನ ದುಃಖನಿವಾರಣೆಗೋಸ್ಕರ ಗರುಡನು ಗಂಗೆಯ ನೀರನ್ನು ತಂದನು. ಯಾವ ಸ್ಥಳದಲ್ಲಿ ನಾಗಗಳಿಗೆ ನೀರನ್ನು ಅಭಿಷೇಕಮಾಡಿದನೋ ಆ ಸ್ಥಳಕ್ಕೆ ನಾಗಾಲಯವೆಂದು ಹೆಸರು.

ಗರುಡೇನ ಯತೋ ವಾರಿ ಆನೀತಂ ತದ್ರಸಾತಲಾತ್ ।
ತದ್ಗಾಂಗಂ ವಾರಿ ಸರ್ವೇಷಾಂ ಸರ್ವಪಾಪಪ್ರಣಾಶನಂ ॥ ೪೩ ॥

ಜರಾಯಾ ವಾರಣಂ ಯಸ್ಮಾನ್ನಾಗಾನಾಮಭವಚ್ಛಿವಂ ।
ರಸಾತಲಭವಂ ಗಾಂಗಂ ನಾಗಸಂಜೀವನಂ ಯತಃ ॥ ೪೪ ॥

ಜರಾಶೋಕವಿನಾಶಾರ್ಥಂ ಗಂಗಾಯಾ ದಕ್ಷಿಣೇ ತಟೇ ।
ಸಾಕ್ಷಾದಮೃತಸಂವಾಹಾ ವಂಜರಾ ಸಾಭವನ್ನದೀ ॥ ೪೫ ॥

ಜರಾದಾರಿದ್ರ್ಯಸಂತಾಪಹಾರಿಣೀ ಕ್ಲೇಶವಾರಿಣೀ ।
ರಸಾತಲಭವಾ ಗಂಗಾ ಮರ್ತ್ಯಲೋಕಭವಾ ತು ಯಾ ॥ ೪೬ ॥

ತಯೋಶ್ಚ ಸಂಗಮೋ ಯಃ ಸ್ಯಾತ್ಕಿಂ ಪುನಸ್ತತ್ರ ವರ್ಣ್ಯತೇ ।
ಯಸ್ಯಾನುಸ್ಮರಣಾದೇವ ನಾಶಂ ಯಾಂತ್ಯಘಸಂಚಯಾಃ ॥ ೪೭ ॥

---

೪೩. ಪಾತಾಳದಿಂದ ಗರುಡನು ನೀರನ್ನು ತಂದುದರಿಂದ ಆ ಗಂಗಾ ನದಿಯ ನೀರು ಸರ್ವಪಾಪಗಳನ್ನು ಪರಿಹರಿಸುವುದು.

೪೪-೪೫. ಮುಪ್ಪನ್ನು ನಾಶಮಾಡಿದುದರಿಂದ ಸರ್ಪಗಳಿಗೆ ಶುಭವುಂಟಾಯಿತು. ರಸಾತಲದಲ್ಲಿದ್ದ ಗಂಗೆಯು ಸರ್ಪಗಳಿಗೆ ಸಂಜೀವನವಾಗಿ ಮುಪ್ಪಿನಿಂದುಂಟಾದ ಶೋಕವನ್ನು ನಾಶಮಾಡಿತು. ಸಾಕ್ಷಾತ್ ಅಮೃತವಾಹಿನಿಯಾದ ಆ ನೀರು ಗಂಗಾನದಿಯ ದಕ್ಷಿಣತಟದಲ್ಲಿ ಹರಿಯುವುದು. ಅದು ವಂಜರಾ ಎಂದು ಹೆಸರುಳ್ಳ ನದಿಯಾಯಿತು.

೪೬-೪೭. ರಸಾತಲದಲ್ಲಿ ಹುಟ್ಟಿದ ಗಂಗೆಯು ಮುಪ್ಪು, ದಾರಿದ್ರ್ಯ, ಸಂತಾಪ, ಕ್ಲೇಶ ಇವುಗಳೆಲ್ಲವನ್ನೂ ನಾಶಮಾಡುವುದು. ಭೂಲೋಕದಲ್ಲಿ ಹುಟ್ಟಿದ ಗಂಗೆಯು ಮತ್ತು ರಸಾತಲದಲ್ಲಿ ಹುಟ್ಟಿದ ಗಂಗೆಯ ಸಂಗಮವಾಗಲು ಆ ತೀರ್ಥದ ಮಾಹಾತ್ಮ್ಯೆಯನ್ನು ಹೇಳಬೇಕಾದುದೇನು ? ಇದರ ಸ್ಮರಣೆಯಿಂದ ಪಾಪರಾಶಿಯು ನಾಶವಾಗುವುದು.

ತತ್ರ ಚ ಸ್ನಾನದಾನಾನಾಂ ಫಲಂ ಕೋ ವಕ್ತುಮೀಶ್ವರಃ ।
ಸಪಾದಂ ತತ್ರ ತೀರ್ಥಾನಾಂ ಲಕ್ಷಮಾಹುರ್ಮನೀಷಿಣಃ ॥ ೪೮ ॥

ಸರ್ವಸಂಪತ್ತಿದಾತೄಣಾಂ ಸರ್ವಪಾಪೌಘಹಾರಿಣಾಂ ।
ವಂಜರಾಸಂಗಮಸಮಂ ತೀರ್ಥಂ ಕ್ವಾಪಿ ನ ವಿದ್ಯತೇ ।
ಯದನುಸ್ಮರಣೇನಾಪಿ ವಿಪದ್ಯಂತೇ ವಿಪತ್ತಯಃ ॥ ೪೯ ॥

**ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ವಂಜರಾಸಂಗಮಾದಿಸಪಾದಲಕ್ಷತೀರ್ಥವರ್ಣನಂ ನಾಮೈ-
ಕೋನಷಷ್ಟ್ಯಧಿಕಶತತಮೋಽಧ್ಯಾಯಃ**

೪೮-೪೯. ಈ ವಂಜರಾಸಂಗಮದಲ್ಲಿ ಸ್ನಾನದಾನಾದಿಗಳನ್ನು ಮಾಡಿದರೆ ಉಂಟಾಗುವ ಫಲವು ಇಷ್ಟೆಂದು ಹೇಳಲು ಯಾರುತಾನೇ ಸಮರ್ಥರು? ಜ್ಞಾನಿಗಳು ಅಲ್ಲಿ ಇನ್ನೂ ಒಂದೂಕಾಲುಲಕ್ಷ ತೀರ್ಥಗಳಿರುವುವೆಂದು ಹೇಳುವರು. ಅವೆಲ್ಲವೂ ಸರ್ವಸಂಪತ್ಪ್ರದಾತೃಗಳು, ಸರ್ವಪಾಪಗಳನ್ನೂ ನಾಶಮಾಡತಕ್ಕವುಗಳು. ವಂಜರಾಸಂಗಮಕ್ಕೆ ಸಮನಾದ ಬೇರೊಂದು ತೀರ್ಥವಿಲ್ಲ. ಇದರ ಸ್ಮರಣೆಯನ್ನು ಮಾಡಿದರೆ ವಿಪತ್ತುಗಳೆಲ್ಲ ನಾಶವಾಗುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ವಂಜರಾಸಂಗಮಾದಿಸಪಾದಲಕ್ಷತೀರ್ಥವರ್ಣನವೆಂಬ ನೂರೈವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯಯಲ್ಲಿ ತೊಂಭತ್ತನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಷಷ್ಟ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ದೇವಾಗಮಂ ನಾಮ ತೀರ್ಥಂ ಸರ್ವಕಾಮಪ್ರದಂ ಶಿವಂ ।
ಭುಕ್ತಿಮುಕ್ತಿಪ್ರದಂ ನೃಣಾಂ ಪಿತೄಣಾಂ ತೃಪ್ತಿಕಾರಕಂ ॥ ೧ ॥

ತತ್ರ ವೃತ್ತಂ ಸಮಾಖ್ಯಾಸ್ಯೇ ತವ ಯತ್ನೇನ ನಾರದ ।
ದೇವಾನಾಮಸುರಾಣಾಂ ಚ ಸ್ಪರ್ಧಾಭೂದ್ಧನಹೇತವೇ ॥ ೨ ॥

ಸ್ವರ್ಗಃ ಸುರಾಣಾಮಭವದಸುರಾಣಾಮಿಲಾಭವತ್ ।
ಕರ್ಮಭೂಮಿಮವಷ್ಟಭ್ಯ ಅಸುರಾಃ ಸರ್ವತೋಽಭವನ್ ॥ ೩ ॥

ನೂರಅರವತ್ತನೆಯ ಅಧ್ಯಾಯವು

೧. ಬ್ರಹ್ಮನು ನಾರದನನ್ನು ಕುರಿತು ಹೇಳಿದನು—ದೇವಾಗಮವೆಂಬ ತೀರ್ಥವಿರುವುದು. ಅದು ಸರ್ವೇಷ್ಟಾರ್ಥಗಳನ್ನು ಕೊಡುವುದು. ಮಂಗಳ ಪ್ರದವು. ಮನುಷ್ಯರಿಗೆ ಭುಕ್ತಿಯನ್ನೂ, ಮುಕ್ತಿಯನ್ನೂ ಕೊಡುವುದು. ಪಿತೃಗಳಿಗೆ ತೃಪ್ತಿಯನ್ನುಂಟುಮಾಡುವುದು.

೨. ಎಲೈ ನಾರದನೇ, ಅದರ ವೃತ್ತಾಂತವನ್ನು ನಿನಗೆ ಹೇಳುವೆನು. ಪೂರ್ವದಲ್ಲಿ ದೇವತೆಗಳಿಗೂ ದಾನವರಿಗೂ ಧನಕ್ಕೋಸ್ಕರವಾಗಿ ಜಗಳ ವುಂಟಾಯಿತು.

೩. ಆಗ ದೇವತೆಗಳಿಗೆ ಸ್ವರ್ಗವು ಸಿಕ್ಕಿತು- ರಾಕ್ಷಸರಿಗೆ ಭೂಮಿಯು ಸಿಕ್ಕಿತು. ರಾಕ್ಷಸರೆಲ್ಲರೂ ಕರ್ಮಭೂಮಿಯನ್ನು ಆವರಿಸಿಕೊಂಡು ಎಲ್ಲೆಲ್ಲೂ ಅವರೇ ಆದರು.

ದೇವಾನಾಂ ಯಜ್ಞಭಾಗಾಂಶ್ಚ ದಾತ್ಯಾನ್ಘ್ನಂತ್ಯಸುರಾಸ್ತತಃ ।
ತತಃ ಸುರಗಣಾಃ ಸರ್ವೇ ಯಜ್ಞಭಾಗೈರ್ವಿನಾ ಕೃತಾಃ ॥ ೪ ॥

ವ್ಯಥಿತಾ ಮಾಮುಪಾಜಗ್ಮುಃ ಕಿಂ ಕೃತ್ಯಮಿತಿ ಚಾಬ್ರುವನ್ ।
ಮಯಾ ಚೋಕ್ತಾಃ ಸುರಗಣಾ ಯುದ್ಧೇ ಜಿತ್ವಾಸುರಾನ್ಬಲಾತ್ ॥ ೫ ॥

ಭುವಂ ಪ್ರಾಪ್ಸ್ಯಥ ಕರ್ಮಾಣಿ ಹವೀಂಷಿ ಚ ಯಶಾಂಸಿ ಚ ।
ತಥೇತ್ಯುಕ್ತ್ವಾ ಗತಾ ದೇವಾ ಭೂಮಿಂ ತೇ ಸಮರಾರ್ಥಿನಃ ॥ ೬ ॥

ದೈತ್ಯಾಶ್ಚ ದಾನವಾಶ್ಚೈವ ರಾಕ್ಷಸಾ ಬಲದರ್ಪಿತಾಃ ।
ಏಕೀಭೂತ್ವಾ ಯಯುಸ್ತೇಽಪಿ ಜಯಿನೋ ಯುದ್ಧಕಾಂಕ್ಷಿಣಃ ॥ ೭ ॥

ಅಹಿರ್ವೃತ್ರೋ ಬಲಿಸ್ತ್ವಾಷ್ಟ್ರಿರ್ನಮುಚಿಃ ಶಂಬರೋ ಮಯಃ ।
ಏತೇ ಚಾನ್ಯೇ ಚ ಬಹವೋ ಯೋದ್ಧಾರೋ ಬಲದರ್ಪಿತಾಃ ॥ ೮ ॥

---

೪. ಭೂಮಿಯಲ್ಲಿರುವವರು ದೇವತೆಗಳಿಗೆ ಹವಿರ್ಭಾಗವನ್ನು ಒಪ್ಪಿಸಲು ಹೋದರೆ ಅಸುರರು ಅವರನ್ನೂ ಕೊಂದುಹಾಕುತ್ತಿದ್ದರು. ಈ ರೀತಿಯಾಗಲು ದೇವತೆಗಳಿಗೆ ಹವಿರ್ಭಾಗವೇ ಸಿಕ್ಕುತ್ತಿರಲಿಲ್ಲ.

೫–೬. ಅದರಿಂದ ದುಃಖಗೊಂಡ ದೇವತೆಗಳು ನನ್ನ (ಬ್ರಹ್ಮನ) ಹತ್ತಿರಕ್ಕೆ ಬಂದು ಈಗ ನಾವೇನು ಮಾಡಬೇಕು ? ಎಂದು ಕೇಳಿದರು. ನೀವು ಅಸುರರೊಡನೆ ಯುದ್ಧವನ್ನು ಮಾಡಿ ಜಯಶೀಲರಾಗಿ. ಭೂಮಿಯನ್ನೂ ಹವಿಸ್ಸನ್ನೂ ಪಡೆದು ಕೀರ್ತಿವಂತರಾಗಿರಿ ಎಂದು ನಾನು ಹೇಳಿದೆನು. ಹಾಗೆಯೇ ಆಗಲೆಂದು ದೇವತೆಗಳು ಯುದ್ಧಮಾಡಲು ಭೂಮಿಗೆ ಹೋದರು.

೭. ಬಲದರ್ಪಿತರೂ ದಿತಿಯ ಮಕ್ಕಳೂ ಆದ ರಾಕ್ಷಸರೂ, ದನುವಿನ ವಂಶಸಂಭೂತರಾದ ರಾಕ್ಷಸರೂ, ಒಟ್ಟಿಗೆ ಸೇರಿ ದೇವತೆಗಳನ್ನು ಯುದ್ಧದಲ್ಲಿ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಆಸೆಯಿಂದ ಹೊರಟರು.

೮. ಅಹಿ, ವೃತ್ರ, ಬಲಿ, ತ್ವಾಷ್ಟ್ರಿ, ನಮುಚಿ, ಶಂಬರ, ಮಯ ಇವರೇ ಮೊದಲಾದ ಬಲಿಷ್ಠರಾದ ರಾಕ್ಷಸರು ಯುದ್ಧಮಾಡಲು ಸಿದ್ಧರಾದರು.

ಅಗ್ನಿರಿಂದ್ರೋಽಥ ವರುಣಸ್ತ್ವಷ್ಟಾ ಪೂಷಾ ತಥಾಶ್ವಿನೌ ।
ಮರುತೋ ಲೋಕಪಾಲಾಶ್ಚ ನಾನಾಯುದ್ಧವಿಶಾರದಾಃ ॥ ೯ ॥

ತೇ ದಾನವಾಃ ಸರ್ವ ಏವ ಯಾಮ್ಯಾಂ ವೈ ದಿಶಿ ಸಂಗರೇ ।
ಅಕುರ್ವಂತ ಮಹಾಯತ್ನಂ ದಕ್ಷಿಣಾರ್ಣವಸಂಸ್ಥಿತಾಃ ॥ ೧೦ ॥

ತ್ರಿಕೂಟಃ ಪರ್ವತಶ್ರೇಷ್ಠೋ ರಾಕ್ಷಸಾನಾಂ ಪುರಾಭವತ್ ।
ತದ್ವನೇನ ಯಯುಃ ಸರ್ವೇ ತೈಃ ಸಾರ್ಧಂ ದಕ್ಷಿಣಾರ್ಣವಂ ॥ ೧೧ ॥

ಸರ್ವೇಷಾಂ ಮೇಲನಂ ಯತ್ರ ಪರ್ವತೋ ಮಲಯಸ್ತು ಸಃ ।
ಮಲಯಸ್ಯಾಪಿ ದೇಶೋಽಸೌ ದೇವಾರೀಣಾಮಭೂತ್ತದಾ ॥ ೧೨ ॥

ದೇವಾನಾಂ ಗೌತಮೀತೀರೇ ತತ್ರ ಸಂನಿಹಿತಃ ಶಿವಃ ।
ಇತಿ ತೇಷಾಂ ಸಮಾಯೋಗೋ ದೇವಾನಾಮಭವತ್ಕಿಲ ॥ ೧೩ ॥

---

೯. ಇತ್ತ ದೇವತೆಗಳಕಡೆ ಅಗ್ನಿ, ಇಂದ್ರ, ವರುಣ, ತ್ವಷ್ಟಾ, ಪೂಷಾ, ಅಶ್ವಿನೀದೇವತೆಗಳು ಸಪ್ತಮರುತ್ತಗಳು, ಲೋಕಪಾಲಕರು, ಯುದ್ಧವಿಶಾರದರಾದ ಇವರೆಲ್ಲರೂ ಯುದ್ಧಕ್ಕೆ ಸಿದ್ಧರಾದರು.

೧೦. ದಾನವರೆಲ್ಲರೂ ಆಕಾಶಯುದ್ಧಕ್ಕೋಸ್ಕರವಾಗಿ ದಕ್ಷಿಣಸಮುದ್ರತೀರದಲ್ಲಿದ್ದುಕೊಂಡು ಮಹಾಯತ್ನವನ್ನು ಮಾಡುತ್ತಿದ್ದರು.

೧೧. ಪೂರ್ವದಲ್ಲಿ ರಾಕ್ಷಸರಿಗೆ ಸೇರಿದ ತ್ರಿಕೂಟವೆಂಬ ಪರ್ವತಶ್ರೇಷ್ಠದ ಕಾಡಿನ ಮಾರ್ಗವಾಗಿ ರಾಕ್ಷಸರೆಲ್ಲರೂ ದಕ್ಷಿಣಸಮುದ್ರತೀರಕ್ಕೆ ಬಂದರು.

೧೨. ಎಲ್ಲ ರಾಕ್ಷಸರೂ ಮಲಯಪರ್ವತದಲ್ಲಿ ಒಟ್ಟಿಗೆ ಸೇರಿದರು. ಅನೇಕರು ಮಲಯಪರ್ವತದ ಪ್ರದೇಶದಲ್ಲಿ ತಂಗಿದರು.

೧೩. ದೇವತೆಗಳು ಗೌತಮೀತೀರದಲ್ಲಿ ತಂಗಿದರು. ಅಲ್ಲಿ ಶಿವನು ವಾಸವಾಗಿರುವನು. ಎಲ್ಲ ದೇವತೆಗಳೂ ಆ ಗೌತಮೀತೀರದಲ್ಲಿ ಬಂದು ಸೇರಿದರು.

ದೇವಾಃ ಸ್ವರಥಮಾರೂಢಾಸ್ತತ್ರ ತತ್ರ ಸಮಾಗಮನ್ ।
ಗೌತಮ್ಯಾಃ ಸರಿದಂಬಾಯಾಃ ಪುಲಿನೇ ವಿಮಲಾಶಯಾಃ ॥ ೧೪ ॥

ಪ್ರಸನ್ನಾಭೀಷ್ಟದಾ ಯಾ ಸ್ಯಾತ್ಪಿತೄಣಾಮಖಿಲಸ್ಯ ತು ।
ತತೋ ದೇವಗಣಾಃ ಸರ್ವೇ ಸ್ತುತ್ವಾ ದೇವಂ ಮಹೇಶ್ವರಂ ।
ಅಭಯಂ ಚಿಂತಯಾಮಾಸುಸ್ತೇ ಸರ್ವೇಽಥ ಪರಸ್ಪರಂ ॥ ೧೫ ॥

॥ ದೇವಾ ಊಚುಃ ॥

ಅತ್ರಾಪ್ಯುಪಾಯಃ ಕೋಽಸ್ಮಾಕಂ ನಿರ್ಜಿತಾನಾಂ ಪರೈರ್ಹಠಾತ್ ।
ಏಕಮೇವಾತ್ರ ನಃ ಶ್ರೇಯೋ ವಿಜಯೋ ವಾಥವಾ ಮೃತಿಃ ।
ಸಪತ್ನೈರಭಿಭೂತಾನಾಂ ಜೀವಿತಂ ಧಿಙ್ಮನಸ್ವಿನಾಂ ॥ ೧೬ ॥

॥ ಬ್ರಹ್ಮೋವಾಚ ॥

ಏತಸ್ಮಿನ್ನಂತರೇ ಪುತ್ರ ವಾಗುವಾಚಾಶರೀರಿಣೀ ॥ ೧೭ ॥

---

೧೪. ನದಿಗಳಿಗೆ ಮಾತೃಸ್ವರೂಪಳಾದ ಗೌತಮಿಯ ಮರಳು ಪ್ರದೇಶದಲ್ಲಿ ದೇವತೆಗಳು ತಮ್ಮ ರಥಗಳಲ್ಲಿ ಅತ್ತಿತ್ತ ಸಂಚರಿಸುತ್ತಾ ಬಂದು ಸೇರಿದರು.

೧೫. ಆ ಗೌತಮಿಯು ಪ್ರಸನ್ನಳಾಗಿ ಇಷ್ಟವನ್ನು ನೆರವೇರಿಸುವವಳು. ಸಮಸ್ತ ಪಿತೃಗಳಿಗೂ ತೃಪ್ತಿಯನ್ನುಂಟುಮಾಡುವವಳು. ಅನಂತರ ದೇವತೆಗಳು ಮಹೇಶ್ವರನನ್ನು ಸ್ತೋತ್ರವಾಡಿ ತಮಗೆ ಅಭಯವು ಹೇಗೆ ದೊರೆಯುವುದೆಂದು ಯೋಚಿಸಿದರು.

೧೬. ಶತ್ರುಗಳು ನಮ್ಮನ್ನು ಬಲಾತ್ಕಾರದಿಂದ ಜಯಿಸಿದರೆ ನಾವು ಏನು ಉಪಾಯವನ್ನು ಮಾಡಬೇಕು? ಈ ವಿಷಯದಲ್ಲಿ ನಮಗೆ ಶ್ರೇಯಸ್ಕರವಾದುದು ಒಂದೇ ಒಂದು. ಜಯ, ಇಲ್ಲವೇ ಮರಣ. ಶತ್ರುಗಳಿಂದ ಅವಮಾನಿತರಾದ ಗೌರವಶಾಲಿಗಳ ಜೀವನಕ್ಕೆ ಧಿಕ್ಕಾರವಿರಲಿ.

೧೭. ಎಲೈ ಪುತ್ರ ನಾರದನೇ, ದೇವತೆಗಳು ಹೀಗೆ ಯೋಚಿಸುತ್ತಿರಲು, ಆಗ ಅವರಿಗೆ ಕೇಳಿಸುವಂತೆ ಈರೀತಿ ಅಶರೀರವಾಣಿಯಾಯಿತು.

॥ ಆಕಾಶವಾಗುವಾಚ ॥

ಕ್ಲೇಶೇನಾಲಂ ಸುರಗಣಾ ಗೌತಮೀಮಾಶು ಗಚ್ಛತ ।
ಭಕ್ತ್ಯಾ ಹರಿಹರೌ ತತ್ರ ಸಮಾರಾಧಯತೇಶ್ವರೌ ॥ ೧೮ ॥

ಗೋದಾವರ್ಯಾಸ್ತಯೋಶ್ಚೈವ ಪ್ರಸಾದಾತ್ಕಿಂತು ದುಷ್ಕರಂ ॥ ೧೯ ॥

॥ ಬ್ರಹ್ಮೋವಾಚ ॥

ಪ್ರಸನ್ನಾಭ್ಯಾಂ ಹರೀಶಾಭ್ಯಾಂ ದೇವಾ ಜಯಮಭೀಪ್ಸಿತಂ ।
ಅವಾಪ್ಯ ಸರ್ವತೋ ಜಗ್ಮುಃ ಪಾಲಯಂತೋ ದಿವೌಕಸಃ ॥ ೨೦ ॥

ಯತ್ರ ದೇವಾಗಮೋ ಜಾತಸ್ತತ್ತೀರ್ಥಂ ತೇನ ವಿಶ್ರುತಂ ।
ದೇವಾಗಮಂ ಪ್ರಶಂಸಂತಿ ಮುನಯಸ್ತತ್ತ್ವದರ್ಶಿನಃ ॥ ೨೧ ॥

೧೮-೧೯. ಎಲೈ ದೇವತೆಗಳೇ, ನೀವು ಈ ಚಿಂತೆಯನ್ನು ಬಿಟ್ಟುಬಿಡಿ ಜಾಗ್ರತೆಯಾಗಿ ಗೌತಮಿಗೆ ಹೋಗಿರಿ. ಅಲ್ಲಿ ಹರಿಹರರನ್ನು ಭಕ್ತಿಯಿಂದ ಪೂಜಿಸಿರಿ. ಗೋದಾವರೀ ಮತ್ತು ಗಂಗೆಯ ಅನುಗ್ರಹವು ಸಿಕ್ಕಿದಲ್ಲಿ ನಿಮಗೆ ಯಾವುದು ತಾನೇ ದುರ್ಲಭವು.

೨೦. ಆಕಾಶವಾಣಿಯಂತೆ ದೇವತೆಗಳು ಹರಿಹರರನ್ನು ಪೂಜಿಸಿದರು. ಪ್ರಸನ್ನರಾದ ಅವರ ಅನುಗ್ರಹದಿಂದ ಇಷ್ಟವಾದ ಜಯವನ್ನು ಪಡೆದರು. ಅನಂತರ ಎಲ್ಲರೂ ತಮ್ಮ ಸ್ಥಳಗಳಿಗೆ ಹೊರಟುಹೋದರು.

೨೧. ಯಾವ ತೀರ್ಥದಲ್ಲಿ ದೇವತೆಗಳು ಬಂದಿಳಿದಿದ್ದರೋ ಆ ತೀರ್ಥಕ್ಕೆ ದೇವಾಗಮವೆಂದು ಹೆಸರಾಯಿತು. ಅದನ್ನು ತತ್ವದರ್ಶಿಗಳಾದ ಮುನಿಗಳು ದೇವಾಗಮತೀರ್ಥವೆಂದು ಹೊಗಳುವರು.

ತತ್ರಾಶೀತಿಸಹಸ್ರಾಣಿ ಶಿವಲಿಂಗಾನಿ ನಾರದ ।
ದೇವಾಗಮಃ ಪರ್ವತೋಽಸೌ ಪ್ರಿಯ ಇತ್ಯಪಿ ಕಥ್ಯತೇ ।
ತತಃ ಪ್ರಭೃತಿ ತತ್ತೀರ್ಥಂ ದೇವಪ್ರಿಯಮತೋ ವಿದುಃ ॥ ೨೨ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ದೇವಾಗಮತೀರ್ಥವರ್ಣನಂ ನಾಮ ಷಷ್ಟ್ಯಧಿಕ-ಶತತಮೋಽಧ್ಯಾಯಃ

---

೨೨. ಅಲ್ಲಿ ಸಹಸ್ರಲಿಂಗಗಳಿರುವುವು. ಅಲ್ಲಿರುವ ದೇವಾಗಮ ಪರ್ವತಕ್ಕೆ ಪ್ರಿಯ ಎಂಬುದಾಗಿಯೂ ಹೆಸರುಂಟು. ಅಂದಿನಿಂದ ಆ ತೀರ್ಥಕ್ಕೆ ದೇವಪ್ರಿಯವೆಂಬುದಾಗಿಯೂ ಹೆಸರಾಯಿತು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ದೇವಾಗಮತೀರ್ಥವರ್ಣನವೆಂಬ ನೂರರವತ್ತನೆಯ ಅಧ್ಯಾಯವು ಮುಗಿದುದು

ಗೌತಮೀಮಾಹಾತ್ಮ್ಯೆಯಲ್ಲಿ ತೊಂಭತ್ತೊಂದನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಏಕಷಷ್ಟ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಕುಶತರ್ಪಣಮಾಖ್ಯಾತಂ ಪ್ರಣೀತಾಸಂಗಮಂ ತಥಾ ।
ತೀರ್ಥಂ ಸರ್ವೇಷು ಲೋಕೇಷು ಭುಕ್ತಿಮುಕ್ತಿಪ್ರದಾಯಕಂ ॥ ೧ ॥

ತಸ್ಯ ಸ್ವರೂಪಂ ವಕ್ಷ್ಯಾಮಿ ಶೃಣು ಪಾಪಹರಂ ಶುಭಂ ।
ವಿಂಧ್ಯಸ್ಯ ದಕ್ಷಿಣೇ ಪಾರ್ಶ್ವೇ ಸಹ್ಯೋ ನಾಮ ಮಹಾಗಿರಿಃ ॥ ೨ ॥

ಯದಂಘ್ರಿಭ್ಯೋಽಭವನ್ನದ್ಯೋ ಗೋದಾಭೀಮರಥೀಮುಖಾಃ ।
ಯತ್ರಾಭವತ್ತದ್ವಿರಜನ್ಮೇಕವೀರಾ ಚ ಯತ್ರ ಸಾ ॥ ೩ ॥

ನೂರರವತ್ತೊಂದನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಕುಶತರ್ಪಣವೆಂಬ ತೀರ್ಥವು ಪ್ರಸಿದ್ಧವಾಗಿರುವುದು. ಪ್ರಣೀತಾಸಂಗಮವೆಂಬುದೂ ಪ್ರಸಿದ್ಧವಾದತೀರ್ಥವು. ಅದು ಮೂರುಲೋಕದಲ್ಲಿಯೂ ಹೆಸರಾದುದು. ಅದು ಭುಕ್ತಿಯನ್ನು ಮುಕ್ತಿಯನ್ನೂ ಕೊಡುವುದು.

೨–೩. ಎಲೈ ನಾರದನೇ, ಅದರ ಸ್ವರೂಪವನ್ನು ಹೇಳುವೆನು. ಅದು ಪಾಪನಾಶಕವೂ, ಮಂಗಳಪ್ರದವೂ ಆದುದು. ವಿಂಧ್ಯಪರ್ವತದ ದಕ್ಷಿಣಪಾರ್ಶ್ವದಲ್ಲಿ ಸಹ್ಯವೆಂಬ ಪರ್ವತವಿರುವುದು. ಆ ಪರ್ವತದ ತಪ್ಪಲಿನಿಂದ ಗೋದಾವರೀ, ಭೀಮರಥೀ, ವಿರಜಾ, ಏಕವೀರಾ ಎಂಬ ಅನೇಕ ನದಿಗಳು ಹುಟ್ಟುವುವು.

ನ ತಸ್ಯ ಮಹಿಮಾ ಕೈಶ್ಚಿದಪಿ ಶಕ್ಯೋಽನುವರ್ಣಿತುಂ ।
ತಸ್ಮಿನ್ಗಿರೌ ಪುಣ್ಯದೇಶೇ ಶೃಣು ನಾರದ ಯತ್ನತಃ ॥ ೪ ॥

ಗುಹ್ಯಾದ್ಗುಹ್ಯತರಂ ವಕ್ಷ್ಯೇ ಸಾಕ್ಷಾದ್ವೇದೋದಿತಂ ಶುಭಂ ।
ಯನ್ನ ಜಾನಂತಿ ಮುನಯೋ ದೇವಾಶ್ಚ ಪಿತರೋಽಸುರಾಃ ॥ ೫ ॥

ತದಿಹಂ ಪ್ರೀತಯೇ ವಕ್ಷ್ಯೇ ಶ್ರವಣಾತ್ಸರ್ವಕಾಮದಂ ।
ಪರಃ ಸ ಪುರುಷೋ ಜ್ಞೇಯೋ ಹ್ಯವ್ಯಕ್ತೋಽಕ್ಷರ ಏವ ತು ॥ ೬ ॥

ಅಪರಶ್ಚ ಕ್ಷರಸ್ತಸ್ಮಾತ್ಪ್ರಕೃತ್ಯನ್ವಿತ ಏವ ಚ ।
ನಿರಾಕಾರಾತ್ಸಾವಯವಃ ಪುರುಷಃ ಸಮಜಾಯತ ॥ ೭ ॥

ತಸ್ಮಾದಾಪಃ ಸಮುದ್ಭೂತಾ ಅದ್ಭ್ಯಶ್ಚ ಪುರುಷಸ್ತಥಾ ।
ತಾಭ್ಯಾಮುಬ್ಜಂ ಸಮುದ್ಭೂತಂ ತತ್ರಾಹಮುಭವಂ ಮುನೇ ॥ ೮ ॥

ಪೃಥಿವೀ ವಾಯುರಾಕಾಶ ಆಪೋ ಜ್ಯೋತಿಸ್ತಥೈವ ಚ ।
ಏತೇ ಮತ್ತಃ ಪೂರ್ವತರಾ ಏಕದೈವಾಭವನ್ಮುನೇ ॥ ೯ ॥

೪-೫. ಅದರ ಮಹಿಮೆಯನ್ನು ವರ್ಣಿಸಲು ಯಾರಿಂದಲೂ ಸಾಧ್ಯವಿಲ್ಲ. ಎಲೈ ನಾರದನೇ, ಆ ಸಹ್ಯಾದ್ರಿಯ ಪುಣ್ಯಪ್ರದೇಶದಲ್ಲಿನ ವೃತ್ತಾಂತವನ್ನು ಹೇಳುವೆನು ಕೇಳು. ಅದು ಅತ್ಯಂತ ಗೂಢವಾದ ವಿಷಯವು. ಅದು ವೇದಪ್ರತಿಪಾದಿತವೂ, ಶುಭವೂ ಆದುದು. ಆ ವಿಷಯವನ್ನು ಋಷಿಗಳೂ, ದೇವತೆಗಳೂ, ಪಿತೃಗಳೂ, ರಾಕ್ಷಸರೂ ಸಹ ತಿಳಿಯಲಾರರು. ಆದುದರಿಂದ ನಾನು ಅಂತಹ ವಿಷಯವನ್ನು ನಿನ್ನಮೇಲಿನ ಪ್ರೀತಿಯಿಂದ ಹೇಳುವೆನು. ಇದನ್ನು ಕೇಳುವುದರಿಂದ ಸರ್ವ ಇಷ್ಟಾರ್ಥಗಳೂ ಸಿದ್ಧಿಸುವುವು.

೬-೭. ಪರಪುರುಷನು (ಪರಮಾತ್ಮನು) ಅವ್ಯಕ್ತಸ್ವರೂಪನೂ, ನಿತ್ಯನೂ ಆಗಿರುವನು. ಆ ನಿರಾಕಾರನಾದ ಪರಪುರುಷನಿಂದ ಪ್ರಕೃತಿಯೊಡಗೂಡಿದ ಅನಿತ್ಯನೂ ಸಾಕಾರನೂ ಆದ ಮತ್ತೊಬ್ಬ ಪುರುಷನು ಹುಟ್ಟಿದನು.

೮-೯. ಆ ಪುರುಷನಿಂದ ಜಲವೂ, ಆ ಜಲದಿಂದ ಮತ್ತೊಬ್ಬ ಪುರುಷನೂ, ಆ ಜಲ ಮತ್ತು ಪುರುಷ ಇಬ್ಬರಿಂದಲೂ ನಾನೂ (ಬ್ರಹ್ಮನು) ಹುಟ್ಟಿದೆನು. ನನ್ನಿಂದ, ಪೃಥ್ವೀ, ವಾಯು, ಆಕಾಶ, ಅಪ್ಪು (ಜಲ) ತೇಜಸ್ಸು ಇವೆಲ್ಲವೂ ಒಂದೇಸಾರಿ ಹುಟ್ಟಿದವು.

ಏತಾನೇವ ಪ್ರಪಶ್ಯಾಮಿ ನಾನ್ಯತ್ಸ್ಥಾವರಜಂಗಮಂ ।
ನೈವ ವೇದಾಸ್ತದಾ ವ್ಯಾಸನ್ನಾಹಂ ದ್ರಷ್ಟಾಽಸ್ಮಿ ಕಿಂಚನ ॥ ೧೦ ॥

ಯಸ್ಮಾದಹಂ ಸಮುದ್ಭೂತೋ ನ ಪಶ್ಯೇಯಂ ತಮಪ್ಯಥ ।
ತೂಷ್ಣೀಂ ಸ್ಥಿತೇ ಮಯಿ ತದಾ ಅಶ್ರೌಷಂ ವಾಚಮುತ್ತಮಾಂ ॥ ೧೧ ॥

॥ ಆಕಾಶವಾಗುವಾಚ ॥

ಬ್ರಹ್ಮನ್ಕುರು ಜಗತ್ಸೃಷ್ಟಿಂ ಸ್ಥಾವರಸ್ಯ ಚರಸ್ಯ ಚ ॥ ೧೨ ॥

॥ ಬ್ರಹ್ಮೋವಾಚ ॥

ತತೋಽಹಮಬ್ರವಂ ವಾಚಂ ಪರುಷಾಂ ತತ್ರ ನಾರದ ।
ಕಥಂ ಸ್ರಕ್ಷ್ಯೇ ಕ್ವ ವಾ ಸ್ರಕ್ಷ್ಯೇ ಕೇನ ಸ್ರಕ್ಷ್ಯ ಇದಂ ಜಗತ್ ॥ ೧೩ ॥

ಸೈವ ವಾಗಬ್ರವೀದ್ದೇವೀ ಪ್ರಕೃತಿರ್ಯಾಽಭಿಧೀಯತೇ ।
ವಿಷ್ಣುನಾ ಪ್ರೇರಿತಾ ಮಾತಾ ಜಗದೀಶಾ ಜಗನ್ಮಯೀ ॥ ೧೪ ॥

೧೦–೧೧. ನನಗಾಗ ನನ್ನಿಂದ ಹುಟ್ಟಿರತಕ್ಕ ಪೃಥಿವೀ, ವಾಯು ಮುಂತಾದ ಪಂಚಭೂತಗಳು ಮಾತ್ರವೇ ಕಾಣುತ್ತಿದ್ದುವು. ಸ್ಥಾವರ ಜಂಗಮಾದಿಗಳಾವುವೂ ತೋರುತ್ತಿರಲಿಲ್ಲ. ವೇದಗಳೂ ಕಾಣುತ್ತಿರಲಿಲ್ಲ. ಹೆಚ್ಚೇನು? ನಾನು ಯಾವುದರಿಂದ ಹುಟ್ಟಿದೆನೋ ಅದೇ ನನಗೆ ತೋರುತ್ತಿರಲಿಲ್ಲ. ಈರೀತಿಯಾಗಿ ಏನೂ ತಿಳಿಯದೆ ನಾನು ಸುಮ್ಮನೆ ಇರುತ್ತಿರಲು ಅಶರೀರವಾಣಿಯಾದುದನ್ನು ಕೇಳಿದೆನು.

೧೨. ಆಕಾಶವಾಣಿಯು ಹೇಳಿತು—ಎಲೈ ಬ್ರಹ್ಮನೇ, ಸ್ಥಾವರಜಂಗಮಾತ್ಮಕವಾದ ಜಗತ್ತಿನ ಸೃಷ್ಟಿಯನ್ನು ಮಾಡು.

೧೩. ನಾನು ಅದಕ್ಕೆ ಪ್ರತ್ಯುತ್ತರವಾಗಿ ಕಠಿನವಾದ ಮಾತನ್ನಾಡಿದೆನು. ಜಗತ್ತನ್ನು ಹೇಗೆ ಸೃಷ್ಟಿಮಾಡಲಿ? ಎಲ್ಲಿ ಸೃಷ್ಟಿಮಾಡಲಿ? ಯಾವ ಸಾಧನದಿಂದ ಸೃಷ್ಟಿಮಾಡಲಿ? ಎಂಬುದಾಗಿ ಕೇಳಿದೆನು.

೧೪. ನನ್ನ ಮಾತನ್ನು ಕೇಳಿ ಆಕಾಶವಾಣಿಯು ಮತ್ತೆ ಹೇಳಿತು. ಅವಳು ಜಗತ್ತಿಗೆ ಒಡೆಯಳು ಜಗನ್ಮಯಳು. ಆ ಪ್ರಕೃತಿಯು ವಿಷ್ಣುವಿನಿಂದ ಪ್ರೇರೇಪಿತಳಾಗಿ ನನ್ನನ್ನು ಕುರಿತು ಹೇಳಿದಳು.

॥ ಆಕಾಶವಾಗುವಾಚ ॥

ಯಜ್ಞಂ ಕುರು ತತಃ ಶಕ್ತಿಸ್ತೇ ಭವಿತ್ರೀ ನ ಸಂಶಯಃ ।
ಯಜ್ಞೋ ವೈ ವಿಷ್ಣುರಿತ್ಯೇಷಾ ಶ್ರುತಿರ್ಬ್ರಹ್ಮಸನಾತನೀ ॥ ೧೫ ॥

ಕಿಂ ಯಜ್ಞನಾಮಸಾಧ್ಯಂ ಸ್ಯಾದಿಹ ಲೋಕೇ ಪರತ್ರ ಚ ॥ ೧೬ ॥

॥ ಬ್ರಹ್ಮೋವಾಚ ॥

ಪುನಸ್ತಾಮಬ್ರವಂ ದೇವೀಂ ಕ್ವ ವಾ ಕೇನೇತಿ ತದ್ವದ ।
ಯಜ್ಞಃ ಕಾರ್ಯೋ ಮಹಾಭಾಗೇ ತತಃ ಸೋವಾಚ ಮಾಂ ಪ್ರತಿ ॥ ೧೭ ॥

॥ ಆಕಾಶವಾಗುವಾಚ ॥

ಓಂಕಾರಭೂತಾ ಯಾ ದೇವೀ ಮಾತೃಕಲ್ಪಾ ಜಗನ್ಮಯೀ ।
ಕರ್ಮಭೂಮೌ ಯಜಸ್ವೇಹ ಯಜ್ಞೇಶಂ ಯಜ ಪೂರುಷಂ ॥ ೧೮ ॥

ಸ ಏವ ಸಾಧನಂ ತೇ ಸ್ಯಾತ್ತೇನ ತಂ ಯಜ ಸುವ್ರತ ।
ಯಜ್ಞಃ ಸ್ವಾಹಾ ಸ್ವಧಾ ಮಂತ್ರಾ ಬ್ರಾಹ್ಮಣಾ ಹವಿರಾದಿಕಂ ॥ ೧೯ ॥

೧೫-೧೬. ಎಲೈ ಬ್ರಹ್ಮನೇ, ಯಜ್ಞವನ್ನು ಮಾಡು, ಅದರಿಂದ ನಿನಗೆ ಸೃಷ್ಟಿಮಾಡುವ ಶಕ್ತಿಯುಂಟಾಗುವುದು. ಈ ವಿಷಯದಲ್ಲಿ ಸಂಶಯವಿಲ್ಲ. ಯಜ್ಞವೇ ವಿಷ್ಣುವು ಎಂಬುದಾಗಿ ಶ್ರುತಿಯು ಹೇಳುವುದು. ಯಜ್ಞವನ್ನು ಮಾಡುವವರಿಗೆ ಈ ಲೋಕದಲ್ಲಿ ಯಾಗಲೀ, ಪರಲೋಕದಲ್ಲಿ ಯಾಗಲೀ ಯಾವುದು ತಾನೇ ಅಸಾಧ್ಯವು? ಎಂದಿತು.

೧೭. ಅನಂತರ ನಾನು ಆ ಆಕಾಶವಾಕ್ಕನ್ನು ಕುರಿತು ಯಾವ ಸ್ಥಳದಲ್ಲಿ ಯಾವ ಸಾಧನದಿಂದ ಯಜ್ಞವನ್ನು ಮಾಡಲಿ ಎಂದು ಕೇಳಿದೆನು. ಪ್ರಕೃತಿಯು ನನ್ನನ್ನು ಕುರಿತು,

೧೮-೨೦. ಓಂಕಾರವಾಚ್ಯಳೂ, ಮಾತೃಸ್ವರೂಪಳೂ, ಜಗನ್ಮಯಿಯೂ ಆದ ದೇವಿಯನ್ನು ಕುರಿತು ಕರ್ಮಭೂಮಿಯಲ್ಲಿ ಯಾಗಮಾಡು. ಯಜ್ಞೇಶನಾದ ಯಜ್ಞಪುರುಷನೇ ಸಾಧನವಾಗುವನು. ಯಜ್ಞದಿಂದ ನೀನು ಅವನನ್ನು

ಹರಿರೇವಾಖಿಲಂ ತೇನ ಸರ್ವಂ ವಿಷ್ಣೋರವಾಪ್ಯತೇ । ॥ ೨೦ ॥

॥ ಬ್ರಹ್ಮೋವಾಚ ॥

ಪುನಸ್ತಾಮಬ್ರವಂ ದೇವೀಂ ಕರ್ಮಭೂಃ ಕ್ವ ವಿಧೀಯತೇ ।
ತದಾ ನಾರದ ನೈವಾಸೀದ್ಭಾಗೀರಥ್ಯಥ ನರ್ಮದಾ ॥ ೨೧ ॥

ಯಮುನಾ ನೈವ ತಾಪೀ ಸಾ ಸರಸ್ವತ್ಯಥ ಗೌತಮೀ ।
ಸಮುದ್ರೋ ವಾ ನದಃ ಕಶ್ಚಿನ್ನ ಸರಃ ಸರಿತೋಽಮಲಾಃ ।
ಸಾ ಶಕ್ತಿಃ ಪುನರಪ್ಯೇವಂ ಮಾಮುವಾಚ ಪುನಃ ಪುನಃ ॥ ೨೨ ॥

॥ ದೈವೀ ವಾಗುವಾಚ ॥

ಸುಮೇರೋರ್ದಕ್ಷಿಣೇ ಪಾರ್ಶ್ವೇ ತಥಾ ಹಿಮವತೋ ಗಿರೇಃ ।
ದಕ್ಷಿಣೇ ಚಾಪಿ ವಿಂಧ್ಯಸ್ಯ ಸಹ್ಯಾಚ್ಚೈವಾಥ ದಕ್ಷಿಣೇ ।
ಸರ್ವಸ್ಯ ಸರ್ವಕಾಲೇ ತು ಕರ್ಮಭೂಮಿಃ ಶುಭೋದಯಾ ॥ ೨೩ ॥

ಯಜಿಸು. ಯಜ್ಞಪುರುಷನೇ, ಸ್ವಾಹಾ, ಸ್ವಧಾ, ಮಂತ್ರಗಳು, ಬ್ರಾಹ್ಮಣರು, ಹವಿಸ್ಸು ಮುಂತಾದ ಸಲಕರಣೆಗಳಾಗುವನು. ಎಲ್ಲವೂ ಹರಿಯಸ್ವರೂಪವೇ ಆದುದರಿಂದ ನೀನು ಮಾಡುವ ಯಜ್ಞವು ವಿಷ್ಣುವಿಗೆ ಸಲ್ಲುವುದು ಎಂದಿತು.

೨೧-೨೨. ಅನಂತರ ನಾನು ಕರ್ಮಭೂಮಿ ಎಂದರೆ ಯಾವುದು? ಎಂದು ಪ್ರಕೃತಿಯನ್ನು ಪ್ರಶ್ನೆಮಾಡಿದೆನು. ಎಲೈ ನಾರದನೇ, ಆಗ ಭಾಗೀರಥಿಯಾಗಲೀ, ನರ್ಮದವಾಗಲೀ, ಯಮುನೆಯಾಗಲೀ, ಸರಸ್ವತೀನದಿಯಾಗಲೀ ಗೌತಮಿಯಾಗಲೀ, ಯಾವವಿಧವಾದ ಸಮುದ್ರವಾಗಲೀ, ನದವಾಗಲೀ ಸರೋವರ, ಶುದ್ಧವಾದ ನದಿಗಳಾಗಲಿ ಯಾವುವೂ ಇರಲಿಲ್ಲ. ಆಗ ಆ ಶಕ್ತಿಯು ಪುನಃ ನನ್ನನ್ನು ಕುರಿತು,

೨೩. ಸುಮೇರುಪರ್ವತದ ಮತ್ತು ಹಿಮವತ್ಪರ್ವತದ ದಕ್ಷಿಣಭಾಗದಲ್ಲಿಯೂ, ವಿಂಧ್ಯಪರ್ವತ ಮತ್ತು ಸಹ್ಯಪರ್ವತದ ದಕ್ಷಿಣಭಾಗದಲ್ಲಿಯೂ ಇರುವ ಭೂಮಿಗೆ ಕರ್ಮಭೂಮಿಎಂದು ಹೆಸರು. ಇದು ಯಾವಾಗಲೂ ಎಲ್ಲರಿಂದಲೂ ಈರೀತಿ ವ್ಯವಹರಿಸಲ್ಪಡುವುದು ಎಂದು ಹೇಳಿತು.

॥ ಬ್ರಹ್ಮೋವಾಚ ॥

ತತ್ತು ವಾಕ್ಯಮಥೋ ಶ್ರುತ್ವಾ ತ್ಯಕ್ತ್ವಾ ಮೇರುಂ ಮಹಾಗಿರಿಂ ।
ತಂ ಪ್ರದೇಶಮಥಾಗತ್ಯ ಸ್ಥಾತವ್ಯಂ ಕ್ವೇತ್ಯಚಿಂತಯಂ ।
ತತೋ ಮಾಮಬ್ರವೀತ್ಸೈವ ವಿಷ್ಣೋರ್ವಾಣ್ಯಶರೀರಿಣೀ ॥ ೨೪ ॥

॥ ಆಕಾಶವಾಗುವಾಚ ॥

ಇತೋ ಗಚ್ಛ ಇತಸ್ತಿಷ್ಠ ತಥೋಪವಿಶ ಚಾತ್ರ ಹಿ ।
ಸಂಕಲ್ಪಂ ಕುರು ಯಜ್ಞಸ್ಯ ಸ ತೇ ಯಜ್ಞಃ ಸಮಾಪ್ಯತೇ ॥ ೨೫ ॥

ಕೃತೇ ಚೈವಾಥ ಸಂಕಲ್ಪೇ ಯಜ್ಞಾರ್ಥೇ ಸುರಸತ್ತಮ ।
ಯದ್ವದಂತ್ಯಖಿಲಾ ವೇದಾ ವಿಧೇ ತತ್ತತ್ಸಮಾಚರ ॥ ೨೬ ॥

॥ ಬ್ರಹ್ಮೋವಾಚ ॥

ಇತಿಹಾಸಪುರಾಣಾನಿ ಯದನ್ಯಚ್ಛಬ್ದಗೋಚರಂ ।
ಸ್ವತೋ ಮುಖೇ ಮಮ ಪ್ರಾಯಾದಭೂಚ್ಚ ಸ್ಮೃತಿಗೋಚರಂ ॥ ೨೭ ॥

---

೨೪. ಆ ಮಾತನ್ನು ಕೇಳಿ, ನಾನು ಮೇರುಪರ್ವತವನ್ನು ಬಿಟ್ಟು ಪ್ರಕೃತಿಯು ಹೇಳಿದ ಪ್ರದೇಶಕ್ಕೆ ಬಂದೆನು. ಅನಂತರ ನಾನೆಲ್ಲಿ ಯಜ್ಞಮಾಡಲಿ ಎಂಬುದಾಗಿ ಚಿಂತಿಸುತ್ತಿರಲು ಪುನಃ ವಿಷ್ಣುವಿನ ಅಂಶಭೂತಳಾದ ಅಶರೀರವಾಣಿಯು ನನ್ನನ್ನು ಕುರಿತು,

೨೫-೨೬. ಎಲೈಬ್ರಹ್ಮನೇ, ಈ ಕಡೆಗೆ ನಡೆ. ಈ ಸ್ಥಳದಲ್ಲಿ ಕುಳಿತಿಕೋ. ಈ ಜಾಗದಲ್ಲಿ ನಿಲ್ಲು. ಅನಂತರ ಯಜ್ಞಸಂಕಲ್ಪವನ್ನು ಮಾಡು. ಯಜ್ಞವು ಅದರಷ್ಟಿಗದೇ ಪೂರ್ಣವಾಗುವುದು. ನೀನು ಯಜ್ಞಕ್ಕೋಸ್ಕರವಾಗಿ ಸಂಕಲ್ಪಮಾಡಿ ವೇದೋಕ್ತವಾದ ವಿಧಾನದಿಂದ ಯಜ್ಞವನ್ನು ಮಾಡು ಎಂದಿತು.

೨೭. ಎಲೈ ನಾರದನೇ, ಅನಂತರ ನನ್ನ ಮುಖದಿಂದ ಇತಿಹಾಸ, ಪುರಾಣಗಳೂ, ಶಬ್ದಗೋಚರವಾಗಿರುವ ಬೇರೆಬೇರೆ ಶಾಸ್ತ್ರಗಳೂ, ಕೂಡ ಹೊರಟವು ಮತ್ತು ವೇದಗಳೂ ಸ್ಮರಣೆಗೆ ಬಂದವು.

ವೇದಾರ್ಥಶ್ಚ ಮಯಾ ಸರ್ವೋ ಜ್ಞಾತೋಽಸೌ ತತ್ಕ್ಷಣೇನ ಚ ।
ತತಃ ಪುರುಷಸೂಕ್ತಂ ತದಸ್ಮರಂ ಲೋಕವಿಶ್ರುತಂ ॥ ೨೮ ॥

ಯಜ್ಞೋಪಕರಣಂ ಸರ್ವಂ ತದುಕ್ತಂ ಚ ತ್ವಕಲ್ಪಯಂ ।
ತದುಕ್ತೇನ ಪ್ರಕಾರೇಣ ಯಜ್ಞಪಾತ್ರಾಣ್ಯಕಲ್ಪಯಂ ॥ ೨೯ ॥

ಅಹಂ ಸ್ಥಿತ್ವಾ ಯತ್ರ ದೇಶೇ ಶುಚಿರ್ಭೂತ್ವಾ ಯತಾತ್ಮವಾನ್ ।
ದೀಕ್ಷಿತೋ ವಿಪ್ರದೇಶೋಽಸೌ ಮನ್ನಾಮ್ನಾ ತು ಪ್ರಕೀರ್ತಿತಃ ॥ ೩೦ ॥

ಮದ್ದೇವಯಜನಂ ಪುಣ್ಯಂ ನಾಮ್ನಾ ಬ್ರಹ್ಮಗಿರಿಃ ಸ್ಮೃತಃ ।
ಚತುರಶೀತಿಪರ್ಯಂತಂ ಯೋಜನಾನಿ ಮಹಾಮುನೇ ॥ ೩೧ ॥

ಮದ್ದೇವಯಜನಂ ಪುಣ್ಯಂ ಪೂರ್ವತೋ ಬ್ರಹ್ಮಣೋ ಗಿರೇಃ ।
ತತ್ರ ಮಧ್ಯೇ ವೇದಿಕಾ ಸ್ಯಾದ್ಗಾರ್ಹಪತ್ಯೋಽಸ್ಯ ದಕ್ಷಿಣೇ ॥ ೩೨ ॥

೨೮-೨೯. ಆ ಕ್ಷಣದಲ್ಲಿಯೇ ನನಗೆ ವೇದಾರ್ಥಗಳೆಲ್ಲವೂ ತಿಳಿಯಿತು. ಅನಂತರ ಲೋಕಪ್ರಖ್ಯಾತವಾದ ಪುರುಷಸೂಕ್ತವನ್ನು ಸ್ಮರಿಸಿಕೊಂಡೆನು. ವೇದೋಕ್ತವಾದ ಪ್ರಕಾರ ಯಜ್ಞಕ್ಕೆ ಬೇಕಾದ ಉಪಕರಣಗಳನ್ನೆಲ್ಲಾ ಕಲ್ಪಿಸಿ ಕೊಂಡೆನು. ಹಾಗೆಯೇ ಯಜ್ಞಪಾತ್ರೆಗಳನ್ನೂ ಕಲ್ಪಿಸಿಕೊಂಡೆನು.

೩೦. ನಾನು ಆ ಪ್ರದೇಶದಲ್ಲಿ ಕುಳಿತು ಶುಚಿಯಾಗಿ ಯಜ್ಞವನ್ನು ಮಾಡಲಿಷ್ಟವುಳ್ಳವನಾಗಿ ದೀಕ್ಷೆಯನ್ನು ಕೈಗೊಂಡೆನು. ನಾನಿದ್ದ ಸಮೀಪದ ಪ್ರದೇಶಕ್ಕೆ ನನ್ನ (ಬ್ರಹ್ಮನ) ಹೆಸರು ಬಂದಿತು. ನಾನು ಯಾವ ಪರ್ವತದಲ್ಲಿ ದೇವಪೂಜೆಯನ್ನು ಮಾಡಿದೆನೋ ಆ ಪರ್ವತಕ್ಕೆ ಬ್ರಹ್ಮಗಿರಿ ಎಂದು ಹೆಸರಾಯಿತು.

೩೧-೩೨. ಎಲೈ ನಾರದಮಹಾಮುನಿಯೇ, ನನ್ನ ಪವಿತ್ರವಾದ ಯಜ್ಞಭೂಮಿಯು ಆ ಬ್ರಹ್ಮಗಿರಿಯ ಸುತ್ತಲೂ ಇಪ್ಪತ್ತನಾಲ್ಕು ಯೋಜನ ವಿಸ್ತೀರ್ಣವುಳ್ಳದ್ದಾಗಿದ್ದಿತು. ಅದರ ಮಧ್ಯಭಾಗದಲ್ಲಿ ಒಂದು ಜಗುಲಿಯನ್ನು ಮಾಡಿದೆನು. ಆ ಜಗುಲಿಯ ದಕ್ಷಿಣಭಾಗದಲ್ಲಿ ಗಾರ್ಹಪತ್ಯಾಗ್ನಿಯನ್ನೂ, ಉಳಿದಕಡೆಗಳಲ್ಲಿ ದಕ್ಷಿಣಾಗ್ನಿ, ಆಹವನೀಯಾಗ್ನಿಗಳನ್ನೂ ಸ್ಥಾಪಿಸಿದೆನು.

ತತ್ರ ಚಾಽಽಹವನೀಯಸ್ಯ ಏವಮಗ್ನೀಂಸ್ತ್ವಕಲ್ಪಯಂ ।
ವಿನಾ ಪತ್ನ್ಯಾ ನ ಸಿಧ್ಯೇತ ಯಜ್ಞಃ ಶ್ರುತಿನಿದರ್ಶನಾತ್ ॥ ೩೩ ॥

ಶರೀರಮಾತ್ಮನೋಽಹಂ ವೈ ದ್ವೇಧಾ ಚಾಕರವಂ ಮುನೇ ।
ಪೂರ್ವಾರ್ಧೇನ ತತಃ ಪತ್ನೀ ಮಮಾಭೂದ್ಯಜ್ಞಸಿದ್ಧಯೇ ॥ ೩೪ ॥

ಉತ್ತರೇಣ ತ್ವಹಂ ತದ್ವದರ್ಧೋ ಜಾಯಾ ಇತಿ ಶ್ರುತೇಃ ।
ಕಾಲಂ ವಸಂತಮುತ್ಕೃಷ್ಟಮಾಜ್ಯರೂಪೇಣ ನಾರದ ॥ ೩೫ ॥

ಅಕಲ್ಪಯಂ ತಥಾ ಚೇಧ್ಮಂ ಗ್ರೀಷ್ಮಂ ಚಾಪಿ ಶರದ್ಧವಿಃ ।
ಋತುಂ ಚ ಪ್ರಾವೃಷಂ ಪುತ್ರ ತದಾ ಬರ್ಹಿರಕಲ್ಪಯಂ ॥ ೩೬ ॥

ಛಂದಾಂಸಿ ಸಪ್ತ ವೈ ತತ್ರ ತದಾ ಪರಿಧಯೋಽಭವನ್ ।
ಕಲಾಕಾಷ್ಠಾನಿಮೇಷಾ ಹಿ ಸಮಿತ್ಪಾತ್ರಕುಶಾಃ ಸ್ಮೃತಾಃ ॥ ೩೭ ॥

೩೩-೩೪. ಪತ್ನಿಯೊಡಗೂಡಿ ಯಜ್ಞಮಾಡಬೇಕು. ಹಾಗಲ್ಲದೆ ಯಜ್ಞವು ಸಿದ್ಧಿಸುವುದಿಲ್ಲ ಎಂಬ ಶ್ರುತಿಯಿರುವುದರಿಂದ ನಾನು ನನ್ನ ಶರೀರವನ್ನು ಎರಡುಭಾಗವನ್ನಾಗಿ ಮಾಡಿಕೊಂಡೆನು. ಪೂರ್ವಾರ್ಧದಿಂದ ಪತ್ನಿಯುಂಟಾದಳು. ಉತ್ತರಾರ್ಧದಿಂದ ನಾನಾದೆನು. ಗೃಹಸ್ಥನ ಶರೀರದ ಅರ್ಧಭಾಗವು ಪತ್ನಿಯೆಂದು ಶ್ರುತಿಸಿದ್ಧವಾದುದು.

೩೫-೩೬. ಶ್ರೇಷ್ಠ ಋತುವಾದ ವಸಂತಋತುವನ್ನು ಆಜ್ಯವನ್ನಾಗಿಯೂ ಗ್ರೀಷ್ಮಋತುವನ್ನು ಇಧ್ಮವನ್ನಾಗಿಯೂ (ಸಮಿತ್ತಿನ ಕಟ್ಟು) ಶರದೃತುವನ್ನು ಹವಿಸ್ಸನ್ನಾಗಿಯೂ, ವರ್ಷಋತುವನ್ನು ಬರ್ಹಿಯ (ದರ್ಭೆಯ ಕಂತೆ) ನ್ನಾಗಿಯೂ ಮಾಡಿಕೊಂಡೆನು.

೩೭. ಸಪ್ತಛಂದಸ್ಸುಗಳೇ ಪರಿಧಿಗಳಾದವು. ಕಾಲ, ಕಾಷ್ಠ, ನಿಮೇಷ ಇವೆಲ್ಲವೂ ಸಮಿತ್ತು ಪಾತ್ರೆ, ದರ್ಭೆಗಳಾದುವು.

ಯೋಽನಾದಿಶ್ಚ ತ್ವನಂತಶ್ಚ ಸ್ವಯಂ ಕಾಲೋಽಭವತ್ತದಾ ।
ಯೂಪರೂಪೇಣ ದೇವರ್ಷೇ ಯೋಕ್ತ್ರಂ ಚ ಪಶುಬಂಧನಂ ॥ ೩೮ ॥

ಸತ್ವಾದಿತ್ರಿಗುಣಾಃ ಪಾಶಾ ನ್ನೈವ ತತ್ರಾಭವತ್ಪಶುಃ ।
ತತೋಽಹಮಬ್ರವಂ ವಾಚಂ ನೈಷ್ಣವೀಮಶರೀರಿಣೀಂ ॥ ೩೯ ॥

ವಿನ್ನೈವ ಪಶುನಾ ನಾಯಂ ಯಜ್ಞಃ ಪರಿಸಮಾಪ್ಯತೇ ।
ತತೋ ಮಾಮವದದ್ದೇವೀ ಸ್ಯೈವ ನಿತ್ಯಾಽಶರೀರಿಣೀ ॥ ೪೦ ॥

॥ ಆಕಾಶವಾಗುವಾಚ ॥

ಪೌರುಷೇಣಾಥ ಸೂಕ್ತೇನ ಸ್ತುಹಿ ತಂ ಪುರುಷಂ ಪರಂ ॥ ೪೧ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಸ್ತೂಯಮಾನೇ ದೇವದೇವೇ ಜನಾರ್ದನೇ ।
ಮಮ ಚೋತ್ಪಾದಕೇ ಭಕ್ತ್ಯಾ ಸೂಕ್ತೇನ ಪುರುಷಸ್ಯ ಹಿ ॥ ೪೨ ॥

---

೩೮. ಅನಾದಿಯಾಗಿಯೂ, ಅನಂತವಾಗಿಯೂ ಇರುವ ಕಾಲವು ಯೂಪ (ಪಶುವನ್ನು ಕಟ್ಟುವ ಕಂಬ) ವಾಯಿತು. ಆದರೆ ಪಶುವು ಮಾತ್ರ ಇರಲಿಲ್ಲ.

೩೯-೪೧. ಸತ್ವ, ರಜಸ್ಸು, ತಮ ಎಂಬ ಮೂರು ಗುಣಗಳೇ ಪಶುವನ್ನು ಕಟ್ಟುವ ಹಗ್ಗಗಳಾದುವು ಅನಂತರ ನಾನು ಅಶರೀರವಾಣಿಯನ್ನು ಕುರಿತು ಪಶುವಿಲ್ಲದೆ ಯಜ್ಞವು ಪೂರ್ಣವಾಗುವುದಿಲ್ಲವಲ್ಲಾ ಎನ್ನಲು, ಅಶರೀರ ವಾಣಿಯು ನನ್ನನು ಕುರಿತು ಪುರುಷಸೂಕ್ತದಿಂದ ಆ ಪರಮಪುರುಷನನ್ನು ಸ್ತೋತ್ರಮಾಡು ಎಂದಿತು.

೪೨. ಅದರಂತೆಯೇ ನಾನು ಪುರುಷಸೂಕ್ತದಿಂದ ದೇವದೇವನಾದ ಜನಾರ್ದನನ್ನು ಭಕ್ತಿಯಿಂದ ಸ್ತೋತ್ರಮಾಡಿದೆದು.

ಸಾ ಚ ಮಾಮಬ್ರವೀದ್ದೇವೀ ಬ್ರಹ್ಮನ್ನಾಂ ತ್ವಂ ಪಶುಂ ಕುರು ।
ತದಾ ವಿಜ್ಞಾಯ ಪುರುಷಂ ಜನಕಂ ಮಮ ಚಾವ್ಯಯಂ ॥ ೪೩ ॥

ಕಾಲಯೂಪಸ್ಯ ಪಾರ್ಶ್ವೇ ತಂ ಗುಣಪಾಶೈರ್ನಿವೇಶಿತಂ ।
ಬರ್ಹಿಸ್ಥಿತಮಹಂ ಪ್ರೋಕ್ಷಂ ಪುರುಷಂ ಜಾತಮಗ್ರತಃ ॥ ೪೪ ॥

ಏತಸ್ಮಿನ್ನಂತರೇ ತತ್ರ ತಸ್ಮಾತ್ಸರ್ವಮಭೂದಿದಂ ।
ಬ್ರಾಹ್ಮಣಾಸ್ತು ಮುಖಾತ್ತಸ್ಯಾಭವನ್ಬಾಹ್ವೋಶ್ಚ ಕ್ಷತ್ರಿಯಾಃ ॥ ೪೫ ॥

ಮುಖಾದಿಂದ್ರಸ್ತಥಾಽಗ್ನಿಶ್ಚ ಶ್ವಸನಃ ಪ್ರಣತೋಽಭವತ್ ।
ದಿಶಃ ಶ್ರೋತ್ರಾತ್ತಥಾ ಶೀರ್ಷ್ಣಃ ಸರ್ವಃ ಸ್ವರ್ಗೋಽಭವತ್ತದಾ ॥ ೪೬ ॥

ಮನಸಶ್ಚಂದ್ರಮಾ ಜಾತಃ ಸೂರ್ಯೋಽಭೂಚ್ಚಕ್ಷುಷಸ್ತಥಾ ।
ಅಂತರಿಕ್ಷಂ ತಥಾ ನಾಭೇರೂರುಭ್ಯಾಂ ವಿಶ ಏವ ಚ ॥ ೪೭ ॥

---

೪೩. ಅನಂತರ ಅಶರೀರವಾಣಿಯು—ಎಲೈ ಬ್ರಹ್ಮನೇ, ನೀನು ಯಾವ ಪುರುಷನನ್ನು ಸ್ತೋತ್ರಮಾಡಿದೆಯೋ ಆ ಪುರುಷನು ನನಗೆ ತಂದೆ ಯಾಗಬೇಕು. ಅವನು ನಾಶರಹಿತನು. ಅವನೇ ಯಜ್ಞಕ್ಕೆ ಪಶವು,

೪೪. ಆ ಪಶುವನ್ನು ಕಾಲಯೂಪದ ಪಕ್ಕದಲ್ಲಿ ಗುಣಪಾಶಗಳಿಂದ ಕಟ್ಟಿರುವುದು ಎಂದಿತು. ಅನಂತರ ಬರ್ಹಿಸ್ಸಿನಮೇಲೆ ಇರುವ ಆ ಪಶುವನ್ನು ನಾನು ಯಜ್ಞವಿಧಿಗನುಸಾರವಾಗಿ ಪ್ರೋಕ್ಷಣೆಮಾಡಿದೆನು.

೪೫–೪೬. ಇವೆಲ್ಲವೂ ಆದನಂತರ ಅದೇ ಸಮಯದಲ್ಲಿ ಯಜ್ಞಪುರುಷನ ಮುಖದಿಂದ ಬ್ರಾಹ್ಮಣರೂ ಬಾಹುಗಳಿಂದ ಕ್ಷತ್ರಿಯರೂ ಮುಖದಿಂದ ಇಂದ್ರನೂ ಅಗ್ನಿಯೂ, ಪ್ರಾಣದಿಂದ ವಾಯುವೂ ಕಿವಿಯಿಂದ ದಿಕ್ಕುಗಳೂ ತಲೆಯಿಂದ ಸ್ವರ್ಗವೂ ಉಂಟಾಯಿತು.

೪೭-೪೮. ಮನಸ್ಸಿನಿಂದ ಚಂದ್ರನೂ, ಕಣ್ಣಿಸಿಂದ ಸೂರ್ಯನೂ ಹೊಕ್ಕಳಿ ಸಿಂದ ಅಂತರಿಕ್ಷವೂ ತೊಡೆಗಳಿಂದ ವೈಶ್ಯರೂ, ಕಾಲುಗಳಿಂದ ಶೂದ್ರರೂ,

ಪದ್ಭ್ಯಾಂ ತೂದ್ರಶ್ಚ ಸಂಜಾತಸ್ತಥಾ ಭೂಮಿರಜಾಯತ ।
ಋಷಯೋ ರೋಮಕೂಪೇಭ್ಯ ಓಷಧ್ಯಃ ಕೇಶತೋಽಭವನ್ ॥ ೪೮ ॥

ಗ್ರಾಮ್ಯಾರಣ್ಯಾಶ್ಚ ಪಶವೋ ನಖೇಭ್ಯಃ ಸರ್ವತೋಽಭವನ್ ।
ಕೃಮಿಕೀಟಪತಂಗಾದಿ ಪಾಯೂಪಸ್ಥಾದಜಾಯತ ॥ ೪೯ ॥

ಸ್ಥಾವರಂ ಜಂಗಮಂ ಕಿಂಚಿದ್ದೃಶ್ಯಾದೃಶ್ಯಂ ಚ ಕಿಂಚನ ।
ತಸ್ಮಾತ್ಸರ್ವಮಭೂದ್ದೇವಾ ಮತ್ತಶ್ಚಾಪ್ಯಭವನ್ಪುನಃ ।
ಏತಸ್ಮಿಂನ್ನಂತರೇ ಸೈವ ವಿಷ್ಣೋರ್ವಾಗಬ್ರವೀಚ್ಚ ಮಾಂ ॥ ೫೦ ॥

॥ ಆಕಾಶವಾಗುವಾಚ ॥

ಸರ್ವಂ ಸಂಪೂರ್ಣಮಭವತ್ಸೃಷ್ಟಿರ್ಜಾತಾ ತಥೇಪ್ಸಿತಾ ।
ಇದಾನೀಂ ಜುಹುಧಿ ಹ್ಯಗ್ನೌ ಪಾತ್ರಾಣಿ ಚ ಸಮಾನಿ ಚ ॥ ೫೧ ॥

ವಿಸರ್ಜಯ ತಥಾ ಯೂಪಂ ಪ್ರಣೀತಾಂ ಚ ಕುಶಾಂಸ್ತಥಾ ।
ಋತ್ವಿಗ್ರೂಪಂ ಯಜ್ಞರೂಪಮುದ್ದೇಶ್ಯಂ ಧ್ಯೇಯಮೇವ ಚ ॥ ೫೨ ॥

ಭೂಮಿಯೂ ಹುಟ್ಟಿದರು. ರೋಮಕೂಪಗಳಿಂದ ಋಷಿಗಳೂ, ತಲೆಯ ಕೂದಲುಗಳಿಂದ ಓಷಧಿಗಳೂ ಹುಟ್ಟಿದುವು.

೪೯-೫೦. ಉಗುರುಗಳಿಂದ ಗ್ರಾಮಗಳೂ, ಅರಣ್ಯಗಳೂ, ಪಶುಗಳೂ ಉಂಟಾದವು. ಪಾಯು, ಉಪಸ್ಥಗಳಿಂದ ಕೃಮಿಕೀಟಪತಂಗಾದಿಗಳು ಹುಟ್ಟಿದವು. ಸ್ಥಾವರಜಂಗಮಗಳೂ, ದೃಶ್ಯಾದೃಶ್ಯವಸ್ತುಗಳೂ, ದೇವತೆಗಳೂ ಎಲ್ಲರೂ ಆಗ ಹುಟ್ಟಿದರು- ಈ ಸಮಯದಲ್ಲಿ ಪುನಃ ಆಕಾಶವಾಣಿಯು ನನ್ನನ್ನು (ಬ್ರಹ್ಮನನ್ನು) ಕುರಿತು,

೫೧-೫೨. ಎಲೈ ಬ್ರಹ್ಮನೇ, ಯಜ್ಞವೆಲ್ಲವೂ ಪೂರ್ಣವಾಯಿತು. ನಿನಗಿಷ್ಟವಾದಂತೆ ಸೃಷ್ಟಿಯೂ ಆಯಿತು. ಈಗ ನೀನು ಅಗ್ನಿಯಲ್ಲಿ ಯಜ್ಞಪಾತ್ರೆ ಮುಂತಾದುವುಗಳನ್ನು ಹೋಮಮಾಡು. ಯೂಪವನ್ನೂ ಪ್ರಣೀತಾಪಾತ್ರೆಯನ್ನೂ, ದರ್ಭೆಗಳನ್ನೂ ವಿಸರ್ಜನೆಮಾಡು. ಋತ್ವಿಗ್ರೂಪವನ್ನೂ, ಯಜ್ಞ

ಸ್ರುವಂ ಚ ಪುರುಷಂ ಪಾಶಾನ್ಸರ್ವಂ ಬ್ರಹ್ಮನ್ವಿಸರ್ಜಯ ॥ ೫೩ ॥

॥ ಬ್ರಹ್ಮೋವಾಚ ॥

ತದ್ವಾಕ್ಯಸಮಕಾಲಂ ತು ಕ್ರಮಶೋ ಯಜ್ಞಯೋನಿಷು ।
ಗಾರ್ಹಪತ್ಯೇ ದಕ್ಷಿಣಾಗ್ನೌ ತಥಾ ಚೈವ ಮಹಾಮುನೇ ॥ ೫೪ ॥

ಪೂರ್ವಸ್ಮಿನ್ನಪಿ ಚೈವಾಗ್ನೌ ಕ್ರಮಶೋ ಜುಹ್ವತಸ್ತದಾ ।
ತತ್ರ ತತ್ರ ಜಗದ್ಯೋನಿಮನುಸಂಧಾಯ ಪೂರುಷಂ ॥ ೫೫ ॥

ಮಂತ್ರಪೂತಂ ಶುಚಿಃ ಸಮ್ಯಗ್ಯಜ್ಞದೇವೋ ಜಗನ್ಮಯಃ ।
ಲೋಕನಾಥೋ ವಿಶ್ವಕರ್ತಾ ಕುಂಡಾನಾಂ ತತ್ರ ಸಂನಿಧೌ ॥ ೫೬ ॥

ಶುಕ್ಲರೂಪಧರೋ ವಿಷ್ಣುರ್ಭವೇದಾಹವನೀಯಕೇ ।
ಶ್ಯಾಮೋ ವಿಷ್ಣುರ್ದಕ್ಷಿಣಾಗ್ನೇಃ ಪೀತೋ ಗೃಹಪತೇಃ ಕವೇಃ ॥ ೫೭ ॥

ರೂಪವನ್ನೂ, ಉದ್ದೇಶ, ಧ್ಯೇಯಗಳನ್ನೂ, ಸ್ರುವವನ್ನೂ, ಪುರುಷನನ್ನೂ. ಪಾಶಗಳನ್ನೂ ವಿಸರ್ಜನೆಮಾಡು ಎಂದಿತು.

೫೪. ಎಲೈ ನಾರದ, ಆ ಮಾತನ್ನು ಕೇಳಿ ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ ಮುಂತಾದ ಅಗ್ನಿಯಲ್ಲಿ ಕ್ರಮವಾಗಿ ಹೋಮ ಮಾಡಿದೆನು.

೫೫-೫೬. ಈ ರೀತಿಯಾಗಿ ಅಗ್ನಿಗಳಲ್ಲಿ ಕ್ರಮವಾಗಿ ಹೋಮಮಾಡಿ ಪ್ರತಿಯೊಂದು ಕುಂಡದ ಸಮೀಪದಲ್ಲಿಯೂ ಜಗತ್ಕಾರಣನಾದ ವಿಷ್ಣುವನ್ನುದ್ದೇಶಿಸಿ ಮಂತ್ರಪೂತವಾಗಿ ಹೋಮಮಾಡಿದೆನು. ಆ ವಿಷ್ಣುವು ಜಗನ್ಮಯನು, ಲೋಕಕ್ಕೆ ಒಡೆಯನು, ವಿಶ್ವಕರ್ತನು, ಯಜ್ಞಕ್ಕೆ ಮುಖ್ಯದೇವತೆಯು.

೫೭-೫೮. ಆಹವನೀಯಾಗ್ನಿಯಲ್ಲಿ ಶುಕ್ಲರೂಪಧರನಾದ ವಿಷ್ಣುವೂ, ದಕ್ಷಿಣಾಗ್ನಿಯಲ್ಲಿ ಶ್ಯಾಮರೂಪಧರನಾದ ವಿಷ್ಣುವೂ, ಗಾರ್ಹಪತ್ಯಾಗ್ನಿಯಲ್ಲಿ ಪೀತ (ಹಳದಿ) ರೂಪಧನರಾದ ವಿಷ್ಣುವೂ ಇದ್ದನು. ಆ ಯಜ್ಞಪ್ರದೇಶದ

ಸರ್ವಕಾಲಂ ತೇಷು ವಿಷ್ಣುರತೋ ದೇಶೇಷು ಸಂಸ್ಥಿತಃ ।
ನ ತೇನ ರಹಿತಂ ಕಿಂಚಿದ್ವಿಷ್ಣುನಾ ವಿಶ್ವಯೋನಿನಾ ॥ ೫೮ ॥

ಪ್ರಣೀತಾಯಾಃ ಪ್ರಣಯನಂ ಮಂತ್ರೈಶ್ಚಾಕರವಂ ತತಃ ।
ಪ್ರಣೀತೋದಕಮುಪ್ಯೇತತ್ಪ್ರಣೀತೇತಿ ನದೀ ಶುಭಾ ॥ ೫೯ ॥

ವ್ಯಸರ್ಜಯಂ ಪ್ರಣೀತಾಂ ತಾಂ ಮಾರ್ಜಯಿತ್ವಾ ಕುಶೈರಥ ।
ಮಾರ್ಜನೇ ಕ್ರಿಯಮಾಣೇ ತು ಪ್ರಣೀತೋದಕಬಿಂದವಃ ॥ ೬೦ ॥

ಪತಿತಾಸ್ತತ್ರ ತೀರ್ಥಾನಿ ಜಾತಾನಿ ಗುಣವಂತಿ ಚ ।
ಸಂಜಾತಾ ಮುನಿಶಾರ್ದೂಲ ಸ್ನಾನಾತ್ಕ್ರತುಫಲಪ್ರದಾ ॥ ೬೧ ॥

ಯಾ್ಯಲಂಕೃತಾ ಸರ್ವಕಾಲಂ ದೇವದೇವೇನ ಶಾರ್ಙ್ಗಿಣಾ ।
ಸೋಪಾನಪಙ್ಕ್ತಿಃ ಸರ್ವೇಷಾಂ ವೈಕುಂಠಾರೋಹಣಾಯ ಸಾ ॥ ೬೨ ॥

ಲ್ಲೆಲ್ಲಾ ಯಾವಾಗಲೂ ವಿಷ್ಣುವು ಇರುತ್ತಲೇ ಇದ್ದನು. ವಿಶ್ವಕಾರಣನಾದ ವಿಷ್ಣುವನ್ನು ಬಿಟ್ಟು ಯಾವ ವಸ್ತುವೂ ಇರುವುದಿಲ್ಲ.

೫೯. ಅನಂತರ ನಾನು ಮಂತ್ರದಿಂದ ಪ್ರಣೀತಾಪಾತ್ರೆಯಲ್ಲಿರುವ ನೀರನ್ನು ಬಗ್ಗಿಸಿದೆನು. ಆ ನೀರು ಪ್ರಣೀತಾ ಎಂಬ ನದಿಯಾಯಿತು. ಅದು ಮಂಗಳಕರವಾದುದು.

೬೦–೬೧. ಎಲೈ ನಾರದ, ಅನಂತರ ಆ ನದಿಯ ನೀರನ್ನು ದರ್ಭೆಗಳಿಂದ ಪ್ರೋಕ್ಷಿಸಿಕೊಂಡೆನು. ಪ್ರೋಕ್ಷಿಸಿಕೊಳ್ಳುವಾಗ ಅತ್ತಿತ್ತ ಬಿದ್ದ ನೀರಿನ ಬಿಂದುಗಳೆಲ್ಲವೂ ಶ್ರೇಷ್ಠವಾದ ತೀರ್ಥಗಳಾದವು. ಅವುಗಳಲ್ಲಿ ಸ್ನಾನಮಾಡುವುದರಿಂದ ಯಜ್ಞಫಲವು ಬರುವುದು.

೬೨. ದೇವದೇವನಾದ ವಿಷ್ಣುವು ಕುಳಿತುಕೊಳ್ಳುತ್ತಿದ್ದ ಯಜ್ಞವೇದಿಕೆಗಳ ಆ ಸೋಪಾನಪಂಕ್ತಿಗಳು ಎಲ್ಲರಿಗೂ ವೈಕುಂಠಕ್ಕೆ ಹೋಗುವ ಮೆಟ್ಟಲುಗಳಾದವು.

ಸಂಮಾರ್ಜಿತಾಃ ಕುಶಾ ಯತ್ರ ಪತಿತಾ ಭೂತಲೇ ಶುಭೇ ।
ಕುಶತರ್ಪಣಮಾಖ್ಯಾತಂ ಬಹುಪುಣ್ಯಫಲಪ್ರದಂ ॥ ೬೩ ॥

ಕುಶೈಶ್ಚ ತರ್ಪಿತಾಃ ಸರ್ವೇ ಕುಶತರ್ಪಣಮುಚ್ಯತೇ ।
ಪಶ್ಚಾಚ್ಚ ಸಂಗತಾ ತತ್ರ ಗೌತಮೀ ಕಾರಣಾಂತರಾತ್ ॥ ೬೪ ॥

ಪ್ರಣೀತಾಯಾಂ ಮಹಾಬುದ್ಧೇ ಪ್ರಣೀತಾಸಂಗಮೋಽಭವತ್ ।
ಕುಶತರ್ಪಣದೇಶೇ ತು ತತ್ತೀರ್ಥಂ ಕುಶತರ್ಪಣಂ ॥ ೬೫ ॥

ತತ್ರೈವ ಕಲ್ಪಿತೋ ಯೂಪೋ ಮಯಾ ವಿಂಧ್ಯಸ್ಯ ಚೋತ್ತರೇ ।
ವಿಸೃಷ್ಟೋ ಲೋಕಪೂಜ್ಯೋಽಸೌ ವಿಷ್ಣೋರಾಸೀತ್ಸಮಾಶ್ರಯಃ ॥ ೬೬ ॥

ಅಕ್ಷಯಶ್ಚಾಭವಚ್ಛ್ರೀಮಾನಕ್ಷಯೋಽಸೌ ವಟೋಽಭವತ್ ।
ನಿತ್ಯಶ್ಚ ಕಾಲರೂಪೋಽಸೌ ಸ್ಮರಣಾತ್ಕ್ರತುಪುಣ್ಯದಃ ॥ ೬೭ ॥

---

೬೩. ಆ ಪುಣ್ಯಪ್ರದೇಶದಲ್ಲಿ ಪ್ರೋಕ್ಷಿಸಿಕೊಂಡ ದರ್ಭೆಗಳು ಬಿದ್ದಿದ್ದರಿಂದ ಆ ಪ್ರದೇಶಕ್ಕೆ ಕುಶತರ್ಪಣವೆಂದು ಹೆಸರಾಯಿತು. ಅದು ಬಹುಪುಣ್ಯಫಲವನ್ನು ಕೊಡುವುದು. ಎಲ್ಲರೂ ದರ್ಭೆಗಳಿಂದ ತೃಪ್ತರಾದುದರಿಂದ (ಪವಿತ್ರರಾದುದರಿಂದ) ಆ ಪ್ರದೇಶಕ್ಕೆ ಕುಶತರ್ಪಣವೆಂದು ಹೆಸರಾಯಿತು.

೬೪-೬೫. ಕಾರಣಾಂತರದಿಂದ ಆ ಪ್ರಣಿತಾ ನದಿಗೆ ಗೌತಮೀನದಿಯು ಬಂದುಸೇರಿತು. ಅಂದಿನಿಂದ ಅದಕ್ಕೆ ಪ್ರಣೀತಾಸಂಗಮವೆಂದು ಹೆಸರಾಯಿತು. ಕುಶತರ್ಪಣ ಪ್ರದೇಶದಲ್ಲಿರುವ ತೀರ್ಥಕ್ಕೆ ಕುಶತರ್ಪಣವೆಂದು ಹೆಸರಾಯಿತು.

೬೬-೬೭. ವಿಂಧ್ಯಪರ್ವತದ ಉತ್ತರಭಾಗದಲ್ಲಿ ನಾನು ಯೂಪವನ್ನು ಕಲ್ಪಿಸಿದ್ದೆನಷ್ಟೆ. ಅದನ್ನೂ ವಿಸರ್ಜಿಸಿದೆನು. ಆ ಯೂಪದಲ್ಲಿ ಲೋಕಪೂಜ್ಯನಾದ ವಿಷ್ಣುವು ಇದ್ದನು. ಆ ಯೂಪವು ಅಕ್ಷಯವಾದ ಆಲದಮರವಾಯಿತು. ಅದು ನಿತ್ಯವಾಗಿರುವುದು. ಕಾಲರೂಪವಾದ ಅದನ್ನು ಸ್ಮರಿಸಿಕೊಂಡರೆ ಯಜ್ಞದಫಲವು ಉಂಟಾಗುವುದು. ನಾನು ಯಜ್ಞಮಾಡಿದ ಪ್ರದೇಶಕ್ಕೆ ದಂಡಕಾರಣ್ಯವೆಂದು ಹೆಸರು.

ಮದ್ದೇವಯಜನಂ ಚೇದಂ ದಂಡಕಾರಣ್ಯಮುಚ್ಯತೇ ।
ಸಂಪೂರ್ಣೇ ತು ಕ್ರತೌ ವಿಷ್ಣುರ್ಮಯಾ ಭಕ್ತ್ಯಾ ಪ್ರಸಾದಿತಃ ॥ ೬೮ ॥

ಯೋ ವಿರಾಡುಚ್ಯತೇ ವೇದೇ ಯಸ್ಮಾನ್ಮೂರ್ತಮಜಾಯತ ।
ಯಸ್ಮಾಚ್ಚ ಮಮ ಚೋತ್ಪತ್ತಿರ್ಯಸ್ಯೇದಂ ವಿಕೃತಂ ಜಗತ್ ॥ ೬೯ ॥

ತಮಹಂ ದೇವದೇವೇಶಮಭಿವಂದ್ಯ ವ್ಯಸರ್ಜಯಂ ।
ಯೋಜನಾನಿ ಚತುರ್ವಿಂಶನ್ಮದ್ದೇವಯಜನಂ ಶುಭಂ ॥ ೭೦ ॥

ತಸ್ಮಾದದ್ಯಾಪಿ ಕುಂಡಾನಿ ಸಂತಿ ಚ ತ್ರೀಣಿ ನಾರದ ।
ಯಜ್ಞೇಶ್ವರಸ್ವರೂಪಾಣಿ ವಿಷ್ಣೋರ್ವೈ ಚಕ್ರಪಾಣಿನಃ ॥ ೭೧ ॥

ತತಃ ಪ್ರಭೃತಿ ಚಾಖ್ಯಾತಂ ಮದ್ದೇವಯಜನಂ ಚ ತತ್ ।
ತತ್ರಸ್ಥಾಃ ಕೃಮಿಕೀಟಾದಿಃ ಸೋಽಪ್ಯಂತೇ ಮುಕ್ತಿಭಾಜನಂ ॥ ೭೨ ॥

೬೮-೬೯. ಯಜ್ಞವೆಲ್ಲವೂ ಪೂರ್ಣವಾಗಲು ನಾನು ವಿಷ್ಣುವನ್ನು ಭಕ್ತಿಯಿಂದ ಪೂಜಿಸಿದೆನು. ವಿಷ್ಣುವು ವಿರಾಟ್ ಸ್ವರೂಪನೆಂದು ವೇದವು ಹೇಳುವುದು, ಅವನಿಂದ ಈ ಮೂರ್ತವಾದ (ದೃಶ್ಯವಾದ) ಜಗತ್ತು ಸೃಷ್ಟಿಯಾದುದು. ನಾನೂ ಸಹ ಅವನಿಂದಲೇ ಹುಟ್ಟಿದೆನು. ಜಗತ್ತು ವಿಕೃತವಾದುದು (ವಿವಿಧ ರೂಪಗಳು) ಅವನಿಂದಲೇ. ಅಂತಹ ದೇವದೇವನಾದ ಪರಮಾತ್ಮನನ್ನು ನಮಸ್ಕರಿಸಿ ಯಜ್ಞದೀಕ್ಷೆಯನ್ನು ವಿಸರ್ಜನೆಮಾಡಿದೆನು.

೭೦-೭೧. ಎಲೈ ನಾರದನೇ, ನಾನು ಮಾಡಿದ ದೇವಯಜ್ಞದ ಭೂಮಿಯು ವಿಸ್ತಾರವು ಇಪ್ಪತ್ತನಾಲ್ಕುಯೋಜನ ವಿಸ್ತೀರ್ಣವುಳ್ಳದು. ಅಲ್ಲಿ ಈಗಲೂ ಮೂರು ಯಜ್ಞಕುಂಡಗಳಿರುವುವು. ಅವೆಲ್ಲವೂ ಚಕ್ರಪಾಣಿಯಾದ ವಿಷ್ಣುವಿನ ಯಜ್ಞೇಶ್ವರರೂಪಗಳು, ಅಂದಿನಿಂದ ಆ ಜಾಗವು ದೇವಯಜನವೆಂದು ಪ್ರಸಿದ್ಧವಾಯಿತು.

೭೨-೭೩. ಆ ಪ್ರದೇಶದಲ್ಲಿರುವ ಕೃಮಿಕೀಟಾದಿಗಳೆಲ್ಲವೂ ಅವಸಾನಾನಂತರ ಮುಕ್ತಿಯನ್ನು ಹೊಂದುವುವು. ದಂಡಕಾರಣ್ಯವು ಧರ್ಮಕ್ಕೆ ಕಾರಣವೂ

ಧರ್ಮಬೀಜಂ ಮುಕ್ತಿಬೀಜಂ ದಂಡಕಾರಣ್ಯಮುಚ್ಯತೇ ।
ವಿಶೇಷಾದ್ಗೌತಮೀಶ್ಲಿಷ್ಟೋ ದೇಶಃ ಪುಣ್ಯತಮೋಽಭವತ್ ॥ ೭೩ ॥

ಪ್ರಣೀತಾಸಂಗಮೋ ಚಾಪಿ ಕುಶತರ್ಪಣ ಏವ ವಾ ।
ಸ್ನಾನದಾನಾದಿ ಯಃ ಕುರ್ಯಾತ್ಸ ಗಚ್ಛೇತ್ಪರಮಂ ಪದಂ ॥ ೭೪ ॥

ಸ್ಮರಣಂ ಪಠನಂ ವಾಪಿ ಶ್ರವಣಂ ಚಾಪಿ ಭಕ್ತಿತಃ ।
ಸರ್ವಕಾಮಪ್ರದಂ ಪುಂಸಾಂ ಭುಕ್ತಿಮುಕ್ತಿಪ್ರದಂ ವಿದುಃ ॥ ೭೫ ॥

ಉಭಯೋಸ್ತೀರಯೋಸ್ತತ್ರ ತೀರ್ಥಾನ್ಯಾಹುರ್ಮನೀಷಿಣಃ ।
ಷಡಶೀತಿಸಹಸ್ರಾಣಿ ತೇಷು ಪುಣ್ಯಂ ಪುರೋದಿತಂ ॥ ೭೬ ॥

ವಾರಾಣಸ್ಯಾ ಅಪಿ ಮುನೇ ಕುಶತರ್ಪಣಮುತ್ತಮಂ ।
ನಾನೇನ ಸದೃಶಂ ತೀರ್ಥಂ ವಿದ್ಯತೇ ಸಚರಾಚರೇ ॥ ೭೭ ॥

ಮುಕ್ತಿಗೆ ಕಾರಣವೂ ಆಗಿರುವುದು. ಅದರಲ್ಲಿಯೂ ಗೌತಮಿಯೊಡಗೂಡಿದ ಪ್ರದೇಶವು ಅತ್ಯಂತ ಪುಣ್ಯಕರವಾದುದು.

೭೪. ಪ್ರಣೀತಾಸಂಗಮದಲ್ಲಿಯಾಗಲೀ, ಕುಶತರ್ಪಣದಲ್ಲಿಯಾಗಲೀ ಯಾರು ಸ್ನಾನದಾನಾದಿಗಳನ್ನು ಮಾಡುವರೋ ಅವರು ಶ್ರೇಷ್ಠಗತಿಯನ್ನು ಹೊಂದುವರು.

೭೫. ಈ ತೀರ್ಥಗಳನ್ನು ಸ್ಮರಣೆಮಾಡಿದರೂ, ಪಠಿಸಿದರೂ ಅಥವಾ ಭಕ್ತಿಯಿಂದ ಕೇಳಿದರೂ ಜನರಿಗೆ ಸರ್ವೇಷ್ಟಾರ್ಥವನ್ನು ನೆರವೇರಿಸಿ ಭಕ್ತಿಯನ್ನೂ ಮುಕ್ತಿಯನ್ನೂ ಕೊಡುವುದು.

೭೬. ಆ ಗೌತಮಿಯ ಎರಡು ದಡಗಳಲ್ಲಿಯೂ ಎಂಭತ್ತಾರುಸಹಸ್ರ ತೀರ್ಥಗಳಿರುವುವೆಂದು ಜ್ಞಾನಿಗಳು ಹೇಳುವರು. ಅವುಗಳಲ್ಲೆಲ್ಲಾ ಪ್ರಣೀತಾ ಸಂಗಮವೇ ಶ್ರೇಷ್ಠವಾದುದು.

೭೭-೭೮. ಎಲೈ ನಾರದನೇ, ಕುಶತರ್ಪಣವು ಕಾಶೀಕ್ಷೇತ್ರಕ್ಕಿಂತಲೂ ಶ್ರೇಷ್ಠವಾದುದು. ಚರಾಚರಾತ್ಮಕವಾದ ಈ ಜಗತ್ತಿನಲ್ಲಿ ಕುಶತರ್ಪಣಕ್ಕಿಂತ

ಬ್ರಹ್ಮಹತ್ಯಾದಿಪಾಪಾನಾಂ ಸ್ಮರಣಾದಪಿ ನಾಶನಂ ।
ತೀರ್ಥಮೇತನ್ಮುನೇ ಪ್ರೋಕ್ತಂ ಸ್ವರ್ಗದ್ವಾರಂ ಮಹೀತಲೇ ॥ ೭೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಪ್ರಣೀತಾಸಂಗಮಕುಶತರ್ಪಣಾದಿಷಡಶೀತಿಸಹಸ್ರತೀರ್ಥ
ವರ್ಣನಂ ನಾಮೈಕಷಷ್ಟ್ಯಧಿಕಶತತಮೋಽಧ್ಯಾಯಃ

ಉತ್ತಮವಾದ ಬೇರೊಂದು ತೀರ್ಥವಿಲ್ಲ. ಇದರ ಸ್ಮರಣೆಮಾತ್ರದಿಂದಲೇ ಬ್ರಹ್ಮಹತ್ಯಾದಿಗಳೆಲ್ಲವೂ ನಾಶವಾಗುವುದು. ಈ ತೀರ್ಥವು ಸ್ವರ್ಗಕ್ಕೆ ಮಾರ್ಗವೆಂದು ಭೂಮಂಡಲದಲ್ಲಿ ಪ್ರಸಿದ್ಧವಾಗಿರುವುದು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಪ್ರಣೀತಾಸಂಗಮ ಕುಶತರ್ಪಣಾದಿ ತೀರ್ಥಗಳ
ವರ್ಣನವೆಂಬ ನೂರರವತ್ತೊಂದನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ತೊಂಭತ್ತೆರಡನೆಯ ಅಧ್ಯಾಯವು

ಶ್ರೀಃ

ಅಥ ಮಹಾ ಪುರಾಣೇ ಬ್ರಾಹ್ಮೇ

ದ್ವಿಷಷ್ಟ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಮನ್ಯುತೀರ್ಥಮಿತಿ ಖ್ಯಾತಂ ಸರ್ವಪಾಪಪ್ರಣಾಶನಂ ।
ಸರ್ವಕಾಮಪ್ರದಂ ನೃಣಾಂ ಸ್ಮರಣಾದಘನಾಶನಂ ॥ ೧ ॥

ತಸ್ಯ ಪ್ರಭಾವಂ ವಕ್ಷ್ಯಾಮಿ ಶೃಣುಷ್ವಾವಹಿತೋ ಮುನೇ ।
ದೇವಾನಾಂ ದಾನವಾನಾಂ ಚ ಸಂಗರೋಽಭೂನ್ಮಿಥಃ ಪುರಾ ॥ ೨ ॥

ತತ್ರಾಜಯನ್ನೈವ ಸುರಾ ದಾನವಾ ಜಯಿನೋಽಭವನ್ ।
ಪರಾಙ್ಮುಖಾಃ ಸುರಗಣಾಃ ಸಂಗರಾದ್ಗತಚೇತಸಃ ॥ ೩ ॥

ನೂರರವತ್ತೆರಡನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು :—ಮನ್ಯುತೀರ್ಥವೆಂದು ಪ್ರಸಿದ್ಧವಾದ ತೀರ್ಥವು ಸರ್ವಪಾಪಗಳನ್ನೂ ನಾಶಮಾಡುವುದು. ಅದನ್ನು ಸ್ಮರಿಸಿದರೆ ಎಲ್ಲಾ ಇಷ್ಟಾರ್ಥಗಳೂ ನೆರವೇರುವುವು. ಪಾಪಗಳೂ ನಾಶವಾಗುವುವು.

೨. ಎಲೈ ನಾರದಮುನಿಯೇ, ಆ ಮನ್ಯುತೀರ್ಥದ ಪ್ರಭಾವವನ್ನು ಹೇಳುವೆನು. ಸಾವಧಾನದಿಂದ ಕೇಳು. ಪೂರ್ವದಲ್ಲಿ ದೇವತೆಗಳಿಗೂ ದಾನವರಿಗೂ ಯುದ್ಧ ನಡೆಯಿತು.

೩–೪. ಆ ಯುದ್ಧದಲ್ಲಿ ದೇವತೆಗಳಿಗೆಲ್ಲ ಸೋಲಾಯಿತು. ದಾನವರೆಲ್ಲರೂ ಜಯಶೀಲರಾದರು. ಅನಂತರ ಯುದ್ಧರಂಗದಿಂದ ಹಿಮ್ಮೆಟ್ಟಿದ ದೇವತೆ

ಮಾಮಭ್ಯೇತ್ಯ ಸಮೂಚುಸ್ತೇ ದೇಹಿ ನೋಽಭಯಕಾರಣಂ ।
ತಾನಹಂ ಪ್ರತ್ಯವೋಚಂ ವೈ ಗಂಗಾಂ ಗಚ್ಛತ ಸರ್ವಶಃ ॥ ೪ ॥

ತತ್ರ ವೈ ಗೌತಮೀತೀರೇ ಸ್ತುತ್ವಾ ದೇವಂ ಮಹೇಶ್ವರಂ ।
ಅಪಾಯನಿರಾಯಾಸಸಹಜಾನಂದಸುಂದರಂ ॥ ೫ ॥

ಲಪ್ಸ್ಯತೇ ಸರ್ವವಿಬುಧಾ ಜಯಹೇತುರ್ಮಹೇಶ್ವರಾತ್ ।
ತಥೇತ್ಯುಕ್ತ್ವಾ ಸುರಗಣಾಃ ಸ್ತುವಂತಿ ಸ್ಮ ಮಹೇಶ್ವರಂ ॥ ೬ ॥

ತಪೋಽತಪ್ಯಂತ ಕೇಚಿದ್ವೈ ನನೃತುಶ್ಚ ತಥಾಪರೇ ।
ಅಸ್ನಾಪಯಂಶ್ಚ ಕೇಚಿಚ್ಚಾಪೂಜಯಂಶ್ಚ ತಥಾಪರೇ ॥ ೭ ॥

ತತಃ ಪ್ರಸನ್ನೋ ಭಗವಾನ್ ಶೂಲಪಾಣಿರ್ಮಹೇಶ್ವರಃ ।
ದೇವಾನಥಾಬ್ರವೀತ್ತುಷ್ಟೋ ವ್ರಿಯತಾಂ ಯದಭೀಪ್ಸಿತಂ ॥ ೮ ॥

ಗಳೆಲ್ಲರೂ ನನ್ನಹತ್ತಿರಕ್ಕೆ ಬಂದು ನನ್ನನ್ನು ತಮಗಭಯವನ್ನು ಕರುಣಿಸೆಂದು ಕೇಳಿದರು. ಅನಂತರ ನಾನು ಅವರನ್ನು ಕುರಿತು ನೀವೆಲ್ಲರೂ ಗಂಗಾ ನದಿಗೆ ಹೋಗಿರಿ.

೫. ಅಲ್ಲಿ ಗೌತಮೀತೀರದಲ್ಲಿ ದೇವನಾದ ಮಹೇಶ್ವರನನ್ನು ಪೂಜಿಸಿರಿ. ಅವನಿಂದ ನಿಮ್ಮ ಅಪಾಯಗಳೆಲ್ಲವೂ ನಿರಾಯಾಸವಾಗಿ ನಾಶವಾಗುವುವು. ಅವನು ಸ್ವಭಾವಸುಂದರನು. ಜ್ಞಾನಿಗಳೆಲ್ಲರೂ ಆ ಮಹೇಶ್ವರನನ್ನು ಪೂಜಿಸಿ ಜಯವನ್ನು ಹೊಂದುವರು ಎಂದೆನು.

೬-೭. ಹಾಗೆಯೇ ಆಗಲೆಂದು ದೇವತೆಗಳೆಲ್ಲರೂ ಮಹೇಶ್ವರನನ್ನು ಸ್ತೋತ್ರಮಾಡುತ್ತಿದ್ದರು. ಕೆಲವರು ತಪಸ್ಸನ್ನಾಚರಿಸಿದರು. ಮತ್ತೆ ಕೆಲವರು ನರ್ತಿಸಿದರು. ಇನ್ನೂ ಕೆಲವರು ಸ್ನಾನಮಾಡುತ್ತಿದ್ದರು. ಕೆಲವರು ಈಶ್ವರನ ಪೂಜೆಯನ್ನು ಮಾಡಿದರು.

೮. ಒಳಿಕ ಶೂಲಪಾಣಿಯಾದ ಮಹೇಶ್ವರನು ಅವರು ಮಾಡಿದ ಪೂಜಾದಿಗಳಿಂದ ಪ್ರಸನ್ನನಾಗಿ ದೇವತೆಗಳನ್ನು ಕುರಿತು—ನಿಮಗೇನು ವರ ಬೇಕು ? ಕೇಳಿ ಎಂದನು.

ದೇವಾ ಊಚುಃ ಸುರಪತಿಂ ವಿಜಯಾಯ ದದಸ್ವ ನಃ ।
ಪುರುಷಂ ಪರಮುಶ್ಲಾಘ್ಯಂ ರಣೇಷು ಪುರತಃ ಸ್ಥಿತಂ ॥ ೯ ॥

ಯದ್ಬಾಹುಬಲಮಾಶ್ರಿತ್ಯ ಭವಾಮಃ ಸುಖಿನೋ ವಯಂ ।
ತಥೇತ್ಯುವಾಚ ಭಗವಾನ್ದೇವಾನ್ಪ್ರತಿ ಮಹೇಶ್ವರಃ ॥ ೧೦ ॥

ಆತ್ಮನಸ್ತೇಜಸಾ ಕಶ್ಚಿನ್ನಿರ್ಮಿತಃ ಪರಮೇಷ್ಠಿನಾ ।
ಮನ್ಯುನಾಮಾನಮತ್ಯುಗ್ರಂ ದೇವಸೈನ್ಯಪುರೋಗಮಂ ॥ ೧೧ ॥

ತಂ ನತ್ವಾ ತ್ರಿದಶಾಃ ಸರ್ವೇ ಶಿವಂ ನತ್ವಾ ಸ್ವಮಾಲಯಂ ।
ಮನ್ಯುನಾ ಸಹ ಚಾಭ್ಯೇತ್ಯ ಪುನರ್ಯುದ್ಧಾಯ ತಸ್ಥಿರೇ ॥ ೧೨ ॥

ಯುದ್ಧೇ ಸ್ಥಿತ್ವಾ ತು ದನುಜೈರ್ದೈತೇಯೈಶ್ಚ ಮಹಾಬಲೈಃ ।
ವಿಬುಧಾ ಜಾತಸಂನದ್ಧಾ ಮನ್ಯುಮೂಚುಃ ಪುರಃ ಸ್ಥಿತಾಃ ॥ ೧೩ ॥

---

೯. ಅನಂತರ ದೇವತೆಗಳು ದೇವತೆಗಳಿಗೆ ಒಡೆಯನಾದ ಆ ಮಹೇಶ್ವರನನ್ನು ಕುರಿತು ನಮಗೆ ಜಯವಾಗುವ ವರವನ್ನು ಕೊಡು. ನೀನು ಪರಮ ಪುರುಷನು. ರಣಾಗ್ರಗಾಮಿಯು. ನಿನ್ನ ಬಾಹುಬಲದಿಂದಲೇ ನಾವು ಸುಖಿಗಳಾಗಿರುವೆವು. ಎಂಬುದಾಗಿ ಹೇಳಿದರು.

೧೦–೧೧. ಹಾಗೆಯೇ ಆಗಲೆಂದು ಭಗವಂತನಾದ ಮಹೇಶ್ವರನು ದೇವತೆಗಳನ್ನು ಕುರಿತು ಹೇಳಿದನಂತರ ತನ್ನ ತೇಜಸ್ಸಿನಿಂದ ಮನ್ಯುವೆಂಬ ಹೆಸರುಳ್ಳ ಒಬ್ಬ ಪುರುಷನನ್ನು ನಿರ್ಮಿಸಿದನು. ಅವನು ದೇವತೆಗಳ ಸೇನಾಗ್ರಗಾಮಿಯಾಗಿದ್ದನು.

೧೨. ಅನಂತರ ದೇವತೆಗಳು ಮಹೇಶ್ವರನನ್ನು ನಮಸ್ಕರಿಸಿ ಮನ್ಯುವಿನೊಡನೆ ಸ್ವರ್ಗಕ್ಕೆ ಹೋದರು.

೧೩. ಯುದ್ಧದಲ್ಲಿ ದೇವತೆಗಳು ಮಹಾಬಲಿಷ್ಠರಾದ ದನುಜರಿಂದಲೂ ದೈತ್ಯರಿಂದಲೂ ಕೂಡಿ ಯುದ್ಧೋತ್ಸಾಹಿಗಳಾಗಿ ಮನ್ಯುವನ್ನು ಕುರಿತು

॥ ದೇವಾ ಊಚುಃ ॥

ಸಾಮರ್ಥ್ಯಂ ತವ ಪಶ್ಯಾಮಃ ಪಶ್ಚಾದ್ಯೋತ್ಸ್ಯಾಮಹೇ ಪರೈಃ ।
ತಸ್ಮಾದ್ದರ್ಶಯ ಚಾತ್ಮಾನಂ ಮನ್ಯೋऽಸ್ಮಾಕಂ ಯುಯುತ್ಸತಾಂ ॥ ೧೪ ॥

॥ ಬ್ರಹ್ಮೋವಾಚ ॥

ತದ್ದೇವವಚನಂ ಶ್ರುತ್ವಾ ಮನ್ಯುರಾಹ ಸ್ಮಯನ್ನಿವ ॥ ೧೫ ॥

॥ ಮನ್ಯುರುವಾಚ ॥

ಜನಿತಾ ಮಮ ದೇವೇಶಃ ಸರ್ವಜ್ಞಃ ಸರ್ವದೃಕ್ಪ್ರಭುಃ ।
ಯಃ ಸರ್ವಂ ವೇತ್ತಿ ಸರ್ವೇಷಾಂ ಧಾಮನಾಮ ಮನಃಸ್ಥಿತಂ ॥ ೧೬ ॥

ನೈವ ಕಶ್ಚಿಚ್ಚ ತಂ ವೇತ್ತಿ ಯಃ ಸರ್ವಂ ವೇತ್ತಿ ಸರ್ವದಾ ।
ಅಮೂರ್ತಂ ಮೂರ್ತಮಸ್ಯೇತದ್ವೇತ್ತಿ ಕರ್ತಾ ಜಗನ್ಮಯಃ ॥ ೧೭ ॥

---

೧೪. ಎಲೈ ಮನ್ಯುವೇ, ಶತ್ರುಗಳೊಡನೆ ಯುದ್ಧಮಾಡಲಿರುವ ನಿನ್ನ ಸಾಮರ್ಥ್ಯವನ್ನು ನೋಡೋಣ. ಯುದ್ಧಮಾಡಬೇಕಿಂದಿರುವ ನಮಗೆ ನಿನ್ನ ರೂಪವನ್ನು ತೋರಿಸು. ಎಂದರು.

೧೫. ದೇವತೆಗಳಾಡಿದ ಮಾತನ್ನು ಕೇಳಿ ಮನ್ಯುವು ನಸುನಗುತ್ತಾ ಇಂತೆಂದನು.

೧೬, ನನ್ನ ತಂದೆಯು ಸರ್ವಜ್ಞನು. ದೇವತೆಗಳಿಗೆಲ್ಲಾ ಒಡೆಯನು. ಎಲ್ಲಾ ವಸ್ತುಗಳನ್ನೂ ನೋಡತಕ್ಕವನು. ಸಮರ್ಥನು. ಎಲ್ಲರ ಮನಸ್ಸಿನ ವಿಷಯವನ್ನೂ ತಿಳಿಯಬಲ್ಲನು.

೧೭-೧೮. ಯಾರೂ ಅವನನ್ನು ತಿಳಿಯಲಾರರು. ಆವನಾದರೋ ಎಲ್ಲವನ್ನೂ ಯಾವಾಗಲೂ ತಿಳಿದಿರುವನು. ಅಮೂರ್ತವನ್ನೂ ಕಣ್ಣಿಗೆಕಾಣ ದಿರುವ ವಸ್ತು) ಮೂರ್ತ ವಸ್ತುವನ್ನೂ (ಕಣ್ಣಿಗೆ ಕಾಣುವ) ತಿಳಿಯುವವನು

ಪರೋಕ್ಷಶ್ಚ ಭಗವಾನ್ಸಾಕ್ಷಾತ್ತಥಾ ದಿವ್ಯಂತರಿಕ್ಷಗಃ ।
ಕಸ್ತಸ್ಯ ರೂಪಂ ಯೋ ವೇದ ಕಸ್ಯ ಕರ್ತಾ ಜಗನ್ಮಯಃ ॥ ೧೮ ॥

ಏವಂವಿಧಾದಹಂ ಜಾತೋ ಮಾಂ ಕಥಂ ವೇತ್ತುಮರ್ಹಥ ।
ಅಥವಾ ದ್ರಷ್ಟುಕಾಮಾ ವೈ ಭವಂತೋ ಮಾನುಪಶ್ಯತ ॥ ೧೯ ॥

॥ ಬ್ರಹ್ಮೋವಾಚ ॥

ಇತ್ಯುಕ್ತ್ವಾ ದರ್ಶಯಾಮಾಸ ಮನ್ಯೋ ರೂಪಂ ಸ್ವಕಂ ಮಹತ್ ।
ತಾರ್ತೀಯಚಕ್ಷುಷೋದ್ಭೂತಂ ಭವಸ್ಯ ಪರಮೇಷ್ಠಿನಃ ॥ ೨೦ ॥

ತೇಜಸಾ ಸಂಭೃತಂ ರೂಪಂ ಯತಃ ಸರ್ವಂ ತದುಚ್ಯತೇ ।
ಪೌರುಷಂ ಪುರುಷೇಷ್ವೇವ ಅಹಂಕಾರಶ್ಚ ಜಂತುಷು ॥ ೨೧ ॥

ಕ್ರೋಧಃ ಸರ್ವಸ್ಯ ಯೋ ಭೀಮ ಉಪಸಂಹಾರಕೃದ್ಭವೇತ್ ।
ತಂ ಶಂಕರಪ್ರತಿನಿಧಿಂ ಜ್ವಲಂತಂ ನಿಜತೇಜಸಾ ॥ ೨೨ ॥

ಅವನು ಜಗತ್ಕೃತ್ಯವು, ಜಗನ್ಮಯನು, ಪರಮಪುರುಷನು, ಭಗವಂತನು, ಅಂತರಿಕ್ಷದಲ್ಲಿ ಸಂಚರಿಸಬಲ್ಲನು. ಅವನ ರೂಪವನ್ನು ಯಾರುತಾನೇ ನೋಡಲು ಸಮರ್ಥರು ?

೧೯. ಅಂಥವನಿಂದ ನಾನು ಹುಟ್ಟಿದೆನು. ಆದುದರಿಂದ ನನ್ನನ್ನು ಹೇಗೆ ತಾನೇ ತಿಳಿಯುವಿರಿ? ಅಥವಾ ನನ್ನನ್ನು ನೋಡಬೇಕೆಂಬ ಆಸೆಯುಳ್ಳವರಾದರೆ ನೋಡಿರಿ ಎಂದನು.

೨೦. ಈರೀತಿಯಾಗಿ ಹೇಳಿ ಆ ಪುರುಷನು ಆ ಪರಮೇಶ್ವರನ ತೃತೀಯ ನೇತ್ರದಿಂದ ಹುಟ್ಟಿದ ಮಹತ್ತಾದ ತನ್ನ ಮನ್ಯುರೂಪವನ್ನು ತೋರಿಸಿದನು.

೨೧-೨೨. ಆ ರೂಪವು ಭವನ ತೇಜಸ್ಸಿನಿಂದುಂಟಾದುದು. ಪ್ರಪಂಚದಲ್ಲಿನ ಎಲ್ಲವೂ ಆ ರೂಪವೇ ಆಗಿರುವುದು. ಪುರುಷರಲ್ಲಿನ ಪೌರುಷವೂ ಜಂತುಗಳಲ್ಲಿನ ಅಹಂಕಾರವೂ ಸಹ ಆ ರೂಪವೇ. ಭಯಂಕರವಾದ ಆ ಕೋಪವೂ ಆ ರೂಪವೇ. ಅದೇ ಪ್ರಪಂಚದ ಸಂಹಾರಕಾರಣವು. ಅಂತಹ ತನ್ನ ತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಈಶ್ವರನ ಪ್ರತಿನಿಧಿಯಾದ ರೂಪವನ್ನು ತೋರಿಸಿದನು.

ಸರ್ವಾಯುಧಧರಂ ದೃಷ್ಟ್ವಾ ಪ್ರಣೇಮುಃ ಸರ್ವದೇವತಾಃ ।
ವಿತ್ರೇಸುರ್ದೈತ್ಯದನುಜಾಃ ಕೃತಾಂಜಲಿಪುಟಾಃ ಸುರಾಃ ॥ ೨೩ ॥

ಭೂತ್ವಾ ಮನ್ಯುಮಥೋಚುಸ್ತೇ ತ್ವಂ ಸೇನಾನೀಃ ಪ್ರಭೋ ಭವ ।
ತ್ವಯಾ ದತ್ತಮಿದಂ ರಾಜ್ಯಂ ಮನ್ಯೋ ಭೋಕ್ಷ್ಯಾಮಹೇ ವಯಂ ॥ ೨೪ ॥

ತಸ್ಮಾತ್ಸರ್ವೇಷು ಕಾರ್ಯೇಷು ಜೇತಾ ತ್ವಂ ಜಯವರ್ಧನಃ ।
ತ್ವಮಿಂದ್ರಸ್ತ್ವಂ ಚ ವರುಣೋ ಲೋಕಪಾಲಾಸ್ತ್ವಮೇವ ಚ ॥ ೨೫ ॥

ಅಸ್ಮಾಸು ಸರ್ವದೇವೇಷು ಪ್ರವಿಶ ತ್ವಂ ಜಯಾಯ ವೈ ।
ಮನ್ಯುಃ ಪ್ರೋವಾಚ ತಾನ್ಸರ್ವಾನ್ವಿನಾ ಮತ್ತೋ ನ ಕಿಂಚನ ॥ ೨೬ ॥

ಸರ್ವೇಷ್ವಂತಃ ಪ್ರವಿಷ್ಟೋಽಹಂ ನ ಮಾಂ ಜಾನಾತಿ ಕಶ್ಚನ ।
ಸ ಏವ ಭಗವಾನ್ಮನ್ಯುಸ್ತತೋ ಜಾತಃ ಪೃಥಕ್ಪೃಥಕ್ ॥ ೨೭ ॥

---

೨೩. ಆಯುಧಗಳನ್ನೆಲ್ಲಾ ಧರಿಸಿರುವ ಆ ಮನ್ಯುವನ್ನು ನೋಡಿ ದೇವತೆಗಳೆಲ್ಲರೂ ನಮಸ್ಕರಿಸಿದರು. ದೈತ್ಯದಾನವರು ಹೆದರಿದರು.

೨೪-೨೫. ಅನಂತರ ದೇವತೆಗಳೆಲ್ಲರೂ ಅಂಜಲಿಬದ್ಧರಾಗಿ ಮನ್ಯುವನ್ನು ಕುರಿತು ಎಲೈ ಸ್ವಾಮಿಯೇ, ನೀನು ನಮಗೆ ಸೇನಾಧಿಪತಿಯಾಗು. ನೀನು ಕೊಟ್ಟಿರುವ ರಾಜ್ಯವನ್ನೇ ನಾವು ಅನುಭವಿಸುತ್ತಿರುವೆವು. ನೀನು ಎಲ್ಲಾ ಕಾರ್ಯಗಳಲ್ಲಿಯೂ ಜಯಶಾಲಿಯು ಮತ್ತು ಜಯವನ್ನು ಅಭಿವೃದ್ಧಿಗೊಳಿಸುವವನು. ನೀನೇ ಇಂದ್ರನು. ವರುಣನು. ಲೋಕಪಾಲರೂ ನೀನೇ. ಎಲ್ಲಾ ದೇವತೆಗಳಲ್ಲಿಯೂ ನೀನು ಜಯಕ್ಕೋಸ್ಕರ ಪ್ರವೇಶಮಾಡು ಎಂದರು.

೨೬-೨೭. ಅನಂತರ ಮನ್ಯುವು ಅವರೆಲ್ಲರನ್ನೂ ಕುರಿತು, ನನ್ನನ್ನು ಬಿಟ್ಟು ಯಾರೂ ಇರಲಾರರು. ಎಲ್ಲರಲ್ಲಿಯೂ ನಾನು ಪ್ರವೇಶಿಸುವೆನು. ಆದರೂ ನನ್ನನ್ನು ಮಾತ್ರ ಯಾರು ತಿಳಿದಿಲ್ಲ ಎಂದನು. ಬಳಿಕ ಆ ಭಗವಂತನಾದ ಮನ್ಯುವು ಬೇರೆಬೇರೆ ರೂಪಗಳನ್ನು ಕೈಗೊಂಡನು.

ಸ ಏವ ರುದ್ರರೂಪೀ ಸ್ಯಾದ್ರುದ್ರೋ ಮನ್ಯುಃ ಶಿವೋऽಭವತ್ ।
ಸ್ಥಾವರಂ ಜಂಗಮಂ ಚೈವ ಸರ್ವಂ ವ್ಯಾಪ್ತಂ ಹಿ ಮನ್ಯುನಾ　　॥ ೨೮ ॥

ತಮವಾಪ್ಯ ಸುರಾಃ ಸರ್ವೇ ಜಯಮಾಪುಶ್ಚ ಸಂಗರೇ ।
ಜಯೋ ಮನ್ಯುಶ್ಚ ಶೌರ್ಯಂ ಚ ಈಶತೇಜಃಸಮುದ್ಭವಂ　　॥ ೨೯ ॥

ಮನ್ಯುನಾ ಜಯಮಾಪ್ಯಾಥ ಕೃತ್ವಾ ದೈತ್ಯೈಶ್ಚ ಸಂಗಮಂ ।
ಯಥಾಗತಂ ಯಯುಃ ಸರ್ವೇ ಮನ್ಯುನಾ ಪರಿರಕ್ಷಿತಾಃ　　॥ ೩೦ ॥

ಯತ್ರ ವೈ ಗೌತಮೀತೀರೇ ಶಿವಮಾರಾಧ್ಯ ತೇ ಸುರಾಃ ।
ಮನ್ಯುಮಾಪುರ್ಜಯಂ ಚೈವ ಮನ್ಯುತೀರ್ಥಂ ತದುಚ್ಯತೇ　　॥ ೩೧ ॥

ಉತ್ಪತ್ತಿಂ ಚ ತಥಾ ಮನ್ಯೋರ್ಯೋ ನರಃ ಪ್ರಯತಃ ಸ್ಮರೇತ್ ।
ವಿಜಯೋ ಜಾಯತೇ ತಸ್ಯ ನ ಕೈಶ್ಚಿತ್ಪರಿಭೂಯತೇ　　॥ ೩೨ ॥

---

೨೮. ಆ ಮನ್ಯುವೇ ರುದ್ರರೂಪನಾದನು. ಆ ರುದ್ರನೇ ಮನ್ಯುವು ಆ ಮನ್ಯುವೇ ಶಿವನಾದನು. ಸ್ಥಾವರ, ಜಂಗಮ ಎಲ್ಲವೂ ಕೂಡ ಮನ್ಯುವಿನಿಂದ ವ್ಯಾಪ್ತವಾಯಿತು.

೨೯-೩೦. ಅನಂತರ ದೇವತೆಗಳು ದೈತ್ಯರೊಡನೆ ಯುದ್ಧಮಾಡಿ ಆ ಮನ್ಯುವಿನ ಸಹಾಯದಿಂದ ಜಯವನ್ನು ಹೊಂದಿದರು. ಆ ಜಯವೂ, ಮನ್ಯುವು. ಅವನ ಶೌರ್ಯವೂ ಸಹ ಈಶ್ವರನ ತೇಜಸ್ಸಿನಿಂದ ಉಂಟಾದುದು. ಅನಂತರ ದೇವತೆಗಳೆಲ್ಲರೂ ಮನ್ಯುವಿನಿಂದ ರಕ್ಷಿಸಲ್ಪಟ್ಟು ಹೊರಟುಹೋದರು.

೩೧. ದೇವತೆಗಳು ಗೌತಮೀತೀರದಲ್ಲಿ ಶಿವನನ್ನು ಪೂಜಿಸಿ ಮನ್ಯುವನ್ನೂ ಜಯವನ್ನೂ ಪಡೆದ ಸ್ಥಳಕ್ಕೆ ಮನ್ಯುತೀರ್ಥವೆಂದು ಹೆಸರಾಯಿತು.

೩೨. ಮನ್ಯುವಿನ ಉತ್ಪತ್ತಿಯನ್ನು ಸ್ಮರಣೆ ಮಾಡುವವನು ವಿಜಯಶಾಲಿಯಾಗುವನು. ಅವನು ಯಾರ ತಿರಸ್ಕಾರಕ್ಕೂ ಒಳಗಾಗುವುದಿಲ್ಲ.

ನ ಮನ್ಯುತೀರ್ಥಸದೃಶಂ ಪಾವನಂ ಹಿ ಮಹಾಮುನೇ ।
ಯತ್ರ ಸಾಕ್ಷಾನ್ಮನ್ಯುರೂಪೀ ಸರ್ವದಾ ಶಂಕರಃ ಸ್ಥಿತಃ ।
ತತ್ರ ಸ್ನಾನಂ ಚ ದಾನಂ ಚ ಸ್ಮರಣಂ ಸರ್ವಕಾಮದಂ ॥ ೩೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಮನ್ಯುತೀರ್ಥವರ್ಣನಂ ನಾಮ ದ್ವಿಷಷ್ಟ್ಯಧಿಕ-ಶತತಮೋಽಧ್ಯಾಯಃ

---

೩೩. ಎಲೈ ಮಹಾಮುನಿಯೇ, ಮನ್ಯುತೀರ್ಥಕ್ಕೆ ಸದೃಶವಾದ ಪವಿತ್ರವಾದ ಮತ್ತೊಂದು ತೀರ್ಥವಿಲ್ಲ. ಅಲ್ಲಿ ಮನ್ಯುರೂಪಿಯಾದ ಸಾಕ್ಷಾತ್ ಈಶ್ವರನು ನೆಲಸಿರುವನು. ಅಲ್ಲಿ ಸ್ನಾನದಾನಗಳನ್ನೂ ಆ ತೀರ್ಥದ ಸ್ಮರಣೆಯನ್ನೂ ಮಾಡಿದರೆ ಸರ್ವೇಷ್ಟವು ಸಿದ್ಧಿಸುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಮನ್ಯುತೀರ್ಥವರ್ಣನವೆಂಬ ನೂರರವತ್ತೆರಡನೆಯ ಅಧ್ಯಾಯವು ಮುಗಿದುದು

ಗೌತಮೀಮಾಹಾತ್ಮ್ಯೆಯಲ್ಲಿ ತೊಂಭತ್ತಮೂರನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ತ್ರಿಷಷ್ಟ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಸಾರಸ್ವತಂ ನಾಮ ತೀರ್ಥಂ ಸರ್ವಕಾಮಪ್ರದಂ ಶುಭಂ ।
ಭುಕ್ತಿಮುಕ್ತಿಪ್ರದಂ ನೃಣಾಂ ಸರ್ವಪಾಪಪ್ರಣಾಶನಂ ॥ ೧ ॥

ಸರ್ವರೋಗಪ್ರಶಮನಂ ಸರ್ವಸಿದ್ಧಿಪ್ರದಾಯಕಂ ।
ತತ್ರೇಮಂ ಶೃಣು ವೃತ್ತಾಂತಂ ವಿಸ್ತರೇಣಾಥ ನಾರದ ॥ ೨ ॥

ಪುಷ್ಪೋತ್ಕಟಾತ್ಪೂರ್ವಭಾಗೇ ಪರ್ವತೋ ಲೋಕವಿಶ್ರುತಃ ।
ಶುಭ್ರೋ ನಾಮ ಗಿರಿಶ್ರೇಷ್ಠೋ ಗೌತಮ್ಯಾ ದಕ್ಷಿಣೇ ತಟೇ ॥ ೩ ॥

ಶಾಕಲ್ಯ ಇತಿ ವಿಖ್ಯಾತೋ ಮುನಿಃ ಪರಮನೈಷ್ಠಿಕಃ ।
ತಸ್ಮಿಞ್ಛುಭ್ರೇ ಪುಣ್ಯಗಿರೌ ತಪಸ್ತೇಪೇ ಹ್ಯನುತ್ತಮಂ ॥ ೪ ॥

ನೂರರವತ್ತಮೂರನೆಯ ಅಧ್ಯಾಯವು

೧-೨. ಬ್ರಹ್ಮನು ಹೇಳಿದನು—ಎಲೈ ನಾರದನೇ, ಸಾರಸ್ವತವೆಂಬ ತೀರ್ಥವಿರುವುದು. ಅದು ಎಲ್ಲಾ ಇಷ್ಟಾರ್ಥಗಳನ್ನೂ ಕೊಡುವುದು. ಎಲ್ಲಾ ಪಾಪಗಳನ್ನೂ ನಾಶಮಾಡುವುದು. ಎಲ್ಲಾ ರೋಗಗಳನ್ನೂ ನಾಶಮಾಡುವುದು. ಇದರ ವೃತ್ತಾಂತವನ್ನು ವಿಸ್ತಾರವಾಗಿ ಹೇಳುವೆನು ಕೇಳು.

೩-೪. ಪುಷ್ಪೋತ್ಕಟವೆಂಬ ಪರ್ವತದ ಪೂರ್ವಭಾಗಕ್ಕೆ ಗೌತಮಿಯ ದಕ್ಷಿಣ ತೀರದಲ್ಲಿ ಶುಭ್ರವೆಂಬ ಪರ್ವತಶ್ರೇಷ್ಠವುಂಟು. ಆ ಪುಣ್ಯಪರ್ವತದಲ್ಲಿ ಶಾಕಲ್ಯನೆಂಬ ಪ್ರಸಿದ್ಧನಾದ ಋಷಿಯು ತಪಸ್ಸು ಮಾಡುತ್ತಿದ್ದನು. ಅವನು ಪರಮನೈಷ್ಠಿಕನು.

ತಪಸ್ಯಂತಂ ದ್ವಿಜಶ್ರೇಷ್ಠಂ ಗೌತಮೀತೀರಮಾಶ್ರಿತಂ ।
ಸರ್ವೇ ಭೂತಗಣಾ ನಿತ್ಯಂ ಪ್ರಣಮಂತಿ ಸ್ತುವಂತಿ ತಂ ॥ ೫ ॥

ಅಗ್ನಿಶುಶ್ರೂಷಣಪರಂ ವೇದಾಧ್ಯಯನತತ್ಪರಂ ।
ಋಷಿಗಂಧರ್ವಸುಮನಃಸೇವಿತೇ ತತ್ರ ಪರ್ವತೇ ॥ ೬ ॥

ತಸ್ಮಿನ್ಗಿರೌ ಮಹಾಪುಣ್ಯೇ ದೇವದ್ವಿಜಭಯಂಕರಃ ।
ಯಜ್ಞದ್ವೇಷೀ ಬ್ರಹ್ಮಹಂತಾ ಪರಶುರ್ನಾಮ ರಾಕ್ಷಸಃ ॥ ೭ ॥

ಕಾಮರೂಪೀ ವಿಚರತಿ ನಾನಾರೂಪಧರೋ ವನೇ ।
ಕ್ಷಣಂ ಚ ಬ್ರಹ್ಮರೂಪೇಣ ಕದಾಚಿದ್ವ್ಯಾಘ್ರರೂಪಧೃಕ್ ॥ ೮ ॥

ಕದಾಚಿದ್ದೇವರೂಪೇಣ ಕದಾಚಿತ್ಪಶುರೂಪಧೃಕ್ ।
ಕದಾಚಿತ್ಪ್ರಮದಾರೂಪಃ ಕದಾಚಿನ್ಮೃಗರೂಪತಃ ॥ ೯ ॥

---

೫. ಗೌತಮೀತೀರದಲ್ಲಿ ಕುಳಿತು ತಪಸ್ಸುಮಾಡುತ್ತಿರುವ ಋಷಿಶ್ರೇಷ್ಠ ನಾದ ಆ ಶಾಕಲ್ಯನನ್ನು ಭೂತಗಣಗಳೆಲ್ಲರೂ ನಿತ್ಯವೂ ನಮಸ್ಕರಿಸಿ ಸ್ತೋತ್ರ ಮಾಡುತ್ತಿದ್ದರು.

೬-೭. ಆ ಶಾಕಲ್ಯನು ಅಗ್ನಿಯನ್ನು ಸೇವಿಸುವುದರಲ್ಲಿಯೇ ತತ್ಪರನೂ ವೇದಾಧ್ಯಯನಸಂಪನ್ನನೂ ಆಗಿದ್ದನು. ಆ ಶುಭ್ರಪರ್ವತದಲ್ಲಿ ಯಾವಾಗಲೂ ಋಷಿಗಳು, ಗಂಧರ್ವರು, ದೇವತೆಗಳು ಎಲ್ಲರೂ ಆ ಋಷಿಯ ಸೇವೆಯನ್ನು ಮಾಡುತ್ತಿದ್ದರು. ಅಂತಹ ಪುಣ್ಯಪ್ರದೇಶದಲ್ಲಿ ದೇವತೆಗಳಿಗೂ, ದ್ವಿಜರಿಗೂ ಭಯಂಕರ ಸ್ವರೂಪನಾದ ಪರಶು ಎಂಬ ರಾಕ್ಷಸನಿದ್ದನು. ಅವನು ಯಜ್ಞವನ್ನು ದ್ವೇಷಿಸುತ್ತಾ ಬ್ರಾಹ್ಮಣರನ್ನು ಕೊಲ್ಲುತ್ತಾ ಇದ್ದನು.

೮-೧೦. ಆ ಪರಶುವು ತನಗಿಷ್ಟವಾದ ರೂಪವನ್ನು ಧರಿಸಿಕೊಂಡು ವಿದ್ವಾಂಸನೂ, ಬ್ರಾಹ್ಮಣನೂ ಆದ ಶಾಕಲ್ಯನಿರುವ ಪ್ರದೇಶದಲ್ಲಿ ಸಂಚರಿಸುತ್ತಿದ್ದನು. ಕೆಲವುವೇಳೆ ಬ್ರಹ್ಮರೂಪವನ್ನು ಧರಿಸಿಯೂ ಕೆಲವು ಸಮಯ ವ್ಯಾಘ್ರರೂಪವನ್ನು ಧರಿಸಿಯೂ ಸಂಚರಿಸುತ್ತಿದ್ದನು. ಕೆಲವು ಸಮಯದಲ್ಲಿ ದೇವತೆಯ ರೂಪವನ್ನು ಧರಿಸುವನು. ಕೆಲವುವೇಳೆ ಪಶುವಿನ ರೂಪವನ್ನೂ

ಕದಾಚಿದ್ಬಾಲರೂಪೇಣ ಏವಂ ಚರತಿ ಪಾಪಕೃತ್ ।
ಯತ್ರಾಸ್ತೇ ಬ್ರಾಹ್ಮಣೋ ವಿದ್ವಾಞ್ಛಾಕಲ್ಯೋ ಮುನಿಸತ್ತಮಃ ॥ ೧೦ ॥
ತಮಾಯಾತಿ ಮಹಾಪಾಪೀ ಪರಶೂ ರಾಕ್ಷಸಾಧಮಃ ।
ಶುಚಿಷ್ಮಂತಂ ದ್ವಿಜಶ್ರೇಷ್ಠಂ ಪರುಶುರ್ನಿತ್ಯಮೇವ ಚ ॥ ೧೧ ॥
ನೇತುಂ ಹಂತುಂ ಪ್ರವೃತ್ತೋಽಪಿ ನ ಶಶಾಕ ಸ ಪಾಪಕೃತ್ ।
ಸ ಕದಾಚಿದ್ದ್ವಿಜಶ್ರೇಷ್ಠೋ ದೇವಾನಭ್ಯರ್ಚ್ಯ ಯತ್ನತಃ ॥ ೧೨ ॥
ಭೋಕ್ತುಕಾಮಃ ಕಿಲಾಯಾತಸ್ತತ್ರಾಯಾತ್ಪರಶುರ್ಮುನೇ ।
ಬ್ರಹ್ಮರೂಪಧರೋ ಭೂತ್ವಾ ಶಿಥಿಲಃ ಪಲಿತೋಽಬಲೀ ।
ಕನ್ಯಾಮಾದಾಯ ಕಾಂಚಿಚ್ಚ ಶಾಕಲ್ಯಂ ವಾಕ್ಯಮಬ್ರವೀತ್ ॥ ೧೩ ॥

॥ ಪರಶುರುವಾಚ ॥

ಭೋಜನಸ್ಯಾರ್ಥಿನಂ ವಿದ್ಧಿ ಮಾಂ ಚ ಕನ್ಯಾಮಿಮಾಂ ದ್ವಿಜ ।
ಆಥಿತ್ಯಕಾಲೇ ಸಂಪ್ರಾಪ್ತಂ ಕೃತಕೃತ್ಯೋಽಸಿ ಮಾನದ ॥ ೧೪ ॥

ಕೆಲವುವೇಳೆ ಹೆಂಗಸಿನ ರೂಪವನ್ನೂ ಧರಿಸಿ ಸಂಚರಿಸುತ್ತಿದ್ದನು. ಪಾಪಿಯಾದ ಅವನು ಕೆಲವು ಸಮಯದಲ್ಲಿ ಮೃಗದಂತೆ ರೂಪವನ್ನೂ ಕೆಲವು ಸಮಯ ಬಾಲಕರ ರೂಪವನ್ನೂ ಧರಿಸಿ ಸಂಚರಿಸುತ್ತಿದ್ದನು.

೧೧. ಆ ಮಹಾಮಾಯಿಯಾದ ರಾಕ್ಷಸಾಧಮನು ಪ್ರತಿದಿನವೂ ದ್ವಿಜಶ್ರೇಷ್ಠನಾದ ಶಾಕಲ್ಯಮುನಿಯ ಹತ್ತಿರಕ್ಕೆ ಬಂದು ಅವನನ್ನು ಕೊಲ್ಲಲು ಪ್ರಯತ್ನಪಡುತ್ತಿದ್ದನು. ಆದರೆ ಆ ಪಾಪಿಗೆ ಅದು ಸಾಧ್ಯವಾಗುತ್ತಿರಲಿಲ್ಲ.

೧೨-೧೩. ಒಂದು ಸಾರಿ ಆ ಶಾಕಲ್ಯಮುನಿಯು ದೇವರಪೂಜೆಯನ್ನು ಮುಗಿಸಿಕೊಂಡು ಊಟಮಾಡಲು ಬರುತ್ತಿದ್ದನು. ಆ ಸಮಯದಲ್ಲಿ ಪರಶುವು ಹಣ್ಣುಹಣ್ಣು ಮುದುಕನಾದ ಬ್ರಾಹ್ಮಣನ ವೇಷವನ್ನು ಧರಿಸಿ ಒಂದು ಹುಡುಗಿಯನ್ನು ಜತೆಯಲ್ಲಿ ಕರೆದುಕೊಂಡು ಬಂದು ಆ ಶಾಕಲ್ಯನನ್ನು ಕುರಿತು ಇತೆಂದನು.

೧೪-೧೬. ಎಲೈ ಬ್ರಾಹ್ಮಣನೇ, ನಾನೂ ಈ ಕನ್ಯೆಯೂ ಸಹ ಭೋಜನಾರ್ಥಿಗಳಾಗಿ ಬಂಧಿರುವೆವು. ಆತಿಥ್ಯಕಾಲದಲ್ಲಿ ಅತಿಥಿಗಳು ಬಂದರೆ ಕೃತಾರ್ಥನಾಗುವನು. ಯಾರ ಮನೆಗೆ ಅತಿಥಿಗಳು ಬಂದು ತಮ್ಮ ಅಭಿಲಾಷೆಯನ್ನು

ತ ಏವ ಧನ್ಯಾ ಲೋಕೇऽಸ್ಮಿನ್ಯೇಷಾಮತಿಥಯೋ ಗೃಹಾತ್ ।
ಪೂರ್ಣಾಭಿಲಾಷಾ ನಿರ್ಯಾಂತಿ ಜೀವಂತೋऽಪಿ ಮೃತಾಃ ಪರೇ ॥ ೧೫ ॥

ಭೋಜನೇ ತೂಪವಿಷ್ಟೇ ತು ಆತ್ಮಾರ್ಥಂ ಕಲ್ಪಿತಂ ತು ಯತ್ ।
ಅತಿಥಿಭ್ಯಸ್ತು ಯೋ ದದ್ಯಾದ್ದತ್ತಾ ತೇನ ವಸುಂಧರಾ ॥ ೧೬ ॥

॥ ಬ್ರಹ್ಮೋವಾಚ ॥

ಏತುಚ್ಛ್ರುತ್ವಾ ತು ಶಾಕಲ್ಯೋ ದದಾಮೀತ್ಯೇವಮುಬ್ರವೀತ್ ।
ಆಸನೇ ಚೋಪವೇಶ್ಯಾಥಾಜ್ಞಾನಾತ್ತಂ ಪರಶುಂ ದ್ವಿಜಂ ॥ ೧೭ ॥

ಯಥಾನ್ಯಾಯಂ ಪೂಜಯಿತ್ವಾ ಶಾಕಲ್ಯೋ ಭೋಜನಂ ದದೌ ।
ಆಪೋಶನಂ ಕರೇ ಕೃತ್ವಾ ಪರಶುರ್ವಾಕ್ಯಮುಬ್ರವೀತ್ ॥ ೧೮ ॥

॥ ಪರಶುರುವಾಚ ॥

ದೂರಾದಭ್ಯಾಗತಂ ಶ್ರಾಂತಮನುಗಚ್ಛಂತಿ ದೇವತಾಃ ।
ತಸ್ಮಿಂಸ್ತೃಪ್ತೇ ತು ತೃಪ್ತಾಃ ಸ್ಯುರತೃಪ್ತೇ ತು ವಿಪರ್ಯಯಃ ॥ ೧೯ ॥

ಮುಗಿಸಿಕೊಂಡು ಹೋಗುವರೋ ಆ ಮನೆಯವರೇ ಧನ್ಯರು. ಯಾರ ಮನೆಗೆ ಅತಿಥಿಗಳು ಬಂದು ನಿರಾಶರಾಗಿ ಹೋಗುವರೋ ಅವರು ಜೀವಿಸಿದ್ದರೂ ಸತ್ತಂತಯೇ. ಊಟಕ್ಕೆ ಕುಳಿತ ಸಮಯದಲ್ಲಿ ತನಗೆ ಬಡಿಸಿದ್ದುದನ್ನು ಯಾರು ಅತಿಥಿಗಳಿಗೆ ಬಡಿಸಿ ಉಪಚರಿಸುವರೋ ಅವರು ಭೂಮಿಯನ್ನೇ ದಾನಕೊಟ್ಟಂತೆ ಆಗುವುದು ಎಂದನು.

೧೭-೧೮. ಈರೀತಿ ಹೇಳಿದುದನ್ನು ಕೇಳಿ ಶಾಕಲ್ಯನು ಭೋಜನವನ್ನು ನೀಡುವೆನು ಎಂದು ಹೇಳಿದನು. ಅನಂತರ ಆ ಪರಶುವನ್ನು ಬ್ರಾಹ್ಮಣನೆಂದೇ ತಿಳಿದು ಪೀಠದಲ್ಲಿ ಕುಳ್ಳಿರಿಸಿ ಯಥಾವಿಧಿಯಾಗಿ ಪೂಜಿಸಿ ಅವನಿಗೆ ಭೋಜನವನ್ನು ಮಾಡಿಸಿದನು. ಅನಂತರ ಆಪೋಶನವನ್ನು ಕೈಯಲ್ಲಿ ಹಿಡಿದು ಪರಶುವು—

೧೯. ದೂರದಿಂದ ದಣಿದು ಬಂದಿರುವವರನ್ನು ದೇವತೆಗಳೂ ಅನುಸರಿಸುವರು. ಅವನು ತೃಪ್ತನಾದರೆ ದೇವತೆಗಳೂ ತೃಪ್ತಿಯನ್ನು ಹೊಂದುವರು. ಅವನು ಅತೃಪ್ತನಾದರೆ ದೇವತೆಗಳೂ ಅತೃಪ್ತರಾಗುವರು.

ಅತಿಥಿಶ್ಚಾಪವಾದೀ ಚ ದ್ವಾವೇತೌ ವಿಶ್ವಬಾಂಧವೌ ।
ಅಪವಾದೀ ಹರೇತ್ಪಾಪಮತಿಥಿಃ ಸ್ವರ್ಗಸಂಕ್ರಮಃ ॥ ೨೦ ॥

ಅಭ್ಯಾಗತಂ ಪಥಿ ಶ್ರಾಂತಂ ಸಾವಜ್ಞಂ ಯೋಽಭಿವೀಕ್ಷತೇ ।
ತತ್ಕ್ಷಣಾದೇವ ನಶ್ಯಂತಿ ತಸ್ಯ ಧರ್ಮಯಶಃಶ್ರಿಯಃ ॥ ೨೧ ॥

ತಸ್ಮಾದಭ್ಯಾಗತಃ ಶ್ರಾಂತೋ ಯಾಚೇಽಹಂ ತ್ವಾಂ ದ್ವಿಜೋತ್ತಮ ।
ದಾಸ್ಯಸೇ ಯದಿ ಮೇ ಕಾಮಂ ತದ್ಭೋಕ್ಷ್ಯೇಽಹಂ ನ ಚಾನ್ಯಥಾ ॥ ೨೨ ॥

॥ ಬ್ರಹ್ಮೋವಾಚ ॥

ದತ್ತಮಿತ್ಯೇವ ಶಾಕಲ್ಯೋ ಭುಂಕ್ಷ್ವೇತ್ಯೇವಾಹ ರಾಕ್ಷಸಂ ।
ತತಃ ಪ್ರೋವಾಚ ಪರಶುರಹಂ ರಾಕ್ಷಸಸತ್ತಮಃ ॥ ೨೩ ॥

ನಾಹಂ ದ್ವಿಜಸ್ತವ ರಿಪುರ್ನ ವೃದ್ಧಃ ಪಲಿತಃ ಕೃಶಃ ।
ಬಹೂನಿ ಮೇ ವ್ಯತೀತಾನಿ ವರ್ಷಾಣಿ ತ್ವಾಂ ಪ್ರಪಶ್ಯತಃ ॥ ೨೪ ॥

---

೨೦. ಅತಿಥಿ ಮತ್ತು ಅಪವಾದಿ ಇವರಿಬ್ಬರೂ ವಿಶ್ವಬಾಂಧವರು. ಅಪವಾದಿಯ ಸೇವೆಯಿಂದ ಪಾಪವು ನಾಶವಾಗುವುದು. ಅತಿಥಿಯಸೇವೆಯಿಂದ ಸ್ವರ್ಗವುಂಟಾಗುವುದು.

೨೧. ದಾರಿಯನ್ನು ನಡೆದು ದಣಿದು ಬಂದಿರುವವರನ್ನು ನೋಡಿ ಯಾರು ತಿರಸ್ಕಾರದೃಷ್ಟಿಯಿಂದ ನೋಡುವರೋ ಅವರ ಧರ್ಮ, ಕೀರ್ತಿ, ಧನ ಇವೆಲ್ಲವೂ ತಕ್ಷಣ ನಾಶವಾಗುವುವು.

೨೨. ಎಲೈ ಬ್ರಾಹ್ಮಣಶ್ರೇಷ್ಠನೇ, ಆದುದರಿಂದ ದಣಿದು ಬಂದಿರುವ ನಾನು ನಿನ್ನನ್ನು ಕೇಳಿಕೊಳ್ಳುವುದೇನೆಂದರೆ, ನನ್ನ ಇಷ್ಟವನ್ನು ನೆರವೇರಿಸು. ಎಂದರೆ ನಾನು ಊಟಮಾಡುವೆನು. ಹಾಗಿಲ್ಲದ ಪಕ್ಷದಲ್ಲಿ ನಾನು ಊಟ ಮಾಡುವುದಿಲ್ಲ ಎಂದನು.

೨೩–೨೪. ಆದಕ್ಕೆ ಶಾಕಲ್ಯನು ನೀನು ಊಟಮಾಡು. ನೀನು ಕೇಳಿದುದನ್ನು ಕೊಡುವೆನೆಂಬುದಾಗಿ ಆ ರಾಕ್ಷಸನಿಗೆ ಮಾತುಕೊಟ್ಟನು. ಬಳಿಕ ಪರಶುವು ಶಾಕಲ್ಯನನ್ನು ಕುರಿತು ಎಲೈ ಬ್ರಾಹ್ಮಣನೇ, ನಾನು ರಾಕ್ಷಸನು.

ಶುಷ್ಯಂತಿ ಮಮ ಗಾತ್ರಾಣಿ ಗ್ರೀಷ್ಮೇ ಸ್ವಲ್ಪೋದಕಂ ಯಥಾ ।
ತಸ್ಮಾನ್ನೇಷ್ಯೇ ಸಾನುಗಂ ತ್ವಾ ಭಕ್ಷಯಿಷ್ಯೇ ದ್ವಿಜೋತ್ತಮ ॥ ೨೫ ॥

॥ ಬ್ರಹ್ಮೋವಾಚ ॥

ಶ್ರುತ್ವಾ ಪರಶುವಾಕ್ಯಂ ತಚ್ಛಾಕಲ್ಯೋ ವಾಕ್ಯಮಬ್ರವೀತ್ । ॥ ೨೬ ॥

॥ ಶಾಕಲ್ಯ ಉವಾಚ ॥

ಯೇ ಮಹಾಕುಲಸಂಭೂತಾ ವಿಜ್ಞಾತಸಕಲಾಗಮಾಃ ।
ತತ್ಪ್ರತಿಶ್ರುತಮುಭ್ಯೇತಿ-ನ ಜಾತ್ವತ್ರ ವಿಪರ್ಯಯಂ ॥ ೨೭ ॥

ಯಥೋಚಿತಂ ಕುರು ಸಖೇ ತಥಾಪಿ ಶೃಣು ಮೇ ವಚಃ ।
ನಿಹಂತುಮಪ್ಯುದ್ಯತೇಷು ವಕ್ತವ್ಯಂ ಹಿತಮುತ್ತಮೈಃ ॥ ೨೮ ॥

ನಾನು ಬ್ರಾಹ್ಮಣನಲ್ಲ, ಮುದುಕನಲ್ಲ, ಕೃಶನೂ ಅಲ್ಲ, ಆದರೆ ನಿನ್ನ ಶತೃವು. ನಿನ್ನನ್ನು ನೋಡುತ್ತಾ ಅನೇಕ ವರ್ಷಗಳು ಕಳೆದು ಹೋದುವು. ಗ್ರೀಷ್ಮಕಾಲದಲ್ಲಿ ಸ್ವಲ್ಪ ನೀರುಳ್ಳ ಸರಸ್ಸು ಒಣಗುವಂತೆ ನಿನ್ನನ್ನು ನೋಡಿ ನನ್ನ ಶರೀರವೆಲ್ಲವೂ ಒಣಗಿಹೋಗುತ್ತಿದೆ. ಆದುದರಿಂದ ನಾನೀಗ ನಿನ್ನನ್ನು ತಿನ್ನುವೆನು ಎಂದನು.

೨೬-೨೭. ಪರಶುವಾಡಿದ ವಾಕ್ಯವನ್ನು ಕೇಳಿ ಶಾಕಲ್ಯನು ಅವನನ್ನು ಕುರಿತು, ಮಹಾಕುಲಸಂಭೂತರೂ ಸಕಲವೇದಗಳನ್ನು ತಿಳಿದವರೂ ಆದವರು ತಾವು ನುಡಿದದ್ದನ್ನು ಬದಲಾಯಿಸುವುದಿಲ್ಲ. ಈ ವಿಷಯದಲ್ಲಿ ಸಂಶಯವಿಲ್ಲ. ಎಲೈ ಸ್ನೇಹಿತನೇ, ನಿನಗಿಷ್ಟಬಂದಂತೆ ಮಾಡು. ಆದರೆ ನನ್ನ ಮಾತನ್ನು ಕೇಳು.

೨೮. ಕೊಲ್ಲಲು ಬಂದವನಿಗೆ ಹಿತವನ್ನು ಹೇಳವುದು ಉತ್ತಮರ ಸ್ವಭಾವವು. ಆದುದರಿಂದ ನಾನು ನಿನಗೆ ಹಿತವನ್ನು ಹೇಳುವೆನು. ನಾನು ಬ್ರಾಹ್ಮಣನು. ನನ್ನ ಶರೀರವು ವಜ್ರದಂತಿರುವುದು. ನನ್ನನ್ನು ವಿಷ್ಣುವು ಯಾವಾಗಲೂ ಕಾಪಾಡುವನು.

ಬ್ರಾಹ್ಮಣೋಽಹಂ ವಜ್ರತನುಃ ಸರ್ವತೋ ರಕ್ಷಕೋ ಹರಿಃ ।
ಪಾದೌ ರಕ್ಷತು ಮೇ ವಿಷ್ಣುಃ ಶಿರೋ ದೇವೋ ಜನಾರ್ದನಃ ॥ ೨೯ ॥

ಬಾಹೂ ರಕ್ಷತು ವಾರಾಹಃ ಪೃಷ್ಠಂ ರಕ್ಷತು ಕೂರ್ಮರಾಟ್ ।
ಹೃದಯಂ ರಕ್ಷತಾತ್ಕೃಷ್ಣೋ ಹ್ಯಂಗುಲೀ ರಕ್ಷತಾನ್ಮೃಗಃ ॥ ೩೦ ॥

ಮುಖಂ ರಕ್ಷತು ವಾಗೀಶೋ ನೇತ್ರೇ ರಕ್ಷತು ಪಕ್ಷಿಗಃ ।
ಶ್ರೋತ್ರಂ ರಕ್ಷತು ವಿತ್ತೇಶಃ ಸರ್ವತೋ ರಕ್ಷತಾದ್ಭವಃ ।
ನಾನಾಪತ್ಸ್ವೇಕಶರಣಂ ದೇವೋ ನಾರಾಯಣಃ ಸ್ವಯಂ ॥ ೩೧ ॥

॥ ಬ್ರಹ್ಮೋವಾಚ ॥

ಏವಮುಕ್ತ್ವಾ ತು ಶಾಕಲ್ಯೋ ನಯ ವಾ ಭಕ್ಷ ವಾ ಸುಖಂ ।
ಮಾಂ ರಾಕ್ಷಸೇಂದ್ರ ಪರಶೋ ತ್ವಮಿದಾನೀಮತಂದ್ರಿತಃ ॥ ೩೨ ॥

೨೯-೩೧. ನನ್ನ ಪಾದಗಳನ್ನು ವಿಷ್ಣುವು ಕಾಪಾಡಲಿ. ಜನಾರ್ದನನು ನನ್ನ ತಲೆಯನ್ನು ರಕ್ಷಿಸಲಿ. ನನ್ನ ಬಾಹುಗಳನ್ನು ವರಾಹನು ಕಾಪಾಡಲಿ. ಕೂರ್ಮರಾಜನು ನನ್ನ ಬೆನ್ನನ್ನು ರಕ್ಷಿಸಲಿ. ಕೃಷ್ಣನು ನನ್ನ ಹೃದಯವನ್ನು ರಕ್ಷಿಸಲಿ. ನನ್ನ ಬೆರಳುಗಳನ್ನು ಮೃಗನು ರಕ್ಷಿಸಲಿ. ವಾಗೀಶನು ನನ್ನ ಮುಖವನ್ನು ಕಾಪಾಡಲಿ. ಪಕ್ಷಿಗನು ನನ್ನ ಕಣ್ಣುಗಳನ್ನು ರಕ್ಷಿಸಲಿ. ಕುಬೇರನು ನನ್ನ ಕಿವಿಯನ್ನು ರಕ್ಷಿಸಲಿ. ಎಲ್ಲಾ ಕಡೆಗಳನ್ನೂ ಈಶ್ವರನು ಕಾಪಾಡಲಿ. ನಾನಾ ವಿಧವಾದ ಆಪತ್ತುಗಳಲ್ಲಿಯೂ ದೇವನಾದ ನಾರಾಯಣನೊಬ್ಬನೇ ಶರಣನು.

೩೨. ಈರೀತಿಯಾಗಿ ಹೇಳಿ ಶಾಕಲ್ಯನು ಎಲೈ ರಾಕ್ಷಸೇಂದ್ರನಾದ ಪರಶುವೇ, ನನ್ನನ್ನು ತೆಗೆದುಕೊಂಡಾದರೂ ಹೋಗು, ಅಥವಾ ಸುಖವಾಗಿ ಭಕ್ಷಿಸು. ಯಾವುದನ್ನು ಮಾಡುವುದಕ್ಕೂ ಈಗ ನೀನು ಸ್ವತಂತ್ರನಾಗಿರುವೆ, ಎಂದನು.

ರಾಕ್ಷಸಸ್ತತ್ಯ ವಚನಾದ್ಭಕ್ಷಣಾಯ ಸಮುದ್ಯತಃ ।
ನಾಸ್ತ್ಯೇವ ಹೃದಯೇ ನೂನಂ ಪಾಪಿನಾಂ ಕರುಣಾಕರಃ ॥ ೩೩ ॥

ದಂಷ್ಟ್ರಾಕರಾಲವದನೋ ಗತ್ವಾ ತಸ್ಯಾಂತಿಕಂ ತದಾ ।
ಬ್ರಾಹ್ಮಣಂ ತಂ ನಿರೀಕ್ಷ್ಯೈವಂ ಪರಶುರ್ವಾಕ್ಯಮಬ್ರವೀತ್ ॥ ೩೪ ॥

॥ ಪರಶುರುವಾಚ ॥

ಶಂಖಚಕ್ರಗದಾಪಾಣಿಂ ತ್ವಾಂ ಪಶ್ಯೇಽಹಂ ದ್ವಿಜೋತ್ತಮ ।
ಸಹಸ್ರಪಾದಶಿರಸಂ ಸಹಸ್ರಾಕ್ಷಕರಂ ವಿಭುಂ ॥ ೩೫ ॥

ಸರ್ವಭೂತೈಕನಿಲಯಂ ಛಂದೋರೂಪಂ ಜಗನ್ಮಯಂ ।
ತ್ವಾಮದ್ಯ ವಿಪ್ರ ಪಶ್ಯಾಮಿ ನಾಸ್ತಿ ತೇ ಪೂರ್ವಕಂ ವಪುಃ ॥ ೩೬ ॥

ತಸ್ಮಾತ್ಪ್ರಸಾದಯೇ ವಿಪ್ರ ತ್ವಮೇವ ಶರಣಂ ಭವ ।
ಜ್ಞಾನಂ ದೇಹಿ ಮಹಾಬುದ್ಧೇ ತೀರ್ಥಂ ಬ್ರಹ್ಮಘನಿಷ್ಕೃತಿಂ ॥ ೩೭ ॥

೩೩-೩೪. ಶಾಕಲ್ಯನ ಮಾತನ್ನು ಕೇಳಿ ರಾಕ್ಷಸನು ಅವನನ್ನು ಭಕ್ಷಿಸಲು ಉದ್ಯುಕ್ತನಾದನು. ಪಾಪಿಗಳಿಗೆ ಹೃದಯದಲ್ಲಿ ಸ್ವಲ್ಪವಾದರೂ ಕರುಣವಿರವುದಿಲ್ಲ. ಇದು ನಿಶ್ಚಯವು. ಕೋರೆದಾಡೆಗಳಿಂದ ಭಯಂಕರವಾದ ಮುಖವುಳ್ಳ ಆ ರಾಕ್ಷಸನು ಶಾಕಲ್ಯನ ಹತ್ತಿರಕ್ಕೆ ಹೋಗಿ,

೩೫-೩೬. ಎಲೈ ಬ್ರಾಹ್ಮಣನೇ, ನೀನು ನನ್ನ ಕಣ್ಣಿಗೆ ಶಂಖಚಕ್ರಗದಾಪಾಣಿಯಾಗಿ ಕಾಣುತ್ತಿರುವೆ. ಸಹಸ್ರಪಾದವೂ, ಸಹಸ್ರಶಿರಸ್ಸೂ, ಸಹಸ್ರಕಣ್ಣುಗಳೂ, ಸಹಸ್ರ ಕರಗಳೂ ಇರುವ ವಿಷ್ಣುವಿನಂತೆ ಕಾಣುತ್ತಿರುವೆ. ಸರ್ವಪ್ರಾಣಿಗಳಿಗೂ ಆವಾಸಸ್ಥಾನನಾಗಿರುವೆ. ಛಂದೋಮಯನೂ ಜಗನ್ಮಯನೂ ಆಗಿ ಕಾಣಿಸುತ್ತಿರುವೆ. ಎಲೈ ಬ್ರಾಹ್ಮಣನೇ, ಆದಿಪುರುಷನಾಗಿ ನೀನು ಕಾಣಿಸುತ್ತಿರುವೆ. ನಿನ್ನ ಶರೀರದಂತಹ ಶರೀರವು ಮೊದಲೆಲ್ಲಿಯೂ ಕಾಣೆನು.

೩೭-೩೮. ಎಲೈ ಬ್ರಾಹ್ಮಣನೇ, ನೀನೇ ನನಗೆ ಶರಣನು. ನನಗೆ ಜ್ಞಾನವನ್ನು ಕೊಡು. ಪಾಪವನ್ನು ನಾಶಮಾಡತಕ್ಕ ಯಾವುದಾದರೂ ತೀರ್ಥ

ಮಹತಾಂ ದರ್ಶನಂ ಬ್ರಹ್ಮನ್ ಜಾಯತೇ ನ ಹಿ ನಿಷ್ಫಲಂ ।
ದ್ವೇಷಾದಜ್ಞಾನತೋ ವಾಪಿ ಪ್ರಸಂಗಾದ್ವಾ ಪ್ರಮಾದತಃ ॥ ೩೮ ॥
ಅಯಸಃ ಸ್ಪರ್ಶಸಂಸ್ಪರ್ಶೋ ರುಕ್ಮತ್ವಾಯೈವ ಜಾಯತೇ ॥ ೩೯ ॥

॥ ಬ್ರಹ್ಮೋವಾಚ ॥

ಏತದ್ವಾಕ್ಯಂ ಸಮಾಕರ್ಣ್ಯ ರಾಕ್ಷಸೇನ ಸಮೀರಿತಂ ।
ಶಾಕಲ್ಯಃ ಕೃಪಯಾ ಪ್ರಾಹ ವರದಾ ಸಾ ಸರಸ್ವತೀ ॥ ೪೦ ॥
ತವಾಚಿರಾದ್ದೈತ್ಯಪತೇ ತತಃ ಸ್ತುಹಿ ಜನಾರ್ದನಂ ।
ಮನೋರಥಫಲಪ್ರಾಪ್ತೌ ನಾನ್ಯನ್ನಾರಾಯಣಸ್ತುತೇಃ ॥ ೪೧ ॥
ಕಿಂಚಿದಪ್ಯಸ್ತಿ ಲೋಕೇಽಸ್ಮಿನ್ಕಾರಣಂ ಶೃಣು ರಾಕ್ಷಸ ।
ಪ್ರಸನ್ನಾ ತವ ಸಾ ದೇವೀ ಮದ್ವಾಕ್ಯಾಚ್ಚ ಭವಿಷ್ಯತಿ ॥ ೪೨ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಸ ಪರಶುರ್ಗಂಗಾಂ ತ್ರೈಲೋಕ್ಯಪಾವನೀಂ ।
ಸ್ನಾತ್ವಾ ಶುಚಿರ್ಯತಮನಾ ಗಂಗಾಮಭಿಮುಖಃ ಸ್ಥಿತಃ ॥ ೪೩ ॥

ವನ್ನು ಹೇಳು. ಎಲೈ ಮಹಾಜ್ಞಾನಿಯೇ, ದ್ವೇಷದಿಂದಲಾಗಲಿ, ಅಜ್ಞಾನದಿಂದಲಾಗಲಿ, ಪ್ರಮಾದವಶದಿಂದಲಾಗಲಿ, ಮಾಡಿದ ಮಹಾತ್ಮರ ದರ್ಶನವು ಎಂದಿಗೂ ನಿಷ್ಫಲವಾಗಲಾರದು ಎಂದನು.

೪೦. ರಾಕ್ಷಸನಾಡಿದ ಮಾತನ್ನು ಕೇಳಿ ಶಾಕಲ್ಯನು ಕೃಪೆಯಿಂದ ಪರಶುವನ್ನು ಕುರಿತು ಆ ಗಂಗಾನದಿಯೇ ವರವನ್ನು ಕೊಡುವವಳು ಎಂದು ಹೇಳಿದನು.

೪೧-೪೨. ಎಲೈ ರಾಕ್ಷಸವರನೇ, ನೀನೀಕೂಡಲೇ ನಾರಾಯಣನನ್ನು ಸ್ತೋತ್ರಮಾಡು. ನಮ್ಮ ಮನಸ್ಸಿನ ಇಷ್ಟವು ನೆರವೇರಬೇಕಾದರೆ ನಾರಾಯಣನ ಸ್ತುತಿಯನ್ನು ಬಿಟ್ಟರೆ ಬೇರೆ ಯಾವುದೂ ಇಲ್ಲ. ಇದಕ್ಕೆ ಕಾರಣವಿಲ್ಲದೇ ಇಲ್ಲ. ಗಂಗೆಯು ನನ್ನ ಮಾತಿನಂತೆ ನಿನಗೆ ಪ್ರಸನ್ನಳಾಗುವಳು ಎಂದನು.

೪೩. ಹಾಗೆಯೇ ಆಗಲೆಂದು ಹೇಳಿ ಆ ಪರಶುವು ತ್ರಿಲೋಕಪಾವನಿಯಾದ ಗಂಗೆಯನ್ನು ಸ್ತೋತ್ರಮಾಡುತ್ತಾ ಶುಚಿರ್ಭೂತನಾಗಿ ಆ ಗಂಗೆಯ ಎದುರಾಗಿ ನಿಂತನು.

ತತ್ರಾಪಶ್ಯದ್ದಿವ್ಯರೂಪಾಂ ದಿವ್ಯಗಂಧಾನುಲೇಪನಾಂ ।
ಸರಸ್ವತೀಂ ಜಗದ್ಧಾತ್ರೀಂ ಶಾಕಲ್ಯವಚನೇ ಸ್ಥಿತಾಂ ॥ ೪೪ ॥

ಜಗಜ್ಜಾಡ್ಯಹರಾಂ ವಿಶ್ವಜನನೀಂ ಭುವನೇಶ್ವರೀಂ ।
ತಾಮುವಾಚ ವಿನೀತಾತ್ಮಾ ಪರಶುರ್ಗತಕಲ್ಮಷಃ ॥ ೪೫ ॥

॥ ಪರಶುರುವಾಚ ॥

ಗುರುಃ ಶಾಕಲ್ಯ ಇತ್ಯಾಹ ಮಾಕಾಂತಂ ಸ್ತುಹಿ ವಿಧ್ವಜಂ ।
ತವ ಪ್ರಸಾದಾತ್ಸಾ ಶಕ್ತಿರ್ಯಥಾ ಮೇ ಸ್ಯಾತ್ತಥಾ ಕುರು ॥ ೪೬ ॥

॥ ಬ್ರಹ್ಮೋವಾಚ ॥

ತಥಾಸ್ತ್ವಿತಿ ಚ ಸಾ ಪ್ರಾಹ ಪರಶುಂ ಶ್ರೀಸರಸ್ವತೀ ।
ಸರಸ್ವತ್ಯಾಃ ಪ್ರಸಾದೇನ ಪರಶುಸ್ತಂ ಜನಾರ್ದನಂ ॥ ೪೭ ॥

ತುಷ್ಟಾವ ವಿವಿಧೈರ್ವಾಕ್ಯೈಸ್ತತಸ್ತುಷ್ಟೋಽಭವದ್ಧರಿಃ ।
ವರಂ ಪ್ರಾದಾದ್ರಾಕ್ಷಸಾಯ ಕೃಪಾಸಿಂಧುರ್ಜನಾರ್ದನಃ ॥ ೪೮ ॥

॥ ಜನಾರ್ದನ ಉವಾಚ ॥

ಯದ್ಯನ್ಮನೋಗತಂ ರಕ್ಷಸ್ತತ್ತತ್ಸರ್ವಂ ಭವಿಷ್ಯತಿ । ॥ ೪೯ ॥

೪೪-೪೫. ಅಲ್ಲಿ ದಿವ್ಯರೂಪಳಾದ ಸರಸ್ವತಿಯನ್ನು ನೋಡಿದನು. ಅವಳು ಜಗನ್ಮಾತೆಯು. ದಿವ್ಯವಾದ ಗಂಧವನ್ನು ಲೇಪಿಸಿಕೊಂಡು ಮನೋಹರಳಾಗಿದ್ದಳು. ಜಗತ್ತಿನ ರೋಗಗಳನ್ನು ಪರಿಹರಿಸುವವಳು. ಅವಳು ಪ್ರಪಂಚಕ್ಕೆ ಒಡೆಯಳು. ಶಾಕಲ್ಯನ ಮಾತಿನಂತೆ ಬಂದಿದ್ದಳು. ಪರಶುವು ಶುಚಿರ್ಭೂತನಾಗಿ ಆ ಸರಸ್ವತಿಯನ್ನು ಕುರಿತು,

೪೬. ಗುರುವಾದ ಶಾಕಲ್ಯನು ಲಕ್ಷ್ಮೀಕಾಂತನನ್ನು ಸ್ತೋತ್ರಮಾಡೆಂದು ನನಗೆ ಹೇಳಿದನು. ಶಕ್ತಿರೂಪಳಾದ ನಿನ್ನ ಅನುಗ್ರಹದಿಂದ ನನ್ನ ಮನಸ್ಸಿನ ಇಷ್ಟವೆಲ್ಲವೂ ನೆರವೇರುವಂತೆ ಮಾಡು ಎಂದು ಪ್ರಾರ್ಥಿಸಿದನು.

೪೭-೪೯. ಸರಸ್ವತಿಯು ಹಾಗೆಯೇ ಆಗಲೆಂದು ಹೇಳಿದಳು. ಸರಸ್ವತಿಯ ಅನುಗ್ರಹದಿಂದ ಆ ಪರಶುವು ಜನಾರ್ದನನ್ನು ವಿವಿಧವಾದ ವಾಕ್ಯಗಳಿಂದ ಸ್ತೋತ್ರಮಾಡಿದನು. ಅದರಿಂದ ಕೃಪಾನಿಧಿಯಾದ ಹರಿಯು ಸಂತುಷ್ಟನಾಗಿ ರಾಕ್ಷಸನಿಗೆ ಎಲೈ ರಾಕ್ಷಸನೇ, ನಿನ್ನ ಮನಸ್ಸಿನಲ್ಲಿರುವುದೆಲ್ಲವೂ ನೆರವೇರಲಿ ಎಂದು ವರವನ್ನು ಕೊಟ್ಟನು.

॥ ಬ್ರಹ್ಮೋವಾಚ ॥

ಶಾಕಲ್ಯಸ್ಯ ಪ್ರಸಾದೇನ ಗೌತಮ್ಯಾಶ್ಚ ಪ್ರಸಾದತಃ ।
ಸರಸ್ವತ್ಯಾಃ ಪ್ರಸಾದೇನ ನರಸಿಂಹಪ್ರಸಾದತಃ ॥ ೫೦ ॥

ಪಾಪಿಷ್ಠೋಽಪಿ ತದಾ ರಕ್ಷಃ ಪರಶುರ್ದಿವಮೇಯಿವಾನ್ ।
ಸರ್ವತೀರ್ಥಾಂಘ್ರಿಪದ್ಮಸ್ಯ ಪ್ರಸಾದಾಚ್ಚಾರ್ಙ್ಗಧನ್ವನಃ ॥ ೫೧ ॥

ತತಃ ಪ್ರಭೃತಿ ತತ್ತೀರ್ಥಂ ಸಾರಸ್ವತಮಿತಿ ಶ್ರುತಂ ।
ತತ್ರ ಸ್ನಾನೇನ ದಾನೇನ ವಿಷ್ಣುಲೋಕೇ ಮಹೀಯತೇ ॥ ೫೧ ॥

ವಾಗ್ವೈಷ್ಣವಶಾಕಲ್ಯಪರಶುಪ್ರಭವಾಣಿ ಹಿ ।
ಬಹೂನ್ಯಭೂವಂಸ್ತೀರ್ಥಾನಿ ತಸ್ಮಿನ್ವೈ ಶ್ವೇತಪರ್ವತೇ ॥ ೫೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಶ್ವೇತಪರ್ವತಸ್ಥಶಾಕಲ್ಯಾದಿತೀರ್ಥವರ್ಣನಂ ನಾಮ
ತ್ರಿಷಷ್ಟ್ಯಧಿಕಶತತಮೋಧ್ಯಾಯಃ

---

೫೦. ಶಾಕಲ್ಯನ ಪ್ರಸಾದದಿಂದಲೂ, ಗೌತಮಿಯ ಅನುಗ್ರಹದಿಂದಲೂ ಸರಸ್ವತಿಯ ಪ್ರಸಾದದಿಂದಲೂ, ನರಸಿಂಹನ ಪ್ರಸಾದದಿಂದಲೂ ಪಾಪಿಷ್ಠನಾದ ಪರಶುವು ಸ್ವರ್ಗಕ್ಕೆ ಹೋದನು.

೫೧. ಸರ್ವತೀರ್ಥಗಳೂ ಯಾವನ ಪಾದಗಳಲ್ಲಿ ಹುಟ್ಟುವುವೋ ಆ ವಿಷ್ಣುವಿನ ಅನುಗ್ರಹದಿಂದ ಆ ರಾಕ್ಷಸನು ಸ್ವರ್ಗವನ್ನು ಹೊಂದಿದನು. ಅಂದಿನಿಂದ ಆ ತೀರ್ಥಕ್ಕೆ ಸಾರಸ್ವತತೀರ್ಥವೆಂದು ಹೆಸರಾಯಿತು.

೫೨–೫೩. ಆ ಸಾರಸ್ವತತೀರ್ಥದಲ್ಲಿ ಸ್ನಾನದಾನಗಳನ್ನು ಮಾಡಿದವನಿಗೆ ವಿಷ್ಣುಲೋಕವು ಲಭಿಸುವುದು. ಸಾರಸ್ವತ, ವೈಷ್ಣವ ಶಾಕಲ್ಯ, ಪರಶು ಎಂಬ ಅನೇಕ ತೀರ್ಥಗಳು ಆ ಶುಭ್ರಪರ್ವತದಲ್ಲಿರುವುವು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಶ್ವೇತಪರ್ವತದಲ್ಲಿರುವ ಶಾಕಲ್ಯಾದಿತೀರ್ಥವರ್ಣನವೆಂಬ ನೂರರವತ್ತಮೂರನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ತೊಂಭತ್ತನಾಲ್ಕನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಚತುಃಷಷ್ಟ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಚಿಚ್ಚಿಕಾತೀರ್ಥಮಿತ್ಯುಕ್ತಂ ಸರ್ವರೋಗವಿನಾಶನಂ ।
ಸರ್ವಚಿಂತಾಪ್ರಹರಣಂ ಸರ್ವಶಾಂತಿಕರಂ ನೃಣಾಂ ॥ ೧ ॥

ತಸ್ಯ ಸ್ವರೂಪಂ ವಕ್ಷ್ಯಾಮಿ ಶುಭ್ರೇ ತಸ್ಮಿನ್ನಗೋತ್ತಮೇ ।
ಗಂಗಾಯಾ ಉತ್ತರೇ ಪಾರೇ ಯತ್ರ ದೇವೋ ಗದಾಧರಃ ॥ ೨ ॥

ಚಿಚ್ಚಿಕಃ ಪಕ್ಷಿರಾಟ್‌ತತ್ರ ಭೇರುಂಡೋ ಯೋಽಭಿಧೀಯತೇ ।
ಸದಾ ವಸತಿ ತತ್ರೈವ ಮಾಂಸಾಶೀ ಶ್ವೇತಪರ್ವತೇ ॥ ೩ ॥

ನೂರರವತ್ತನಾಲ್ಕನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು :—ಚಿಚ್ಚಿಕಾ ಎಂಬ ತೀರ್ಥವಿರುವುದು. ಅದು ಸರ್ವರೋಗಗಳನ್ನೂ ನಿವಾರಿಸುವುದು. ಎಲ್ಲಾ ಚಿಂತೆಗಳನ್ನೂ ನಾಶ ಮಾಡುವುದು. ಮನುಷ್ಯರಿಗೆ ಎಲ್ಲಾ ವಿಧವಾದ ಶಾಂತಿಯನ್ನೂ ಉಂಟು ಮಾಡುವುದು.

೨. ಅದರ ವೃತ್ತಾಂತವನ್ನು ಹೇಳುವೆನು. ಶುಭ್ರವೆಂಬ ಪರ್ವತದಲ್ಲಿ ಗದಾಧರನು ವಾಸವಾಗಿರುವನು. ಅದು ಗಂಗಾನದಿಯ ಉತ್ತರತೀರದಲ್ಲಿರುವುದು.

೩. ಆ ಶುಭ್ರಪರ್ವತದಲ್ಲಿ ಚಿಚ್ಚಿಕವೆಂಬ ಪಕ್ಷಿರಾಜನು ವಾಸವಾಗಿದ್ದನು. ಅದಕ್ಕೆ ಭೇರುಂಡವೆಂತಲೂ ಹೆಸರಿರುವುದು. ಅದು ಮಾಂಸಾಹಾರಿಯು.

ನಾನಾಪುಷ್ಪಫಲಾಕೀರ್ಣೈಃ ಸರ್ವರ್ತುಕುಸುಮೈರ್ನಗೈಃ ।
ಸೇವಿತೇ ದ್ವಿಜಮುಖ್ಯೈಶ್ಚ ಗೌತಮ್ಯಾ ಚೋಪಶೋಭಿತೇ ॥ ೪ ॥

ಸಿದ್ಧಚಾರಣಗಂಧರ್ವಕಿಂನರಾಮರಸಂಕುಲೇ ।
ತತ್ಸಮೀಪೇ ನಗಃ ಕಶ್ಚಿದ್ದ್ವಿಪದಾಂ ಚ ಚತುಷ್ಪದಾಂ ॥ ೫ ॥

ರೋಗಾರ್ತಿಕ್ಷುತ್ತೃಷಾಚಿಂತಾಮರಣಾನಾಂ ನ ಭಾಜನಂ ।
ಏವಂ ಗುಣಾನ್ವಿತೇ ಶೈಲೇ ನಾನಾಮುನಿಗಣಾವೃತೇ ॥ ೬ ॥

ಪೂರ್ವದೇಶಾಧಿಪಃ ಕಶ್ಚಿತ್ಪವಮಾನ ಇತಿ ಶ್ರುತಃ ।
ಕ್ಷತ್ರಧರ್ಮರತಃ ಶ್ರೀಮಾನ್ದೇವಬ್ರಾಹ್ಮಣಪಾಲಕಃ ॥ ೭ ॥

---

೪. ಆ ಶುಭ್ರಪರ್ವತದಲ್ಲಿ ಅನೇಕವಿಧವಾದ ಪುಷ್ಪಗಳೂ, ಫಲಗಳೂ ಯಾವಾಗಲೂ ತುಂಬಿರುತ್ತಿದ್ದವು. ಎಲ್ಲಾ ಋತುಗಳಲ್ಲಿ ಬಿಡುವ ಪುಷ್ಪಗಳೂ ಯಾವಾಗಲೂ ತುಂಬಿರುತ್ತಿದ್ದವು. ಋಷಿಶ್ರೇಷ್ಠರೆಲ್ಲರೂ ಅಲ್ಲಿ ವಾಸವಾಗಿದ್ದರು. ಗೌತಮೀನದಿಯು ಅಲ್ಲಿ ಹರಿದು ಅದರಿಂದ ಆ ಶುಭ್ರಪರ್ವತವು ಅತಿಮನೋಹರವಾಗಿ ಒಪ್ಪುತ್ತಿತ್ತು. ಸಿದ್ಧರೂ, ಚಾರಣರೂ, ಗಂಧರ್ವರೂ, ದೇವತೆಗಳೂ ಅಲ್ಲಿಗೆ ಬಂದು ಹೋಗುತ್ತಿದ್ದರು.

೫. ಅದರ ಸಮೀಪದಲ್ಲಿಯೇ ಮತ್ತೊಂದು ಪರ್ವತವಿರುವುದು. ಇದರ ಸೇವನೆಯಿಂದ ದ್ವಿಪಾದಗಳಾದ ಮನುಷ್ಯಾದಿಗಳಿಗೂ, ಚತುಷ್ಪಾದಗಳಾದ ಪಶುಗಳೇ ಮುಂತಾದುವುಗಳಿಗೂ ರೋಗವೂ, ಹಸಿವು, ತೃಷೆ, ಚಿಂತೆ, ಮರಣ ಇವಗಳಾವುವೂ ಉಂಟಾಗುತ್ತಿರಲಿಲ್ಲ.

೬–೭. ಈರೀತಿಯಾಗಿ ಅನೇಕ ಮುನಿಗಳಿಂದ ಕೂಡಿರುವ ಮನೋಹರವಾದ ಆ ಶುಭ್ರಪರ್ವತಕ್ಕೆ ಪೂರ್ವದೇಶಗಳಿಗೆ ಅಧಿಪತಿಯಾದ ಪವಮಾನನೆಂಬ ಪ್ರಖ್ಯಾತನಾದ ರಾಜನು ಬಂದನು. ಆವನು ಕ್ಷತ್ರಿಯಧರ್ಮವನ್ನು ಪರಿಪಾಲಿಸುವವನಾಗಿಯೂ ದೇವಬ್ರಾಹ್ಮಣರನ್ನು ಪಾಲಿಸುವವನಾಗಿಯೂ ಇದ್ದನು. ಇಂತಹ ಪವಮಾನನು ದೊಡ್ಡಸೈನ್ಯದೊಡನೆ ಕೂಡಿ ತನ್ನ ಪುರೋಹಿತರ ಜೊತೆಯಲ್ಲಿ ಆ ಶುಭ್ರಪರ್ವತದ ವನದಲ್ಲಿ ಸಂಚರಿಸಲು ಬಂದನು.

ಬಲೇನ ಮಹತಾ ಯುಕ್ತಃ ಸಪುರೋಧಾ ವನಂ ಯಯೌ ।
ರೇಮೇ ಸ್ತ್ರೀಭಿರ್ಮನೋಜ್ಞಾಭಿರ್ನೃತ್ಯವಾದಿತ್ರಜೈಃ ಸುಖೈಃ ॥ ೮ ॥

ಸ ಚ ಏವಂ ಧನುಷ್ಪಾಣಿರ್ಮೃಗಯಾಶೀಲಿಭಿರ್ವೃತಃ ।
ಏವಂ ಭ್ರಮನ್ಕದಾಚಿತ್ಸ ಶ್ರಾಂತೋ ದ್ರುಮಮುಪಾಗತಃ ॥ ೯ ॥

ಗೌತಮೀತೀರಸಂಭೂತಂ ನಾನಾಪಕ್ಷಿಗಣೈರ್ವೃತಂ ।
ಆಶ್ರಮಾಣಾಂ ಗೃಹಪತಿಂ ಧರ್ಮಜ್ಞಮಿವ ಸೇವಿತಂ ॥ ೧೦ ॥

ತಮಾಶ್ರಿತ್ಯ ನಗಶ್ರೇಷ್ಠಂ ಪವಮಾನೋ ನೃಪೋತ್ತಮಃ ।
ಸ ವಿಶ್ರಾಂತೋ ಜನವೃತ ಈಕ್ಷಾಂ ಚಕ್ರೇ ನಗೋತ್ತಮಂ ॥ ೧೧ ॥

ತತ್ರಾಪಶ್ಯದ್ದ್ವಿಜಂ ಸ್ಥೂಲಂ ದ್ವಿಮುಖಂ ಶೋಭನಾಕೃತಿಂ ।
ಚಿಂತಾವಿಷ್ಟಂ ತಥಾ ಶ್ರಾಂತಂ ತಮಪೃಚ್ಛನ್ನೃಪೋತ್ತಮಃ ॥ ೧೨ ॥

---

೮. ಅವನು ಆ ವನಗಳಲ್ಲಿ ಮನೋಹರರಾದ ಅಂತಃಪುರಸ್ತ್ರೀಯರೊಡನೆ ವಿಹರಿಸಿದನು. ಇಂಪಾದ ನೃತ್ಯ, ವಾದ್ಯ, ಗೀತಗಳಿಂದ ಆನಂದಿಸಿದನು. ಅನಂತರ ಆ ಪವಮಾನನು ಧನುಷ್ಪಾಣಿಯಾಗಿ ಬೇಟೆಯಾಡಲು ಬೇಟೆಗಾರರೊಡನೆ ಹೊರಟು,

೯–೧೦. ಅಲ್ಲಲ್ಲಿ ಬೇಟೆಯಾಡುತ್ತಾ ಬಹಳವಾಗಿ ಬಳಲಿ ವಿಶ್ರಾಂತಿಗಾಗಿ ಗೌತಮೀತೀರದಲ್ಲಿದ್ದ ಒಂದು ಮರದ ಕೆಳಗಡೆ ಕುಳಿತುಕೊಂಡನು. ಆ ಮರದಲ್ಲಿ ಅನೇಕವಿಧವಾದ ಪಕ್ಷಿಗಳೆಲ್ಲವೂ ವಾಸವಾಗಿದ್ದವು. ಆಶ್ರಮಗಳಿಗೆ ಹೋದವರು ಧರ್ಮಜ್ಞನಾದ ಗೃಹಪತಿಯನ್ನು ಆಶ್ರಯಿಸುವಂತೆ ಆ ರಾಜನು ಆ ಮರವನ್ನು ಆಶ್ರಯಿಸಿ ಕುಳಿತಿದ್ದನು.

೧೧–೧೨. ರಾಜನು ಬಹಳವಾಗಿ ದಣಿದಿದ್ದನು. ಜನಗಳೆಲ್ಲರೂ ಸುತ್ತಲೂ ನೆರೆದಿದ್ದರು. ಆಗ ಆ ರಾಜನು ಆ ಮರವನ್ನೊಮ್ಮೆ ನೋಡಲು ಅಲ್ಲಿ ಎರಡುಮುಖವುಳ್ಳ ಸ್ಥೂಲವಾದ ಒಂದು ಪಕ್ಷಿಯನ್ನು ಕಂಡನು. ಅದು ಚಿಂತೆಯಿಂದ ಕೂಡಿದ್ದಿತು. ಬಳಲಿದ್ದಿತು. ಅದನ್ನು ನೋಡಿ ರಾಜನು—

॥ ರಾಜೋವಾಚ ॥

ಕೋ ಭವಾನ್ದ್ವಿಮುಖಃ ಪಕ್ಷೀ ಚಿಂತಾವಾನಿವ ಲಕ್ಷ್ಯಸೇ ।
ನೈವಾತ್ರ ಕಶ್ಚಿದ್ದುಃಖಾರ್ತಃ ಕಸ್ಮಾತ್ತ್ವಂ ದುಃಖಮಾಗತಃ ॥ ೧೩ ॥

॥ ಬ್ರಹ್ಮೋವಾಚ ॥

ತತಃ ಪ್ರೋವಾಚ ನೃಪತಿಂ ಪವಮಾನಂ ಶನೈಃ ಶನೈಃ ।
ಸಮಾಶ್ವಸ್ತಮನಾಃ ಪಕ್ಷೀ ಚಿಚ್ಚಿಕೋ ನಿಃಶ್ವಸನ್ಮುಹುಃ ॥ ೧೪ ॥

॥ ಚಿಚ್ಚಿಕ ಉವಾಚ ॥

ಮತ್ತೋ ಭಯಂ ನ ಚಾನ್ಯೇಷಾಂ ಮಮ ನಾನ್ಯೋಪಪಾದಿತಂ ।
ನಾನಾಪುಷ್ಪಫಲಾಕೀರ್ಣಂ ಮುನಿಭಿಃ ಪರಿಸೇವಿತಂ ॥ ೧೫ ॥

ಪಶ್ಯೇಯಂ ಶೂನ್ಯಮೇವಾದ್ರಿಂ ತತಃ ಶೋಚಾಮಿ ಮಾಮಹಂ ।
ನ ಲಭಾಮಿ ಸುಖಂ ಕಿಂಚಿನ್ನ ತೃಪ್ಯಾಮಿ ಕದಾಚನ ।
ನಿದ್ರಾಂ ಪ್ರಾಪ್ನೋಮಿ ನ ಕ್ವಾಪಿ ನ ವಿಶ್ರಾಂತಿಂ ನ ನಿರ್ವೃತಿಂ ॥ ೧೬ ॥

---

೧೩. ಎಲೈ ಪಕ್ಷಿಯೇ, ಎರಡುಮುಖವುಳ್ಳ ನೀನಾರು? ಚಿಂತೆಯನ್ನು ಮಾಡುತ್ತಿರುವಂತೆ ಕಾಣುವೆ. ಇಲ್ಲಿ ಯಾರೂ ದುಃಖಿಗಳಾಗಲಾರರು. ನೀನು ಮಾತ್ರ ಏಕೆ ದುಃಖಿಯಾಗಿರುವೆ? ಎಂದನು.

೧೪. ಅದನ್ನು ಕೇಳಿ ಆ ಚಿಚ್ಚಿಕಪಕ್ಷಿಯು ಬಾರಿಬಾರಿಗೂ ನಿಟ್ಟುಸುರನ್ನು ಬಿಡುತ್ತಾ ಆ ರಾಜನನ್ನು ಕುರಿತು—

೧೫–೧೬. ಎಲೈ ರಾಜನೇ, ನನ್ನಿಂದ ಯಾರಿಗೂ ಭಯವಿಲ್ಲ. ಅಥವಾ ನನಗೆ ಯಾರಿಂದಲೂ ಭಯವಿಲ್ಲ. ಆದರೆ ಈ ಪರ್ವತವನ್ನು ನೋಡು· ಅನೇಕವಿಧವಾದ ಪುಷ್ಪಗಳಿಂದಲೂ, ಅನೇಕ ಮುನಿಗಳಿಂದಲೂ ಕೂಡಿದ್ದರೂ ಈ ಪರ್ವತವು ಅದೇಕೋ ಶೂನ್ಯವಾಗಿ ಕಾಣುತ್ತಿರುವುದು. ಅದಕ್ಕೋಸ್ಕರ ವಾಗಿಯೇ ನಾನು ದುಃಖಿಸುತ್ತಿರುವೆನು. ಇದರಿಂದ ನನಗೆ ಸ್ವಲ್ಪವೂ ಸುಖವಿಲ್ಲ. ಯಾವಾಗಲೂ ತೃಪ್ತಿಯಿಲ್ಲ. ನನಗೆ ನಿದ್ರೆಯಾಗಲೀ, ವಿಶ್ರಾಂತಿಯಾಗಲೀ, ಸುಖವಾಗಲೀ ಇಲ್ಲ. ಎನ್ನಲು,

॥ ಬ್ರಹ್ಮೋವಾಚ ॥
ದ್ವಿಮುಖಸ್ಯ ದ್ವಿಜಸ್ಯೋಕ್ತಂ ಶ್ರುತ್ವಾ ರಾಜಾತಿವಿಸ್ಮಿತಃ ॥ ೧೭ ॥

॥ ರಾಜೋವಾಚ ॥
ಕೋ ಭವಾನ್ಕಿಂ ಕೃತಂ ಪಾಪಂ ಕಸ್ಮಾಚ್ಛೂನ್ಯಶ್ಚ ಪರ್ವತಃ ।
ಏಕೇನಾಸ್ಯೇನ ತೃಪ್ಯಂತಿ ಪ್ರಾಣಿನೋಽತ್ರ ನಗೋತ್ತಮೇ ॥ ೧೮ ॥

ಕಿಮುತಾಸ್ಯದ್ವಯೇನ ತ್ವಂ ನ ತೃಪ್ತಿಮುಪಯಾಸ್ಯಸಿ ।
ಕಿಂವಾ ತೇ ದುಷ್ಕೃತಂ ಪ್ರಾಪ್ತಮಿಹ ಜನ್ಮನ್ಯಥೋ ಪುರಾ ॥ ೧೯ ॥

ತತ್ಸರ್ವಂ ಶಂಸ ಮೇ ಸತ್ಯಂ ತ್ರಾಸ್ಯೇ ತ್ವಾಂ ಮಹತೋ ಭಯಾತ್ ॥ ೨೦ ॥

॥ ಬ್ರಹ್ಮೋವಾಚ ॥
ರಾಜಾನಂ ತಂ ದ್ವಿಜಃ ಪ್ರಾಹ ನಿಃಶ್ವಸನ್ನಥ ಚಿಚ್ಚಿಕಃ ॥ ೨೧ ॥

---

೧೭. ಆ ಎರಡುಮುಖದ ಪಕ್ಷಿಯ ಮಾತನ್ನು ಕೇಳಿ ರಾಜನಿಗೆ ಅತ್ಯಂತ ಆಶ್ಚರ್ಯವಾಯಿತು.

೧೮-೨೦. ರಾಜನು ಮತ್ತೆ ಹೇಳಿದನು :—ಎಲೈ ಪಕ್ಷಿಯೇ, ನೀನು ಯಾರು? ನೀನು ಏನು ಪಾಪವನ್ನು ಮಾಡಿರುವೆ? ಏತಕ್ಕೋಸ್ಕರವಾಗಿ ನಿನಗೆ ಈ ಪರ್ವತವು ಶೂನ್ಯವಾಗಿ ಕಾಣುತ್ತಿರುವುದು? ಇಲ್ಲಿರತಕ್ಕ ಪ್ರಾಣಿಗಳೆಲ್ಲವೂ ಈ ರಮ್ಯವಾದ ಪರ್ವತವನ್ನು ಒಂದೇ ಮುಖದಿಂದ ನೋಡಿ ಆನಂದಪಡುತ್ತಿರುವಲ್ಲಿ, ನಿನಗೆ ಎರಡು ಮುಖಗಳಿದ್ದರೂ ಅದೇಕೆ ನೀನು ಸಂತೋಷಪಡುತ್ತಿಲ್ಲ? ನಿನ್ನ ಅಸಂತೋಷಕ್ಕೆ ಕಾರಣವೇನು? ನೀನು ಈ ಜನ್ಮದಲ್ಲಿಯಾಗಲೀ, ಹಿಂದಿನ ಜನ್ಮದಲ್ಲಿಯಾಗಲೂ ಯಾವ ದುಷ್ಕಾರ್ಯವನ್ನು ಮಾಡಿರುವೆ? ಮತ್ತೇನಾದರೂ ಕಾರಣವುಂಟೇ? ಇದೆಲ್ಲವನ್ನೂ ನನಗೆ ತಿಳಿಸಿದರೆ ಖಂಡಿತವಾಗಿಯೂ ನಾನು ನಿನ್ನನ್ನು ಉದ್ಧರಿಸುವೆನು ಎಂದನು.

೨೧-೨೩. ರಾಜನ ಮಾತನ್ನು ಕೇಳಿ ಆ ಚಿಚ್ಚಿಕಪಕ್ಷಿಯು ನಿಟ್ಟುಸಿರನ್ನು ಬಿಡುತ್ತಾ ಅವನನ್ನು ಕುರಿತು ಇಂತೆಂದಿತು.—ಎಲೈ ಪವಮಾನನೇ, ನನ್ನ ಪೂರ್ವವೃತ್ತಾಂತವನ್ನು ಹೇಳುವೆನು ಕೇಳು. ನಾನು ಹಿಂದಿನ ಜನ್ಮದಲ್ಲಿ ವೇದ

|| ಚಿಚ್ಚಿಕ ಉವಾಚ ||

ವಕ್ಷ್ಯೇಽಹಂ ತ್ವಾಂ ಪೂರ್ವವೃತ್ತಂ ಪವಮಾನ ಶೃಣುಷ್ವ ತತ್ ।
ಅಹಂ ದ್ವಿಜಾತಿಪ್ರವರೋ ವೇದವೇದಾಂಗಪಾರಗಃ || ೨೨ ||

ಕುಲೀನೋ ವಿದಿತಸ್ಪ್ರಾಜ್ಞಃ ಕಾರ್ಯಹಂತಾ ಕಲಿಪ್ರಿಯಃ ।
ವದೇ ಪುರಸ್ತಥಾ ಪೃಷ್ಠೇ ಅನ್ಯದನ್ಯಚ್ಚ ಜಂತುಷು || ೨೩ ||

ಪರವೃದ್ಧ್ಯಾ ಸದಾ ದುಃಖೀ ಮಾಯಯಾ ವಿಶ್ವವಂಚಕಃ ।
ಕೃತಘ್ನಃ ಸತ್ಯರಹಿತಃ ಪರನಿಂದಾವಿಚಕ್ಷಣಃ || ೨೪ ||

ಮಿತ್ರಸ್ವಾಮಿಗುರುದ್ರೋಹೀ ದಂಭಾಚಾರೋಽತಿನಿರ್ಘೃಣಃ ।
ಮನಸಾ ಕರ್ಮಣಾ ವಾಚಾ ತಾಪಯಾಮಿ ಜನಾನ್ಬಹೂನ್ || ೨೫ ||

ಅಯಮೇವ ವಿನೋದೋ ಮೇ ಸದಾ ಯತ್ಪರಹಿಂಸನಂ ।
ಯುಗ್ಮಭೇದಂ ಗಣೋಚ್ಛೇದಂ ಮರ್ಯಾದಾಭೇದನಂ ಸದಾ || ೨೬ ||

ವೇದಾಂಗಪಾರಂಗತನಾದ ಒಬ್ಬ ಬ್ರಾಹ್ಮಣನು. ಶ್ರೇಷ್ಠವಾದ ಕುಲದಲ್ಲಿ ಜನಿಸಿ ಬ್ರಾಹ್ಮಣಶ್ರೇಷ್ಠನೆನಿಸಿಕೊಂಡೆನು. ಜ್ಞಾನಿಯಾಗಿದ್ದೆನು. ಆದರೆ ಯಾವಾಗಲೂ ಪರರೊಡನೆ ಜಗಳವಾಡಿ ಅವರ ಕಾರ್ಯಗಳನ್ನೆಲ್ಲಾ ಹಾಳುಮಾಡುತ್ತಿದ್ದೆನು. ಜನಗಳ ಮುಂದೆ ಒಂದು ರೀತಿ ಆಡಿದರೆ ಹಿಂದೆ ಒಂದು ರೀತಿ ಆಡುತ್ತಿದ್ದೆನು.

೨೪-೨೫. ಮತ್ತೊಬ್ಬರು ಅಭಿವೃದ್ಧಿಯನ್ನು ಹೊಂದಿದರೆ ಅದನ್ನು ಸಹಿಸದೆ ನಾನು ಅಸೂಯೆಪಡುತ್ತಿದ್ದೆನು. ಮೋಸಮಾಡಿ ಜನರನ್ನು ವಂಚಿಸುತ್ತಿದ್ದೆನು. ಸತ್ಯವಾದಮಾತನ್ನೆಂದೂ ನುಡಿಯುತ್ತಿರಲಿಲ್ಲ. ಅನ್ಯರನ್ನು ನಿಂದಿಸುವುದರಲ್ಲಿ ನನಗೆ ತುಂಬಾ ಆಸಕ್ತಿ ಇದ್ದಿತು. ಉಪಕಾರಸ್ಮರಣೆಯು ಸ್ವಲವಾದರೂ ಇರಲಿಲ್ಲ. ಸ್ನೇಹಿತರು, ಗುರುಹಿರಿಯರು, ಸ್ವಾಮಿ, ಇವರಿಗೆಲ್ಲಾ ದ್ರೋಹಮಾಡಿದೆನು. ದಂಭಾಚಾರದಲ್ಲಿಯೇ ಪ್ರವೃತ್ತನಾಗಿ ಸ್ವಲ್ಪವೂ ದಯೆಯಿಲ್ಲದವನಾಗಿದ್ದೆನು. ಮನಸ್ಸಿಂದಲಾಗಲೀ, ಯಾವುದಾದರೂ ಕಾರ್ಯದಿಂದಲಾಗಲೀ ಅಥವಾ ಬೈದಾಗಲೀ ಅನೇಕ ಜನಗಳನ್ನು ಹಿಂಸಿಸುತ್ತಿದ್ದೆನು.

೨೬-೨೭. ಪರರನ್ನು ಹಿಂಸಿಸುವುದೆಂದರೆ ನನಗೊಂದುವಿಧವಾದ ಆನಂದವಾಗುತ್ತಿತ್ತು. ದಂಪತಿಗಳನ್ನಗಲಿಸಿದೆನು. ಗುಂಪನ್ನು ಚದುರಿಸಿದೆನು.

ಕರೋಮಿ ನಿರ್ವಿಚಾರೋಽಹಂ ವಿದ್ವತ್ಸೇವಾಪರಾಙ್ಮುಖಃ ।
ನ ಮಯಾ ಸದೃಶಃ ಕಶ್ಚಿತ್ಪಾತಕೀ ಭುವನತ್ರಯೇ ॥ ೨೭ ॥

ತೇನಾಹಂ ದ್ವಿಮುಖೋ ಜಾತಸ್ತಾಪನಾದ್ದುಃಖಭಾಗ್ಯಹಂ ।
ತಸ್ಮಾದ್ದುಃಖೇನ ಸಂತಪ್ತಃ ಶೂನ್ಯೋಽಯಂ ಪರ್ವತೋ ಮಮ ॥ ೨೮ ॥

ಅನ್ಯಚ್ಚ ಶೃಣು ಭೂಪಾಲ ವಾಕ್ಯಂ ಧರ್ಮಾರ್ಥಸಂಹಿತಂ ।
ಬ್ರಹ್ಮಹತ್ಯಾಸಮಂ ಪಾಪಂ ತದ್ವಿನಾ ತದವಾಪ್ಯತೇ ॥ ೨೯ ॥

ಕ್ಷತ್ರಿಯಃ ಸಂಗರಂ ಗತ್ವಾ ಅಥವಾನ್ಯತ್ರ ಸಂಗರಾತ್ ।
ಪಲಾಯಂತಂ ನ್ಯಸ್ತಶಸ್ತ್ರಂ ವಿಶ್ವಸ್ತಂ ಚ ಪರಾಙ್ಮುಖಂ ॥ ೩೦ ॥

ಅವಿಜ್ಞಾತಂ ಚೋಪವಿಷ್ಟಂ ಬಿಭೇಮೀತಿ ಚ ವಾದಿನಂ ।
ತಂ ಯದಿ ಕ್ಷತ್ರಿಯೋ ಹನ್ಯಾತ್ಸ ತು ಸ್ಯಾದ್ಬ್ರಹ್ಮಘಾತಕಃ ॥ ೩೧ ॥

ನಾಚಿಕೆಯಿಲ್ಲದ ಕೆಲಸವನ್ನು ಮಿತಿಮೀರಿ ಮಾಡುತ್ತಿದ್ದೆನು. ಯುಕ್ತಾಯುಕ್ತ ವಿವೇಚನೆಯಿಲ್ಲದೆ ಅನೇಕ ಪಾಪಕೆಲಸಗಳನ್ನಾಚರಿಸಿದೆನು. ಜ್ಞಾನಿಗಳ ಸೇವೆಯನ್ನು ಸ್ವಲ್ಪವಾದರೂ ಮಾಡುತ್ತಿರಲಿಲ್ಲ. ನನ್ನಂತಹ ಪಾಪಿಯು ಮೂರು ಲೋಕದಲ್ಲಿ ಹುಡುಕಿದರೂ ಸಿಗಲಾರನು. ಇದರ ಫಲವಾಗಿಯೇ ನನಗೆ ಎರಡು ಮುಖದ ಪಕ್ಷಿಯ ಜನ್ಮವು ಬಂದಿರುವುದು. ಜನಗಳಿಗೆ ತೊಂದರೆಯನ್ನುಂಟು ಮಾಡುತ್ತಿದ್ದುದರಿಂದ ಈಗ ನಾನೂ ದುಃಖವನ್ನನುಭವಿಸುತ್ತಿರುವೆನು. ಈ ಕಾರಣದಿಂದಲೇ ನನಗೆ ಈ ಪರ್ವತವು ಶೂನ್ಯವಾಗಿ ಕಾಣುತ್ತಿರುವುದು.

೨೯-೩೧. ಎಲೈ ರಾಜನೇ, ಮತ್ತೊಂದು ಧರ್ಮಾರ್ಥಸಹಿತವಾದ ವಿಷಯವನ್ನು ಹೇಳುವೆನು ಕೇಳು. ಬ್ರಹ್ಮಹತ್ಯೆಗೆ ಸಮನಾದ ಮತ್ತೊಂದು ಮಹಾಪಾತಕವಿರುವುದು. ಬ್ರಹ್ಮಹತ್ಯೆಯನ್ನು ಮಾಡದಿದ್ದರೂ ಅದು ಬ್ರಹ್ಮಹತ್ಯೆ ಎಂದೇ ಪರಿಗಣಿತವಾಗಿರುವುದು. ಕ್ಷತ್ರಿಯನು ಯುದ್ಧರಂಗಕ್ಕೆ ಹೋಗಲಿ ಅಥವಾ ಬೇರೇಕಡೆ ಇರಲಿ, ಯುದ್ಧದಿಂದ ಹಿಮ್ಮೆಟ್ಟುತ್ತಿರುವವನನ್ನೂ, ಕೈಶಸ್ತ್ರಗಳನ್ನು ಕೆಳಗಿಟ್ಟು ಶರಣುಹೊಂದಿರುವವನನ್ನೂ, ಪಲಾಯನ ಮಾಡುತ್ತಿರುವವನನ್ನೂ, ಕುಳಿತಿರುವವನನ್ನೂ, ‘ ನನಗೆ ಹೆದರಿಕೆ ’ ಎಂದು ಮೊರೆ ಇಡುತ್ತಿರುವವನನ್ನು ಕೊಂದಿದ್ದೇ ಆದರೆ ಅವನು ಬ್ರಹ್ಮ-ಹತ್ಯಾಪಾತಕಿಯು.

ಅಧೀತಂ ವಿಸ್ಮರತಿ ಯಸ್ತ್ವಂ ಕರೋತಿ ತಥೋತ್ತಮಂ ।
ಅನಾದರಂ ಚ ಗುರುಷು ತಮಾಹುರ್ಬ್ರಹ್ಮಘಾತಕಂ ॥ ೩೨ ॥

ಪ್ರತ್ಯಕ್ಷೇ ಚ ಪ್ರಿಯಂ ವಕ್ತಿ ಪರೋಕ್ಷೇ ಪರುಷಾಣಿ ಚ ।
ಅನ್ಯದ್ಧೃದಿ ವಚಸ್ಯನ್ಯತ್ಕರೋತ್ಯನ್ಯತ್ಸದೈವ ಯಃ ॥ ೩೩ ॥

ಗುರೂಣಾಂ ಶಪಥಂ ಕರ್ತಾ ದ್ವೇಷ್ಟಾ ಬ್ರಾಹ್ಮಣನಿಂದಕಃ ।
ಮಿಥ್ಯಾ ವಿನೀತಃ ಪಾಪಾತ್ಮಾ ಸ ತು ಸ್ಯಾದ್ಬ್ರಹ್ಮಘಾತಕಃ ॥ ೩೪ ॥

ದೇವಂ ವೇದಮಥಾಧ್ಯಾತ್ಮಂ ಧರ್ಮಬ್ರಾಹ್ಮಣಸಂಗತಿಂ ।
ಏತಾನ್ನಿಂದತಿ ಯೋ ದ್ವೇಷಾತ್ಸ ತು ಸ್ಯಾದ್ಬ್ರಹ್ಮಘಾತಕಃ ॥ ೩೫ ॥

ಏವಂ ಭೂತೋಽಪ್ಯಹಂ ರಾಜನ್ದಂಭಾರ್ಥಂ ಲಜ್ಜಯಾ ತಥಾ ।
ಸದ್ವೃತ್ತ ಇವ ವರ್ತೇಽಹಂ ತಸ್ಮಾದ್ರಾಜನ್ದ್ವಿಜೋಽಭವಂ ॥ ೩೬ ॥

---

೩೨. ಗುರೂಪದೇಶವಾದ ವಿದ್ಯೆಯನ್ನು ಮರೆತು ಗುರುಗಳ ವಿಷಯದಲ್ಲಿ ಯಾವನು ತಿರಸ್ಕಾರವನ್ನು ತೋರಿಸುವನೋ ಅವನೂ ಬ್ರಹ್ಮ-ಹತ್ಯಾಪಾಪಿಯು.

೩೩-೩೪. ಯಾವನು ಎದುರಿಗೆ ಒಳ್ಳೆಯದನ್ನಾಡುತ್ತಾ ಹಿಂದುಗಡೆ ನಿಂದಿಸಿತ್ತಾ ಇರುವನೋ, ಮನಸ್ಸಿನಲ್ಲಿ ಯೋಚಿಸುವುದೊಂದು ಕಾರ್ಯತಃ ಮಾಡುವುದೊಂದು, ಈರೀತಿಯಾಗಿ ಯಾವನಿರುವನೋ, ಗುರುಗಳ ಆಜ್ಞೆಯನ್ನು ಯಾವನು ಮೀರುವನೋ, ಬ್ರಾಹ್ಮಣರನ್ನು ನಿಂದಿಸಿ ಅವರನ್ನು ಯಾವನು ದ್ವೇಷಿಸುವನೋ, ನೋಡುವುದಕ್ಕೆ ವಿನೀತನಂತೆ ನಟಿಸುವನೋ ಅವನು ಬ್ರಹ್ಮ-ಹತ್ಯಾಪಾತಕಿಯು.

೩೫. ದೇವತೆಗಳನ್ನೂ, ವೇದವನ್ನೂ, ವೇದಾಂತವನ್ನೂ, ಧರ್ಮವನ್ನೂ, ಬ್ರಹ್ಮನವಿಷಯವನ್ನೂ ಯಾವನು ನಿಂದಿಸುವನೋ ಅವನು ಬ್ರಹ್ಮ-ಹತ್ಯಾಪಾತಕಿಯು.

೩೬-೩೭. ಎಲೈ ರಾಜನೇ, ನಾನು ಇಂತಹ ಪಾಪಿಯಾದರೂ ಸಹ ಆಡಂಬರಕ್ಕೋಸ್ಕರವಾಗಿಯೋ ಅಥವಾ ನಾಚಿಕೆಯಿಂದಲೋ ಸದ್ವ್ಯವಹಾರಿಯಂತೆ ನಟಿಸುತ್ತಿದ್ದೆನು. ಈ ಎಲ್ಲಾ ಕಾರಣದಿಂದಲೂ ನನಗೆ ಪಕ್ಷಿಯ ಜನ್ಮವು

ಏವಂ ಭೂತೋऽಪಿ ಸತ್ಕರ್ಮ ಕಿಂಚಿತ್ಕೃತಂ ಸ್ಮಿ ಕುತ್ರಚಿತ್ ।
ತೇನಾಹಂ ಕರ್ಮಣಾ ರಾಜನ್ಸ್ವತಃ ಸ್ಮೃತಂ ಪುರಾ ಕೃತಂ ॥ ೩೭ ॥

॥ ಬ್ರಹ್ಮೋವಾಚ ॥
ತಚ್ಚಿಚ್ಚಿಕವಚಃ ಶ್ರುತ್ವಾ ಪವಮಾನಃ ಸುವಿಸ್ಮಿತಃ ।
ಕರ್ಮಣಾ ಕೇನ ತೇ ಮುಕ್ತಿರಿತ್ಯಾಹ ನೃಪತಿರ್ದ್ವಿಜಂ ॥ ೩೮ ॥

ಇತಿ ತಸ್ಯ ವಚಃ ಶ್ರುತ್ವಾ ನೃಪತಿಂ ಪ್ರಾಹ ಪಕ್ಷಿರಾಟ್ ॥ ೩೯ ॥

॥ ಚಿಚ್ಚಿಕ ಉವಾಚ ॥
ಅಸ್ಮಿನ್ನೇವ ನಗಶ್ರೇಷ್ಠೇ ಗೌತಮ್ಯಾ ಉತ್ತರೇ ತಟೇ ।
ಗದಾಧರಂ ನಾಮ ತೀರ್ಥಂ ತತ್ರ ಮಾಂ ನಯ ಸುವ್ರತ ॥ ೪೦ ॥

ತದ್ಧಿ ತೀರ್ಥಂ ಪುಣ್ಯತಮಂ ಸರ್ವಪಾಪಪ್ರಣಾಶನಂ ।
ಸರ್ವಕಾಮಪ್ರದಂ ಚೇತಿ ಮಹದ್ಭಿರ್ಮುನಿಭಿಃ ಶ್ರುತಂ ॥ ೪೧ ॥

ಪ್ರಾಪ್ತವಾಯಿತು. ಹೀಗಿದ್ದರೂ ನನ್ನ ಜನ್ಮದಲ್ಲಿ ಒಂದು ಒಳ್ಳೆಯಕೆಲಸವನ್ನು ಯಾವಾಗಲೋ ಮಾಡಿದ್ದೆನು. ಅದಕ್ಕೋಸ್ಕರ ನನಗೆ ಹಿಂದಿನ ಜನ್ಮದ ನೆನಪು ಚನ್ನಾಗಿರುವುದು. ಎಂದಿತು.

೩೮-೩೯. ಈರೀತಿಯಾಗಿ ಹೇಳಿದ ಚಿಚ್ಚಿಕಪಕ್ಷಿಯ ಮಾತನ್ನು ಕೇಳಿ ಪವಮಾನನು ಆ ಪಕ್ಷಿಯನ್ನು ಕುರಿತು—ಎಲೈ ಪಕ್ಷಿಯೇ, ನಿನಗೆ ಏತರಿಂದ ಮುಕ್ತಿಯುಂಟಾಗುವುದು? ಎಂದು ಕೇಳಿದನು. ಆಗ ಪಕ್ಷಿಯು ಅವನನ್ನು ಕುರಿತು—

೪೦-೪೧. ಎಲೈ ಪವಮಾನನೇ, ಇದೇ ಪರ್ವತದಲ್ಲಿ ಹರಿಯುತ್ತಿರುವ ಗೌತಮೀನದಿಯ ಉತ್ತರ ದಡದಲ್ಲಿ ಗದಾಧರವೆಂಬ ತೀರ್ಥವಿರುವುದು. ನನ್ನನ್ನು ಅಲ್ಲಿಗೆ ಕರೆದುಕೊಂಡುಹೋಗು. ಆ ತೀರ್ಥವು ಪುಣ್ಯತಮವಾಗಿರುವುದು, ಪಾಪಗಳನ್ನೆಲ್ಲಾ ನಾಶಮಾಡುವುದು. ಅನೇಕ ಋಷಿಗಳು ಅಲ್ಲಿ ವಾಸಮಾಡುತ್ತಿರುವರು. ಅದರಲ್ಲಿ ಸ್ನಾನಮಾಡಿದರೆ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುದು.

ನ ಗೌತಮ್ಯಾಸ್ತಥಾ ವಿಷ್ಣೋರಪರಂ ಕ್ಲೇಶನಾಶನಂ ।
ಸರ್ವಭಾವೇನ ತತ್ತೀರ್ಥಂ ಪಶ್ಯೇಯಮಿತಿ ಮೇ ಮತಿಃ ॥ ೪೨ ॥

ಮತ್ಕೃತೇನ ಪ್ರಯತ್ನೇನ ನೈತಚ್ಛಕ್ಯಂ ಕದಾಚನ ।
ಕಥಮಾಕಾಂಕ್ಷಿತಪ್ರಾಪ್ತಿರ್ಭವೇದ್ದುಷ್ಕೃತಕರ್ಮಣಾಂ ॥ ೪೩ ॥

ಸಪ್ರಯತ್ನೋಽಪ್ಯಹಂ ವೀರ ನ ಪಶ್ಯೇ ತತ್ಸುದುಷ್ಕರಂ ।
ತಸ್ಮಾತ್ತವ ಪ್ರಸಾದಾಚ್ಚ ಪಶ್ಯೇಯಂ ಹಿ ಗದಾಧರಂ ॥ ೪೪ ॥

ಅವಿಜ್ಞಾಪಿತದುಃಖಜ್ಞಂ ಕರುಣಾವರುಣಾಲಯಂ ।
ಯಸ್ಮಿನ್ದೃಷ್ಟೇ ಭವಕ್ಲೇಶಾ ನ ದೃಶ್ಯಂತೇ ಪುನರ್ನರೈಃ ॥ ೪೫ ॥

ದೃಷ್ಟ್ವೈವ ತಂ ದಿವಂ ಯಾಸ್ಯೇ ಪ್ರಸಾದಾತ್ತವ ಸುವ್ರತ ॥ ೪೬ ॥

೪೨-೪೩. ಗೌತಮಿಯಂತೆಯೂ, ಮತ್ತು ವಿಷ್ಣುವಿನಂತೆಯೂ ದುಃಖ ನಾಶಮಾಡುವವರು ಬೇರೆ ಯಾರೂ ಇಲ್ಲ. ಆದುದರಿಂದ ಅಂತಹ ತೀರ್ಥವನ್ನು ನೋಡಬೇಕೆಂದು ನನಗೆ ಬುದ್ಧಿಹುಟ್ಟಿರುವುದು. ಆದರೆ ನನ್ನ ಪ್ರಯತ್ನದಿಂದ ಅದು ನನಗೆ ದೊರಕಲಾರದು. ಪಾಪಿಗಳಿಗೆ ಅವರಿಷ್ಟಪಟ್ಟ ವಸ್ತುವು ಸಿಕ್ಕುವುದು ತಾನೇ ಹೇಗೆ?

೪೪-೪೬. ನಾನು ಎಷ್ಟೇ ಪ್ರಯತ್ನಮಾಡಿದರೂ ಅದರ ದರ್ಶನವು ಇದುವರೆವಿಗೂ ನನಗೆ ಆಗಿಲ್ಲ. ಆದುದರಿಂದ ನಿನ್ನ ಸಹಾಯವೊಂದು ದೊರೆತರೆ ಆ ಗದಾಧರನ ದರ್ಶನವನ್ನೊಮ್ಮೆ ಮಾಡಿ ಮುಕ್ತನಾಗುವೆನು. ದುಃಖವೆಂಬುದೇ ಅವನಿಗೆ ತಿಳಿಯದು, ಕರುಣಾಸಾಗರನು ಇಂತಹ ಗದಾಧರನನ್ನು ನೋಡಿದಮಾತ್ರಕ್ಕೇ ಸಂಸಾರಕ್ಲೇಶವೆಲ್ಲವೂ ದೂರವಾಗುವುದು. ಆದುದರಿಂದ ನೀನು ನನಗೆ ಗದಾಧರನ ದರ್ಶನಮಾಡಿಸಿ ಅನುಗ್ರಹಿಸಬೇಕು. ಅವನ ದರ್ಶನದಿಂದ ನನಗೆ ಮುಕ್ತಿಯುಂಟಾಗುವುದು. ಎಂದಿತು.

॥ ಬ್ರಹ್ಮೋವಾಚ ॥

ಏವಮುಕ್ತಃ ಸ ನೃಪತಿಶ್ಚಿಚ್ಚಿಕೇನ ದ್ವಿಜನ್ಮನಾ ।
ದರ್ಶಯಾಮಾಸ ತಂ ದೇವಂ ತಾಂ ಚ ಗಂಗಾಂ ದ್ವಿಜನ್ಮನೇ ॥ ೪೭ ॥

ತತಃ ಸ ಚಿಚ್ಚಿಕಃ ಸ್ನಾತ್ವಾ ಗಂಗಾಂ ತ್ರೈಲೋಕ್ಯಪಾವನೀಂ ॥ ೪೮ ॥

॥ ಚಿಚ್ಚಿಕ ಉವಾಚ ॥

ಗಂಗೇ ಗೌತಮಿ ಯಾವತ್ತ್ವಾಂ ತ್ರಿಜಗತ್ಪಾವನೀಂ ನರಃ ।
ನ ಪಶ್ಯತ್ಯುಚ್ಯತೇ ತಾವದಿಹಾಮುತ್ರಾಪಿ ಪಾತಕೀ ॥ ೪೯ ॥

ತಸ್ಮಾತ್ಸರ್ವಾಗಸಮಪಿ ಮಾಮುದ್ಧರ ಸರಿದ್ವರೇ ।
ಸಂಸಾರೇ ದೇಹಿನಾಮನ್ಯಾ ನ ಗತಿಃ ಕಾಪಿ ಕುತ್ರಚಿತ್ ।
ತ್ವಾಂ ವಿನಾ ವಿಷ್ಣುಚರಣಸರೋರುಹಸಮುದ್ಭವೇ ॥ ೫೦ ॥

॥ ಬ್ರಹ್ಮೋವಾಚ ॥

ಇತಿ ಶ್ರದ್ಧಾವಿಶುದ್ಧಾತ್ಮಾ ಗಂಗೈಕಶರಣೋ ದ್ವಿಜಃ ।
ಸ್ನಾನಂ ಚಕ್ರೇ ಸ್ಮರನ್ನಂತರ್ಗಂಗೇ ತ್ರಾಯಸ್ವ ಮಾಮಿತಿ ॥ ೫೧ ॥

೪೭-೪೮. ಚಿಚ್ಚಿಕಪಕ್ಷಿಯು ಮಾತನ್ನು ಕೇಳಿ ಪವಮಾನನು ಆ ಪಕ್ಷಿಯನ್ನು ಕರೆದುಕೊಂಡುಹೋಗಿ ಗದಾಧರನನ್ನೂ, ಗಂಗೆಯನ್ನೂ ದರ್ಶನ ಮಾಡಿಸಿದನು. ಅನಂತರ ಆ ಪಕ್ಷಿಯು ತ್ರಿಲೋಕಪಾವನಿಯಾದ ಗಂಗೆಯಲ್ಲಿ ಸ್ನಾನಮಾಡಿ,

೪೯-೫೦. ಎಲೌ ಗೌತಮಿಯೇ. ಯಾವನು ತ್ರಿಲೋಕಪಾವನಿಯಾದ ನಿನ್ನನ್ನು ದರ್ಶನಮಾಡುವುದಿಲ್ಲವೋ, ಅಥವಾ ಸ್ತುತಿಸುವುದಿಲ್ಲವೋ ಅವನು ಮಹಾಪಾಪಿಯು. ನೀನು ನದಿಗಳಲ್ಲೆಲ್ಲಾ ಶ್ರೇಷ್ಠಳು. ನನ್ನ ತಪ್ಪುಗಳನ್ನೆಲ್ಲಾ ಮನ್ನಿಸಿ ನನ್ನನ್ನು ಉದ್ಧಾರಮಾಡು. ವಿಷ್ಣುವಿನ ಚರಣಕಮಲಸಂಭೂತಳಾದ ನಿನ್ನನ್ನು ಬಿಟ್ಟರೆ ಮನುಷ್ಯರಿಗೆ ಗತಿಯಾರು? ಎಂದು ಸ್ತುತಿಸಿತು.

೫೧-೫೨. ಈರೀತಿಯಾಗಿ ಶ್ರದ್ಧೆಯಿಂದ ಸ್ತುತಿಸುತ್ತಾ ಶುದ್ಧಾತ್ಮನಾಗಿ ಆ ಚಿಚ್ಚಿಕವು 'ಎಲೌ ಗಂಗೆಯೇ, ನನ್ನನ್ನು ಕಾಪಾಡು' ಎಂದು ಹೇಳುತ್ತಾ

ಗದಾಧರಂ ತತೋ ನತ್ವಾ ಪಶ್ಯತ್ಸು ನಗವಾಸಿಷು ।
ಪವಮಾನಾಭ್ಯನುಜ್ಞಾತಸ್ತದೈವ ದಿವಿಮಾಕ್ರಮತ್ ॥ ೫೨ ॥

ಪವಮಾನಃ ಸ್ವನಗರಂ ಪ್ರಯಯೌ ಸಾನುಗಸ್ತತಃ ।
ತತಃ ಪ್ರಭೃತಿ ತತ್ತೀರ್ಥಂ ಪಾವಮಾನಂ ಸಚಿಚ್ಚಿಕಂ ॥ ೫೩ ॥

ಗದಾಧರಂ ಕೋಟಿತೀರ್ಥಮಿತಿ ವೇದವಿದೋ ವಿದುಃ ।
ಕೋಟಿಕೋಟಿಗುಣಂ ಕರ್ಮ ಕೃತಂ ತತ್ರ ಭವೇನ್ನೃಣಾಂ ॥ ೫೪ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಪಾವಮಾನಚಿಚ್ಚಿಕಗದಾಧರಕೋಟಿತೀರ್ಥವರ್ಣನಂ ನಾಮ
ಚತುಃಷಷ್ಟ್ಯಧಿಕಶತತಮೋಽಧ್ಯಾಯಃ

ಆ ತೀರ್ಥದಲ್ಲಿ ಸ್ನಾನಮಾಡಿತು. ಆಮೇಲೆ ಗದಾಧರನನ್ನು ನಮಸ್ಕರಿಸಿತು. ಪರ್ವತಪ್ರಾಂತದವರೆಲ್ಲರೂ ನೋಡುತ್ತಿರಲು ಆ ಪಕ್ಷಿಯು ಪವಮಾನನನ್ನು ಬೀಳ್ಕೊಂಡು ಸ್ವರ್ಗಕ್ಕೆ ಹೊರಟುಹೋಯಿತು.

೫೩–೫೪. ಪವಮಾನನೂ ಸಹ ತನ್ನವರೊಡನೆ ಊರಿಗೆ ತೆರಳಿದನು. ಅಂದಿನಿಂದ ಆ ತೀರ್ಥಕ್ಕೆ ಪವಮಾನತೀರ್ಥವೆಂದೂ, ಚಿಚ್ಚಿಕತೀರ್ಥವೆಂತಲೂ, ಗದಾಧರತೀರ್ಥವೆಂತಲೂ, ಕೋಟಿತೀರ್ಥವೆಂತಲೂ ಹೆಸರಾಯಿತು. ಇಲ್ಲಿ ಮನುಷ್ಯರು ಯಾವುದಾದರೂ ಒಳ್ಳೆಯಕೆಲಸವನ್ನು ಮಾಡಿದರೆ ಕೋಟಿಕೋಟಿ ಫಲವುಂಟಾಗುವುದು.

ಶ್ರೀ–ಬ್ರಹ್ಮಮಹಾಪುರಾಣದ ತೀರ್ಥಮಾಹಾತ್ಮ್ಯೆಯಲ್ಲಿ ಪವಮಾನ–
ಚಿಚ್ಚಿಕ–ಗದಾಧರ, ಕೋಟಿತೀರ್ಥಗಳ ವರ್ಣನೆ ಎಂಬ
ನೂರರವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ತೊಂಭತ್ತೈದನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಷಷ್ಟ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಭದ್ರತೀರ್ಥಮಿತಿ ಪ್ರೋಕ್ತಂ ಸರ್ವಾನಿಷ್ಟನಿವಾರಣಂ ।
ಸರ್ವಪಾಪಪ್ರಶಮನಂ ಮಹಾಶಾಂತಿಪ್ರದಾಯಕಂ ॥ ೧ ॥

ಆದಿತ್ಯಸ್ಯ ಪ್ರಿಯಾ ಭಾರ್ಯಾ ಉಷಾ ತ್ವಾಷ್ಟ್ರೀ ಪತಿವ್ರತಾ ।
ಛಾಯಾಪಿ ಭಾರ್ಯಾ ಸವಿತುಸ್ತಸ್ಯಾಃ ಪುತ್ರಃ ಶನೈಶ್ಚರಃ ॥ ೨ ॥

ತಸ್ಯ ಸ್ವಸಾ ವಿಷ್ಟಿರಿತಿ ಭೀಷಣಾ ಪಾಪರೂಪಿಣೀ ।
ತಾಂ ಕನ್ಯಾಂ ಸವಿತಾ ಕಸ್ಮೈ ದದಾಮೀತಿ ಮತಿಂ ದಧೇ ॥ ೩ ॥

ನೂರರವತ್ತೈದನೆಯ ಅಧ್ಯಾಯವು

೧. ಬ್ರಹ್ಮನಿಂತೆಂದನು :—ಭದ್ರವೆಂಬ ಹೆಸರುಳ್ಳ ಒಂದು ತೀರ್ಥವಿರುವುದು. ಇದು ಅನಿಷ್ಟಗಳನ್ನೆಲ್ಲಾ ನಿವಾರಿಸುವುದು. ಇದರ ಸ್ನಾನದಿಂದ ಪಾಪಗಳೆಲ್ಲವೂ ಪರಿಹಾರವಾಗುವುವು. ಮಹಾಶಾಂತಿದಾಯಕವಾದುದು.

೨-೩. ಸೂರ್ಯನಿಗೆ ತ್ವಷ್ಟೃಪ್ರಜಾಪತಿಯ ಮಗಳಾದ ಉಷೆ ಎಂಬುವಳೂ, ಛಾಯಾ ಎಂಬುವಳೂ ಇಬ್ಬರು ಪತ್ನಿಯರು. ಉಷೆಯು ಸೂರ್ಯನಿಗೆ ಪ್ರೀತಿಪಾತ್ರಳೂ ಪತಿವ್ರತೆಯೂ ಆಗಿದ್ದಳು. ಛಾಯೆಯಲ್ಲಿ ಶನೈಶ್ಚರನೆಂಬ ಮಗನು ಹುಟ್ಟಿದನು. ಆ ಶನೈಶ್ಚರನಿಗೆ ವಿಷ್ಟಿ ಎಂಬ ತಂಗಿಯಿದ್ದಳು. ಅವಳು ಭಯಂಕರಳಾಗಿಯೂ ಪಾಪಿಷ್ಠಳಾಗಿಯೂ ಇದ್ದಳು. ಇಂಥವಳನ್ನು ಯಾರಿಗೆ ಕೊಟ್ಟು ಲಗ್ನಮಾಡಬೇಕೆಂದು ಸೂರ್ಯನು ಯೋಚಿಸಿದನು.

ಯಸ್ಮೈ ಯಸ್ಮೈ ದಾತುಕಾಮಃ ಸೂರ್ಯೋ ಲೋಕಗುರುಃ ಪ್ರಭುಃ ।
ತಚ್ಛ್ರುತ್ವಾ ಭೀಷಣಾ ಚೇತಿ ಕಿಂ ಕುರ್ಮೋ ಭಾರ್ಯಯಾನಯಾ ॥ ೪ ॥

ಏವಂ ತು ವರ್ತಮಾನೇ ಸಾ ಪಿತರಂ ಪ್ರಾಹ ದುಃಖಿತಾ ॥ ೫ ॥

॥ ವಿಷ್ಟಿರುವಾಚ ॥

ಬಾಲಾಮೇವ ಪಿತಾ ಯಸ್ತು ದದ್ಯಾತ್ಕನ್ಯಾಂ ಸುರೂಪಿಣೇ ।
ಸ ಕೃತಾರ್ಥೋ ಭವೇಲ್ಲೋಕೇ ನ ಚೇದ್ದುಷ್ಕೃತವಾನ್ವಿತಾ ॥ ೬ ॥

ಚತುರ್ಥಾದ್ವತ್ಸರಾದೂರ್ಧ್ವಂ ಯಾವನ್ನ ದಶಮಾತ್ಯಯಃ ।
ತಾವದ್ವಿವಾಹಃ ಕನ್ಯಾಯಾಃ ಪಿತ್ರಾ ಕಾರ್ಯಃ ಪ್ರಯತ್ನತಃ ॥ ೭ ॥

ಶ್ರೀಮತೇ ವಿದುಷೇ ಯೂನೇ ಕುಲೀನಾಯ ಯಶಸ್ವಿನೇ ।
ಉದಾರಾಯ ಸನಾಥಾಯ ಕನ್ಯಾ ದೇಯಾ ವರಾಯ ವೈ ॥ ೮ ॥

೪–೫. ಇಂಥವರಿಗೆ ಕೊಡಬೇಕೆಂದು ಯೋಚಿಸಿ ಲೋಕಗುರುವಾದ ಸೂರ್ಯನು ಅವರನ್ನು ವಿಚಾರಿಸಿದರೆ ಅವರು ಹೆದರಿ ಇಂತಹ ಹೆಂಡತಿಯನ್ನು ಕಟ್ಟಿಕೊಂಡರೆ ನಮ್ಮ ಗತಿ ಏನೆಂದು ಹೇಳುತ್ತಿದ್ದರು. ಈರೀತಿ ಇರುತ್ತಿರಲು ಒಂದುದಿನ ಆ ವಿಷ್ಟಿಯು ದುಃಖದಿಂದ ತನ್ನ ತಂದೆಯನ್ನು ಕುರಿತು ಹೇಳಿದಳು :

೬–೭. ತಂದೆಯಾದವನು ಮಗಳನ್ನು ಇನ್ನೂ ಬಾಲ್ಯವಯಸ್ಸು ಮುಗಿಯುವುದಕ್ಕಿಂತ ಮುಂಚೆ ಎಂದರೆ ನಾಲ್ಕನೇವರ್ಷದಿಂದ ಹಿಡಿದು ಹತ್ತುವರ್ಷ ತುಂಬುವುದರೊಳಗಾಗಿ ರೂಪವಂತನಾದ ಯುವಕನಿಗೆ ಕೊಟ್ಟು ವಿವಾಹವನ್ನು ಹೇಗಾದರೂ ಮಾಡಬೇಕು. ಹಾಗೆ ಮಾಡಿದರೆ ತಂದೆಯು ಕೃತಾರ್ಥನಾಗುವನು. ಇಲ್ಲದಿದ್ದಲ್ಲಿ ಅವನಿಗೆ ಖಂಡಿತ ಲೋಕಾಪವಾದವು ತಪ್ಪುವುದಿಲ್ಲ.

೮–೯. ಅದರಲ್ಲಿಯೂ ತಂದೆಯು ತನ್ನ ಮಗಳನ್ನು ಶ್ರೀಮಂತನೂ, ವಿದ್ವಾಂಸನೂ, ತರುಣನೂ, ಸತ್ಕುಲಪ್ರಸೂತನೂ, ಕೀರ್ತಿವಂತನೂ, ಉದಾರನೂ, ತಂದೆತಾಯುಳ್ಳವನೂ ಆದವನಿಗೇ ಲಗ್ನಮಾಡಬೇಕು. ಇಲ್ಲ

ಏತಚ್ಚೇದನ್ಯಥಾ ಕುರ್ಯಾತ್ಪಿತಾ ಸ ನಿರಯೀ ಸದಾ ।
ಧರ್ಮಸ್ಯ ಸಾಧನಂ ಕನ್ಯಾ ವಿದುಷಾಮಪಿ ಭಾಸ್ಕರ ॥ ೯ ॥

ನರಕಸ್ಯೇವ ಮೂರ್ಖಾಣಾಂ ಕಾಮೋಪಹತಚೇತಸಾಂ ।
ಏಕತಃ ಪೃಥಿವೀ ಕೃತ್ಸ್ನಾ ಸಶೈಲವನಕಾನನಾ ॥ ೧೦ ॥

ಸ್ವಲಂಕೃತೋಪಾಧಿಹೀನಾ ಸುಕನ್ಯಾ ಚೈಕತಃ ಸ್ಮೃತಾ ।
ವಿಕ್ರೀಣೀತೇ ಯಶ್ಚ ಕನ್ಯಾಮಶ್ವಂ ವಾ ಗಾಂ ತಿಲಾನಪಿ ॥ ೧೧ ॥

ನ ತಸ್ಯ ರೌರವಾದಿಭ್ಯಃ ಕದಾಚಿನ್ನಿಷ್ಕೃತಿರ್ಭವೇತ್ ।
ವಿವಾಹಾತಿಕ್ರಮಃ ಕಾರ್ಯೋ ನ ಕನ್ಯಾಯಾಃ ಕದಾಚನ ॥ ೧೨ ॥

ತಸ್ಮಿನ್ಕೃತೇ ಯತ್ಪಿತುಃ ಸ್ಯಾತ್ಪಾಪಂ ತತ್ಕೇನ ಕಥ್ಯತೇ ।
ಯಾವಲ್ಲಜ್ಜಾಂ ನ ಜಾನಾತಿ ಯಾವತ್ಕ್ರೀಡತಿ ಪಾಂಶುಭಿಃ ॥ ೧೩ ॥

ತಾವತ್ಕನ್ಯಾ ಪ್ರದಾತವ್ಯಾ ನೋ ಚೇತ್ಪಿತ್ರೋರಧೋಗತಿಃ ।
ಪಿತುಃ ಸ್ವರೂಪಂ ಪುತ್ರಃ ಸ್ಯಾದ್ಯಃ ಪಿತಾ ಪುತ್ರ ಏವ ಸಃ ॥ ೧೪ ॥

ದಿದ್ದಲ್ಲಿ ಅಂತಹ ತಂದೆಗೆ ನರಕವು ತಪ್ಪುವುದಿಲ್ಲ. ಏತಕ್ಕೆಂದರೆ, ಧರ್ಮಕ್ಕೆ ತಪ್ಪಿನಡೆದಂತಾಗುವುದು. ಮಗಳು ಧರ್ಮಕ್ಕೆ ಸಾಧನವು.

೧೦. ಇದೆಲ್ಲವೂ ತಿಳಿದವರ ವಿಷಯವು. ಆದರೆ ಕಾಮೋದ್ರಿಕ್ತಚಿತ್ತರಾದ ಮೂರ್ಖರಿಗಾದರೋ ನರಕವು ತಪ್ಪುವುದಿಲ್ಲ.

೧೧-೧೨. ಯಾವನು ತನ್ನ ಮಗಳನ್ನೂ, ಕುದುರೆಯನ್ನೂ, ಗೋವನ್ನೂ, ಎಳ್ಳನ್ನೂ ಮಾರುವನೋ ಅವನಿಗೆ ರೌರವಾದಿನರಕಗಳುಂಟಾಗುವುವು. ತಂದೆಯು ಮಗಳಿಗೆ ಸರಿಯಾದ ವಯಸ್ಸಿನಲ್ಲಿ ಮದುವೆಮಾಡಬೇಕು. ಅತಿಕ್ರಮ ಮಾಡಿದರೆ ಅವನಿಗೆ ಉಂಟಾಗುವ ಪಾಪವು ಇಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ.

೧೩-೧೪. ಇನ್ನೂ ಮಗಳಿಗೆ ನಾಚಿಕೆ ಎಂಬುದರ ಜ್ಞಾನವು ಇಷ್ಟಾಗಿರುವುದಿಲ್ಲವೋ ಮತ್ತು ಇನ್ನೂ ಧೂಳಿನಲ್ಲಿ ಆಡುತ್ತಿರುವಳೋ,ಎಂದರೆ ಆಟದಮೇಲೆ ಮಮತೆಯಿರುವುದೋ ಆ ವಯಸ್ಸಿನಲ್ಲಿಯೇ ಸರಿಯಾಗಿ ಮದುವೆಯನ್ನು ಮಾಡಬೇಕು.

ಆತ್ಮನಃ ಸುಖಿತಾಂ ಲೋಕೇ ಕೋ ನ ಕುರ್ಯಾತ್ಕರೋತಿ ಚ ।
ಯತ್ಕನ್ಯಾಯಾಂ ಪಿತಾ ಕುರ್ಯಾದ್ದಾನಂ ಪೂಜನಮೀಕ್ಷಣಂ ॥ ೧೫ ॥

...ಕೃತಂ ತತ್ಸ್ವಕೃತಂ ವಿದ್ಯಾತ್ತಾಸು ದತ್ತಂ ತದಕ್ಷಯಂ ।
ಯದ್ದತ್ತಂ ತಾಸು ಕನ್ಯಾಸು ತದಾನಂತ್ಯಾಯ ಕಲ್ಪತೇ ॥ ೧೬ ॥

ಪುತ್ರೇಷು ಚೈವ ಪೌತ್ರೇಷು ಕೋ ನ ಕುರ್ಯಾತ್ಸುಖಂ ರವೇ ।
ಕರೋತಿ ಯಃ ಕನ್ಯಕಾನಾಂ ಸ ಸಂಪದ್ಭಾಜನಂ ಭವೇತ್ ॥ ೧೭ ॥

॥ ಬ್ರಹ್ಮೋವಾಚ ॥

ಏವಂ ತಾಂ ವಾದಿನೀಂ ಕನ್ಯಾಂ ವಿಷ್ಟಿಂ ಪ್ರೋವಾಚ ಭಾಸ್ಕರಃ ॥ ೧೮ ॥

॥ ಸೂರ್ಯ ಉವಾಚ ॥

ಕಿಂ ಕರೋಮಿ ನ ಗೃಹ್ಣಾತಿ ತ್ವಾಂ ಕಶ್ಚಿದ್ಭೀಷಣಾಕೃತಿಂ ।
ಕುಲಂ ರೂಪಂ ವಯೋ ವಿತ್ತಂ ವಿದ್ಯಾಂ ವೃತ್ತಂ ಸುಶೀಲತಾಂ ॥ ೧೯ ॥

---

೧೫. ಲೋಕದಲ್ಲಿ ಯಾರು ತಾನೇ ತನಗೆ ಸುಖವಾಗಬೇಕೆಂದು ಬಯಸುವುದಿಲ್ಲ? ಹಾಗೂ ಸುಖಪಡಲು ಪ್ರಯತ್ನವನ್ನು ಮಾಡುವುದಿಲ್ಲ? ಆದುದರಿಂದ ತನ್ನಂತೆಯೇ ತನ್ನ ಮಗಳ ವಿವಾಹವನ್ನೂ, ರಕ್ಷಣೆಯನ್ನೂ ತಂದೆಯು ಮಾಡಬೇಕು.

೧೬. ತಂದೆಯು ಮಗಳಿಗೆ ಯಾವುದನ್ನು ಕೊಟ್ಟರೂ ಅದು ಅಕ್ಷಯವಾಗುವುದು. ಅದು ಸ್ವಲ್ಪವಾದರೂ ಅನಂತವಾಗುವುದು.

೧೭. ತನ್ನ ಪುತ್ರರಿಗೂ, ಪೌತ್ರರಿಗೂ ಯಾವನು ತಾನೆ ಸೌಖ್ಯವನ್ನು ಬಯಸುವುದಿಲ್ಲ? ಆದರೆ ತನ್ನ ಮಗಳಿಗೆ ಯಾವನು ಸುಖವನ್ನುಂಟುಮಾಡುವನೋ ಅವನು ಸಂಪತ್ತನ್ನು ಪಡೆಯುವನು. ಎಂದಳು.

೧೮. ತನ್ನ ಮಗಳು ವಿಷ್ಟಿಯು ಆಡಿದುದೆಲ್ಲವನ್ನೂ ಕೇಳಿ ಸೂರ್ಯನು ಅವಳನ್ನು ಕುರಿತು,

೧೯–೨೦. ಎಲೌ ಮಗಳೇ, ವಿವಾಹ ವಿಷಯದಲ್ಲಿ ಗಂಡಿನ ಮತ್ತು ಹೆಣ್ಣಿನಕಡೆಯವರಿಬ್ಬರೂ ಸಹ ಸತ್ಕುಲ, ರೂಪ, ವಯಸ್ಸು, ಹಣ, ವಿದ್ಯಾ,

ಮಿಹಃ ಪಶ್ಯಂತಿ ಸಂಬಂಧೇ ವಿವಾಹೇ ಸ್ತ್ರೀಷು ಪುಂಸು ಚ ।
ಅಸ್ಮಾಸು ಸರ್ವಮಪ್ಯಸ್ತಿ ವಿನಾ ತವ ಗುಣೈಃ ಶುಭೇ ।
ಕಿಂ ಕರೋಮಿ ಕ್ವ ಯಾಸ್ಯಾಮಿ ವೃಥಾ ಮಾಂ ಧಿಕ್ಕರೋಷಿ ಕಿಂ ॥ ೨೦ ॥

॥ ಬ್ರಹ್ಮೋವಾಚ ॥

ಏವಮುಕ್ತ್ವಾ ಪುನಸ್ತಾಂ ಚ ವಿಷ್ಟಿಂ ಪ್ರೋವಾಚ ಭಾಸ್ಕರಃ ॥ ೨೧ ॥

॥ ಸೂರ್ಯ ಉವಾಚ ॥

ಯಸ್ಮೈ ಕಸ್ಮೈ ಚ ದಾತವ್ಯಾ ತ್ವಂ ವೈ ಯದ್ಯನುಮನ್ಯಸೇ ।
ದೀಯಸೇಽದ್ಯ ಮಯಾ ವಿಷ್ಟೇ ಅನುಜಾನೀಹಿ ಮಾಂ ತತಃ ॥ ೨೨ ॥

॥ ಬ್ರಹ್ಮೋವಾಚ ॥

ಪಿತರಂ ಪ್ರಾಹ ಸಾ ವಿಷ್ಟಿರ್ಭರ್ತಾ ಪುತ್ರಾ ಧನಂ ಸುಖಂ ।
ಆಯೂ ರೂಪಂ ಚ ಸಂಪ್ರೀತಿರ್ಜಾಯತೇ ಪ್ರಾಕ್ತನಾನುಗಂ ॥ ೨೩ ॥

ಯತ್ಪುರಾ ವಿಹಿತಂ ಕರ್ಮ ಪ್ರಾಣಿನಾ ಸಾಧ್ವಸಾಧು ವಾ ।
ಫಲಂ ತದನುರೋಧೇನ ಪ್ರಾಪ್ಯತೇಽಪಿ ಭವಾಂತರೇ ॥ ೨೪ ॥

ಆಚಾರ, ನಡತೆ ಈ ಎಲ್ಲವನ್ನೂ ಪರೀಕ್ಷಿಸುವರು. ಈಗ ನಮಗೆ ಎಲ್ಲವೂ ಇದೆ ಆದರೆ ನಿನ್ನ ಗುಣವು ಚೆನ್ನಾಗಿಲ್ಲ. ನಿನ್ನ ರೂಪವು ಭಯಂಕರವಾಗಿರುವುದು. ಹೀಗಿರುವಲ್ಲಿ ಯಾರು ತಾನೆ ನಿನ್ನನ್ನು ವರಿಸುವರು? ನಾನೇನು ಮಾಡಲಿ? ಯಾರಿಗೆ ಕೊಡಲಿ? ಸುಮ್ಮನೆ ಏಕೆ ನಿಂದಿಸುವೆ? ಎಂದನು.

೨೧-೨೨. ಸೂರ್ಯನು ಇಷ್ಟನ್ನೆಲ್ಲಾ ಹೇಳಿ ಪುನಃ ಅವಳನ್ನು ಕುರಿತು ಎಲೌ ವಿಷ್ಟೇ, ನೀನು ಇಷ್ಟಪಡುವುದಾದರೆ ಯಾರಿಗಾದರೂ ಸರಿಯೇ ನಿನ್ನನ್ನು ಕೊಟ್ಟು ಮದುವೆ ಮಾಡಿಬಿಡುವೆನು, ನನ್ನನ್ನು ಕಳುಹಿಸಿ ಕೊಡು ಎಂದನು.

೨೩-೨೬. ಈರೀತಿಯಾಗಿ ಹೇಳಿದುದನ್ನು ಕೇಳಿ ವಿಷ್ಟಿಯು ಪುನಃ ಹೇಳಿದಳು—ಪೂರ್ವಜನ್ಮದಲ್ಲಿ ಮಾಡಿದ ಕರ್ಮಕ್ಕನುಗುಣವಾಗಿ ಪ್ರಾಣಿಗಳಿಗೆ ಪತಿ, ಪುತ್ರರು, ಧನ, ಸೌಖ್ಯ, ಆಯುಸ್ಸು, ರೂಪ, ಪ್ರೀತಿ ಇವುಗಳು ಉಂಟಾಗುವುವು. ತಾನು ಮಾಡಿದ ಕರ್ಮವು ಒಳ್ಳೆಯದಾಗಲೀ ಅಥವಾ ಕೆಟ್ಟವಾಗಲಿ

ಸ್ವದೋಷ ಏವ ತತ್ಪಿತ್ರಾ ಪರಿಹರ್ತವ್ಯ ಆದರಾತ್ ।
ತಾದೃಗೇವ ಫಲಂ ತು ಸ್ಯಾದ್ಯಾದೃಗಾಚರಿತಂ ಪುರಾ ॥ ೨೫ ॥

ತಸ್ಮಾತ್ತದ್ದಾನಸಂಬಂಧಂ ಸ್ವವಂಶಾನುಗತಂ ಪಿತಾ ।
ಕರೋತಿ ಶೇಷಂ ದೈವೇನ ಯದ್ಭಾವ್ಯಂ ತದ್ಭವಿಷ್ಯತಿ ॥ ೨೬ ॥

॥ ಬ್ರಹ್ಮೋವಾಚ ॥

ತಚ್ಛ್ರುತ್ವಾ ದುಹಿತುರ್ವಾಕ್ಯಂ ತ್ವಷ್ಟುಃ ಪುತ್ರಾಯ ಭೀಷಣಾಂ ।
ವಿಶ್ವರೂಪಾಯ ತಾಂ ಪ್ರಾದಾದ್ವಿಷ್ಟಿಂ ಲೋಕಭಯಂಕರೀಂ ॥ ೨೭ ॥

ವಿಶ್ವರೂಪೋऽಪಿ ತದ್ವಚ್ಚ ಭೀಷಣೋ ಭೀಷಣಾಕೃತಿಃ ।
ಏವಂ ಮಿಥಃ ಸಂಚರತೋಃ ಶೀಲರೂಪಸಮಾನಯೋಃ ॥ ೨೮ ॥

ಪ್ರೀತಿಃ ಕದಾಚಿದ್ದ್ವೇಷಮ್ಯಂ ದಂಪತ್ಯೋರಭವನ್ಮಿಥಃ ।
ಗಂಡೋ ನಾಮಾಭವತ್ಪುತ್ರೋ ಹ್ಯತಿಗಂಡಸ್ತಥೈವ ಚ ॥ ೨೯ ॥

ಅದಕ್ಕೆ ತಕ್ಕ ಫಲವನ್ನು ಈ ಜನ್ಮದಲ್ಲಿ ಅನುಭವಿಸಲೇಬೇಕು. ಆದುದರಿಂದ ತಂದೆಯು ತನ್ನ ತಪ್ಪನ್ನು ನಿವಾರಿಸಿಕೊಳ್ಳಬೇಕು. ಇಲ್ಲದಿದ್ದರೆ ಅದಕ್ಕೆ ತಕ್ಕ ಫಲವನ್ನು ಮುಂದಿನ ಜನ್ಮದಲ್ಲಿ ಅನುಭವಿಸುವನು. ಅದಕ್ಕೋಸ್ಕರ ತನ್ನ ವಂಶಾನುಗತವಾಗಿ ಬಂದ ಕನ್ಯಾದಾನವನ್ನು ಹೇಗಾದರೂ ಮಾಡಲೇಬೇಕು. ಮುಂದಿನ ವಿಷಯ ಅದೃಷ್ಟಕ್ಕೆ ಸೇರಿದುದು. ಅದೃಷ್ಟವಿದ್ದಂತೆ ಆಗುವುದು. ಆಗಬೇಕಾದುದು ಅವಶ್ಯಕವಾಗಿ ಆಗಲೇಬೇಕಷ್ಟೇ? ಎಂದಳು.

೨೭-೨೮, ತನ್ನ ಮಗಳ ಮಾತನ್ನು ಕೇಳಿ ಸೂರ್ಯನು ತ್ವಷ್ಟೃ ಪ್ರಜಾಪತಿಯ ಮಗನಾದ ವಿಶ್ವರೂಪನೆಂಬುವವನಿಗೆ ವಿಷ್ಟಿಯನ್ನು ಕೊಟ್ಟು ವಿವಾಹ ಮಾಡಿದನು. ಇಬ್ಬರ ರೂಪವೂ ಸರಿಯಾಗಿತ್ತು. ಇವಳೂ ಲೋಕಭಯಂಕರಿಯು. ಅವನೂ ಭಯಂಕರ ಸ್ವರೂಪನು. ಈರೀತಿಯಾಗಿ, ರೂಪ, ಶೀಲ ಗುಣಾದಿಗಳಿಂದ ಸರಿಸಮನಾದ ಅವರಿಬ್ಬರೂ ಅತ್ಯಂತ ಪ್ರೀತಿಯಿಂದಿದ್ದರು. ಆದರೂ ಕಲವು ದಿನಗಳ ನಂತರ ಅವರಿಬ್ಬರಿಗೂ ದ್ವೇಷವುಂಟಾಯಿತು.

೨೯-೩೩. ಅನಂತರ ವಿಷ್ಟಿಯಲ್ಲಿ ಗಂಡ, ಅತಿಗಂಡ, ರಕ್ತಾಕ್ಷ, ಕ್ರೋಧನ, ವ್ಯಯ, ದುರ್ಮುಖ, ಹರ್ಷಣರೆಂಬ ಪುತ್ರರು ಹುಟ್ಟಿದರು. ಅದ

ರಕ್ತಾಕ್ಷಃ ಕ್ರೋಧನಶ್ಚೈವ ವ್ಯಯೋ ದುರ್ಮುಖ ಏವ ಚ ।
ತೇಭ್ಯಃ ಕನೀಯಾನಭವದ್ಧರ್ಷಣೋ ನಾಮ ಪುಣ್ಯಭಾಕ್ ॥ ೩೦ ॥

ಸುತಃ ಸುಶೀಲಃ ಸುಭಗಃ ಶಾಂತಃ ಶುದ್ಧಮತಿಃ ಶುಚಿಃ ।
ಸ ಕದಾಚಿದ್ಯಮಗೃಹಂ ದ್ರಷ್ಟುಂ ಮಾತುಲಮಭ್ಯಗಾತ್ ॥ ೩೧ ॥

ಸ ದದರ್ಶ ಬಹೂನ್ ಜಂತೂನ್ಸ್ವರ್ಗಸ್ಥಾನಿವ ದುಃಖಿನಃ ।
ಸ ಮಾತುಲಂ ತು ಪಪ್ರಚ್ಛ ನತ್ವಾ ಧರ್ಮಂ ಸನಾತನಂ ॥ ೩೨ ॥

॥ ಹರ್ಷಣ ಉವಾಚ ॥

ಕ ಇಮೇ ಸುಖಿನಸ್ತಾತ ಪಚ್ಯಂತೇ ನರಕೇ ಚ ಕೇ ॥ ೩೩ ॥

॥ ಬ್ರಹ್ಮೋವಾಚ ॥

ಏವಂ ಪೃಷ್ಟೋ ಧರ್ಮರಾಜಃ ಸರ್ವಂ ಪ್ರಾಹ ಯಥಾರ್ಥವತ್ ।
ತತ್ಕರ್ಮಣಾಂ ಗತಿಂ ಸರ್ವಾಮಶೇಷೇಣ ನ್ಯವೇದಯತ್ ॥ ೩೪ ॥

॥ ಯಮ ಉವಾಚ ॥

ವಿಹಿತಸ್ಯ ನ ಕುರ್ವಂತಿ ಯೇ ಕದಾಚಿದತಿಕ್ರಮಂ ।
ನ ತೇ ಪಶ್ಯಂತಿ ನಿರಯಂ ಕದಾಚಿದಪಿ ಮಾನವಾಃ ॥ ೩೫ ॥

ರಲ್ಲಿ ಕಿರಿಯವನಾದ ಹರ್ಷಣನು ಒಳ್ಳೆಯ ಪುಣ್ಯವಂತನು, ಗುಣಶಾಲಿಯು. ಶಾಂತನಾಗಿಯೂ, ಜ್ಞಾನಿಯಾಗಿಯೂ, ದರಿದ್ರನಾಗಿಯೂ ಇದ್ದನು. ಅವನು ಒಂದುದಿನ ತನ್ನ ಸೋದರಮಾವನಾದ ಯಮನನ್ನು ನೋಡಲು ಯಮನಮನೆಗೆ ಹೋದನು. ಅಲ್ಲಿ ಅನೇಕ ಪ್ರಾಣಿಗಳು ನರಕದಲ್ಲಿ ಬಿದ್ದು ನರಳುತ್ತಿರುವುದನ್ನು ನೋಡಿ ಯಮನನ್ನು ನಮಸ್ಕರಿಸಿ,

೩೩–೩೪. ಓ ತಂದೆಯೇ, ಇವರು ಯಾರು? ಈ ನರಕದಲ್ಲಿ ಏತಕ್ಕೋಸ್ಕರ ಈರೀತಿ ಹಿಂಸೆಪಡುತ್ತಿರುವರು? ಇದನ್ನು ತಿಳಿಸಬೇಕೆಂದು ಕೇಳಲು ಯಮನು ಅಲ್ಲಿರುವವರ ಕರ್ಮಗತಿಯನ್ನೆಲ್ಲವನ್ನೂ ಯಥಾರ್ಥವಾಗಿ ಹೇಳಿದನು.

೩೫-೩೬. ಶಾಸ್ತ್ರವಿಹಿತವಾದ ಕರ್ಮವನ್ನು ಮೀರದೆ ಯಾರು ಮಾಡುವರೋ ಅವರು ಎಂದೆಂದಿಗೂ ನರಕಕ್ಕೆ ಹೋಗಲಾರರು- ಯಾರು ಶಾಸ್ತ್ರವನ್ನು

ನ ಮಾನಯಂತಿ ಯೇ ಶಾಸ್ತ್ರಂ ನಾಚಾರಂ ನ ಬಹುಶ್ರುತಾನ್ ।
ವಿಹಿತಾತಿಕ್ರಮಂ ಕುರ್ಯುರ್ಯೇ ತೇ ನರಕಗಾಮಿನಃ ॥ ೩೬ ॥

॥ ಬ್ರಹ್ಮೋವಾಚ ॥

ಸ ತು ಶ್ರುತ್ವಾ ಧರ್ಮವಾಕ್ಯಂ ಹರ್ಷಣಃ ಪುನರಬ್ರವೀತ್ ॥ ೩೭ ॥

॥ ಹರ್ಷಣ ಉವಾಚ ॥

ಪಿತಾ ತ್ವಾಷ್ಟ್ರೋ ಭೀಷಣಶ್ಚ ಮಾತಾ ವಿಷ್ಟಿಶ್ಚ ಭೀಷಣಾ ।
ಭ್ರಾತರಶ್ಚ ಮಹಾತ್ಮಾನೋ ಯೇನ ತೇ ಶಾಂತಬುದ್ಧಯಃ ॥ ೩೮ ॥

ಸುರೂಪಾಶ್ಚ ಭವಿಷ್ಯಂತಿ ನಿರ್ದೋಷಾ ಮಂಗಲಪ್ರದಾಃ ।
ತನ್ಮೇ ಕರ್ಮ ವದಸ್ವಾದ್ಯ ತತ್ಕರ್ತಾಸ್ಮಿ ಸುರೋತ್ತಮ ॥ ೩೯ ॥

ಅನ್ಯಥಾ ತಾನ್ನ ಗಚ್ಛೇಯಮಿತ್ಯುಕ್ತಃ ಪ್ರಾಹ ಧರ್ಮರಾಟ್ ।
ಹರ್ಷಣಂ ಶುದ್ಧಬುದ್ಧಿಂ ತಂ ಹರ್ಷಣೋऽಸಿ ನ ಸಂಶಯಃ ॥ ೪೦ ॥

ನಂಬದೆ ಕರ್ಮವನ್ನು ಆಚರಿಸುವುದಿಲ್ಲವೋ ಅವರು ಖಂಡಿತ ನರಕಕ್ಕೆ ಹೋಗುವರು. ಎಂದನು.

೩೭. ಹರ್ಷಣನು ಧರ್ಮರಾಜನ ಮಾತನ್ನು ಕೇಳಿ ಪುನಃ ಕೇಳಿದನು.

೩೮-೩೯. ನನ್ನ ತಂದೆಯು ತ್ವಷ್ಟೃಪ್ರಜಾಪತಿಯ ಮಗನಾದ ವಿಶ್ವರೂಪನು. ನನ್ನ ತಾಯಿಯು ಸೂರ್ಯನ ಮಗಳಾದ ವಿಷ್ಟಿಯು. ಇಬ್ಬರೂ ಭಯಂಕರಸ್ವರೂಪರು. ನನ್ನ ಸಹೋದರರೆಲ್ಲರೂ ಮಹಾತ್ಮರು. ಹಾಗೂ ಶಾಂತಬುದ್ಧಿಯುಳ್ಳವರು. ಅವರೆಲ್ಲರೂ ಸುಂದರರಾಗಿಯೂ, ದೋಷರಹಿತರಾಗಿಯೂ, ಶುಭಕರರಾಗಿಯೂ ಇರುವರು. ನನ್ನ ಕರ್ಮಗತಿಯು ಯಾವರೀತಿ ಇರುವುದು? ಅದನ್ನು ಹೇಳು. ಇಲ್ಲದ ಪಕ್ಷದಲ್ಲಿ ನಮ್ಮ ತಂದೆತಾಯಿಗಳ ಹತ್ತಿರಕ್ಕೆ ಹೋಗಲಾರೆನು ಎನ್ನಲು, ಧರ್ಮರಾಜನು ಹರ್ಷಣನನ್ನು ಕುರಿತು,

೪೦-೪೩. ಎಲೈ ಹರ್ಷಣನೇ, ನಿನ್ನ ಬುದ್ಧಿಯು ಶುದ್ಧವಾದುದು. ಹರ್ಷಣನೆಂಬ ಹೆಸರು ನಿನಗೆ ಅನ್ವರ್ಥವಾದುದು. ಇದರಲ್ಲಿ ಸಂಶಯವಿಲ್ಲ. ವಂಶದಲ್ಲಿ ಅನೇಕ ಮಕ್ಕಳು ಹುಟ್ಟಿದರೇನು ಪ್ರಯೋಜನ? ಒಬ್ಬನಾದರೂ

ಬಹವಃ ಸ್ಯುಃ ಸುತಾಃ ಕೇಚಿನ್ನೈವ ತೇ ಕುಲತಂತವಃ ।
ಏಕ ಏವ ಸುತಃ ಕಶ್ಚಿದ್ಯೇನ ತದ್ಧ್ರಿಯತೇ ಕುಲಂ ॥ ೪೧ ॥

ಕುಲಸ್ಯಾಧಾರಭೂತೋ ಯೋ ಯಃ ಪಿತ್ರೋಃ ಪ್ರಿಯಕಾರಕಃ ।
ಯಃ ಪೂರ್ವಜಾನುದ್ಧರತಿ ಸ ಪುತ್ರಸ್ತ್ವಿತರೋ ಗದಃ ॥ ೪೨ ॥

ಯಸ್ಮಾತ್ತ್ವಯಾನುರೂಪಂ ಮೇ ಪ್ರೋಕ್ತಂ ಮಾತಾಮಹ ಪ್ರಿಯಂ ।
ತಸ್ಮಾತ್ತ್ವಂ ಗೌತಮೀಂ ಗಚ್ಛ ಸ್ನಾತ್ವಾ ನಿಯತಮಾನಸಃ ॥ ೪೩ ॥

ಸ್ತುಹಿ ವಿಷ್ಣುಂ ಜಗದ್ಯೋನಿಂ ಶಾಂತಂ ಪ್ರೀತೇನ ಚೇತಸಾ ।
ಸ ತು ಪ್ರೀತೋ ಯದಿ ಭವೇತ್ಸರ್ವಮಿಷ್ಟಂ ಪ್ರದಾಸ್ಯತಿ ॥ ೪೪ ॥

॥ ಬ್ರಹ್ಮೋವಾಚ ॥

ಇತಿ ಶ್ರುತ್ವಾ ಧರ್ಮವಾಕ್ಯಂ ಹರ್ಷಣೋ ಗೌತಮೀಂ ಯಯೌ ।
ಶುಚಿಸ್ತುಷ್ಟಾವ ದೇವೇಶಂ ಹರಿಂ ಪ್ರೀತೋऽಭವದ್ಧರಿಃ ॥ ೪೫ ॥

ವಂಶೋದ್ಧಾರಕನಾಗುವುದಿಲ್ಲ. ಆದರೆ ವಂಶೋದ್ಧಾರಕನಾದ ಒಬ್ಬ ಮಗನೇ ಸಾಕು. ಅವನು ತಾಯಿತಂದೆಯರಿಗೆ ಪ್ರೀತಿಪಾತ್ರನೂ ವಂಶಕ್ಕೆ ಆಧಾರ ಭೂತನೂ ಆಗಿದ್ದರೆ ಅವನೇ ಮಗನಾಗಿ ಹುಟ್ಟಿದುದಕ್ಕೆ ಸಾರ್ಥಕವು. ಯಾವನು ತನ್ನ ಪೂರ್ವೀಕರನ್ನು ಉದ್ಧರಿಸುವನೋ ಅವನೇ ಮಗನು. ಇತರರೆಲ್ಲರೂ ರೋಗದಂತೆ ತ್ಯಾಜ್ಯರು.

೪೩-೪೪. ನೀನು ಹೇಳಿದುದೆಲ್ಲವೂ ನಿನ್ನ ತಾತನಾದ ಸೂರ್ಯನಿಗೆ ಅನುರೂಪವಾಗಿಯೇ ಇದೆ. ಆದುದರಿಂದ ನೀನು ಗೌತಮಿಗೆ ಹೋಗಿ ಅಲ್ಲಿ ಸ್ನಾನಮಾಡಿ ಒಂದೇಮನಸ್ಸಿನಿಂದ ವಿಷ್ಣುವನ್ನು ಸ್ತೋತ್ರಮಾಡು. ಜಗತ್ಕರ್ತೃ ವಾದ ಆ ವಿಷ್ಣುವು ನಿನ್ನ ಭಕ್ತಿಗೆ ಮೆಚ್ಚಿ ಸಂತುಷ್ಟನಾದರೆ ನಿನಗೆ ಬೇಕಾದು ದನ್ನು ಕೊಡುವನು. ಎಂದನು.

೪೫-೪೬. ಯಮಧರ್ಮರಾಜನ ಮಾತಿನಂತೆ ಹರ್ಷಣನು ಗೌತಮಿಗೆ ಹೋಗಿ ಸ್ನಾನಮಾಡಿ ಶುಚಿರ್ಭೂತನಾಗಿ ವಿಷ್ಣುವನ್ನು ಸ್ತೋತ್ರಮಾಡಿದನು.

ಹರ್ಷಣಾಯ ತತಃ ಪ್ರಾದಾತ್ಕುಲಭದ್ರಂ ತತಸ್ತು ಸಃ ।
ಸರ್ವಾಭದ್ರಪ್ರಶಮನಪೂರ್ವಕಂ ಭದ್ರಮಸ್ತು ತೇ　　॥ ೪೭ ॥

ತದ್ಭದ್ರಾ ಪ್ರೋಚ್ಯತೇ ಪಿಷ್ಟಿಃ ಪಿತಾ ಭದ್ರಸ್ತಥಾ ಸುತಾಃ ।
ತತಃ ಪ್ರಭೃತಿ ತತ್ತೀರ್ಥಂ ಭದ್ರತೀರ್ಥಂ ತದುಚ್ಯತೇ　　॥ ೪೭ ॥

ಸರ್ವಮಂಗಲದಂ ಪುಂಸಾಂ ತತ್ರ ಭದ್ರಪತಿರ್ಹರಿಃ ।
ತತ್ತೀರ್ಥಸೇವಿನಾಂ ಪುಂಸಾಂ ಸರ್ವಸಿದ್ಧಿಪ್ರದಾಯಕಂ ।
ಮಂಗಲೈಕನಿಧಿಃ ಸಾಕ್ಷಾದ್ದೇವದೇವೋ ಜನಾರ್ದನಃ　　॥ ೪೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಭದ್ರತೀರ್ಥವರ್ಣನಂ ನಾಮ ಪಂಚಷಷ್ಟ್ಯಧಿಕ-
ಶತತಮೋಽಧ್ಯಾಯಃ

ಆದರಿಂದ ಪ್ರಸನ್ನನಾದ ಹರಿಯು ಪ್ರತ್ಯಕ್ಷನಾಗಿ ಕುಲಭದ್ರನೆಂಬ ಬಿರುದನ್ನು ಕೊಟ್ಟನು. ನಿಮ್ಮವರೆಲ್ಲರೂ ಭದ್ರರೆಂದು ಹೆಸರುಳ್ಳವರಾಗಲಿ ಎಂದು ವರವನ್ನು ಕೊಟ್ಟನು.

೪೭. ಅಂದಿನಿಂದ ಹರ್ಷಣನ ತಾಯಿಗೆ ಭದ್ರಾ ಎಂತಲೂ, ತಂದೆಗೆ ಭದ್ರನೆಂತಲೂ, ಮಕ್ಕಳಿಗೆ ಭದ್ರರೆಂತಲೂ, ಆ ತೀರ್ಥಕ್ಕೆ ಭದ್ರತೀರ್ಥವೆಂತಲೂ ಹೆಸರಾಯಿತು.

೪೮. ಭದ್ರಪತಿಯಾದ ಹರಿಯು ಜನರಿಗೆ ಮಂಗಲವನ್ನುಂಟುಮಾಡುವನು. ಆ ತೀರ್ಥದಲ್ಲಿ ಸ್ನಾನಮಾಡಿದರೆ ಇಷ್ಟಾರ್ಥಗಳೆಲ್ಲವೂ ನೆರವೇರುವುದು. ಇಲ್ಲಿ ನೆಲಸಿರುವ ವಿಷ್ಣುವು ಮಂಗಳನಿಧಿಯು.

ಶ್ರೀ ಬ್ರಹ್ಮಪುರಾಣದ ತೀರ್ಥಮಾಹಾತ್ಮ್ಯೆಯಲ್ಲಿ ಭದ್ರತೀರ್ಥವರ್ಣನೆ ಎಂಬ
ನೂರರವತ್ತೈದನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ತೊಂಭತ್ತಾರನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಷಟ್‌ಷಷ್ಟ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಪತತ್ರಿತೀರ್ಥಮಾಖ್ಯಾತಂ ರೋಗಘ್ನಂ ಪಾಪನಾಶನಂ ।
ತಸ್ಯ ಶ್ರವಣಮಾತ್ರೇಣ ಕೃತಕೃತ್ಯೋ ಭವೇನ್ನರಃ ॥ ೧ ॥

ಬಭೂವತುಃ ಕಶ್ಯಪಸ್ಯ ಸುತಾವರುಣಮೀಶ್ವರೌ ।
ಸಂಪಾತಿಶ್ಚ ಜಟಾಯುಶ್ಚ ಸಂಭವೇತಾಂ ತದನ್ವಯೇ ॥ ೨ ॥

ತಾರ್ಕ್ಷ್ಯಪ್ರಜಾಪತೇಃ ಪುತ್ರಾವರುಣೋ ಗರುಡಸ್ತಥಾ ।
ತದನ್ವಯೇ ಚ ಸಂಭೂತಃ ಸಂಪಾತಿಃ ಪತಗೋತ್ತಮಃ ॥ ೩ ॥

ಜಟಾಯುರಿತಿ ವಿಖ್ಯಾತೋ ಹ್ಯಪರಃ ಸೋದರೋಽನುಜಃ ।
ಅನ್ಯೋನ್ಯಸ್ಪರ್ಧಯಾ ಯುಕ್ತಾವುನ್ಮತ್ತೌ ಸ್ವಬಲೇನ ತೌ ॥ ೪ ॥

ನೂರರವತ್ತಾರನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು :—ಪತತ್ರಿ ಎಂಬ ತೀರ್ಥವಿರುವುದು. ಅದರಲ್ಲಿ ಸ್ನಾನಮಾಡಿದರೆ ಸಕಲ ರೋಗಗಳೂ, ಪಾಪಗಳೂ ನಾಶವಾಗುವುವು. ಅದರ ನಾಮಶ್ರವಣಮಾತ್ರದಿಂದಲೇ ಮನುಷ್ಯನು ಕೃತಾರ್ಥನಾಗುವನು.

೨-೪. ಕಶ್ಯಪನಿಗೆ ಅರುಣ ಈಶ್ವರರೆಂಬ ಇಬ್ಬರು ಪುತ್ರರಿದ್ದರು. ಅವನ ವಂಶಪಲ್ಲಿಯೇ ಸಂಪಾತಿ ಎಂಬುವನೂ, ಜಟಾಯುವೆಂಬುವನೂ ಹುಟ್ಟಿದರು. ತಾರ್ಕ್ಷ್ಯಪ್ರಜಾಪತಿಗೆ ಅರುಣ ಮತ್ತು ಗರುಡ ಎಂಬ ಇಬ್ಬರು ಮಕ್ಕಳಿದ್ದರು. ಜಟಾಯುವೂ, ಸಂಪಾತಿಯೂ ಇವರ ವಂಶದವರೇ. ಆ ಇಬ್ಬರು ಸೋದರರೂ ಬಲಿಷ್ಠರಾಗಿಯೂ ಪರಸ್ಪರ ಸ್ಪರ್ಧಾಳುಗಳಾಗಿಯೂ ಇದ್ದರು. ಅಲ್ಲದೆ ಬಲೋನ್ಮತ್ತರಾಗಿ ಪ್ರಸಿದ್ಧರಾಗಿದ್ದರು.

ಸಂಜಗ್ಮತುರ್ದಿನಕರಂ ನಮಸ್ಕರ್ತುಂ ವಿಹಾಯುಸಿ ।
ಯಾವತ್ಸೂರ್ಯಸ್ಯ ಸಾಮೀಪ್ಯಂ ಪ್ರಾಪ್ತೌ ತೌ ವಿಹಗೋತ್ತಮೌ ॥ ೫ ॥

ದಗ್ಧಪಕ್ಷಾವುಭೌ ಶ್ರಾಂತೌ ಪತಿತೌ ಗಿರಿಮೂರ್ಧನಿ ।
ಬಾಂಧವೌ ಪತಿತೌ ದೃಷ್ಟ್ವಾ ನಿಶ್ಚೇಷ್ಟೌ ಗತಚೇತಸೌ ॥ ೬ ॥

ತಾವದ್ದುಃಖಾಭಿಭೂತೋಽಸಾವರುಣಃ ಪ್ರಾಹ ಭಾಸ್ಕರಂ ।
ತೌ ದೃಷ್ಟ್ವಾ ತ್ವರುಣಃ ಸೂರ್ಯಂ ಪ್ರಾಹೇದಂ ಪತಿತೌ ಭುವಿ ।
ಆಶ್ವಾಸಯೈತೌ ತಿಗ್ಮಾಂಶೋ ಯಾವನ್ನೈತೌ ಮರಿಷ್ಯತಃ ॥ ೭ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ದಿನಕರೋ ಜೀವಯಾಮಾಸ ತೌ ಖಗೌ ।
ಗರುಡೋಽಪಿ ತಯೋಃ ಶ್ರುತ್ವಾ ಅವಸ್ಥಾಂ ಸಹ ವಿಷ್ಣುನಾ ॥ ೮ ॥

ಆಗತ್ಯಾಶ್ವಾಸಯಾಮಾಸ ಸುಖಂ ಚಕ್ರೇ ಚ ನಾರದ ।
ಸರ್ವ ಏವ ತದಾ ಜಗ್ಮುರ್ಗಂಗಾಂ ತಾಪಾಪಸುತ್ತಯೋ ॥ ೯ ॥

೫-೬. ಅವರಿಬ್ಬರೂ ಸೂರ್ಯನನ್ನು ನಮಸ್ಕರಿಸಲು ಸೂರ್ಯಮಂಡಲದ ಸಮೀಪಕ್ಕೆ ಹಾರಿಹೋದರು. ಸೂರ್ಯನ ಹತ್ತಿರಕ್ಕೆ ಹೋಗಹೋಗುತ್ತಾ ಸೂರ್ಯನ ಉಷ್ಣಾತಿಶಯದಿಂದ ಅವರಿಬ್ಬರ ರೆಕ್ಕೆಗಳು ಸುಟ್ಟುಹೋಗಲು ಅವರು ಒಂದು ಪರ್ವತದಮೇಲೆ ಬಿದ್ದು ಮೂರ್ಛೆಯನ್ನು ಹೊಂದಿದರು. ಆಗ ಅರುಣನು ತನ್ನ ಬಂಧುಗಳು ಈರೀತಿ ಕೆಳಗೆ ಬಿದ್ದುದನ್ನು ನೋಡಿ ಬಹಳ ದುಃಖಗೊಂಡು ಸೂರ್ಯನನ್ನು ಕುರಿತು,

೭. ಎಲೈ ಸೂರ್ಯನೇ, ಇವರಿಬ್ಬರೂ ಪರ್ವತದಮೇಲೆ ಬಿದ್ದಿರುವರು. ಅವರು ಸಾಯುವುದರೊಳಗಾಗಿ ಅವರನ್ನು ಬದುಕಿಸು ಎಂಬುದಾಗಿ ಹೇಳಿದನು.

೮. ಅರುಣನ ಮಾತನ್ನು ಕೇಳಿ ಸೂರ್ಯನು ಆ ಪಕ್ಷಿಗಳನ್ನು ಬದುಕಿಸಿದನು. ಅದೇ ಸಮಯಕ್ಕೆ ಸರಿಯಾಗಿ ಗರುಡನೂ ಸಹ ವಿಷ್ಣುವಿನೊಡನೆ ಅಲ್ಲಿಗೆ ಬಂದನು. ಮತ್ತು ಆ ಪಕ್ಷಿಗಳನ್ನು ಸಮಾಧಾನಪಡಿಸಿದನು.

೯-೧೦. ಅಲ್ಲಿಂದ ಜಟಾಯು, ಅರುಣ, ಸಂಪಾತಿ, ಗರುಡ, ಸೂರ್ಯ,

ಜಟಾಯುಶ್ಚಾರುಣಶ್ಚೈವ ಸಂಪಾತಿರ್ಗರುಡಸ್ತಥಾ ।
ಸೂರ್ಯೋ ವಿಷ್ಣುಸ್ತತ್ಪ್ರಯಯೌ ತತ್ತೀರ್ಥಂ ಬಹುಪುಣ್ಯದಂ ॥ ೧೦ ॥

ಪತತ್ರಿತೀರ್ಥಮಾಖ್ಯಾತಂ ವಿಷಘ್ನಂ ಸರ್ವಕಾಮದಂ ।
ಸ್ವಯಂ ಸೂರ್ಯಸ್ತಥಾ ವಿಷ್ಣುಃ ಸುಪರ್ಣೇನಾರುಣೇನ ಚ ॥ ೧೧ ॥

ಆಸತೇ ಗೌತಮೀತೀರೇ ತಥೈವ ವೃಷಭಧ್ವಜಃ ।
ತ್ರಯಾಣಾಮಪಿ ದೇವಾನಾಂ ಸ್ಥಿತೇಸ್ತತ್ತೀರ್ಥಮುತ್ತಮಂ ॥ ೧೨ ॥

ತತ್ರ ಸ್ನಾತ್ವಾ ಶುಚಿರ್ಭೂತ್ವಾ ನಮಸ್ಕುರ್ಯಾತ್ಸುರಾನಿಮಾನ್ ।
ಆಧಿವ್ಯಾಧಿವಿನಿರ್ಮುಕ್ತಃ ಸ ಪರಂ ಸೌಖ್ಯಮಾಪ್ನುಯಾತ್ ॥ ೧೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಪತತ್ರಿತೀರ್ಥವರ್ಣನಂ ನಾಮ ಷಟ್ಷಷ್ಟ್ಯಧಿಕ-
ಶತತಮೋಽಧ್ಯಾಯಃ

ವಿಷ್ಣು ಇವರೆಲ್ಲರೂ ತಮಗುಂಟಾದ ಬೇಗೆಯ ಪರಿಹಾರಕ್ಕೋಸ್ಕರವಾಗಿ ಗಂಗಾ ನದಿಯ ಬಳಿಗೆ ಬಂದರು.

೧೧–೧೨. ಈ ತೀರ್ಥಕ್ಕೆ ಪತತ್ರಿತೀರ್ಥವೆಂದು ಹೆಸರಾಯಿತು. ಇದರಲ್ಲಿ ಸ್ನಾನಮಾಡಿದರೆ ಸಕಲಾಭೀಷ್ಟಗಳೂ ನೆರವೇರುವುವು. ವಿಷವು ನಾಶವಾಗುವುದು. ಅಲ್ಲಿ ಸೂರ್ಯನೂ, ಗರುಡವಾಹನನಾದ ವಿಷ್ಣುವೂ, ಈಶ್ವರನೂ ಈ ಮೂರು ದೇವತೆಗಳೂ ಅಲ್ಲಿ ವಾಸವಾಗಿರುವುದರಿಂದ ಆ ತೀರ್ಥವು ಪರಮ ಪವಿತ್ರವಾದುದು.

೧೩. ಯಾವನು ಈ ಪತತ್ರಿತೀರ್ಥದಲ್ಲಿ ಸ್ನಾನಮಾಡಿ ಶುಚಿರ್ಭೂತನಾಗಿ ಸೂರ್ಯನೇ ಮೊದಲಾದ ಅಲ್ಲಿರುವ ದೇವತೆಗಳನ್ನು ನಮಸ್ಕರಿಸುವನೋ ಅವನಿಗೆ ಮನೋವ್ಯಥೆ ರೋಗಾದಿಗಳು ಬರುವುದಿಲ್ಲ. ಮತ್ತು ಅವನು ತುಂಬಾ ಸೌಖ್ಯವನ್ನು ಪಡೆಯುವನು.

ಶ್ರೀ ಬ್ರಹ್ಮಪುರಾಣದಲ್ಲಿನ ತೀರ್ಥಮಾಹಾತ್ಮ್ಯೆಯಲ್ಲಿ ಪತತ್ರಿತೀರ್ಥವರ್ಣನವೆಂಬ ನೂರರವತ್ತಾರನೆಯ ಅಧ್ಯಾಯವು ಮುಗಿದುದು.

ಗೌತಮಿಯ ಮಾಹಾತ್ಮ್ಯೆಯಲ್ಲಿ ತೊಂಭತ್ತೇಳನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತಷಷ್ಟ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ವಿಪ್ರತೀರ್ಥಮಿತಿ ಖ್ಯಾತಂ ತಥಾ ನಾರಾಯಣಂ ವಿದುಃ ।
ತಸ್ಯಾಖ್ಯಾನಂ ಪ್ರವಕ್ಷ್ಯಾಮಿ ಶೃಣು ವಿಸ್ಮಯಕಾರಕಂ ॥ ೧ ॥

ಅಂತರ್ವೇದ್ಯಾಂ ದ್ವಿಜಃ ಕಶ್ಚಿದ್ಬ್ರಾಹ್ಮಣೋ ವೇದಪಾರಗಃ ।
ತಸ್ಯ ಪುತ್ರಾ ಮಹಾಪ್ರಾಜ್ಞಾ ಗುಣರೂಪದಯಾನ್ವಿತಾಃ ॥ ೨ ॥

ತೇಷಾಂ ಕನೀಯಾನ್ಭ್ರಾತಾ ಶಾಂತೋ ಗುಣಗಣೈರ್ವೃತಃ ।
ಆಸನ್ದಿವ ಇತಿ ಖ್ಯಾತಃ ಸರ್ವಜ್ಞಾನೋ ಮಹಾಮತಿಃ ॥ ೩ ॥

ನೂರರವತ್ತೇಳನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು :—ಎಲೈ ನಾರದನೇ, ವಿಪ್ರತೀರ್ಥವೆಂಬ ಪ್ರಸಿದ್ಧವಾದ ತೀರ್ಥವೊಂದಿರುವುದು. ಅದಕ್ಕೆ ನಾರಾಯಣತೀರ್ಥವೆಂದೂ ಹೆಸರು. ಅದರ ಆಶ್ಚರ್ಯಕರವಾದ ವೃತ್ತಾಂತವನ್ನು ಹೇಳುವೆನು ಕೇಳು.

೨-೩. ಅಂತರ್ವೇದಿ ಎಂಬ ಪಟ್ಟಣದಲ್ಲಿ ವೇದಾಧ್ಯಯನಸಂಪನ್ನನಾದ ಒಬ್ಬ ಬ್ರಾಹ್ಮಣನಿದ್ದನು. ಅವನಿಗೆ ಸದ್ಗುಣಿಗಳೂ, ಸುಂದರರೂ, ಜ್ಞಾನಿಗಳೂ ಆದ ಅನೇಕಜನ ಮಕ್ಕಳಿದ್ದರು. ಅವರಲ್ಲೆಲ್ಲಾ ಚಿಕ್ಕವನು ಆಸಂದಿವನೆಂಬುವನು. ಅವನು ಮಹಾಜ್ಞಾನಿಯೂ, ಸದ್ಗುಣಶಾಲಿಯೂ, ಶಾಂತನು.

ವಿವಾಹಾಯ ಪಿತಾ ತಸ್ಯ ಆಸನ್ದಿವಾಯ ಯತ್ನವಾನ್ ।
ಏತಸ್ಮಿನ್ನಂತರೇ ರಾತ್ರೌ ಸುಪ್ತಂ ತಂ ದ್ವಿಜಪುತ್ರಕಂ ॥ ೪ ॥
ಅವಿಷ್ಣುಸ್ಮರಣಂ ಸೌಮ್ಯಶಿವಸ್ಕಮುಸಮಾಹಿತಂ ।
ಆಸನ್ದಿವಂ ಕ್ರೂರರೂಪಾ ರಾಕ್ಷಸೀ ಕಾಮರೂಪಿಣೀ ॥ ೫ ॥
ತಮಾದಾಯಾಗಮುಚ್ಛೀಘ್ರಂ ಗೌತಮ್ಯಾ ದಕ್ಷಿಣೇ ತಟೇ ।
ಶ್ರೀಗಿರೇರುತ್ತರೇ ಪಾರೇ ಬಹುಬ್ರಾಹ್ಮಣಸೇವಿತಂ ॥ ೬ ॥
ನಗರಂ ಧರ್ಮನಿಲಯಂ ಲಕ್ಷ್ಮ್ಯಾಃ ನಿಲಯಮೇವ ಚ ।
ತತ್ರ ರಾಜಾ ಬೃಹತ್ಕೀರ್ತಿಃ ಸರ್ವಕ್ಷತ್ರಗುಣಾನ್ವಿತಃ ॥ ೭ ॥

ತಸ್ಯಾಮಿತಕ್ಷೇಮಸುಭಿಕ್ಷಯುಕ್ತಂ
ನಿಶಾವಸಾನೇ ದ್ವಿಜಪುತ್ರಯುಕ್ತಾ ।
ಸಾ ರಾಕ್ಷಸೀ ತತ್ಪುರಮಾಸಸಾದ
ಮನೋಜ್ಞರೂಪಾಣಿ ಬಿಭರ್ತಿ ನಿತ್ಯಂ ॥ ೮ ॥

೪-೫. ಆ ದಿವಸ ತಂದೆಯು ಅವನ ಮದುವೆಯ ಯತ್ನದಲ್ಲಿ ತೊಡಗಿರಲು ಒಂದುದಿನ ರಾತ್ರಿ ಅವನು ಮಲಗಿರುವಸಮಯದಲ್ಲಿ ಭಯಂಕರಳಾದ ಒಬ್ಬ ರಾಕ್ಷಸಿಯು ಆಸಂದಿವನನ್ನು ಎತ್ತಿಕೊಂಡು ಗೌತಮಿಯ ದಕ್ಷಿಣತೀರಕ್ಕೆ ಬಂದಳು. ಅವನು ನಿದ್ರೆಮಾಡುತ್ತಿದ್ದುದರಿಂದ ವಿಷ್ಣುವಿನ ಧ್ಯಾನಮಾಡುತ್ತಿರಲಿಲ್ಲ. ಮತ್ತು ತಲೆಯಮೇಲೆ ಏನನ್ನೂ ಧರಿಸಿರಲಿಲ್ಲ. ಇವೆಲ್ಲವೂ ಆ ರಾಕ್ಷಸಿಗೆ ಅವನನ್ನು ಅಪಹರಿಸಲು ಅನುಕೂಲವಾದವು.

೬-೭. ಗೌತಮಿಯ ದಕ್ಷಿಣದ ದಡದಲ್ಲಿ ಶ್ರೀಗಿರಿಗೆ ಉತ್ತರದಲ್ಲಿ ಧರ್ಮನಿಲಯವೆಂಬ ನಗರವಿರುವುದು. ಅಲ್ಲಿ ಅನೇಕ ಬ್ರಾಹ್ಮಣರು ವಾಸಮಾಡುವರು. ಧನಕನಕಾದಿ ಸಮೃದ್ಧಿಯಿಂದ ಆ ನಗರವು ಸಾಕ್ಷಾತ್ ಲಕ್ಷ್ಮಿಯನಗರದಂತಿರುವುದು. ಆ ನಗರಕ್ಕೆ ಕ್ಷಾತ್ರತೇಜಸ್ಸಿನಿಂದ ಕೂಡಿದ ಬೃಹತ್ಕೀರ್ತಿ ಎಂಬುವನು ರಾಜನು.

೮. ಇಂತಹ ಸುಭಿಕ್ಷವಾದ ಊರಿಗೆ ಆ ರಾಕ್ಷಸಿಯು ಆಸಂದಿವನೊಡನೆ ಬಂದು ಸೇರಿದಳು. ಪ್ರತಿದಿನವೂ ಮನೋಹರವಾದ ರೂಪಗಳನ್ನು ಧರಿಸಿ ತಿರುಗುತ್ತಾ ಆ ನಗರದಲ್ಲೇ ವಾಸಿಸುತ್ತಿದ್ದಳು.

ಸಾ ಕಾಮರೂಪೇಣ ಚರತ್ಯಶೇಷಾಂ
ಮಹೀಮಿಮಾಂ ತೇನ ಸಮಂ ದ್ವಿಜೇನ ।
ಗೋದಾವರೀದಕ್ಷಿಣತೀರಭಾಗೇ
ವೃದ್ಧಾಕೃತಿಸ್ತಂ ದ್ವಿಜಮಾಹ ಭೀಮಾ ॥ ೯ ॥

॥ ರಾಕ್ಷಸ್ಯುವಾಚ ॥

ಏಷಾ ತು ಗಂಗಾ ದ್ವಿಜಮುಖ್ಯ ಸಂಧ್ಯಾ
ಉಪಾಸ್ಯತಾಂ ವಿಪ್ರವರ್ಯೈಃ ಸಮೇತ್ಯ ।
ಯಥೋಚಿತಂ ವಿಪ್ರಪರಾಸ್ತು ಕಾಲೇ
ನೋಪಾಸತೇ ಯತ್ನತ ಏವ ಸಂಧ್ಯಾಂ ॥ ೧೦ ॥

ನೀಚಾಸ್ತ ಏವಾಭಿಹಿತಾಃ ಸುರೇಶೈ-
ರಂತ್ಯಾವಸಾಯಿಪ್ರವರಾಸ್ತ ಏತೇ ।
ಅಹಂ ಜನಿತ್ರೀ ತವ ಚೇತಿ ವಾಚ್ಯಂ
ನೋ ಚೇದಿದಾನೀಂ ತ್ವಮುಪ್ಟೈಷಿ ನಾಶಂ ॥ ೧೧ ॥

---

೯. ಇದೇರೀತಿಯಾಗಿ ವಿವಿಧವಾದ ರೂಪಗಳನ್ನು ಧರಿಸಿ ಈ ಪೃಥ್ವಿಯನ್ನೆಲ್ಲಾ ಸಂಚರಿಸುತ್ತಾ ಕೊನೆಗೆ ಗೋದಾವರೀನದಿಯ ದಕ್ಷಿಣತೀರಕ್ಕೆ ಬಂದು ಸೇರಿದಳು. ಅಲ್ಲಿ ಮುದುಕಿಯ ರೂಪವನ್ನು ತಾಳಿ ಆ ಬ್ರಾಹ್ಮಣ ಪುತ್ರನನ್ನು ಕುರಿತು—

೧೦. ಎಲೈ ಬ್ರಾಹ್ಮಣಶ್ರೇಷ್ಠನೇ, ಇದು ಗಂಗಾನದಿಯು. ನೀನಿಲ್ಲಿ ಬ್ರಾಹ್ಮಣರೊಡಗೂಡಿ ಸಂಧ್ಯಾವಂದನೆಯನ್ನು ಮಾಡು. ಅನೇಕ ಬ್ರಾಹ್ಮಣರು ಸರಿಯಾದಕಾಲದಲ್ಲಿ ಸಂಧ್ಯಾವಂದನೆಯನ್ನು ಮಾಡುವುದಿಲ್ಲ.

೧೧–೧೨. ಅಂತಹ ಜನಗಳನ್ನು ಇಂದ್ರನು ನೀಚರೆಂಬುದಾಗಿ ಕರೆಯುವನು. ಈಗ ಸರಿಯಾದ ಸಮಯವಾದುದರಿಂದ ನೀನು ಸಂಧ್ಯಾವಂದನೆಯನ್ನು ಮಾಡು. ಹಾಗೂ ನಾನು ನಿನ್ನ ತಾಯಿ ಎಂಬುದಾಗಿ ನೀನು ಹೇಳಬೇಕು. ಇಲ್ಲದಿದ್ದರೆ ನಿನ್ನನ್ನು ನಾಶಮಾಡುವೆನು. ನಾನು ಹೇಳಿದಂತೆ ನೀನು ಕೇಳಿದರೆ

ಮದ್ವಾಕ್ಯಕರ್ತಾಸಿ ಯದಿ ದ್ವಿಜೇಂದ್ರ
ಸುಖಂ ಕರಿಷ್ಯೇ ತವ ಯತ್ಪ್ರಿಯಂ ಚ ।
ಪುನಶ್ಚ ದೇಶಂ ನಿಲಯಂ ಗುರೂಂಶ್ಚ
ಸಂಪ್ರಾಪಯಿಷ್ಯೇ ನನು ಸತ್ಯಮೇತತ್ ॥ ೧೨ ॥

॥ ಬ್ರಹ್ಮೋವಾಚ ॥
ಸ ಪ್ರಾಹ ಕಾ ತ್ವಂ ದ್ವಿಜಪುಂಗವೋಽಪಿ
ಸೋವಾಚ ತಂ ರಾಕ್ಷಸೀ ಕಾಮರೂಪಾ ।
ವಿಶ್ವಾಸಯಂತೀ ಶಪಥೈರನೇಕೈ-
ಸ್ತಂ ಭ್ರಾಂತಚಿತ್ತಂ ಮುನಿರಾಜಪುತ್ರಂ ॥ ೧೩ ॥

ಕಂಕಾಲಿನೀ ನಾಮ ಜಗತ್ಪ್ರಸಿದ್ಧಾ
ವಿಪ್ರೋಽಪಿ ತಾಮಾಹ ನಿವೇದಿತಂ ಯತ್ ।
ತದೇವ ಕರ್ತಾಸ್ಮಿ ನ ಸಂಶಯೋಽತ್ರ
ಯತ್ತತ್ಪ್ರಿಯಂ ವಚ್ಮಿ ಕರೋಮಿ ಚೈವ ॥ ೧೪ ॥

ನಿನಗೆ ಇಷ್ಟವಾದುದನ್ನು ನಡೆಸಿಕೊಡುವೆನು. ನಿನ್ನ ದೇಶಕ್ಕೆ ಕಳುಹಿಸುವೆನು. ನಿನ್ನ ಊರಿಗೆ ಹೋಗಿ ನಿನ್ನ ತಾಯಿತಂದೆಗಳನ್ನು ನೋಡಬಹುದು. ಇದು ಸತ್ಯವಾದುದು. ಎಂದಳು.

೧೩. ಅದನ್ನು ಕೇಳಿ ಆ ಬ್ರಾಹ್ಮಣನ ಮಗನು ' ನೀನು ಯಾರೆಂದು ' ಕೇಳಲು ಆಗ ಅವಳು ನಾನು ಕಾಮರೂಪಿಯಾದ ರಾಕ್ಷಸಿಯು ಎಂದು ಹೇಳಿ ಅನೇಕವಿಧವಾಗಿ ಅವನನ್ನು ಹೆದರಿಸುತ್ತಾ ಅವನಿಗೆ ಭ್ರಾಂತಿಯುಂಟಾಗುವಂತೆ ಮಾಡಿದಳು.

೧೪. ಅವಳು ಕಂಕಾಲಿನೀ ಎಂಬ ಪ್ರಸಿದ್ಧಳಾದ ರಾಕ್ಷಸಿ ಎಂಬುದನ್ನು ತಿಳಿದು ಆ ಬ್ರಾಹ್ಮಣಪುತ್ರನು ಅವಳನ್ನು ಕುರಿತು, ನೀನು ಇಷ್ಟಪಟ್ಟಂತೆಯೇ ನಡೆಯುವೆನು. ನೀನು ಹೇಳಿದಂತೆಯೇ ಹೇಳುವೆನು ಎಂದು ಅವಳ ಮಾತಿಗೆ ಸಮ್ಮತಿಸಿದನು.

॥ ಬ್ರಹ್ಮೋವಾಚ ॥

ತದ್ವಿಪ್ರವಚನಂ ಶ್ರುತ್ವಾ ರಾಕ್ಷಸೀ ಕಾಮರೂಪಿಣೀ ।
ವೃದ್ಧಾ ತಥಾಪಿ ಚಾರ್ವಂಗೀ ದಿವ್ಯಾಲಂಕಾರಭೂಷಣಾ ॥ ೧೫ ॥

ದ್ವಿಜಮಾದಾಯ ಸರ್ವತ್ರ ಸುತ್ಸುತೋಽಯಂ ಗುಣಾಕರಃ ।
ಏವಂ ವದಂತೀ ಸರ್ವತ್ರ ಯಾತಿ ವಕ್ತಿ ಕರೋತಿ ಚ ॥ ೧೬ ॥

ತಂ ವಿಪ್ರಂ ರೂಪಸೌಭಾಗ್ಯವಯೋವಿದ್ಯಾವಿಭೂಷಿತಂ ।
ತಾಂ ಚ ವೃದ್ಧಾಂ ಗುಣೋಪೇತಾನುಸ್ಯ ಮಾತೇತಿ ಮೇನಿರೇ ॥ ೧೭ ॥

ತತ್ರ ದ್ವಿಜವರಃ ಕಶ್ಚಿತ್ಸ್ವಾಂ ಕನ್ಯಾಂ ಭೂಷಣಾನ್ವಿತಾಂ ।
ರಾಕ್ಷಸೀಂ ತಾಂ ಪುರಸ್ಕೃತ್ಯ ಪ್ರಾದಾತ್ತಸ್ಮೈ ದ್ವಿಜಾತಯೇ ॥ ೧೮ ॥

ಸಾ ಕನ್ಯಾ ತಂ ಪತಿಂ ಪ್ರಾಪ್ಯ ಕೃತಾರ್ಥಾಸ್ಮೀತ್ಯಚಿಂತಯತ್ ।
ಸ ದ್ವಿಜೋಽಪಿ ಗುಣೈರ್ಯುಕ್ತಾಂ ಪತ್ನೀಂ ದೃಷ್ಟ್ವಾ ಸುದುಃಖಿತಃ ॥ ೧೯ ॥

೧೫-೧೬. ಆಗ ಕಾಮರೂಪಳಾದ ಆ ರಾಕ್ಷಸಿಯು ವೃದ್ಧವೇಷವನ್ನು ಧರಿಸಿದಳು. ಆದರೂ ಅವಳಂಗಾಂಗಗಳು ಮನೋಹರವಾಗಿದ್ದವು. ದಿವ್ಯವಾದ ಅಲಂಕಾರಗಳನ್ನು ಧರಿಸಿದ್ದಳು. ಆ ಬ್ರಾಹ್ಮಣಪುತ್ರನನ್ನು ಕರೆದುಕೊಂಡು ಎಲ್ಲೆಲ್ಲೂ ಸಂಚರಿಸುತ್ತಾ ಹೋದಕಡೆಗಳಲ್ಲೆಲ್ಲಾ 'ಇವನು ನನ್ನ ಮಗನು. ಇವನ ಹೆಸರು ಗುಣಾಕರನೆಂದು' ಎಂಬುದಾಗಿ ಹೇಳುತ್ತಾ ಸಂಚರಿಸುತ್ತಿದ್ದಳು.

೧೭. ಜನರೆಲ್ಲರೂ ಅವರಿಬ್ಬರನ್ನು ನೋಡಿ 'ಈತನು ರೂಪ, ವಿದ್ಯಾ, ವಯಸ್ಸು, ಇವುಗಳಿಂದ ಪ್ರಕಾಶಿಸುತ್ತಿರುವನು. ಈ ಹೆಂಗಸು ಮುದುಕಿಯು.' ಎಂದು ಯೋಚಿಸಿ ಇವರಿಬ್ಬರೂ ತಾಯಿಮಕ್ಕಳೆಂದು ಭಾವಿಸಿದರು.

೧೮. ಹೀಗಿರುತ್ತಿರಲು ಒಬ್ಬ ಬ್ರಾಹ್ಮಣಶ್ರೇಷ್ಠನು ಆ ರಾಕ್ಷಸಿಯನ್ನು ಒಪ್ಪಿಸಿ ಭೂಷಣಗಳಿಂದಲಂಕೃತಳಾದ ತನ್ನ ಮಗಳನ್ನು ಆ ಬ್ರಾಹ್ಮಣನಿಗೆ ಕೊಟ್ಟು ಮದುವೆ ಮಾಡಿದನು.

೧೯. ಆ ಕನ್ನಿಕೆಯು ತನಗೆ ಇಂತಹ ಪತಿಯು ದೊರಕ್ಕಿದ್ದಕ್ಕೆ ತಾನೇ ಧನ್ಯಳೆಂದು ಯೋಚಿಸಿದಳು. ಬ್ರಾಹ್ಮಣನಾದರೋ ಸದ್ಗುಣಗಳಿಂದ ಕೂಡಿದ ತನ್ನ ಪತ್ನಿಯನ್ನು ನೋಡಿ ತನಗೀದೆಸೆಯು ಪ್ರಾಪ್ತವಾಗಿದೆಯಲ್ಲಾ ಎಂದು ದುಃಖಿಸುತ್ತಾ ಈರೀತಿ ಯೋಚಿಸಿದನು.

॥ ದ್ವಿಜ ಉವಾಚ ॥

ಸ್ವಾಮಿಯಂ ಭಕ್ಷಯೇದೇವ ರಾಕ್ಷಸೀ ಪಾಪರೂಪಿಣೀ।
ಕಿಂ ಕರೋಮಿ ಕ್ವ ಗಚ್ಛಾಮಿ ಕಸ್ಯೈತತ್ಕಥಯಾಮಿ ವಾ ॥ ೨೦ ॥

ಮಹತ್ಸಂಕಟಮಾಪನ್ನಂ ರಕ್ಷಯಿಷ್ಯತಿ ಕೋऽತ್ರ ಮಾಂ ।
ಭಾರ್ಯಾ ಮಮೇಯಂ ಕಲ್ಯಾಣೀ ಗುಣರೂಪವಯೋಯುತಾ ।
ಏನಾಮಪ್ಯಶುಭಾಕಸ್ಮಾದ್ಭಕ್ಷಯಿಷ್ಯತಿ ರಾಕ್ಷಸೀ ॥ ೨೧ ॥

॥ ಬ್ರಹ್ಮೋವಾಚ ॥

ಏತಸ್ಮಿನ್ನಂತರೇ ತತ್ರ ಭಾರ್ಯಾ ಸಾ ಗುಣಶಾಲಿನೀ ।
ವೃದ್ಧಾಪ್ಯತಿದುರಾಧರ್ಷಾ ಸಾ ಗತಾ ಕುತ್ರಚಿತ್ತದಾ ॥ ೨೨ ॥

ಪ್ರಶ್ರಯಾವನತಾ ಭೂತ್ವಾ ಬಾಲಾ ಚಾಪಿ ಪತಿವ್ರತಾ ।
ಭರ್ತಾರಂ ದುಃಖಿತಂ ಜ್ಞಾತ್ವಾ ಪತಿಂ ಪ್ರಾಹ ರಹಃ ಶನೈಃ ॥ ೨೩ ॥

॥ ಭಾರ್ಯೋವಾಚ ॥

ಕಸ್ಮಾತ್ತೇ ದುಃಖಮಾಪನ್ನಂ ಸ್ವಾಮಿಂಸ್ತತ್ತ್ವಂ ವದಸ್ವ ಮೇ ॥ ೨೪ ॥

೨೦-೨೧. ಈ ಪಾಪಿಷ್ಠಳಾದ ರಾಕ್ಷಸಿಯು ಖಂಡಿತ ನನ್ನನ್ನು ತಿಂದು ಬಿಡುವಳು. ಆದುದರಿಂದ ನಾನೇನು ಮಾಡಲಿ? ಎಲ್ಲಿಗೆ ಹೋಗಲಿ? ನನ್ನ ದುಃಖವನ್ನು ಯಾರೊಡನೆ ಅರುಹಲಿ? ಇಂತಹ ಸಂಕಟದಿಂದ ನನ್ನನ್ನಾರು ಕಾಪಾಡುವರು? ನನ್ನ ಹೆಂಡತಿಯಾದರೋ ಸದ್ಗುಣಿಯು. ಹಾಗೂ ಸುಂದರಿಯು. ಆ ರಾಕ್ಷಸಿಯು ಇವಳನ್ನೂ ತಿಂದುಬಿಡುವಳು. ಈಗೇನು ಮಾಡುವುದು? ಎಂಬುದಾಗಿ ಯೋಚಿಸಿದನು.

೨೨-೨೪. ಹೀಗಿರುತ್ತಿರಲು ಆ ವೃದ್ಧರೂಪಿಯಾದ ರಾಕ್ಷಸಿಯು ಎಲ್ಲಿಗೋ ಹೋಗಿರುವ ಸಮಯದಲ್ಲಿ ಆ ಬ್ರಾಹ್ಮಣನ ಹೆಂಡತಿಯು ಪತಿಸಮೀಪಕ್ಕೆ ಬಂದು ನಮ್ರಳಾಗಿ, ಎಲೈ ಸ್ವಾಮಿಯೇ, ನಿನ್ನ ದುಃಖಕ್ಕೆ ಕಾರಣವೇನು? ಅದನ್ನು ನನಗೆ ತಿಳಿಸು. ಎಂದು ಕೇಳಿದಳು.

॥ ಬ್ರಹ್ಮೋವಾಚ ॥

ಶನೈಃ ಪ್ರೋವಾಚ ತಾಂ ಭಾರ್ಯಾಂ ಯಥಾವತ್ಪೂರ್ವವಿಸ್ತರಂ ।
ಕಿಮಕಥ್ಯಂ ಪ್ರಿಯೇ ಮಿತ್ರೇ ಕುಲೀನಾಯಾಂ ಚ ಯೋಷಿತಿ ॥ ೨೫ ॥

ಭರ್ತೃವಾಕ್ಯಂ ನಿಶಮ್ಯೇದಂ ಪ್ರೋವಾಚ ವದತಾಂ ವರಾ ॥ ೨೬ ॥

॥ ಭಾರ್ಯೋವಾಚ ॥

ಅನಾತ್ಮನಃ ಸರ್ವತೋಽಪಿ ಭಯಮಸ್ತಿ ಗೃಹೇಷ್ವಪಿ ।
ಕುತೋ ಭಯಂ ಹ್ಯಾತ್ಮವತಾಂ ಕಿಂ ಪುನರ್ಗೌತಮೀತಟೇ ॥ ೨೭ ॥

ವಸತಾಂ ವಿಷ್ಣುಭಕ್ತಾನಾಂ ವಿರಕ್ತಾನಾಂ ವಿವೇಕಿನಾಂ ।
ಅತ್ರ ಸ್ನಾತ್ವಾ ಶುಚಿರ್ಭೂತ್ವಾ ಸ್ತುಹಿ ದೇವಮನಾಮಯಂ ॥ ೨೮ ॥

॥ ಬ್ರಹ್ಮೋವಾಚ ॥

ಏತದಾಕರ್ಣ್ಯ ಗಂಗಾಯಾಂ ಸ್ನಾತ್ವಾ ವಿಗತಕಲ್ಮಷಃ ।
ತುಷ್ಟಾವ ಗೌತಮೀತೀರೇ ದ್ವಿಜೋ ನಾರಾಯಣಂ ತಥಾ ॥ ೨೯ ॥

೨೫-೨೬. ಬ್ರಾಹ್ಮಣನು ತನ್ನ ವಿಷಯವೆಲ್ಲವನ್ನೂ ವಿಸ್ತಾರವಾಗಿ ಹೇಳಿದನು. ತನ್ನ ಹೆಂಡತಿಯಲ್ಲಿಯೂ, ತನ್ನ ಸ್ನೇಹಿತನಲ್ಲಿಯೂ, ಸತ್ಕುಲ ಪ್ರಸೂತಳಾದ ಸ್ತ್ರೀಯಲ್ಲಿಯೂ ಹೇಳದಿರುವ ವಿಷಯವು ಯಾವುದು ತಾನೇ ಇರುವುದು? ಈರೀತಿಯಾಗಿ ಪತಿಯ ವಾಕ್ಯವನ್ನು ಕೇಳಿ, ಆ ಸ್ತ್ರೀಯು

೨೭-೨೮. ನೀಚನಾದವನಿಗೆ ಎಲ್ಲೆಲ್ಲಿಯೂ, ಅಷ್ಟೇಕೆ ತನ್ನ ಮನೆಯಲ್ಲಿಯೂ ಸಹ ಹೆದರಿಕೆಯುಂಟಾಗುವುದು. ಸತ್ಪುರುಷರಾದವರಿಗೆ ಇಂತಹ ಗೌತಮೀತೀರದಲ್ಲಿ ಹೆದರಿಕೆ ಏನಿರುವುದು? ಅದರಲ್ಲಿಯೂ ವಿಷ್ಣುಭಕ್ತರಿಗೂ, ವಿರಕ್ತರಿಗೂ, ವಿವೇಕಿಗಳಿಗೂ ಭಯವೆಲ್ಲಿಯದು? ಆದುದರಿಂದ ಇಲ್ಲಿ ಸ್ನಾನ ಮಾಡಿ ಪವಿತ್ರನಾಗಿ ಪರಮಾತ್ಮನನ್ನು ಸ್ತುತಿಸು. ನಿನಗೆ ಒಳ್ಳೆಯದಾಗುವುದು, ಎಂದಳು.

೨೯. ಪತ್ನಿಯ ಮಾತನ್ನು ಕೇಳಿ ಆ ಬ್ರಾಹ್ಮಣನು ಗಂಗಾನದಿಯಲ್ಲಿ ಸ್ನಾನಮಾಡಿ ಶುಚಿಭೂತನಾಗಿ ನಾರಾಯಣನನ್ನು ಸ್ತುತಿಸಿದನು—

॥ ದ್ವಿಜ ಉವಾಚ ॥

ತ್ವಮಂತರಾತ್ಮಾ ಜಗತೋಽಸ್ಯ ನಾಥ
ತ್ವಮೇವ ಕರ್ತಾಽಸ್ಯ ಮುಕುಂದ ಹರ್ತಾ ।
ತ್ವಂ ಪಾಲಕಃ ಪಾಲಯಸೇ ನ ದೀನ-
ಮನಾಥಬಂಧೋ ನರಸಿಂಹ ಕಸ್ಮಾತ್ ॥ ೩೦ ॥

ಶ್ರುತ್ವೈತತ್ಪ್ರಾರ್ಥನಂ ತಸ್ಯ ಜಗಚ್ಛೋಕನಿವಾರಣಃ ।
ನಾರಾಯಣೋಽಪಿ ತಾಂ ಪಾಪಂ ನಿಜಘಾನ ಸ ರಾಕ್ಷಸೀಂ ॥ ೩೧ ॥

ಸುದರ್ಶನೇನ ಚಕ್ರೇಣ ಸಹಸ್ರಾರೇಣ ಭಾಸ್ವತಾ ।
ತಸ್ಮೈ ಪ್ರಾದಾದ್ವರಾನಿಷ್ಟಾನ್ಪ್ರಾಪಯಚ್ಚ ಗುರುಂ ಪ್ರಭುಃ ॥ ೩೨ ॥

ತತಃ ಪ್ರಭೃತಿ ತತ್ತೀರ್ಥಂ ವಿಪ್ರಂ ನಾರಾಯಣಂ ವಿದುಃ ।
ಸ್ನಾನದಾನೇನ ಪೂಜಾದ್ಯೈರ್ಯತ್ರ ಸಿಧ್ಯತಿ ವಾಂಛಿತಂ ॥ ೩೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ವಿಪ್ರನಾರಾಯಣತೀರ್ಥವರ್ಣನಂ ನಾಮ
ಸಪ್ತಷಷ್ಟ್ಯಧಿಕಶತತಮೋಽಧ್ಯಾಯಃ

---

೩೦. ಎಲೈ ಪರಮಾತ್ಮನೇ, ನೀನು ಜಗತ್ತಿಗೆ ಪ್ರಭುವು. ಜಗತ್ಕರ್ತನೂ ನೀನೇ, ಜಗತ್ಪಾಲಕನೂ ನೀನೇ. ಹೀಗಿರಲು, ದೀನಬಂಧುವಾದ ನೀನು ದೀನನಾದ ನನ್ನನ್ನೇಕೆ ಕಾಪಾಡುವುದಿಲ್ಲ? ಎಂದು ಸ್ತೋತ್ರಮಾಡಲು,

೩೧–೩೨. ಆ ಬ್ರಾಹ್ಮಣನ ಸ್ತೋತ್ರದಿಂದ ಸಂತುಷ್ಟನಾದ ನಾರಾಯಣನು ಅವನಿಗೆ ಪ್ರತ್ಯಕ್ಷನಾಗಿ ಸಹಸ್ರಾರು ಅಲುಗುಗಳುಳ್ಳ ಸುದರ್ಶನ ಚಕ್ರದಿಂದ ಆ ರಾಕ್ಷಸಸ್ತ್ರೀಯನ್ನು ವಧಿಸಿದನು. ಮತ್ತು ಆ ಬ್ರಾಹ್ಮಣನಿಗೆ ಬೇಕಾದ ವರಗಳನ್ನು ಕೊಟ್ಟು ಅವನನ್ನು ಅವನ ಮನೆಗೆ ತಲಪಿಸಿದನು.

೩೩. ಅಂದಿನಿಂದ ಆ ತೀರ್ಥಕ್ಕೆ ವಿಪ್ರತೀರ್ಥವೆಂದೂ, ನಾರಾಯಣ ತೀರ್ಥವೆಂದೂ ಹೆಸರಾಯಿತು. ಈ ತೀರ್ಥದಲ್ಲಿ ಸ್ನಾನದಾನಗಳನ್ನು ಮಾಡುವುದರಿಂದ ಇಷ್ಟಾರ್ಥಗಳೆಲ್ಲವೂ ನೆರವೇರುವುವು.

ಶ್ರೀ ಬ್ರಹ್ಮಮಹಾಪುರಾಣದ ತೀರ್ಥಮಾಹಾತ್ಮ್ಯೆಯಲ್ಲಿ ವಿಪ್ರ, ನಾರಾಯಣ
ತೀರ್ಥವರ್ಣನವೆಂಬ ನೂರರವತ್ತೇಳನೆಯ
ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ತೊಂಭತ್ತೆಂಟನೆಯ ಅಧ್ಯಾಯವು

ಶ್ರೀಃ

ಅಥ ಮಹಾಪುರಾಣೇ ಬ್ರಾಹ್ಮೇ

ಅಷ್ಟಷಷ್ಟ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಭಾನುತೀರ್ಥಮಿತಿ ಖ್ಯಾತಂ ತ್ವಾಷ್ಟ್ರಂ ಮಾಹೇಶ್ವರಂ ತಥಾ ।
ಐಂದ್ರಂ ಯಾಮ್ಯಂ ತಥಾಗ್ನೇಯಂ ಸರ್ವಪಾಪಪ್ರಣಾಶನಂ ॥ ೧ ॥

ಅಭಿಷ್ಟುತ ಇತಿ ಖ್ಯಾತೋ ರಾಜಾಸೀತ್ಪ್ರಿಯದರ್ಶನಃ ।
ಹಯಮೇಧೇನ ಪುಣ್ಯೇನ ಯಷ್ಟುಮಾರಬ್ಧವಾನ್ಸುರಾನ್ ॥ ೨ ॥

ತತ್ರರ್ತ್ವಿಜಃ ಷೋಡಶ ಸ್ಯುರ್ವಸಿಷ್ಠಾತ್ರಿಪುರೋಗಮಾಃ ।
ಕ್ಷತ್ರಿಯೋ ಯಜಮಾನೋ ತು ಯಜ್ಞಭೂಮಿಃ ಕಥಂ ಭವೇತ್ ॥ ೩ ॥

ನೂರರವತ್ತೆಂಟನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು :—ಭಾನುತೀರ್ಥವೆಂದು ಪ್ರಸಿದ್ಧವಾದ ಒಂದು ತೀರ್ಥವಿರುವುದು. ಮತ್ತು ಅಲ್ಲಿ ತ್ವಾಷ್ಟ್ರ, ಮಾಹೇಶ್ವರ, ಐಂದ್ರ, ಯಾಮ್ಯ, ಆಗ್ನೇಯ ಎಂಬ ತೀರ್ಥಗಳೂ ಇರುವುವು. ಇವುಗಳಲ್ಲಿ ಸ್ನಾನ ಮಾಡಿದರೆ ಪಾಪಗಳೆಲ್ಲವೂ ನಾಶವಾಗುವುವು.

೨ ೩. ಪೂರ್ವದಲ್ಲಿ ಅಭಿಷ್ಟುತನೆಂಬ ಹೆಸರುಳ್ಳ ಪ್ರಸಿದ್ಧನಾದ ಒಬ್ಬ ರಾಜನಿದ್ದನು. ಅವನು ಒಂದುಸಾರಿ ಅಶ್ವಮೇಧಯಜ್ಞವನ್ನು ಮಾಡಿ ದೇವತೆಗಳನ್ನು ಸಂತೋಷಪಡಿಸಿದನು. ಆ ಯಜ್ಞಕ್ಕೆ ವಸಿಷ್ಠ, ಅತ್ರಿ, ಮೊದಲಾದ ಹದಿನಾರು ಜನರು ಋತ್ವಿಕ್ಕುಗಳಾಗಿದ್ದರು. ಎಷ್ಟೆ ಆಗಲೀ ರಾಜನಲ್ಲವೇ? ಅವನಿಗೆ ಯಾಗಭೂಮಿಯು ಹೇಗೆ ದೊರೆಯಬೇಕು?

ಬ್ರಾಹ್ಮಣೇ ದೀಕ್ಷಿತೇ ರಾಜಾ ಭುವಂ ದಾಸ್ಯತಿ ಯಜ್ಞಿಯಾನ್ ।
ಭೂಪತೌ ದೀಕ್ಷಿತೇ ದಾತಾ ಕೋ ಭವೇತ್ಕೋ ನು ಯಾಚತೇ ॥ ೪ ॥

ಯಾಚ್ಞೇಯಮಖಿಲಾಶರ್ಮಜನನೀ ಪಾಪರೂಪಿಣೀ ।
ಕೇನಾಪ್ಯತೋ ನ ಕಾರ್ಯೈವ ಕ್ಷತ್ರಿಯೇಣ ವಿಶೇಷತಃ ॥ ೫ ॥

ಏವಂ ಮೀಮಾಂಸಮಾನೇಷು ಬ್ರಾಹ್ಮಣೇಷು ಪರಸ್ಪರಂ ।
ತತ್ರ ಪ್ರಾಹ ಮಹಾಪ್ರಾಜ್ಞೋ ವಸಿಷ್ಠೋ ಧರ್ಮವಿತ್ತಮಃ ॥ ೬ ॥

ರಾಜ್ಞಿ ದೀಕ್ಷಾಯಮಾಣೇ ತು ಸೂರ್ಯೋ ಯಾಚ್ಯೋ ಭುವಂ ಪ್ರತಿ ।
ದೇಹಿ ಮೇ ದೇವ ಸವಿತರ್ಯಜನಂ ದೇವತೋಚಿತಂ ॥ ೭ ॥

ದೈವಂ ಕ್ಷತ್ರಮಸಿ ಬ್ರಹ್ಮನ್ಭೂತನಾಥ ನಮೋಽಸ್ತು ತೇ ।
ಯಾಚಿತಃ ಸವಿತಾ ರಾಜ್ಞಾ ದೇವಾನಾಂ ಯಜನಂ ಶುಭಂ ॥ ೮ ॥

೪-೬. ಆ ಸಮಯದಲ್ಲಿ ಅಲ್ಲಿಗೆ ಬಂದಿದ್ದ ಬ್ರಾಹ್ಮಣರೆಲ್ಲರೂ ಕ್ಷತ್ರಿಯನೇ ಯಾಗ ಮಾಡಲು ಹೊರಟರೆ ಯಜ್ಞಭೂಮಿಯು ಹೇಗೆತಾನೇ ಪರಿಷ್ಕೃತ ವಾದೀತು? ಬ್ರಾಹ್ಮಣನು ಯಜ್ಞಮಾಡಿದರೆ ರಾಜನು ಯಜ್ಞಭೂಮಿಯನ್ನು ಕೊಡುವನು. ರಾಜನೇ ಯಜ್ಞಮಾಡಿದರೆ ಯಜ್ಞಭೂಮಿಯನ್ನು ಯಾರು ತಾನೇ ಕೊಡುವರು? ಅಥವಾ ಯಾಚಿಸುವುದು ತಾನೇ ಹೇಗೆ? ಭೂಮಿಯು ಪಾಪ ರೂಪಿಣಿಯು. ಅದನ್ನು ಯಾರೂ ಯಾಚಿಸಬಾರದು. ಅದರಲ್ಲೂ ಕ್ಷತ್ರಿಯನಂತೂ ಯಾಚಿಸಲೇ ಬಾರದು. ಎಂಬುದಾಗಿ ಪರಸ್ಪರ ಚರ್ಚೆಮಾಡು ತ್ತಿರಲು ಮಹಾಜ್ಞಾನಿಯಾದ ವಸಿಷ್ಠನು ಧರ್ಮಾನುಸಾರವಾಗಿ ಈರೀತಿ ಹೇಳಿದನು.

೭-೮. ರಾಜನು ಯಜ್ಞವನ್ನು ಮಾಡಿದರೆ ಅವನು ಯಾಗಭೂಮಿ ಗೋಸ್ಕರ ಸೂರ್ಯನನ್ನು ಪ್ರಾರ್ಥಿಸಬೇಕು. ಎಲೈ ಸ್ವಾಮಿಯೇ, ನೀನು ಬ್ರಹ್ಮನು. ಪ್ರಜೆಗಳಿಗೆ ಪ್ರಭುವು. ಕ್ಷತ್ರಿಯರಿಗೆಲ್ಲಾ ದೇವತೆಯು ಎಂಬು

ದದಾತ್ಯೇವ ತತೋ ರಾಜನ್ಪ್ರಾರ್ಥಯೇಶಂ ದಿವಾಕರಂ । ॥ ೯ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾಭಿಷ್ಟುತೋಽಪಿ ದೇವದೇವಂ ದಿವಾಕರಂ ।
ಶ್ರದ್ಧಯಾ ಪ್ರಾರ್ಥಯಾಮಾಸ ಹರೀಶಾಜಾತ್ಮಕಂ ರವಿಂ ॥ ೧೦ ॥

॥ ರಾಜೋವಾಚ ॥

ದೇವಾನಾಂ ಯಜನಂ ದೇಹಿ ಸವಿತಸ್ತೇ ನಮೋಽಸ್ತು ತೇ ॥ ೧೧ ॥

॥ ಬ್ರಹ್ಮೋವಾಚ ॥

ಕ್ಷತ್ರಂ ದೈವಂ ಯತಃ ಸೂರ್ಯೋ ದತ್ತಾ ಭೂರ್ಭೂಪತೇಸ್ತತಃ ।
ಸವಿತಾ ದೇವದೇವೇಶೋ ದದಾಮೀತ್ಯಭ್ಯಭಾಷತ ॥ ೧೨ ॥

ಏವಂ ಕರೋತಿ ಯೋ ಯಜ್ಞಂ ತಸ್ಯ ರಿಷ್ಟಿರ್ನ ಕಾಚನ ।
ತಥಾ ವಾಜಿಮುಖೇ ಸತ್ರೇ ಬ್ರಾಹ್ಮಣೈರ್ವೇದಪಾರಗೈಃ ॥ ೧೩ ॥

ದಾಗಿ ಸ್ತುತಿಸಬೇಕು. ಆದುದರಿಂದ ಎಲೈ ರಾಜನೇ, ನೀನು ಸೂರ್ಯನನ್ನು ಪ್ರಾರ್ಥನೆಮಾಡು. ನಿನಗವನು ಯಾಗಭೂಮಿಯನ್ನು ಕೊಡುವನು. ಎಂದು ಹೇಳಿದನು.

೧೦. ವಸಿಷ್ಠನ ಮಾತಿನಂತೆ ಅಭಿಷ್ಟುತನು ದೇವದೇವನಾದ ಸೂರ್ಯನನ್ನು ಶ್ರದ್ಧಾಭಕ್ತಿಯಿಂದ ಪಾರ್ಥಿಸಿದನು.

೧೧. ಎಲೈ ಸೂರ್ಯನೇ, ನಿನಗೆ ನಮಸ್ಕಾರವು. ನೀನು ನನಗೆ ದೇವತೆಗಳ ಯಜ್ಞಭೂಮಿಯನ್ನು ಕೊಡು ಎಂದು ಕೇಳಿಕೊಂಡನು.

೧೨. ಕ್ಷತ್ರಿಯರ ದೈವತೆಯಾದುದರಿಂದ ಆ ಸೂರ್ಯನು ಅಭಿಷ್ಟುತನ ಸ್ತೋತ್ರಕ್ಕೆ ಸಂತುಷ್ಟನಾಗಿ ಅವನಿಗೆ ಭೂಮಿಯನ್ನು ಕೊಡುವೆನೆಂದು ಹೇಳಿದನು.

೧೩-೧೪. ಅನಂತರ ಅಭಿಷ್ಟುತನು ವೇದಪಾರಂಗತರಾದ ಬ್ರಾಹ್ಮಣರೊಂದಿಗೆ ಅಶ್ವಮೇಧ ಯಜ್ಞವನ್ನು ಪ್ರಾರಂಭಿಸಿದನು. ಆ ಸಮಯಕ್ಕೆ ಸರಿ

ಪ್ರಾರಬ್ಧೇಽಭಿಷ್ಟುತಾ ರಾಜ್ಞಾ ಯತ್ರಾಗಾದ್ಭೂಪತಿಂ ರವಿಃ ।
ದೇವಾನಾಂ ಯುಜನಂ ದಾತುಂ ಭಾನುತೀರ್ಥಂ ತದುಚ್ಯತೇ ॥ ೧೪ ॥

ತಂ ದೇವಕ್ರತುಮುತ್ಕೃಷ್ಟಂ ಹಯಮೇಧಂ ಸುರೈರ್ಯುತಂ ।
ದೈತ್ಯಾಶ್ಚ ದನುಜಾಶ್ಚೈವ ತಥಾನ್ಯೇ ಯಜ್ಞಘಾತಕಾಃ ॥ ೧೫ ॥

ಬ್ರಹ್ಮವೇಷಧರಾಃ ಸರ್ವೇ ಗಾಯಂತಃ ಸಾಮಗಾ ಇವ ।
ತೇಽಪಿ ತತ್ರ ಮಹಾಪ್ರಾಜ್ಞಾಃ ಪ್ರಾವಿಶನ್ನನಿವಾರಿತಾಃ ॥ ೧೬ ॥

ಚಮಸಾನಿ ಚ ಪಾತ್ರಾಣಿ ಸೋಮಂ ಚಷಾಲಮೇವ ಚ ।
ಸೋಮಪಾನಂ ಹವಿಸ್ತ್ಯಾಗಮೃತ್ವಿಜೋ ಭೂಪತಿಂ ತಥಾ ॥ ೧೭ ॥

ನಿಂದಂತಿ ನಿಕ್ಷಿಪಂತ್ಯನ್ಯೇ ಹಸಂತ್ಯನ್ಯೇ ತಥಾಸುರಾಃ ।
ತೇಷಾಂ ಚೇಷ್ಟಾಂ ನ ಜಾನಂತಿ ವಿಶ್ವರೂಪಂ ವಿನಾ ಮುನೇ ॥ ೧೮ ॥

ಯಾಗಿ ಅಲ್ಲಿಗೆ ಸೂರ್ಯನು ಬಂದು ದೇವತೆಗಳ ಯಜನವನ್ನು ಕೊಟ್ಟನು. ಆ ತೀರ್ಥಕ್ಕೆ ಭಾನುತೀರ್ಥವೆಂದು ಹೆಸರಾಯಿತು.

೧೫-೧೬. ಇಂತಹ ದೇವಯಜ್ಞವಾದ ಅಶ್ವಮೇಧಕ್ಕೆ ಅನೇಕದೇವತೆಗಳು ಬಂದಿದ್ದರು. ಇದನ್ನೆಲ್ಲಾ ನೋಡಿ ಅನೇಕ ದೈತ್ಯರೂ, ದಾನವರೂ ಬ್ರಾಹ್ಮಣವೇಷವನ್ನು ಧರಿಸಿಕೊಂಡು ಸಾಮಗಾನವನ್ನು ಹಾಡುತ್ತಾ ಮಹಾಜ್ಞಾನಿಗಳಂತೆ ಯಜ್ಞಶಾಲೆಯನ್ನು ಪ್ರವೇಶಿಸಿದರು. ಯಾರೂ ಇವರನ್ನು ತಡೆಯಲಿಲ್ಲ.

೧೭-೧೮. ಆ ಯಾಗಶಾಲೆಯಲ್ಲಿ ಕುಳಿತುಕೊಂಡು ಚಮಸಪಾತ್ರೆಗಳನ್ನೂ, ಸೋಮಲತೆಗಳನ್ನೂ, ಸೋಮಪಾನಮಾಡುವುದನ್ನೂ, ಋತ್ವಿಜರನ್ನೂ, ರಾಜನನ್ನೂ ಸಹ ನಿಂದಿಸುತ್ತಾ, ಹಾಸ್ಯಮಾಡುತ್ತಾ ಕುಳಿತಿದ್ದರು. ಅವರ ಕುಚೇಷ್ಟೆಯು ಯಾರಿಗೂ ತಿಳಿಯಲಾಗಲಿಲ್ಲ. ಆದರೆ ತ್ವಷ್ಟೃಪ್ರಜಾಪತಿಯ ಮಗನಾದ ವಿಶ್ವರೂಪನು ಮಾತ್ರ ಇವರು ರಾಕ್ಷಸರೆಂದು ತಿಳಿದನು.

ವಿಶ್ವರೂಪೋಽಪಿ ಪಿತರಂ ಪ್ರಾಹ ದೈತ್ಯಾ ಇಮೇ ಇತಿ ।
ತತ್ಪುತ್ರವಚನಂ ಶ್ರುತ್ವಾ ತ್ವಷ್ಟಾ ಪ್ರಾಹ ಸುರಾನಿದಂ ॥ ೧೯ ॥

॥ ತ್ವಷ್ಟೋವಾಚ ॥

ಗೃಹೀತ್ವಾ ವಾರಿದರ್ಭಾಂಶ್ಚ ಪ್ರೋಕ್ಷಯಧ್ವಂ ಸಮಂತತಃ ।
ಯೇ ನಿಂದಂತಿ ಮಖಂ ಪುಣ್ಯಂ ಚಮಸಂ ಸೋಮಮೇವ ಚ ॥ ೨೦ ॥

ಮಯಾ ತ್ವಪಹತಾಃ ಸರ್ವ ಇತ್ಯುಕ್ತ್ವಾ ಪರಿಷಿಂಚತ ।

॥ ಬ್ರಹ್ಮೋವಾಚ ॥

ತಥಾ ಚಕ್ರುಃ ಸುರಗಣಾಸ್ತ್ವಷ್ಟಾ ಚಾಪಿ ತಥಾಕರೋತ್ ।
ಭಸ್ಮೀಭೂತಾಸ್ತತಃ ಸರ್ವೇ ಕಾಂದಿಶೀಕಾಸ್ತತೋಽಭವನ್ ॥ ೨೧ ॥

ಹತಾ ಮಯಾ ಮಹಾಪಾಪಾ ಇತ್ಯುಕ್ತ್ವಾ ವಾರ್ಯವಾಕ್ಷಿಪತ್ ।
ತತಃ ಕ್ಷೀಣಾಯುಷೋ ದೈತ್ಯಾಃ ಪ್ರಾತಿಷ್ಠನ್ಕುಪಿತಾಸ್ತತಃ ॥ ೨೨ ॥

---

೧೯. ಇವರೆಲ್ಲರೂ ರಾಕ್ಷಸರೆಂದು ತನ್ನ ತಂದೆಗೆ ಹೇಳಿದನು. ಮಗನ ಮಾತನ್ನು ಕೇಳಿ ತ್ವಷ್ಟೃವು ದೇವತೆಗಳನ್ನು ಕುರಿತು—

೨೦-೨೧. ನೀರನ್ನೂ ದರ್ಭೆಯನ್ನೂ ಯಾಗಭೂಮಿಯ ಸುತ್ತಲೂ ಪ್ರೋಕ್ಷಿಸಿರಿ. ಯಾರು ಚಮಸವನ್ನೂ, ಯಾಗವನ್ನೂ, ಸೋಮನನ್ನೂ ನಿಂದಿಸ ವರೋ ಅವರು ನಾಶವಾಗಲಿ ಎಂದು ಪ್ರೋಕ್ಷಿಸಿ ಎಂದು ಹೇಳಿದನು.

೨೨-೨೩. ಆರೀತಿಯಾಗಿಯೇ ದೇವತೆಗಳೂ, ತ್ವಷ್ಟೃವೂ ದರ್ಭೆ ಯನ್ನೂ ನೀರನ್ನೂ ಮಂತ್ರಿಸಿ ಮಹಾಪಾಪಿಗಳಾದ ದೈತ್ಯರೆಲ್ಲರೂ ನಾಶವಾಗಲಿ ಎಂದು ಪ್ರೋಕ್ಷಿಸಿದರು. ಅದರಿಂದ ಅನೇಕ ರಾಕ್ಷಸರು ಬೂದಿಯಾದರು. ಕೆಲವರು ಹೆದರಿ ಓಡಿಹೋದರು. ಕೆಲವರ ಆಯುಸ್ಸು ಕ್ಷೀಣವಾಯಿತು. ಇದ ರಿಂದ ರಾಕ್ಷಸರೆಲ್ಲರೂ ಅತ್ಯಂತ ಕೋಪಾವಿಷ್ಟರಾದರು.

ಯತ್ರೈತತ್ಪ್ರೋಕ್ಷಿತದ್ವಾರಿ ತ್ವಷ್ಟ್ರಾ ಲೋಕಪ್ರಜಾಪತಿಃ ।
ತ್ವಾಷ್ಟ್ರಂ ತೀರ್ಥಂ ತದಾಖ್ಯಾತಂ ಸರ್ವಪಾಪಪ್ರಣಾಶನಂ ॥ ೨೪ ॥

ತ್ವಷ್ಟುರ್ವಾಕ್ಯಾಚ್ಚ್ಯುತಾನ್ ದೈತ್ಯಾನ್ನಿ ಜಘಾನ ಯಮಸ್ತದಾ ।
ಕಾಲದಂಡೇನ ಚಕ್ರೇಣ ಕಾಲಪಾಶೇನ ಮನ್ಯುನಾ ॥ ೨೫ ॥

ಯತ್ರ ತೇ ನಿಹತಾ ದೈತ್ಯಾಸ್ತತ್ತೀರ್ಥಂ ಯಾಮ್ಯಮುಚ್ಯತೇ ।
ಯತ್ರಾಭವತ್ಕ್ರತುಃ ಪೂರ್ಣೋ ಹುತ್ವಾಗ್ನೌ ಚಾಮೃತಂ ಬಹು ॥ ೨೬ ॥

ಧಾರಾಭಿಃ ಶರಮಾನಾಭಿರಖಂಡಾಭಿರ್ಮಹಾಧ್ವರೇ ।
ಯತ್ರಾಭವದ್ಧವ್ಯವಾಹಸ್ತೃಪ್ತಸ್ತತ್ರ ಹ್ಯಭಿಷ್ಟುತಃ ॥ ೨೭ ॥

ಅಗ್ನಿತೀರ್ಥಂ ತದಾಖ್ಯಾತಮಶ್ವಮೇಧಫಲಪ್ರದಂ ।
ಇಂದ್ರೋ ಮರುದ್ಭಿರ್ನೃಪತಿಂ ಪ್ರಾಹೇದಂ ವಚನಂ ಶುಭಂ ॥ ೨೮ ॥

ತ್ವಂ ಸಂಮ್ರಾಡ್ಭವಿತಾ ರಾಜನ್ನುಭಯೋರಪಿ ಲೋಕಯೋಃ ।
ಸಖಾ ಮಮ ಪ್ರಿಯೋ ನಿತ್ಯಂ ಭವಿತಾ ನಾತ್ರ ಸಂಶಯಃ ॥ ೨೯ ॥

---

೨೪. ತ್ವಷ್ಟೃವು ತೀರ್ಥವನ್ನು ಪ್ರೋಕ್ಷಿಸಿದ ಸ್ಥಳಕ್ಕೆ ತ್ವಾಷ್ಟ್ರತೀರ್ಥವೆಂದು ಹೆಸರಾಯಿತು. ಇದರಲ್ಲಿ ಸ್ನಾನಮಾಡಿದರೆ ಪಾಪಗಳೆಲ್ಲವೂ ಪರಿಹಾರವಾಗುವುವು.

೨೫. ತ್ವಷ್ಟೃವಿನ ಮಾತನ್ನು ಕೇಳದೆ ಎದುರಿಸಿದ ರಾಕ್ಷಸರನ್ನು ಯಮನು ಕಾಲದಂಡದಿಂದಲೂ, ಚಕ್ರದಿಂದಲೂ, ಕಾಲಪಾಶದಿಂದಲೂ ಕೊಂದನು. ರಾಕ್ಷಸರು ಕೊಲ್ಲಲ್ಪಟ್ಟ ಆ ಸ್ಥಾನಕ್ಕೆ ಯಾಮ್ಯತೀರ್ಥವೆಂಬುದಾಗಿ ಹೆಸರಾಯಿತು.

೨೬-೨೭. ಆ ಯಜ್ಞವು ಪೂರ್ಣವಾಯಿತು. ಯಜ್ಞದಲ್ಲಿ ಅಗ್ನಿಗೆ ಧಾರಾಕಾರವಾಗಿ ಅಮೃತವನ್ನು ಕೊಟ್ಟು ತೃಪ್ತಿಪಡಿಸಿದರು. ಅಗ್ನಿಯು ಇದರಿಂದ ತೃಪ್ತನಾದುದರಿಂದ ಈ ಸ್ಥಳಕ್ಕೆ ಅಗ್ನಿತೀರ್ಥವೆಂದು ಹೆಸರಾಯಿತು. ಇದು ಅಶ್ವಮೇಧಫ ಫಲವನ್ನು ಕೊಡುವುದು.

೨೮-೨೯. ಆ ಸಮಯದಲ್ಲಿ ಇಂದ್ರನು ಸಪ್ತಮರುತ್ತುಗಳೊಡಗೂಡಿ ಆ ಅಭಿಷ್ಟುತನನ್ನು ಕುರಿತು—ನೀನು ದೇವಮರ್ತ್ಯಲೋಕಗಳೆರಡರಲ್ಲಿಯೂ ಚಕ್ರವರ್ತಿ ಪದವಿಯನ್ನು ಹೊಂದುವೆ. ನೀನು ನನ್ನ ಸ್ನೇಹಿತನು. ನನಗೆ ಪ್ರೀತಿಪಾತ್ರನಾದವನು. ಇದರಲ್ಲಿ ಸಂಶಯವಿಲ್ಲ ಎಂದು ಹೇಳಿದನು.

ಸ ಕೃತಾರ್ಥೋ ಮರ್ತ್ಯಲೋಕೇ ಇಂದ್ರತೀರ್ಥೇ ಚ ತರ್ಪಣಂ ।
ಕುರ್ಯಾತ್ಪಿತೄಣಾಂ ಪ್ರೀತ್ಯರ್ಥಂ ಯಮತೀರ್ಥೇ ವಿಶೇಷತಃ ॥ ೩೦ ॥

ಮಾಹೇಶ್ವರಂ ತು ತತ್ತೀರ್ಥಂ ಪೂಜಿತೋಽಭಿಷ್ಟುತಃ ಶಿವಃ ।
ಭಕ್ತಿಯುಕ್ತೇನ ವಿಪ್ರೈಶ್ಚ ಸರ್ವಕರ್ಮವಿಶಾರದೈಃ ॥ ೩೧ ॥

ವೈದಿಕೈರ್ಲೌಕಿಕೈಶ್ಚೈವ ಮಂತ್ರೈಃ ಪೂಜ್ಯಂ ಮಹೇಶ್ವರಂ ।
ನೃತ್ಯೈರ್ಗೀತೈಸ್ತಥಾ ವಾದ್ಯೈರಮೃತೈಃ ಪಂಚಸಂಭವೈಃ ॥ ೩೨ ॥

ಉಪಚಾರೈಶ್ಚ ಬಹುಭಿರ್ದಂಡಪಾತಪ್ರದಕ್ಷಿಣೈಃ ।
ಧೂಪೈರ್ದೀಪೈಶ್ಚ ನೈವೇದ್ಯೈಃ ಪುಷ್ಪೈರ್ಗಂಧೈಃ ಸುಗಂಧಿಭಿಃ ॥ ೩೩ ॥

ಪೂಜಯಾಮಾಸ ದೇವೇಶಂ ವಿಷ್ಣುಂ ಶಂಭುಂ ಧಿಯೈಕಯಾ ।
ತತಃ ಪ್ರಸನ್ನೌ ದೇವೇಶೌ ವರಾನ್ದದತುರೋಜಸಾ ॥ ೩೪ ॥

ಅಭಿಷ್ಟುತೇ ನರೇಂದ್ರಾಯ ಭುಕ್ತಿಮುಕ್ತೀ ಉಭೇ ಅಪಿ ।
ಮಾಹಾತ್ಮ್ಯಮಸ್ಯ ತೀರ್ಥಸ್ಯ ತಥಾ ದದತುರುತ್ತಮಂ ॥ ೩೫ ॥

---

೩೦. ಇಂದ್ರ ತೀರ್ಥದಲ್ಲಿ ತರ್ಪಣವನ್ನು ಪಿತೃಗಳ ಪ್ರೀತ್ಯರ್ಥವಾಗಿ ಯಾವ ಪುರುಷನು ಕೊಡುವನೋ ಅದರಲ್ಲಿಯೂ ಈ ಯಮತೀರ್ಥದಲ್ಲಿ ತರ್ಪಣಕೊಡುವನೋ ಅವನೇ ಕೃತಾರ್ಥನು.

೩೧-೩೪. ಅಭಿಷ್ಟುತನು ಮಾಹೇಶ್ವರತೀರ್ಥವನ್ನು ಭಕ್ತಿಯಿಂದ ಪೂಜಿಸಿದನು. ಅವನ ಜೊತೆಯಲ್ಲಿ ಅನೇಕ ಬ್ರಾಹ್ಮಣರೂ, ಲೌಕಿಕರೂ, ವೈದಿಕರೂ ಸಹ ಅನೇಕಮಂತ್ರಗಳಿಂದಲೂ, ನೃತ್ಯ, ವಾದ್ಯ, ಗೀತಗಳಿಂದಲೂ, ಅನೇಕ ಉಪಚಾರಗಳಿಂದಲೂ, ಪ್ರದಕ್ಷಿಣೆ ನಮಸ್ಕಾರಗಳಿಂದಲೂ, ಧೂಪದೀಪನೈವೇದ್ಯಗಳಿಂದಲೂ, ಪರಿಮಳವಾದ ಪುಷ್ಪಗಳಿಂದಲೂ ಶಿವನನ್ನೂ, ವಿಷ್ಣುವನ್ನೂ, ಪೂಜಿಸಿದರು. ಆ ಪೂಜೆಯಿಂದ ಆ ದೇವತೆಗಳೂ ಪ್ರಸನ್ನರಾಗಿ ಅವರವರಿಗಿಷವಾದ ವರಗಳನ್ನು ಕೊಟ್ಟರು.

೩೫-೩೬. ಅಭಿಷ್ಟುತರಾಜನಿಗೆ ವಿಷ್ಣು, ಶಿವ ಇಬ್ಬರೂ ಭುಕ್ತಿಯನೂ ಮುಕ್ತಿಯನ್ನೂ ಕೊಟ್ಟರು. ಹಾಗೂ ಆ ತೀರ್ಥಕ್ಕೂ ಒಳ್ಳೆಯಮಾಹಾತ್ಮೆ ಬರು

ತತಃಪ್ರಭೃತಿ ತತ್ತೀರ್ಥಂ ಶೈವಂ ವೈಷ್ಣವಮುಚ್ಯತೇ ।
ತತ್ರ ಸ್ನಾನಂ ಚ ದಾನಂ ಚ ಸರ್ವಕಾಮಪ್ರದಂ ವಿದುಃ ॥ ೩೬ ॥

ಇಮಾನಿ ಸರ್ವತೀರ್ಥಾನಿ ಸ್ಮರೇದಪಿ ಪಠೇತ ವಾ ।
ವಿಮುಕ್ತಃ ಸರ್ವಪಾಪೇಭ್ಯಃ ಶಿವವಿಷ್ಣುಪುರಂ ವ್ರಜೇತ್ ॥ ೩೭ ॥

ಭಾನುತೀರ್ಥೇ ವಿಶೇಷೇಣ ಸ್ನಾನಂ ಸರ್ವಾರ್ಥಸಿದ್ಧಿದಂ ।
ತತ್ರ ತೀರ್ಥೇ ಮಹಾಪುಣ್ಯಂ ತೀರ್ಥಾನಾಂ ಶತಮತ್ರ ಹಿ ॥ ೩೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಭಾನ್ವಾದಿಶತತೀರ್ಥವರ್ಣನಂ ನಾಮಾಷ್ಟಷಷ್ಟ್ಯಧಿಕ
ಶತತಮೋಽಧ್ಯಾಯಃ

ವಂತೆ ಅನುಗ್ರಹಿಸಿದರು. ಅಂದಿನಿಂದ ಆ ತೀರ್ಥಕ್ಕೆ ಶೈವತೀರ್ಥವೆಂದೂ ವೈಷ್ಣವತೀರ್ಥವೆಂದೂ ಹೆಸರಾಯಿತು. ಅಲ್ಲಿ ಸ್ನಾನದಾನಗಳನ್ನು ಮಾಡಿದರೆ ಸರ್ವೇಷ್ಟಾರ್ಥಗಳೂ ಸಿದ್ಧಿಸುವುವು.

೩೭-೩೮. ಈ ತೀರ್ಥಗಳ ವಿಷಯವನ್ನು ಸ್ಮರಿಸಿದರೂ ಅಥವಾ ಓದಿದರೂ ಪಾಪಗಳೆಲ್ಲವೂ ನಾಶವಾಗಿ ಶಿವಲೋಕವಾಗಲೀ, ವಿಷ್ಣುಲೋಕವಾಗಲೀ, ಲಭಿಸುವುದು. ಭಾನು ತೀರ್ಥದಲ್ಲಿ ಸ್ನಾನಮಾಡಿದರಂತೂ ಸರ್ವೇಷ್ಟಾರ್ಥಗಳೂ ಸಿದ್ಧಿಸುವುವು. ಇಂತಹ ಪರಮಪವಿತ್ರವಾದ ತೀರ್ಥಗಳ ಸಮೀಪದಲ್ಲಿ ಇನ್ನೂ ನೂರಾರು ತೀರ್ಥಗಳಿರುವುವು.

ಶ್ರೀಬ್ರಹ್ಮಪುರಾಣದಲ್ಲಿ ಭಾನುತೀರ್ಥವೇ ಮೊದಲಾದ ನೂರುತೀರ್ಥಗಳ ವರ್ಣನ
ವೆಂಬ ನೂರರವತ್ತೆಂಟನೆಯ ಅಧ್ಯಾಯವು ಮುಗಿದುದು

ಗೌತಮೀಯಮಾಹಾತ್ಮ್ಯೆಯಲ್ಲಿ ತೊಂಭತ್ತೊಂಭತ್ತನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅ ಥ ಮ ಹಾ ಪು ರಾ ಣೇ ಬ್ರಾ ಹ್ಮೇ

ಏಕೋನಸಪ್ತತ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಭಿಲ್ಲತೀರ್ಥಮಿತಿ ಖ್ಯಾತಂ ರೋಗಘ್ನಂ ಪಾಪನಾಶನಂ ।
ಮಹಾದೇವಪದಾಂಭೋಜಯುಗಭಕ್ತಿಪ್ರದಾಯಕಂ ॥ ೧ ॥

ತತ್ರಾಪ್ಯೇವಂವಿಧಾಂ ಪುಣ್ಯಾಂ ಕಥಾಂ ಶೃಣು ಮಹಾಮತೇ ।
ಗಂಗಾಯಾ ದಕ್ಷಿಣೇ ತೀರೇ ಶ್ರೀಗಿರೇರುತ್ತರೇ ತಟೇ ॥ ೨ ॥

ಆದಿಕೇಶ ಇತಿ ಖ್ಯಾತ ಋಷಿಭಿಃ ಪರಿಪೂಜಿತಃ ।
ಮಹಾದೇವೋ ಲಿಂಗರೂಪೀ ಸದಾಸ್ತೇ ಸರ್ವಕಾಮದಃ ॥ ೩ ॥

ಸಿಂಧುದ್ವೀಪ ಇತಿ ಖ್ಯಾತೋ ಮುನಿಃ ಪರಮಧಾರ್ಮಿಕಃ ।
ತಸ್ಯ ಭ್ರಾತಾ ವೇದ ಇತಿ ಸ ಚಾಪಿ ಪರಮೋ ಋಷಿಃ ॥ ೪ ॥

ನೂರರವತ್ತೊಂಭತ್ತನೆಯ ಅಧ್ಯಾಯವು

೧. ಭೀಮತೀರ್ಥವೆಂದು ಹೆಸರಾದ ಒಂದು ತೀರ್ಥವಿರುವುದು. ಅದರಲ್ಲಿ ಸ್ನಾನಮಾಡಿದರೆ ರೋಗಗಳೂ, ಪಾಪಗಳೂ ನಾಶವಾಗುವುವು. ಇದರ ವಿಷಯವಾಗಿ ಒಂದು ಪುಣ್ಯತಮವಾದ ಕಥೆಯನ್ನು ಹೇಳುವೆನು. ಇದನ್ನು ಕೇಳಿದರೆ ಪರಮೇಶ್ವರನ ಪಾದಾರವಿಂದಗಳಲ್ಲಿ ಭಕ್ತಿಯುಂಟಾಗುವುದು.

೨-೫. ಗಂಗಾನದಿಯ ದಕ್ಷಿಣತಟದಲ್ಲಿರುವ ಶ್ರೀಗಿರಿಯ ಉತ್ತರಭಾಗದಲ್ಲಿ ಆದಿಕೇಶನೆಂದು ಹೆಸರುಳ್ಳ ಲಿಂಗರೂಪಿಯಾದ ಪರಮೇಶ್ವರನು ಇರುವನು. ಅವನನ್ನು ಋಷಿಗಳೆಲ್ಲರೂ ಭಕ್ತಿಯಿಂದ ಪೂಜಿಸುವರು. ಅದೇ ಸ್ಥಳದಲ್ಲಿ ಸಿಂಧು

ತಮಾದಿಕೇಶಂ ವೈ ದೇವಂ ತ್ರಿಪುರಾರಿಂ ತ್ರಿಲೋಚನಂ ।
ನಿತ್ಯಂ ಪೂಜಯತೇ ಭಕ್ತ್ಯಾ ಪ್ರಾಪ್ತೇ ಮಧ್ಯಂದಿನೇ ರವೌ ॥ ೫ ॥

ಭಿಕ್ಷಾಟನಾಯ ವೇದೋಽಪಿ ಯಾತಿ ಗ್ರಾಮಂ ವಿಚಕ್ಷಣಃ ।
ಯಾತೇ ತಸ್ಮಿನ್ದ್ವಿಜವರೇ ವ್ಯಾಧಃ ಪರಮಧಾರ್ಮಿಕಃ ॥ ೬ ॥

ತಸ್ಮಿನ್ಗಿರಿವರೇ ಪುಣ್ಯೇ ಮೃಗಯಾಂ ಯಾತಿ ನಿತ್ಯಶಃ ।
ಅಟಿತ್ವಾ ವಿವಿಧಾನ್ದೇಶಾನ್ಮೃಗಾನ್ಹತ್ವಾ ಯಥಾಸುಖಂ ॥ ೭ ॥

ಮುಖೇ ಗೃಹೀತ್ವಾ ಪಾನೀಯಮಭಿಷೇಕಾಯ ಶೂಲಿನಃ ।
ನ್ಯಸ್ಯ ಮಾಂಸಂ ಧನುಷ್ಕೋಟ್ಯಾಂ ಶ್ರಾಂತೋ ವ್ಯಾಧಃ ಶಿವಂ ಪ್ರಭುಂ ॥ ೮ ॥

ಆದಿಕೇಶಂ ಸಮಾಗತ್ಯ ನ್ಯಸ್ಯ ಮಾಂಸಂ ತತೋ ಬಹಿಃ ।
ಗಂಗಾಂ ಗತ್ವಾ ಮುಖೇ ವಾರಿ ಗೃಹೀತ್ವಾಗತ್ಯ ತಂ ಶಿವಂ ॥ ೯ ॥

ಯಸ್ಯ ಕಸ್ಯಾಪಿ ಪತ್ರಾಣಿ ಕರೇಣಾದಾಯ ಭಕ್ತಿತಃ ।
ಅಪರೇಣ ಚ ಮಾಂಸಾನಿ ನೈವೇದ್ಯಾರ್ಥಂ ಚ ತನ್ಮನಾಃ ॥ ೧೦ ॥

ದ್ವೀಪನೆಂಬ ಒಬ್ಬ ಪ್ರಸಿದ್ಧನೂ ಪರಮಧಾರ್ಮಿಕನೂ ಆದ ಋಷಿಯಿದ್ದನು. ಅವನಿಗೆ ವೇದನೆಂಬ ತಮ್ಮನಿದ್ದನು. ಅವರಿಬ್ಬರೂ ಪ್ರತಿದಿನವೂ ಮಧ್ಯಾಹ್ನ ಸಮಯದಲ್ಲಿ ಆ ಆದಿಕೇಶಸ್ವಾಮಿಯನ್ನು ಭಕ್ತಿಯಿಂದ ಪೂಜಿಸುತ್ತಿದ್ದರು.

೬-೭. ಆ ವೇದನೂ ಭಿಕ್ಷಕ್ಕೋಸ್ಕರ ಸಮೀಪದ ಗ್ರಾಮಗಳಿಗೆ ಹೋಗುತ್ತಿದ್ದನು. ಅದೇ ಸಮಯದಲ್ಲಿ ಅಲ್ಲಿಗೆ ಒಬ್ಬ ಬೇಡನು ಬರುತ್ತಿದ್ದನು. ಅವನು ಪರಮಧಾರ್ಮಿಕನಾಗಿದ್ದನು. ಪ್ರತಿದಿನವೂ ಶ್ರೀಗಿರಿಗೆ ಮೃಗಗಳನ್ನು ಬೇಟೆಯಾಡಲು ಹೋಗುತ್ತಿದ್ದನು. ಆ ಪ್ರದೇಶದಲ್ಲೆಲ್ಲಾ ತಿರುಗಿ ಮೃಗಗಳನ್ನು ಕೊಂದು ಸುಖವಾಗಿ ಜೀವಿಸುತ್ತಿದ್ದನು.

೮-೧೦. ಆ ವ್ಯಾಧನು ಗಂಗಾನದಿಗೆ ಹೋಗಿ ತನ್ನ ಬಾಯಿಯಲ್ಲಿ ನೀರನ್ನು ತುಂಬಿಕೊಂಡು ಒಂದು ಕೈಯಲ್ಲಿ ಪತ್ರೆಗಳನ್ನೂ ಮತ್ತೊಂದು ಕೈಯಲ್ಲಿ ಶಿವನಿಗೆ ನೈವೇದ್ಯಮಾಡಲು ಮಾಂಸವನ್ನೂ ತೆಗೆದುಕೊಂಡು ಆದಿಕೇಶವನನ್ನು ಪೂಜಿಸಲು ಬಂದನು.

ಆದಿಕೇಶಂ ಸಮಾಗತ್ಯ ವೇದೇನಾರ್ಚಿತಮೋಜಸಾ ।
ಪಾದೇನಾಹತ್ಯ ತಾಂ ಪೂಜಾಂ ಮುಖಾನೀತೇನ ವಾರಿಣಾ ॥ ೧೧ ॥

ಸ್ನಾಪಯಿತ್ವಾ ಶಿವಂ ದೇವಮರ್ಚಯಿತ್ವಾ ತು ಪತ್ರಕೈಃ ।
ಕಲ್ಪಯಿತ್ವಾ ತು ತನ್ಮಾಂಸಂ ಶಿವೋ ಮೇ ಪ್ರೀಯತಾಮಿತಿ ॥ ೧೨ ॥

ನೈವ ಕಿಂಚಿತ್ಸ ಜಾನಾತಿ ಶಿವಭಕ್ತಿಂ ವಿನಾ ಶುಭಾಂ ।
ತತೋ ಯಾತಿ ಸ್ವಕಂ ಸ್ಥಾನಂ ಮಾಂಸೇನ ತು ಯಥಾಗತಂ ॥ ೧೩ ॥

ಕರೋತ್ಯೇತಾದೃಗಾಗತ್ಯಾಗತ್ಯ ಪ್ರತ್ಯಹಮೇವ ಸಃ ।
ತಥಾಪೀಶಸ್ತುತೋಷಾಸ್ಯ ವಿಚಿತ್ರಾ ಹೀಶ್ವರಸ್ಥಿತಿಃ ॥ ೧೪ ॥

ಯಾವನ್ನಾಯಾತ್ಯಸೌ ಭಿಲ್ಲಃ ಶಿವಸ್ತಾವನ್ನ ಸೌಖ್ಯಭಾಕ್ ।
ಭಕ್ತಾನುಕಂಪಿತಾಂ ಶಂಭೋರ್ಮಾನಾತೀತಾಂ ತು ವೇತ್ತಿ ಕಃ ॥ ೧೫ ॥

೧೧-೧೩. ಅಲ್ಲಿ ಸಿಂಧುದ್ವೀಪನು ವೇದೋಕ್ತವಾಗಿ ಪೂಜಿಸಿರಲು ಅದನ್ನು ಕಾಲಿನಿಂದ ತಳ್ಳಿ ಬಾಯಲ್ಲಿ ತುಂಬಿಕೊಂಡು ಬಂದಿರುವ ನೀರಿನಿಂದ ಆ ಶಿವನಿಗೆ ಅಭಿಷೇಕಮಾಡಿ ತಂದ ಪತ್ರೆಗಳಿಂದ ಪೂಜಿಸಿ ಮಾಂಸವನ್ನು ನಿವೇದಿಸುತ್ತಿದ್ದನು. ಆ ವ್ಯಾಧನು ಶಿವಭಕ್ತಿಯನ್ನು ಹೊರತು ಇನ್ನೇನನ್ನೂ ತಿಳಿದಿರಲಿಲ್ಲ. ಈ ರೀತಿಯಾಗಿ ಪ್ರತಿದಿನವೂ ಪೂಜಿಸಿ ತನ್ನ ಮನೆಗೆ ಹೋಗುತ್ತಿದ್ದನು.

೧೪-೧೫. ಅವನ ಪೂಜೆಗೆ ಪರಮೇಶ್ವರನು ತೃಪ್ತಿಗೊಂಡನು. ಮಹಾದೇವನ ಸ್ಥಿತಿಯು ವಿಚಿತ್ರವಾದುದು. ಆ ಭಿಲ್ಲನು ಎಂದು ಪೂಜೆಗೆ ಬರುತ್ತಿರಲಿಲ್ಲವೋ ಅಂದು ಶಿವನು ಸುಖಿಯಾಗಿರುತ್ತಿರಲಿಲ್ಲ. ಎಷ್ಟೇ ಆಗಲಿ ಭಕ್ತಪರಾಧೀನನಲ್ಲವೇ, ಆ ಪರಮೇಶ್ವರನು? ಆ ಪರಮೇಶ್ವರನ ಅಗಾಧವಾದ ವಿಷಯವನ್ನು ಯಾರುತಾನೇ ತಿಳಿಯಲು ಸಮರ್ಥನು? ಪ್ರತಿದಿನವೂ ಆ ಆದಿಕೇಶನನ್ನು ಆ ವ್ಯಾಧನು ಈರೀತಿ ಪೂಜಿಸುತ್ತಿದ್ದನು.

ಸಂಪೂಜಯಿತ್ವಾದಿಕೇಶಮುಮಯಾ ಪ್ರತ್ಯಹಂ ಶಿವಂ ।
ಏವಂ ಬಹುತಿಥೇ ಕಾಲೇ ಯಾತೇ ವೇದಶ್ಚುಕೋಪ ಹ ॥ ೧೬ ॥

ಪೂಜಾಂ ಮಂತ್ರವತೀಂ ಚಿತ್ರಾಂ ಶಿವಭಕ್ತಿಸಮನ್ವಿತಾಂ ।
ಕೋ ನು ವಿಧ್ವಂಸತೇ ಪಾಪೋ ಮತ್ತಃ ಸ ವಧಮಾಪ್ನುಯಾತ್ ॥ ೧೭ ॥

ಗುರುದೇವದ್ವಿಜಸ್ವಾಮಿದ್ರೋಹೀ ವಧ್ಯೋ ಮುನೇರಪಿ ।
ಸರ್ವಸ್ಯಾಪಿ ವಧಾರ್ಹೋऽಸೌ ಶಿವಸ್ಯ ದ್ರೋಹಕೃನ್ನರಃ ॥ ೧೮ ॥

ಏವಂ ನಿಶ್ಚಿತ್ಯ ಮೇಧಾವೀ ವೇದಃ ಸಿಂಧೋಸ್ತಥಾನುಜಃ ।
ಕಸ್ಯೇಯಂ ಪಾಪಚೇಷ್ಟಾ ಸ್ಯಾತ್ಪಾಪಿಷ್ಠಸ್ಯ ದುರಾತ್ಮನಃ ॥ ೧೯ ॥

ಪುಷ್ಪೈರ್ವನ್ಯಭವೈರ್ದಿವ್ಯೈಃ ಕಂದೈರ್ಮೂಲಫಲೈಃ ಶುಭೈಃ ।
ಕೃತಾಂ ಪೂಜಾಂ ಸ ವಿಧ್ವಸ್ಯ ಹ್ಯನ್ಯಾಂ ಪೂಜಾಂ ಕರೋತಿ ಯಃ ॥ ೨೦ ॥

ಮಾಂಸೇನ ತರುಪತ್ರೈಶ್ಚ ಸ ಚ ವಧ್ಯೋ ಭವೇನ್ಮಮ ।
ಏವಂ ಸಂಚಿಂತ್ಯ ಮೇಧಾವೀ ಗೋಪಯಿತ್ವಾ ತನುಂ ತದಾ ॥ ೨೧ ॥

೧೬-೧೮. ಹೀಗೆಯೇ ಅನೇಕದಿವಸಗಳು ಕಳೆದುಹೋದವು. ಒಂದಾನೊಂದು ದಿನ ವೇದನು ಭಿಲ್ಲನು ಮಾಡಿರುವ ಪೂಜೆಯನ್ನು ನೋಡಿ ಕೋಪಗೊಂಡನು. ಇದೇನಿದು ? ಮಂತ್ರಪೂತವಾಗಿಯೂ, ಶಿವಭಕ್ತಿಯುತವಾಗಿಯೂ ನಾನು ಮಾಡಿರುವ ಪೂಜೆಯನ್ನು ಯಾವನು ನಾಶಮಾಡಿರುವನು ? ಅವನು ಎಂಥವನಾಗಲಿ ಅವನು ವಧಾರ್ಹನು. ಗುರು, ದೇವ, ಬ್ರಾಹ್ಮಣ, ಸ್ವಾಮಿ ಇವರುಗಳಿಗೆ ಯಾರು ದ್ರೋಹಮಾಡುವರೋ ಅವರು ಖಂಡಿತ ವಧಾರ್ಹರು.

೧೯-೨೧. ಈ ಕೆಲಸವನ್ನು ಯಾರು ಮಾಡಿರಬಹುದು ? ಯಾವ ಪಾಪಿಯು ಕಂದಮೂಲಫಲಗಳಿಂದಲೂ ಕಾಡುಹೂಗಳಿಂದಲೂ ಪೂಜಿಸಿರುವನು ? ನಾನು ಪೂಜಿಸಿರುವುದನ್ನು ಹಾಳುಮಾಡಿ ಮರದ ಎಲೆಗಳಿಂದ ಪೂಜಿಸಿ ಮಾಂಸವನ್ನು ನಿವೇದಿಸಿರುವನು. ಅವನನ್ನು ನಾನು ಖಂಡಿತ ವಧಿಸುವೆನು.

ತಂ ಪಶ್ಯೇಯಮಹಂ ಪಾಪಂ ಪೂಜಾಕರ್ತಾರಮೀಶ್ವರೇ ।
ಏತಸ್ಮಿನ್ನಂತರೇ ಪ್ರಾಯಾದ್ವ್ಯಾಧೋ ದೇವಂ ಯಥಾ ಪುರಾ ॥ ೨೨ ॥

ನಿತ್ಯವತ್ಪೂಜಯಂತಂ ತಮಾದಿಕೇಶಸ್ತದಾಬ್ರವೀತ್ ॥ ೨೩ ॥

॥ ಆದಿಕೇಶ ಉವಾಚ ॥

ಭೋ ಭೋ ವ್ಯಾಧ ಮಹಾಬುದ್ಧೇ ಶ್ರಾಂತೋಽಸೀತಿ ಪುನಃ ಪುನಃ ।
ಚಿರಾಯ ಕಥಮಾಯಾತಸ್ತ್ವಾಂ ವಿನಾ ತಾತ ದುಃಖಿತಃ ।
ನ ವಿಂದಾಮಿ ಸುಖಂ ಕಿಂಚಿತ್ಸಮಾಶ್ವಸಿಹಿ ಪುತ್ರಕ ॥ ೨೪ ॥

॥ ಬ್ರಹ್ಮೋವಾಚ ॥

ತಮೇವಂವಾದಿನಂ ದೇವಂ ವೇದಃ ಶ್ರುತ್ವಾ ವಿಲೋಕ್ಯ ತು ।
ಚುಕೋಪ ವಿಸ್ಮಯಾವಿಷ್ಟೋ ನ ಚ ಕಿಂಚಿದುವಾಚ ಹ ॥ ೨೫ ॥

ವ್ಯಾಧಶ್ಚ ನಿತ್ಯವತ್ಪೂಜಾಂ ಕೃತ್ವಾ ಸ್ವಭವನಂ ಯಯೌ ।
ವೇದಶ್ಚ ಕುಪಿತೋ ಭೂತ್ವಾ ಆಗತ್ಯೇಶಮುವಾಚ ಹ ॥ ೨೬ ॥

೨೨-೨೩. ಆ ಪಾಪಿಯು ಪೂಜೆಮಾಡುತ್ತಿರುವುದನ್ನು ನೋಡಿ ಅವನನ್ನು ಕೊಲ್ಲುವೆನು ಎಂದು ಯೋಚಿಸಿದನು. ಅಷ್ಟರಲ್ಲಿಯೇ ಎಂದಿನಂತೆ ಬೇಡನು ಶಿವನನ್ನು ಪೂಜಿಸಲು ಅಲ್ಲಿಗೆ ಬಂದನು. ಆಗ ಅವನನ್ನು ಕುರಿತು ಆದಿಕೇಶನು—

೨೪. ಎಲೈ ಮಹಾಜ್ಞಾನಿಯಾದ ವ್ಯಾಧನೇ, ನೀನು ಇಲ್ಲಿಗೆ ಬಂದು ಬಹಳ ದಿನಗಳಾಯಿತು. ನಿನ್ನನ್ನು ನೋಡದೆ ನಾನು ಬಹುದುಃಖಗೊಂಡಿರುವೆನು. ನನಗೆ ಸ್ವಲ್ಪವಾದರೂ ಸುಖವಿಲ್ಲ. ನೀನೀಗ ದಣಿದು ಬಂದಿರುವೆ. ಸ್ವಲ್ಪ ಸುಧಾರಿಸಿಕೋ ಎಂದನು.

೨೫-೨೬. ಈರೀತಿಯಾಗಿ ಆದಿಕೇಶನು ವ್ಯಾಧನೊಡನೆ ಹೇಳುತ್ತಿರುವುದನ್ನು ಕೇಳಿ ವೇದನಿಗೆ ತುಂಬಾ ಆಶ್ಚರ್ಯವಾಯಿತು. ಮಾತೇ ಹೊರಡದಂತಾಗಿ ಸುಮ್ಮನಾದನು. ಅನಂತರ ವ್ಯಾಧನು ದಿನದಂತೆ ಪೂಜೆಯನ್ನು ಮುಗಿಸಿಕೊಂಡು ತನ್ನ ಮನೆಗೆ ಹೊರಟುಹೋದನು. ಆಮೇಲೆ ವೇದನು ತುಂಬಾ ಕೋಪದಿಂದ ಬಂದು ಆದಿಕೇಶನನ್ನು ಕೇಳಿದನು.

॥ ವೇದ ಉವಾಚ ॥

ಅಯಂ ವ್ಯಾಧಃ ಪಾಪರತಃ ಕ್ರಿಯಾಜ್ಞಾನವಿವರ್ಜಿತಃ ।
ಪ್ರಾಣಿಹಿಂಸಾರತಃ ಕ್ರೂರೋ ನಿರ್ದಯಃ ಸರ್ವಜಂತುಷು ॥ ೨೭ ॥

ಹೀನಜಾತಿರಕಿಂಚಿಜ್ಞೋ ಗುರುಕ್ರಮವಿವರ್ಜಿತಃ ।
ಸದಾನುಚಿತಕಾರೀ ಚಾನಿರ್ಜಿತಾಖಿಲಗೋಗಣಃ ॥ ೨೮ ॥

ತಸ್ಯಾತ್ಮಾನಂ ದರ್ಶಿತವಾನ್ನ ಮಾಂ ಕಿಂಚನ ವಕ್ಷ್ಯಸಿ ।
ಪೂಜಾಂ ಮಂತ್ರವಿಧಾನೇನ ಕರೋಮೀಶ ಯತವ್ರತಃ ॥ ೨೯ ॥

ತ್ವದೇಕಶರಣೋ ನಿತ್ಯಂ ಭಾರ್ಯಾಪುತ್ರವಿವರ್ಜಿತಃ ।
ವ್ಯಾಧೋ ಮಾಂಸೇನ ದುಷ್ಟೇನ ಪೂಜಾಂ ತವ ಕರೋತ್ಯಸೌ ॥ ೩೦ ॥

೨೭-೨೮. ಓ ಸ್ವಾಮಿಯೇ, ಈ ವ್ಯಾಧನು ಪಾಪಿಯು, ಯಾವ ಕರ್ಮಾಚರಣೆಯನ್ನಾಗಲೀ ಮಾಡುವುದಿಲ್ಲ. ಜ್ಞಾನಿಯಲ್ಲ. ಅಯೋಗ್ಯವಾದ ಕೆಲಸಗಳನ್ನೇ ಮಾಡುವನು. ಪ್ರಾಣಿಹಿಂಸೆ ಮಾಡುವುದರಲ್ಲಿ ಇವನಿಗೆ ಬಹು ಆಸಕ್ತಿ. ಕ್ರೂರನು, ನಿರ್ದಯನು. ಹೀನಜಾತಿಯಲ್ಲಿ ಹುಟ್ಟಿದವನು. ಇವನಿಗೆ ಏನೂ ತಿಳಿಯುವುದಿಲ್ಲ. ಇವನು ಮಾಡಿರುವ ಪೂಜಾಕ್ರಮವು ಗುರೂಪದೇಶದ್ದಲ್ಲ. ಇಂಥವನಿಗೆ ನೀನು ನಿನ್ನ ಸ್ವರೂಪವನ್ನು ತೋರಿಸಿರುವೆಯಲ್ಲಾ.

೨೯-೩೦. ನಾನಾದರೋ ಮಂತ್ರಪೂರ್ವಕವಾಗಿ ಪೂಜಿಸಿರುವೆನು. ನೀನೇ ಗತಿ ಎಂದು ನಂಬಿರುವೆನು. ನಿನ್ನ ಪೂಜೆಯಲ್ಲಿಯೇ ಆಸಕ್ತನಾಗಿ ಹೆಂಡತಿ ಮಕ್ಕಳ ಆಸೆಯೂ ನನಗಿಲ್ಲ. ಆ ವ್ಯಾಧನಾದರೋ ಮಾಂಸವನ್ನು ನಿವೇದಿಸಿ ಅಪರಿಶುದ್ಧವಾಗಿ ಪೂಜಿಸುವನು. ಇದೇನಿದು? ಅವನಿಗೆ ಮಾತ್ರ ನೀನು ಪ್ರಸನ್ನನಾಗಿರುವೆ. ನಾನೇನು ತಪ್ಪು ಮಾಡಿರುವೆನು? ನನಗೆ ನೀನು ಪ್ರತ್ಯಕ್ಷನಾಗದಿರುವುದು ಬಹಳ ಆಶ್ಚರ್ಯಕರವಾಗಿರುವುದು.

ತಸ್ಯ ಪ್ರಸನ್ನೋ ಭಗವಾನ್ನ ಮನೋತಿ ಮಹಾದ್ಭುತಂ ।
ಶಾಸ್ತಿಮಸ್ಯ ಕರಿಷ್ಯಾಮಿ ಭಿಲ್ಲಸ್ಯ ಹ್ಯಪಕಾರಿಣಃ ॥ ೩೧ ॥
ಮೃದೋಃ ಕೋऽಪಿ ಭವೇತ್ಪ್ರೀತಃ ಕೋऽಪಿ ತದ್ವದ್ದುರಾತ್ಮನಃ ।
ತಸ್ಮಾದಹಂ ಮೂರ್ಧ್ನಿ ಶೀಲಾಂ ಪಾತಯೇಯಮಸಂಶಯಂ ॥ ೩೨ ॥

॥ ಬ್ರಹ್ಮೋವಾಚ ॥

ಇತ್ಯುಕ್ತವತಿ ವೈ ವೇದೇ ವಿಹಸ್ಯೇಶೋऽಬ್ರವೀದಿದಂ ॥ ೩೩ ॥

॥ ಆದಿಕೇಶ ಉವಾಚ ॥

ಶ್ವಃ ಪ್ರತೀಕ್ಷಸ್ವ ಪಶ್ಚಾನ್ಮೇ ಶಿಲಾಂ ಪಾತಯ ಮೂರ್ಧನಿ ॥ ೩೪ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಸ ವೇದೋऽಪಿ ಶಿಲಾಂ ಸಂತ್ಯಜ್ಯ ಬಾಹುನಾ ।
ಉಪಸಂಹೃತ್ಯ ತಂ ಕೋಪಂ ಶ್ವಃ ಕರೋಮೀತ್ಯುವಾಚ ಹ ॥ ೩೫ ॥
ತತಃ ಪ್ರಾತಃ ಸಮಾಗತ್ಯ ಕೃತ್ವಾ ಸ್ನಾನಾದಿಕರ್ಮ ಚ ।
ವೇದೋऽ ನಿತ್ಯವತ್ಪೂಜಾಂ ಕುರ್ವನ್ಪಶ್ಯತಿ ಮಸ್ತಕೇ ॥ ೩೬ ॥
ಲಿಂಗಸ್ಯ ಸವ್ರಣಾಂ ಭೀಮಾಂ ಧಾರಾಂ ಚ ರುಧಿರಪ್ಲುತಾಂ ।
ವೇದಃ ಸ ವಿಸ್ಮಿತೋ ಭೂತ್ವಾ ಕಿಮಿದಂ ಲಿಂಗಮೂರ್ಧನಿ ॥ ೩೭ ॥

೩೧-೩೨. ಆದುದರಿಂದ ಆ ಭಿಲ್ಲನಿಗೆ ತಕ್ಕದ್ದನ್ನು ಮಾಡುವೆನು. ಅವನು ಅಪಕಾರಿಯು. ಅಂಥವನಿಗೆ ಪ್ರತ್ಯಕ್ಷನಾಗಿರುವುದರಿಂದ ನಿನ್ನ ತಲೆಯಮೇಲೆ ಕಲ್ಲನ್ನು ಹಾಕಿ ಸಾಯಿಸುವೆನು ಎಂದನು.

೩೩-೩೪. ವೇದನು ಈರೀತಿಯಾಗಿ ಹೇಳಲು ಆದಿಕೇಶನು ನಗುತ್ತಾ ಆಪನನ್ನು ಕುರಿತು ನಾಳೆ ನನ್ನಹಿಂದೆ ನಿಂತು ಆ ವ್ಯಾಧನ ಪೂಜೆಯನ್ನು ನೋಡು. ಅನಂತರ ನನ್ನ ತಲೆಯಮೇಲೆ ಕಲ್ಲುಹಾಕುವೆ ಎಂದನು.

೩೫ ಹಾಗೆಯೇ ಆಗಲೆಂದು ವೇದನು ಕಲ್ಲನ್ನತ್ತ ಬಿಸುಟು ಕೋಪವನ್ನು ಬಿಟ್ಟು, ಹಾಗಾದರೆ ನಾಳೆ ನೋಡುವೆನೆಂದು ನಿಶ್ಚಯಿಸಿದನು.

೩೬-೩೭. ಮಾರನೆಯದಿನ ಎದ್ದು ವೇದನು ಸ್ನಾನಾದಿ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಪೂಜೆಗೋಸ್ಕರವಾಗಿ ಬಂದನು. ನೋಡಲಾಗಿ

ಮಹೋತ್ಪಾತೋ ಭವೇತ್ಕಸ್ಯ ಸೂಚಯೇದಿತ್ಯಚಿಂತಯತ್ ।
ಮೃದ್ಭಿಶ್ಚ ಗೋಮಯೇನಾಪಿ ಕುಶೈಸ್ತಂ ಗಾಂಗವಾರಿಭಿಃ ॥ ೩೮ ॥

ಪ್ರಕ್ಷಾಲಯಿತ್ವಾ ತಾಂ ಪೂಜಾಂ ಕೃತವಾನ್ನಿತ್ಯವತ್ತದಾ ।
ಏತಸ್ಮಿನ್ನಂತರೇ ಪ್ರಾಯಾದ್ವ್ಯಾಧೋ ವಿಗತಕಲ್ಮಷಃ ॥ ೩೯ ॥

ಮೂರ್ಧಾನಂ ವ್ರಣಸಂಯುಕ್ತಂ ಸರಕ್ತಂ ಲಿಂಗಮಸ್ತಕೇ ।
ಶಂಕರಸ್ಯಾದಿಕೇಶಸ್ಯ ದದೃಶೇಽಂತರ್ಗತಸ್ತದಾ ॥ ೪೦ ॥

ದೃಷ್ಟ್ವೈವ ಕಿಮಿದಂ ಚಿತ್ರಮಿತ್ಯುಕ್ತ್ವಾ ನಿಶಿತೈಃ ಶರೈಃ ।
ಆತ್ಮಾನಂ ಭೇದಯಾಮಾಸ ಶತಧಾ ಚ ಸಹಸ್ರಧಾ ॥ ೪೧ ॥

ಸ್ವಾಮಿನೋ ವೈಕೃತಂ ದೃಷ್ಟ್ವಾ ಕಃ ಕ್ಷಮೇತೋತ್ತಮಾಶಯಃ ।
ಮುಹುರ್ನಿನಿಂದ ಚಾತ್ಮಾನಂ ಮಯಿ ಜೀವತ್ಯಭೂದಿದಂ ॥ ೪೨ ॥

ಕಷ್ಟಮಾಪತಿತಂ ಕೀದೃಗಹೋ ದುರ್ವಿಧಿವೈಶಸಾತ್ ।
ತತ್ಕರ್ಮ ತಸ್ಯ ಸಂವೀಕ್ಷ್ಯ ಮಹಾದೇವೋಽತಿವಿಸ್ಮಿತಃ ।
ತತಃ ಪ್ರೋವಾಚ ಭಗವಾನ್ವೇದಂ ವೇದವಿದಾಂ ವರಂ ॥ ೪೩ ॥

ಆದಿಕೇಶಲಿಂಗದ ಮೇಲ್ಭಾಗದಲ್ಲಿ ಒಂದು ಭಯಂಕರವಾದ ಗಾಯವಾಗಿದ್ದಿತು. ಅದರಿಂದ ಧಾರಾಕಾರವಾಗಿ ರಕ್ತವು ಸುರಿಯುತ್ತಿದ್ದಿತು. ಇದನ್ನು ನೋಡಿ ವೇದನು ಅಯ್ಯೋ, ಯಾರು ಈರೀತಿ ಮಾಡಿದವರು ? ಅವರಿಗೆ ತುಂಬಾ ಪಾಪವು ಬರುವುದು ಎಂದು ಯೋಚಿಸಿದನು.

೩೮–೩೯. ಆಮೇಲೆ ಮಣ್ಣಿನಿಂದಲೂ ಸಗಣಿಯಿಂದಲೂ ಆ ಗಾಯವನ್ನು ಅದುಮಿ ಗಂಗಾನದಿಯ ನೀರಿನಿಂದ ಲಿಂಗವನ್ನು ತೊಳೆದು ನಿತ್ಯದಂತೆ ಪೂಜಿಸಿದನು. ಈ ಸಮಯಕ್ಕೆ ಸರಿಯಾಗಿ ಆ ವ್ಯಾಧನು ಅಲ್ಲಿಗೆ ಬಂದನು.

೪೦-೪೧. ಗಾಯವಾಗಿ ರಕ್ತ ಸುರಿಯುತ್ತಿರುವುದನ್ನು ನೋಡಿ ಇದೇನಿದು ವಿಚಿತ್ರ ಎಂದು ಚೂಪಾದ ಬಾಣದಿಂದ ತನ್ನನ್ನು ಅನೇಕಸಾರಿ ಹೊಡೆದುಕೊಂಡನು.

೪೨-೪೩. ಯಾವ ಉದಾತ್ತಧ್ಯೇಯವುಳ್ಳವನು ತಾನೇ ತನ್ನ ಸ್ವಾಮಿಗಾದ ತೊಂದರೆಯನ್ನು ಸಹಿಸಿಯಾನು? ಬಾರಿಬಾರಿಗೂ ತನ್ನನ್ನು ನಿಂದಿಸಿಕೊಂಡನು. ನಾನು ಜೀವಿಸಿರುವಾಗ ಹೀಗಾಯಿತಲ್ಲ ಎಂದು ಮರುಗಿದನು. ಇವೆಲ್ಲವನ್ನೂ ನೋಡಿ ಆದಿಕೇಶನು ಬಹಳ ಆಶ್ಚರ್ಯಗೊಂಡು ವೇದನನ್ನು ಕುರಿತು—

॥ ಆದಿಕೇಶ ಉವಾಚ ॥

ಪಶ್ಯ ವ್ಯಾಧಂ ಮಹಾಬುದ್ಧೇ ಭಕ್ತಂ ಭಾವೇನ ಸಂಯುತಂ ।
ತ್ವಂ ತು ವೃದ್ಧಿಃ ಕುಶೈರ್ವಾಭಿರ್ಮೂರ್ಭಾನಂ ಸ್ಪೃಷ್ಟವಾನಸಿ ॥ ೪೪ ॥

ಅನೇನ ಸಹಸಾ ಬ್ರಹ್ಮನ್ಮಮಾತ್ಮಾಪಿ ನಿವೇದಿತಃ ।
ಭಕ್ತಿಃ ಪ್ರೇಮಾಥವಾ ಶಕ್ತಿರ್ವಿಚಾರೋ ಯತ್ರ ವಿದ್ಯತೇ ।
ತಸ್ಮಾದಸ್ಮೈ ವರಾನ್ದಾಸ್ಯೇ ಪಶ್ಚಾತ್ತುಭ್ಯಂ ದ್ವಿಜೋತ್ತಮ ॥ ೪೫ ॥

॥ ಬ್ರಹ್ಮೋವಾಚ ॥

ವರೇಣ ಛನ್ದಯಾಮಾಸ ವ್ಯಾಧಂ ದೇವೋ ಮಹೇಶ್ವರಃ ।
ವ್ಯಾಧಃ ಪ್ರೋವಾಚ ದೇವೇಶಂ ನಿರ್ಮಾಲ್ಯಂ ತವ ಯದ್ಭವೇತ್ ॥ ೪೬ ॥

ತದಸ್ಮಾಕಂ ಭವೇನ್ನಾಥ ಮನ್ನಾಮ್ನಾ ತೀರ್ಥಮುಚ್ಯತಾಂ ।
ಸರ್ವಕ್ರತುಫಲಂ ತೀರ್ಥಂ ಸ್ಮರಣಾದೇವ ಜಾಯತಾಂ ॥ ೪೭ ॥

೪೪-೪೫. ಎಲೈ ಪ್ರಾಜ್ಞನೇ, ಈ ವ್ಯಾಧನನ್ನು ನೋಡು. ಅವನ ಭಕ್ತಿಯುಕ್ತವಾದ ಪೂಜೆಯನ್ನು ನೋಡು. ನೀನು ನನ್ನ ತಲೆಯನ್ನು ಮಣ್ಣು ನೀರು ದರ್ಭೆಗಳಿಂದ ಮೆತ್ತಿರುವೆ. ನೋಡು, ಅವನು ತನ್ನ ಪ್ರಾಣವನ್ನೇ ಅರ್ಪಿಸಿದನು. ಭಕ್ತಿ, ಪ್ರೇಮ, ಶಕ್ತಿ ವಿಚಾರವಿಮರ್ಶೆ ಇವೆಲ್ಲವನ್ನೂ ಪಡೆದಿರುವ ಆ ವ್ಯಾಧನಿಗೆ ವರಗಳನ್ನು ಕೊಟ್ಟು ಬಳಿಕ ನಿನಗೆ ಕೊಡುವೆನು, ಎಂದು ಹೇಳಿ—

೪೬-೪೭. ಆದಿಕೇಶನು ವ್ಯಾಧನಿಗೆ ಬೇಕಾದ ವರಗಳನ್ನು ಕೊಟ್ಟನು. ಅನಂತರ ವ್ಯಾಧನು-ನೀನು ಅನುಭವಿಸಿ ನಿರ್ಮಾಲ್ಯವಾಗಿರುವುದನ್ನು ನನಗೆ ದಯಪಾಲಿಸು ಮತ್ತು ಈ ತೀರ್ಥವು ನನ್ನ ಹೆಸರಿನಿಂದ ಪ್ರಸಿದ್ಧವಾಗಲಿ. ಇದರಲ್ಲಿ ಸ್ನಾನಮಾಡಿದವರಿಗೆ ಎಲ್ಲಾ ಯಾಗಗಳನ್ನು ಮಾಡಿದ ಫಲವು ಬರಲಿ ಎಂದು ಕೇಳಿಕೊಂಡನು.

॥ ಬ್ರಹ್ಮೋವಾಚ ॥

ತಥೇತ್ಯುವಾಚ ದೇವೇಶಸ್ತತಸ್ತತ್ತೀರ್ಥಮುತ್ತಮಂ ।
ಭಿಲ್ಲತೀರ್ಥಂ ಸಮಸ್ತಾಘಸಂಘವಿಚ್ಛೇದಕಾರಣಂ ॥ ೪೮ ॥

ಶ್ರೀಮಹಾದೇವಚರಣಮಹಾಭಕ್ತಿವಿಧಾಯಕಂ ।
ಅಭವತ್ಸ್ನಾನದಾನಾದ್ಯೈರ್ಭುಕ್ತಿಮುಕ್ತಿಪ್ರದಾಯಕಂ ।
ವೇದಸ್ಯಾಪಿ ವರಾನ್ಪ್ರಾದಾಚ್ಛಿವೋ ನಾನಾವಿಧಾನ್ಬಹೂನ್ ॥ ೪೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಭಿಲ್ಲತೀರ್ಥಮಹಿಮವರ್ಣನಂ ನಾಮೈಕೋನಸಪ್ತತ್ಯಧಿಕ-ಶತತಮೋಽಧ್ಯಾಯಃ

೪೮-೪೯. ಹಾಗೆಯೇ ಆಗಲೆಂದು ದೇವದೇವನಾದ ಶಿವನು ವೇದನಿಗೂ ಭಿಲ್ಲನಿಗೂ ವರಗಳನ್ನು ಕೊಟ್ಟನು. ಆ ತೀರ್ಥಕ್ಕೆ ಭಿಲ್ಲತೀರ್ಥವೆಂದು ಹೆಸರಾಯಿತು. ಇದರಲ್ಲಿ ಸ್ನಾನಮಾಡಿದರೆ ಪಾಪಗಳೆಲ್ಲವೂ ನಾಶವಾಗುವುವು. ಶ್ರೀಮಹಾದೇವನ ಚರಣಗಳಲ್ಲಿ ಭಕ್ತಿಯು ಅಭಿವೃದ್ಧಿಯಾಗುವುದು. ಭಕ್ತಿಯೂ ಮುಕ್ತಿಯೂ ಉಂಟಾಗುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಭಿಲ್ಲತೀರ್ಥವರ್ಣನವೆಂಬ ನೂರರವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ನೂರನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಸಪ್ತತ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಚಕ್ಷುಸ್ತೀರ್ಥಮಿತಿ ಖ್ಯಾತಂ ರೂಪಸೌಭಾಗ್ಯದಾಯಕಂ ।
ಯತ್ರ ಯೋಗೇಶ್ವರೋ ದೇವೋ ಗೌತಮ್ಯಾ ದಕ್ಷಿಣೇ ತಟೇ ॥ ೧ ॥

ಪುರಂ ಭೌವನಮಾಖ್ಯಾತಂ ಗಿರಿಮೂರ್ಧ್ನ್ಯಭಿಧೀಯತೇ ।
ಯತ್ರಾಸೌ ಭೌವನೋ ರಾಜಾ ಕ್ಷತ್ರಧರ್ಮಪರಾಯಣಃ ॥ ೨ ॥

ತಸ್ಮಿನ್ಪುರವರೇ ಕಶ್ಚಿದ್ಬ್ರಾಹ್ಮಣೋ ವೃದ್ಧಕೌಶಿಕಃ ।
ತತ್ಪುತ್ರೋ ಗೌತಮ ಇತಿ ಖ್ಯಾತೋ ವೇದವಿದುತ್ತಮಃ ॥ ೩ ॥

ತಸ್ಯ ಮಾತುರ್ಮನೋದೋಷಾದ್ವಿಪರೀತೋಽಭವದ್ದ್ವಿಜಃ ।
ಸಖಾ ತಸ್ಯ ವಣಿಕ್ಕಶ್ಚಿನ್ಮಣಿಕುಂಡಲ ಉಚ್ಯತೇ ॥ ೪ ॥

ನೂರಎಪ್ಪತ್ತನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಚಕ್ಷುಸ್ತೀರ್ಥವೆಂಬ ಪ್ರಸಿದ್ಧವಾದ ತೀರ್ಥವಿರುವುದು. ಇದರಲ್ಲಿ ಸ್ನಾನಮಾಡಿದರೆ ರೂಪವೂ ಸೌಭಾಗ್ಯವೂ ಉಂಟಾಗುವುದು. ಇಲ್ಲಿ ಯೋಗೀಶ್ವರನಾದ ಪರಮಾತ್ಮನು ಇರುವನು. ಇದು ಗೌತಮಿಯ ದಕ್ಷಿಣದಡದಲ್ಲಿರುವುದು.

೨. ಪರ್ವತಪ್ರಾಂತದಲ್ಲಿ ಭೌವನವೆಂಬ ಪಟ್ಟಣವಿರುವುದು. ಅಲ್ಲಿ ಭೌವನನೆಂಬ ಕ್ಷತ್ರಧರ್ಮನಿರತನಾದ ರಾಜನು ರಾಜ್ಯವಾಳುತ್ತಿದ್ದನು.

೩-೪. ಆ ಭೌವನವೆಂಬ ಪಟ್ಟಣದಲ್ಲಿ ವೃದ್ಧಕೌಶಿಕನೆಂಬ ವೇದವಿಶಾರದನಾದ ಬ್ರಾಹ್ಮಣನಿಗೆ ಗೌತಮನೆಂಬ ಮಗನಿದ್ದನು. ಅವನ ತಾಯಿಯ ದೋಷದಿಂದ ಅವನು ವಿರುದ್ಧ ವ್ಯವಹಾರಿಯಾಗಿದ್ದನು. ಅವನಿಗೆ ಮಣಿಕುಂಡಲನೆಂಬ ಒಬ್ಬ ವೈಶ್ಯನು ಸ್ನೇಹಿತನಾಗಿದ್ದನು.

ತೇನ ಸಖ್ಯಂ ದ್ವಿಜಸ್ಯಾಸೀದ್ವಿಷಮಂ ದ್ವಿಜವೈಶ್ಯಯೋಃ ।
ಶ್ರೀಮದ್ದರಿದ್ರಯೋರ್ನಿತ್ಯಂ ಪರಸ್ಪರಹಿತೈಷಿಣೋಃ ॥ ೫ ॥

ಕದಾಚಿದ್ಗೌತಮೋ ವೈಶ್ಯಂ ವಿತ್ತೇಶಂ ಮಣಿಕುಂಡಲಂ ।
ಪ್ರಾಹೇದಂ ವಚನಂ ಪ್ರೀತ್ಯಾ ರಹಃ ಸ್ಥಿತ್ವಾ ಪುನಃ ಪುನಃ ॥ ೬ ॥

॥ ಗೌತಮ ಉವಾಚ ॥

ಗಚ್ಛಾವೋ ಧನಮಾದಾತುಂ ಪರ್ವತಾನುದಧೀನಪಿ ।
ಯೌವನಂ ತದ್ವೃಥಾ ಜ್ಞೇಯಂ ವಿನಾ ಸೌಖ್ಯಾನುಕೂಲ್ಯತಃ ।
ಧನಂ ವಿನಾ ತತ್ಕಥಂ ಸ್ಯಾದಹೋ ಧಿಙ್ನಿರ್ಧನಂ ನರಂ ॥ ೭ ॥

॥ ಬ್ರಹ್ಮೋವಾಚ ॥

ಕುಂಡಲೋ ದ್ವಿಜಮಾಹೇದಂ ಮತ್ಪಿತ್ರೋಪಾರ್ಜಿತಂ ಧನಂ ।
ಬಹ್ವಸ್ತಿ ಕಿಂ ಧನೇನಾದ್ಯ ಕರಿಷ್ಯೇ ದ್ವಿಜಸತ್ತಮ ।
ದ್ವಿಜಃ ಪುನರುವಾಚೇದಂ ಮಣಿಕುಂಡಲಮೋಜಸಾ ॥ ೮ ॥

೫-೬. ಇದೆಂತಹ ಸ್ನೇಹ ? ಬ್ರಾಹ್ಮಣನಿಗೂ ವೈಶ್ಯನಿಗೂ ಸ್ನೇಹವೇ ? ಮಣಿಕುಂಡಲನು ಧನವಂತನು. ಗೌತಮನು ದರಿದ್ರನು. ಆದರೂ ಅವರಿಬ್ಬರೂ ಪರಸ್ಪರ ಹಿತೈಷಿಗಳಾಗಿ ಇರುತ್ತಿದ್ದರು. ಒಂದಾನೊಂದು ದಿವಸ ಗೌತಮನು ಆ ಮಣಿಕುಂಡಲನನ್ನು ಕುರಿತು—

೭. ಎಲೈ ಸ್ನೆಹಿತನೇ, ಹಣವನ್ನು ತೆಗೆದುಕೊಂಡು ನಾವಿಬ್ಬರೂ ಹೊರಟು, ಪರ್ವತಗಳನ್ನೂ, ಸಮುದ್ರಗಳನ್ನೂ ನೋಡಿಕೊಂಡುಬರುವಾ. ಧನವೂ, ಸೌಖ್ಯವೂ ಇಲ್ಲದ ಯೌವನವು ವ್ಯರ್ಥವಾದುದು. ಧನವಿಲ್ಲದ ಮನುಜನ ಜೀವನವು ವ್ಯರ್ಥವೇ ಸರಿ ಎಂದನು.

೮. ಆ ಮಣಿಕುಂಡನು ಗೌತಮನನ್ನು ಕುರಿತು—ನಮ್ಮ ತಂದೆಯು ಸಂಪಾದಿಸಿದ ಧನವೇನೋ ಬೇಕಾದಹಾಗಿದೆ. ಆದರೆ ನೀನು ಧನವನ್ನು ತೆಗೆದುಕೊಂಡು ಏನುಮಾಡುವೆ ? ಎಂದು ಕೇಳಿದನು.

॥ ಗೌತಮ ಉವಾಚ ॥

ಧರ್ಮಾರ್ಥಜ್ಞಾನಕಾಮಾನಾಂ ಕೋ ನು ತೃಪ್ತಃ ಪ್ರಶಸ್ಯತೇ ।
ಉತ್ಕರ್ಷಪ್ರಾಪ್ತಿರೇವೈಷಾಂ ಸಖೇ ಶ್ಲಾಘ್ಯಾ ಶರೀರಿಣಾಂ ॥ ೯ ॥

ಸ್ವೇನೈವ ವ್ಯವಸಾಯೇನ ಧನ್ಯಾ ಜೀವಂತಿ ಜಂತವಃ ।
ಪರದತ್ತಾರ್ಥಸಂತುಷ್ಟಾಃ ಕಷ್ಟಜೀವಿನ ಏವ ತೇ ॥ ೧೦ ॥

ಸ ಪುತ್ರಃ ಶಸ್ಯತೇ ಲೋಕೇ ಪಿತೃಭಿಶ್ಚಾಭಿನಂದ್ಯತೇ ।
ಯಃ ಪೈತ್ರ್ಯಮಭಿಲಿಪ್ಸೇತ ನ ವಾಚಾಪಿ ತು ಕುಂಡಲ ॥ ೧೧ ॥

ಸ್ವಬಾಹುಬಲಮಾಶ್ರಿತ್ಯ ಯೋಽರ್ಥಾನರ್ಜಯತೇ ಸುತಃ ।
ಸ ಕೃತಾರ್ಥೋ ಭವೇಲ್ಲೋಕೇ ಪೈತ್ರ್ಯಂ ವಿತ್ತಂ ನ ತು ಸ್ಪೃಶೇತ್ ॥ ೧೨ ॥

ಸ್ವಯಮಾರ್ಜ್ಯ ಸುತೋ ವಿತ್ತಂ ಪಿತ್ರೇ ದಾಸ್ಯತಿ ಬಂಧವೇ ।
ತಂ ತು ಪುತ್ರಂ ವಿಜಾನೀಯಾದಿತರೋ ಯೋನಿಕೀಟಕಃ ॥ ೧೩ ॥

೯-೧೦. ಅದಕ್ಕೆ ಗೌತಮನು—ಎಲೈ ಸ್ನೇಹಿತನೇ, ಧರ್ಮಾರ್ಥಕಾಮುಗಳನ್ನುಳ್ಳ ಪ್ರತಿಯೊಬ್ಬನೂ ಹೊಗಳಿಕೆಗೆ ಪಾತ್ರನಾಗಿರುತ್ತಾನೆ. ಧರ್ಮಾರ್ಥಕಾಮುಗಳು ಮನುಷ್ಯನ ಉತ್ಕರ್ಷತೆಗೆ ಕಾರಣಗಳು. ಆದರೆ ಯಾರು ತಮ್ಮ ಸ್ವಂತ ಕಸುಬುಗಳಿಂದ ಧನವನ್ನು ಸಂಪಾದಿಸಿ ಜೀವಿಸುವರೋ ಅವರೇ ಧನ್ಯರು. ಮತ್ತೊಬ್ಬರನ್ನಾಶ್ರಯಿಸಿ ಯಾರು ಜೀವಿಸುವರೋ ಅವರು ಕಷ್ಟ ಜೀವಿಗಳು.

೧೧-೧೩. ಯಾವ ಪುತ್ರನು ಪಿತೃಸಂಬಂಧವಾದ ಹಣ, ಸ್ವತ್ತು ಮುಂತಾದುವುಗಳನ್ನು ಅಪೇಕ್ಷಿಸುವುದಿಲ್ಲವೋ, ತನ್ನ ಬಾಹುಬಲದಿಂದ ದುಡಿದು ತಿನ್ನುವನೋ ಅವನೇ ಯೋಗ್ಯನಾದವನು ಮತ್ತು ಅಂಥವನು ತಂದೆಯ ಹೊಗಳಿಕೆಗೆ ಪಾತ್ರನಾಗುವನು. ತಂದೆಯ ಧನಾದಿಗಳನ್ನು ಮುಟ್ಟದೆ, ತಾನೇ ಸಂಪಾದಿಸಿ ತಂದೆಗೆ ಕೊಡುವನೋ ಅವನೇ ಕೃತಾರ್ಥನು. ಅವನಿಗೆ ಪುತ್ರನೆಂಬ ಅನ್ವರ್ಥನಾಮವು. ಇನ್ನುಳಿದವರೆಲ್ಲರೂ ಭೂಮಿಗೆ ದಂಡವಾಗಿ ಹುಟ್ಟಿರುವರು ಎಂದನು.

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ತು ತದ್ವಾಕ್ಯಂ ಬ್ರಾಹ್ಮಣಸ್ಯಾಭಿಲಾಷಿಣಃ ।
ತಥೇತಿ ಮತ್ವಾ ತದ್ವಾಕ್ಯಂ ರತ್ನಾನ್ಯಾದಾಯ ಸತ್ವರಃ ॥ ೧೪ ॥

ಆತ್ಮೀಯಾನಿ ವಿತ್ತಾನಿ ಗೌತಮಾಯ ನ್ಯವೇದಯತ್ ।
ಧನೇನೈತೇನ ದೇಶಾಂಶ್ಚ ಪರಿಭ್ರಮ್ಯ ಯಥಾಸುಖಂ ॥ ೧೫ ॥

ಧನಾನ್ಯಾದಾಯ ವಿತ್ತಾನಿ ಪುನರೇಷ್ಯಾಮಹೇ ಗೃಹಂ ।
ಸತ್ಯಮೇವ ವಣಿಗ್ವಕ್ತಿ ಸ ತು ವಿಪ್ರಃ ಪ್ರತಾರಕಃ ॥ ೧೬ ॥

ಪಾಪಾತ್ಮಾ ಪಾಪಚಿತ್ತಂ ಚ ನ ಬುಬೋಧ ವಣಿಗ್ದ್ವಿಜಂ ।
ತೌ ಪರಸ್ಪರಮಾಮಂತ್ರ್ಯ ಮಾತಾ ಪಿತ್ರೋರಜಾನತೋಃ ॥ ೧೭ ॥

ದೇಶಾದ್ದೇಶಾಂತರಂ ಯಾತೌ ಧನಾರ್ಥಂ ತೌ ವಣಿಗ್ದ್ವಿಜೌ ।
ವಣಿಗ್ಧಸ್ತಸ್ಥಿತಂ ವಿತ್ತಂ ಬ್ರಾಹ್ಮಣೋ ಹರ್ತುಮಿಚ್ಛತಿ ॥ ೧೮ ॥

೧೪-೧೬. ಅತ್ಯಾಶೆಯುಳ್ಳ ಗೌತಮನ ಮಾತಿನಂತೆ ಆ ಮಣಿಕುಂಡಲನು ರತ್ನಗಳನ್ನೂ ಧನವನ್ನೂ ತಂದನು. ತನ್ನ ಹಣವೆಲ್ಲವನ್ನೂ ಗೌತಮನಿಗೆ ಕೊಟ್ಟನು. ಈ ಹಣದಿಂದ ದೇಶವನ್ನು ತಿರಿಗಿಕೊಂಡು ಪುನಃ ಹಣವನ್ನು ಸಂಪಾದಿಸಿ ಮನೆಗೆ ಬರೋಣ ಎಂದು ಮಣಿಕುಂಡಲನು ಹೇಳುತ್ತಿದ್ದನು. ಆದರೆ ಗೌತಮನು ಮೋಸಗಾರ ಮತ್ತು ಪಾಪಿ ಎಂಬುದಾಗಿ ಅವನಿಗೆ ಹೇಗೆ ಗೊತ್ತು ?

೧೭-೧೮. ಅವರಿಬ್ಬರೂ ಪರಸ್ಪರ ಮಾತನಾಡಿಕೊಂಡು ತಂದೆತಾಯಿಯರಿಗೆ ಹೇಳದೆ ಹೊರಟರು. ದೇಶದೇಶಗಳನ್ನು ತಿರುಗಿದರು. ಧನಸಂಪಾದಿಸಲು ಅವರಿಬ್ಬರೂ ಪ್ರಯತ್ನಪಡುತ್ತಿದ್ದರು. ಇಷ್ಟರಲ್ಲಿ ಆ ಗೌತಮನು ಮಣಿಕುಂಡಲನ ಹತ್ತಿರವಿರುವ ಹಣವನ್ನು ಅಪಹರಿಸಬೇಕೆಂದು ಇಂತು ಯೋಚಿಸಿದನು—

॥ ಬ್ರಾಹ್ಮಣ ಉವಾಚ ॥
ಯೇನ ಕೇನಾಪ್ಯುಪಾಯೇನ ತದ್ಧನಂ ಹಿ ಸಮಾಹರೇ ।
ಅಹೋ ಪೃಥಿವ್ಯಾಂ ರಮ್ಯಾಣಿ ನಗರಾಣಿ ಸಹಸ್ರಶಃ ॥ ೧೯ ॥

ಇಷ್ಟಪ್ರದಾತ್ರ್ಯಃ ಕಾಮಸ್ಯ ದೇವತಾ ಇವ ಯೋಷಿತಃ ।
ಮನೋಹರಾಸ್ತತ್ರ ತತ್ರ ಸಂತಿ ಕಿಂ ಕ್ರಿಯತೇ ಮಯಾ ॥ ೨೦ ॥

ಧನಮಾಹೃತ್ಯ ಯತ್ನೇನ ಯೋಷಿದ್ಭ್ಯೋ ಯದಿ ದೀಯತೇ ।
ಭುಜ್ಯಂತೇ ತಾಸ್ತತೋ ನಿತ್ಯಂ ಸಫಲಂ ಜೀವಿತಂ ಹಿ ತತ್ ॥ ೨೧ ॥

ನೃತ್ಯಗೀತರತೋ ನಿತ್ಯಂ ಪಣ್ಯಸ್ತ್ರೀಭಿರಲಂಕೃತಃ ।
ಭೋಕ್ಷ್ಯೇ ಕಥಂ ತು ತದ್ವಿತ್ತಂ ವೈಶ್ಯಾನ್ಮದ್ಧಸ್ತಮಾಗತಂ ॥ ೨೨ ॥

॥ ಬ್ರಹ್ಮೋವಾಚ ॥
ಏವಂ ಚಿಂತಯಮಾನೋಽಸೌ ಗೌತಮಃ ಪ್ರಹಸನ್ನಿವ ।
ಮಣಿಕುಂಡಲಮಾಹೇದಮಧರ್ಮಾದೇವ ಜಂತವಃ ॥ ೨೩ ॥

೧೯–೨೨. ಏನಾದರೂ ಮಾಡಿ ಹಣವನ್ನು ಅಪಹರಿಸಬೇಕು. ಈ ಪೃಥಿವಿಯಲ್ಲಿ ಮನೋಹರವಾದ ಅನೇಕ ನಗರಗಳಿವೆ. ಆ ನಗರಗಳಲ್ಲಿ ಅನೇಕ ಸ್ತ್ರೀಯರುಗಳು ಇರುವರು. ಅವರೆಲ್ಲರೂ ಅಪ್ಸರೆಯರಂತೆ ಇರುವರು. ಅವರಿಂದ ಕಾಮೇಚ್ಛೆಯು ಪೂರ್ಣವಾಗುವುದು. ಇಂತಹ ಸುಂದರಿಯರು ಎಷ್ಟೋ ಜನರಿರುವರು. ನಾನೀಗ ಧನವನ್ನಪಹರಿಸಿ ಅವರಿಗೆ ಕೊಟ್ಟರೆ ಅವರೊಡನೆ ಸುಖವಾಗಿರಬಹುದು. ಆಗ ನನ್ನ ಜೀವನವು ಸಾರ್ಥಕವಾದಂತಾಗುವುದು. ಮತ್ತು ನರ್ತನವನ್ನು ಮಾಡುತ್ತಾ ಹಾಡುತ್ತಾ ಇರುವ ವೇಶ್ಯಾಸ್ತ್ರೀಯರೊಡಗೂಡಿ ಎಂದಿಗೆ ವಿಹರಿಸುವೆನೋ ?

೨೩-೨೫. ಈರೀತಿಯಾಗಿ ಗೌತಮನು ಯೋಚಿಸಿ ಸ್ನೇಹಿತನಾದ ಮಣಿಕುಂಡಲನನ್ನು ಕುರಿತು ನಗುತ್ತಾ ಎಲೈ ಮಿತ್ರನೆ, ಲೋಕದಲ್ಲಿ ಪ್ರಾಣಿಸಾಮಾನ್ಯವು ಸುಖವನ್ನಾಗಲೀ, ಅಭಿವೃದ್ಧಿಯನ್ನಾಗಲೀ ಪಡೆಯಬೇಕಾದರೆ ಅಧರ್ಮ

ವೃದ್ಧಿಂ ಸುಖಮಭೀಷ್ಟಾನಿ ಪ್ರಾಪ್ನುವಂತಿ ನ ಸಂಶಯಃ ।
ಧರ್ಮಿಷ್ಠಾಃ ಪ್ರಾಣಿನೋ ಲೋಕೇ ದೃಶ್ಯಂತೇ ದುಃಖಭಾಗಿನಃ ॥ ೨೪ ॥

ತಸ್ಮಾದ್ಧರ್ಮೇಣ ಕಿಂ ತೇನ ದುಃಖೈಕಫಲಹೇತುನಾ । ॥ ೨೫ ॥

॥ ಬ್ರಹ್ಮೋವಾಚ ॥
ನೇತ್ಯುವಾಚ ತತೋ ವೈಶ್ಯಃ ಸುಖಂ ಧರ್ಮೇ ಪ್ರತಿಷ್ಠಿತಂ ।
ಪಾಪೇ ದುಃಖಂ ಭಯಂ ಶೋಕೋ ದಾರಿದ್ರ್ಯಂ ಕ್ಲೇಶ ಏವ ಚ ।
ಯತೋ ಧರ್ಮಸ್ತತೋ ಮುಕ್ತಿಃ ಸ್ವಧರ್ಮಃ ಕಿಂ ವಿನಶ್ಯತಿ ॥ ೨೬ ॥

॥ ಬ್ರಹ್ಮೋವಾಚ ॥
ಏವಂ ವಿವದತೋಸ್ತತ್ರ ಸಂಪರಾಯಸ್ತಯೋರಭೂತ್ ।
ಯಸ್ಯ ಪಕ್ಷೋ ಭವೇಜ್ಜ್ಯಾಯಾನ್ಸ ಪರಾರ್ಥಮವಾಪ್ನುಯಾತ್ ॥ ೨೭ ॥

ಪೃಚ್ಛಾವಃ ಕಸ್ಯ ಪ್ರಾಬಲ್ಯಂ ಧರ್ಮಿಣೋ ವಾಪ್ಯಧರ್ಮಿಣಃ ।
ವೇದಾತ್ತು ಲೌಕಿಕಂ ಜ್ಯೇಷ್ಠಂ ಲೋಕೇ ಧರ್ಮಾತ್ಸುಖಂ ಭವೇತ್ ॥ ೨೮ ॥

ದಿಂದಲೇ. ಧರ್ಮನಿರತರಾದ ಎಷ್ಟೋಜನರು ದುಃಖವನ್ನು ಅನುಭವಿಸುತ್ತಿರುವುದು ನಿನಗೆ ಗೊತ್ತೇ ಇದೆ. ಆದುದರಿಂದ ಸುಮ್ಮನೇ ದುಃಖಕ್ಕೆ ಕಾರಣವಾದ ಧರ್ಮವನ್ನು ಕಟ್ಟಿಕೊಂಡು ನಮಗೇನಾಗಬೇಕಾಗಿದೆ? ಎಂದನು.

೨೬. ಇದನ್ನು ಕೇಳಿ ಮಣಿಕುಂಡಲನು—ಹಾಗಲ್ಲ. ಸುಖವುಂಟಾಗಬೇಕಾದರೆ ಸ್ವಧರ್ಮದಿಂದಲೇ. ಅಧರ್ಮದಿಂದ ಪಾಪ, ದುಃಖ, ಭಯ, ಶೋಕ, ದಾರಿದ್ರ್ಯ, ಶ್ರಮ ಎಲ್ಲವೂ ಉಂಟಾಗುವುವು. ಧರ್ಮದಿಂದಲೇ ಮುಕ್ತಿಯುಂಟಾಗುವುದು. ಆದುದರಿಂದ ಸ್ವಧರ್ಮವು ಮನುಷ್ಯನನ್ನು ನಾಶಮಾಡುವುದಂದರೇನು? ಎಂದಿಗೂ ಇಲ್ಲ. ಎಂದನು.

೨೭-೨೮. ಈರೀತಿಯಾಗಿ ವಾದಮಾಡುತ್ತಾ ಕೊನೆಗೆ ಇಬ್ಬರಿಗೂ ದೊಡ್ಡಜಗಳವೇ ಪ್ರಾರಂಭವಾಯಿತು. ಯಾರ ಪಕ್ಷವು ಬಲವುಳ್ಳದ್ದೋ ಅವರಿಗೆ ಜಯವಾಗುತ್ತದೆ. ಅವರಿಬ್ಬರೂ—ಯಾರನ್ನಾದರೂ ಕೇಳೋಣ. ಧರ್ಮಿಗಳಿಗೆ ಪ್ರಾಬಲ್ಯವೇ ಅಥವಾ ಅಧರ್ಮಿಗಳಿಗೆ ಪ್ರಾಬಲ್ಯವೋ? ವೇದಕ್ಕಿಂತ ಲೌಕಿಕ

ಏವಂ ವಿವದಮಾನೌ ತಾವೂಚತುಃ ಸಕಲಾನ್ ಜನಾನ್ ।
ಧರ್ಮಸ್ಯ ವಾಪ್ಯಧರ್ಮಸ್ಯ ಪ್ರಾಬಲ್ಯಮನಯೋರ್ಭುವಿ ॥ ೨೯ ॥

ತದ್ವದಂತು ಯಥಾವೃತ್ತಮೇವಮೂಚತುರೋಜಸಾ ।
ಏವಂ ತತ್ರೋಚಿರೇ ಕೇಚಿದ್ಯೇ ಧರ್ಮೇಣಾನುವರ್ತಿನಃ ॥ ೩೦ ॥

ತೈರ್ದುಃಖಮನುಭೂಯತೇ ಪಾಪಿಷ್ಠಾಃ ಸುಖಿನೋ ಜನಾಃ ।
ಸಂಪರಾಯೇ ಧನಂ ಸರ್ವಂ ಜಿತಂ ವಿಪ್ರೇ ನ್ಯವೇದಯತ್ ॥ ೩೧ ॥

ಮಣಿಮಾನ್ಧರ್ಮವಿಚ್ಛ್ರೇಷ್ಠಃ ಪುನರ್ಧರ್ಮಂ ಪ್ರಶಂಸತಿ ।
ಮಣಿಮಂತಂ ದ್ವಿಜಃ ಪ್ರಾಹ ಕಿಂ ಧರ್ಮಮನುಶಂಸಸಿ ।
॥ ಬ್ರಹ್ಮೋವಾಚ ॥
ತಥೇತಿ ಚೇತ್ಯಾಹ ವೈಶ್ಯೋ ಬ್ರಾಹ್ಮಣಃ ಪುನರಬ್ರವೀತ್ ॥ ೩೨ ॥
॥ ಬ್ರಾಹ್ಮಣ ಉವಾಚ ॥
ಜಿತಂ ಮಯಾ ಧನಂ ವೈಶ್ಯ ನಿರ್ಲಜ್ಜಃ ಕಿಂನು ಭಾಷಸೇ ।
ಮಯೈವ ವಿಜಿತೋ ಧರ್ಮೋ ಯಥೇಷ್ಟಚರಣಾತ್ಮನಾ ॥ ೩೩ ॥

ಜ್ಞಾನವು ಶ್ರೇಷ್ಠವಾದುದು. ಲೋಕದಲ್ಲಿ ಧರ್ಮವನ್ನಾಚರಿಸಿದರೆ ಮುಕ್ತಿ ಸಿಕ್ಕುವುದು. ಎಂಬುದಾಗಿ ಒಬ್ಬರಿಗೊಬ್ಬರಿಗೆ ಕಾದಾಡುತ್ತಾ ಅಲ್ಲಿರುವ ಜನರನ್ನು ಕುರಿತು ಲೋಕದಲ್ಲಿ ಧರ್ಮಕ್ಕೆ ಪ್ರಾಧಾನ್ಯವೇ ಅಥವಾ ಅಧರ್ಮಕ್ಕೆ ಪ್ರಾಧಾನ್ಯವೇ? ಎಂಬುದನ್ನು ತಿಳಿಸಿ ಎಂದು ಕೇಳಿದರು.

೩೦-೩೧ ಅವರಲ್ಲಿ ಕೆಲವರು—ಯಾರು ಧರ್ಮವನ್ನನುಸರಿಸುವರೋ ಅವರೆಲ್ಲರೂ ದುಃಖವನ್ನನುಭವಿಸುವರು. ಅಧರ್ಮಮಾರ್ಗಾವಲಂಬಿಗಳು ಸುಖಿಗಳಾಗುವರು. ಇದನ್ನು ಲೋಕದಲ್ಲಿ ಕಾಣಬಹುದು. ಎಂದು ಹೇಳಿದರು. ಅಂತೂ ಗೌತಮನೇ ಗೆದ್ದಂತಾಯಿತು. ಆದುದರಿಂದ ಮಣಿಕುಂಡಲನ ಹತ್ತಿರವಿರುವ ಧನವನ್ನೆಲ್ಲಾ ಬ್ರಾಹ್ಮಣನಿಗೆ ಕೊಡಿಸಿದರು. ಆದರೂ ಮಣಿಕುಂಡಲನು ಧರ್ಮವನ್ನೇ ಹೊಗಳುತ್ತಿದ್ದನು. ಆ ಸಮಯದಲ್ಲಿ ಗೌತಮನು ಮಣಿಕುಂಡಲನನ್ನು ಕುರಿತು ನೀನು ಇನ್ನೂ ಧರ್ಮವನ್ನು ಏಕೆ ಹೊಗಳುತ್ತಿರುವೆ? ಎಂದನು.

೩೨-೩೩. ಮಣಿಕುಂಡಲನು—'ಹೌದು. ನಾನು ಹಾಗೆಯೇ.' ಎನ್ನಲು ಪುನಃ ಬ್ರಾಹ್ಮಣನು ಅವನನ್ನು ಕುರಿತು ಎಲೋ ವೈಶ್ಯ, ನಾನು ನಿನ್ನ ಧನವನ್ನೆಲ್ಲಾ ಗೆದ್ದುಕೊಂಡಿರುವೆನು. ನಿನಗೆ ಇನ್ನೂ ನಾಚಿಕೆಯಿಲ್ಲದೆ ಮಾತನಾಡುತ್ತಿರುವೆಯಲ್ಲಾ? ಎಂದನು.

॥ ಬ್ರಹ್ಮೋವಾಚ ॥
ತದ್ಬ್ರಾಹ್ಮಣವಚಃ ಶ್ರುತ್ವಾ ವೈಶ್ಯಃ ಸಸ್ಮಿತ ಊಚಿವಾನ್ ॥ ೩೪ ॥
॥ ವೈಶ್ಯ ಉವಾಚ ॥
ಪುಲಕಾ ಇವ ಧಾನ್ಯೇಷು ಪುತ್ತಿಕಾ ಇವ ಪಕ್ಷಿಷು ।
ತಥೈವ ತಾನ್ಸಖೇ ಮನ್ಯೇ ಯೇಷಾಂ ಧರ್ಮೋ ನ ವಿದ್ಯತೇ ॥ ೩೫ ॥
ಚತುರ್ಣಾಂ ಪುರುಷಾರ್ಥಾನಾಂ ಧರ್ಮಃ ಪ್ರಥಮ ಉಚ್ಯತೇ ।
ಪಶ್ಚಾದರ್ಥಶ್ಚ ಕಾಮಶ್ಚ ಸ ಧರ್ಮೋ ಮಯಿ ತಿಷ್ಠತಿ ।
ಕಥಂ ಬ್ರೂಷೇ ದ್ವಿಜಶ್ರೇಷ್ಠ ಮಯಾ ವಿಜಿತಮಿತ್ಯದಃ ॥ ೩೬ ॥
॥ ಬ್ರಹ್ಮೋವಾಚ ॥
ದ್ವಿಜೋ ವೈಶ್ಯಂ ಪುನಃ ಪ್ರಾಹ ಹಸ್ತಾಭ್ಯಾಂ ಜಾಯತಾಂ ಪಣಃ ।
ತಥೇತಿ ಮನ್ಯತೇ ವೈಶ್ಯಸ್ತೌ ಗತ್ವಾ ಪುನರೂಚತುಃ ॥ ೩೭ ॥
ಪೂರ್ವವಲ್ಲೌಕಿಕಾನ್ಗತ್ವಾ ಜಿತಮಿತ್ಯಬ್ರವೀದ್ದ್ವಿಜಃ ।
ಕರೌ ಛಿತ್ವಾ ತತಃ ಪ್ರಾಹ ಕಥಂ ಧರ್ಮಂ ತು ಮನ್ಯಸೇ ।
ಆಕ್ಷಿಪ್ತೋ ಬ್ರಾಹ್ಮಣೇನೈವಂ ವೈಶ್ಯೋ ವಚನಮಬ್ರವೀತ್ ॥ ೩೮ ॥

---

೩೪. ಗೌತಮನಾಡಿದ ಮಾತುಗಳನ್ನು ಕೇಳಿ ಆ ಮಣಿಕುಂಡಲನು ನಗುತ್ತಾ ಗೌತಮನನ್ನು ಕುರಿತು,

೩೫–೩೬. ಧರ್ಮವನ್ನು ಬಿಟ್ಟು ಯಾರು ಅಧರ್ಮನಿರತರಾಗಿರುವರೋ ಅವರು ಧಾನ್ಯಗಳಲ್ಲಿ ಅಗುಳಿನಂತೆಯೂ, ಪಕ್ಷಿಗಳಲ್ಲಿ ಈಚಲು ಹುಳುವಿನಂತೆಯೂ ನೀಚರಾದವರು. ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ ಗಳಲ್ಲಿ ಧರ್ಮವು ಮೊದಲನೆಯದು. ಧರ್ಮವಾದಮೇಲೆ ಅರ್ಥವೂ ಆಮೇಲೆ ಕಾಮವೂ ಇರುವುದು. ಆದುದರಿಂದ ಅಂಥಹ ಧರ್ಮವನ್ನು ನಾನು ಅನು ಸರಿಸುವೆನು. ನೀನು ಮಾತ್ರ ನನ್ನನ್ನು ಜಯಿಸಿರುವೆನೆಂದು ಹೇಳಿಕೊಳ್ಳುವೆ. ಅದು ಹೇಗಾದೀತು? ಎಂದನು.

೩೭-೩೮. ಗೌತಮನು ಪುನಃ ಆ ವೈಶ್ಯನನ್ನು ಕುರಿತು ಈಗ ನಾವು ನಮ್ಮ ಕೈಗಳನ್ನೇ ಪಣವಾಗಿ ಕಟ್ಟೋಣ ಎಂದು ಹೇಳಿದನು. ಅನಂತರ ಇಬ್ಬರೂ ಹೊರಟು ಪುನಃ ಲೌಕಿಕರನ್ನು ಕೇಳಿದರು. ಆಗಲೂ ಗೌತಮನೇ ಗೆದ್ದನು. ಆಗ ಆ ಮಣಿಕುಂಡಲನ ಕೈಗಳು ಕತ್ತರಿಸಲ್ಪಟ್ಟವು. ಆಮೇಲೆ ಗೌತಮನು ಅವನನ್ನು ಆಕ್ಷೇಪಿಸುತ್ತಿರಲು ವೈಶ್ಯನು—

॥ ವೈಶ್ಯ ಉವಾಚ ॥
ಧರ್ಮಮೇವ ಪರಂ ಮನ್ಯೇ ಪ್ರಾಣೈಃ ಕಂಠಗತೈರಪಿ ।
ಮಾತಾ ಪಿತಾ ಸುಹೃದ್ಬಂಧುರ್ಧರ್ಮ ಏವ ಶರೀರಿಣಾಂ ॥ ೩೯ ॥

॥ ಬ್ರಹ್ಮೋವಾಚ ॥
ಏವಂ ವಿವದಮಾನೌ ತಾವರ್ಥವಾನ್ಬ್ರಾಹ್ಮಣೋಽಭವತ್ ।
ವಿಮುಕ್ತೋ ವೈಶ್ಯಕಸ್ತತ್ರ ಬಾಹುಭ್ಯಾಂ ಚ ಧನೇನ ಚ ॥ ೪೦ ॥

ಏವಂ ಭ್ರಮಂತೌ ಸಂಪ್ರಾಪ್ತೌ ಗಂಗಾಂ ಯೋಗೇಶ್ವರಂ ಹರಿಂ ।
ಯದೃಚ್ಛಯಾ ಮುನಿಶ್ರೇಷ್ಠ ಮಿಥಸ್ತಾವೂಚತುಃ ಪುನಃ ॥ ೪೧ ॥

ವೈಶ್ಯೋ ಗಂಗಾಂ ತು ಯೋಗೇಶಂ ಧರ್ಮಮೇವ ಪ್ರಶಂಸತಿ ।
ಅತಿಕೋಪಾದ್ದ್ವಿಜೋ ವೈಶ್ಯಮಾಕ್ಷಿಪನ್ಪುನರಬ್ರವೀತ್ ॥ ೪೨ ॥

॥ ಬ್ರಾಹ್ಮಣ ಉವಾಚ ॥
ಗತಂ ಧನಂ ಕರೌ ಛಿನ್ನಾವವಶಿಷ್ಟೋಽಸುಭಿರ್ಭವಾನ್ ।
ತ್ವಮನ್ಯಥಾ ಯದಿ ಬ್ರೂಷ ಆಹರಿಷ್ಯೇಽಸಿನಾ ಶಿರಃ ॥ ೪೩ ॥

---

೩೯. ನನ್ನ ಪ್ರಾಣವೇ ಹೋಗಲಿ, ನಾನು ಮಾತ್ರ ಧರ್ಮವನ್ನೇ ಅನುಸರಿಸುವೆನು. ಜನರಿಗೆ ಧರ್ಮವೇ, ತಾಯಿ, ತಂದೆ, ಸ್ನೇಹಿತ, ಬಂಧು. ಎಲ್ಲವೂ ಧರ್ಮವೇ ಎಂದನು.

೪೦-೪೨. ಈರೀತಿಯಾಗಿ ಇಬ್ಬರೂ ಜಗಳವಾಡುತ್ತಾ ಇದ್ದರು. ಆದರೆ ಆ ಬ್ರಾಹ್ಮಣನೇ ಎಲ್ಲೆಡೆಯಲ್ಲಿಯೂ ಗೆದ್ದನು. ವೈಶ್ಯನಾದರೋ ಹಣವನ್ನೂ ಕೈಗಳನ್ನೂ ಕಳೆದುಕೊಂಡನು. ಹೀಗಯೇ ಇಬ್ಬರೂ ತಿರುಗುತ್ತಾ ಕೊನೆಗೆ ಗಂಗಾನದಿಯ ಹತ್ತಿರಕ್ಕೆ ಬಂದರು. ಆ ಸ್ಥಳದಲ್ಲಿ ಯೋಗೀಶ್ವರನಾದ ಹರಿಯು ವಾಸವಾಗಿರುವನು. ಅಲ್ಲೂ ಸಹ ಅದೇ ಧರ್ಮದ ವಿಷಯವನ್ನು ಚರ್ಚಿಸಿದರು. ಆದರೆ ಮಣಿಕುಂಡಲನು ಮಾತ್ರ ಗಂಗೆಯನ್ನೂ ಹರಿಯನ್ನೂ ಪ್ರಶಂಸಿಸುತ್ತಾ ಧರ್ಮವನ್ನೇ ಪುಷ್ಟೀಕರಿಸಿ ಮಾತನಾಡಿದನು. ಇದರಿಂದ ಅತ್ಯಂತ ಕೋಪಗೊಂಡ ಆ ಗೌತಮನು ಅವನನ್ನು ಆಕ್ಷೇಪಿಸುತ್ತಾ–

೪೩. ನೋಡು. ನಿನ್ನ ಹಣವೆಲ್ಲಾ ಹೋಯಿತು. ಕೈಗಳು ಕತ್ತರಿಸಲ್ಪಟ್ಟವು. ನಿನಗೆ ಪ್ರಾಣಮಾತ್ರವಿರುವುದು. ಇಷ್ಟೆಲ್ಲಾ ದುಃಖಪಡುತ್ತಿದ್ದರೂ ನೀನು ಮಾತ್ರ ಧರ್ಮದ ಕಡೆಗೇ ವಾದಿಸುತ್ತಿರುವೆ. ಇನ್ನೇನಾದರೂ ಆರೀತಿ ಮಾತನಾಡಿದರೆ ಕತ್ತಿಯಿಂದ ನಿನ್ನ ತಲೆಯನ್ನು ಕತ್ತರಿಸುವೆನು. ಎಂದನು.

॥ ಬ್ರಹ್ಮೋವಾಚ ॥

ಏವಸ್ಯ ಪುನರಾಹೇದಂ ವೈಶ್ಯೋ ಗೌತಮಮುಂಜಸಾ ॥ ೪೪ ॥

॥ ವೈಶ್ಯ ಉವಾಚ ॥

ಧರ್ಮಮೇವ ಪರಂ ಮನ್ಯೇ ಯಥೇಚ್ಛಸಿ ತಥಾ ಕುರು ।
ಬ್ರಾಹ್ಮಣಾಂಶ್ಚ ಗುರೂನ್ದೇವಾನ್ವೇದಾನ್ಧರ್ಮಂ ಜನಾರ್ದನಂ ॥ ೪೫ ॥

ಯಸ್ತು ನಿಂದಯತೇ ಪಾಪೋ ನಾಸೌ ಸ್ಪೃಶ್ಯೋಽಥ ಪಾಪಕೃತ್ ।
ಉಪೇಕ್ಷಣೀಯೋ ದುರ್ವೃತ್ತಃ ಪಾಪಾತ್ಮಾ ಧರ್ಮದೂಷಕಃ ॥ ೪೬ ॥

॥ ಬ್ರಹ್ಮೋವಾಚ ॥

ತತಃ ಪ್ರಾಹ ಸ ಕೋಪೇನ ಧರ್ಮಂ ಯದ್ಯನುಶಂಸಸಿ ।
ಆವಯೋಃ ಪ್ರಾಣಯೋರತ್ರ ಪಣಃ ಸ್ಯಾದಿತಿ ವೈ ಮುನೇ ॥ ೪೭ ॥

ಏವಮುಕ್ತೇ ಗೌತಮೇನ ತಥೇತ್ಯಾಹ ವಣಿಕ್ತದಾ ।
ಪುನರಪ್ಯೂಚತುರುಭೌ ಲೋಕಾಂಲ್ಲೋಕಾಸ್ತಥೋತ್ತರೇ ॥ ೪೮ ॥

ಯೋಗೇಶ್ವರಸ್ಯ ಪುರತೋ ಗೌತಮ್ಯಾ ದಕ್ಷಿಣೇ ತಟೇ ।
ತಂ ನಿಪಾತ್ಯ ವಿಶಂ ವಿಪ್ರಶ್ಚಕ್ಷುರುತ್ಪಾಟ್ಯ ಚಾಬ್ರವೀತ್ ॥ ೪೯ ॥

೪೪-೪೬. ಈ ಮಾತನ್ನು ಕೇಳಿ ಮಣಿಕುಂಡಲನು ನಗುತ್ತಾ ಗೌತಮನನ್ನು ಕುರಿತು ನಿನಗಿಷ್ಟಬಂದಂತೆ ಮಾಡು. ನಾನೇನೋ ಧರ್ಮವೇ ಶ್ರೇಷ್ಠವೆಂದು ಹೇಳುವೆನು. ಬ್ರಾಹ್ಮಣರನ್ನೂ, ಗುರುಗಳನ್ನೂ, ದೇವತೆಗಳನ್ನೂ, ವೇದವನ್ನೂ, ಧರ್ಮವನ್ನೂ, ನಾರಾಯಣನನ್ನೂ ಯಾರು ನಿಂದಿಸುವರೋ ಅವರು ಪಾಪಿಗಳು, ಧರ್ಮದೂಷಕರು. ಇಂಥವರನ್ನು ಮುಟ್ಟಲೂ ಬಾರದು. ಅವರನ್ನು ತಿರಸ್ಕರಿಸಿ ಬಿಟ್ಟುಬಿಡಬೇಕು, ಎಂದನು.

೪೭-೪೯. ಅನಂತರ ಗೌತಮನು ಅತಿಕೋಪದಿಂದ ನೀನು ಧರ್ಮವನ್ನೇ ಅನುಸರಿಸುವ ಪಕ್ಷದಲ್ಲಿ ಪುನಃ ಪಣವಿಡೋಣ. ಈ ಸಾರಿ ನಮ್ಮಿಬ್ಬರ ಪ್ರಾಣವನ್ನೇ ಪಣವಾಗಿಡಬೇಕು ಎಂದನು. ಮಣಿಕುಂಡಲನು ಹಾಗೆಯೇ ಆಗಲೆಂದನು. ಆಮೇಲೆ ಇಬ್ಬರೂ ಜನಗಳನ್ನು ಕೇಳಲು ಗೌತಮನ ಕಡೆಗೇ ಬಹುಮತವು ದೊರೆಯಿತು. ಆಗ ಗೌತಮನು ಆ ಗಂಗಾನದಿಯ ದಕ್ಷಿಣದಡದಲ್ಲಿ ಯೋಗೀಶ್ವರನಾದ ಹರಿಯ ಮುಂಭಾಗದಲ್ಲಿ ಅವನನ್ನು ಕೆಡವಿ ಅವನ ಕಣ್ಣುಗಳನ್ನು ಕಿತ್ತು ಪುನಃ ಕೇಳಿದನು.

॥ ವಿಪ್ರ ಉವಾಚ ॥

ಗತೋಽಸೀಮಾಂ ದಶಾಂ ವೈಶ್ಯ ನಿತ್ಯಂ ಧರ್ಮಪ್ರಶಂಸಯಾ ।
ಗತಂ ಧನಂ ಗತಂ ಚಕ್ಷುಶ್ಛೇದಿತೌ ಕರಪಲ್ಲವೌ ।
ಪೃಷ್ಟೋಽಸಿ ಮಿತ್ರ ಗಚ್ಛಾಮಿ ನ್ಯೈವಂ ಬ್ರೂಯಾಃ ಕಥಾಂತರೇ ॥ ೫೦ ॥

॥ ಬ್ರಹ್ಮೋವಾಚ ॥

ತಸ್ಮಿನ್ಪ್ರಯಾತೇ ವೈಶ್ಯೋಽಸೌ ಚಿಂತಯಾಮಾಸ ಚೇತಸಿ ।
ಹಾ ಕಷ್ಟಂ ಮೇ ಕಿಮುಭವದ್ಧರ್ಮೈಕಮನಸೋ ಹರೇ ॥ ೫೧ ॥

ಸ ಕುಂಡಲೋ ವಣಿಕ್ಶ್ರೇಷ್ಠೋ ನಿರ್ಧನೋ ಗತಬಾಹುಕಃ ।
ಗತನೇತ್ರಃ ಶುಚಂ ಪ್ರಾಪ್ತೋ ಧರ್ಮಮೇವಾನುಸಂಸ್ಮರನ್ ॥ ೫೨ ॥

ಏವಂ ಬಹುವಿಧಾಂ ಚಿಂತಾಂ ಕುರ್ವನ್ನಾಸ್ತೇ ಮಹೀತಲೇ ।
ನಿಶ್ಚೇಷ್ಟೋಽಥ ನಿರುತ್ಸಾಹಃ ಪತಿತಃ ಶೋಕಸಾಗರೇ ॥ ೫೩ ॥

ದಿನಾವಸಾನೇ ಶರ್ವರ್ಯಾಮುದಿತೇ ಚಂದ್ರಮಂಡಲೇ ।
ಏಕಾದಶ್ಯಾಂ ಶುಕ್ಲಪಕ್ಷೇ ತತ್ರಾಯಾತಿ ವಿಭೀಷಣಃ ॥ ೫೪ ॥

---

೫೦. ಎಲೋ ವೈಶ್ಯನೇ, ಸುಮ್ಮನೆ ನೀನು ಧರ್ಮವನ್ನೇ ಹೊಗಳುತ್ತಾ ಈ ದೆಶೆಗೆ ಬಂದಿರುವೆ. ನಿನ್ನ ಹಣವು ಹೋಯಿತು. ಕೈಗಳು ಕತ್ತರಿಸಲ್ಪಟ್ಟವು. ಈಗ ಕಣ್ಣುಗಳೂ ಹೋದವು ಮಿತ್ರನೇ, ಇನ್ನು ನಾನು ಹೊರಡುತ್ತೇನೆ. ಆದರೆ ನಿನ್ನನ್ನು ಯಾವಾಗಲೂ ಸ್ಮರಿಸಿಕೊಳ್ಳುವುದೂ ಇಲ್ಲ ಎಂದನು.

೫೧-೫೨. ಗೌತಮನು ಅತ್ತ ಹೊರಟುಹೋಗಲು ಮಣಿಕುಂಡಲನು ಅಯ್ಯೋ ಎಂತಹ ಕಷ್ಟವು ಒದಗಿತು? ಧರ್ಮವೇ ಶ್ರೇಷ್ಠವೆಂದು ಹೇಳುತ್ತಿದ್ದ ನನಗೆ ಎಂತಹ ಅವಸ್ಥೆಯು ಬಂದಿತು? ಎಂಬುದಾಗಿ ಯೋಚಿಸುತ್ತಾ ಹಣವನ್ನೂ ಕೈ ಕಣ್ಣುಗಳನ್ನೂ ಕಳೆದುಕೊಂಡು ತುಂಬಾ ದುಃಖಿತನಾದನು. ಆದರೂ ಧರ್ಮದ ಸ್ಮರಣೆಯನ್ನು ಮಾತ್ರ ಬಿಡಲಿಲ್ಲ.

೫೩-೫೪. ಮಣಿಕುಂಡಲನು ತುಂಬಾ ದುಃಖಿತನಾಗಿ ಭೂಮಿಯ ಮೇಲೆ ಬಿದ್ದು ಮೂರ್ಛೆ ಹೊಂದಿದನು. ಹಗಲು ಕಳೆಯಿತು. ರಾತ್ರಿಯಾಯಿತು ಚಂದ್ರನೂ ಉದಯಿಸಿದನು. ಅಂದು ಏಕಾದಶಿ. ಪ್ರತಿ ಶುಕ್ಲಪಕ್ಷದ ಏಕಾ

ಸ ತು ಯೋಗೇಶ್ವರಂ ದೇವಂ ಪೂಜಯಿತ್ವಾ ಯಥಾವಿಧಿ ।
ಸ್ನಾತ್ವಾ ತು ಗೌತಮೀಂ ಗಂಗಾಂ ಸಪುತ್ರೋ ರಾಕ್ಷಸೈರ್ವೃತಃ ॥ ೫೫ ॥

ವಿಭೀಷಣಸ್ಯ ಹಿ ಸುತೋ ವಿಭೀಷಣ ಇವಾಪರಃ ।
ವೈಭೀಷಣಿರಿತಿ ಖ್ಯಾತಸ್ತಮಪಶ್ಯದುವಾಚ ಹ ॥ ೫೬ ॥

ವೈಶ್ಯಸ್ಯ ವಚನಂ ಶ್ರುತ್ವಾ ಯಥಾವೃತ್ತಂ ಸ ಧರ್ಮವಿತ್ ।
ಪಿತ್ರೇ ನಿವೇದಯಾಮಾಸ ಲಂಕೇಶಾಯ ಮಹಾತ್ಮನೇ ।
ಸ ತು ಲಂಕೇಶ್ವರಃ ಪ್ರಾಹ ಪುತ್ರಂ ಪ್ರೀತ್ಯಾ ಗುಣಾಕರಂ ॥ ೫೭ ॥

॥ ವಿಭೀಷಣ ಉವಾಚ ॥

ಶ್ರೀಮಾನ್ರಾಮೋ ಮಮ ಗುರುಸ್ತಸ್ಯ ಮಾನ್ಯಃ ಸಖಾ ಮಮ ।
ಹನುಮಾನಿತಿ ವಿಖ್ಯಾತಸ್ತೇನಾನೀತೋ ಗಿರಿರ್ಮಹಾನ್ ॥ ೫೮ ॥

ಪುರಾ ಕಾರ್ಯಾಂತರೇ ಪ್ರಾಪ್ತೇ ಸರ್ವೌಷಧ್ಯಾಶ್ರಯೋಽಚಲಃ ।
ಜಾತೇ ಕಾರ್ಯೇ ತಮಾದಾಯ ಹಿಮವಂತಮಥಾಗಮತ್ ॥ ೫೯ ॥

ದಶಿಯದಿನ ವಿಭೀಷಣನು ಹರಿಯನ್ನು ಪೂಜಿಸಲು ಅಲ್ಲಿಗೆ ಬರುವನು. ಅಂತೆಯೇ ವಿಭೀಷಣನು ತನ್ನ ಪುತ್ರ ಮತ್ತು ಇತರ ರಾಕ್ಷಸರೊಡಗೂಡಿ ಅಲ್ಲಿಗೆ ಬಂದು ಗೌತಮಿಯಲ್ಲಿ ಸ್ನಾನಮಾಡಿ ಯೋಗೀಶ್ವರನಾದ ಹರಿಯನ್ನು ಭಕ್ತಿಯಿಂದ ಪೂಜಿಸಿದನು.

೫೬–೫೭. ಆ ವಿಭೀಷಣನಿಗೆ ವೈಭೀಷಣಿ ಎಂಬ ಮಗನಿದ್ದನು. ಅವನು ಇಲ್ಲಿ ಬಿದ್ದಿರುವ ವೈಶ್ಯನನ್ನು ನೋಡಿ ಅವನಿಂದ ಅವನ ವೃತ್ತಾಂತವನ್ನೆಲ್ಲಾ ತಿಳಿದುಕೊಂಡು ಅದನ್ನು ತನ್ನ ತಂದೆಗೆ ತಿಳಿಸಿದನು. ವಿಭೀಷಣನು ತನ್ನ ಮಗನನ್ನು ಕುರಿತು ಪ್ರೀತಿಯಿಂದ ಇಂತೆಂದನು—

೫೮–೬೧. ನನ್ನ ಗುರುವು ರಾಮನು. ನನಗೆ ಸ್ನೇಹಿತನು ಹನುಮಂತನು. ಒಂದುಸಾರಿ ಯಾವುದೋ ಕಾರ್ಯಕ್ಕೋಸ್ಕರವಾಗಿ ಸರ್ವೌಷಧಿಗಳಿಂದ ಪರಿಪೂರ್ಣವಾದ ಪರ್ವತವನ್ನು ತೆಗೆದುಕೊಂಡುಬಂದನು. ಕೆಲಸವಾದನಂತರ ಅದನ್ನು ತೆಗೆದುಕೊಂಡು ಹಿಮವತ್ಪರ್ವತಕ್ಕೆ ಬಂದನು. ಅಲ್ಲಿ

ವಿಶಲ್ಯಕರಣೀ ಚೇತಿ ಮೃತಸಂಜೀವನೀತಿ ಚ ।
ತದಾನೀಯ ಮಹಾಬುದ್ಧೀ ರಾಮಾಯಾಕ್ಲಿಷ್ಟಕರ್ಮಣೇ ॥ ೬೦ ॥

ನಿವೇದಯಿತ್ವಾ ತತ್ಸಾಧ್ಯಂ ತಸ್ಮಿನ್ಸೃತ್ತೇ ಸಮಾಗತಃ ।
ಪುನರ್ಗಿರಿಂ ಸಮಾದಾಯ ಆಗಚ್ಛದ್ದೇವಪರ್ವತಂ ॥ ೬೧ ॥

ತಾಮಾನೀಯಾಸ್ಯ ಹೃದಯೇ ನಿವೇಶಯ ಹರಿಂ ಸ್ಮರನ್ ।
ತತಃ ಪ್ರಾಪ್ಸ್ಯತ್ಯಯಂ ಸರ್ವಮುಪೇಕ್ಷಿತಮುದಾರಧೀಃ ॥ ೬೨ ॥

ಗಚ್ಛತಸ್ತಸ್ಯ ವೇಗೇನ ವಿಶಲ್ಯಕರಣೀ ಪುನಃ ।
ಅಪತದ್ಗೌತಮೀತೀರೇ ಯತ್ರ ಯೋಗೇಶ್ವರೋ ಹರಿಃ ॥ ೬೩ ॥

॥ ವೈಭೀಷಣಿರುವಾಚ ॥

ತಾಮೋಷಧೀಂ ಮಮ ಪಿತರ್ದರ್ಶಯಾಶು ವಿಲಂಬ ಮಾ ।
ಪರಾರ್ತಿಶಮನಾದನ್ಯಚ್ಛ್ರೇಯೋ ನ ಭುವನತ್ರಯೇ ॥ ೬೪ ॥

ವಿಶಲ್ಯಕರಣೀ, ಮೃತಸಂಜೀವಿನೀ ಎಂಬ ಔಷಧಗಳನ್ನು ತೆಗೆದುಕೊಂಡು ಬಂದು ದುಃಖಿಸುತ್ತಿರುವ ರಾಮನಿಗೆ ಕೊಟ್ಟನು. ಅದರಿಂದ ಕೆಲಸವಾಗಲು ಪುನಃ ಆ ಪರ್ವತವನ್ನು ತೆಗೆದುಕೊಂಡು ದೇವಪರ್ವತಕ್ಕೆ ಬಂದನು.

೬೨-೬೩. ಆದುದರಿಂದ ನೀನಲ್ಲಿಗೆ ಹೋಗಿ ಆ ವಿಶಲ್ಯಕರಣಿಯನ್ನು ತಂದು ಹರಿಯ ಸ್ಮರಣೆಯನ್ನು ಮಾಡುತ್ತಾ ಈತನ ಹೃದಯದಮೇಲೆ ಇಡು. ಆಮೇಲೆ ಅವನು ತನ್ನ ಇಷ್ಟಾರ್ಥಗಳನ್ನೆಲ್ಲಾ ಹೊಂದುವನು. ಅದಲ್ಲದೆ ಆ ಪರ್ವತವನ್ನು ತೆಗೆದುಕೊಂಡುಹೋಗುತ್ತಿರುವಾಗ ಆ ವಿಶಲ್ಯಕರಣಿಯು ಗೌತಮೀ ತೀರದಲ್ಲಿ ಯೋಗೀಶ್ವರನಾದ ಹರಿಯಿರುವ ಸ್ಥಳದ ಸಮೀಪದಲ್ಲಿ ಬಿದ್ದು ಬಿಟ್ಟಿತು ಎಂದನು.

೬೪. ವಿಭೀಷಣನ ಮಗನಿಂತೆಂದನು—ಎಲೈ ತಂದೆಯೇ, ಆ ಔಷಧಿಯನ್ನು ನನಗೆ ಜಾಗ್ರತೆಯಾಗಿ ತೋರಿಸು. ಪರರ ಕಷ್ಟನಿವಾರಣೆಮಾಡುವುದಕ್ಕಿಂತ ಶ್ರೇಯಸ್ಕರವಾದ ಕೆಲಸವು ಬೇರೊಂದಿಲ್ಲ ಎಂದನು.

॥ ಬ್ರಹ್ಮೋವಾಚ ॥

ವಿಭೀಷಣಸ್ತಥೇತ್ಯುಕ್ತ್ವಾ ತಾಂ ಪುತ್ರಸ್ಯಾಪ್ಯದರ್ಶಯತ್ ।
ಇಷೇ ತ್ವೇತ್ಯಸ್ಯ ವೃಕ್ಷಸ್ಯ ಶಾಖಾಂ ಚಿಚ್ಛೇದ ತತ್ಸುತಃ ।
ವೈಶ್ಯಸ್ಯ ಚಾಪಿ ವೈ ಪ್ರೀತ್ಯಾ ಸಂತಃ ಪರಹಿತೇ ರತಾಃ ॥ ೬೫ ॥

॥ ವಿಭೀಷಣ ಉವಾಚ ॥

ಯತ್ರಾಪತನ್ನಗೇ ಚಾಸ್ಮಿನ್ಸ ವೃಕ್ಷಸ್ತು ಪ್ರತಾಪವಾನ್ ।
ತಸ್ಯ ಶಾಖಾಂ ಸಮಾದಾಯ ಹೃದಯೇಽಸ್ಯ ನಿವೇಶಯ ।
ತತ್ಸ್ಪೃಷ್ಟಮಾತ್ರ ಏವಾಸೌ ಸ್ವಕಂ ರೂಪಮವಾಪ್ನುಯಾತ್ ॥ ೬೬ ॥

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ಪಿತುರ್ವಾಕ್ಯಂ ವೈಭೀಷಣಿರುದಾರಧೀಃ ।
ತಥಾ ಚಕಾರ ವೈ ಸಮ್ಯಕ್ಕಾಷ್ಠಖಂಡಂ ನ್ಯವೇಶಯತ್ ॥ ೬೭ ॥

ಹೃದಯೇ ಸ ತು ವೈಶ್ಯೋಽಪಿ ಸಚಕ್ಷುಃ ಸಕರೋಽಭವತ್ ।
ಮಣಿಮಂತ್ರೌಷಧೀನಾಂ ಹಿ ವೀರ್ಯಂ ಕೋಽಪಿ ನ ಬುಧ್ಯತೇ ॥ ೬೮ ॥

---

೬೫. ವಿಭೀಷಣನು ಹಾಗೆಯೇ ಆಗಲೆಂದು ತನ್ನ ಮಗನಿಗೆ ಆ ಮೂಲಿಕೆಯನ್ನು ತೋರಿಸಿದನು. ಅವನು ಆ ಮರದ ಕೊಂಬೆಯೊಂದನ್ನು ಇಷೇತ್ವಾ ಎಂಬ ಮಂತ್ರದಿಂದ ಕತ್ತರಿಸಿ ತಂದನು. ಅನ್ಯರಿಗೆ ಹಿತವನ್ನುಂಟು ಮಾಡುವುದೇ ಸತ್ಪುರುಷರ ಸ್ವಭಾವವಲ್ಲವೇ ?

೬೬. ವಿಭೀಷಣನು ಮತ್ತೆ ಹೇಳಿದನು :—ಆ ಪರ್ವತವು ಬಿದ್ದಸ್ಥಳದಲ್ಲಿ ಒಂದು ದೊಡ್ಡವೃಕ್ಷವಿರುವುದು. ಅದರ ಕೊಂಬೆಯನ್ನು ಕಡಿದು ಅದರ ಚೂರನ್ನು ಅವನ ಹೃದಯದಲ್ಲಿ ಇಟ್ಟರೆ ಅವನು ಮೊದಲಿನಂತೆಯೇ ಆಗುವನು ಎಂದನು.

೬೭. ತಂದೆಯಮಾತಿನಂತೆ ವೈಭೀಷಣಿಯು ಆ ಮರದ ಕೊಂಬೆಯನ್ನು ಕತ್ತರಿಸಿ ಅದರ ಒಂದುಭಾಗವನ್ನು ಅವನ ಹೃದಯದಮೇಲೆ ಇಟ್ಟನು.

೬೮–೬೯. ಅದರಿಂದ ವೈಶ್ಯನಿಗೆ ಕಣ್ಣು ಕೈಗಳು ಮತ್ತೆ ಬಂದವು. ಮಣಿ, ಮಂತ್ರ, ಔಷಧಗಳ ಶಕ್ತಿಯನ್ನು ಯಾರುತಾನೇ ಬಲ್ಲರು ? ಅನಂತರ

ತದೇವ ಕಾಷ್ಠಮಾದಾಯ ಧರ್ಮಮೇವಾನುಸಂಸ್ಮರನ್ ।
ಸ್ನಾತ್ವಾ ತು ಗೌತಮೀಂ ಗಂಗಾಂ ಯಥಾ ಯೋಗೇಶ್ವರಂ ಹರಿಂ ॥ ೬೯ ॥

ನಮಸ್ಕೃತ್ವಾ ಪುನರಗಾತ್ಕಾಷ್ಠಖಂಡೇನ ವೈಶ್ಯಕಃ ।
ಪರಿಭ್ರಮನ್ನೃಪಪುರಂ ಮಹಾಪುರಮಿತಿ ಶ್ರುತಂ ॥ ೭೦ ॥

ಮಹಾರಾಜ ಇತಿ ಖ್ಯಾತಸ್ತತ್ರ ರಾಜಾ ಮಹಾಬಲಃ ।
ತಸ್ಯ ನಾಸ್ತಿ ಸುತಃ ಕಶ್ಚಿತ್ಪುತ್ರಿಕಾ ನಷ್ಟಲೋಚನಾ ॥ ೭೧ ॥

ಸೈವ ತಸ್ಯ ಸುತಾ ಪುತ್ರಸ್ತಸ್ಯಾಪಿ ವ್ರತಮೀದೃಶಂ ।
ದೇವೋ ವಾ ದಾನವೋ ವಾಪಿ ಬ್ರಾಹ್ಮಣಃ ಕ್ಷತ್ರಿಯೋ ಭವೇತ್ ॥ ೭೨ ॥

ವೈಶ್ಯೋ ವಾ ಶೂದ್ರಯೋನಿರ್ವಾ ಸಗುಣೋ ನಿರ್ಗುಣೋಽಪಿ ವಾ ।
ತಸ್ಮೈ ದೇಯಾ ಇಯಂ ಪುತ್ರೀ ಯೋ ನೇತ್ರೇ ಆಹರಿಷ್ಯತಿ ॥ ೭೩ ॥

ರಾಜ್ಯೇನ ಸಹ ದೇಯೇಯಮಿತಿ ರಾಜಾ ಹ್ಯಘೋಷಯತ್ ।
ಅಹರ್ನಿಶಮಸೌ ವೈಶ್ಯಃ ಶ್ರುತ್ವಾ ಘೋಷಮಥಾಬ್ರವೀತ್ ॥ ೭೪ ॥

ಆ ಮೂಲಿಕೆಯನ್ನು ತೆಗೆದುಕೊಂಡು ಧರ್ಮವನ್ನೇ ಸ್ಮರಿಸುತ್ತಾ ಗೌತಮಿಯಲ್ಲಿ ಸ್ನಾನಮಾಡಿ ಹರಿಯನ್ನು ಭಕ್ತಿಯಿಂದ ಪೂಜಿಸಿದನು.

೭೦-೭೧. ಬಳಿಕ ಮಣಿಕುಂಡಲನು ವಿಭೀಷಣನಿಗೆ ನಮಸ್ಕರಿಸಿ ಆ ಮೂಲಿಕೆಯನ್ನು ತೆಗೆದುಕೊಂಡು ಅಲ್ಲಿಂದ ಹೊರಟು ಸಂಚರಿಸುತ್ತಾ ಮಹಾಪುರವೆಂಬ ಪಟ್ಟಣಕ್ಕೆ ಬಂದನು. ಅಲ್ಲಿ ಮಹಾರಾಜನೆಂಬ ಒಬ್ಬ ರಾಜನು ಆಳುತ್ತಿದ್ದನು. ಅವನಿಗೆ ಮಕ್ಕಳಾರೂ ಇರಲಿಲ್ಲ. ಒಬ್ಬಳೇ ಹೆಣ್ಣುಮಗಳಿದ್ದಳು. ಆದರೆ ಅವಳು ಕುರುಡಿಯಾಗಿದ್ದಳು.

೭೨-೭೫. ಆ ರಾಜನು ಈರೀತಿಯಾಗಿ ಉದ್ಘೋಷಿಸಿದ್ದನು :—ದೇವನಾಗಲೀ, ದಾನವನಾಗಲೀ, ಬ್ರಾಹ್ಮಣನಾಗಲೀ, ಕ್ಷತ್ರಿಯನಾಗಲೀ, ಶೂದ್ರನಾಗಲೀ, ಗುಣವಂತನಾಗಲೀ, ದುರ್ಗುಣಿಯಾಗಲೀ ಯಾರಾದರೂ ಸರಿಯೇ

॥ ವೈಶ್ಯ ಉವಾಚ ॥

ಅಹಂ ನೇತ್ರೇ ಆಹರಿಷ್ಯೇ ರಾಜಪುತ್ರ್ಯಾ ಅಸಂಶಯಂ ॥ ೭೫ ॥

॥ ಬ್ರಹ್ಮೋವಾಚ ॥

ತಂ ವೈಶ್ಯಂ ತರಸಾದಾಯ ಮಹಾರಾಜ್ಞೇ ನ್ಯವೇದಯತ್ ।
ತತ್ಕಾಷ್ಠಸ್ಪರ್ಶಮಾತ್ರೇಣ ಸನೇತ್ರಾಭೂನ್ನೃಪಾತ್ಮಜಾ ॥ ೭೬ ॥

ತತಃ ಸವಿಸ್ಮಯೋ ರಾಜಾ ಕೋ ಭವಾನಿತಿ ಚಾಬ್ರವೀತ್ ।
ವೈಶ್ಯೋ ರಾಜ್ಞೇ ಯಥಾವೃತ್ತಂ ನ್ಯವೇದಯದಶೇಷತಃ ॥ ೭೭ ॥

॥ ವೈಶ್ಯ ಉವಾಚ ॥

ಬ್ರಾಹ್ಮಣಾನಾಂ ಪ್ರಸಾದೇನ ಧರ್ಮಸ್ಯ ತಪಸಸ್ತಥಾ ।
ದಾನಪ್ರಭಾವಾದ್ಯಜ್ಞೈಶ್ಚ ವಿವಿಧೈರ್ಭೂರಿದಕ್ಷಿಣೈಃ ।
ದಿವ್ಯೌಷಧಿಪ್ರಭಾವೇನ ಮಮ ಸಾಮರ್ಥ್ಯಮೀದೃಶಂ ॥ ೭೮ ॥

॥ ಬ್ರಹ್ಮೋವಾಚ ॥

ಏತದ್ವೈಶ್ಯವಚಃ ಶ್ರುತ್ವಾ ವಿಸ್ಮಿತೋಽಭೂನ್ಮಹೀಪತಿಃ ॥ ೭೯ ॥

ತನ್ನ ಮಗಳಿಗೆ ಕಣ್ಣು ಬರುವಂತೆ ಮಾಡಿದರೆ ಅವರಿಗೆ ತನ್ನ ಅರ್ಧರಾಜ್ಯವನ್ನೂ ರಾಜಕುಮಾರಿಯನ್ನೂ ಕೊಡುವೆನೆಂದು ಸಾರಿಸಿದನು. ಇದನ್ನು ಕೇಳಿ ಮಣಿ ಕುಂಡಲನು–ನಾನು ರಾಜಪುತ್ರಿಗೆ ಕಣ್ಣುಗಳನ್ನು ಬರಸುವೆನೆಂದು ಹೇಳಿದನು.

೭೬-೭೮. ತಕ್ಷಣವೇ ಮಣಿಕುಂಡಲನನ್ನು ರಾಜನಕಡೆಯವರು ಕರೆದು ಕೊಂಡುಬಂದರು. ಮಣಿಕುಂಡಲನು ಮೂಲಿಕೆಯನ್ನು ರಾಜಕುಮಾರಿಯ ಕಣ್ಣುಗಳಿಗೆ ಸೋಕಿಸಲು ಅವಳಿಗೆ ಕಣ್ಣುಬಂದಿತು. ಅದರಿಂದ ರಾಜನು 'ನೀನಾರೆಂದು' ಕೇಳಿದನು. ಆಗ ವೈಶ್ಯನು ಬ್ರಾಹ್ಮಣರುಗಳ ಆಶೀರ್ವಾದ ದಿಂದಲೂ, ಧರ್ಮ, ತಪಸ್ಸು, ದಾನ, ಯಜ್ಞಗಳ ಪ್ರಭಾವದಿಂದಲೂ, ವಿವಿಧ ವಾದ ಭೂರಿದಕ್ಷಿಣೆಗಳಿಂದಲೂ, ದಿವ್ಯೌಷದಿಗಳ ಪ್ರಭಾವದಿಂದಲೂ ನನಗೆ ಇಷ್ಟು ಸಾಮರ್ಥ್ಯವಿರುವುದು. ಎಂದು ರಾಜನಿಗೆ ಎಲ್ಲಾ ವಿಷಯಗಳನ್ನು ತಿಳಿಸಿದನು.

೭೯-೮೦. ವೈಶ್ಯನ ವಚನವನ್ನು ಕೇಳಿ ರಾಜನು ಬಹಳ ವಿಸ್ಮಿತನಾಗಿ ಇವನು ಮಹಾನುಭಾವನು. ಅಥವಾ ದೇವತೆಯೇ ಇರಬಹುದು. ಇಲ್ಲದಿದ್ದಲ್ಲಿ

॥ ರಾಜೋವಾಚ ॥

ಅಹೋ ಮಹಾನುಭಾವೋsಯಂ ಪ್ರಾಯೋ ವೃಂದಾರಕೋ ಭವೇತ್ ।
ಅನ್ಯಥೈತಾದೃಗನ್ಯಸ್ಯ ಸಾಮರ್ಥ್ಯಂ ದೃಶ್ಯತೇ ಕಥಂ ।
ತಸ್ಮಾದಸ್ಮೈ ತು ತಾಂ ಕನ್ಯಾಂ ಪ್ರದಾಸ್ಯೇ ರಾಜ್ಯಪೂರ್ವಿಕಾಂ ॥ ೮೦ ॥

॥ ಬ್ರಹ್ಮೋವಾಚ ॥

ಇತಿ ಸಂಕಲ್ಪ್ಯ ಮನಸಿ ಕನ್ಯಾಂ ರಾಜ್ಯಂ ಚ ದತ್ತವಾನ್ ।
ವಿಹಾರಾರ್ಥಂ ಗತಃ ಸ್ವೈರಂ ಪರಂ ಖೇದಮುಪಾಗತಃ ॥ ೮೧ ॥

ನ ಮಿತ್ರೇಣ ವಿನಾ ರಾಜ್ಯಂ ನ ಮಿತ್ರೇಣ ವಿನಾ ಸುಖಂ ।
ತಮೇವ ಸತತಂ ವಿಪ್ರಂ ಚಿಂತಯನ್ವೈಶ್ಯನಂದನಃ ॥ ೮೨ ॥

ಏತದೇವ ಸುಜಾತಾನಾಂ ಲಕ್ಷಣಂ ಭುವಿ ದೇಹಿನಾಂ ।
ಕೃಪಾರ್ದ್ರಂ ಯನ್ಮನೋ ನಿತ್ಯಂ ತೇಷಾಮಪ್ಯಹಿತೇಷು ಹಿ ॥ ೮೩ ॥

ಮಹಾನೃಪೋ ವನಂ ಪ್ರಾಯಾತ್ಸ ರಾಜಾ ಮಣಿಕುಂಡಲಃ ।
ತಸ್ಮಿನ್ ಶಾಸತಿ ರಾಜ್ಯಂ ತು ಕದಾಚಿದ್ಗೌತಮಂ ದ್ವಿಜಂ ॥ ೮೪ ॥

ಇಂತಹ ಸಾಮರ್ಥ್ಯವು ಇವನಿಗೆಲ್ಲಿಂದ ಬರಬೇಕು ? ಆದುದರಿಂದ ನನ್ನ ಮಗಳನ್ನು ಇವನಿಗೆ ಕೊಟ್ಟು ಮದುವೆಮಾಡಿ ಅರ್ಧರಾಜ್ಯವನ್ನೂ ಕೊಡುವೆನು. ಎಂದು ನಿಶ್ಚಯಿಸಿದನು.

೮೧. ಈರೀತಿ ಮನಸ್ಸು ಮಾಡಿ ತನ್ನ ಮಗಳನ್ನೂ ರಾಜ್ಯವನ್ನೂ ಆ ವೈಶ್ಯನಿಗೆ ಕೊಟ್ಟನು. ಹೀಗಿರಲು ಒಂದಾನೊಂದುದಿನ ವಿಹಾರಕ್ಕೆ ಹೋಗಿರುವಾಗ ಅವನಿಗೊಂದು ಯೋಚನೆಯುಂಟಾಯಿತು.

೮೨-೮೩. ಮಿತ್ರನಿಲ್ಲದಿದ್ದರೆ ಅದೆಂತಹ ರಾಜ್ಯ ? ಅದೆಂತಹ ಸುಖ ? ಎಂದು ಆ ಗೌತಮನನ್ನೇ ಯಾವಾಗಲೂ ಧ್ಯಾನಿಸುತ್ತಿದ್ದನು. ಇದೇ ಅಲ್ಲವೆ ಸತ್ಪುರುಷರ ಲಕ್ಷಣವೆಂಬುದು. ಅವರ ಮನಸ್ಸು ತಮ್ಮ ಶತ್ರುಗಳಲ್ಲಿಯೂ ಕೂಡ ದಯೆಯನ್ನು ತೋರಿಸುವುದಾಗಿರುವುದು.

೮೪-೮೫. ರಾಜನು ವನಕ್ಕೆ ಹೊರಟುಹೋಗಲು ಮಣಿಕುಂಡಲನು

ಹೃತಸ್ವಂ ದ್ಯೂತಕೈಃ ಪಾಪೈರಪಶ್ಯನ್ಮಣಿಕುಂಡಲಃ ।
ತಮಾದಾಯ ದ್ವಿಜಂ ಮಿತ್ರಂ ಪೂಜಯಾಮಾಸ ಧರ್ಮವಿತ್ ॥ ೮೫ ॥

ಧರ್ಮಾಣಾಂ ತು ಪ್ರಭಾವಂ ತಂ ತಸ್ಮೈ ಸರ್ವಂ ನ್ಯವೇದಯತ್ ।
ಸ್ನಾಪಯಾಮಾಸ ಗಂಗಾಯಾಂ ತಂ ಸರ್ವಾಘನಿವೃತ್ತಯೇ ॥ ೮೬ ॥

ತೇನ ವಿಪ್ರೇಣ ಸರ್ವೈಸ್ತೈಃ ಸ್ವಕೀಯೈರ್ಗೋತ್ರಜೈರ್ವೃತಃ ।
ವೈಶ್ಯೈಃ ಸ್ವದೇಶಸಂಭೂತೈರ್ಬ್ರಾಹ್ಮಣಸ್ಯ ತು ಬಾಂಧವೈಃ ॥ ೮೭ ॥

ವೃದ್ಧಕೌಶಿಕಮುಖ್ಯೈಶ್ಚ ತಸ್ಮಿನ್ಯೋಗೇಶ್ವರಾಂತಿಕೇ ।
ಯಜ್ಞಾನಿಷ್ಟ್ವಾ ಸುರಾನ್ಪೂಜ್ಯ ತತಃ ಸ್ವರ್ಗಮುಪೇಯಿವಾನ್ ॥ ೮೮ ॥

ರಾಜ್ಯವನ್ನು ಪರಿಪಾಲಿಸುತ್ತಿದ್ದನು. ಹೀಗಿರುವಲ್ಲಿ ಒಂದುಸಾರಿ ತನ್ನ ಸ್ನೇಹಿತನಾದ ಗೌತಮನನ್ನು ನೋಡಿದನು. ಅಷ್ಟುಹೊತ್ತಿಗೆ ಅವನು ಪಾಪಕೆಲಸಗಳಿಂದಲೂ, ದ್ಯೂತಗಳಿಂದಲೂ ಹಣವನ್ನೆಲ್ಲಾ ಕಳೆದುಕೊಂಡು ತಿರುಗುತ್ತಿದ್ದನು. ಮಣಿಕುಂಡಲನು ಅವನನ್ನು ಕರೆದುಕೊಂಡುಬಂದು ಪೂಜಿಸಿದನು.

೮೬-೮೮. ಧರ್ಮದ ಪ್ರಭಾವವನ್ನು ಕುರಿತು ಅವನಿಗೆ ಬೋಧಿಸಿದನು. ಅವನನ್ನು ಕರೆದುಕೊಂಡುಹೋಗಿ ಗಂಗೆಯಲ್ಲಿ ಸ್ನಾನಮಾಡಿಸಿದನು. ಅನಂತರ ಆ ವಿಪ್ರನ ಬಂಧು ಬಾಂಧವರನ್ನೂ ತಂದೆ ಮುಂತಾದುವರನ್ನೂ ಕರೆಸಿದನು. ತನ್ನ ದೇಶದವರನ್ನೂ, ತನ್ನ ಬಾಂಧವರನ್ನೂ ಕರೆಸಿ ವಿಷ್ಣುವಿನ ಎದುರಿಗೆ ಒಂದು ಯಜ್ಞವನ್ನು ಮಾಡಿಸಿದನು. ದೇವತೆಗಳನ್ನು ತೃಪ್ತಿಪಡಿಸಿದನು. ಆದರಿಂದ ಅವನಿಗೆ ಸ್ವರ್ಗಬಂದಿತು.

ತತಃ ಪ್ರಭೃತಿ ತತ್ತೀರ್ಥಂ ಮೃತಸಂಜೀವನಂ ವಿದುಃ ।
ಚಕ್ಷುಸ್ತೀರ್ಥಂ ಸಯೋಗೇಶಂ ಸ್ಮರಣಾದಪಿ ಪುಣ್ಯದಂ ।
ಮನಃಪ್ರಸಾದಜನನಂ ಸರ್ವದುರ್ಭಾವನಾಶನಂ ॥ ೮೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಚಕ್ಷುಸ್ತೀರ್ಥವರ್ಣನಂ ನಾಮ ಸಪ್ತತ್ಯಧಿಕ-ಶತತಮೋಽಧ್ಯಾಯಃ

---

೮೯. ಅಂದಿನಿಂದ ಆ ತೀರ್ಥಕ್ಕೆ ಮೃತಸಂಜೀವನವೆಂದು ಹೆಸರಾಯಿತು. ಚಕ್ಷುಸ್ತೀರ್ಥವೆಂದೂ ಹೆಸರು. ಈ ತೀರ್ಥವನ್ನೂ ಹರಿಯನ್ನೂ ಸ್ಮರಣೆಮಾಡಿದರೆ ಪುಣ್ಯವುಂಟಾಗುವುದು. ಮನಸ್ಸು ನಿರ್ಮಲವಾಗುವುದು. ಎಲ್ಲಾ ದುರ್ಭಾವನೆಗಳೂ ನಾಶವಾಗುವುವು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಚಕ್ಷುಸ್ತೀರ್ಥವರ್ಣನವೆಂಬ ನೂರೆಪ್ಪತ್ತನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ನೂರ ಒಂದನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಏಕಸಪ್ತತ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಉರ್ವಶೀತೀರ್ಥಮಾಖ್ಯಾತಮಶ್ವಮೇಧಫಲಪ್ರದಂ ।
ಸ್ನಾನದಾನಮಹಾದೇವವಾಸುದೇವಾರ್ಚನಾದಿಭಿಃ ॥ ೧ ॥

ಮಹೇಶ್ವರೋ ಯತ್ರ ದೇವೋ ಯತ್ರ ಶಾರ್ಙ್ಗಧರೋ ಹರಿಃ ।
ಪ್ರಮತಿರ್ನಾಮ ರಾಜಾಸೀತ್ಸಾರ್ವಭೌಮಃ ಪ್ರತಾಪವಾನ್ ॥ ೨ ॥

ರಿಪೂನ್ ಜಿತ್ವಾ ಜಗಾಮಾಶು ಇಂದ್ರಲೋಕಂ ಸುರೈರ್ವೃತಂ ।
ತತ್ರಾಪಶ್ಯತ್ಸುರಪತಿಂ ಮರುದ್ಭಿಃ ಸಹ ನಾರದ ॥ ೩ ॥

ನೂರೆಪ್ಪತ್ತೊಂದನೆಯ ಅಧ್ಯಾಯವು

೧-೨. ಬ್ರಹ್ಮನು ಹೇಳಿದನು :-ಊರ್ವಶೀತೀರ್ಥವೆಂಬ ಪ್ರಸಿದ್ಧವಾದ ತೀರ್ಥವಿರುವುದು. ಅದರಲ್ಲಿ ಸ್ನಾನದಾನಾದಿಗಳನ್ನೂ, ವಾಸುದೇವನ ಪೂಜೆಯನ್ನೂ ಮಾಡಿದರೆ ಅಶ್ವಮೇಧದ ಫಲವುಂಟಾಗುವುದು. ಅಲ್ಲಿ ಮಹೇಶ್ವರನೂ ನಾರಾಯಣನೂ ವಾಸವಾಗಿರುವರು.

೩-೪. ಒಂದು ಊರಿನಲ್ಲಿ ಪ್ರಮತಿ ಎಂಬ ಚಕ್ರವರ್ತಿಯಿದ್ದನು. ಅವನು ತನ್ನ ಪರಾಕ್ರಮದಿಂದ ಶತ್ರುಗಳನ್ನು ಜಯಿಸಿ ಇಂದ್ರಲೋಕಕ್ಕೂ

ಜಹಾಸೇಂದ್ರಂ ಪಾಶಹಸ್ತಂ ಪ್ರಮತಿಃ ಕ್ಷತ್ರಿಯರ್ಷಭಃ ।
ತಂ ಹಸಂತಮಥಾಲಕ್ಷ್ಯ ಹರಿಃ ಪ್ರಮತಿಮಬ್ರವೀತ್ ॥ ೪ ॥

॥ ಇಂದ್ರ ಉವಾಚ ॥

ದೇವಾಲಯೇ ಮಹಾಬುದ್ಧೇ ಮರುದ್ಭಿಃ ಕ್ರೀಡಿತೈರಲಂ ।
ದಿಶೋ ಜಿತ್ವಾ ದಿವಂ ಪ್ರಾಪ್ತಃ ಕುರು ಕ್ರೀಡಾಂ ಮಯಾ ಸಹ ॥ ೫ ॥

॥ ಬ್ರಹ್ಮೋವಾಚ ॥

ಸಕಷಾಯಂ ಹರಿವಚೋ ನಿಶಮ್ಯ ಪ್ರಮತಿರ್ನೃಪಃ ।
ತಥೇತ್ಯುವಾಚ ದೇವೇಂದ್ರಂ ನಿಷ್ಕೃತಿಂ ಕಾಂ ತು ಮನ್ಯಸೇ ।
ತಚ್ಛ್ರುತ್ವಾ ಪ್ರಮತೇರ್ವಾಕ್ಯಂ ಸುರರಾಣ್ನೃಪಮಬ್ರವೀತ್ ॥ ೬ ॥

॥ ಇಂದ್ರ ಉವಾಚ ॥

ಉರ್ವಶ್ಯೇವ ಪಣೋಽಸ್ಮಾಕಂ ಪ್ರಾಪ್ಯಾ ಯಾ ನಿಖಿಲೈರ್ಮುಖೈಃ ॥ ೭ ॥

ಹೋದನು. ಅಲ್ಲಿ ದೇವತೆಗಳೊಡಗೂಡಿದ ಮರುತ್ತುಗಳಿಂದ ಸೇವಿಸಲ್ಪಡುತ್ತಾ ಕೈಯಲ್ಲಿ ದಾಳವನ್ನು ಹಿಡಿದು ಕುಳಿತಿರುವ ಇಂದ್ರನನ್ನು ನೋಡಿ ನಕ್ಕನು. ಹೀಗೆ ತನ್ನನ್ನು ನೋಡಿ ನಗುತ್ತಿರುವುದನ್ನು ನೋಡಿ ಇಂದ್ರನು ಪ್ರಮತಿಯನ್ನು ಕುರಿತು–

೫. ಎಲೈ ಮಹಾಬುದ್ಧಿಯೇ, ಈ ದೇವಲೋಕಕ್ಕೆ ಬಂದು ಮರುತ್ತುಗಳೊಡನೆ ಆಟವಾಡಿದುದು ಸಾಕು. ದಿಕ್ಕುಗಳನ್ನೆಲ್ಲಾ ಗೆದ್ದು ದೇವಲೋಕಕ್ಕೆ ಬಂದಿರುವೆ. ಅದೆಲ್ಲಾ ಇರಲಿ. ಈಗ ನನ್ನೊಡನೆ ಆಟವಾಡು. ಬಾ ಎಂದನು.

೬-೭. ಕೋಪವುಂಟಾಗುವಂತೆ ಹೇಳಿದ ಆ ಮಾತನ್ನು ಕೇಳಿ ಹಾಗೆಯೇ ಆಗಲೆಂದು ಒಪ್ಪಿದನು. ಅದನ್ನು ಕೇಳಿ ಇಂದ್ರನು ಪ್ರಮತಿಯನ್ನು ಕುರಿತು, ನಾವಿಬ್ಬರೂ ಈಗ ಯುದ್ಧಮಾಡಬೇಕು. ಅದಕ್ಕೋಸ್ಕರ ಊರ್ವಶಿಯನ್ನು ಪಣವನ್ನಾಗಿ ಇಡೋಣ. ಎಂದನು.

॥ ಬ್ರಹ್ಮೋವಾಚ ॥

ಏತಚ್ಛ್ರುತ್ವೇಂದ್ರವಚನಂ ಪ್ರಮತಿಃ ಪ್ರಾಹ ಗರ್ವಿತಃ ।
ಉರ್ವಶೀಂ ನಿಷ್ಕೃತಿಂ ಮನ್ಯೇ ತ್ವಂ ರಾಜನ್ಕಿಂ ನು ಮನ್ಯಸೇ ॥ ೮ ॥

ಯದ್ಬ್ರವೀಷಿ ಸುರೇಶಾನ ತನ್ಮನ್ಯೇಽಹಂ ಶತಕ್ರತೋ ।
ಪ್ರಾಹೇಂದ್ರಂ ಪ್ರಮತಿಸ್ತದ್ವನ್ನಿಷ್ಕೃತ್ಯೈ ದಕ್ಷಿಣಂ ಕರಂ ।
ಸವರ್ಮ ಸಶರಂ ಧರ್ಮ್ಯಂ ದೇಹಿ ದೀವ್ಯಾಮಹೇ ವಯಂ ॥ ೯ ॥

॥ ಬ್ರಹ್ಮೋವಾಚ ॥

ತಾವೇವಂ ಸಂವಿದಂ ಕೃತ್ವಾ ದೇವನಾಯೋಪತಸ್ಥತುಃ ।
ಪ್ರಮತಿರ್ಜಿತವಾಂಸ್ತತ್ರ ಉರ್ವಶೀಂ ದೈವತಸ್ತ್ರಿಯಂ ।
ತಾಂ ಜಿತ್ವಾ ಪ್ರಮತಿಃ ಪ್ರಾಹ ಸಂರಂಭಾತ್ತಂ ಶತಕ್ರತುಂ ॥ ೧೦ ॥

॥ ಪ್ರಮತಿರುವಾಚ ॥

ನಿಷ್ಕೃತ್ಯೈ ಪುನರನ್ಯನ್ಮೇ ಪಶ್ಚಾದ್ದೀವ್ಯೇ ತ್ವಯಾ ವಿಭೋ ॥ ೧೧ ॥

೮-೯. ಇಂದ್ರನು ಹೇಳಿದುದನ್ನು ಕೇಳಿ ಪ್ರಮತಿಯು ಗರ್ವಿತನಾಗಿ– ಎಲೈ ಇಂದ್ರನೇ, ನಾನೇನೋ ಊರ್ವಶಿಯನ್ನು ಪಣವಾಗಿಡಲು ಒಪ್ಪಿರುವೆನು. ಎಂಬುದಾಗಿ ಹೇಳಿ ತಾನು ತನ್ನ ಬಲಗೈಯನ್ನು ಪಣಕ್ಕೋಸ್ಕರ ನೀಡಿದನು. ಅನಂತರ ಇಂದ್ರನನ್ನು ಕುರಿತು, ನನಗೀಗ ಕವಚ, ಬಾಣಗಳು ಮುಂತಾದ ಯುದ್ಧಸಾಮಗ್ರಿಗಳನ್ನು ಕೊಡು ನಾವಿಬ್ಬರೂ ಜೂಜಾಡೋಣ. ಎಂದನು.

೧೦. ಈರೀತಿ ಪಣವನ್ನು ಕಟ್ಟಿ ಇಬ್ಬರೂ ಪಗಡೆಯಾಡಲು ಕುಳಿತರು. ಅದರಲ್ಲಿ ಪ್ರಮತಿಯೇ ಗೆದ್ದನು. ಊರ್ವಶಿಯು ಇವನಿಗೇ ಸಿಕ್ಕಿದಳು. ಆಮೇಲೆ ಆನಂದದಿಂದ ಇಂದ್ರನನ್ನು ಕುರಿತು–

೧೧. ಓ ದೇವೇಂದ್ರನೇ, ಬೇಕಾದರೆ ಇನ್ನೂ ಒಂದು ಪಣವನ್ನಿಡು. ಪುನಃ ನಿನ್ನೊಡನೆ ಪಗಡೆಯಾಡುವೆನು. ಎಂದನು.

॥ ಇಂದ್ರ ಉವಾಚ ॥

ದೇವಯೋಗ್ಯಮಥೋ ವಜ್ರಂ ಜೈತ್ರಂ ಸರಥಮುತ್ತಮಂ ।
ದೀವ್ಯೇಽಹಂ ತೇನ ನೃಪತೇ ಕರೇಣಾಪ್ಯವಿಚಾರಯನ್ ॥ ೧೨ ॥

॥ ಬ್ರಹ್ಮೋವಾಚ ॥

ಸ ಗೃಹೀತ್ವಾ ತದಾ ಪಾಶಾನನ್ಯಾಂಶ್ಚ ಮಣಿಭೂಷಿತಾನ್ ।
ಜಿತಮಿತ್ಯಬ್ರವೀಚ್ಛಕ್ರಂ ಪ್ರಮತಿಃ ಪ್ರಹಸಂಸ್ತದಾ ॥ ೧೩ ।

ಏತಸ್ಮಿನ್ನಂತರೇ ಪ್ರಾಯಾದಕ್ಷಜ್ಞಸ್ತತ್ರ ನಾರದ ।
ವಿಶ್ವಾವಸುರಿತಿ ಖ್ಯಾತೋ ಗಂಧರ್ವಾಣಾಂ ಮಹೇಶ್ವರಃ ॥ ೧೪ ॥

॥ ವಿಶ್ವಾವಸುರುವಾಚ ॥

ಗಂಧರ್ವವಿದ್ಯಯಾ ರಾಜಂಸ್ತ್ವಯಾ ದೀವ್ಯಾಮಹೇ ತ್ವಯಾ ।
ತಥೇತ್ಯುಕ್ತ್ವಾ ಸ ನೃಪತಿರ್ಜಿತಮಿತ್ಯಬ್ರವೀತ್ತದಾ ॥ ೧೫ ॥

ತೌ ಜಿತ್ವಾ ನೃಪತಿರ್ಮೌಖ್ಯಾರ್ದ್ದೇವೇಂದ್ರಂ ಪ್ರಾಹ ಕಶ್ಮಲಂ ॥ ೧೬ ॥

---

೧೨. ಅದಕ್ಕೆ ಇಂದ್ರನು–ಎಲೈ ರಾಜನೇ, ಈಗ ನಾನು ವಜ್ರಾಯುಧ ವನ್ನೂ ಜೈತ್ರವೆಂಬ ರಥವನ್ನೂ ಪಣವಾಗಿಟ್ಟಿರುವೆನು. ನಾನು ನಿನ್ನೊಡನೆ ಆಟ ಆಡುವೆನು. ಎಂದನು.

೧೩-೧೪. ಪ್ರಮತಿಯು ದಾಳಗಳನ್ನು ತೆಗೆದುಕೊಂಡು ಈಗಲೂ ನೀನು ಸೋತೆ ಎಂದನು. ಆ ಸಮಯದಲ್ಲಿ ಪಗಡೆ ವಿದ್ಯೆಯಲ್ಲಿ ಪ್ರವೀಣನಾದ ನಾರದನೂ, ಗಂಧರ್ವರಿಗೆ ಪ್ರಭುವಾದ ವಿಶ್ವಾವಸುವೂ ಸಹ ಅಲ್ಲಿಗೆ ಬಂದರು.

೧೫-೧೬. ವಿಶ್ವಾವಸುವು ಹೇಳಿದನು :–ಎಲೈ ರಾಜನೇ, ನಾನು ನಿನ್ನೊಡನೆ ಗಂಧರ್ವರು ಆಡುವ ರೀತಿಯಲ್ಲಿ ಪಗಡೆಯಾಡುವೆನೆನ್ನಲು, ರಾಜನು ಹಾಗೆಯೇ ಆಗಲೆಂದು ಒಪ್ಪಿ 'ನೀವೂ ಸಹ ಸೋತಿರಿ' ಎಂದನು. ಈರೀತಿಯಾಗಿ ಅವರಿಬ್ಬರನ್ನೂ ಜಯಿಸಿ ಮಹೇಂದ್ರನನ್ನು ಕುರಿತು ಮತ್ತೆ ಹೇಳಿದನು.

॥ ಪ್ರಮತಿರುವಾಚ ॥

ರಣೇ ವಾ ದೇವಸೇ ವಾಪಿ ನ ತ್ವಂ ಜೇತಾ ಕಥಂಚನ ।
ಮಹೇಂದ್ರ ಸತತಂ ತಸ್ಮಾದಸ್ಮದಾರಾಧಕೋ ಭವ ।
ವದ ಕೇನ ಪ್ರಕಾರೇಣ ಜಾತಾ ದೇವೇಂದ್ರತಾ ತವ ॥ ೧೭ ॥

॥ ಬ್ರಹ್ಮೋವಾಚ ॥

ತಥಾ ಪ್ರಾಹೋರ್ವಶೀಂ ಗರ್ವಾದ್ಗಚ್ಛ ಕರ್ಮಕರೀ ಭವ ।
ಉರ್ವಶೀ ಪ್ರಾಹ ದೇವೇಷು ಯಥಾ ವರ್ತೇ ತಥಾ ತ್ವಯಿ ।
ವರ್ತೇಯ ಸರ್ವಭಾವೇನ ನ ಮಾಂ ಧಿಕ್ಕರ್ತುಮರ್ಹಸಿ ॥ ೧೮ ॥

॥ ಬ್ರಹ್ಮೋವಾಚ ॥

ತತಸ್ತಾಂ ಪ್ರಮತಿಃ ಪ್ರಾಹ ತ್ವಾದೃಶ್ಯಃ ಸಂತಿ ಚಾರಿಕಾಃ ।
ತ್ವಂ ಕಿಂ ವಿಲಜ್ಜಸೇ ಭದ್ರೇ ಗಚ್ಛ ಕರ್ಮಕರೀ ಭವ ॥ ೧೯ ॥

ಏತಚ್ಛ್ರುತ್ವಾ ನೃಪೇಣೋಕ್ತಂ ಗಂಧರ್ವಾಧಿಪತಿಸ್ತದಾ ।
ಚಿತ್ರಸೇನ ಇತಿ ಖ್ಯಾತಃ ಸುತೋ ವಿಶ್ವಾವಸೋರ್ಬಲೀ ॥ ೨೦ ॥

---

೧೭. ಎಲೈ ಇಂದ್ರನೇ, ಯುದ್ಧದಲ್ಲಿಯಾಗಲೀ, ಪಗಡೆಯಲ್ಲಿಯಾಗಲೀ ನೀನು ಯಾರಿಗೂ ಸೋಲುತ್ತಿರಲಿಲ್ಲ. ಅಂಥಹ ನಿನ್ನನ್ನು ನಾನು ಸೋಲಿಸಿರುವೆನು. ನನ್ನನ್ನೀಗ ನೀನು ಪೂಜಿಸಬೇಕು. ಈಗ ನೋಡು. ನಿನ್ನ ದೇವೇಂದ್ರತನವು ಹೇಗಾಯಿತು? ಎಂದನು.

೧೮. ಆಮೇಲೆ ಊರ್ವಶಿಯನ್ನು ಕುರಿತು ನಡೆ, ಇನ್ನುಮೇಲೆ ನೀನು ನನಗೆ ಪರಿಚಾರಕಿಯಾಗಿರಬೇಕು ಎಂದನು. ಊರ್ವಶಿಯು ದೇವತೆಗಳ ವಿಷಯದಲ್ಲಿ ನಾನು ಹೇಗೆ ನಡೆದುಕೊಳ್ಳುತ್ತಿರುವೆನೋ ಹಾಗೆಯೇ ಎಲ್ಲಾವಿಧದಲ್ಲಿಯೂ ನಿನ್ನ ವಿಷಯದಲ್ಲಿ ನಡೆದುಕೊಳ್ಳುವೆನು. ಆದುದರಿಂದ ನನ್ನನ್ನು ಧಿಕ್ಕರಿಸಬೇಡ. ಎಂದಳು.

೧೯-೨೦. ಆಗ ಪ್ರಮತಿಯು ನಿನ್ನಂತಹ ಸುಂದರಿಯರು ಅನೇಕರು ನನಗೆ ಪರಿಚಾರಿಣಿಯರಾಗಿರುವರು. ನೀನು ಮಾತ್ರ ಏಕೆ ನಾಚುವೆ? ನಡೆ, ನಡೆ. ಕೆಲಸಮಾಡು ಎಂದನು. ಇವನಾಡಿದುದನ್ನು ಕೇಳಿ ವಿಶ್ವಾವಸುವಿನ ಮಗನಾದ ಗಂಧರ್ವಾಧಿಪತಿ ಚಿತ್ರಸೇನನೆಂಬುವನು ಪ್ರಮತಿಯನ್ನು ಕುರಿತು–

॥ ಚಿತ್ರಸೇನ ಉವಾಚ ॥

ದೀವ್ಯೇಽಹಂ ವೈ ತ್ವಯಾ ರಾಜನ್ಸರ್ವೇಣಾನೇನ ಭೂಪತೇ ।
ರಾಜ್ಯೇನ ಜೀವಿತೇನಾಪಿ ಮದೀಯೇನ ತವಾಪಿ ಚ ॥ ೨೧ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಪುನರುಭೌ ಚಿತ್ರಸೇನನೃಪೋತ್ತಮೌ ।
ದೀವ್ಯೇತಾಮಭಿಸಂರಬ್ಧೌ ಚಿತ್ರಸೇನೋಽಜಯತ್ತದಾ ॥ ೨೨ ॥

ಗಾಂಧರ್ವೈಸ್ತಂ ಮಹಾಪಾಶೈರ್ಬಬಂಧ ನೃಪತಿಂ ತದಾ ।
ಚಿತ್ರಸೇನೋಽಜಯತ್ಸರ್ವಮುರ್ವಶೀಮುಖ್ಯತಃ ಪಣೈಃ ॥ ೨೩ ॥

ರಾಜ್ಯಂ ಕೋಶಂ ಬಲಂ ಚೈವ ಯದನ್ಯದ್ವಸು ಕಿಂಚನ ।
ಚಿತ್ರಸೇನಸ್ಯ ತಜ್ಜ್ಞಾತಂ ಯದಾಸೀತ್ಪ್ರಮತೇರ್ಧನಂ ॥ ೨೪ ॥

ತಸ್ಯ ಪುತ್ರೋ ಬಾಲ ಏವ ಪುರೋಧಸಮುವಾಚ ಹ ।
ವೈಶ್ವಾಮಿತ್ರಂ ಮಹಾಪ್ರಾಜ್ಞಂ ಮಧುಚ್ಛಂದಸಮೋಜಸಾ ॥ ೨೫ ॥

---

೨೧. ಎಲೈ ರಾಜನೇ, ನಾನು ನಿನ್ನೊಡನೆ ಆಟವಾಡುವೆನು. ನಮ್ಮಿಬ್ಬರ ರಾಜ್ಯವನ್ನೂ, ಕೊನಿಗೆ ಜೀವಿತವನ್ನೂ ಪಣವಾಗಿಡೋಣ ಎಂದನು.

೨೨-೨೫. ಹಾಗೆಯೇ ಆಗಲೆಂದು ಇಬ್ಬರೂ ಒಪ್ಪಿ ಪಗಡೆಯಾಡಲು ಕುಳಿತರು. ಪರಸ್ಪರ ಜಯಿಸಬೇಕೆಂಬ ಆಸೆಯಿಂದ ಆಟವಾಡಿದರು. ಅದರಲ್ಲಿ ಚಿತ್ರಸೇನನೇ ಗೆದ್ದನು. ಚಿತ್ರಸೇನನ ಅಪ್ಪಣೆಯಂತೆ ಗಂಧರ್ವರೆಲ್ಲರೂ ಆ ಪ್ರಮತಿಯನ್ನು ಹಗ್ಗಗಳಿಂದ ಕಟ್ಟಿದರು. ಚಿತ್ರಸೇನನು ಪ್ರಮತಿಗೆ ಸೇರಿದ ಊರ್ವಶೀ, ರಾಜ್ಯ, ಕೋಶ, ಬಲ, ಎಲ್ಲವನ್ನೂ ಗೆದ್ದನು. ಆ ಸಮಯದಲ್ಲಿ ಪ್ರಮತಿಯ ಮಗನಾದ ಬಾಲನೆಂಬುವನು, ವಿಶ್ವಾಮಿತ್ರವಂಶೋದ್ಭವನಾದ ಮಧುಚ್ಛಂದನೆಂಬ ಪುರೋಹಿತನನ್ನು ಕುರಿತು–

॥ ಪ್ರಮತಿಪುತ್ರ ಉವಾಚ ॥

ಕಿಂ ಮೇ ಪಿತ್ರಾ ಕೃತಂ ಪಾಪಂ ಕ್ವ ವಾ ಬದ್ಧೋ ಮಹಾಮತಿಃ ।
ಕಥಮೇಷ್ಯತಿ ಸ್ವಂ ಸ್ಥಾನಂ ಕಥಂ ಪಾಶೈರ್ವಿಮೋಕ್ಷ್ಯತೇ ॥ ೨೬ ॥

॥ ಬ್ರಹ್ಮೋವಾಚ ॥

ಸುಮತೇರ್ವಚನಂ ಶ್ರುತ್ವಾ ಧ್ಯಾತ್ವಾ ಸ ಮುನಿಸತ್ತಮಃ ।
ಮಧುಚ್ಛಂದಾ ಜಗಾದೇದಂ ಪ್ರಮತೇರ್ವರ್ತನಂ ತದಾ ॥ ೨೭ ॥

॥ ಮಧುಚ್ಛಂದಾ ಉವಾಚ ॥

ದೇವಲೋಕೇ ತವ ಪಿತಾ ಬದ್ಧ ಆಸ್ತೇ ಮಹಾಮತೇ ।
ಕೈತವೈರ್ಬಹುದೋಷೈಶ್ಚ ಭ್ರಷ್ಟರಾಜ್ಯೋ ಬಭೂವ ಹ ॥ ೨೮ ॥

ಯೋ ಯಾತಿ ಕೈತವಸಭಾಂ ಸ ಚಾಪಿ ಕ್ಲೇಶಭಾಗ್ಭವೇತ್ ।
ದ್ಯೂತಮದ್ಯಾಮಿಷಾದೀನಿ ವ್ಯಸನಾನಿ ನೃಪಾತ್ಮಜ ॥ ೨೯ ॥

ಪಾಪಿನಾಮೇವ ಜಾಯಂತೇ ಸದಾ ಪಾಪಾತ್ಮಕಾನಿ ಹಿ ।
ಏಕೈಕಮಪ್ಯನರ್ಥಾಯ ಪಾಪಾಯ ನರಕಾಯ ಚ ॥ ೩೦ ॥

---

೨೬. ನನ್ನ ತಂದೆಯು ಯಾವ ಅಪರಾಧವನ್ನು ಮಾಡಿದನು? ಅವನನ್ನೇಕೆ ಹಗ್ಗಗಳಿಂದ ಕಟ್ಟಿರುವರು? ಅವನಿಗೆ ಬಿಡುಗಡೆಯಾಗಿ ತನ್ನೂರಿಗೆ ಎಂದು ಹೋಗುವನು? ಎಂದು ಕೇಳಿದನು.

೨೭. ಅವನ ಮಾತನ್ನು ಕೇಳಿ ಸ್ವಲ್ಪಕಾಲ ಧ್ಯಾನಮಾಡಿದನು. ಅನಂತರ ಮಧುಚ್ಛಂದನು ಇಂತು ನುಡಿದನು—

೨೮-೩೦. ಎಲೈ ಪ್ರಾಜ್ಞನೇ, ನಿನ್ನ ತಂದೆಯನ್ನು ದೇವಲೋಕದಲ್ಲಿ ಕಟ್ಟಿಹಾಕಿರುವರು. ಮೋಸಗಳಿಗೂ ಅನೇಕದೋಷಗಳಿಗೂ ಸಿಲುಕಿ ರಾಜ್ಯಭ್ರಷ್ಟನಾಗಿರುವನು. ಯಾರು ಜೂಜಾಟದ ಗುಂಪಿನಲ್ಲಿ ಸೇರುವರೋ ಅವರು ದ್ಯೂತಮದ್ಯಮಾಂಸಾದಿಗಳನ್ನು ಸೇವಿಸುತ್ತಾ ದುಃಖಿತರಾಗುವರು. ಈ ಪಾಪಗಳೆಲ್ಲಾ ಬಂದು ಸೇರಬೇಕಾದರೆ ಪಾಪಿಗಳಿಗೆಯೇ. ಇದರಿಂದ ಪಾಪವೊಂದೇ ಅಲ್ಲದೆ ನರಕವೂ ಉಂಟಾಗುವುದು.

ಯಾನಾಸನಾಭಿಲಾಷಾದ್ಯೈಃ ಕೃತ್ಯೈಃ ಕೈತವವರ್ತಿಭಿಃ ।
ಕುಲೀನಾಃ ಕಲುಷೀಭೂತಾಃ ಕಿಂ ಪುನಃ ಕಿತವೋ ಜನಃ ॥ ೩೧ ॥

ಕಿತವಸ್ಯ ತು ಯಾ ಜಾಯಾ ತಪ್ಯತೇ ನಿತ್ಯಮೇವ ಸಾ ।
ಸ ಚಾಪಿ ಕಿತವಃ ಪಾಪೋ ಯೋಷಿತಂ ವೀಕ್ಷ್ಯ ತಪ್ಯತೇ ॥ ೩೨ ॥

ತಾಂ ದೃಷ್ಟ್ವಾ ವಿಗತಾನಂದೋ ನಿತ್ಯಂ ವದತಿ ಪಾಪಕೃತ್ ।
ಅಹೋ ಸಂಸಾರಚಕ್ರೇಽಸ್ಮಿನ್ಮಯಾ ತುಲ್ಯೋ ನ ಪಾತಕೀ ॥ ೩೩ ॥

ನ ಕಿಂಚಿದಪಿ ಯಸ್ಯಾಸ್ತೇ ಲೋಕೇ ವಿಷಯಜಂ ಸುಖಂ ।
ಲೋಕದ್ವಯೇಽಪಿ ನ ಸುಖೀ ಕಿತವಃ ಕೋಽಪಿ ದೃಶ್ಯತೇ ॥ ೩೪ ॥

ವಿಭಾತಿ ಚ ತಥಾ ನಿತ್ಯಂ ಲಜ್ಜಯಾ ದಗ್ಧಮಾನಸಃ ।
ಗತಧರ್ಮೋ ನಿರಾನಂದೋ ಗ್ರಸ್ತಗರ್ವಸ್ತಥಾಟತಿ ॥ ೩೫ ॥

೩೧-೩೩. ಜೂಜುಗಾರರ ಸಹವಾಸಕ್ಕೆ ಸೇರಿ ಒಳ್ಳೆಯವರೂ ಸಹ ವಾಹನಗಳಲ್ಲಿ ಕುಳಿತು ವಿವಿಧವಾದ ಆಸನಗಳಲ್ಲಿ ಮಂಡಿಸಿ ನಾನಾವಿಧವಾಗಿ ಮಾತನಾಡುತ್ತಾ ಕೆಟ್ಟುಹೋಗುವರು. ಸತ್ಪುರುಷರೇ ಈರೀತಿಯಾಗುವಲ್ಲಿ ಇನ್ನು ಜೂಜುಗಾರರ ವಿಷಯವನ್ನು ಹೇಳುವುದೇನಿದೆ? ಆ ಜೂಜುಗಾರನ ಹೆಂಡತಿಯು ದಿನದಿನವೂ ದುಃಖಪಡುವಳು. ಜೂಜುಗಾರನೂ ಸಹ ಇತರ ಸ್ತ್ರೀಯರನ್ನು ನೋಡಿ ದುಃಖಪಡುವನು. ಹಾಗೂ 'ಅಯ್ಯೋ, ಈ ಸಂಸಾರದಲ್ಲಿ ನನಗಿಂತ ಪಾತಕಿಯು ಬೇರೊಬ್ಬನಿಲ್ಲ' ಎಂಬುದಾಗಿ ವ್ಯಸನಪಡುವನು.

೩೪-೩೫. ಈ ಲೋಕದಲ್ಲಿ ಯಾರು ವಿಷಯ ಸುಖಗಳನ್ನು ಅನುಭವಿಸುವುದಿಲ್ಲವೋ ಅಂತಹ ಜೂಜುಗಾರನು ಎಲ್ಲಿಯೂ ಇರುವುದಿಲ್ಲ. ಅವನಿಗೆಇಹ ಪರಗಳೆರಡರಲ್ಲಿಯೂ ಸೌಖ್ಯವಿಲ್ಲ. ಆದರೆ ಅವನು ಅತ್ಯಂತ ನಾಚಿಕೆಯಿಂದ ತಾನು ಧರ್ಮಚ್ಯುತನಾದುದಕ್ಕೆ ದುಃಖಪಡುತ್ತಾ, ಸುಖವಿಲ್ಲದೆ ಹಿಂದಿನ ಗರ್ವವನ್ನು ಬಿಟ್ಟು ತಿರುಗಬೇಕಾದೀತು.

ಅಕೈತವೀ ಚ ಯಾ ವೃತ್ತಿಃ ಸಾ ಪ್ರಶಸ್ತಾ ದ್ವಿಜನ್ಮನಾಂ ।
ಕೃಷಿಗೋರಕ್ಷ್ಯವಾಣಿಜ್ಯಮಪಿ ಕುರ್ಯಾನ್ನ ಕೈತವಮ್ ॥ ೩೬ ॥

ಯಸ್ತು ಕೈತವವೃತ್ತ್ಯಾ ಹಿ ಧನಮಾಹರ್ತುಮಿಚ್ಛತಿ ।
ಧರ್ಮಾರ್ಥಕಾಮಾಭಿಜನ್ಯೈಃ ಸ ವಿಮುಚ್ಯೇತ ಪೌರುಷಾತ್ ॥ ೩೭ ॥

ವೇದೇಽಪಿ ದೂಷಿತಂ ಕರ್ಮ ತವ ಪಿತ್ರಾ ತಥಾದೃತಂ ।
ತಸ್ಮಾತ್ಕಿಂ ಕುರ್ಮಹೇ ವತ್ಸ ಯದುಕ್ತಂ ತೇ ವಿಧೀಯತೇ ॥ ೩೮ ॥

ವಿಧಾತೃವಿಹಿತಂ ಮಾರ್ಗಂ ಕೋ ನು ವಾತ್ಯೇತಿ ಪಂಡಿತಃ । ॥ ೩೯ ॥

॥ ಬ್ರಹ್ಮೋವಾಚ ॥

ಏತತ್ಪುರೋಧಸೋ ವಾಕ್ಯಂ ಶ್ರುತ್ವಾ ಸುಮತಿರಬ್ರವೀತ್ ॥ ೪೦ ॥

॥ ಸುಮತಿರುವಾಚ ॥

ಕಿಂ ಕೃತ್ವಾ ಪ್ರಮತಿಸ್ತಾತಃ ಪುನಾ ರಾಜ್ಯಮವಾಪ್ನುಯಾತ್ ॥ ೪೧ ॥

೩೬-೩೯. ಬ್ರಾಹ್ಮಣರಿಗೆ ಮೋಸಮಾಡದ ವ್ಯವಹಾರವೇ ಶ್ರೇಷ್ಠವಾದುದು. ಕೃಷಿ, ಗೋರಕ್ಷಣ, ವ್ಯಾಪಾರ ಮುಂತಾದುವುಗಳಲ್ಲಿ ಮೋಸಮಾಡಬಾರದು. ಯಾವನು ಮೋಸತನದಿಂದ ಧನವನ್ನಾರ್ಜಿಸಲು ಪ್ರಯತ್ನಿಸುವನೋ ಧರ್ಮ, ಅರ್ಥ, ಕಾಮ ಮುಂತಾದ ಪುರುಷಾರ್ಥಗಳು ಅವನಿಗೆ ಸಿಕ್ಕಲಾರವು. ಆದುದರಿಂದ ಮಗುವೇ, ನಿನ್ನ ತಂದೆಯು ವೇದವಿರುದ್ಧವಾದ ಮಾರ್ಗವನ್ನನುಸರಿಸಿರುವನು. ಆದುದರಿಂದ ನಾವೇನೂ ಮಾಡಲಾರೆವು. ಹಣೆಯಲ್ಲಿ ಬರೆದಿದ್ದುದನ್ನು ಯಾವ ಜ್ಞಾನಿಯೂ ಮೀರಲಾರನು. ಎಂದನು.

೪೦-೪೧. ಮಧುಚ್ಛಂದನ ಮಾತನ್ನು ಕೇಳಿ ಪ್ರಮತಿಯ ಮಗನಾದ ಸುಮತಿಯು, ಹಾಗಾದರೆ ನನ್ನ ತಂದೆಗೆ ಪುನಃ ರಾಜ್ಯವು ಸಿಕ್ಕಲು ಏನು ಮಾಡಬೇಕು? ಎಂದು ಕೇಳಿದನು.

॥ ಬ್ರಹ್ಮೋವಾಚ ॥

ಪುನರ್ಧ್ಯಾತ್ವಾ ಮಧುಚ್ಛಂದಾಃ ಸುಮತಿಂ ಚೇದಮಬ್ರವೀತ್ ॥ ೪೨ ॥

॥ ಮಧುಚ್ಛಂದಾ ಉವಾಚ ॥

ಗೌತಮೀಂ ಯಾಹಿ ವತ್ಸ ತ್ವಂ ತತ್ರ ಪೂಜಯ ಶಂಕರಂ ।
ಅದಿತಿಂ ವರುಣಂ ವಿಷ್ಣುಂ ತತಃ ಪಾಶಾದ್ವಿಮೋಕ್ಷ್ಯತೇ ॥ ೪೩ ॥

॥ ಬ್ರಹ್ಮೋವಾಚ ॥

ತಥೇತ್ಯುಕ್ತ್ವಾ ಜಗಾಮಾಶು ಗಂಗಾಂ ನತ್ವಾ ಜನಾರ್ದನಂ ।
ಪೂಜಯಾಮಾಸ ಶಂಭುಂ ಚ ತಪಸ್ತೇಪೇ ಯತವ್ರತಃ ॥ ೪೪ ॥

ಸಹಸ್ರಮೇಕಂ ವರ್ಷಾಣಾಂ ಬದ್ಧಂ ಪಿತರಮಾತ್ಮನಃ ।
ಮೋಚಯಾಮಾಸ ದೇವೇಭ್ಯಃ ಪುನಾ ರಾಜ್ಯಮವಾಪ ಸಃ ॥ ೪೫ ॥

ಶಿವೇಶಾಭ್ಯಾಂ ಮುಕ್ತಪಾಶೋ ರಾಜ್ಯಂ ಪ್ರಾಪ ಸುತಾತ್ಸ್ವಕಾತ್ ।
ಅವಾಪ್ಯ ವಿದ್ಯಾಂ ಗಾಂಧರ್ವೀಂ ಪ್ರಿಯಶ್ಚಾಸೀಚ್ಛತಕ್ರತೋಃ ॥ ೪೬ ॥

---

೪೨. ಸುಮತಿಯ ಮಾತನ್ನು ಕೇಳಿ ಮಧುಚ್ಛಂದನು ಕ್ಷಣಕಾಲ ಆಲೋಚಿಸಿ ಅವನನ್ನು ಕುರಿತು—

೪೩. ಎಲೈ ಮಗುವೇ, ನೀನು ಗೌತಮಿಗೆ ಹೋಗಿ ಅಲ್ಲಿ ಸ್ನಾನಮಾಡಿ ಶಂಕರ, ಅದಿತಿ, ವರುಣ, ವಿಷ್ಣು ಮುಂತಾದ ದೇವತೆಗಳನ್ನು ಭಕ್ತಿಯಿಂದ ಪೂಜಿಸು. ಹಾಗೆ ಮಾಡಿದರೆ ನಿಮ್ಮ ತಂದೆಗೆ ಬಿಡುಗಡೆಯಾಗುವುದು. ಎಂದನು.

೪೪-೪೬. ಮಧುಚ್ಛಂದನ ಮಾತನ್ನನುಸರಿಸಿ ಸುಮತಿಯು ಗೌತಮಿಗೆ ಜಾಗ್ರತೆಯಾಗಿ ಹೋಗಿ ಅಲ್ಲಿ ಗಂಗೆಯಲ್ಲಿ ಸ್ನಾನಮಾಡಿ ವಿಷ್ಣುವನ್ನೂ, ಈಶ್ವರನನ್ನೂ ಪೂಜಿಸಿ ತಪಸ್ಸುಮಾಡಿದನು. ಅನಂತರ ಒಂದು ಸಹಸ್ರವರ್ಷಗಳಿಂದಲೂ ಬಂಧಿತನಾದ ತನ್ನ ತಂದೆಯನ್ನು ತೇವತೆಗಳಿಂದ ಬಿಡಿಸಿಕೊಂಡು ಬಂದನು. ಪ್ರಮತಿಯು ಪುನಃ ರಾಜ್ಯಪರಿಪಾಲನೆ ಮಾಡಿದನು. ಇಂದ್ರಾದಿಗಳಿಂದ ಬಿಡಲ್ಪಟ್ಟು ಮತ್ತೆ ರಾಜ್ಯವನ್ನು ಪಡೆದನು. ಗಾಂಧರ್ವವಿದ್ಯೆಯನ್ನು ಕಲಿತು, ಇಂದ್ರನಿಗೆ ಬೇಕಾದವನಾದನು.

ಶಾಂಭವಂ ವೈಷ್ಣವಂ ಚೈವ ಉರ್ವಶೀತೀರ್ಥಮೇವ ಚ ।
ತತಃ ಪ್ರಭೃತಿ ತತ್ತೀರ್ಥಂ ಕೈತವಂ ಚೇತಿ ವಿಶ್ರುತಂ ॥ ೪೭ ॥

ಶಿವವಿಷ್ಣುಸರಿನ್ಮಾತುಪ್ರಸಾದಾದಾಪ್ಯತೇ ನ ಕಿಂ ।
ತತ್ರ ಸ್ನಾನಂ ಚ ದಾನಂ ಚ ಬಹುಪುಣ್ಯಫಲಪ್ರದಂ ।
ಪಾಪಪಾಶವಿಮೋಕ್ಷಂ ತು ಸರ್ವದುರ್ಗತಿನಾಶನಂ ॥ ೪೮ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಉರ್ವಶ್ಯಾದಿತೀರ್ಥವರ್ಣನಂ ನಾಮೈಕಸಪ್ತತ್ಯಧಿಕ
ಶತತಮೋಽಧ್ಯಾಯಃ

---

೪೭. ಇದಕ್ಕೆ ಶಾಂಭವತೀರ್ಥ, ವೈಷ್ಣವತೀರ್ಥ, ಉರ್ವಶೀತೀರ್ಥ ಎಂಬುದಾಗಿ ಅನೇಕ ಹೆಸರುಗಳಿವೆ. ಅಂದಿನಿಂದ ಇದಕ್ಕೆ ಕೈತವ ತೀರ್ಥವೆಂದೂ ಹೆಸರಾಯಿತು.

೪೮. ಶಿವ, ವಿಷ್ಣು, ಗಂಗೆಯರ ಅನುಗ್ರಹದಿಂದ ಯಾವುದುತಾನೇ ಲಭಿಸುವುದಿಲ್ಲ? ಅಲ್ಲಿ ಸ್ನಾನದಾನಾದಿಗಳನ್ನು ಮಾಡಿದರೆ ಪಾಪಗಳೆಲ್ಲ ನಾಶವಾಗಿ ದುಃಖವೆಲ್ಲವೂ ತೊಲಗುವುದು.

ಶ್ರೀ ಬ್ರಹ್ಮಮಹಾಪುರಾಣದ ತೀರ್ಥಮಾಹಾತ್ಮ್ಯೆಯಲ್ಲಿ ಉರ್ವಶ್ಯಾದಿ
ತೀರ್ಥವರ್ಣನವೆಂಬ ನೂರಎಪ್ಪತ್ತೊಂದನೆಯ
ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ನೂರೆರಡನೆಯ ಅಧ್ಯಾಯವು.

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಮಹಾಪುರಾಣೇ ಬ್ರಾಹ್ಮೇ

ದ್ವಿಸಪ್ತತ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಸಾಮುದ್ರಂ ತೀರ್ಥಮಾಖ್ಯಾತಂ ಸರ್ವತೀರ್ಥಫಲಪ್ರದಂ ।
ತಸ್ಯ ಸ್ವರೂಪಂ ವಕ್ಷ್ಯಾಮಿ ಶೃಣು ನಾರದ ತನ್ಮನಾಃ ॥ ೧ ॥

ವಿಸೃಷ್ಟಾ ಗೌತಮೇನಾಸೌ ಗಂಗಾ ಪಾಪಪ್ರಣಾಶನೀ ।
ಲೋಕಾನಾಮುಪಕಾರಾರ್ಥಂ ಪ್ರಾಯಾತ್ಪೂರ್ವಾರ್ಣವಂ ಪ್ರತಿ ॥ ೨ ॥

ಆಗಚ್ಛಂತೀ ದೇವನದೀ ಕಮಂಡಲುಧೃತಾ ಮಯಾ ।
ಶಿರಸಾ ಚ ಧೃತಾ ದೇವೀ ಶಂಭುನಾ ಪರಮಾತ್ಮನಾ ॥ ೩ ॥

ನೂರೆಪ್ಪತ್ತೆರಡನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಎಲೈ ನಾರದನೇ, ಸಾಮುದ್ರವೆಂಬ ಪ್ರಸಿದ್ಧವಾದ ತೀರ್ಥವಿರುವುದು. ಇದರಲ್ಲಿ ಸ್ನಾನಮಾಡಿದರೆ ಎಲ್ಲಾತೀರ್ಥ ಸ್ನಾನಗಳ ಫಲವೂ ದೊರೆಯುವುದು. ಅದರ ಮಹಿಮೆಯನ್ನು ಹೇಳುವೆನು. ಒಂದೇ ಮನಸ್ಸಿನಿಂದ ಕೇಳು.

೨-೩. ಗೌತಮಕ್ಷೇತ್ರದಿಂದ ಹೊರಟ ಗಂಗೆಯು ಲೋಕೋಪಕಾರಾರ್ಥವಾಗಿ ಪೂರ್ವಸಮುದ್ರದ ಕಡೆಗೆ ಹೊರಟಳು. ಪಾಪನಾಶಿನಿಯಾದ ಆ ದೇವನದಿಯು ಬರುತ್ತಿರುವುದನ್ನು ನೋಡಿ ನಾನು (ಬ್ರಹ್ಮನು) ಅದರ ನೀರನ್ನು ಕಮಂಡಲುವಿನಲ್ಲಿ ತುಂಬಿಕೊಂಡೆನು. ಶಂಭುವೂ ತನ್ನ ತಲೆಯಮೇಲೆ ಧರಿಸಿಕೊಂಡನು.

ವಿಷ್ಣುಪಾದಾತ್ಪ್ರಸೂತಾಂ ತಾಂ ಬ್ರಾಹ್ಮಣೇನ ಮಹಾತ್ಮನಾ ।
ಆನೀತಾಂ ಮರ್ತ್ಯಭವನಂ ಸ್ಮರಣಾದಘನಾಶನೀಂ ॥ ೪ ॥

ಗುರೋರ್ಗುರುತಮಾಂ ಸಿಂಧುರ್ದೃಷ್ಟ್ವಾ ಕೃತ್ಯಮಚಿಂತಯತ್ ।
ಯಾ ವಂದ್ಯಾ ಜಗತಾಮೀಶಾ ಬ್ರಹ್ಮೇಶಾದ್ಯೈರ್ನಮಸ್ಕೃತಾ ॥ ೫ ॥

ತಾಮಹಂ ಪ್ರತಿಗಚ್ಛೇಯಂ ನೋ ಚೇತ್ಸ್ಯಾದ್ಧರ್ಮದೂಷಣಂ ।
ಆಗಚ್ಛಂತಂ ಮಹಾತ್ಮಾನಂ ಯೋ ಮೋಹಾನ್ನೋಪತಿಷ್ಠತೇ ॥ ೬ ॥

ನ ತಸ್ಯ ಕೋಽಪಿ ತ್ರಾತಾಸ್ತಿ ಪಾಪಿನೋ ಲೋಕಯೋರ್ದ್ವಯೋಃ ।
ಏವಂ ವಿಮೃಶ್ಯ ರತ್ನೇಶೋ ಮೂರ್ತಿಮಾನ್ವಿನಯಾನ್ವಿತಃ ।
ಕೃತಾಂಜಲಿಪುಟೋ ಗಂಗಾಮಾಹೇದಂ ಸರಿತಾಂಪತಿಃ ॥ ೭ ॥

॥ ಸಿಂಧುರುವಾಚ ॥

ರಸಾತಲಗತಂ ವಾರಿ ಪೃಥಿವ್ಯಾಂ ಯನ್ನಭಸ್ತಲೇ ।
ತನ್ಮಾಮೇವಾತ್ರ ವಿಶತು ನಾಹಂ ವಕ್ಷ್ಯಾಮಿ ಕಿಂಚನ ॥ ೮ ॥

೪-೭. ಈ ಗಂಗೆಯು ವಿಷ್ಣುವಿನ ಪಾದದಿಂದ ಹುಟ್ಟಿದವಳು. ಭಗೀರಥನು ಇವಳಿಂದ ಭೂಲೋಕವನ್ನು ಪವಿತ್ರವನ್ನಾಗಿ ಮಾಡಿದನು. ಅತ್ಯಂತ ಶ್ರೇಷ್ಠಳು. ಇಂತಹ ಗಂಗೆಯನ್ನು ನೋಡಿ ಸಮುದ್ರನು, ಇವಳು ಜಗತ್ಪೂಜ್ಯಳು. ಬ್ರಹ್ಮವಿಷ್ಣುಮಹೇಶ್ವರಾದಿಗಳು ಇವಳನ್ನು ಪೂಜಿಸುವರು. ಇಂತಹ ಪೂಜ್ಯಳನ್ನು ಈಗ ನಾನು ಸ್ವಾಗತಿಸದಿದ್ದರೆ ಧರ್ಮವಿರುದ್ಧವಾದೀತು. ಮಹಾತ್ಮನು ಬರುತ್ತಿರುವುದನ್ನು ನೋಡಿಯೂ ಯಾರು ಗೌರವಿಸುವುದಿಲ್ಲವೋ ಅಂತಹ ಪಾಪಿಯನ್ನು ಎರಡುಲೋಕಗಳಲ್ಲಿಯೂ ಯಾರೂ ಕಾಪಾಡಲಾರರು ಎಂದು ಯೋಚಿಸುತ್ತಾ ರೂಪವನ್ನು ಧರಿಸಿ ವಿನಯದಿಂದ ಬಂದು ಅಂಜಲಿಬದ್ಧನಾಗಿ ಗಂಗೆಯನ್ನು ಕುರಿತು—

೮-೧೦. ರಸಾತಲದಲ್ಲಿಯೂ, ಆಕಾಶದಲ್ಲಿಯೂ, ಪೃಥಿವಿಯಲ್ಲಿಯೂ ಹರಿಯುವ ನೀರೆಲ್ಲವೂ ನನ್ನಲ್ಲಿಯೇ ಸೇರಿದರೂ ನನಗೇನೂ ಆಗುವುದಿಲ್ಲ.

ಮಯಿ ರತ್ನಾನಿ ಪೀಯೂಷಂ ಪರ್ವತಾ ರಾಕ್ಷಸಾಸುರಾಃ ।
ಏತಾನಪ್ಯಖಿಲಾನನ್ಯಾನ್ಬಿಭರ್ಮಿ ಸಂಧಾರಯಾಮ್ಯಹಂ ॥ ೯ ॥

ಮಮಾಂತಃ ಕಮಲಾಯುಕ್ತೋ ವಿಷ್ಣುಃ ಸ್ವಪಿತಿ ನಿತ್ಯದಾ ।
ಮಮಾಶಕ್ಯಂ ನ ಕಿಮಪಿ ವಿದ್ಯತೇ ಸಚರಾಚರೇ ॥ ೧೦ ॥

ಮಹತ್ಯಭ್ಯಾಗತೇ ಕುರ್ಯಾತ್ಪ್ರತ್ಯುತ್ಥಾನಂ ನ ಯೋ ಮದಾತ್ ।
ಸ ಧರ್ಮಾದಿಪರಿಭ್ರಷ್ಟೋ ನಿರಯಂ ತು ಸಮಾಪ್ನುಯಾತ್ ॥ ೧೧ ॥

ನ ತಾನ್ಮೇ ಬಿಭ್ರತಃ ಖೇದೋ ವಿನಾಗಸ್ತ್ಯಪರಾಭವಾತ್ ।
ಕಿಂ ತು ತ್ವಂ ಗೌರವೇಣೈಷಾಮತಿರಿಕ್ತಾ ತತಸ್ತ್ವಹಂ ॥ ೧೨ ॥

ಬ್ರವೀಮಿ ದೇವಿ ಗಂಗೇ ಮಾಂ ತ್ವಂ ಸಾಮ್ಯಾತ್ಸಂಗತಾ ಭವ ।
ನೈಕರೂಪಾಮಹಂ ಶಕ್ತಃ ಸಂಗಂತುಂ ಬಹುಧಾ ಯದಿ ॥ ೧೩ ॥

ನನ್ನಲ್ಲಿ ಅನೇಕ ರತ್ನಗಳೂ, ಅಮೃತವೂ ದೊಡ್ಡದೊಡ್ಡ ಪರ್ವತಗಳೂ ರಾಕ್ಷಸರೂ ಇರುವರು. ಮತ್ತು ಲಕ್ಷ್ಮಿಯೊಡನೆ ವಿಷ್ಣುವು ನನ್ನ ಮೇಲೆ ಯಾವಾಗಲೂ ಮಲಗಿರುವನು. ಆದುದರಿಂದ ನನಗೆ ಅಶಕ್ಯವಾದುದು ಚರಾಚರಾತ್ಮಕವಾದ ಈ ಪ್ರಪಂಚದಲ್ಲಿ ಯಾವುದೂ ಇಲ್ಲ.

೧೧. ಮಹಾತ್ಮರು ಬಂದರೂ ಸಹ ಮದಿಸಿ ಯಾರು ಸ್ವಾಗತಾದಿಗಳಿಂದ ಅವರನ್ನು ಗೌರವಿಸುವುದಿಲ್ಲವೋ ಅವರು ಧರ್ಮಭ್ರಷ್ಟರಾಗಿ ನರಕಕ್ಕೆ ಹೋಗುವರು.

೧೨-೧೩. ಅಂತಹ ಮಹಾತ್ಮರು ಯಾರು ಬಂದರೂ ಸರಿಯೇ ನನ್ನಲ್ಲಿ ಅವರನ್ನು ಧರಿಸಿಕೊಳ್ಳಲು ನನಗೇನೂ ಖೇದವಾಗುವುದಿಲ್ಲ. ಆದರೆ ಮಾತ್ರ ಅಗಸ್ತ್ಯನಿಂದ ನನಗೆ ಸೋಲಿಲ್ಲದಿದ್ದರೆ ಆರೀತಿ ಮಾಡಬಹುದು. ನೀನಾದರೋ ಗೌರವದಲ್ಲಿ ಎಲ್ಲರಿಗಿಂತಲೂ ಹೆಚ್ಚಿನವಳು. ಈರೀತಿಯಾದ ನೀನು ನನ್ನನ್ನು ಸೇರಲು ಬಂದಿರುವೆ. ನಾನಾರೂಪಧಾರಿಣಿಯಾದ ನಿನ್ನನ್ನು ಏಕ

ಸಂಗಮೋಷ್ಯಸಿ ದೇವಿ ತ್ವಂ ಸಂಗಚ್ಛೇಽಹಂ ನ ಚಾನ್ಯಥಾ ।
ಗಂಗೇ ಸಮೇಷ್ಯಸಿ ಯದಿ ಬಹುಧಾ ತದ್ವಿಚಾರಯೇ ॥ ೧೪ ॥

॥ ಬ್ರಹ್ಮೋವಾಚ ॥

ತಮೇವಂವಾದಿನಂ ಸಿಂಧುಮುಪಾಮಿಾಶಂ ತದಾಬ್ರವೀತ್ ।
ಗಂಗಾ ಸಾ ಗೌತಮಿೀ ದೇವೀ ಕುರು ಚೈತದ್ವಚೋ ಮಮ ॥ ೧೫ ॥

ಸಪ್ತರ್ಷೀಣಾಂ ಚ ಯಾ ಭಾರ್ಯಾ ಅರುಂಧತಿಪುರೋಗಮಾಃ ।
ಭರ್ತೃಭಿಃ ಸಹಿತಾಃ ಸರ್ವಾ ಆನಯ ತ್ವಂ ತದಾ ತ್ವಹಂ ॥ ೧೬ ॥

ಅಲ್ಪಭೂತಾ ಭವಿಷ್ಯಾಮಿ ತತಃ ಸ್ಯಾಂ ತವ ಸಂಗತಾ ।
ತಥೇತ್ಯುಕ್ತ್ವಾ ಸಪ್ತರ್ಷೀಣಾಂ ಭಾರ್ಯಾಭಿರೃಷಿಭಿರ್ವೃತಃ ॥ ೧೭ ॥

ಆನಯಾಮಾಸ ತಾಂ ದೇವೀ ಸಪ್ತಧಾ ಸಾ ವ್ಯಭಜ್ಯತ ।
ಸಾ ಚೇಯಂ ಗೌತಮೀ ಗಂಗಾ ಸಪ್ತಧಾ ಸಾಗರಂ ಗತಾ ॥ ೧೮ ॥

ರೂಪನಾದ ನಾನು ಹೇಗೆತಾನೇ ಧರಿಸಲು ಸಮರ್ಥನಾಗುವೆನು? ನೀನೇನೋ ನನ್ನೊಡನೆ ಸೇರಲು ಬಂದಿದ್ದರೂ ನಾನು ವಿಚಾರಮಾಡದೆ ನಿನ್ನನ್ನು ಧರಿಸಲಾರೆನು ಎಂದನು.

೧೫-೧೭. ಈರೀತಿಯಾಗಿ ಹೇಳಿದುದನ್ನು ಕೇಳಿ ಗಂಗೆಯು ಸಮುದ್ರರಾಜನನ್ನು ಕುರಿತು—ಸಪ್ತಋಷಿಗಳ ಪತ್ನಿಯರಾದ ಅರುಂಧತಿ ಮುಂತಾದವರನ್ನು ಅವರ ಪತಿಯೊಡನೆ ಕರೆದುಕೊಂಡು ಬಾ. ಆಗ ನಾನು ಚಿಕ್ಕರೂಪವನ್ನು ಧರಿಸಿಕೊಂಡು ನಿನ್ನಲ್ಲಿ ಬಂದು ಸೇರುವೆನು ಎಂದಳು. ಹಾಗೆಯೇ ಆಗಲೆಂದು ಸಮುದ್ರನು ಸಪ್ತಋಷಿಗಳೊಡನೆ ಅವರ ಪತ್ನಿಯರನ್ನು ಕರೆದುಕೊಂಡು ಬಂದನು.

೧೮. ಆಗ ಗಂಗೆಯು ಏಳು ಭಾಗವಾದಳು. ಅನಂತರ ಆ ಗೌತಮಿಯು ಏಳು ಭಾಗಗಳೊಡನೆ ಸಮುದ್ರವನ್ನು ಸೇರಿದಳು. ಅಂದಿನಿಂದ ಗಂಗೆಗೆ ಸಪ್ತಋಷಿಗಳ ಹೆಸರೂ ಇರುವುದು.

ಸಪ್ತರ್ಷೀಣಾಂ ತು ನಾಮ್ನಾ ತು ಸಪ್ತ ಗಂಗಾಸ್ತತೋऽಭವನ್ ।
ತತ್ರ ಸ್ನಾನಂ ಚ ದಾನಂ ಚ ಶ್ರವಣಂ ಪಠನಂ ತಥಾ ॥ ೧೯ ॥

ಸ್ಮರಣಂ ಚಾಪಿ ಯದ್ಭಕ್ತ್ಯಾ ಸರ್ವಕಾಮಪ್ರದಂ ಭವೇತ್ ।
ನಾಸ್ಮಾದನ್ಯತ್ಪರಂ ತೀರ್ಥಂ ಸಮುದ್ರಾದ್ಭುವನತ್ರಯೇ ।
ಪಾಪಹಾನೌ ಭುಕ್ತಿಮುಕ್ತಿಪ್ರಾಪ್ತೌ ಚ ಮನಸೋ ಮುದೇ ॥ ೨೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಸಪ್ತಧಾಗೋದಾವರೀಸಮುದ್ರಾಗಮನವರ್ಣನಂ ನಾಮ ದ್ವಿಸಪ್ತತ್ಯಧಿಕಶತತಮೋऽಧ್ಯಾಯಃ

೧೯-೨೦. ಗೌತಮಿಯು ಸಮುದ್ರವನ್ನು ಸೇರುವ ಸ್ಥಳದಲ್ಲಿ ಸ್ನಾನ ದಾನಾದಿಗಳನ್ನು ಮಾಡಿದರೂ ಅದರ ಮಹಿಮೆಯನ್ನು ಕೇಳಿದರೂ ಅಥವಾ ಓದಿದರೂ ಆ ಗಂಗೆಯನ್ನು ಭಕ್ತಿಯಿಂದ ಧ್ಯಾನಮಾಡಿದರೂ ಸಹ ಸರ್ವೇಷ್ಟಾರ್ಥಗಳೂ ಸಿದ್ಧಿಸುವುವು. ಈ ಸಮುದ್ರತೀರ್ಥದಂತಹ ತೀರ್ಥವು ಬೇರೊಂದಿಲ್ಲ. ಇದರ ಸ್ನಾನದಿಂದ ಪಾಪಗಳೆಲ್ಲವೂ ನಾಶವಾಗುವುವು. ಭುಕ್ತಿಮುಕ್ತಿಗಳುಂಟಾಗುವುವು. ಮನಸ್ಸು ನಿರ್ಮಲವಾಗುವುದು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಗಂಗೆಯ ಸಮುದ್ರದಾಗಮನ ವರ್ಣನೆ ಎಂಬ ನೂರೆಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ನೂರಮೂರನೆಯ ಅಧ್ಯಾಯವು

ಶ್ರೀಃ

ಅಥ ಮ ಹಾ ಪು ರಾ ಣೇ ಬ್ರಾ ಹ್ಮೇ

ತ್ರಿಸಪ್ತತ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಋಷಿಸತ್ರಮಿತಿ ಖ್ಯಾತಮೃಷಯಃ ಸಪ್ತ ನಾರದ ।
ನಿಷೇದುಸ್ತಪಸೇ ಯತ್ರ ಯತ್ರ ಭೀಮೇಶ್ವರಃ ಶಿವಃ ॥ ೧ ॥

ತತ್ರೇದಂ ವೃತ್ತಮಾಖ್ಯಾಸ್ಯೇ ದೇವರ್ಷಿಪಿತೃಬೃಂಹಿತಂ ।
ಶೃಣು ಯತ್ನೇನ ವಕ್ಷ್ಯಾಮಿ ಸರ್ವಕಾಮಪ್ರದಂ ಶುಭಂ ॥ ೨ ॥

ಸಪ್ತಧಾ ವ್ಯಭಜನ್ಗಂಗಾಮೃಷಯಃ ಸಪ್ತ ನಾರದ ।
ವಾಸಿಷ್ಠೀ ದಾಕ್ಷಿಣೇಯಾ ಸ್ಯಾದ್ವೈಶ್ವಾಮಿತ್ರೀ ತದುತ್ತರಾ ॥ ೩ ॥

ನೂರೆಪ್ಪತ್ತಮೂರನೆಯ ಅಧ್ಯಾಯವು

೧–೨. ಬ್ರಹ್ಮನು ಹೇಳಿದನು—ಎಲೈ ನಾರದನೇ, ಋಷಿಸತ್ರವೆಂಬ ತೀರ್ಥವಿರುವುದು. ಅಲ್ಲಿ ಸಪ್ತಋಷಿಗಳೂ ಕುಳಿತು ತಪಸ್ಸು ಮಾಡುವರು. ಅಲ್ಲಿ ಭೀಮೇಶ್ವರನಾದ ಶಿವನು ಇರುವನು. ಅಲ್ಲಿ ನಡೆದ ದೇವಋಷಿ, ಪಿತೃ ಸಂಬಂಧವಾದ ವೃತ್ತಾಂತವನ್ನು ಹೇಳುವೆನು, ಕೇಳು. ಇದನ್ನು ಕೇಳಿದರೆ ಸರ್ವೇಷ್ಟಾರ್ಥಗಳೂ ನೆರವೇರುವುವು.

೩–೪. ಸಪ್ತಋಷಿಗಳು ಗಂಗೆಯನ್ನು ಏಳು ವಿಭಾಗವಾಗಿ ಮಾಡಿದರಷ್ಟೆ. ಆ ಏಳು ಭಾಗಗಳಾವುವೆಂದರೆ—ದಕ್ಷಿಣದಿಕ್ಕಿನ ಭಾಗಕ್ಕೆ ವಾಸಿಷ್ಠೀ ಎಂತಲೂ ಉತ್ತರಭಾಗಕ್ಕೆ ವೈಶ್ವಾಮಿತ್ರೀ ಎಂತಲೂ ಬೇರೊಂದು ಭಾಗಕ್ಕೆ ವಾಮದೇವೀ ಎಂತಲೂ ಮಧ್ಯಭಾಗಕ್ಕೆ ಗೌತಮೀಯೆಂತಲೂ ಮತ್ತೊಂದು

ವಾಮದೇವ್ಯಪರಾ ಜ್ಞೇಯಾ ಗೌತಮೀ ಮಧ್ಯತಃ ಶುಭಾ ।
ಭಾರದ್ವಾಜೀ ಸ್ಮೃತಾ ಚಾನ್ಯಾ ಆತ್ರೇಯೀ ಚೇತ್ಯಥಾಪರಾ ॥ ೪ ॥

ಜಾಮದಗ್ನೀ ತಥಾ ಚಾನ್ಯಾ ವ್ಯಪದಿಷ್ಟಾ ತು ಸಪ್ತಧಾ ।
ತೈಃ ಸರ್ವೈರೃಷಿಭಿಸ್ತತ್ರ ಯಷ್ಟುಮಿಷ್ಟೈರ್ಮಹಾತ್ಮಭಿಃ ॥ ೫ ॥

ನಿಷ್ಪಾದಿತಂ ಮಹಾಸತ್ರಮೃಷಿಭಿಃ ಪಾರದರ್ಶಿಭಿಃ ।
ಏತಸ್ಮಿನ್ನಂತರೇ ತತ್ರ ದೇವಾನಾಂ ಪ್ರಬಲೋ ರಿಪುಃ ॥ ೬ ॥

ವಿಶ್ವರೂಪ ಇತಿ ಖ್ಯಾತೋ ಮುನೀನಾಂ ಸತ್ರಮಭ್ಯಗಾತ್ ।
ಬ್ರಹ್ಮಚರ್ಯೇಣ ತಪಸಾ ತಾನಾರಾಧ್ಯ ಯಥಾವಿಧಿ ।
ವಿನಯೇನಾಥ ಪಪ್ರಚ್ಛ ಋಷೀನ್ಸರ್ವಾನನುಕ್ರಮಾತ್ ॥ ೭ ॥

॥ ವಿಶ್ವರೂಪ ಉವಾಚ ॥

ಧ್ರುವಂ ಸರ್ವೇ ಯಥಾಕಾಮಂ ಮಮ ಸ್ವಾಸ್ಥ್ಯೇನ ಹೇತುನಾ ।
ಯಥಾ ಸ್ಯಾದ್ಬಲವಾನ್ಪುತ್ರೋ ದೇವಾನಾಮಪಿ ದುರ್ಧರಃ ।
ಯಜ್ಞೈರ್ವಾ ತಪಸಾ ವಾಪಿ ಮುನಯೋ ವಕ್ತುಮರ್ಹಥ ॥ ೮ ॥

ಭಾಗಕ್ಕೆ ಭಾರದ್ವಾಜೀ ಎಂತಲೂ ಇನ್ನೊಂದಕ್ಕೆ ಆತ್ರೇಯೀ ಎಂತಲೂ, ಕೊನೆಯ ದಕ್ಕೆ ಜಾಮದಗ್ನೀ ಎಂತಲೂ ಹೆಸರುಗಳಿವೆ.

೫-೭. ಆ ಸ್ಥಳದಲ್ಲಿ ಋಷಿಗಳೆಲ್ಲರೂ ಸೇರಿ ಯಜ್ಞಮಾಡಲು ಪ್ರಾರಂಭಿಸಿದರು. ದೊಡ್ಡ ಯಾಗವು ಪ್ರಾರಂಭವಾಯಿತು. ಈ ಸಮಯಕ್ಕೆ ಸರಿಯಾಗಿ ದೇವತೆಗಳಿಗೆ ಪ್ರಬಲಶತ್ರುವಾದ ವಿಶ್ವರೂಪನೆಂಬುವನು ಅಲ್ಲಿಗೆ ಬಂದನು. ಅಲ್ಲಿ ಬ್ರಹ್ಮಚರ್ಯದಿಂದಲೂ ತಪಸ್ಸಿನಿಂದಲೂ ಋಷಿಗಳನ್ನು ಯಥಾವಿಧಿಯಾಗಿ ಪೂಜಿಸಿ ವಿನಯದಿಂದ ಆ ಋಷಿಗಳನ್ನು ಕುರಿತು,

೮. ಎಲೈ ಋಷಿಗಳಿರಾ, ನಾನು ಸುಮ್ಮನೇ ಇದ್ದರೂ, ಯಾವ ಕರ್ಮವನ್ನೂ ಗಳನ್ನು ಮಾಡದಿದ್ದರೂ ನನಗೆ ಬಲಶಾಲಿಯಾದ ಪುತ್ರನಾಗಬೇಕು. ಅವನು ದೇವತೆಗಳಿಗೂ ಸೋಲಬಾರದು. ಯಜ್ಞಮಾಡಿದರೂ ತಪಸ್ಸನ್ನಾಚರಿಸಿದರೂ ಸಹ ಅಂತಹವನು ದೊರಕಬಾರದು. ಈ ವಿಷಯದಲ್ಲಿ ಏನು ಹೇಳುವಿರಿ? ಎಂದು ಕೇಳಿದನು.

॥ ಬ್ರಹ್ಮೋವಾಚ ॥

ತತ್ರ ಪ್ರಾಹ ಮಹಾಬುದ್ಧಿರ್ವಿಶ್ವಾಮಿತ್ರೋ ಮಹಾಮುನಿಃ ॥ ೯ ॥

॥ ವಿಶ್ವಾಮಿತ್ರ ಉವಾಚ ॥

ಕರ್ಮಣಾ ತಾತ ಲಭ್ಯಂತೇ ಫಲಾನಿ ವಿವಿಧಾನಿ ಚ ।
ತ್ರಯಾಣಾಂ ಕಾರಣಾನಾಂ ಚ ಕರ್ಮ ಪ್ರಥಮಕಾರಣಂ ॥ ೧೦ ॥

ತತಶ್ಚ ಕಾರಣಂ ಕರ್ತಾ ತತಶ್ಚಾನ್ಯತ್ಪ್ರಕೀರ್ತಿತಂ ।
ಉಪಾದಾನಂ ತಥಾ ಬೀಜಂ ನ ಚ ಕರ್ಮ ವಿದುರ್ಬುಧಾಃ ॥ ೧೧ ॥

ಕರ್ಮಣಾಂ ಕಾರಣತ್ವಂ ಚ ಕಾರಣೇ ಪುಷ್ಕಲೇ ಸತಿ ।
ಭಾವಾಭಾವೌ ಫಲೇ ದೃಷ್ಟೌ ತಸ್ಮಾತ್ಕರ್ಮಾಶ್ರಿತಂ ಫಲಂ ॥ ೧೨ ॥

---

೯. ಅವನ ಮಾತನ್ನು ಕೇಳಿ ಮಹಾಪ್ರಾಜ್ಞನೂ, ಮಹಾಮಹಿಮನೂ ಆದ ವಿಶ್ವಾಮಿತ್ರನಿಂತೆಂದನು.

೧೦. ಕರ್ಮಕ್ಕನುಸಾರವಾಗಿ ವಿವಿಧವಾದ ಫಲಗಳು ದೊರೆಯುವುವು. ಮೂರು ಕಾರಣಗಳಲ್ಲಿ ಕರ್ಮವೇ ಮುಖ್ಯವಾದ ಕಾರಣ.

೧೧. ಆ ಮೂರು ಕಾರಣಗಳು ಯಾವುವೆಂದರೆ ಕರ್ತೃಕಾರಣ, ಉಪಾದಾನಕಾರಣ, ಬೀಜಕಾರಣವೆಂದು. ಆದರೆ ಪಂಡಿತರು ಕರ್ಮವನ್ನು ಕಾರಣವೆಂದು ತಿಳಿದಿಲ್ಲ.

೧೨-೧೩. ಕರ್ಮಗಳಿಗೆ ಕಾರಣತ್ವವು ಬರಬೇಕಾದರೆ ಕರ್ತೃ, ಉಪಾದಾನ, ಬೀಜ ಈ ಮೂರು ಕಾರಣಗಳೂ ಪೂರ್ಣವಾಗಿರಬೇಕು. ಇವೆಲ್ಲವೂ ಸೇರಿದರೆ ಆಗ ಕರ್ಮಗಳಿಗನುಸಾರವಾಗಿ ಫಲವುಂಟಾಗುವುದು. ಫಲವು ಕರ್ಮಗಳಿಂದ ಉಂಟಾಗುವುದರಿಂದ ಕರ್ಮವೂ ಕಾರಣವಾಯಿತು. ಫಲವು ನಿತ್ಯವಲ್ಲ. ಎಂದರೆ ಫಲದಲ್ಲಿ ಭಾವಾಭಾವಗಳಿರುವುವು. ಆದುದರಿಂದ ಫಲವು ಕರ್ಮಾನುಗುಣ್ಯವಾದುದು. ಅಂತಹ ಕರ್ಮವು ಕ್ರಿಯಮಾಣ (ಮುಂದೆ ಮಾಡುವುದು)

ಕರ್ಮಾಪಿ ದ್ವಿವಿಧಂ ಜ್ಞೇಯಂ ಕ್ರಿಯಮಾಣಂ ತಥಾ ಕೃತಂ ।
ಕರ್ತವ್ಯಂ ಕ್ರಿಯಮಾಣಸ್ಯ ಸಾಧನಂ ಯದ್ಯದುಚ್ಯತೇ ॥ ೧೩ ॥

ತದ್ಭಾವಾಃ ಕರ್ಮಸಿದ್ಧೌ ಚ ಉಭಯತ್ರಾಪಿ ಕಾರಣಂ ।
ಯದ್ಯದ್ಭಾವಯತೇ ಜಂತುಃ ಕರ್ಮ ಕುರ್ವನ್ವಿಚಕ್ಷಣಃ ॥ ೧೪ ॥

ತದ್ಭಾವನಾನುರೂಪೇಣ ಫಲನಿಷ್ಪತ್ತಿರುಚ್ಯತೇ ।
ಕರೋತಿ ಕರ್ಮ ವಿಧಿವದ್ವಿನಾ ಭಾವನಯಾ ಯದಿ ॥ ೧೫ ॥

ಅನ್ಯಥಾ ಸ್ಯಾತ್ಫಲಂ ಸರ್ವಂ ತಸ್ಯ ಭಾವಾನುರೂಪತಃ ।
ತಸ್ಮಾತ್ತಪೋ ವ್ರತಂ ದಾನಂ ಜಪಯಜ್ಞಾದಿಕಾಃ ಕ್ರಿಯಾಃ ॥ ೧೬ ॥

ಕರ್ಮಣಸ್ತ್ವನುರೂಪೇಣ ಫಲಂ ದಾಸ್ಯಂತಿ ಭಾವತಃ ।
ತಸ್ಮಾದ್ಭಾವಾನುರೂಪೇಣ ಕರ್ಮ ವೈ ದಾಸ್ಯತೇ ಫಲಂ ॥ ೧೭ ॥

ಕೃತ (ಹಿಂದೆಮಾಡಿದುದು) ಎಂಬುದಾಗಿ ಎರಡು ವಿಧವಾಗಿರುವುದು. ಕ್ರಿಯಮಾಣವಾದುದಕ್ಕೆ ಸಾಧನವೆಂದೂ ಹೆಸರು.

೧೪-೧೫. ಕರ್ಮಗಳು ಸಿದ್ಧಿಯಾಗಬೇಕಾದರೆ ಕ್ರಿಯಮಾಣ, ಕೃತ ಈ ಎರಡು ಕರ್ಮಗಳಲ್ಲಿಯೂ ಸತ್ವ, ರಜಸ್ಸು, ತಮಸ್ಸು ಎಂಬ ಭಾವನೆಗಳೇ ಕಾರಣಗಳು. ಪ್ರಾಣಿಸಾಮಾನ್ಯವು ಕರ್ಮಮಾಡುವಾಗ ಮನಸ್ಸಿನಲ್ಲಿ ಯಾವರೀತಿ ಭಾವಿಸಿಕೊಳ್ಳುವರೋ ಆ ಭಾವನೆಗನುಸಾರವಾದ ಫಲವುಂಟಾಗುವುದು. ಆದುದರಿಂದ ಭಾವನೆ ಎಂದರೆ ಫಲನಿಷ್ಪಾದನೆ ಎಂದರ್ಥವು. ಯಾರು ಯಾವ ಭಾವನೆಯೂ ಇಲ್ಲದೆ ಕರ್ಮಾಚರಣೆಯನ್ನು ಮಾಡುವನೋ ಅವನಿಗೆ ಫಲವೇ ಇಲ್ಲದಂತಾಗುವುದು. ಆದುದರಿಂದ ಭಾವನಾನುರೂಪವಾಗಿಯೇ ಫಲಗಳುಂಟಾಗುವುವು.

೧೬.೧೭. ತಪಸ್ಸು, ವ್ರತ, ದಾನ, ಜಪ, ಯಜ್ಞ ಮುಂತಾದ ಕ್ರಿಯೆಗಳೆಲ್ಲವೂ ಆಯಾ ಕರ್ಮಗಳಿಗನುಸಾರವಾಗಿ ಅವರವರ ಮನೋಭಾವನೆಯಂತೆ ಫಲವನ್ನು ಕೊಡುವುವು. ಆದುದರಿಂದ ಭಾವನೆಗನುಸಾರವಾಗಿ ಕರ್ಮವು ಫಲವನ್ನು ಉಂಟುಮಾಡುವುದು.

ಭಾವಸ್ತು ತ್ರಿವಿಧೋ ಜ್ಞೇಯಃ ಸಾತ್ತ್ವಿಕೋ ರಾಜಸಸ್ತಥಾ ।
ತಾಮಸಸ್ತು ತಥಾ ಜ್ಞೇಯಃ ಫಲಂ ಕರ್ಮಾನುಸಾರತಃ ॥ ೧೮ ॥

ಭಾವನಾನುಗುಣಂ ಚೇತಿ ವಿಚಿತ್ರಾ ಕರ್ಮಣಾಂ ಸ್ಥಿತಿಃ ।
ತಸ್ಮಾದಿಚ್ಛಾನುಸಾರೇಣ ಭಾವಂ ಕುರ್ಯಾದ್ವಿಚಕ್ಷಣಃ ॥ ೧೯ ॥

ಪಶ್ಚಾತ್ಕರ್ಮಾಪಿ ಕರ್ತವ್ಯಂ ಫಲದಾತಾಪಿ ತದ್ವಿಧಂ ।
ಫಲಂ ದದಾತಿ ಫಲಿನಾಂ ಫಲೇ ಯದಿ ಪ್ರವರ್ತತೇ ॥ ೨೦ ॥

ಕರ್ಮಕಾರೋ ನ ತತ್ರಾಸ್ತಿ ಕುರ್ಯಾತ್ಕರ್ಮ ಸ್ವಭಾವತಃ ।
ತದೇವ ಚೋಪದಾನಾದಿ ಸತ್ತ್ವಾದಿಗುಣಭೇದತಃ ॥ ೨೧ ॥

ಭಾವಾತ್ಪ್ರಾರಭತೇ ತದ್ವದ್ಭಾವ್ಯೈಃ ಫಲಮವಾಪ್ಯತೇ ।
ಧರ್ಮಾರ್ಥಕಾಮಮೋಕ್ಷಾಣಾಂ ಕರ್ಮ ಚೈವ ಹಿ ಕಾರಣಂ ॥ ೨೨ ॥

---

೧೮. ಭಾವವು, ಸಾತ್ವಿಕ, ರಾಜಸ, ತಾಮಸ ಎಂಬುದಾಗಿ ಮೂರು ವಿಧವಾಗಿರುವುದು. ಇವೆಲ್ಲವೂ ಸಹ ಕರ್ಮಾನುಸಾರವಾದ ಫಲವನ್ನೇ ಕೊಡುವುವು.

೧೯. ಅವರವರ ಭಾವನೆಗಳಿಗನುಸಾರವಾಗಿ ಕರ್ಮವು ಫಲವನ್ನು ಕೊಡುವುದಾದುದರಿಂದ ಕರ್ಮಗಳ ಸ್ಥಿತಿಯು ವಿಚಿತ್ರವಾದುದು. ಆದುದರಿಂದ ಬುದ್ಧಿವಂತರಾದವರು ತಮ್ಮತಮ್ಮ ಇಚ್ಛೆಯನ್ನನುಸರಿಸಿ ಭಾವನೆಯನ್ನು ಮಾಡಬೇಕು.

೨೦. ಭಾವನೆಯನ್ನು ಮಾಡಿಕೊಂಡ ಮೇಲೆ ಕರ್ಮವನ್ನು ಮಾಡಬೇಕು. ಹೀಗೆ ಮಾಡಿದಮೇಲೆ ಫಲೇಚ್ಛೆಯಲ್ಲಿ ತೊಡಗಿದರೆ ಆಗ ಕರ್ಮವು ಫಲಾಪೇಕ್ಷೆಯುಳ್ಳವನಿಗೆ ಫಲವನ್ನು ಕೊಡುವುದು.

೨೧-೨೨. ಕರ್ಮವನ್ನು ಮಾಡುವವನು ತನ್ನಿಷ್ಟಾನುಸಾರವಾಗಿ ಮಾಡಬೇಕಾದುದೇನೂ ಇಲ್ಲ. ಆದರೆ ಉಪಾದಾನಾದಿ ಕಾರಣಗಳೂ, ಸತ್ವಾದಿ ಭಾವನೆಗಳೂ ಸೇರಿದರೆ ಭಾವನಾನುಸಾರವಾಗಿ ಕರ್ಮವನ್ನು ತನ್ನಷ್ಟಕ್ಕೆ ತಾನೇ ಆಚರಿಸುವನು. ಅನಂತರ ಭಾವನೆಯನ್ನನುಸರಿಸಿ ಅದಕ್ಕೆ ತಕ್ಕ ಫಲವನ್ನು ಹೊಂದುವನು. ಧರ್ಮ, ಅರ್ಥ, ಕಾಮ, ಮೋಕ್ಷ ಈ ಫಲಗಳುಂಟಾಗಲೂ ಕರ್ಮವೇ ಕಾರಣವು.

ಭಾವಸ್ಥಿತಂ ಭವೇತ್ಕರ್ಮ ಮುಕ್ತಿದಂ ಬಂಧಕಾರಣಂ ।
ಸ್ವಭಾವಾನುಗುಣಂ ಕರ್ಮ ಸ್ಯಸ್ಯೈವೇಹ ಪರತ್ರ ಚ ॥ ೨೩ ॥

ಫಲಾನಿ ವಿವಿಧಾನ್ಯಾಶು ಕರೋತಿ ಸಮತಾನುಗಂ ।
ಏಕ ಏವ ಪದಾರ್ಥೋಽಸೌ ಭಾವೈರ್ಭೇದಃ ಪ್ರದೃಶ್ಯತೇ ॥ ೨೪ ॥

ಕ್ರಿಯತೇ ಭುಜ್ಯತೇ ವಾಪಿ ತಸ್ಮಾದ್ಭಾವೋ ವಿಶಿಷ್ಯತೇ ।
ಯಥಾಭಾವಂ ಕರ್ಮ ಕುರು ಯಥೇಪ್ಸಿತಮವಾಪ್ಸ್ಯಸಿ ॥ ೨೫ ॥

॥ ಬ್ರಹ್ಮೋವಾಚ ॥

ಏತಚ್ಛ್ರುತ್ವಾ ಋಷೇರ್ವಾಕ್ಯಂ ವಿಶ್ವಾಮಿತ್ರಸ್ಯ ಧೀಮತಃ ।
ತಪಸ್ತಪ್ತ್ವಾ ಬಹುಕಾಲಂ ತಾಮಸಂ ಭಾವಮಾಶ್ರಿತಃ ॥ ೨೬ ॥

೨೩–೨೪. ಮನೋಭಾವನೆಯನ್ನನುಸರಿಸಿ ಮಾಡಿದ ಕರ್ಮವು ಮುಕ್ತಿಯನ್ನುಂಟುಮಾಡುವುದು ಅಥವಾ ಮನುಷ್ಯನನ್ನು ಸಂಸಾರಬದ್ಧನನ್ನಾಗಿಯಾದರೂ ಮಾಡುವುದು. ಸ್ವಭಾವನ್ನನುಸರಿಸಿ ಆಚರಿಸಿದ ಕರ್ಮವು ಇಹಪರಗಳೆರಡರಲ್ಲಿಯೂ ಅನೇಕವಿಧವಾದ ಫಲಗಳನ್ನು ಜಾಗ್ರತೆಯಾಗಿ ಕೊಡುವುದು.

೨೫. ಕರ್ಮರೂಪವಾದ ಪದಾರ್ಥವು ಒಂದೇ ಆಗಿದ್ದರೂ ಅದರ ಫಲವು ಭಾವವನ್ನನುಸರಿಸಿ ಬೇರೆಬೇರೆಯಾಗಿರುತ್ತದೆ. ಕರ್ಮವು ಆಚರಿಸಲ್ಪಡುವುದು, ಕರ್ಮವೇ ಅನುಭವಿಸಲ್ಪಡುವುದು ಎಂದು ಭೇದವ್ಯವಹಾರವು ಲೋಕದಲ್ಲಿರುವುದು. ಆದುದರಿಂದ ಭಾವವೇ ಎಲ್ಲದಕ್ಕಿಂತಲೂ ಮುಖ್ಯವಾದುದು. ಅದಕ್ಕೋಸ್ಕರ ಎಲೈ ವಿಶ್ವರೂಪನೇ, ಭಾವಾನುಸಾರವಾದ ಕರ್ಮವನ್ನಾಚರಿಸು. ನಿನ್ನ ಇಷ್ಟಾರ್ಥವು ನೆರವೇರುವುದು ಎಂದನು.

೨೬-೨೭. ಪ್ರಾಜ್ಞನಾದ ವಿಶ್ವಾಮಿತ್ರನ ಮಾತನ್ನು ಕೇಳಿ ವಿಶ್ವರೂಪನು ತಮೋಭಾವನ್ನನುಸರಿಸಿ ಬಹಳಕಾಲದವರೆಗೂ ತಪಸ್ಸು ಮಾಡಿದನು. ಆ ತಾಮಸಭಾವನೆಯನ್ನನುಸರಿಸಿದುದರಿಂದ ಅವನ ಕರ್ಮವೂ ಭಯಂಕರವಾದು

ವಿಶ್ವರೂಪಃ ಕರ್ಮ ಭೀಮಂ ಚಕಾರ ಸುರಭೀಷಣಂ ।
ಪಶ್ಯತ್ಸು ಋಷಿಮುಖ್ಯೇಷು ವಾರ್ಯಮಾಣೋऽಪಿ ನಿತ್ಯಶಃ ॥ ೨೭ ॥

ಆತ್ಮಕೋಪಾನುಸಾರೇಣ ಭೀಮಂ ಕರ್ಮ ತಥಾಕರೋತ್ ।
ಭೀಷಣೇ ಕುಂಡಖಾತೇ ತು ಭೀಷಣೇ ಜಾತವೇದಸಿ ॥ ೨೮ ॥

ಭೀಷಣಂ ರೌದ್ರಪುರುಷಂ ಧ್ಯಾತ್ವಾತ್ಮಾನಂ ಗುಹಾಶಯಂ ।
ಏವಂ ತಪಂತಮಾಲಕ್ಷ್ಯ ವಾಗುವಾಚಾಶರೀರಿಣೀ ॥ ೨೯ ॥

ಜಟಾಜೂಟಂ ವಿನಾತ್ಮಾನಂ ನ ಚ ವೃತ್ರೋ ವ್ಯಜಾಯತ ।
ವೃಥಾತ್ಮಾನಂ ವಿಶ್ವರೂಪೋ ಜುಹುಯಾಜ್ಜಾತವೇದಸಿ ॥ ೩೦ ॥

ದಾಯಿತು. ವಿಶ್ವಾಮಿತ್ರ ಮುಂತಾದ ಋಷಿಗಳು ಬೇಡಬೇಡವೆಂದು ತಡೆಯುತ್ತಿದ್ದರೂ ಸಹ ಲೆಕ್ಕಿಸದೆ ದೇವತೆಗಳಿಗೆ ಭಯವನ್ನುಂಟುಮಾಡುವಂತಹ ಯಜ್ಞವನ್ನು ಮಾಡಲು ಪ್ರಾರಂಭಿಸಿದನು.

೨೮-೨೯. ತಾಮಸಭಾವವನ್ನನುಸರಿಸಿದುದರಿಂದ ವಿಶ್ವರೂಪನಿಗೆ ಭಯಂಕರವಾದ ಕೋಪವುಂಟಾಯಿತು. ಕೋಪದಿಂದಲೇ ಯಜ್ಞಮಾಡಲು ಪ್ರಾರಂಭಿಸಿದನು. ಆ ಕೋಪಕ್ಕನುಸಾರವಾಗಿ ಅಗ್ನಿಕುಂಡವೂ ಭಯಂಕರವಾಗಿದ್ದಿತು ಅಗ್ನಿಯೂ ಭೀಷಣ ರೂಪವನ್ನು ತಾಳಿದನು. ಮನಸ್ಸಿನಲ್ಲಿ ಗುಹಾಶಯನಾದ ಈಶ್ವರನ ರುದ್ರ ಮೂರ್ತಿಯನ್ನು ಧ್ಯಾನಮಾಡುತ್ತಾ ಯಜ್ಞಮಾಡಿದನು. ಇದನ್ನೆಲ್ಲಾ ನೋಡಿ ಆ ಸಮಯದಲ್ಲಿ ಅಶರೀರವಾಣಿಯಾಯಿತು.

೩೦. ಎಲೈ ವಿಶ್ವರೂಪನೇ, ನೀನು ಭಯಂಕರಸ್ವರೂಪವನ್ನು ಧರಿಸಿ ಸುಮ್ಮನೇ ಯಜ್ಞಮಾಡುತ್ತಿರುವೆ. ನಿನ್ನ ಜಟಾಸಹಿತವಾದ ತಲೆಯನ್ನು ಹೋಮಮಾಡಿದ ಹೊರತು ನಿನಗೆ ವೃತ್ರನೆಂಬ ಮಗನು ಹುಟ್ಟುವುದಿಲ್ಲ.

ಸ ಏವೇಂದ್ರಃ ಸ ವರುಣಃ ಸ ಚ ಸ್ಯಾತ್ಸರ್ವಮೇವ ಚ ।
ತ್ಯಕ್ತ್ವಾತ್ಮಾನಂ ಜಟಾಮಾತ್ರಂ ಹುತವಾನ್ವೃಜಿನೋದ್ಭವಃ ॥ ೩೧ ॥

ವೃತ್ರ ಇತ್ಯುಚ್ಯತೇ ವೇದೇ ಸ ಚಾಪಿ ವೃಜಿನೋಽಭವತ್ ।
ಭೀಮಸ್ಯ ಮಹಿಮಾನಂ ಕೋ ಜಾನಾತಿ ಜಗದೀಶಿತುಃ ॥ ೩೨ ॥

ಸೃಜತ್ಯಶೇಷಮಪಿ ಯೋ ನ ಸ ಸಂಗೇನ ಲಿಪ್ಯತೇ ।
ವಿರರಾಮೇತಿ ಸಂಕೀರ್ತ್ಯ ಸಾ ವಾಣ್ಯೇನಂ ಮುನೀಶ್ವರಾಃ ॥ ೩೩ ॥

ಭೀಮೇಶ್ವರಂ ನಮಸ್ಕೃತ್ಯ ಜಗ್ಮುಃ ಸ್ವಂ ಸ್ವಮಥಾಶ್ರಮಂ ।
ವಿಶ್ವರೂಪೋ ಮಹಾಭೀಮೋ ಭೀಮಕರ್ಮಾ ತಥಾಕೃತಿಃ ॥ ೩೪ ॥

ಭೀಮಭಾವೋ ಭೀಮತನುಂ ಧ್ಯಾತ್ವಾತ್ಮಾನಂ ಜುಹಾವ ಹ ।
ತಸ್ಮಾದ್ಭೀಮೇಶ್ವರೋ ದೇವಃ ಪುರಾಣೇ ಪರಿಪಠ್ಯತೇ ।
ತತ್ರ ಸ್ನಾನಂ ಚ ದಾನಂ ಚ ಮುಕ್ತಿದಂ ನಾತ್ರ ಸಂಶಯಃ ॥ ೩೫ ॥

---

೩೧. ನೀನು ಜಟಾಸಹಿತವಾದ ಶಿರಸ್ಸನ್ನು ಹೋಮಮಾಡಿದರೆ ಆ ಪಾಪಕರ್ಮದಿಂದ ಹುಟ್ಟುವವನಿಗೆ ವೃತ್ರನೆಂದು ಹೆಸರು. ವೇದದಲ್ಲಿಯೂ ಪಾಪದಿಂದ ಹುಟ್ಟಿದವನಿಗೆ ವೃತ್ರನೆಂದು ಹೆಸರಿದೆ. ಅವನೇ ಇಂದ್ರನು. ಅವನೇ ವರುಣನು. ಅಷ್ಟೇಕೆ ? ಎಲ್ಲವೂ ಅವನೇ ಆಗುವನು.

೩೨–೩೩. ಜಗದೀಶ್ವರನಾದ ಭೀಮೇಶನ ಮಹಿಮೆಯನ್ನು ಯಾರು ತಾನೆ ತಿಳಿಯಬಲ್ಲರು ? ' ಅವನು ಪ್ರಪಂಚವನ್ನೆಲ್ಲಾ ಸೃಷ್ಟಿಸುವನು. ಆದರೆ ತಾನುಮಾತ್ರ ಕರ್ಮಬದ್ಧನಾಗುವುದಿಲ್ಲ ಎಂಬುದಾಗಿ ಆಕಾಶವಾಣಿಯು ಹೇಳಿ ಸುಮ್ಮನಾಯಿತು.

೩೪. ಅನಂತರ ಋಷಿಗಳೆಲ್ಲರೂ ಭೀಮೇಶ್ವರನಿಗೆ ನಮಸ್ಕರಿಸಿ ತಮ್ಮ ತಮ್ಮ ಆಶ್ರಮಗಳಿಗೆ ಹೊರಟುಹೋದರು. ಮಹಾಭಯಂಕರನಾದ ಆ ವಿಶ್ವರೂಪನು ತಾಮಸಭಾವನೆಯನ್ನನುಸರಿಸಿ ರುದ್ರಮೂರ್ತಿಯನ್ನು ಧ್ಯಾನಿಸುತ್ತಾ ತನ್ನನ್ನೇ ಹೋಮಮಾಡಿಕೊಂಡನು.

೩೫. ಆಗ ಭೀಮೇಶ್ವರನು ಹುಟ್ಟಿದನು. ಆ ದೇವನೇ ಪುರಾಣಗಳಲ್ಲಿ

ಇತಿ ಪಠತಿ ಶೃಣೋತಿ ಯಶ್ಚ ಭಕ್ತ್ಯಾ
ವಿಬುಧಪತಿಂ ಶಿವಮತ್ರ ಭೀಮರೂಪಂ ।
ಜಗತಿ ವಿದಿತಮಶೇಷಪಾಪಹಾರಿ-
ಸ್ಮೃತಿಪದಶರಣೇನ ಮುಕ್ತಿದಶ್ಚ ॥ ೩೬ ॥

ಗೋದಾವರೀ ತಾವದಶೇಷಪಾಪ-
ಸಮೂಹಹಂತ್ರೀ ಪರಮಾರ್ಥದಾತ್ರೀ ।
ಸದೈವ ಸರ್ವತ್ರ ವಿಶೇಷತಸ್ತು
ಯತ್ರಾಂಬುರಾಶಿಂ ಸಮನುಪ್ರವಿಷ್ಟಾ ॥ ೩೭ ॥

ಸ್ನಾತ್ವಾ ತು ತಸ್ಮಿನ್ಸುಕೃತೀ ಶರೀರೀ
ಗೋದಾವರೀವಾರಿಧಿಸಂಗಮೇ ಯಃ ।
ಉದ್ಧೃತ್ಯ ತೀವ್ರಾನ್ನಿರಯಾದಶೇಷಾ-
ತ್ಸ ಪೂರ್ವಜಾನ್ಯಾತಿ ಪುರಂ ಪುರಾರೇಃ ॥ ೩೮ ॥

ಭೀಮೇಶ್ವರನೆಂದು ಪ್ರಸಿದ್ಧನಾಗಿರುವನು. ಇಲ್ಲಿ ಸ್ನಾನದಾನಾದಿಗಳನ್ನು ಮಾಡಿದರೆ ಮುಕ್ತಿಯುಂಟಾಗುವುದರಲ್ಲಿ ಸಂಶಯವಿಲ್ಲ.

೩೬. ಯಾವನು ಭೀಮೇಶ್ವರನನ್ನು ಭಕ್ತಿಯಿಂದ ಧ್ಯಾನಿಸುವನೋ ಅವನ ಚರಿತ್ರೆಯನ್ನು ಪಠಿಸುವನೋ ಅಥವಾ ಕೇಳುವನೋ ಅವನಿಗೆ ಅವನು ಮಾಡಿದ ಪಾಪಗಳೆಲ್ಲವೂ ನಾಶವಾಗಿ ಮುಕ್ತಿಯುಂಟಾಗುವುದು.

೩೭. ಗೋದಾವರಿಯು ಪರಮ ಪವಿತ್ರಳು. ಸ್ನಾನಮಾಡಿದವರ ಪಾಪರಾಶಿಗಳನ್ನು ನಾಶಮಾಡಿ ಶ್ರೇಷ್ಠವಾದ ಜ್ಞಾನವನ್ನುಂಟುಮಾಡುವಳು. ಅದರಲ್ಲಿಯೂ ಸಮುದ್ರಕ್ಕೆ ಸೇರುವ ಬಳಿಯಲ್ಲಿಯಂತೂ ಹೇಳಬೇಕಾದುದೇನಿದೆ ?

೩೮. ಗೋದಾವರೀ ಸಮುದ್ರಸಂಗಮ ಸ್ಥಾನದಲ್ಲಿ ಯಾವನು ಸ್ನಾನ ಮಾಡುವನೋ ಅವನ ಪಾಪಗಳನ್ನೆಲ್ಲಾ ನಾಶಮಾಡುವಳು. ಅವನು ಎಂತಹ ನರಕದಲ್ಲಿದ್ದರೂ ಸಹ ಅವನನ್ನು ಜಾಗ್ರತೆಯಾಗಿ ಉದ್ಧಾರಮಾಡುವಳು. ಅವನಿಗೆ ಈಶ್ವರಲೋಕವು ಪ್ರಾಪ್ತವಾಗುವುದು.

ವೇದಾಂತವೇದ್ಯಂ ಯದುಪಾಸಿತವ್ಯಂ
ತದ್ಬ್ರಹ್ಮ ಸಾಕ್ಷಾತ್ಖಲು ಭೀಮನಾಥಃ ।
ದೃಷ್ಟೇ ಹಿ ತಸ್ಮಿನ್ನ ಪುನರ್ವಿಶಂತಿ
ಶರೀರಿಣಃ ಸಂಸೃತಿಮುಗ್ರದುಃಖಂ ॥ ೩೯ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಋಷಿಸತ್ರಭೀಮೇಶ್ವರತೀರ್ಥವರ್ಣನಂ ನಾಮ
ತ್ರಿಸಪ್ತತ್ಯಧಿಕಶತತಮೋಽಧ್ಯಾಯಃ

---

೩೯. ವೇದಾಂತಪ್ರತಿಪಾದಿತನೂ ಸಾಕ್ಷಾತ್ ಬ್ರಹ್ಮಸ್ವರೂಪನೂ ಆದ ಭೀಮೇಶ್ವರನನ್ನು ಧ್ಯಾನಿಸಬೇಕು. ಅವನ ಅನುಗ್ರಹಕ್ಕೆ ಪಾತ್ರರಾದರೆ ಜನರು ಈ ದುಃಖಮಯವಾದ ಜನ್ಮವನ್ನು ಹೊಂದದೆ ಮುಕ್ತರಾಗುವರು.

ಇಲ್ಲಿಗೆ ಶ್ರೀಬ್ರಹ್ಮಪುರಾಣದಲ್ಲಿ ಭೀಮೇಶ್ವರತೀರ್ಥವರ್ಣನವೆಂಬ ನೂರೆಪ್ಪತ್ತ ಮೂರನೆಯ ಅಧ್ಯಾಯವು ಮುಗಿದುದು.

ಗೌತಮೀಯಮಾಹಾತ್ಮ್ಯೆಯಲ್ಲಿ ನೂರನಾಲ್ಕನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇ ನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಚತುಃಸಪ್ತತ್ಯಧಿಕಶತತಮೋಽಧ್ಯಾಯಃ

॥ ಬ್ರಹ್ಮೋವಾಚ ॥

ಸಾ ಸಂಗತಾ ಪೂರ್ವಮುಪಾಂಪತಿಂ ತಂ
ಗಂಗಾ ಸುರಾಣಾಮಪಿ ವಂದನೀಯಾ ।
ದೇವೈಶ್ಚ ಸರ್ವೈರನುಗಮ್ಯಮಾನಾ
ಸಂಸ್ತೂಯಮಾನಾ ಮುನಿಭಿರ್ಮರುದ್ಭಿಃ ॥ ೧ ॥

ವಸಿಷ್ಠಜಾಬಾಲಿಸಯಾಜ್ಞವಲ್ಕ್ಯ-
ಕ್ರತ್ವಾಂಗಿರೋದಕ್ಷಮರೀಚಿವೈಷ್ಣವಾಃ ।
ಶಾತಾತಪಃ ಶೌನಕದೇವರಾತ-
ಭೃಗ್ವಾಗ್ನಿವೇಶ್ಯಾತ್ರಿಮರೀಚಿಮುಖ್ಯಾಃ ॥ ೨ ॥

ನೂರೆಪ್ಪತ್ತನಾಲ್ಕನೆಯ ಅಧ್ಯಾಯವು

೧. ಬ್ರಹ್ಮನು ಹೇಳಿದನು—ಸಮುದ್ರಕ್ಕೆ ಸೇರಿದ ಗಂಗೆಯನ್ನು ದೇವತೆಗಳೂ, ಮುನಿಗಳೂ ಮರುತ್ತುಗಳೂ ಎಲ್ಲರೂ ಸಹ ಸ್ತೋತ್ರಮಾಡಿ ನಮಸ್ಕರಿಸಿದರು.

೨. ವಸಿಷ್ಠ, ಜಾಬಾಲಿ, ಯಾಜ್ಞವಲ್ಕ್ಯ, ಕ್ರತು, ಆಂಗಿರಸ, ದಕ್ಷ, ಮರೀಚಿ, ವೈಷ್ಣವ, ಶತಾತಪ, ಶೌನಕ, ದೇವರಾತ, ಭೃಗು, ಅಗ್ನಿವಶ್ಯ, ಅತ್ರಿ ಮರೀಚಿ ಇಂತಹ ಮುಖ್ಯರಾದ ಋಷಿಗಳೆಲ್ಲರೂ ಅಲ್ಲಿಗೆ ಹೋಗಿ ಗಂಗೆಯನ್ನು ಸ್ತುತಿಸಿದರು.

ಸುಧೂತಪಾಪಾ ಮುನಿಗೌತಮಾದಯಃ
ಸಕೌಶಿಕಾಸ್ತುಂಬರುಪರ್ವತಾದ್ಯಾಃ ।
ಅಗಸ್ತ್ಯಮಾರ್ಕಂಡಸಪಿಪ್ಪಲಾದ್ಯಾಃ
ಸಗಾಲವಾ ಯೋಗಪರಾಯಣಾಶ್ಚ ॥ ೩ ॥

ಸವಾಮದೇವಾಂಗಿರಸೋऽಥ ಭಾರ್ಗವಾಃ
ಸ್ಮೃತಿಪ್ರವೀಣಾಃ ಶ್ರುತಿಭಿರ್ಮನೋಜ್ಞಾಃ ।
ಸರ್ವೇ ಪುರಾಣಾರ್ಥವಿದೋ ಬಹುಜ್ಞಾ-
ಸ್ತೇ ಗೌತಮೀಂ ದೇವನದೀಂ ತು ಗತ್ವಾ ॥ ೪ ॥

ಸ್ತೋಷ್ಯಂತಿ ಮಂತ್ರೈಃ ಶ್ರುತಿಭಿಃ ಪ್ರಭೂತೈ-
ರ್ಹೃದ್ಯೈಶ್ಚ ತುಷ್ಟ್ಯಾ ಮರ್ದಿತೈರ್ಮನೋಭಿಃ ।
ತಾಂ ಸಂಗತಾಂ ವೀಕ್ಷ್ಯ ಶಿವೋ ಹರಿಶ್ಚ
ಆತ್ಮಾನಮಾದರ್ಶಯತಾಂ ಮುನಿಭ್ಯಃ ॥ ೫ ॥

ತಥಾಮರಾಸ್ತೌ ಪಿತೃಭಿಶ್ಚ ದೃಷ್ಟ್ವಾ
ಸ್ತುವಂತಿ ದೇವೌ ಸಕಲಾರ್ತಿಹಾರಿಣೌ । ॥ ೬ ॥

---

೩. ಪವಿತ್ರರಾದ ಮನು, ಗೌತಮಾದಿಗಳೂ, ವಿಶ್ವಾಮಿತ್ರ, ತುಂಬರು ಪರ್ವತ ಮುಂತಾದವರೂ, ಅಗಸ್ತ್ಯ, ಮಾರ್ಕಂಡ, ಪಿಪ್ಪಲ, ಗಾಲವ ಮುಂತಾದ ಯೋಗಿಗಳೂ ಅಲ್ಲಿಗೆ ಹೋಗಿ ವಿವಿಧವಾದ ಸ್ತೋತ್ರಗಳಿಂದ ಸ್ತುತಿಸಿದರು.

೪. ವಾಮದೇವ, ಅಂಗಿರಸ, ಭಾರ್ಗವ ಇವರೇ ಮೊದಲಾದ ಶಾಸ್ತ್ರಾರ್ಥವಿದರೂ, ವೇದಜ್ಞಾನಿಗಳೂ, ಸರ್ವಜ್ಞರೂ, ಪುರಾಣಾರ್ಥವನ್ನು ತಿಳಿದವರೂ ಆದ ಋಷಿಗಳೆಲ್ಲರೂ ಆ ದೇವನದಿಯಾದ ಗೌತಮಿಗೆ ಹೋಗಿ ವೇದಮಂತ್ರಗಳಿಂದಲೂ ಮನೋಹರವಾದ ಸ್ತೋತ್ರಗಳಿಂದಲೂ ಸ್ತುತಿಸಿದರು.

೫-೬. ಸಮುದ್ರಸಂಗಮವನ್ನು ಮಾಡಿದ ಗಂಗೆಯನ್ನು ನೋಡಿ ಶಿವನೂ, ವಿಷ್ಣುವೂ ಮುನಿಗಳಿಗೆ ಪ್ರತ್ಯಕ್ಷರಾದರು. ಪ್ರತ್ಯಕ್ಷರಾದ ಈ ಶಿವ ವಿಷ್ಣುಗಳನ್ನು ದೇವತೆಗಳೂ ಪಿತೃದೇವತೆಗಳೂ ಸ್ತೋತ್ರಮಾಡಿದರು. ಶಿವ ಮತ್ತು ವಿಷ್ಣುವು ಸಕಲ ಕಷ್ಟಗಳನ್ನೂ ನಾಶಮಾಡುವರು.

ಆದಿತ್ಯಾ ವಸವೋ ರುದ್ರಾ ಮರುತೋ ಲೋಕಪಾಲಕಾಃ ।
ಕೃತಾಂಜಲಿಪುಟಾಃ ಸರ್ವೇ ಸ್ತುವಂತಿ ಹರಿಶಂಕರೌ ॥ ೭ ॥

ಸಂಗಮೇಷು ಪ್ರಸಿದ್ಧೇಷು ನಿತ್ಯಂ ಸಪ್ತಸು ನಾರದ ।
ಸಮುದ್ರಸ್ಯ ಚ ಗಂಗಾಯಾ ನಿತ್ಯಂ ದೇವೌ ಪ್ರತಿಷ್ಠಿತೌ ॥ ೮ ॥

ಗೌತಮೇಶ್ವರ ಆಖ್ಯಾತೋ ಯತ್ರ ದೇವೋ ಮಹೇಶ್ವರಃ ।
ನಿತ್ಯಂ ಸಂನಿಹಿತಸ್ತತ್ರ ಮಾಧವೋ ರಮಯಾ ಸಹ ॥ ೯ ॥

ಬ್ರಹ್ಮೇಶ್ವರ ಇತಿ ಖ್ಯಾತೋ ಮಯೈವ ಸ್ಥಾಪಿತಃ ಶಿವಃ ।
ಲೋಕಾನಾಮುಪಕಾರಾರ್ಥಮಾತ್ಮನಃ ಕಾರಣಾಂತರೇ ॥ ೧೦ ॥

ಚಕ್ರಪಾಣಿರಿತಿ ಖ್ಯಾತಃ ಸ್ತುತೋ ದೇವೈರ್ಮಯಾ ಸಹ ।
ತತ್ರ ಸಂನಿಹಿತೋ ವಿಷ್ಣುರ್ದೇವೈಃ ಸಹ ಮರುದ್ಗಣೈಃ ॥ ೧೧ ॥

---

೭. ಆದಿತ್ಯರು, ವಸುಗಳು, ಏಕಾದಶರುದ್ರರು, ಸಪ್ತಮರುತ್ತುಗಳು ಲೋಕಪಾಲಕರು ಇವರೆಲ್ಲರೂ ಅಂಜಲಿಬದ್ಧರಾಗಿ ಆ ವಿಷ್ಣುಶಿವರನ್ನು ಸ್ತೋತ್ರ ಮಾಡಿದರು.

೮. ಎಲೈ ನಾರದನೇ, ಸಪ್ತಸಂಗಮಗಳೆಂದು ಪ್ರಸಿದ್ಧವಾಗಿರುವ ಆ ಸಮುದ್ರ ಗಂಗಾಸಂಗಮದಲ್ಲಿ ನಿತ್ಯವೂ ಹರಿಶಂಕರರು ವಾಸವಾಗಿರುವರು.

೯. ಗೌತಮೇಶ್ವರನೆಂಬ ಹೆಸರಿನಿಂದ ಪ್ರಸಿದ್ಧನಾದ ಪರಮೇಶ್ವರನು ಎಲ್ಲಿ ವಾಸವಾಗಿರುವನೋ ಅಲ್ಲಿ ನಿತ್ಯವೂ ಲಕ್ಷ್ಮಿಯೊಡಗೂಡಿದ ವಿಷ್ಣುವು ವಾಸವಾಗಿರುವನು.

೧೦. ಬ್ರಹ್ಮೇಶ್ವರನೆಂದು ಪ್ರಸಿದ್ಧನಾಗಿರುವ ಈಶ್ವರನನ್ನು ನಾನೇ (ಬ್ರಹ್ಮನೇ) ಪ್ರತಿಷ್ಠೆಮಾಡಿರುವೆನು. ಲೋಕೋಪಕಾರಾರ್ಥವಾಗಿಯೂ ನನ್ನ ಸಂಬಂಧವಾದ ಯಾವುದೋ ಕಾರಣಕ್ಕೋಸ್ಕರಲೂ ಪ್ರತಿಷ್ಠೆಮಾಡಿದೆನು.

೧೧, ಚಕ್ರಪಾಣಿ ಎಂಬ ಹೆಸರಿನಿಂದ ಪ್ರಸಿದ್ಧನಾದ ವಿಷ್ಣುವು ನನ್ನ ದೇವತೆಗಳ, ಮತ್ತು ಮರುದ್ಗಣಗಳ ಪ್ರಾರ್ಥನೆಯಂತೆ ಇಲ್ಲಿ ವಾಸ ವಾಗಿರುವನು.

ಐಂದ್ರಂ ತೀರ್ಥಮಿತಿ ಖ್ಯಾತಂ ತದೇವ ಹಯಮೂರ್ಧಕಂ ।
ಹಯಮೂರ್ಧಾ ತತ್ರ ವಿಷ್ಣುಸ್ತನ್ಮೂರ್ಧನಿ ಸುರಾ ಅಪಿ ।
ಸೋಮತೀರ್ಥಮಿತಿ ಖ್ಯಾತಂ ಯತ್ರ ಸೋಮೇಶ್ವರಃ ಶಿವಃ ॥ ೧೨ ॥

ಇಂದ್ರಸ್ಯ ಸೋಮಶ್ರವಸೋ ದೇವೈಶ್ಚ ಋಷಿಭಿಸ್ತಥಾ ।
ಪ್ರಾರ್ಥಿತಃ ಸೋಮ ಏವಾದಾವಿಂದ್ರಾಯೇಂದೋ ಪರಿಸ್ರವ । ॥ ೧೩ ॥

ಸಪ್ತ ದಿಶೋ ನಾನಾಸೂರ್ಯಾಃ ಸಪ್ತಹೋತಾರ ಋತ್ವಿಜಃ ।
ದೇವಾ ಆದಿತ್ಯಾ ಯೇ ಸಪ್ತ ತೇಭಿಃ ಸೋಮಾಭಿರಕ್ಷ ನ ಇಂದ್ರಾಯೇಂ-
ದೋ ಪರಿಸ್ರವ ॥ ೧೪ ॥ (ಋಗ್ವೇದ ೯–೧೧೪–೩)

---

೧೨. ಐಂದ್ರತೀರ್ಥವೆಂದು ಪ್ರಸಿದ್ಧವಾದ ತೀರ್ಥವಿರುವುದು. ಅದಕ್ಕೆ ಹಯಮೂರ್ಧಕವೆಂತಲೂ ಹೆಸರಿರುವುದು. ಅಲ್ಲಿ ಹಯಗ್ರೀವನಾದ ವಿಷ್ಣುವು ವಾಸವಾಗಿರುವನು. ಆ ತೀರ್ಥದಲ್ಲಿ ದೇವತೆಗಳೂ ವಾಸವಾಗಿರುವರು. ಅಲ್ಲಿಯೇ ಸೋಮತೀರ್ಥವಿರುವುದು. ಅಲ್ಲಿ ಶಿವನು ನೆಲಸಿರುವನು.

೧೩. ಇಲ್ಲಿ ದೇವತೆಗಳೂ ಋಷಿಗಳೂ ಇಂದ್ರನಿಗೆ ಸೋಮರಸವನ್ನು ಕೊಡು ಎಂಬುದಾಗಿ ಸೋಮನನ್ನು ಕುರಿತು ಪ್ರಾರ್ಥಿಸಿದರು.

೧೪. ಎಲೈ ದೇವನೇ, ನೀನು ಷಡೃತುಗಳಿಗೆ ಅಧಿದೇವತೆಗಳಾಗಿಯೂ ಸೋಮನು (ಚಂದ್ರನು) ಇರುವ ದಿಕ್ಕಿಗೆ ಎಂದರೆ ಊರ್ಧ್ವದಿಕ್ಕಿಗೆ ಅಧಿದೇವತೆಯಾಗಿ ಇರುವ ಏಳು ದಿಕ್ಕುಗಳನ್ನು ವ್ಯಾಪಿಸಿ ಸಪ್ತಸೂರ್ಯರಂತೆ ಪ್ರಕಾಶಿಸುತ್ತಿರುವೆ. ಯಜ್ಞದಲ್ಲಿ ಹೋತ್ರಾದಿ ಏಳು ಋತ್ವಿಕ್ಕುಗಳ ಸ್ವರೂಪನಾಗಿರುವೆ. ಅದಿತಿಪುತ್ರರಾದ ಎಂಟು ಮಂದಿಯಲ್ಲಿ ಮಾರ್ತಾಂಡನು ಹೊರತಾಗಿ ಉಳಿದ ಏಳು ಜನ ಆದಿತ್ಯರ ಸ್ವರೂಪನಾಗಿರುವೆ. ಈ ವಿಧವಾದ ಏಳು ಏಳು ರೂಪಗಳಿಂದ ಬೆಳಗುತ್ತಿರುವ ನೀನು ನಮಗೆ ಅಮೃತವನ್ನು (ಶಾಶ್ವತಪದವಿಯನ್ನು) ಕೊಟ್ಟು ಕಾಪಾಡು.

ಸೂಚನೆ:—ಈ ಮಂತ್ರಗಳು ಋಗ್ವೇದದ ೯ನೆಯ ಮಂಡಲದ ೧೧೪ನೆಯ ಸೂಕ್ತದಲ್ಲಿ ೨–೪ ಋಕ್ಕುಗಳೂ ಮತ್ತು ೧೧೨ನೆಯ ಸೂಕ್ತದ ೩ನೆಯ ಋಕ್ಕೂ ಆಗಿವೆ. ಈ ಋಕ್ಕುಗಳಿಗೆ ಋಷಿಯು ಕಶ್ಯಪನು. ಪವಮಾನಃ ಸೋಮನೇ ದೇವತೆಯು. ಪಂಕ್ತಿಶ್ಛಂದಸ್ಸು. ಈ ಋಕ್ಕುಗಳು ಇಲ್ಲಿ ಸ್ತೋತ್ರಕ್ಕಾಗಿ ಉಪಯೋಗಿಸಲ್ಪಟ್ಟಿವೆ. ಈ ಋಕ್ಕುಗಳಿಗೆ ಅನೇಕ ಅರ್ಥಗಳನ್ನು ಕಲ್ಪಿಸಬಹುದಾಗಿದೆ. ಆದರೂ ಸಾಯಣ ಭಾಷ್ಯವನ್ನನುಸರಿಸಿ ಪ್ರಕೃತಸಂದರ್ಭಕ್ಕೆ ಹೊಂದುವಂತೆ ಸೂಕ್ಷ್ಮವಾದ ಅರ್ಥವನ್ನು ಮಾತ್ರ ಕೊಟ್ಟಿರುತ್ತದೆ. ಈ ಮಂತ್ರಗಳ ವಿಸ್ತಾರವಾದ ಅರ್ಥವಿವರಣೆಯನ್ನು ಈಗ ಅಚ್ಚಾಗುತ್ತಿರುವ ಋಗ್ವೇದದಲ್ಲಿ ನೋಡಿಕೊಳ್ಳಬಹುದು.

ಯತ್ತೇ ರಾಜಞ್ಛೃತಂ ಹವಿಸ್ತೇನ ಸೋಮಾಭಿರಕ್ಷ ನಃ ।
ಅರಾತೀ ವಾ ಮಾ ನಸ್ತಾರೀನ್ಮೋ ಚ ನಃ ಕಿಂಚನಾಮಮದಿಂದ್ರಾಯೇಂ-
ದೋ ಪರಿಸ್ರವ ॥ ೧೫ ॥ (ಋಗ್ವೇದ ೯-೧೧೪-೪)

ಋಷೇ ಮಂತ್ರಕೃತಾಂ ಸ್ತೋಮೈಃ ಕಶ್ಯಪೋದ್ವರ್ಧಯನ್ಗಿರಃ ।
ಸೋಮಂ ನಮಸ್ಯ ರಾಜಾನಂ ಯೋ ಜಜ್ಞೇ ವೀರುಧಾಂ ಪತಿರಿಂದ್ರಾ-
ಯೇಂದೋ ಪರಿಸ್ರವ ॥ ೧೬ ॥ (ಋಗ್ವೇದ (೯-೧೧೪-೨)

ಕಾರುರಹಂ ತತೋ ಭಿಷಗುಪಲಪ್ರಕ್ಷಿಣೀ ನನಾ ।
ನಾನಾಧಿಯೋ ವಸೂಯವೋಽನು ಗಾ ಇವ ತಸ್ಥಿಮೇಂದ್ರಾಯೇಂದ್ರೋ
ಪರಿಸ್ರವ ॥ ೧೭ ॥ (ಋಗ್ವೇದ ೯-೧೧೨-೩)

---

೧೫. ಎಲೈ ರಾಜನೇ ಎಂದರೆ ಸರ್ವರಿಗೂ ಸ್ವಾಮಿಯಾದ ಓ ದೇವನೇ ನಿನಗಾಗಿ ಪಕ್ವವಾದ ಈ ಹವಿಸ್ಸನ್ನು ಸಿದ್ಧಪಡಿಸಿರುವೆವು. ಇದನ್ನು ಸ್ವೀಕರಿಸಿ ನಮ್ಮನ್ನು ಕಾಪಾಡು ಮತ್ತು ನಮ್ಮ ಶತ್ರುಗಳು ನಮ್ಮನ್ನು ಬಾಧೆಪಡಿಸದಂತೆಯೂ ಸಂಹರಿಸದಂತೆಯೂ ನಮ್ಮನ್ನು ರಕ್ಷಿಸಿ ನಮಗೆ ಸ್ವಲ್ಪವಾದರೂ ಧನಾದಿಗಳನ್ನೂ ಅಮೃತವನ್ನೂ ಕೊಟ್ಟು ಕಾಪಾಡು.

೧೬. ಎಲೈ ಋಷಿಯೇ, ಮಂತ್ರದ್ರಷ್ಟೃಗಳಾದ ಋಷಿಗಳು ಮಾಡಿದ ಸ್ತೋತ್ರಗಳಿಂದ ಸೋಮನನ್ನು ಸ್ತೋತ್ರಮಾಡು. ಆ ಸ್ತೋತ್ರಗಳು ಸೋಮನಿಗೆ ಹೆಚ್ಚು ಪ್ರಿಯವಾಗಲಿ. ಸರ್ವಜಗತ್ತಿಗೂ ಸ್ವಾಮಿಯೂ ಓಷಧಿವನಸ್ಪತಿಗಳಿಗೆ ಅಧಿಪತಿಯೂ ಆದ ಸೋಮನನ್ನು ನಮಸ್ಕಾರಮಾಡಿ ಸ್ತೋತ್ರಾದಿಗಳಿಂದ ಸಂತೋಷಪಡಿಸು. ಆ ದೇವನು ನಿಮಗೆ ಅಮೃತವನ್ನು ಕರುಣಿಸುವನು.

೧೭. ಎಲೈ ಸೋಮನೇ, ನಾನು ನಿನ್ನ ಸ್ತೋತ್ರಕರ್ತನು ಎಂದರೆ ಸ್ತೋತ್ರಮಾಡುವೆನು. ನೀನು ಸಮಸ್ತ ಪ್ರಪಂಚಕ್ಕೂ ತಂದೆಯಾಗಿರುವೆ. ಯಜ್ಞದಲ್ಲಿನ ಋತ್ವಿಕ್ಕುಗಳಲ್ಲಿ ಬ್ರಹ್ಮನಾಗಿರುವೆ. ಸೋಮರಸವನ್ನು (ಅಮೃತವನ್ನು) ದೃಷತ್‌ಗಳಿಂದ ಚೂರ್ಣಮಾಡಿ ಹೊರಹೊರಡುವಂತೆ ಮಾಡುವೆ. ತಾಯಿಯಂತೆ ಸಮಸ್ತರನ್ನು ರಕ್ಷಿಸುವೆ. ಅನೇಕ ಕರ್ಮಗಳಲ್ಲಿ ಮುಖ್ಯವಾಗಿ ಯಜ್ಞಕರ್ಮದಲ್ಲಿ ತೊಡಗಿರುವ ನಾವು ಹಾಲಿಗಾಗಿ ಗೋವುಗಳನ್ನು ಆಶ್ರಯಿಸುವಂತೆ ಧನಾಪೇಕ್ಷೆಯಿಂದ ನಿನ್ನನ್ನು ಆಶ್ರಯಿಸಿರುವೆವು. ಆದುದರಿಂದ ಎಲೈ ಸೋಮನೆ, ನಮಗೆ (ಇಂದ್ರನಿಗೆ) ಸೋಮವನ್ನು (ಅಮೃತವನ್ನು) ಕೊಟ್ಟು ಕಾಪಾಡು.

ಏವಮುಕ್ತ್ವಾ ಚ ಋಷಿಭಿಃ ಸೋಮಂ ಪ್ರಾಪ್ಯ ಚ ವಜ್ರಿಣೇ ।
ತೇಭ್ಯೋ ದತ್ವಾ ತತೋ ಯಜ್ಞಃ ಪೂರ್ಣೋ ಜಾತಃ ಶತಕ್ರತೋಃ॥ ೧೮ ॥

ತತ್ಸೋಮತೀರ್ಥಮಾಖ್ಯಾತಮಾಗ್ನೇಯಂ ಪುರತಸ್ತು ತತ್ ।
ಅಗ್ನಿರಿಷ್ಟ್ವಾ ಮಹಾಯಜ್ಞೈರ್ಮಾಮಾರಾಧ್ಯ ಮನೀಷಿತಂ ॥ ೧೯ ॥

ಸಂಪ್ರಾಪ್ತವಾನ್ಮತ್ಪ್ರಸಾದಾದಹಂ ತತ್ರೈವ ನಿತ್ಯಶಃ ।
ಸ್ಥಿತೋ ಲೋಕೋಪಕಾರಾರ್ಥಂ ತತ್ರ ವಿಷ್ಣುಃ ಶಿವಸ್ತಥಾ ॥ ೨೦ ॥

ತಸ್ಮಾದಾಗ್ನೇಯಮಾಖ್ಯಾತಮಾದಿತ್ಯಂ ತದನಂತರಂ ।
ಯತ್ರಾದಿತ್ಯೋ ವೇದಮಯೋ ನಿತ್ಯಮೇತಿ ಉಪಾಸಿತುಂ ॥ ೨೧ ॥

---

೧೮. ಈ ರೀತಿಯಾಗಿ ಋಷಿಗಳು ಸೋಮನನ್ನು ಸ್ತೋತ್ರಮಾಡಿ ಸೋಮನಲ್ಲಿಗೆ ಹೋದರು. ಸೋಮನು ಸಂತುಷ್ಟನಾಗಿ ಇಂದ್ರನಿಗೋಸ್ಕರ ಋಷಿಗಳಿಗೆ ಸೋಮಲತೆಯನ್ನು ಕೊಟ್ಟನು. ಆಗ ಇಂದ್ರನ ಯಜ್ಞವು ಪೂರ್ಣವಾಯಿತು.

೧೯-೨೦. ಆ ತೀರ್ಥಕ್ಕೆ ಸೋಮತೀರ್ಥವೆಂದು ಹೆಸರಾಯಿತು. ಅದರ ಮುಂದಿರುವುದು ಆಗ್ನೇಯತೀರ್ಥವು. ಅಲ್ಲಿ ಅಗ್ನಿಯು ನನ್ನನ್ನು ಕುರಿತು ಒಂದು ದೊಡ್ಡ ಯಜ್ಞವನ್ನು ಮಾಡಿದನು. ನನ್ನ ಅನುಗ್ರಹದಿಂದ ತನಗಿಷ್ಟವಾದುದನ್ನು ಪಡೆದನು. ಆದುದರಿಂದ ನಾನು ಲೋಕೋಪಕಾರಾರ್ಥವಾಗಿ ಅಲ್ಲಿಯೇ ವಾಸವಾಗಿರುವೆನು. ಅಲ್ಲದೆ ವಿಷ್ಣುವೂ ಶಿವನೂ ಸಹ ಅಲ್ಲಿಯೇ ಇರುವರು.

೨೧. ಆದುದರಿಂದ ಆ ತೀರ್ಥಕ್ಕೆ ಆಗ್ನೇಯತೀರ್ಥವೆಂದು ಹೆಸರಾಯಿತು. ಅದಾದನಂತರ ಆದಿತ್ಯವೆಂಬ ತೀರ್ಥವಿರುವುದು. ಅಲ್ಲಿಗೆ ವೇದಮಯನಾದ ಸೂರ್ಯನು ನನ್ನನ್ನೂ (ಬ್ರಹ್ಮ) ಶಂಕರನನ್ನೂ ವಿಷ್ಣುವನ್ನೂ ಪೂಜಿಸಲು ಪ್ರತಿದಿನವೂ ಬರುವನು.

ರೂಪಾಂತರೇಣ ಮಧ್ಯಾಹ್ನೇ ದ್ರಷ್ಟುಂ ಮಾಂ ಶಂಕರಂ ಹರಿಂ ।
ನಮಸ್ಕಾರ್ಯಸ್ತತ್ರ ಸದಾ ಮಧ್ಯಾಹ್ನೇ ಸಕಲೋ ಜನಃ ॥ ೨೩ ॥

ರೂಪೇಣ ಕೇನ ಸವಿತಾ ಸಮಾಯಾತೀತ್ಯನಿಶ್ಚಯಾತ್ ।
ತಸ್ಮಾದಾದಿತ್ಯಮಾಖ್ಯಾತಂ ಬಾರ್ಹಸ್ಪತ್ಯಮನಂತರಂ ॥ ೨೩ ॥

ಬೃಹಸ್ಪತಿಃ ಸುರೈಃ ಪೂಜಾಂ ತಸ್ಮಾತ್ತೀರ್ಥಾದವಾಪ ಹ ।
ಈಜೇ ಚ ಯಜ್ಞಾನ್ವಿವಿಧಾನ್ಬಾರ್ಹಸ್ಪತ್ಯಂ ತತೋ ವಿದುಃ ॥ ೨೪ ॥

ತತ್ತೀರ್ಥಸ್ಮರಣಾದೇವ ಗ್ರಹಶಾಂತಿರ್ಭವಿಷ್ಯತಿ ।
ತಸ್ಮಾದಪ್ಯಪರಂ ತೀರ್ಥಮಿಂದ್ರಗೋಪೇ ನಗೋತ್ತಮೇ ॥ ೨೫ ॥

ಪ್ರತಿಷ್ಠಿತಂ ಮಹಾಲಿಂಗಂ ಕಸ್ಮಿಂಶ್ಚಿತ್ಕಾರಣಾಂತರೇ ।
ಹಿಮಾಲಯೇನ ತತ್ತೀರ್ಥಮದ್ರಿತೀರ್ಥಂ ತದುಚ್ಯತೇ ॥ ೨೬ ॥

೨೨-೨೩. ಆದುದರಿಂದ ಮಧ್ಯಾಹ್ನಕಾಲದಲ್ಲಿ ಅಲ್ಲಿ ಬರುವ ಜನರೆಲ್ಲರನ್ನೂ ನಮಸ್ಕರಿಸಬೇಕು. ಏಕೆಂದರೆ ಸೂರ್ಯನು ರೂಪಾಂತರದಿಂದ ಬರುವವನಾದುದರಿಂದ ಇಂತಹ ರೂಪದಿಂದಲೇ ಬರುವನೆಂದು ಗೊತ್ತಾಗುವುದಿಲ್ಲ. ಆದುದರಿಂದ ಇದಕ್ಕೆ ಆಧಿತ್ಯತೀರ್ಥವೆಂದು ಹೆಸರಾಯಿತು. ಅದಾದನಂತರ ಬಾರ್ಹಸ್ಪತ್ಯ ತೀರ್ಥವಿರುವುದು.

೨೪. ಈ ತೀರ್ಥದಲ್ಲಿ ದೇವತೆಗಳು ಬೃಹಸ್ಪತಿಯನ್ನು ಪೂಜಿಸಿದರು. ಮತ್ತು ಅನೇಕ ಯಜ್ಞಗಳನ್ನು ಮಾಡಿದರು. ಆದುದರಿಂದ ಇದಕ್ಕೆ ಬಾರ್ಹಸ್ಪತ್ಯತೀರ್ಥವೆಂದು ಹೆಸರು.

೨೫. ಈ ಬಾರ್ಹಸ್ಪತ್ಯತೀರ್ಥಸ್ಮರಣೆ ಮಾತ್ರದಿಂದಲೇ ಗ್ರಹಾದಿಗಳ ಶಾಂತಿಯಾಗುವುದು. ಅದಕ್ಕಿಂತ ಮುಂದೆ ಇಂದ್ರಗೋಪವೆಂಬ ಪರ್ವತವಿರುವುದು. ಅಲ್ಲೊಂದು ತೀರ್ಥವಿರುವುದು.

೨೬. ಆ ತೀರ್ಥದಲ್ಲಿ ಕಾರಣಾಂತರದಿಂದ ಒಂದು ಮಹಾಲಿಂಗವು ಪ್ರತಿಷ್ಠಿಸಲ್ಪಟ್ಟಿರುವುದು. ಈ ಲಿಂಗವನ್ನು ಹಿಮವಂತನು ಪ್ರತಿಷ್ಠೆ ಮಾಡಿದುದು. ಈ ತೀರ್ಥಕ್ಕೆ ಇಂದ್ರತೀರ್ಥವೆಂದು ಹೆಸರು.

ತತ್ರ ಸ್ನಾನಂ ಚ ದಾನಂ ಚ ಸರ್ವಕಾಮಪ್ರದಂ ಶುಭಂ ।
ಏವಂ ಸಾ ಗೌತಮೀ ಗಂಗಾ ಬ್ರಹ್ಮಾದ್ರೇಶ್ಚ ವಿನಿಃಸೃತಾ ॥ ೨೭ ॥

ಯಾವತ್ಸಾಗರಗಾ ದೇವೀ ತತ್ರ ತೀರ್ಥಾನಿ ಕಾನಿಚಿತ್ ।
ಸಂಕ್ಷೇಪೇಣ ಮಯೋಕ್ತಾನಿ ರಹಸ್ಯಾನಿ ಶುಭಾನಿ ಚ ॥ ೨೮ ॥

ವೇದೇ ಪುರಾಣೇ ಋಷಿಭಿಃ ಪ್ರಸಿದ್ಧಾ
ಯಾ ಗೌತಮೀ ಲೋಕನಮಸ್ಕೃತಾ ಚ ।
ವಕ್ತುಂ ಕಥಂ ತಾಮತಿಸುಪ್ರಭಾವಾ-
ಮಶೇಷತೋ ನಾರದ ಕಸ್ಯ ಶಕ್ತಿಃ ॥ ೨೯ ॥

ಭಕ್ತ್ಯಾ ಪ್ರವೃತ್ತಸ್ಯ ಯಥಾಕಥಂಚಿ-
ನ್ನೈವಾಪರಾಧೋಽಸ್ತಿ ನ ಸಂಶಯೋಽತ್ರ ।
ತಸ್ಮಾಚ್ಚ ದಿಙ್ಮಾತ್ರಮತಿಪ್ರಯಾಸಾ-
ತ್ಸಂಸೂಚಿತಂ ಲೋಕಹಿತಾಯ ತಸ್ಯಾಃ ॥ ೩೦ ॥

೨೭–೨೮. ಅಲ್ಲಿ ಸ್ನಾನದಾನಾದಿಗಳನ್ನು ಮಾಡಿದರೆ ಎಲ್ಲಾ ಇಷ್ಟಾರ್ಥಗಳೂ ಸಿದ್ಧಿಸುವುವು. ಈರೀತಿಯಾಗಿ ಗೌತಮಿಯು ಬ್ರಹ್ಮಾದಿಗಳಿಂದ ಸಮುದ್ರಕ್ಕೆ ಕರೆತಂದು ಬಿಡಲ್ಪಟ್ಟಳು. ಆ ಗಂಗೆಯು ಸಮುದ್ರವನ್ನು ಸೇರುವ ಸ್ಥಳದಲ್ಲಿ ಕೆಲವು ತೀರ್ಥಗಳಿರುವುವು. ಅವುಗಳಲ್ಲಿ ಕೆಲವನ್ನು ಮಾತ್ರ ಸಂಕ್ಷೇಪವಾಗಿ ತಿಳಿಸಿರುವೆನು. ಇವು ರಹಸ್ಯವಾದುವು ಮತ್ತು ಶುಭಪ್ರದವಾದುವು.

೨೯. ವೇದಪುರಾಣಗಳಲ್ಲಿ ಪ್ರಸಿದ್ಧಳೂ, ಋಷಿಗಳಿಂದ ನಿತ್ಯವೂ ಸ್ತುತಿಸಲ್ಪಡುತ್ತಿರುವವಳೂ ಲೋಕನಮಸ್ಕಾರಾರ್ಹಳೂ ಆದ ಈ ಗೌತಮಿಯ ಮಹಾತ್ಮೆಯನ್ನು ಹೇಳಲು ಈ ವಿಶಾಲವಾದ ಪ್ರಪಂಚದಲ್ಲಿ ಯಾರುತಾನೇ ಶಕ್ತರು ?

೩೦. ಹೇಗಾದರೂ ಆಗಲಿ ಭಕ್ತಿಯಿಂದ ಪ್ರವೃತ್ತನಾದ ಮನುಷ್ಯನು ಗಂಗೆಯನ್ನು ಪೂಜಿಸಿದರೆ ಅವನ ಅಪರಾಧವೆಲ್ಲವೂ ನಾಶವಾಗುವುದು. ಇದರಲ್ಲಿ ಸಂಶಯವಿಲ್ಲ. ಆದುದರಿಂದ ಆ ಗಂಗಾಮಾತೆಯ ಮಹಿಮೆಯನ್ನು ಅತಿ ಪ್ರಯಾಸದಿಂದ ಎಲ್ಲೋ ಸ್ವಲ್ಪ ಜನಗಳ ತಿಳುವಳಿಕೆಗೋಸ್ಕರ ಲೋಕೋಪಕಾರಾರ್ಥವಾಗಿ ಹೇಳಿರುವೆನು.

ಕಸ್ತಸ್ಯಾಃ ಪ್ರತಿತೀರ್ಥಂ ತು ಪ್ರಭಾವಂ ವಕ್ತುಮೀಶ್ವರಃ ।
ಅಪಿ ಲಕ್ಷ್ಮೀಪತಿರ್ಸಿಷ್ಣುರಲಂ ಸೋಮೇಶ್ವರಃ ಶಿವಃ ॥ ೩೧ ॥

ಕ್ವಚಿತ್ಕಸ್ಮಿಂಶ್ಚ ತೀರ್ಥಾನಿ ಕಾಲಯೋಗೇ ಭವಂತಿ ಹಿ ।
ಗುಣವಂತಿ ಮಹಾಪ್ರಾಜ್ಞ ಗೌತಮೀ ತು ಸದಾ ನೃಣಾಂ ॥ ೩೨ ॥

ಸರ್ವತ್ರ ಸರ್ವದಾ ಪುಣ್ಯಾ ಕೋ ಸ್ವಸ್ಯಾ ಗುಣಕೀರ್ತನಂ ।
ವಕ್ತುಂ ಶಕ್ತಸ್ತತಸ್ತಸ್ಯೈ ನಮ ಇತ್ಯೇವ ಯುಜ್ಯತೇ ॥ ೩೩ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ
ಗಂಗಾಸಾಗರಸಂಗಮವರ್ಣನಂ ನಾಮ
ಚತುಃಸಪ್ತತ್ಯಧಿಕಶತತಮೋಽಧ್ಯಾಯಃ

---

೩೧. ಎಲ್ಲಾ ತೀರ್ಥಗಳ ಮಹಿಮೆಯನ್ನು ಯಾರುತಾನೇ ಹೇಳಲು ಸಮರ್ಥರು? ಲಕ್ಷ್ಮೀಪತಿಯಾದ ವಿಷ್ಣುವೂ ಉಮಾಪತಿಯಾದ ಶಿವನೂ ಹೇಳಬಲ್ಲರೇ ಹೊರತು ಮತ್ತಾರೂ ಹೇಳಲಾರರು.

೩೨. ಎಲೈ ಮಹಾಜ್ಞಾನಿಯಾದ ನಾರದನೇ, ಆಯಾಕಾಲಕ್ಕನುಸಾರವಾಗಿ ಕೆಲವು ಸ್ಥಳಗಳಲ್ಲಿ ಕೆಲವು ಶ್ರೇಷ್ಠವಾದ ತೀರ್ಥಗಳುಂಟಾಗುವುವು. ಗೌತಮಿಯಾದರೋ ಯಾವಾಗಲೂ ಮನುಷ್ಯರಿಗೆ ಒಳ್ಳೆಯದನ್ನುಂಟು ಮಾಡುವಳು.

೩೩. ಗೌತಮಿಯು ಸದಾಕಾಲದಲ್ಲಿಯೂ ಪರಮಪವಿತ್ರಳು. ಇಂತಹ ಗೌತಮಿಯ ಗುಣಕೀರ್ತನೆಯನ್ನು ಯಾರು ತಾನೇ ಮಾಡಲು ಶಕ್ತರು? ಅದಕ್ಕೋಸ್ಕರ ಗೌತಮಿಗೆ ನಮಸ್ಕಾರವೆಂಬುದೇ ಅವಳ ಗುಣಕೀರ್ತನೆಯು ಎಂದನು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಗಂಗಾಸಂಗಮತೀರ್ಥವರ್ಣನವೆಂಬ ನೂರೆಪ್ಪತ್ತ ನಾಲ್ಕನೆಯ ಅಧ್ಯಾಯವು ಮುಗಿದುದು.

ಗೌತಮಿಯ ಮಾಹಾತ್ಮ್ಯೆಯಲ್ಲಿ ನೂರೈದನೆಯ ಅಧ್ಯಾಯವು

ಶ್ರೀಃ

ಓಂ ತತ್ಸದ್ಬ್ರಹ್ಮಣೇನಮಃ

ಅಥ ಬ್ರಾಹ್ಮೇ ಮಹಾಪುರಾಣೇ

ಪಂಚಸಪ್ತತ್ಯಧಿಕಶತತಮೋಽಧ್ಯಾಯಃ

॥ ನಾರದ ಉವಾಚ ॥

ತ್ರಿದೈವತ್ಯಾಂ ಸುರೇಶಾನ ಗಂಗಾಂ ಬ್ರೂಷೇ ಸುರೇಶ್ವರ ।
ಬ್ರಾಹ್ಮಣೇನಾಹೃತಾಂ ಪುಣ್ಯಾಂ ಜಗತಃ ಪಾವನೀಂ ಶುಭಾಂ ॥ ೧ ॥

ಆದಿಮಧ್ಯಾವಸಾನೇ ಚ ಉಭಯೋಸ್ತೀರಯೋರಪಿ ।
ಯಾ ವ್ಯಾಪ್ತಾ ವಿಷ್ಣುನೇಶೇನ ತ್ವಯಾ ಚ ಸುರಸತ್ತಮ
ಪುನಃ ಸಂಕ್ಷೇಪತೋ ಬ್ರೂಹಿ ನ ಮೇ ತೃಪ್ತಿಃ ಪ್ರಜಾಯತೇ ॥ ೨ ॥

ನೂರೆಪ್ಪತ್ತೈದನೆಯ ಅಧ್ಯಾಯವು

೧. ನಾರದನು ಬ್ರಹ್ಮನನ್ನು ಪ್ರಶ್ನೆಮಾಡಿದನು—ಎಲೈ ದೇವಾಧ್ಯಕ್ಷನಾದ ಬ್ರಹ್ಮನೇ, ನೀನು ಗಂಗೆಯನ್ನು ಬ್ರಹ್ಮವಿಷ್ಣುಮಹೇಶ್ವರಾತ್ಮಕಳೆಂದು ಹೇಳಿದೆಯಲ್ಲವೇ. ಜಗತ್ತನ್ನು ಪವಿತ್ರಗೊಳಿಸಲು ಭಗೀರಥನು ಈ ಪರಮ ಪಾವನಿಯಾದ ಗಂಗೆಯನ್ನು ಭೂಲೋಕಕ್ಕೆ ತಂದನಷ್ಟೆ.

೨. ಇಂಥಹ ಪವಿತ್ರಳಾದ ಗಂಗೆಯ ಎರಡುದಡಗಳಲ್ಲಿಯೂ ವಿಷ್ಣು, ಪರಮೇಶ್ವರ, ನೀನು (ಬ್ರಹ್ಮ) ವಾಸವಾಗಿರುವಿರಿ. ಆ ದಡದ ಆದಿಯಲ್ಲಿ ವಿಷ್ಣುವು, ಮಧ್ಯದಲ್ಲಿ ಪರಮೇಶ್ವರನು, ಅಂತ್ಯದಲ್ಲಿ ನೀನೂ ಇರುವಿರಿ. ಆದುದರಿಂದ ಪುನಃ ಗಂಗೆಯ ಮಹಾತ್ಮ್ಯೆಯನ್ನು ಸಂಕ್ಷೇಪವಾಗಿ ವರ್ಣಿಸು. ಎಷ್ಟು ಕೇಳಿದರೂ ತೃಪ್ತಿಯಾಗುವುದಿಲ್ಲ ಎನ್ನಲು,

॥ ಬ್ರಹ್ಮೋವಾಚ ॥
ಕಮಂಡಲುಸ್ಥಿತಾ ಪೂರ್ವಂ ತತೋ ವಿಷ್ಣುಪದಾನುಗಾ ।
ಮಹೇಶ್ವರಜಟಾಜೂಟೇ ಸ್ಥಿತಾ ಸೈವ ನಮಸ್ಕೃತಾ ॥ ೩ ॥

ಬ್ರಹ್ಮತೇಜಃಪ್ರಭಾವೇಣ ಶಿವಮಾರಾಧ್ಯ ಯತ್ನತಃ ।
ತತಃ ಪ್ರಾಪ್ತಾ ಗಿರಿಂ ಪುಣ್ಯಂ ತತಃ ಪೂರ್ವಾರ್ಣವಂ ಪ್ರತಿ ॥ ೫ ॥

ಆಗತ್ಯ ಸಂಗತಾ ದೇವೀ ಸರ್ವತೀರ್ಥಮಯೀ ನೃಣಾಂ ।
ಈಪ್ಸಿತಾನಾಂ ತಥಾ ದಾತ್ರೀ ಪ್ರಭಾವೋಸ್ಯಾ ವಿಶಿಷ್ಯತೇ ॥ ೫ ॥

ಏತಸ್ಯಾ ನಾಧಿಕಂ ಮನ್ಯೇ ಕಿಂಚಿತ್ತೀರ್ಥಂ ಜಗತ್ತ್ರಯೇ ।
ಅಸ್ಯಾಶ್ಚೈವ ಪ್ರಭಾವೇಣ ಭಾವ್ಯಂ ಯಚ್ಚ ಮನಃಸ್ಥಿತಂ ॥ ೬ ॥

ಅದ್ಯಾಪ್ಯಸ್ಯಾ ಹಿ ಮಾಹಾತ್ಮ್ಯಂ ವಕ್ತುಂ ಕೈಶ್ಚಿನ್ನ ಶಕ್ಯತೇ ।
ಭಕ್ತಿತೋ ವಕ್ಷ್ಯತೇ ನಿತ್ಯಂ ಯಾ ಬ್ರಹ್ಮ ಪರಮಾರ್ಥತಃ ॥ ೭ ॥

೩-೪. ಬ್ರಹ್ಮನು ಹೇಳಿದನು—ಗಂಗೆಯನ್ನು ನಾನು ಮೊದಲು ಕಮಂಡಲುವಿನಲ್ಲಿ ಧರಿಸಿದೆನು. ಅಲ್ಲಿಂದ ಗಂಗೆಯು ವಿಷ್ಣುಪಾದದಲ್ಲಿ ಹೋಗಿ ಸೇರಿದಳು. ಅನಂತರ ಪರಮೇಶ್ವರನ ಜಟಾಜೂಟದಲ್ಲಿ ಹೋಗಿ ಸೇರಿದಳು. ಆಮೇಲೆ ಬ್ರಹ್ಮತೇಜಃಪ್ರಭಾವದಿಂದ ಶಿವನನ್ನು ಪೂಜಿಸಿ ಹಿಮವತ್ಪರ್ವತಕ್ಕೆ ಬಂದುಸೇರಿದಳು. ಅಲ್ಲಿಂದ ಆ ಪುಣ್ಯತಮೆಯು ಪೂರ್ವಸಾಗರಕ್ಕೆ ಬಂದು ಸೇರಿದಳು.

೫-೬. ಸರ್ವತೀರ್ಥಸ್ವರೂಪಳಾದ ಆ ಗಂಗೆಯು ಮನುಷ್ಯರಿಗೆ ಇಷ್ಟಾರ್ಥಗಳನ್ನು ಸಲ್ಲಿಸುವಳು. ಇವಳ ಪ್ರಭಾವವು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ಈ ಗಂಗೆಗಿಂತ ಶ್ರೇಷ್ಠವಾದ ತೀರ್ಥವು ಮತ್ತೊಂದಿಲ್ಲ. ಗಂಗೆಯ ಪ್ರಭಾವದಿಂದ ಮನುಜನ ಮನಸ್ಸಿನ ಅಭಿಪ್ರಾಯಗಳೆಲ್ಲವೂ ನೆರವೇರುವುವು.

೭-೮. ಈ ಗಂಗೆಯ ಮಾಹಾತ್ಮೆಯನ್ನು ವರ್ಣಿಸಲು ಯಾವನಿಂದಲೂ ಸಾಧ್ಯವಿಲ್ಲ. ಆದರೆ ಬ್ರಹ್ಮಸ್ವರೂಪಳಾದ ಅವಳ ಮಹಿಮೆಯನ್ನು ಸಾಮಾನ್ಯವಾಗಿ ಹೇಳುವರು. ಈ ತೀರ್ಥಕ್ಕಿಂತ ಶ್ರೇಷ್ಠವಾದ ತೀರ್ಥವು ಮತ್ತೊಂದಿಲ್ಲ

ತಸ್ಯಾಃ ಪರತರಂ ತೀರ್ಥಂ ನ ಸ್ಯಾದಿತಿ ಮತಿರ್ಮಮ ।
ಅನ್ಯತೀರ್ಥೇನ ಸಾಧರ್ಮ್ಯಂ ನ ಯುಜ್ಯೇತ ಕಥಂಚನ ॥ ೮ ॥

ಶ್ರುತ್ವಾ ಮದ್ವಾಕ್ಯಪೀಯೂಷೈರ್ಗಂಗಾಯಾ ಗುಣಕೀರ್ತನಂ ।
ಸರ್ವೇಷಾಂ ನ ಮತಿಃ ಕಸ್ಮಾತ್ತತ್ರೈವೋಪರತಿಂ ಗತಾ ।
ಇತಿ ಭಾತಿ ವಿಚಿತ್ರಂ ಮೇ ಮುನೇ ಖಲು ಜಗತ್ತ್ರಯೇ ॥ ೯ ॥

॥ ನಾರದ ಉವಾಚ ॥

ಧರ್ಮಾರ್ಥಕಾಮಮೋಕ್ಷಾಣಾಂ ತ್ವಂ ವೇತ್ತಾ ಚೋಪದೇಶಕಃ ।
ಛಂದಾಂಸಿ ಸರಹಸ್ಯಾನಿ ಪುರಾಣಸ್ಮೃತಯೋಽಪಿ ಚ ॥ ೧೦ ॥

ಧರ್ಮಶಾಸ್ತ್ರಾಣಿ ಯಚ್ಚಾನ್ಯತ್ತ್ವತ್ತವ ವಾಕ್ಯೇ ಪ್ರತಿಷ್ಠಿತಂ ।
ತೀರ್ಥಾನಾಮಥ ದಾನಾನಾಂ ಯಜ್ಞಾನಾಂ ತಪಸಾಂ ತಥಾ ॥ ೧೧ ॥

ವಾದುದರಿಂದ ಬೇರೆ ತೀರ್ಥದೊಡನೆ ಇದನ್ನು ಹೋಲಿಸುವಿಕೆಯೂ ಯೋಗ್ಯವಲ್ಲ.

೯. ಎಲೈನಾರದನೇ, ನಾನು ಅಮೃತಕ್ಕೆ ಸಮಾನವಾದ ವಾಕ್ಯಗಳಿಂದ ಗಂಗೆಯ ಗುಣಕೀರ್ತನೆಯನ್ನು ಮಾಡಿರುವೆನು. ಇದನ್ನು ಕೇಳಿದರೆ ಎಲ್ಲರ ಬುದ್ಧಿಯೂ ಗಂಗೆಯಲ್ಲಿಯೇ ಲೀನವಾಗುವುದಲ್ಲದೆ ಮತ್ತೆಲ್ಲಿಯೂ ಚಲಿಸುವುದಿಲ್ಲ. ಇದು ಮೂರು ಲೋಕದಲ್ಲಿಯೂ ವಿಚಿತ್ರವಾದುದೆಂದು ಕಾಣುವುದು ಎಂದನು.

೧೦. ನಾರದನು ಮತ್ತೆ ಕೇಳಿದನು—ಓ ಬ್ರಹ್ಮನೇ, ಧರ್ಮಾರ್ಥಕಾಮ ಮೋಕ್ಷಗಳೆಂಬ ಪರಮ ಪುರುಷಾರ್ಥಗಳನ್ನು ನೀನು ತಿಳಿದಿರುವೆ. ಹಾಗೂ ಅದರ ಉಪದೇಶಕನು ನೀನು. ವೇದವೇದಾರ್ಥಗಳನ್ನೂ ಪುರಾಣಸ್ಮೃತಿ ಗಳನ್ನೂ ನೀನು ಅರಿತಿರುವೆ.

೧೧. ಧರ್ಮಶಾಸ್ತ್ರಗಳನ್ನೂ ನೀನು ತಿಳಿದಿರುವೆ. ಎಲ್ಲವೂ ನಿನ್ನ ಮಾತಿನಂತೆಯೇ ನಡೆಯುವುದು. ತೀರ್ಥಗಳು, ದಾನಗಳು, ಯಜ್ಞಗಳು, ತಪಸ್ಸು, ದೇವತೆಗಳು ಮಂತ್ರಗಳು ಇವೆಲ್ಲಕ್ಕಿಂತಲೂ ಅಧಿಕವಾದ ವಿಷಯ ವನ್ನು ತಿಳಿಸು.

ದೇವತಾಮಂತ್ರಸೇನಾನಾಮಧಿಕಂ ಕಿಂ ವದ ಪ್ರಭೋ ।
ಯದ್ಭ್ರೂಷೇ ಭಗವನ್ಭಕ್ತ್ಯಾ ತಥಾ ಭಾವ್ಯಂ ನ ಚಾನ್ಯಥಾ ॥ ೧೨ ॥

ಏತಂ ಮೇ ಸಂಶಯಂ ಬ್ರಹ್ಮನ್ವಾಕ್ಯಾತ್ತ್ವಂ ಛೇತ್ತುಮರ್ಹಸಿ ।
ಇಷ್ಟಂ ಮನೋಗತಂ ಶ್ರುತ್ವಾ ತಸ್ಮಾದ್ವಿಸ್ಮಯಮಾಗತಃ ॥ ೧೩ ॥

॥ ಬ್ರಹ್ಮೋವಾಚ ॥

ಶೃಣು ನಾರದ ವಕ್ಷ್ಯಾಮಿ ರಹಸ್ಯಂ ಧರ್ಮಮುತ್ತಮಂ ।
ಚತುರ್ವಿಧಾನಿ ತೀರ್ಥಾನಿ ತಾವಂತ್ಯೇವ ಯುಗಾನಿ ಚ ॥ ೧೪ ॥

ಗುಣಾಸ್ತ್ರಯಶ್ಚ ಪುರುಷಾಸ್ತ್ರಯೋ ದೇವಾಃ ಸನಾತನಾಃ ।
ವೇದಾಶ್ಚ ಸ್ಮೃತಿಭಿರ್ಯುಕ್ತಾಶ್ಚತ್ವಾರಸ್ತೇ ಪ್ರಕೀರ್ತಿತಾಃ ॥ ೧೫ ॥

ಪುರುಷಾರ್ಥಾಶ್ಚ ಚತ್ವಾರೋ ವಾಣೀ ಚಾಪಿ ಚತುರ್ವಿಧಾ ।
ಗುಣಾ ಹ್ಯಪಿ ತು ಚತ್ವಾರಃ ಸಮುತ್ವೇನೇತಿ ನಾರದ ॥ ೧೬ ॥

೧೨-೧೩. ಓ ಭಗವನ್, ಭಕ್ತಿಯಿಂದ ಇಷ್ಟಾರ್ಥವು ನೆರವೇರುವಂತೆ ಯಾವುದರಿಂದಲೂ ನೆರವೇರಲಾರದೆಂದು ನೀನು ಹೇಳಿದೆ. ಇದೇ ನನಗೆ ತುಂಬಾ ಸಂಶಯವನ್ನುಂಟುಮಾಡಿರುವುದು. ಆದುದರಿಂದ ನನ್ನ ಸಂಶಯವನ್ನು ನಿವಾರಿಸು. ನನ್ನ ಈ ಅಭಿಪ್ರಾಯವನ್ನು ಕೇಳಿ ನಿನಗೆ ಆಶ್ಚರ್ಯವಾಗಿರಬಹುದು ಎಂದನು.

೧೪. ಬ್ರಹ್ಮನು ಹೇಳಿದನು—ಎಲೈ ನಾರದನೇ, ಧರ್ಮದ ರಹಸ್ಯವನ್ನು ಹೇಳುವೆನು ಕೇಳು. ಇದು ಬಹಳ ಶ್ರೇಷ್ಠವಾದುದು. ತೀರ್ಥಗಳು ನಾಲ್ಕು ವಿಧವಾಗಿವೆ. ಅಂತೆಯೇ ಯುಗಗಳೂ ಸಹ ನಾಲ್ಕು ವಿಧವಾಗಿರುವುವು.

೧೫. ಸತ್ವರಜಸ್ತಮಸ್ಸುಗಳೆಂಬ ಮೂರು ಗುಣಗಳಿರುವುವು. ಬ್ರಹ್ಮ ವಿಷ್ಣು ಮಹೇಶ್ವರರೆಂಬ ಚಿರಂತನರಾದ ಮೂರು ಜನ ದೇವತೆಗಳಿರುವರು. ಸ್ಮೃತಿಗಳಿಂದ ಕೂಡಿದ ಋಗ್ವೇದ, ಯಜುರ್ವೇದ, ಸಾಮವೇದ. ಅಥರ್ವಣ ವೇದಗಳೆಂಬ ನಾಲ್ಕು ವೇದಗಳಿರುವುವು.

೧೬. ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳು ನಾಲ್ಕು ವಿಧವಾಗಿವೆ. ಭಾಷೆಗಳೂ ನಾಲ್ಕುವಿಧವಾಗಿವೆ. ಗುಣಗಳೂ ಸಹ ನಾಲ್ಕು ವಿಧವಾಗಿವೆ.

ಸರ್ವತ್ರ ಧರ್ಮಃ ಸಾಮಾನ್ಯೋ ಯತೋ ಧರ್ಮಃ ಸನಾತನಃ ।
ಸಾಧ್ಯಸಾಧನಭಾವೇನ ಸ ಏವ ಬಹುಧಾ ಮತಃ　　　　॥ ೧೭ ॥

ತಸ್ಯಾಶ್ರಯಶ್ಚ ದ್ವಿವಿಧೋ ದೇಶಃ ಕಾಲಶ್ಚ ಸರ್ವದಾ ।
ಕಾಲಾಶ್ರಯಶ್ಚ ಯೋ ಧರ್ಮೋ ಹೀಯತೇ ವರ್ಧತೇ ಸದಾ　　　　॥ ೧೮ ॥

ಯುಗಾನಾಮನುರೂಪೇಣ ಪಾದಃ ಪಾದೋಽಸ್ಯ ಹೀಯತೇ ।
ಧರ್ಮಸ್ಯೇತಿ ಮಹಾಪ್ರಾಜ್ಞ ದೇಶಾಪೇಕ್ಷಾ ತಥೋಭಯಂ　　　　॥ ೧೯ ॥

ಕಾಲೇನ ಚಾಶ್ರಿತೋ ಧರ್ಮೋ ದೇಶೇ ನಿತ್ಯಂ ಪ್ರತಿಷ್ಠಿತಃ ।
ಯುಗೇಷು ಕ್ಷೀಯಮಾಣೇಷು ನ ದೇಶೇಷು ಸ ಹೀಯತೇ　　　　॥ ೨೦ ॥

ಉಭಯತ್ರ ವಿಹೀನೇ ಚ ಧರ್ಮಸ್ಯ ಸ್ಯಾದಭಾವತಾ ।
ತಸ್ಮಾದ್ದೇಶಾಶ್ರಿತೋ ಧರ್ಮಶ್ಚತುಷ್ಪಾತ್ಸುಪ್ರತಿಷ್ಠಿತಃ　　　　॥ ೨೧ ॥

---

೧೭. ಧರ್ಮವು ಎಲ್ಲೆಲ್ಲಿಯೂ ಹರಡಿರುವುದರಿಂದ ಅದು ಪುರಾತನವಾದುದು. ಆ ಧರ್ಮವೇ ಸಾಧ್ಯ (ಅನುಷ್ಠಾನಮಾಡುವುದು) ಸಾಧನ (ಅನುಷ್ಠಾನಮಾಡಲು ತಕ್ಕ ಸಾಮಗ್ರಿ) ಭೇದದಿಂದ ಅನೇಕ ವಿಧವಾಗಿರುವುದು.

೧೮. ಆ ಧರ್ಮಕ್ಕೆ ಆಶ್ರಯವಾದುದು ದೇಶ, ಕಾಲವೆಂಬುದಾಗಿ ಎರಡು ವಿಧವಾಗಿರುವುದು. ಕಾಲಕ್ಕೆ ಆಶ್ರಯವಾದ ಧರ್ಮವು ಆಗಾಗ ನಾಶವಾಗುತ್ತಲೂ ಕೆಲವು ಸಮಯ ಅಭಿವೃದ್ಧಿಯನ್ನು ಹೊಂದುತ್ತಲೂ ಇರುವುದು.

೧೯. ಒಂದೊಂದು ಯುಗದಲ್ಲಿಯೂ ಧರ್ಮದ ಒಂದೊಂದು ಪಾದವು ನಾಶವಾಗುವುದು. ಆದರೆ ದೇಶಾಶ್ರಿತವಾದ ಧರ್ಮಕ್ಕೆ ಚ್ಯುತಿಯಾಗಲೀ ಪಾದ ನಾಶವಾಗಲೀ ಆಗುವುದಿಲ್ಲ.

೨೦. ಕಾಲಾಶ್ರಿತವಾದ ಧರ್ಮವೇ ದೇಶಾಶ್ರಿತವಾದರೆ ಶಾಶ್ವತವಾಗಿರುವುದು. ಯುಗಗಳು ನಾಶವಾದರೂ ಸಹ ಧರ್ಮವು ದೇಶಾಶ್ರಿತವಾದರೆ ನಿತ್ಯವಾಗಿರುವುದು. ಅದಕ್ಕೆ ಎಂದಿಗೂ ನಾಶವುಂಟಾಗುವುದಿಲ್ಲ.

೨೧. ಧರ್ಮವು ಕಾಲಾಶ್ರಿತವಾಗಲೀ, ದೇಶಾಶ್ರಿತವಾಗಲೀ ಆಗದಿದ್ದರೆ ಆ ಧರ್ಮವು ಇಲ್ಲದಂತಾಗುವುದು. ಆದುದರಿಂದ ದೇಶಾಶ್ರಿತವಾದ ಧರ್ಮವು ನಾಲ್ಕುಪಾದಗಳಿಂದಲೂ ನಿಂತಿರುವುದು. ಎಂದರೆ ಸ್ವಲ್ಪವಾದರೂ ಅದಕ್ಕೆ ಚ್ಯುತಿಬರುವುದಿಲ್ಲ.

ಸ ಚಾಪಿ ಧರ್ಮೋ ದೇಶೇಷು ತೀರ್ಥರೂಪೇಣ ತಿಷ್ಠತಿ ।
ಕೃತೇ ದೇಶಂ ಚ ಕಾಲಂ ಚ ಧರ್ಮೋಽವಷ್ಟಭ್ಯ ತಿಷ್ಠತಿ ॥ ೨೨ ॥

ತ್ರೇತಾಯಾಂ ಪಾದಹೀನೇನ ಸ ತು ಪಾದಃ ಪ್ರದೇಶತಃ ।
ದ್ವಾಪರೇ ಚಾರ್ಧತಃ ಕಾಲೇ ಧರ್ಮೋ ದೇಶೇ ಸಮಾಸ್ಥಿತಃ ॥ ೨೩ ॥

ಕಲೌ ಪಾದೇನ ಚೈಕೇನ ಧರ್ಮಶ್ಚಲತಿ ಸಂಕಟಂ ।
ಏವಂವಿಧಂ ತು ಯೋ ಧರ್ಮಂ ವೇತ್ತಿ ತಸ್ಯ ನ ಹೀಯತೇ ॥ ೨೪ ॥

ಯುಗಾನಾಮನುಭಾವೇನ ಜಾತಿಭೇದಾಶ್ಚ ಸಂಸ್ಥಿತಾಃ ।
ಗುಣೇಭ್ಯೋ ಗುಣಕರ್ತೃಭ್ಯೋ ವಿಚಿತ್ರಾ ಧರ್ಮಸಂಸ್ಥಿತಿಃ ॥ ೨೫ ॥

ಗುಣಾನಾಮನುಭಾವೇನ ಉದ್ಭವಾಭಿಭವೌ ತಥಾ ।
ತೀರ್ಥಾನಾಮಪಿ ವರ್ಣಾನಾಂ ವೇದಾನಾಂ ಸ್ವರ್ಗಮೋಕ್ಷಯೋಃ ॥ ೨೬ ॥

---

೨೨. ಆ ಧರ್ಮವು ದೇಶದಲ್ಲಿ ತೀರ್ಥರೂಪದಿಂದ ಇರುವುದು. ಆದುದರಿಂದ ತೀರ್ಥರೂಪವಾದ ಧರ್ಮವು ದೇಶ ಕಾಲಗಳನ್ನನುಸರಿಸಿ ಕೃತಯುಗದಲ್ಲಿ ನಾಲ್ಕುಪಾದಗಳಿಂದಲೂ ನಿಂತಿರುವುದು.

೨೩-೨೪. ತ್ರೇತಾಯುಗದಲ್ಲಿ ಧರ್ಮದ ಒಂದು ಪಾದ ನಾಶವಾಗಿ ಮೂರು ಪಾದಗಳಲ್ಲಿ ನಿಂತಿರುವುದು. ದ್ವಾಪರದಲ್ಲಿ ಎರಡು ಪಾದಗಳಿಂದ ದೇಶದಲ್ಲಿ ನಿಂತಿರುವುದು. ಕಲಿಯುಗದಲ್ಲಿ ಒಂದೇ ಪಾದದಲ್ಲಿ ಬಹುಸಂಕಟದಿಂದ ಸಂಚರಿಸುವುದು. ಈರೀತಿಯಾಗಿ ತಿಳಿದು ಯಾರು ಧರ್ಮವನ್ನನುಸರಿಸುವರೋ ಅವರ ಧರ್ಮಕ್ಕೆ ನಾಶಬರುವುದಿಲ್ಲ.

೨೫. ಆಯಾ ಯುಗಗಳಿಗನುಸಾರವಾಗಿಯೂ ಮತ್ತು ಆ ಯುಗಗಳಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರಾದಿ ಜಾತಿಭೇದಗಳಿರುವುದರಿಂದಲೂ ಅಲ್ಲಿ ಧರ್ಮವು ಆಯಾ ಜಾತಿಗಳಿಗನುಸಾಸವಾಗಿ ನಿಯತವಾಗಿರುವುದರಿಂದಲೂ, ಸತ್ವರಜಸ್ತಮೋಗುಣಗಳಿಗನುಸಾರವಾಗಿ ಗುಣಕರ್ತೃಗಳಲ್ಲಿ ಧರ್ಮವು ಸಂಗತವಾಗಿರುವುದರಿಂದಲೂ ಧರ್ಮವು ಚಿತ್ರವಿಚಿತ್ರವಾಗಿರುವುದು.

೨೬. ಗುಣಾನುಸಾರವಾಗಿ ತೀರ್ಥಗಳೂ, ವರ್ಣಗಳೂ, ವೇದಗಳೂ,

ತಾದೃಗ್ರೂಪಪ್ರವೃತ್ತ್ಯಾ ತು ತದೇವ ಚ ವಿಶಿಷ್ಯತೇ ।
ಕಾಲೋಽಭಿವ್ಯಂಜಕಃ ಪ್ರೋಕ್ತೋ ದೇಶೋಽಭಿವ್ಯಂಗ್ಯ ಉಚ್ಯತೇ ॥ ೨೭ ॥

ಯದಾ ಯದಾ ಅಭಿವ್ಯಕ್ತಿಂ ಕಾಲೋ ಧತ್ತೇ ತದಾ ತದಾ ।
ತದೇವ ವ್ಯಂಜನಂ ಬ್ರಹ್ಮಂಸ್ತಸ್ಮಾನ್ನಾಸ್ತ್ಯತ್ರ ಸಂಶಯಃ ॥ ೨೮ ॥

ಯುಗಾನುರೂಪಾ ಮೂರ್ತಿಃ ಸ್ಯಾದ್ದೇವಾನಾಂ ವೈದಿಕೀ ತಥಾ ।
ಕರ್ಮಣಾಮಪಿ ತೀರ್ಥಾನಾಂ ಜಾತೀನಾಮಾಶ್ರಮಸ್ಯ ತು ॥ ೨೯ ॥

ತ್ರಿದೈವತ್ಯಂ ಸತ್ಯಯುಗೇ ತೀರ್ಥಂ ಲೋಕೇಷು ಪೂಜ್ಯತೇ ।
ದ್ವಿದೈವತ್ಯಂ ಯುಗೇಽನ್ಯಸ್ಮಿನ್ದ್ವಾಪರೇ ಚೈಕದೈವಿಕಂ ॥ ೩೦ ॥

ಕಲೌ ನ ಕಿಂಚಿದ್ವಿಜ್ಞೇಯಮಥಾನ್ಯದಪಿ ತಚ್ಛೃಣು ।
ದೈವಂ ಕೃತಯುಗೇ ತೀರ್ಥಂ ತ್ರೇತಾಯಾಮಾಸುರಂ ವಿದುಃ ॥ ೩೧ ॥

ಸ್ವರ್ಗಮೋಕ್ಷಗಳೂ ಸಹ ಉತ್ಪತ್ತಿಲಯಗಳನ್ನು ಹೊಂದುವುವು. ಈರೀತಿಯಾಗಿ ಪರಿಣಾಮವನ್ನು ಹೊಂದಿದವೂ

೨೭-೨೮. ಕಾಲಕ್ಕೆ ಅಭಿವ್ಯಂಜಕವೆಂದೂ ದೇಶಕ್ಕೆ ಅಭಿವ್ಯಂಗ್ಯವೆಂದೂ ಹೆಸರಿದೆ. ಕಾಲವು ಬದಲಾಯಿಸಿದಂತೆಲ್ಲಾ ದೇಶದ ಧರ್ಮವೂ ಅದಕ್ಕನುಸಾರವಾಗಿ ಮಾರ್ಪಡುವುದು ಈ ವಿಚಾರದಲ್ಲಿ ಸಂಶಯಪಡಬೇಕಾಗಿಲ್ಲ.

೨೯. ದೇವತೆಗಳೂ, ವೈದಿಕವಿಷಯಗಳೂ, ಕರ್ಮಗಳೂ, ತೀರ್ಥಗಳೂ, ಜಾತಿಯೂ ಆಶ್ರಮಗಳೂ ಸಹ ಯುಗಾನುಸಾರವಾಗಿಯೇ ಇರುವುವು.

೩೦. ಕೃತಯುಗದಲ್ಲಿ ತೀರ್ಥವು ಬ್ರಹ್ಮ, ವಿಷ್ಣು, ಮಹೇಶ್ವರಾತ್ಮಕವಾಗಿ ತ್ರಿದೈವತ್ಯವೆಂದು ಪ್ರಸಿದ್ಧಿಯನ್ನು ಪಡೆದಿತ್ತು. ತ್ರೇತಾಯುಗದಲ್ಲಿ ದ್ವಿದೈವತ್ಯವೆಂದೂ ಎಂದರೆ ಬ್ರಹ್ಮ, ವಿಷ್ಣುಸ್ವರೂಪವೆಂದೂ, ದ್ವಾಪರದಲ್ಲಿ ಏಕದೈವಿಕವೆಂದೂ, ಎಂದರೆ ವಿಷ್ಣ್ವಾತ್ಮಕವೆಂದೂ, ಹೆಸರು ಪಡೆಯಿತು. ಕಲಿಯುಗದಲ್ಲಿ ತೀರ್ಥವು ದೇವತಾಸ್ವರೂಪವೇ ಅಲ್ಲವೆಂದು ಭಾವಿಸಲ್ಪಟ್ಟಿತು. ಮತ್ತು ಒಂದು ವಿಷಯವನ್ನು ಹೇಳುವೆನು ಕೇಳು.

೩೧-೩೨. ಕೃತಯುಗದಲ್ಲಿ ತೀರ್ಥವು ದೇವತಾಸಂಬಂಧವಾದುದಾಗಿತ್ತು. ತ್ರೇತಾಯುಗದಲ್ಲಿ ಅಸುರಸಂಬಂಧವಾಗಿಯೂ, ದ್ವಾಪರದಲ್ಲಿ ಋಷಿ

ಆರ್ಷಂ ಚ ದ್ವಾಪರೇ ಪ್ರೋಕ್ತಂ ಕಲೌ ಮಾನುಷಮುಚ್ಯತೇ ।
ಅಥಾನ್ಯದಪಿ ವಕ್ಷ್ಯಾಮಿ ಶೃಣು ನಾರದ ಕಾರಣಂ ॥ ೩೨ ॥

ಗೌತಮ್ಯಾಂ ಯತ್ತ್ವಯಾ ಪೃಷ್ಟಂ ತತ್ತೇ ವಕ್ಷ್ಯಾಮಿ ವಿಸ್ತರಾತ್ ।
ಯದಾ ಚೇಯಂ ಹರಶಿರಃ ಪ್ರಾಪ್ತಾ ಗಂಗಾ ಮಹಾಮುನೇ ॥ ೩೩ ॥

ತದಾ ಪ್ರಭೃತಿ ಸಾ ಗಂಗಾ ಶಂಭೋಃ ಪ್ರಿಯತರಾಭವತ್ ।
ತದ್ದೇವಸ್ಯ ಮತಂ ಜ್ಞಾತ್ವಾ ಗಜವಕ್ತ್ರಮುವಾಚ ಸಾ ॥ ೩೪ ॥

ಉಮಾ ಲೋಕತ್ರಯೇಶಾನಾ ಮಾತಾ ಚ ಜಗತೋ ಹಿತಾ ।
ಶಾಂತಾ ಶ್ರುತಿರಿತಿ ಖ್ಯಾತಾ ಭುಕ್ತಿಮುಕ್ತಿಪ್ರದಾಯಿನೀ ॥ ೩೫ ॥

॥ ಬ್ರಹ್ಮೋವಾಚ ॥

ತನ್ಮಾತುರ್ವಚನಂ ಶ್ರುತ್ವಾ ಗಜವಕ್ತ್ರೋಽಭ್ಯಭಾಷತ ॥ ೩೬ ॥

ಸಂಬಂಧವಾಗಿಯೂ ಇದ್ದಿತು. ಕಲಿಯುಗದಲ್ಲಿ ಆ ತೀರ್ಥವು ಮಾನುಷ ಸಂಬಂಧವಾದುದೆಂದು ಹೇಳಲ್ಪಟ್ಟಿದೆ. ಎಲೈ ನಾರದನೇ, ಇನ್ನೂ ಕೆಲವು ವಿಷಯಗಳನ್ನು ಹೇಳುವೆನು ಕೇಳು.

೩೩-೩೪. ನೀನು ಗೌತಮಿಯ ವಿಷಯವನ್ನು ಕೇಳಿದೆಯಲ್ಲವೇ? ಅದನ್ನು ವಿಸ್ತಾರವಾಗಿ ಹೇಳುವೆನು ಕೇಳು. ಗಂಗೆಯು (ಗೌತಮಿಯು) ಶಿವನ ಜಟಾಜೂಟವನ್ನು ಸೇರಿದಂದಿನಿಂದ ಶಿವನಿಗೆ ಬಲುಪ್ರಿಯಳಾದಳು.

೩೫. ಹೀಗಿರುತ್ತಿರಲು ಪತಿಯ ಪ್ರೀತಿಯು ಗಂಗೆಯಕಡೆಗೆ ಒಲಿದಿದ್ದನ್ನು ನೋಡಿ ಲೋಕತ್ರಯಪೂಜ್ಯಳೂ, ಜಗನ್ಮಾತೆಯೂ ಆದ ಪಾರ್ವತಿಯು ಗಣಪತಿಗೆ ಈ ವಿಷಯವನ್ನು ತಿಳಿಸಿದಳು. ಉಮೆಯು ಶಾಂತಳು. ಶ್ರುತಿಸ್ವರೂಪಿಣಿಯು. ಭುಕ್ತಿಮುಕ್ತಿಯನ್ನು ಕೊಡತಕ್ಕವಳು.

೩೬-೩೭. ತಾಯಿಯಮಾತನ್ನು ಕೇಳಿ ಗಣಪತಿಯು ಅವಳನ್ನು ಕುರಿತು ಎಲೌ ಮಾತೆಯೇ, ನೀನು ಯಾವರೀತಿ ಆಜ್ಞೆಯನ್ನು ಮಾಡುವೆಯೋ

॥ ಗಜವಕ್ತ್ರ ಉವಾಚ ॥

ಕಿಂ ಕೃತ್ಯಂ ಶಾಧಿ ಮಾಂ ಮಾತಸ್ತತ್ಕರ್ತಾsಹಮಸಂಶಯಂ ॥ ೩೭ ॥

॥ ಬ್ರಹ್ಮೋವಾಚ ॥

ಉಮಾ ಸುತಮುವಾಚೇದಂ ಮಹೇಶ್ವರಜಟಾಸ್ಥಿತಾ ।
ತ್ವಯಾವತಾರ್ಯತಾಂ ಗಂಗಾ ಸತ್ಯಮೀಶಪ್ರಿಯಾ ಸತೀ ॥ ೩೮ ॥

ಪುನಶ್ಚೇಶಸ್ತತ್ರ ಚಿತ್ರಮಧ್ಯಾಸ್ತೇ ಸರ್ವದಾ ಸುತ ।
ಶಿವೋ ಯತ್ರ ಸುರಾಸ್ತತ್ರ ತತ್ರ ವೇದಾಃ ಸನಾತನಾಃ ॥ ೩೯ ॥

ತತ್ರೈವ ಋಷಯಃ ಸರ್ವೇ ಮನುಷ್ಯಾಃ ಪಿತರಸ್ತಥಾ ।
ತಸ್ಮಾನ್ನಿವರ್ತಯೇಶಾನಂ ದೇವದೇವಂ ಮಹೇಶ್ವರಂ ॥ ೪೦ ॥

ತಸ್ಯಾ ನಿವರ್ತಿತೇ ದೇವೇ ಗಂಗಾಯಾಃ ಸರ್ವ ಏವ ಹಿ ।
ನಿವೃತ್ತಾಸ್ತೇ ಭವಿಷ್ಯಂತಿ ಶೃಣು ಚೇದಂ ವಚೋ ಮಮ ।
ನಿವರ್ತಯ ತತಸ್ತಸ್ಯಾಃ ಸರ್ವಭಾವೇನ ಶಂಕರಂ ॥ ೪೧ ॥

ಅದನ್ನು ನೆರವೇರಿಸಲು ನಾನು ಸದಾ ಸಿದ್ಧನಾಗಿರುವೆನು. ಈ ವಿಷಯದಲ್ಲಿ ಸ್ವಲ್ಪವೂ ಸಂಶಯವಿಲ್ಲ. ಎಂದನು.

೩೮. ಬಳಿಕ ಉಮೆಯು ಗಣಪತಿಯನ್ನು ಕುರಿತು—ನೀನೀಗ ಮಹೇಶ್ವರನು ಜಟಾಜೂಟವಾಸಿಯಾಗಿರುವ ಗಂಗೆಯನ್ನು ಕೆಳಗಿಳಿಸು. ಅವಳು ನನ್ನ ಪತಿಯ ಪ್ರೇಮಕ್ಕೆ ಪಾತ್ರಳಾಗಿರುವಳು.

೩೯–೪೦. ಮಹೇಶ್ವರನೂ ಸಹ ಯಾವಾಗಲೂ ಅವಳಲ್ಲೇ ಮನಸ್ಸಿಟ್ಟಿರುವನು. ಶಿವನು ಈರೀತಿಯಾಗಿರುವುದರಿಂದ ಶಿವನೆಲ್ಲಿರುವನೋ ಅಲ್ಲಿಯೇ ದೇವತೆಗಳೂ, ವೇದಗಳೂ ಋಷಿಗಳೂ, ಮನುಷ್ಯರೂ, ಪಿತೃಗಳೂ ಇರುವರು. ಇವರೆಲ್ಲರೂ ತಮ್ಮತಮ್ಮ ನಿಯತಸ್ಥಾನವನ್ನು ಬಿಟ್ಟು ಗಂಗೆಯ ಸಮೀಪಕ್ಕೆ ಹೋಗಿರುವರು. ಆದುದರಿಂದ ನೀನು ಪರಮೇಶ್ವರನು ಗಂಗೆಯನ್ನು ಬಿಟ್ಟು ಬರುವಂತೆ ಮಾಡು.

೪೧. ಈಶ್ವರನು ಗಂಗೆಯನ್ನು ಬಿಟ್ಟು ಬಂದರೆ ದೇವತೆಗಳಾದಿಯಾಗಿ ಎಲ್ಲರೂ ತಮ್ಮತಮ್ಮ ಸ್ಥಳಗಳಿಗೆ ಹಿಂತಿರುಗುವರು. ಆದುದರಿಂದ ಮಗುವೇ, ಪ್ರಯತ್ನಮಾಡಿ ಈ ಶಂಕರನನ್ನು ಗಂಗೆಯಿಂದ ಹಿಂತಿರುಗಿಸು ಎಂದಳು.

॥ ಬ್ರಹ್ಮೋವಾಚ ॥

ಮಾತುಸ್ತದ್ವಚನಂ ಶ್ರುತ್ವಾ ಪುನರಾಹ ಗಣೇಶ್ವರಃ ॥ ೪೨ ॥

॥ ಗಣೇಶ್ವರ ಉವಾಚ ॥

ನೈವ ಶಕ್ಯಃ ಶಿವೋ ದೇವೋ ಮಯಾ ತಸ್ಯಾ ನಿವರ್ತಿತುಂ ।
ಅನಿವೃತ್ತೇ ಶಿವೇ ತಸ್ಯಾ ದೇವಾ ಅಪಿ ನಿವರ್ತಿತುಂ ॥ ೪೩ ॥

ನ ಶಕ್ಯಾ ಜಗತಾಂ ಮಾತರಥಾನ್ಯಚ್ಚಾಪಿ ಕಾರಣಂ ।
ಗಂಗಾವತಾರಿತಾ ಪೂರ್ವಂ ಗೌತಮೇನ ಮಹಾತ್ಮನಾ ॥ ೪೪ ॥

ಋಷಿಣಾ ಲೋಕಪೂಜ್ಯೇನ ತ್ರೈಲೋಕ್ಯಹಿತಕಾರಿಣಾ ।
ಸಾಮೋಪಾಯೇನ ತದ್ವಾಕ್ಯಾತ್ಪೂಜ್ಯೇನ ಬ್ರಹ್ಮತೇಜಸಾ ॥ ೪೫ ॥

ಆರಾಧಯಿತ್ವಾ ದೇವೇಶಂ ತಪೋಭಿಃ ಸ್ತುತಿಭಿರ್ಭವಂ ।
ತುಷ್ಟೇನ ಶಂಕರೇಣೇದಮುಕ್ತೋಽಸೌ ಗೌತಮಸ್ತದಾ ॥ ೪೬ ॥

---

೪೨. ತಾಯಿಯ ಮಾತನ್ನು ಕೇಳಿ ಗಣಪತಿಯು ತಾಯಿಯನ್ನು ಕುರಿತು ಪುನಃ ಹೇಳಿದನು—

೪೩-೪೪. ಎಲೌ ಜಗನ್ಮಾತೆಯೇ, ದೇವದೇವನಾದ ಶಿವನು ಗಂಗೆಯನ್ನು ಬಿಟ್ಟುಬರುವಂತೆ ಮಾಡಲು ನನ್ನಿಂದ ಸಾಧ್ಯವಿಲ್ಲ. ಶಿವನನ್ನು ಹಿಂತಿರುಗಿಸಲಾಗದಿದ್ದಲ್ಲಿ ದೇವತೆಗಳನ್ನೂ ಹಿಂದಕ್ಕೆ ಬರುವಂತೆ ಮಾಡಲು ಆಗುವುದೇ ಇಲ್ಲ. ಈರೀತಿಮಾಡದಿರಲು ಮತ್ತೂ ಒಂದು ಕಾರಣವುಂಟು. ಏನೆಂದರೆ— ಹಿಂದೆ ಮಹಾತ್ಮನಾದ ಗೌತಮನು ಗಂಗೆಯನ್ನು ದೇವಲೋಕದಿಂದ ಭೂಲೋಕಕ್ಕೆ ಬರುವಂತೆ ಮಾಡಿದನಷ್ಟೆ ?

೪೫-೪೬. ಆ ಋಷಿಯು ಲೋಕಪೂಜ್ಯನು. ತ್ರೈಲೋಕ್ಯಕ್ಕೂ ಹಿತವನ್ನುಂಟುಮಾಡಬೇಕೆಂದೇ ಅವನ ಉದ್ದೇಶವು. ಇಂತಹ ಋಷಿಯು ಗಂಗೆಯ ಮಾತಿನಂತೆ ಬ್ರಹ್ಮತೇಜಸ್ಸಿನಿಂದ ಈಶ್ವರನನ್ನು ಕುರಿತು ತಪಸ್ಸು ಮಾಡಿದನು. ಅವನ ಸ್ತೋತ್ರಾದಿಗಳಿಂದ ಸಂತುಷ್ಟನಾದ ಪರಮೇಶ್ವರನು ಅವನಿಗೆ ಪ್ರತ್ಯಕ್ಷನಾಗಿ ಅವನನ್ನು ಕುರಿತು—

॥ ಶಂಕರ ಉವಾಚ ॥

ವರಾನ್ವರಯ ಪುಣ್ಯಾಂಶ್ಚ ಪ್ರಿಯಾಂಶ್ಚ ಮನಸೇಪ್ಸಿತಾನ್ ।
ಯದ್ಯದಿಚ್ಛಸಿ ತತ್ಸರ್ವಂ ದಾತಾ ತೇಽದ್ಯ ಮಹಾಮತೇ ॥ ೪೭ ॥

॥ ಬ್ರಹ್ಮೋವಾಚ ॥

ಏವಮುಕ್ತಃ ಶಿವೇನಾಸೌ ಗೌತಮೋ ಮಯಿ ಶೃಣ್ವತಿ ।
ಇದಮೇವ ತದೋವಾಚ ಸಜಟಾಂ ದೇಹಿ ಶಂಕರ ।
ಗಂಗಾಂ ಮೇ ಯಾಚತೇ ಪುಣ್ಯಾಂ ಕಿಮನ್ಯೇನ ವರೇಣ ಮೇ ॥ ೪೮ ॥

॥ ಬ್ರಹ್ಮೋವಾಚ ॥

ಪುನಃ ಪ್ರೋವಾಚ ತಂ ಶಂಭುಃ ಸರ್ವಲೋಕೋಪಕಾರಕಃ ॥ ೪೯ ॥

॥ ಶಂಭುರುವಾಚ ॥

ಉಕ್ತಂ ನ ಚಾತ್ಮನಃ ಕಿಂಚಿತ್ತಸ್ಮಾದ್ಯಾಚಸ್ವ ದುಷ್ಕರಂ ॥ ೫೦ ॥

---

೪೭. ಎಲೈ ಮಹಾಪ್ರಾಜ್ಞನೇ, ನಾನು ನಿನಗೆ ಪ್ರಸನ್ನನಾಗಿರುವೆನು. ನಿನಗೆ ಬೇಕಾದ ವರಗಳನ್ನು ಕೇಳಿಕೋ. ನಿನಗಿಷ್ಟವಾದುದೆಲ್ಲವನ್ನೂ ಕೊಡಲು ಸಿದ್ಧನಾಗಿರುವೆನು ಎಂದನು.

೪೮. ಶಿವನು ಈರೀತಿಯಾಗಿ ಹೇಳಲು ಗೌತಮನು ಎಲೈ ದೇವನೇ, ನಿನ್ನ ಜಟೆಯಲ್ಲಿರುವ ಗಂಗೆಯನ್ನು ಕೊಡು ಮತ್ತಾವ ವರವೂ ನನಗೆ ಬೇಡ ಎಂದನು. ಈ ವಿಷಯವನ್ನೂ ನಾನೂ ಸಹ ಕೇಳುತ್ತಿದ್ದೆನು.

೪೯. ಅನಂತರ ಸರ್ವ ಲೋಕಹಿತೈಷಿಯಾದ ಶಂಭುವು ಗೌತಮನನ್ನು ಕುರಿತು—

೫೦. ಎಲೌ ಋಷಿಯೇ, ಆದರೆ ನೀನು ನಿನ್ನ ಸ್ವಹಿತಕ್ಕೋಸ್ಕರ ಯಾವ ವರವನ್ನು ಕೇಳಿಕೊಳ್ಳಲಿಲ್ಲ. ಲೋಕೋಪಕಾರಕ್ಕೋಸ್ಕರವಾಗಿ ನೀನೀಗ ಕೇಳಿರುವುದು. ಆದುದರಿಂದ ನಿನಗೆ ಬೇಕಾದ ವರವನ್ನು ಕೇಳಿಕೋ. ಅತಿ ದುರ್ಲಭವಾಗಿದ್ದರೂ ಆ ವರವನ್ನು ನಿನಗೆ ಕೊಡುವೆನು ಎಂದನು.

॥ ಬ್ರಹ್ಮೋವಾಚ ॥

ಗೌತಮೋಽದೀನಸತ್ತ್ವಸ್ತಂ ಭವಮಾಹ ಕೃತಾಂಜಲಿಃ ॥ ೫೧ ॥

॥ ಗೌತಮ ಉವಾಚ ॥

ಏತದೇವ ಚ ಸರ್ವೇಷಾಂ ದುಷ್ಕರಂ ತವ ದರ್ಶನಂ ।
ಮಯಾ ತದದ್ಯ ಸಂಪ್ರಾಪ್ತಂ ಕೃಪಯಾ ತವ ಶಂಕರ ॥ ೫೨ ॥

ಸ್ಮರಣಾದೇವ ತೇ ಪದ್ಭ್ಯಾಂ ಕೃತಕೃತ್ಯಾ ಮನೀಷಿಣಃ ।
ಭವಂತಿ ಕಿಂ ಪುನಃ ಸಾಕ್ಷಾತ್ತ್ವಯಿ ದೃಷ್ಟೇ ಮಹೇಶ್ವರೇ ॥ ೫೩ ॥

॥ ಬ್ರಹ್ಮೋವಾಚ ॥

ಏವಮುಕ್ತೇ ಗೌತಮೇನ ಭವೋ ಹರ್ಷಸಮನ್ವಿತಃ ।
ತ್ರಯಾಣಾಮುಪಕಾರಾರ್ಥಂ ಲೋಕಾನಾಂ ಯಾಚಿತಂ ತ್ವಯಾ ॥ ೫೪ ॥

ನ ಚಾತ್ಮನೋ ಮಹಾಬುದ್ಧೇ ಯಾಚೇತ್ಯಾಹ ಶಿವೋ ದ್ವಿಜಂ ।
ಏವಂ ಪ್ರೋಕ್ತಃ ಪುನರ್ವಿಪ್ರೋ ಧ್ಯಾತ್ವಾ ಪ್ರಾಹ ಶಿವಂ ತಥಾ ॥ ೫೫ ॥

೫೧-೫೩. ಶಿವನ ಮಾತನ್ನು ಕೇಳಿ ಗೌತಮನು ವಿನಯದಿಂದ ಅಂಜಲಿಬದ್ಧನಾಗಿ ಓ ಮಹೇಶ್ವರನೇ, ಯಾರಿಗೂ ಸಿಕ್ಕದಿರುವ ನಿನ್ನ ದರ್ಶನವಿಂದು ನನಗೆ ಸಿಕ್ಕಿರುವುದು. ನಾನೀಗ ನಿನ್ನ ಅನುಗ್ರಹಕ್ಕೆ ಪಾತ್ರನಾಗಿರುವೆನು. ನಿನ್ನ ಚರಣಗಳ ಸ್ಮರಣೆಯನ್ನು ಮಾಡಿದವರೇ ಕೃತಾರ್ಥರು. ಹೀಗಿರುವಲ್ಲಿ ನೀನೇ ಸಾಕ್ಷಾತ್ತಾಗಿ ದರ್ಶನ ಕೊಟ್ಟರೆ ಹೇಳುವುದಿನ್ನೇನಿದೆ ಎಂದನು.

೫೪. ಈ ರೀತಿಯಾಗಿ ಗೌತಮನು ಹೇಳಲು ಪರಮೇಶ್ವರನು ಹರ್ಷಸಮನ್ವಿತನಾಗಿ ಎಲೈ ಮಹಾಪ್ರಾಜ್ಞನೇ, ನೀನು ತ್ರಿಲೋಕೋಪಕಾರಾರ್ಥವಾಗಿ ವರವನ್ನು ಕೇಳಿದೆ. ಆದರೆ ನಿನಗೋಸ್ಕರವಾಗಿ ಯಾವುದನ್ನೂ ಕೇಳಲಿಲ್ಲ. ಆದುದರಿಂದ ಈಗ ನಿನಗೆ ಬೇಕಾದುದನ್ನು ಕೇಳು ಎಂದು ಪುನಃ ಹೇಳಿದನು.

೫೫-೫೬. ಪುನಃ ಶಿವನು ಈರೀತಿ ಹೇಳಿದುದನ್ನು ಕೇಳಿ ಗೌತಮನು ಸ್ವಲ್ಪಹೊತ್ತು ಯೋಚಿಸಿ ವಿನೀತನಾಗಿ ಶಿವನಲ್ಲಿ ಭಕ್ತಿಭಾವವನ್ನು ತೋರಿಸುತ್ತಾ

ವಿನೀತವದದೀನಾತ್ಮಾ ಶಿವಭಕ್ತಿಸಮನ್ವಿತಃ ।
ಸರ್ವಲೋಕೋಪಕಾರಾಯ ಪುನರ್ಯಾಚಿತವಾನಿದಂ ।
ಶೃಣ್ವತ್ಸು ಲೋಕಪಾಲೇಷು ಜಗಾದೇದಂ ಸ ಗೌತಮಃ ॥ ೫೬ ॥

॥ ಗೌತಮ ಉವಾಚ ॥

ಯಾವತ್ಸಾಗರಗಾ ದೇವೀ ನಿಸೃಷ್ಟಾ ಬ್ರಹ್ಮಣೋ ಗಿರೇಃ ।
ಸರ್ವತ್ರ ಸರ್ವದಾ ತಸ್ಯಾಂ ಸ್ನಾತವ್ಯಂ ವೃಷಭಧ್ವಜ ॥ ೫೭ ॥

ಫಲೇಪ್ಸೂನಾಂ ಫಲಂ ದಾತಾ ತ್ವಮೇವ ಜಗತಃ ಪ್ರಭೋ ।
ತೀರ್ಥಾನ್ಯನ್ಯಾನಿ ದೇವೇಶ ಕ್ವಾಪಿ ಕ್ವಾಪಿ ಶುಭಾನಿ ಚ ॥ ೫೮ ॥

ಯತ್ರ ತೇ ಸಂನಿಧಿರ್ನಿತ್ಯಂ ತದೇವ ಶುಭದಂ ವಿದುಃ ।
ಯತ್ರ ಗಂಗಾ ತ್ವಯಾ ದತ್ತಾ ಜಟಾಮುಕುಟಸಂಸ್ಥಿತಾ ।
ಸರ್ವತ್ರ ತವ ಸಾಂನಿಧ್ಯಾತ್ಸರ್ವತೀರ್ಥಾನಿ ಶಂಕರ ॥ ೫೯ ॥

ಲೋಕೋಪಕಾರಕ್ಕೋಸ್ಕರವಾಗಿಯೇ ಪುನಃ ಕೇಳಿದನು. ಲೋಕಪಾಲಕರೂ ಸಹ ಈ ವಿಷಯವನ್ನು ಕೇಳಿದರು.

೫೭. ಗೌತಮನು ಇಂತು ಪ್ರಾರ್ಥಿಸಿದನು—ಬ್ರಹ್ಮನ ಪ್ರೇರಣೆಯಂತೆ ಹಿಮವತ್ಪರ್ವತದಿಂದ ಗಂಗೆಯು ಬಿಡಲ್ಪಟ್ಟು ಈಗ ಸಾಗರವನ್ನು ಸೇರಿರುವಳು. ಈ ಗಂಗೆಯಲ್ಲಿ ನೀನು ಎಲ್ಲಾ ಕಡೆಯಲ್ಲಿಯೂ ಯಾವಾಗಲೂ ನೆಲಸಿರಬೇಕು.

೫೮. ಜಗತ್ಪ್ರಭುವಾದ ನೀನು ವರವನ್ನು ಕೇಳುವವರಿಗೆ ಅವರಿಗಿಷ್ಟವಾದ ವರವನ್ನು ಕೊಡತಕ್ಕವನು. ಎಲೈ ದೇವೇಶನೇ, ಇನ್ನೂ ಅನೇಕ ಪವಿತ್ರವಾದ ತೀರ್ಥಗಳನ್ನು ಅಲ್ಲಲ್ಲಿಯೇ ನಿರ್ಮಿಸು.

೫೯. ನೀನು ಯಾವ ತೀರ್ಥದಲ್ಲಿ ನೆಲಸಿರುವೆಯೋ ಅದನ್ನು ಪವಿತ್ರವಾದ ತೀರ್ಥವೆಂದು ಪರಿಗಣಿಸುವರು. ಯಾವ ಸ್ಥಳದಲ್ಲಿ ನೀನು ನಿನ್ನ ಜಟಾಜೂಟದಿಂದ ಗಂಗೆಯನ್ನು ಬಿಟ್ಟೆಯೋ ಆ ಸ್ಥಳವೂ ಪರಮಪವಿತ್ರವಾದುದು. ಹೆಚ್ಚಿಗೆ ಹೇಳುವುದೇನು? ನೀನು ನೆಲಸಿದ ಪ್ರತಿಯೊಂದು ತೀರ್ಥವೂ ಪರಮಪವಿತ್ರವಾದುದು ಎಂದನು.

॥ ಬ್ರಹ್ಮೋವಾಚ ॥

ತದ್ಗೌತಮವಚಃ ಶ್ರುತ್ವಾ ಪುನರ್ಹರ್ಷಾಚ್ಛಿವೋsಬ್ರವೀತ್ ॥ ೬೦ ॥

॥ ಶಿವ ಉವಾಚ ॥

ಯತ್ರ ಕ್ವಾಪಿ ಚ ಯತ್ಕಿಂಚಿದ್ಯೋ ವಾ ಭವತಿ ಭಕ್ತಿತಃ ।
ಯಾತ್ರಾಂ ಸ್ನಾನಮಥೋ ದಾನಂ ಪಿತೄಣಾಂ ವಾಪಿ ತರ್ಪಣಂ ॥ ೬೧ ॥

ಶ್ರವಣಂ ಪಠನಂ ವಾಪಿ ಸ್ಮರಣಂ ವಾಪಿ ಗೌತಮ ।
ಯಃ ಕರೋತಿ ನರೋ ಭಕ್ತ್ಯಾ ಗೋದಾವರ್ಯಾ ಯತವ್ರತಃ ॥ ೬೨ ॥

ಸಪ್ತದ್ವೀಪವತೀ ಪೃಥ್ವೀ ಸಶೈಲವನಕಾನನಾ ।
ಸರತ್ನಾ ಸೌಷಧೀ ರಮ್ಯಾ ಸಾರ್ಣವಾ ಧರ್ಮಭೂಷಿತಾ ॥ ೬೩ ॥

ದತ್ತ್ವಾ ಭವತಿ ಯೋ ಧರ್ಮಃ ಸ ಭವೇದ್ಗೌತಮೀಸ್ಮೃತೇಃ ।
ಏವಂ ವಿಧಾ ಇಲಾ ವಿಪ್ರ ಗೋದಾನಾದ್ಯಾಭಿಧೀಯತೇ ॥ ೬೪ ॥

---

೬೦. ಗೌತಮನ ಮಾತನ್ನು ಕೇಳಿ ಪುನಃ ಶಿವನು ಆನಂದಪರವಶನಾಗಿ ಅವನನ್ನು ಕುರಿತು,

೬೧. ಗೌತಮಿಯಲ್ಲಿ ಎಲ್ಲಾದರೂ ಸರಿಯೇ, ಯಾವನಾದರೂ ಆಗಲಿ, ಭಕ್ತಿಯಿಂದ ಯಾತ್ರೆಯನ್ನಾಗಲೀ, ಸ್ನಾನದಾನಾದಿಗಳನ್ನಾಗಲೀ ಅಥವಾ ಪಿತೃಗಳಿಗೆ ತರ್ಪಣವನ್ನಾಗಲೀ ಮಾಡಿದರೆ ಅವನ ಪಾಪಗಳೆಲ್ಲವೂ ನಾಶವಾಗಿ ಸಕಲೇಷ್ಟಾರ್ಥಗಳೂ ನೆರವೇರುವುವು.

೬೨. ಇದನ್ನು ಯಾರು ಪಠಿಸುವರೋ ಮತ್ತು ಸ್ಮರಿಸುವರೋ, ಭಕ್ತಿಯನ್ನಿಡುವರೋ ಅವರ ಪಾಪಗಳೆಲ್ಲವೂ ನಾಶವಾಗುವುವು.

೬೩. ಯಾವನು ಗೌತಮಿಯನ್ನು ಸ್ಮರಣೆಮಾಡುವನೋ ಅವನು ಸಪ್ತದ್ವೀಪಗಳಿಂದಲೂ, ವನಪರ್ವತಗಳಿಂದಲೂ, ನಾನಾ ರತ್ನಗಳಿಂದಲೂ, ವಿವಿಧ ಓಷಧಗಳಿಂದಲೂ ಕೂಡಿರುವ ಪೃಥ್ವಿಯನ್ನು ದಾನಮಾಡಿದರೆ ಬರುವ ಫಲವನ್ನು ಹೊಂದುವನಲ್ಲದೆ ಅವನು ಗೌತಮಿಯ ಅನುಗ್ರಹಕ್ಕೂ ಪಾತ್ರನಾಗುವನು.

೬೪-೬೫. ಮತ್ತು ಈ ಪೃಥ್ವೀದಾನಕ್ಕೆ ಸಮಾನವಾದ ಗೋದಾನವನ್ನು

ಚಂದ್ರಸೂರ್ಯಗ್ರಹೇ ಕಾಲೇ ಮತ್ಸಾಂನಿಧ್ಯೇ ಯತವ್ರತಃ ।
ಭೂಭೃತೇ ವಿಷ್ಣವೇ ಭಕ್ತ್ಯಾ ಸರ್ವಕಾಲಂ ಕೃತಾ ಸುಧೀಃ ॥ ೬೫ ॥

ಗಾಃ ಸುಂದರಾಃ ಸವತ್ಸಾಶ್ಚ ಸಂಗಮೇ ಲೋಕವಿಶ್ರುತೇ ।
ಯೋ ದದಾತಿ ದ್ವಿಜಶ್ರೇಷ್ಠ ತತ್ರ ಯತ್ಪುಣ್ಯಮಾಪ್ನುಯಾತ್ ॥ ೬೬ ॥

ತಸ್ಮಾದ್ವರಂ ಪುಣ್ಯಮೇತಿ ಸ್ನಾನದಾನಾದಿನಾ ನರಃ ।
ಗೌತಮ್ಯಾಂ ವಿಶ್ವವಂದ್ಯಾಯಾಂ ಮಹಾನದ್ಯಾಂ ತು ಭಕ್ತಿತಃ ॥ ೬೭ ॥

ತಸ್ಮಾದ್ಗೋದಾವರೀ ಗಂಗಾ ತ್ವಯಾ ನೀತಾ ಭವಿಷ್ಯತಿ ।
ಸರ್ವಪಾಪಕ್ಷಯಕರೀ ಸರ್ವಾಭೀಷ್ಟಪ್ರದಾಯಿನೀ ॥ ೬೮ ॥

॥ ಗಣೇಶ್ವರ ಉವಾಚ ॥

ಏತಚ್ಛ್ರುತಂ ಮಯಾ ಮಾತರ್ವದತೋ ಗೌತಮಂ ಶಿವಾತ್ ।
ಏತಸ್ಮಾತ್ಕಾರಣಾಚ್ಛಂಭುರ್ಗಂಗಾಯಾಂ ನಿತ್ಯತಃ ಸ್ಥಿತಃ ॥ ೬೯ ॥

ಕೋ ನಿವರ್ತಯಿತುಂ ಶಕ್ತಸ್ತಮಂಬ ಕರುಣೋದಧಿಂ ।
ಅಥಾಪಿ ಮಾತರೇತತ್ಸ್ಯಾನ್ಮಾನುಷಾ ಪಿಘ್ನಪಾಶಕೈಃ ॥ ೭೦ ॥

ಯಾರು ಸೂರ್ಯಚಂದ್ರ ಗ್ರಹಣಕಾಲಗಳಲ್ಲಿ ನನ್ನ ಸಮೀಪದಲ್ಲಿ ಭಕ್ತಿಯಿಂದ ವಿಷ್ಣುವಿಗೆ ಅರ್ಪಿಸುವರೋ ಅವರೇ ಯಾವಾಗಲೂ ಸುಖಿಗಳಾಗುವರು.

೬೬–೬೭ ಸುಂದರವಾಗಿರುವ ಗೋವುಗಳನ್ನೂ, ಕರುಗಳನ್ನುಳ್ಳ ಗೋವುಗಳನ್ನೂ ದಾನಮಾಡಿದರೆ ಯಾವ ಪುಣ್ಯವು ಬರುವುದೋ ಅದಕ್ಕಿಂತಲೂ ಉತ್ತಮವಾದ ಪುಣ್ಯವು ಲೋಕಪೂಜ್ಯಳಾದ ಗೌತಮಿಯಲ್ಲಿ ಭಕ್ತಿಯಿಂದ ಸ್ನಾನ ಮಾಡಿದರೆ ಉಂಟಾಗುವುದು.

೬೮. ಆದುದರಿಂದ ಗೋದಾವರಿಯೆಂದು ಪ್ರಸಿದ್ಧವಾದ ಗಂಗೆಯನ್ನು ನೀನು ತೆಗೆದುಕೊಂಡು ಹೋಗು. ಈ ಗಂಗೆಯು ಪಾಪಗಳೆಲ್ಲವನ್ನೂ ನಾಶ ಮಾಡಿ ಸರ್ವೇಷ್ಟಾರ್ಥಗಳನ್ನೂ ನೆರವೇರಿಸುವಳು ಎಂದನು.

೬೯-೭೦. ಗಣಪತಿಯು ಹೇಳಿದನು—ಎಲೌ ಮಾತೆಯೇ, ಶಿವನು ಗೌತಮನನ್ನು ಕುರಿತು ಈ ರೀತಿ ಹಿಂದೆ ಹೇಳಿದುದನ್ನು ನಾನು ಕೇಳಿರುವೆನು. ಈಕಾರಣದಿಂದಲೇ ಶಿವನು ಯಾವಾಗಲೂ ಗಂಗೆಯಲ್ಲಿ ನೆಲಸಿರುವನು. ಕರುಣಾ ಸಾಗರನಾದ ಶಿವನನ್ನು ಗಂಗೆಯಿಂದ ಹಿಂತಿರುಗಿಸಲು ಯಾರು ತಾನೇ ಸಮರ್ಥರು ?

ವಿನಿಬದ್ಧಾ ನ ಗಚ್ಛಂತಿ ಗೋದಾಮುಪ್ಯಂತಿಕಸ್ಥಿತಾಂ ।
ನ ನಮಂತಿ ಶಿವಂ ದೇವಂ ನ ಸ್ಮರಂತಿ ಸ್ತುವಂತಿ ನ ॥ ೭೧ ॥

ತಥಾ ಮಾತಃ ಕರಿಷ್ಯಾಮಿ ತವ ಸಂತೋಷಹೇತವೇ ।
ಸಂನಿರೋಧದ್ಭುಮುಥೋ ಕ್ಲೇಶಸ್ತವ ವಾಕ್ಯಂ ಕ್ಷಮಸ್ವ ಮೇ ॥ ೭೨ ॥

॥ ಬ್ರಹ್ಮೋವಾಚ ॥

ತತಃ ಪ್ರಭೃತಿ ವಿಘ್ನೇಶೋ ಮಾನುಷಾನ್ಪ್ರತಿ ಕಿಂಚನ ।
ವಿಘ್ನಮಾಚರತೇ ಯಸ್ತು ತಮುಪಾಸ್ಯ ಪ್ರವರ್ತತೇ ॥ ೭೩ ॥

ಅಥೋ ವಿಘ್ನಮನಾದೃತ್ಯ ಗೌತಮೀಂ ಯಾತಿ ಭಕ್ತಿತಃ ।
ಸ ಕೃತಾರ್ಥೋ ಭವೇಲ್ಲೋಕೇ ನ ಕೃತ್ಯಮವಶಿಷ್ಯತೇ ॥ ೭೪ ॥

ವಿಘ್ನಾನ್ಯನೇಕಾನಿ ಭವಂತಿ ಗೇಹಾ-
ನ್ನಿರ್ಗಂತುಕಾಮಸ್ಯ ನರಾಧಮಸ್ಯ ।

೭೧-೭೨. ಆದರೂ ಮನುಷ್ಯರು ವಿಘ್ನಪರಂಪರೆಗಳಿಂದ ಕೂಡಿದವರಾಗಿ ಹತ್ತಿರವಿದ್ದರೂ ಸಹ ಗಂಗೆಯನ್ನಾಗಲಿ, ಶಿವನನ್ನಾಗಲೀ ನಮಸ್ಕರಿಸುತ್ತಿಲ್ಲ. ಅಲ್ಲಿಗೆ ಹೋಗುವುದೂ ಇಲ್ಲ. ಅಷ್ಟೇಕೆ? ಅವರ ಸ್ಮರಣೆಯನ್ನೇ ಮಾಡುವುದಿಲ್ಲ. ಓ ತಾಯೇ, ಆದುದರಿಂದ ನಾನೀಗ ಮನುಷ್ಯರಿಗೆ ವಿಘ್ನವನ್ನುಂಟುಮಾಡುವೆನು ಮತ್ತು ನಿನಗೆ ಸಂತೋಷವಾಗುವಂತೆ ಮಾಡುವೆನು. ನಿನಗೆ ಕ್ಲೇಶವುಂಟಾಗಿರಬಹುದು. ಅದನ್ನು ಕ್ಷಮಿಸು ಎಂದನು.

೭೩. ಅಂದಿನಿಂದ ಗಣಪತಿಯು ಮನುಷ್ಯರಿಗೆ ಯಾವುದಾದರೂ ವಿಘ್ನವುಂಟಾಗುವಂತೆ ಮಾಡುವನು. ಆಗವರು ಅದರ ನಾಶಕ್ಕೋಸ್ಕರವಾಗಿ ವಿಘ್ನೇಶ್ವರನನ್ನು ಪೂಜಿಸುವರು.

೭೪. ವಿಘ್ನಬಂದರೂ ಸಹ ಯಾರು ಅದನ್ನು ಲೆಕ್ಕಿಸದೆ ಗೌತಮಿಗೆ ಹೋಗಿ ಭಕ್ತಿಯಿಂದ ನಮಸ್ಕರಿಸುವನೋ ಅವನೇ ಲೋಕದಲ್ಲಿ ಧನ್ಯನು.

೭೫. ಮನೆಯಿಂದ ಗೌತಮಿಗೆ ಹೊರಡಲೆತ್ನಿಸುವ ಮನುಷ್ಯನಿಗೆ ಒಂದಿ

ನಿಧಾಯ ತನ್ಮೂರ್ಧ್ನಿ ಪದಂ ಪ್ರಯಾತಿ
ಗಂಗಾಂ ನ ಕಿಂ ತೇನ ಫಲಂ ಪ್ರಲಬ್ಧಂ ॥ ೭೫ ॥

ಅಸ್ಯಾಃ ಪ್ರಭಾವಂ ಕೋ ಬ್ರೂಯಾದಪಿ ಸಾಕ್ಷಾತ್ಸದಾಶಿವಃ ।
ಸಂಕ್ಷೇಪೇಣ ಮಯಾ ಪ್ರೋಕ್ತಮಿತಿಹಾಸಪದಾನುಗಂ ॥ ೭೬ ॥

ಧರ್ಮಾರ್ಥಕಾಮಮೋಕ್ಷಾಣಾಂ ಸಾಧನಂ ಯಚ್ಚರಾಚರೇ ।
ತದತ್ರ ವಿದ್ಯತೇ ಸರ್ವಮಿತಿಹಾಸೇ ಸವಿಸ್ತರೇ ॥ ೭೭ ॥

ವೇದೋದಿತಂ ಶ್ರುತಿಸಕಲರಹಸ್ಯಮುಕ್ತಂ
ಸತ್ಕಾರಣಂ ಸಮಭಿಧಾನಮಿದಂ ಸದೈವ ।
ಸಮ್ಯಕ್ಚ ದೃಷ್ಟಂ ಜಗತಾಂ ಹಿತಾಯ
ಪ್ರೋಕ್ತಂ ಪುರಾಣಂ ಬಹುಧರ್ಮಯುಕ್ತಂ ॥ ೭೮ ॥

ಲ್ಲೊಂದು ವಿಘ್ನವು ಬಂದೇ ಬರುವುದು. ಅದನ್ನೆಲ್ಲಾ ತುಳಿದು ಗಂಗೆಯ ದರ್ಶನಕ್ಕೆ ಹೋಗದಿದ್ದರೆ ಅವನಿಗೆ ಸಿಕ್ಕುವ ಫಲವುತಾನೇ ಯಾವುದು?

೭೬. ಈ ಗೌತಮಿಯ ಮಹಿಮೆಯನ್ನು ವರ್ಣಿಸಲು ಯಾರಿಗೂ ಸಾಧ್ಯವಿಲ್ಲ. ಸಾಕ್ಷಾತ್ಸದಾಶಿವನಿಗೂ ಶಕ್ಯವಿಲ್ಲ. ಆದುದರಿಂದ ನಾನು ಇತಿಹಾಸಕ್ಕೆ ಅನುಕೂಲಿಸುವಂತೆ ಸಂಕ್ಷೇಪವಾಗಿ ತಿಳಿಸಿರುವೆನು.

೭೭. ಚರಾಚರಾತ್ಮಕವಾದ ಈ ಪ್ರಪಂಚದಲ್ಲಿ ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳಿಗೆ ಸಾಧನಭೂತವಾದ ವಿಷಯಗಳೆಲ್ಲವೂ ಈ ಗೌತಮಿಯ ಮಾಹಾತ್ಮ್ಯರೂಪವಾದ ಇತಿಹಾಸದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ.

೭೮. ಪುರಾಣವೆಂದರೆ ಬಹುಧರ್ಮವಿಷಯಯುಕ್ತವಾದುದು. ವೇದದಲ್ಲಿ ಹೇಳುವ ರಹಸ್ಯಗಳೆಲ್ಲವೂ ಈ ಪುರಾಣದಲ್ಲಿ ಜಗತ್ತಿನ ಹಿತಕ್ಕೋಸ್ಕರವಾಗಿಯೂ, ಸತ್ಕರ್ಮಾಚರಣೆಗೋಸ್ಕರವಾಗಿಯೂ ಚನ್ನಾಗಿ ವಿಮರ್ಶಿಸಿ ನಿರೂಪಿಸಲ್ಪಟ್ಟಿರುವುದು.

ಅಸ್ಯ ಶ್ಲೋಕಂ ಪದಂ ವಾಪಿ ಭಕ್ತಿತಃ ಶೃಣುಯಾತ್ಪಠೇತ್ ।
ಗಂಗಾ ಗಂಗೇತಿ ವಾ ವಾಕ್ಯಂ ಸ ತು ಪುಣ್ಯಮವಾಪ್ನುಯಾತ್ ॥ ೭೯ ॥

ಕಲಿಕಲಂಕವಿನಾಶನದಕ್ಷಮಿದಂ
ಸಕಲಸಿದ್ಧಿಕರಂ ಶುಭದಂ ಶಿವಂ ।
ಜಗತಿ ಪೂಜ್ಯಮಭೀಷ್ಟಫಲಪ್ರದಂ
ಗಾಂಗಮೇತದುದೀರಿತಮುತ್ತಮಂ ॥ ೮೦ ॥

ಸಾಧು ಗೌತಮ ಭದ್ರಂ ತೇ ಕೋಽನ್ಯೋಽಸ್ತಿ ಸದೃಶಸ್ತ್ವಯಾ ।
ಯ ಏನಾಂ ಗೌತಮೀಂ ಗಂಗಾಂ ದಂಡಕಾರಣ್ಯಮಾಪ್ನುಯಾತ್ ॥ ೮೧ ॥

ಗಂಗಾ ಗಂಗೇತಿ ಯೋ ಬ್ರೂಯಾದ್ಯೋಜನಾನಾಂ ಶತೈರಪಿ ।
ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ ॥ ೮೨ ॥

---

೭೯. ಈ ಗೌತಮೀಮಾಹಾತ್ಮ್ಯೆಯ ಒಂದು ಶ್ಲೋಕವನ್ನಾಗಲೀ ಅಥವಾ ಅದರ ಒಂದು ಪದವನ್ನಾಗಲೀ ಭಕ್ತಿಯಿಂದ ಕೇಳಿದರೂ, ಪಠಿಸಿದರೂ ಸಹ ಅಥವಾ ಗಂಗಾ ಎಂಬುದಾಗಿ ಉಚ್ಚರಿಸಿದರೂ ಸಹ ಪುಣ್ಯವುಂಟಾಗುವುದು

೮೦. ಗಂಗೆಯ ಸ್ತೋತ್ರವು ಕಲಿಕಲಂಕವನ್ನು ನಾಶಮಾಡುವುದು, ಶುಭಪ್ರದವು. ಸಕಲೇಷ್ಟಾರ್ಥಗಳನ್ನೂ ನೆರವೇರಿಸುವುದು- ಇದು ಮಂಗಳ ಪ್ರದವು, ಜಗತ್ಪೂಜ್ಯವಾದುದು.

೮೧-೮೨. ಎಲೌ ಗೌತಮನೇ, ನಿನಗೆ ಒಳ್ಳೆಯದಾಗಲಿ. ನೀನೇ ಧನ್ಯನು. ನಿನಗೆ ಸದೃಶನಾದವನು ಲೋಕದಲ್ಲಿ ಯಾರಿರುವರು? ಯಾರು ಈ ಗೌತಮಿಯ ದರ್ಶನಕ್ಕೋಸ್ಕರ ದಂಡಕಾರಣ್ಯವನ್ನು ಪ್ರವೇಶಿಸುವನೋ, ಹತ್ತು ಯೋಜನದಲ್ಲಿದ್ದರೂ ಸಹ ಗಂಗಾ, ಗಂಗಾ ಎಂದು ಸ್ಮರಿಸುವನೋ ಅವನ ಪಾಪಗಳೆಲ್ಲವೂ ನಾಶವಾಗುವುವು. ಅವನು ವಿಷ್ಣುಲೋಕವನ್ನು ಪಡೆಯುವನು.

ತಿಸ್ರಃ ಕೋಟ್ಯೋಽರ್ಧಕೋಟೀ ಚ ತೀರ್ಥಾನಿ ಭುವನತ್ರಯೇ ।
ತಾನಿ ಸ್ನಾತುಂ ಸಮಾಯಾಂತಿ ಗಂಗಾಯಾಂ ಸಿಂಹಗೇ ಗುರೌ ॥ ೮೩ ॥

ಷಷ್ಟಿರ್ವರ್ಷಸಹಸ್ರಾಣಿ ಭಾಗೀರಥ್ಯವಗಾಹನಂ ।
ಸಕೃದ್ಗೋದಾವರೀಸ್ನಾನಂ ಸಿಂಹಯುಕ್ತೇ ಬೃಹಸ್ಪತೌ ॥ ೮೪ ॥

ಇಯಂ ತು ಗೌತಮೀ ಪುತ್ರ ಯತ್ರ ಕ್ವಾಪಿ ಮಮಾಜ್ಞಯಾ ।
ಸರ್ವೇಷಾಂ ಸರ್ವದಾ ನೃಣಾಂ ಸ್ನಾನಾನ್ಮುಕ್ತಿಂ ಪ್ರದಾಸ್ಯತಿ ॥ ೮೫ ॥

ಅಶ್ವಮೇಧಸಹಸ್ರಾಣಿ ವಾಜಪೇಯಶತಾನಿ ಚ ।
ಕೃತ್ವಾ ಯತ್ಫಲಮಾಪ್ನೋತಿ ತದಸ್ಯ ಶ್ರವಣಾದ್ಭವೇತ್ ॥ ೮೬ ॥

ಯಸ್ಯೈತತ್ತಿಷ್ಠತಿ ಗೃಹೇ ಪುರಾಣಂ ಬ್ರಹ್ಮಣೋದಿತಂ ।
ನ ಭಯಂ ವಿದ್ಯತೇ ತಸ್ಯ ಕಲಿಕಾಲಸ್ಯ ನಾರದ ॥ ೮೭ ॥

---

೮೩. ಮೂರು ಲೋಕದಲ್ಲಿಯೂ ಒಟ್ಟು ಮೂರೂವರೆ ಕೋಟಿ ತೀರ್ಥಗಳು ಇರುವುವು. ಅವುಗಳಲ್ಲಿ ಸ್ನಾನಮಾಡಲು ಮತ್ತು ಸಿಂಹರಾಶಿಗೆ ಬೃಹಸ್ಪತಿಯು ಪ್ರವೇಶಮಾಡಿದ ಸಮಯದಲ್ಲಿ ಗಂಗಾನದಿಯಲ್ಲಿ ಸ್ನಾನಮಾಡಲು ಅನೇಕರು ಬರುವರು.

೮೪. ಆರು ಸಹಸ್ರವರ್ಷಗಳ ಕಾಲ ಭಾಗೀರಥಿಯಲ್ಲಿ ಸ್ನಾನಮಾಡುವುದೂ ಸಿಂಹರಾಶಿಗೆ ಬೃಹಸ್ಪತಿಯು ಪ್ರವೇಶಮಾಡಿದಾಗ ಗೋದಾವರಿಯಲ್ಲಿ (ಗಂಗೆಯಲ್ಲಿ) ಒಂದೇಸಾರಿ ಸ್ನಾನಮಾಡುವುದೂ ಒಂದೇ.

೮೫. ಎಲೈ ಪುತ್ರನೇ, ಈ ಗೌತಮಿಯಲ್ಲಿ ಎಲ್ಲಿಯಾದರೂ ಸರಿಯೆ ಸ್ನಾನಮಾಡಿದರೂ ಸಹ ನನ್ನ ಅಪ್ಪಣೆಯಂತೆ ಗಂಗೆಯು ಮುಕ್ತಿಯನ್ನುಂಟು ಮಾಡುವಳು.

೮೬. ಯಾರು ಈ ಗಂಗಾಮಹಾತ್ಮ್ಯೆಯನ್ನು ಕೇಳುವರೋ ಅವರಿಗೆ ಒಂದು ಸಹಸ್ರ ಅಶ್ವಮೇಧಯಾಗವನ್ನು ಮಾಡಿದ ಫಲವೂ ನೂರು ವಾಜಪೇಯ ಯಾಗವನ್ನು ಮಾಡಿದ ಫಲವೂ ಉಂಟಾಗುವುದು.

೮೭. ಎಲೈ ನಾರದನೇ, ಯಾರ ಮನೆಯಲ್ಲಿ ಈ ಪುರಾಣವು ಇರುವುದೋ ಅವರಿಗೆ ಕಲಿಕಾಲದಲ್ಲಿ ಯಾವ ಭಯವೂ ಉಂಟಾಗುವುದಿಲ್ಲ.

ಯಸ್ಯ ಕಸ್ಯಾಪಿ ನಾಖ್ಯೇಯಂ ಪುರಾಣಮಿದಮುತ್ತಮಂ ।
ಶ್ರದ್ಧಧಾನಾಯ ಶಾಂತಾಯ ವೈಷ್ಣವಾಯ ಮಹಾತ್ಮನೇ ॥ ೮೮ ॥

ಇದಂ ಕೀರ್ತ್ಯಂ ಭುಕ್ತಿಮುಕ್ತಿದಾಯಕಂ ಪಾಪನಾಶಕಂ ।
ಏತಚ್ಛ್ರವಣಮಾತ್ರೇಣ ಕೃತಕೃತ್ಯೋ ಭವೇನ್ನರಃ ॥ ೮೯ ॥

ಲಿಖಿತ್ವಾ ಪುಸ್ತಕಮಿದಂ ಬ್ರಾಹ್ಮಣಾಯ ಪ್ರಯಚ್ಛತಿ ।
ಸರ್ವಪಾಪವಿನಿರ್ಮುಕ್ತಃ ಪುನರ್ಗರ್ಭಂ ನ ಸಂವಿಶೇತ್ ॥ ೯೦ ॥

ಇತಿ ಶ್ರೀಮಹಾಪುರಾಣೇ ಆದಿಬ್ರಾಹ್ಮೇ ತೀರ್ಥಮಾಹಾತ್ಮ್ಯೇ ಬ್ರಹ್ಮನಾರದಸಂವಾದೇ-ಗಂಗಾಮಾಹಾತ್ಮ್ಯಶ್ರವಣಾದಿಫಲ ವರ್ಣನಂ ನಾಮ ಪಂಚಸಪ್ತತ್ಯಧಿಕಶತತಮೋಽಧ್ಯಾಯಃ

೮೮–೮೯. ಈ ಪವಿತ್ರವಾದ ಪುರಾಣವನ್ನು ಯಾರಿಗೂ ಹೇಳಬಾರದು ಒಂದುಪಕ್ಷ ಹೇಳದೇಕಾದರೆ ಶ್ರದ್ಧೆಭಕ್ತಿಯಿಂದ ಕೂಡಿದವನೂ ಶಾಂತನೂ ಆದ ವಿಷ್ಣುಭಕ್ತನಿಗೆ (ಆಸ್ತಿಕನಾದವನಿಗೆ) ಹೇಳಬಹುದು. ಇದು ಪಾಪವನ್ನು ನಾಶ ಮಾಡಿ ಭುಕ್ತಿಯನ್ನೂ ಮುಕ್ತಿಯನ್ನೂ ಕೊಡುವುದು. ಇದನ್ನು ಕೇಳಿದವನೇ ಧನ್ಯನು.

೯೦. ಈ ಪುಸ್ತಕವನ್ನು ಬರೆದು ಬ್ರಾಹ್ಮಣನಿಗೆ ಯಾರು ದಾನ ಮಾಡುವರೋ ಅವರಿಗೆ ಪುನರ್ಜನ್ಮವಿಲ್ಲದ ಮೋಕ್ಷವುಂಟಾಗುವುದು.

ಇಲ್ಲಿಗೆ ಶ್ರೀ ಬ್ರಹ್ಮಪುರಾಣದಲ್ಲಿ ಗಂಗಾಮಾಹಾತ್ಮ್ಯಶ್ರವಣಾದಿಫಲವರ್ಣನ ವೆಂಬ ನೂರೆಪ್ಪತ್ತೈದನೆಯ ಅಧ್ಯಾಯವು ಮುಗಿದುದು.

ಗೌತಮೀಮಾಹಾತ್ಮ್ಯೆಯಲ್ಲಿ ನೂರ ಆರನೆಯ ಅಧ್ಯಾಯವು

ಗೌತಮೀಮಾಹಾತ್ಮ್ಯೆಯು ಮುಗಿದುದು

ಬ್ರಹ್ಮಪುರಾಣದಲ್ಲಿ ನಾಲ್ಕನೆಯ ಭಾಗವು ಮುಗಿದುದು

॥ ಮಂಗಳಂ ॥

Printed by Y. R. Ranga Rao, Proprietor,
Sri Chamundeswari Electric Press, Mysore.